ದಾವಣಗೆರೆ ಹತ್ತಿಗಿರಣಿ ಕಾರ್ಮಿಕರ ಚಳುವಳಿಗಳು

ಪಿಎಚ್. ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಲಾದ ಮಹಾಪ್ರಬಂಧ

ಚರಿತ್ರೆ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

೨೦೦೬

[illegible]

177A

B P ಹುನಗಿ

[illegible]

ದಾವಣಗೆರೆ ಹತ್ತಿಗಿರಣಿ ಕಾರ್ಮಿಕರ ಚಳವಳಿಗಳು

ಪಿಎಚ್. ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಲಾದ
ಮಹಾಪ್ರಬಂಧ

ಸಂಶೋಧಕರು - ಬಿ.ಪಿ. ಕುಮಾರ
ಮಾರ್ಗದರ್ಶಕರು - ವಿರೂಪಾಕ್ಷಿ ಪೂಜಾರಹಳ್ಳಿ.


ಚರಿತ್ರೆ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

೨೦೦೬

ಪರಿವಿಡಿ

ಅನುಬಂಧಗಳು

ಕರ್ನಾಟಕ
ಹತ್ತಿ ಗಿರಣಿ ಕೇಂದ್ರಗಳು



ದಾವಣಗೆರೆ ಜಿಲ್ಲೆ



ಕೃಪೆ: ದಾವಣಗೆರೆ ಜಿಲ್ಲೆಯ ಅಂಕಿ ಅಂಶಗಳ ನೋಟ ೨೦೦೧-೨೦೦೨

ದಾವಣಗೆರೆ ನಗರದ ನಕ್ಷೆಯಲ್ಲಿ ಹತ್ತಿಗಿರಣಿಗಳು



ಕೃಪೆ : ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ.

ಅಧ್ಯಾಯ ೧

ಅಧ್ಯಯನ ಉದ್ದೇಶ, ವ್ಯಾಪ್ತಿ ಮತ್ತು ವಿಧಾನ

ಅಧ್ಯಯನ ಉದ್ದೇಶ, ವ್ಯಾಪ್ತಿ ಮತ್ತು ವಿಧಾನ

೧.೧. ಅಧ್ಯಯನದ ಉದ್ದೇಶ

ಈ ಭೂಮಿಯ ಮೇಲೆ ಉಗಮವಾದ ಪ್ರಾಣಿಸಂಕುಲದಲ್ಲಿ ಮಾನವ ಶ್ರೇಷ್ಠನೆಂಬ ಕಾರಣಕ್ಕೆ ಸಾಮಾಜಿಕ ಪ್ರಾಣಿಯೆಂದು ಕರೆಸಿಕೊಂಡ. ಈ ಮಾನವ ತನ್ನ ವಿಕಾಸ ಕ್ರಮದಲ್ಲಿ ಅನೇಕ ಬಗೆಯ ಆವಿಷ್ಕಾರಗಳನ್ನು ಮಾಡಿಕೊಂಡಿದ್ದಾನೆ. ಅವನು ತನ್ನ ಜೀವನದ ಅಗತ್ಯಗಳನ್ನು ಪೂರೈಸಿಕೊಳ್ಳಲು ಪರಿಸರದೊಂದಿಗೆ ನಿರಂತರ ಹೋರಾಟ ಮಾಡಿದ್ದನ್ನು ಶಿಲಾಯುಗದಿಂದಲೂ ಗುರುತಿಸಬಹುದು. ಮುಖ್ಯವಾಗಿ ಅವನ ಜೀವನಾವಶ್ಯಕಗಳಲ್ಲಿ ಗಾಳಿ, ನೀರು, ಮನೆ, ಆಹಾರ, ಉಡುಪು ಮೊದಲಾದವು ಪ್ರಮುಖ ಪಾತ್ರವಹಿಸುತ್ತವೆ. ಮನುಷ್ಯನು ತನ್ನ ಶರೀರವನ್ನು ಮುಚ್ಚಿಕೊಂಡು, ರಕ್ಷಿಸಿಕೊಳ್ಳಬೇಕೆಂಬ ಪ್ರಜ್ಞೆಗಳಿಸಿದ ನಂತರ ಎಲೆ, ಮರದ ತೊಗಟೆ, ಪ್ರಾಣಿಗಳ ಚರ್ಮ ಇವುಗಳಿಂದ ಮೊದಲುಗೊಂಡು, ಬಟ್ಟೆಯನ್ನು ತಯಾರಿಸಿಕೊಂಡು ಬಳಸುವ ಹಂತವನ್ನು ತಲುಪಿದ. ತನ್ನ ಅನುಭವಗಳ ಹಿನ್ನೆಲೆಯಲ್ಲಿ ಹತ್ತಿ ಬೆಳೆಯುವುದು ಮತ್ತು ಕೈಮಗ್ಗಗಳಿಂದ ಬಟ್ಟೆ ತಯಾರಿಸುವ ಜ್ಞಾನವನ್ನು ಪಡೆದು, ಕ್ರಮೇಣ ನೇಯ್ಗೆ ಕಲೆಯಲ್ಲಿ ಪ್ರೌಢಿಮೆ ಗಳಿಸಿದನು. ಭಾರತದ ನಾಗರೀಕತೆ ಮತ್ತು ಸಂಸ್ಕೃತಿಯ ಹಿನ್ನೆಲೆಯಲ್ಲಿ ನೋಡುವುದಾದರೆ, ಸಿಂಧೂಬಯಲಿನ ನಾಗರೀಕತೆಯ ನಿವೇಶನಗಳಲ್ಲಿ, ಇತಿಹಾಸದ ಪಿತಾಮಹ ಹೆರೊಡೋಟಸ್‌ನ ಬರವಣಿಗೆಗಳು, ವೇದೋಪನಿಷತ್ತುಗಳಲ್ಲಿ ಭಾರತೀಯರು ಹತ್ತಿ ಬಟ್ಟೆಯನ್ನು ತಯಾರಿಸುತ್ತಿದ್ದ ಬಗ್ಗೆ, ಅವುಗಳ ವ್ಯಾಪಾರ ಸಂಬಂಧ ಅಂತರರಾಷ್ಟ್ರೀಯ ಸಂಪರ್ಕ ಹೊಂದಿದ್ದ ಬಗ್ಗೆ ಮಾಹಿತಿಗಳಿವೆ.

ಭಾರತ ಕೃಷಿಯಾಧಾರಿತ ರಾಷ್ಟ್ರ. ಕೃಷಿ ಉತ್ಪನ್ನಗಳಿಗೆ ಪೂರಕವಾದ ಕೈಗಾರಿಕೆಗಳು ಇಲ್ಲಿ ಪುರಾತನ ಕಾಲದಿಂದಲೂ ಅಸ್ತಿತ್ವದಲ್ಲಿದ್ದ ಬಗ್ಗೆ ಇತಿಹಾಸದಲ್ಲಿ ದಾಖಲಿಸಲಾಗಿದೆ. ಈ ಕೈಗಾರಿಕೆಗಳಲ್ಲಿ ಬೃಹತ್‌ಯಂತ್ರೋಪಕರಣಗಳ ಬಳಕೆಯಾಗುವವರೆಗೂ ಮಾನವ ನಿರ್ಮಿತ ಸಣ್ಣ ಯಂತ್ರಗಳಿಂದ ಬಟ್ಟೆ ಉತ್ಪಾದನೆ ಪ್ರಕ್ರಿಯೆ ನಡೆಯುತ್ತಿತ್ತು. ಮೈಸೂರು ಸಂಸ್ಥಾನದಲ್ಲಿ ದಿವಾನರಾಗಿದ್ದು, ಅರ್ಹತೆ ಮತ್ತು ದಕ್ಷತೆಯ ಪ್ರತಿಪಾದಕರಾಗಿದ್ದ ಭಾರತರತ್ನ ಸರ್.ಎಂ. ವಿಶ್ವೇಶ್ವರಯ್ಯನವರು "ಕೈಗಾರಿಕರಣ ಇಲ್ಲವೆ ವಿನಾಶ" ಎಂದು ಅಭಿಪ್ರಾಯಿಸಿರುವುದು ಒಂದು ದೇಶ ಆರ್ಥಿಕವಾಗಿ ಸದೃಢವಾಗಬೇಕಾದರೆ ಕೈಗಾರಿಕಾರಂಗ ಪ್ರಗತಿಯಾಗಬೇಕೆಂಬ ಮುನ್ಸೂಚನೆಯಾಗಿದೆ. ಈ ಕಾರಣದಿಂದ ಕೈಗಾರಿಕಾ ಕ್ರಾಂತಿಯಿಂದ ಭಾರಿ ಪ್ರಮಾಣದ ಯಂತ್ರಗಳನ್ನು ಬಳಸಿ ಜೀವನಾವಶ್ಯಕತೆಗೆಬೇಕಾದ ಬಟ್ಟೆಯನ್ನು ತಯಾರಿಸಲು ಆಸ್ಪದವಾಯಿತು. ಆ ಸಂದರ್ಭದಲ್ಲಿ ಬೃಹತ್ ಯಂತ್ರಗಳನ್ನು ನಡೆಸಲು ಮಾನವ ಸಂಪನ್ಮೂಲವನ್ನು ಯಥೇಚ್ಛವಾಗಿ ಬಳಸಲಾಯಿತು.

ಹೀಗೆ ಮಾನವ ಸಂಪನ್ಮೂಲವನ್ನು ಯಂತ್ರದೊಂದಿಗೆ ಬಳಸುವ ಸಂದರ್ಭದಲ್ಲಿ ಮಾನವನು ಯಂತ್ರದ ರೂಪದಲ್ಲಿ ಪರಿಗಣಿಸಲ್ಪಟ್ಟನು. ಹೀಗಾಗಿ ಕಾರ್ಮಿಕರು ವಿಶ್ರಾಂತಿ, ಆರೋಗ್ಯ ರಕ್ಷಣೆ ಮುಂತಾದ ಮೂಲಭೂತ ಸೌಲಭ್ಯಗಳಿಂದ ವಂಚಿತರಾದರು. ಬಂಡವಾಳಿಗರು ತಾವು ತೊಡಗಿಸಿದ ಬಂಡವಾಳದ ಹಿನ್ನೆಲೆಯಲ್ಲಿ ಹೆಚ್ಚು ಉತ್ಪಾದಿಸಿ, ಹೆಚ್ಚು ಲಾಭ ಪಡೆಯಬೇಕೆನ್ನುವ ಗುರಿಯಿಂದ ಮುನ್ನೆಡೆದರು. ಕೈಗಾರಿಕಾ ಕ್ರಾಂತಿಯ ಒತ್ತಡದಲ್ಲಿ ಪ್ರಪಂಚದ ಬಹುತೇಕ ರಾಷ್ಟ್ರಗಳಲ್ಲುಂಟಾದ ಪರಿವರ್ತನೆ ಹಾಗೂ ಪ್ರಕ್ರಿಯೆಗಳನ್ನು ಭಾರತ ಮತ್ತು ಕರ್ನಾಟಕದಲ್ಲಿ ಗುರುತಿಸಬಹುದು. ಮುಖ್ಯವಾಗಿ ರಾಜ್ಯದ ದಾವಣಗೆರೆಯೂ ಇದಕ್ಕೆ ಹೊರತಾಗಿರುವುದಿಲ್ಲ. ಈ ಸಂದರ್ಭದಲ್ಲಿ ಹತ್ತಿಗಿರಣಿಗಳಲ್ಲಿ ದುಡಿಯುವ ಕಾರ್ಮಿಕರು ಮೂಲಭೂತ ಸೌಲಭ್ಯಗಳನ್ನು ಪಡೆಯಲು 'ಚಳವಳಿ' ಹಾದಿ ತುಳಿಯಬೇಕಾಯಿತು.

ಒಂದು ವಸ್ತುವಿನ ಉತ್ಪಾದನಾ ಕ್ರಿಯೆಯಲ್ಲಿ ಮನುಷ್ಯ, ಕಚ್ಚಾ ಸಾಮಾಗ್ರಿ, ಹಣ (Men, Material, Money) ಮೂರೂ ಗಮನಾರ್ಹ ಪಾತ್ರವಹಿಸುತ್ತವೆಂಬುದು ನಿಜ. ಇವುಗಳಲ್ಲಿ ಮನುಷ್ಯನ ಪಾತ್ರವೂ ಉಳಿದವುಗಳಂತೆಯೇ ಮುಖ್ಯವಾಗಿದೆ. ಆದರೆ ಗಿರಣಿ ಅಥವಾ ಕೈಗಾರಿಕೆಗಳಲ್ಲಿ ಈ ಮನುಷ್ಯ (ಕಾರ್ಮಿಕ) ವಸ್ತುವನ್ನು ಉತ್ಪಾದಿಸುವ ಶಕ್ತಿಯಾಗಿ ಬಳಕೆಯಾಗುತ್ತಾನೆಯೇ ಹೊರತು ಉತ್ಪಾದನೆಯಾದ ವಸ್ತುವಿಗೂ ಕಾರ್ಮಿಕನಿಗೂ ಯಾವುದೇ ರೀತಿಯಾದ ಸಂಬಂಧ ಇಲ್ಲದ ವಾತಾವರಣ ನಿರ್ಮಾಣವಾಯಿತು. ಚಾರಿತ್ರಿಕವಾಗಿ ಕಾರ್ಮಿಕ ಚಳವಳಿ ಆಧುನಿಕ ಬಂಡವಾಳ ವ್ಯವಸ್ಥೆಯ ಶಿಶುವಾಗಿ ಕೈಗಾರಿಕಾ ಕ್ರಾಂತಿಯಿಂದ ಜನಿಸಿತು. ದೇಶದ ಆರ್ಥಿಕ ರಂಗದ ಅಭಿವೃದ್ಧಿಯಲ್ಲಿ ಪಾಲುದಾರರಾಗಿದ್ದ ಕಾರ್ಮಿಕರು, ಅಭಿವೃದ್ಧಿಗೆ ಪೂರಕವಾದ ಸಾಧನ ಮೌಲ್ಯವೆಂದು ಪರಿಗಣಿಸಲ್ಪಟ್ಟಿದ್ದರು. ಆದರೆ ಅವರ ಅಭಿವೃದ್ಧಿಯೂ ನಮ್ಮ ಕರ್ತವ್ಯ ಎಂದು ಬಹಳಷ್ಟು ಬಂಡವಾಳಿಗರು ಆಲೋಚಿಸಲಿಲ್ಲ. ಈ ಬೆನ್ನಲ್ಲಿ ಕಾರ್ಮಿಕರನ್ನು ನೋಡುವ ನೋಟ ಅವರ ಅಭಿವೃದ್ಧಿಗೆ ಪೂರಕವಾಗಿರಲಿಲ್ಲ. ಅವರ ದುಡಿಮೆಯ ಅವಧಿ, ಕೂಲಿಯ ಸ್ವರೂಪಗಳಲ್ಲಿ ಉತ್ತಮ ಭವಿಷ್ಯರೂಪಿಸಲಿಲ್ಲ. ಮಾಲೀಕರು ಗಿರಣಿಗಳಲ್ಲಿ ದುಡಿಯುತ್ತಿದ್ದ ಮಹಿಳೆಯರಿಗೆ ಹೆರಿಗೆ ಮುಂತಾದ ಸೌಲಭ್ಯಗಳನ್ನು ನೀಡದೆ ವಂಚಿಸಿದ್ದರು. ದೀರ್ಘ ಅವಧಿಗೆ ಕಾರ್ಮಿಕರನ್ನು ದುಡಿಸಿಕೊಳ್ಳಲು ಮುಂದಾದಾಗ ಅವರು ತಮ್ಮನ್ನು ಮೇಲ್ಕಂಡ ಶೋಷಣೆಗಳಿಂದ ಮುಕ್ತಗೊಳಿಸಿಕೊಳ್ಳಲು ಕಾರ್ಮಿಕ ಸಂಘ ಕಟ್ಟಿಕೊಳ್ಳುವ, ವಿವಿಧ ಬೇಡಿಕೆಗಳಿಗಾಗಿ ಚಳವಳಿ ನಡೆಸುವುದು ಕಂಡುಬರುವ ಸಾಮಾನ್ಯ ದೃಶ್ಯವಾಗಿತ್ತು.

ಆದರೆ ಮೈಸೂರು ಸಂಸ್ಥಾನವು ಕಾರ್ಮಿಕ ಸಂಘಟನೆಯ ಚಟುವಟಿಕೆಗಳಿಗೆ ಪ್ರೋತ್ಸಾಹದಾಯಕ ವಾಗಿರಲಿಲ್ಲ. ಅದು ಸಂಘಕಟ್ಟಿಕೊಳ್ಳುವ ಕಾಯ್ದೆಯನ್ನು ಜಾರಿಗೊಳಿಸುವಲ್ಲಿ ವಿಳಂಬ ನೀತಿ ಅನುಸರಿಸಿತು. ಲೋಪದೋಷಗಳಿದ್ದ ಕೆಲ ಕಾರ್ಮಿಕ ಕಾಯಿದೆಗಳು ಸಮರ್ಪಕವಾಗಿ ಜಾರಿಯಾಗಲಿಲ್ಲ. ಆಗ ಕಾರ್ಮಿಕರು ತಮ್ಮ ಸಂಘಗಳನ್ನು ಶಾಸನ ಬದ್ಧಗೊಳಿಸಿಕೊಳ್ಳಲು ಚಳವಳಿ ನಡೆಸಲು ಮುಂದಾದರು. ಈ ಚಳವಳಿಯಲ್ಲಿ ದಾವಣಗೆರೆ ಹತ್ತಿಗಿರಣಿ ಕಾರ್ಮಿಕರ ಚಟುವಟಿಕೆಗಳು ಭಿನ್ನ ಮಜಲುಗಳಿಂದ ಕೂಡಿದೆ. ತಮ್ಮ ಸಂಘಟನೆಯ ಅಸ್ತಿತ್ವದ ಉಳಿವಿಗಾಗಿ ದೀರ್ಘಹೋರಾಟ ನಡೆಸಿದಾಗ ಮಾತ್ರ ಕಾರ್ಮಿಕ ರಂಗದಲ್ಲಿ ಕೊಲೆ, ಘರ್ಷಣೆ, ಜೈಲುಶಿಕ್ಷೆ ಸಾಮಾನ್ಯ ವಿಷಯಗಳಾಗಿದ್ದವು. ಈ ಎಲ್ಲಾ ಘಟನೆಗಳಿಂದ ಬಲಗೊಂಡ ಕಾರ್ಮಿಕ

ಸಂಘಟನೆಯು ವಂಚಿತವಾಗಿದ್ದ ಸೌಲಭ್ಯಗಳನ್ನು ಪಡೆದುಕೊಳ್ಳುವಲ್ಲಿ ಯಶಸ್ಸು ಕಂಡಿತು. ಯಶಸ್ಸಿನ ಬೆನ್ನಲ್ಲೇ ಪ್ರಪಂಚದ ಅಭಿವೃದ್ಧಿ ಹೊಂದುತ್ತಿರುವ ಬಹುತೇಕ ರಾಷ್ಟ್ರಗಳು ಜಾಗತೀಕರಣದ ಒತ್ತಡಕ್ಕೆ ಒಳಗಾದಾಗ ಭಾರತದಲ್ಲಿ ಕರ್ನಾಟಕ ಸೇರಿದಂತೆ ದಾವಣಗೆರೆ ಹತ್ತಿ ಗಿರಣಿಗಳೂ ಸಹಾ ಇಕ್ಕಟ್ಟಿಗೆ ಸಿಲುಕಿ ಅವನತಿ ಹಾದಿ ತುಳಿಯುವ ಸಂದರ್ಭ ಬಂದೊದಗಿತು. ಈ ಸಂದರ್ಭದಲ್ಲಿ ಒಂದೆಡೆ ದೇಶದ ಆರ್ಥಿಕ ರಂಗ ದುಸ್ಥಿತಿ ಕಂಡರೆ, ಇನ್ನೊಂದೆಡೆ ಇಂಥ ಗಿರಣಿ, ಕೈಗಾರಿಕೆಗಳಲ್ಲಿ ದುಡಿಯುತ್ತಿದ್ದ ಕಾರ್ಮಿಕರು ಬೀದಿಪಾಲಾಗಿ ಜೀವನ ನಿರ್ವಹಣೆ ದುಸ್ಥರವಾಗಿ ಹೀನಾಯ ಸ್ಥಿತಿ ಒದಗಿತು. ಇದರಿಂದ ಕಾರ್ಮಿಕ ಮತ್ತು ಅವರ ಮಕ್ಕಳ ಶಿಕ್ಷಣ ಅಲ್ಲದೆ ಸಾಮಾಜಿಕ ರಂಗಗಳ ಮೇಲೆ ದುಷ್ಪರಿಣಾಮಗಳಾಗಿ ಅವರು ಜೀವನ ನಿರ್ವಹಣೆಯ ದುರಂತದ ಅಂಚಿನಲ್ಲಿದ್ದಾರೆ.

ಸಮಸ್ಯೆ ಹೀಗಿರುವಾಗ ಈ ಎಲ್ಲಾ ಬದಲಾವಣೆ, ದುರಂತ ಘಟನೆಗಳಿಗೆ ಕಾರಣಗಳೇನು? ಪರಿಹಾರೋಪಾಯಗಳೇನು? ಎಂದು ಪ್ರಸ್ತುತ ಪರಿಸ್ಥಿತಿಯನ್ನು ಅಧ್ಯಯನ ಮಾಡಿದ ಮೂಲಕ ಮರೆಯಾದ ಸಂಗತಿಗಳನ್ನು ಕಂಡುಕೊಳ್ಳುವ ಅವಶ್ಯಕತೆ ಇದೆ. ಆರ್ಥಿಕವಾಗಿ, ಕಾರ್ಮಿಕರು ಸದೃಢರಾಗಬೇಕಾದರೆ ಜೀವನ ಸಾಗಿಸುತ್ತಿದ್ದ ಇವರ ಬದುಕು ಬವಣೆಯ ಅಂಧಾಕಾರದಲ್ಲಿ ಸಾಗುವಂತಾಯಿತು ಎನ್ನಲಾಗಿದೆ. ಗಿರಣಿಗಳು ಅವನತಿಯಾಗಲಾಗಿ, ಹೆಚ್ಚಿನ ಮಾನವಶ್ರಮಸಂಪತ್ತು ವ್ಯರ್ಥವಾಗಿ ನಿಂತ ನೀರಾಯಿತು. ಒಂದೆಡೆ ಕಾರ್ಮಿಕರ ಜೀವನ ಹೀಗಾದರೆ, ಇನ್ನೊಂದೆಡೆ ದೇಶದ ಆರ್ಥಿಕ ರಂಗ ಕುಂಠಿತಗೊಂಡಿತು. ದೇಶದ ಆರ್ಥಿಕ ಪ್ರಗತಿಗೆ ದೀರ್ಘಾವಧಿಯಲ್ಲಿ ಜಾಗತೀಕರಣ ಆಶಾದಾಯಕವಾಗಿದೆ ಎಂಬುದು ಅರ್ಥತಜ್ಞರ ವಾದವಾಗಿದೆ. ಇಂತಹ ವ್ಯವಸ್ಥೆಯನ್ನು ಎದುರಿಸುವ ಸಿದ್ಧತೆಗಳಿಲ್ಲದೆ ಜಾಗತೀಕರಣಕ್ಕೆ ಒಳಗಾದದ್ದು ತೊಂದರೆಗಳಿಗೆ ಕಾರಣಗಳಲ್ಲೊಂದು. ಆದ್ದರಿಂದ ಹತ್ತಿ ಗಿರಣಿ ಮತ್ತು ಅವುಗಳಲ್ಲಿ ದುಡಿಯುತ್ತಿದ್ದ ಕಾರ್ಮಿಕರ ಬಗ್ಗೆ ಅಧ್ಯಯನ ಮಾಡುವುದು ಇಂದಿನ ಜರೂರುಗಳಲ್ಲಿ ಒಂದಾಗಿದೆ.

ದಾವಣಗೆರೆ ನಗರದ ಹತ್ತಿಗಿರಣಿ ಕಾರ್ಮಿಕರು ಸೌಲಭ್ಯಗಳಿಂದ ವಂಚಿತರಾದಾಗ, ಕಮ್ಯುನಿಸ್ಟ್ ತತ್ವಗಳಿಂದ ಆಕರ್ಷಿತರಾಗಿ ಸಂಘಟನೆ, ಘರ್ಷಣೆಯಲ್ಲಿ ತೊಡಗಿಸಿಕೊಂಡಿದ್ದರು. ಅವರಿಗಾಗಿದ್ದ ಅನ್ಯಾಯಗಳನ್ನು ಕಂಡುಕೊಂಡು, ಅಂಥ ಅನ್ಯಾಯಗಳು ಮುಂದಾಗದಂತೆ ನೋಡಿಕೊಳ್ಳುವ ಹಿನ್ನೆಲೆಯಲ್ಲಿ ಚಳವಳಿ ಮಾಡುವ ಪರಿಸ್ಥಿತಿ ನಿರ್ಮಾಣವಾಯಿತು. ಜೊತೆಜೊತೆಯಲ್ಲಿ ಕಾರ್ಮಿಕರಿಗೆ ಆಶ್ರಯ ತಾಣಗಳಾಗಿದ್ದ ಗಿರಣಿಗಳ ಅವನತಿಗಳಿಗೆ ಕಾರಣಗಳನ್ನು ಹುಡುಕುವ ಅಗತ್ಯವೂ ಇದೆ. ಹಿಂದೆ ನಡೆದ ಅನಾರೋಗ್ಯಕರ ಘಟನೆಗಳು ಮುಂದಾಗದಂತೆ ಎಚ್ಚರ ವಹಿಸುವುದು ಚರಿತ್ರೆಯ ಅಧ್ಯಯನದ ಹಿನ್ನೆಲೆಯಲ್ಲೊಂದಾಗಿದೆ. ಆದ್ದರಿಂದ ಈ ಅಧ್ಯಯನ ಸಂದರ್ಭೋಚಿತವೂ, ಅಗತ್ಯವೂ, ಅರ್ಥಪೂರ್ಣವೂ ಆಗಿದೆ.

ಪ್ರಸ್ತುತ ಅಧ್ಯಯನವು ಅಲಕ್ಷಿತ ಕ್ಷೇತ್ರವಾಗಿದೆ. ಇದರಲ್ಲಿ ಹೆಚ್ಚಾಗಿ ಪುರುಷ, ಮಹಿಳಾ, ಬಾಲ ಕಾರ್ಮಿಕರನ್ನು ಕುರಿತು ಅಧ್ಯಯನ ಮಾಡುವ ಉದ್ದೇಶವಿದೆ. ಸಂಘಟನೆ ಬಲವಾಗಿದ್ದು ಅದರ ಸದಸ್ಯರೆಲ್ಲರೂ ಒಗ್ಗಟ್ಟಿನಿಂದ ಚಳವಳಿಯಲ್ಲಿ ಪಾಲ್ಗೊಂಡಿದ್ದು ಕರ್ನಾಟಕದ ದಾವಣಗೆರೆ ನಗರದ ಹತ್ತಿಗಿರಣಿ ಕಾರ್ಮಿಕರ ಗಮನಾರ್ಹ ವಿಷಯಗಳಲ್ಲೊಂದು. ಆದ್ದರಿಂದ ಇಲ್ಲಿ ಪ್ರತ್ಯೇಕವಾಗಿ ಮಹಿಳೆ,

ಬಾಲಕಾರ್ಮಿಕರು ಎಂದು ಬಳಸದೆ ಇದ್ದರೂ ಪ್ರಾಸಂಗಿಕವಾಗಿ ಬಾಲಕಾರ್ಮಿಕರು ಮತ್ತು ಮಹಿಳಾ ಕಾರ್ಮಿಕರೆಂದು ವಿಶ್ಲೇಷಿಸಲಾಗಿದೆ. ಇಂದು ಮೂಲೆಗುಂಪಾದ, ಅಲಕ್ಷೈಗೊಳಪಟ್ಟ ವರ್ಗದ, ಹೋರಾಟಗಾರರನ್ನು ಇಲ್ಲಿ ಪ್ರಧಾನವಾಗಿ ಅವಲೋಕಿಸಲಾಗಿದೆ. ದಾವಣಗೆರೆ ನಗರ ತನ್ನ ಘನತೆ ಕಳೆದುಕೊಂಡಿದ್ದು, ಕೈಗಾರಿಕಾ ನಕ್ಷೆಯಲ್ಲಿ ಹಿಂದಿದ್ದ ಸ್ಥಾನಮಾನಗಳನ್ನು ಕಳೆದುಕೊಂಡಿರುವುದು ಪ್ರೇರಣೆ ನೀಡಿದೆ. ಹತ್ತಿಗಿರಣಿ ಕಾರ್ಮಿಕರ ಬದುಕು ಹತ್ತಿಯಂತೆ ಮೃದುವಾಗಿರದೆ ಗಡುಸಾಗಿದ್ದು, ಹೆಚ್ಚಿನ ಶಿಕ್ಷಣವಿಲ್ಲದೆ ಸಾಧನೆಗೈದವರ ವಿವರವನ್ನು ಚಾರಿತ್ರಿಕ ಹಿನ್ನೆಲೆಯಲ್ಲಿ ತಿಳಿಯುವುದು ಇಲ್ಲಿನ ಮುಖ್ಯ ಉದ್ದೇಶ. ಇಲ್ಲಿ ಅಧ್ಯಯನಕ್ಕೆ ಆಯ್ದುಕೊಂಡ ವಿಷಯ ಮತ್ತು ಕ್ಷೇತ್ರ ಬಹಳ ಪರಿಚಯ ಇರುವುದಾಗಿದ್ದು, ನೇರವಾಗಿ ಯಾರೂ ಅಧ್ಯಯನ ಮಾಡದ, ಗಮನಿಸದ ವಿಷಯವೂ ಆಗಿದೆ.

ಕಾರ್ಮಿಕರು ಸಮಾಜದ ಅಂಗವಾಗಿದ್ದು, ಅವರ ಚಳವಳಿಯ ಬೇರುಗಳು ಹಲವು ಶಿಸ್ತುಗಳಲ್ಲಿ ಹರಡಿಕೊಂಡಿವೆ. ದಾವಣಗೆರೆ ಹತ್ತಿಗಿರಣಿ ಕಾರ್ಮಿಕರ ಸಂಬಂಧ ಆರ್ಥಿಕ ದೃಷ್ಟಿಯಲ್ಲಿ ಕೆಲವು ಅಧ್ಯಯನಗಳಾಗಿವೆ. ಆದರೆ ಚರಿತ್ರೆ ಶಿಸ್ತಿನಲ್ಲಿ ಇಲ್ಲಿನ ಕಾರ್ಮಿಕರ ಚಳವಳಿಗಳ ಅಧ್ಯಯನ ವಿರಳವೆಂದೇ ಹೇಳಬಹುದು. ಈ ಹಿಂದೆ ಚರಿತ್ರೆ ರಚನೆಯಲ್ಲಿ ಸಾಮಾನ್ಯವಾಗಿ ವಿಷಯ, ಕಾಲ, ವ್ಯಕ್ತಿ, ರಾಜ, ಯುದ್ಧ, ಉನ್ನತವರ್ಗದ ಜೀವನ ಮುಂತಾದವುಗಳಿಗೆ ಮಹತ್ವ ನೀಡಲಾಗಿತ್ತು. ಕ್ರಮೇಣ ಅದು ಸಮಾಜದ ಎಲ್ಲವರ್ಗದ ಕಡೆಗೂ ಬೆಳಕು ಬಿತ್ತರಿಸುವಂತಾಯಿತು. ಅಂತೆಯೇ ವಾಣಿಜ್ಯ ರಂಗದ ಪ್ರಗತಿಗೆ ಪೂರಕವಾಗಿರುವ ಕಾರ್ಮಿಕರು ಅಲಕ್ಷ್ಯಕ್ಕೊಳಗಾಗಿದ್ದು, ಇಂತ ಅಲಕ್ಷಿತ ಕ್ಷೇತ್ರವನ್ನು ಆಯ್ಕೆಮಾಡಿಕೊಂಡು ಅಧ್ಯಯನ ಮಾಡಲಾಗಿದೆ.

ಈ ಅಧ್ಯಯನದ ವಿಷಯ ಮತ್ತು ಕ್ಷೇತ್ರವನ್ನು ಆಯ್ಕೆಮಾಡಿಕೊಳ್ಳಲು ಪ್ರಮುಖ ಪ್ರೇರಣೆ ಎಂದರೆ: ಇಂದು ಭಗ್ನಗೊಂಡಿರುವ ಕಾಟನ್ ಮಿಲ್‌ಗಳು ಮತ್ತು ಸದಾ ಕಣ್ಣೀರಿಡುವ ಕಾರ್ಮಿಕರ ಸ್ಥಿತಿಗತಿ. ದೇಶದ ಸಂಪತ್ತನ್ನು ವೃದ್ಧಿಸುವಲ್ಲಿ ಪಾಲುದಾರರಾಗಿರುವ ಕಾರ್ಮಿಕರು, ಚಳವಳಿ ನಡೆಸಿದ್ದೇ ಈ ಗಿರಣಿಗಳ ಅವನತಿಗೆ ಪ್ರಧಾನ ಕಾರಣವೆಂದು ಸ್ಥಳೀಯರು ಅಭಿಪ್ರಾಯಿಸುತ್ತಾರೆ. ಇವರ ಮನಸ್ಸಿನಲ್ಲಿ ಮೂಡಿರುವ ವಿಚಾರಗಳು ಹಾಗೂ ಸ್ಥಳೀಯ ಬರಹಗಳಲ್ಲಿ ಬಿಂಬಿತವಾಗಿರುವುದು ಒಂದೆಡೆಯಾದರೆ, ಮತ್ತೊಂದೆಡೆ ದಾವಣಗೆರೆಯು "ಕರ್ನಾಟಕದ ಮ್ಯಾಂಚೆಸ್ಟರ್" ಎಂದೇ ಬಟ್ಟೆ ಉದ್ಯಮಕ್ಕೆ ಹೆಸರಾಗಿದ್ದು, ಇಂದು ತನ್ನ ವೈಭವ ಕಳೆದುಕೊಂಡು ಆ ಉದ್ಯಮಗಳು ಅಸ್ಥಿಪಂಜರವಾಗಿವೆ. ಇಂಗ್ಲೆಂಡಿನ ಗಿರಣಿಗಳಿಗೆ ಹೋಲಿಸಬಹುದಾದ ನಗರ ವಾಣಿಜ್ಯರಂಗದಲ್ಲಿ ಸ್ಥಾನಪಡೆದಿದ್ದು ಹಿನ್ನಡೆ ಕಂಡಿತು. ಈ ಹಿನ್ನೆಲೆಯಲ್ಲಿ ಹತ್ತಿಗಿರಣಿ ಕಾರ್ಮಿಕರ ಚಳವಳಿಗಳ ಚಾರಿತ್ರಿಕ ಅಧ್ಯಯನ ಅಗತ್ಯವೂ ಇದೆ. ದಾವಣಗೆರೆ ನಗರದ ಹತ್ತಿಗರಣಿ ಕಾರ್ಮಿಕರು ರಾಜಕೀಯ ಅಧಿಕಾರ ಪಡೆದಾಗ ಮತ್ತು ನಂತರದ ದಿನಗಳಲ್ಲಿ ಹಲವು ಆರೋಪಗಳಿಗೆ ಗುರಿಯಾದರು. ಆದ್ದರಿಂದ ಕಾರ್ಮಿಕ ಸಂಘ ಮತ್ತು ನಾಯಕರು ಅಧಿಕಾರವಿದ್ದಾಗ ಸಂಘಟನೆಯನ್ನು ಜಾತಿ ಮತ್ತು ಹಣದ ನೆಲೆಗಟ್ಟಿನಲ್ಲೇನಾದರೂ ಮುನ್ನಡೆಸಿದರೇ ಎಂದು ವಿಶ್ಲೇಷಣೆ ಮಾಡುವ ಉದ್ದೇಶವಿದೆ. ಏಕೆಂದರೆ ಅಧಿಕಾರವು ಹಣ ಮತ್ತು ಜಾತಿಗಳನ್ನು ಪೋಷಿಸುವ ಸಾಧ್ಯತೆಗಳು ಸಾಮಾನ್ಯವಾಗಿದೆ.

'ಕಾರ್ಮಿಕ ಚಳವಳಿ' ಎಂಬ ಪದವನ್ನು ವೇತನ ಪಡೆಯುವವರು ತಕ್ಷಣವೇ ಅಥವಾ ನಂತರದಲ್ಲಿ ತಮ್ಮ ಸ್ಥಿತಿಗತಿಗಳನ್ನು ಉತ್ತಮ ಪಡಿಸಿಕೊಳ್ಳಲು ನಡೆಸುವ ಸಂಘಟಿತ ಚಟುವಟಿಕೆಗಳನ್ನು ಸೂಚಿಸುವ ನಿಟ್ಟಿನಲ್ಲಿ ಬಳಸಲಾಗಿದೆ. ಕಾರ್ಮಿಕ ಚಳವಳಿಯು ಹೊರನೋಟದಲ್ಲಿ ಕಾರ್ಮಿಕ ಸಂಘಗಳು ಮತ್ತು ಅವುಗಳ ಕಾರ್ಯಚಟುವಟಿಕೆಗಳು, ಮುಷ್ಕರಗಳು, ಕಾರ್ಮಿಕ ನಾಯಕರು, ಕಾರ್ಮಿಕರು ರಾಜಕೀಯದಲ್ಲಿ ಪಾಲ್ಗೊಳ್ಳುವಿಕೆ, ಕಾರ್ಮಿಕ ಕಲ್ಯಾಣ, ಕಾರ್ಮಿಕ ಕಾಯಿದೆಗಳು, ಕಾರ್ಮಿಕರ ಆಚರಣೆಗಳು ಮುಂತಾದ ವಿಷಯಗಳನ್ನೊಳಗೊಂಡಿದೆ.

ರಾಷ್ಟ್ರಮಟ್ಟದ ಕಾರ್ಮಿಕರು ಸಾಮಾನ್ಯವಾಗಿ ರಾಷ್ಟ್ರೀಯತೆಯ ಕರೆಗೆ ಓಗೊಟ್ಟು ಹೋರಾಟದಲ್ಲಿ ತೊಡಗಿಸಿಕೊಂಡಿದ್ದಾರೆ. ಆದರೆ ದಾವಣಗೆರೆಯ ಕಾರ್ಮಿಕರು ಸ್ವತಂತ್ರ ಹೋರಾಟದಲ್ಲಿ ಪಾಲ್ಗೊಳ್ಳಲು ಅವರಿಗೆ ಬಲವಾದ ಸಂಘಟನೆ ಹಾಗೂ ಸಂದರ್ಭಗಳು ಉತ್ತಮವಾಗಿರಲಿಲ್ಲ. ಇಲ್ಲಿನ ಕಾರ್ಮಿಕ ಮುಖಂಡರು ಮಾತ್ರ ಸ್ವತಂತ್ರ (ಶ್ರೀ. ಪುಡಾರಿ ಮುರಿಗೆಯ್ಯ, ಶ್ರೀ. ಶಿವಾನಂದ ಸ್ವಾಮಿ) ಹೋರಾಟದಲ್ಲಿ ಪಾಲ್ಗೊಂಡಿದ್ದು, ರಾಷ್ಟ್ರ ಮಟ್ಟದ ಕಾರ್ಮಿಕರಂತೆ ಎಲ್ಲಾ ಕಾರ್ಮಿಕರೂ ಪಾಲ್ಗೊಂಡಿದ್ದಕ್ಕೆ ದಾಖಲಾತಿಗಳು ದೊರೆತಿಲ್ಲ.

೧.೨. ವ್ಯಾಪ್ತಿ

ಪ್ರಸ್ತುತ ಅಧ್ಯಯನವು ಕರ್ನಾಟಕದ ದಾವಣಗೆರೆ ನಗರದ ಹತ್ತಿಗಿರಣಿ ಕಾರ್ಮಿಕರ ಚಳವಳಿಗೆ ಸಂಬಂಧಿಸಿದ್ದಾಗಿದೆ. ದಾವಣಗೆರೆ ನಗರದಲ್ಲಿರುವ ಕೆಲ ಹತ್ತಿಗಿರಣಿಗಳನ್ನು ಹಾಗೂ ಅಲ್ಲಿ ದುಡಿಯುತ್ತಿದ್ದ ಕಾರ್ಮಿಕರನ್ನು ಅಧ್ಯಯನ ಮಾಡಲು ಮೇಲಿನ ವಿಷಯವನ್ನು ಆಯ್ಕೆಮಾಡಿಕೊಳ್ಳಲಾಗಿದೆ. ಈ ಅಧ್ಯಯನವು ವಸಾಹತು, ಮೈಸೂರುಸಂಸ್ಥಾನದ ಕಾಲ ಹಾಗೂ ಸ್ವತಂತ್ರಾನಂತರದ ಅವಧಿಯನ್ನು ಒಳಗೊಂಡಿದೆ. ಅಂದರೆ ೧೯೩೬ರಲ್ಲಿ ಈ ನಗರದ ಪ್ರಪ್ರಥಮ ಹತ್ತಿಗಿರಣಿ ಸ್ಥಾಪನೆಗೊಂಡಿತು. ಅಲ್ಲಿಂದ ಮುಂದೆ ವಿವಿಧ ಕಾಲಘಟ್ಟಗಳಲ್ಲಿ ಒಟ್ಟು ೦೮ ಹತ್ತಿಗಿರಣಿಗಳು ಖಾಸಗಿಯವರಿಂದ ಸ್ಥಾಪಿಸಲ್ಪಟ್ಟವು. ಅವುಗಳೆಂದರೆ:

೧. ದಾವಣಗೆರೆ ಹತ್ತಿಗರಣಿ (ಡಿ.ಸಿ.ಎಂ.) ೧೯೩೬

೨. ಶ್ರೀ ಶಂಕರ್ ಟೆಕ್ಸ್‌ಟೈಲ್ಸ್ ಮಿಲ್ಸ್ ಲಿಮಿಟೆಡ್ ೧೯೪೫

೩. ಶ್ರೀ ಗಣೇಶ ಹತ್ತಿಗಿರಣಿ ೧೯೪೬

೪. ಶ್ರೀ ಯಲ್ಲಮ್ಮ ಕಾಟನ್, ಉಲ್ಲನ್ ಅಂಡ್ ಸಿಲ್ಕ್‌ಮಿಲ್ ಲಿಮಿಟೆಡ್ ೧೯೫೧

೫. ಚಂದ್ರೋದಯ ಮಿಲ್ಸ್ (ಪ್ರೈ) ಲಿಮಿಟೆಡ್ ೧೯೫೭

೬. ಶ್ರೀ ಸಿದ್ದೇಶ್ವರ ಟೆಕ್ಸ್‌ಟೈಲ್ ಮಿಲ್ಸ್ (ಪ್ರೈ) ಲಿಮಿಟೆಡ್ ೧೯೫೭

೭. ಶ್ರೀ ಆಂಜನೇಯ ಕಾಟನ್ ಮಿಲ್ಸ್ (ಪ್ರೈ) ಲಿಮಿಟೆಡ್ ೧೯೬೨

೮. ಚಿಗಟೇರಿ ಮಿಲ್ಸ್, ದಾವಣಗೆರೆ-೧೯೬೩

ಈ ಮೇಲಿನ ಹತ್ತಿಗಿರಣಿಗಳಲ್ಲಿ ಸಾವಿರಾರು ಕಾರ್ಮಿಕರಿಗೆ ಉದ್ಯೋಗ ಸೃಷ್ಟಿಯಾಯಿತು. ಕ್ರಮೇಣ ವಿವಿಧ ಕಾಲಘಟ್ಟದಲ್ಲಿ ೦೫ ಹತ್ತಿಗಿರಣಿಗಳು ಒಂದಾದಮೇಲೊಂದು ಅವನತಿಯತ್ತಸಾಗಿ

ಅಂತಿಮವಾಗಿ ೦೩ ಮಾತ್ರ ಉಳಿದುಕೊಂಡವು. ಆದ್ದರಿಂದ ಪ್ರಸ್ತುತ ಅಧ್ಯಯನದ ವ್ಯಾಪ್ತಿಯ ಕಾಲಾವಧಿಯನ್ನು ೧೯೩೬ ರಿಂದ ೧೯೯೦ರವರೆಗೂ ನಿಗದಿಪಡಿಸಿಕೊಳ್ಳುವ ಯೋಜನೆ ಮಾಡಲಾಗಿತ್ತು. ಆದರೆ ಸಂಶೋಧನೆ ಕೈಗೊಂಡ ಸಂದರ್ಭದಲ್ಲಿ ಗಿರಣಿಗಳ ಅವನತಿ ನಂತರದ ಕಾರ್ಮಿಕರ ಸ್ಥಿಗತಿಗಳ ಅಧ್ಯಯನವಾಗದೆ ಕಾರ್ಮಿಕ ಚಳವಳಿಯ ಅಧ್ಯಯನ ಅಪೂರ್ಣವಾಗಬಹುದೆಂದು ಕಾಲಮಿತಿಯನ್ನು ೨೦೦೫ರವರೆಗೂ ವಿಸ್ತರಿಸಿಕೊಳ್ಳಲಾಗಿದೆ. ಈ ಅಧ್ಯಯನದಲ್ಲಿ ಹತ್ತಿಗಿರಣಿಗಳ ಹುಟ್ಟು, ಬೆಳವಣಿಗೆ, ಅಳಿವು, ಉಳಿವು, ಕಾರ್ಮಿಕ ಸಂಘಟನೆಗಳ ಉದಯ, ಸಾಧನೆ, ವಿಫಲತೆ ಮುಂತಾದ ವಿಷಯಗಳನ್ನು ಮಾಪನ ಮಾಡುವ ಅಗತ್ಯವಿರುವುದರಿಂದ ನಿರ್ದಿಷ್ಟ ಕಾಲ ಮಿತಿಯನ್ನು ಹಾಕಿಕೊಂಡು ಅಧ್ಯಯನ ಮಾಡಲಾಗಿದೆ. ಕಾರ್ಮಿಕರ ಬಗ್ಗೆ ವಿಶೇಷವಾಗಿ ಕರ್ನಾಟಕ ಆರ್ಥಿಕ ಚರಿತ್ರೆಯಲ್ಲಿ ಯಾವ ರೀತಿ ದಾಖಲಾಗಿದೆ ಎಂಬುದನ್ನು ಬೆಳಕಿಗೆ ತರುವ ಪ್ರಯತ್ನವಿದೆ. ಅವರ ಆರ್ಥಿಕ, ರಾಜಕೀಯ, ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಸ್ಥಾನಮಾನಗಳನ್ನು ಕುರಿತು ಅಧ್ಯಯನ ಕೈಗೆತ್ತಿಕೊಳ್ಳಲಾಗಿದೆ. ಅವರ ಸರ್ವೋತೋಮುಖ ಅಭಿವೃದ್ಧಿ ಕುರಿತು ಚರ್ಚಿಸಲಾಗುವುದು. ಪ್ರಸ್ತುತ ಅಧ್ಯಯನವು ಪ್ರಮುಖ ಉದ್ದೇಶಗಳನ್ನು ಒಳಗೊಂಡಿದೆ. ದಾವಣಗೆರೆ ನಗರದ ಹತ್ತಿಗಿರಣಿ ಕಾರ್ಮಿಕರ ಚಳವಳಿಗಳು ಎಂಬ ಸಂಶೋಧನೆ ವಿಷಯಕ್ಕೆ ೧೦ ಪ್ರಮುಖ ಅಧ್ಯಾಯಗಳನ್ನಾಗಿ ಮಾಡಿಕೊಳ್ಳಲಾಗಿದೆ. ಮೊದಲನೆ ಅಧ್ಯಾಯದಲ್ಲಿ, ಅಧ್ಯಯನದ ಪ್ರಮುಖ ಉದ್ದೇಶ, ವ್ಯಾಪ್ತಿ, ವಿಧಾನವನ್ನು ಹಾಗೂ ವಿವಿಧ ಶಿಸ್ತುಗಳನ್ನು ಪರಿಚಯಿಸಲಾಗುವುದು. ಆ ಮೂಲಕ ಅಧ್ಯಯನದ ಗುರಿ, ಉದ್ದೇಶ ಕುರಿತಂತೆ ತಲಸ್ಪರ್ಶಿ ಅಥವಾ ಸಮಗ್ರವಾಗಿ ಅಧ್ಯಯನ ಮಾಡುವ ಸಮೀಕ್ಷೆ, ಅವಲೋಕನವನ್ನು ಖಚಿತ ಪಡಿಸಿಕೊಳ್ಳಲಾಗುವುದು. ಹತ್ತಿಗಿರಣಿ ಮತ್ತು ಕಾರ್ಮಿಕರ ಚಳವಳಿ ಕುರಿತು ಇಲ್ಲಿಯವರೆಗೆ ಕೈಗೊಂಡಿರುವ ಅಧ್ಯಯನಗಳ ಸಮೀಕ್ಷೆಯನ್ನು ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಅವಲೋಕನ ಮಾಡಲಾಗಿದೆ.

ಎರಡನೆ ಅಧ್ಯಾಯವು, ಹತ್ತಿಗಿರಣಿಗಳ ಮತ್ತು ಕಾರ್ಮಿಕರ ಚಳವಳಿಗಳ ಪ್ರಾದೇಶಿಕ ವ್ಯಾಪ್ತಿಯ ಹಿನ್ನೆಲೆಯನ್ನು ಒಳಗೊಂಡಿದೆ. ಇಲ್ಲಿ ಕರ್ನಾಟಕ ರಾಜ್ಯದ ದಾವಣಗೆರೆ ಜಿಲ್ಲೆ ಹಾಗೂ ಅದೇ ನಗರದ ಭೌಗೋಳಿಕ ಮತ್ತು ಚಾರಿತ್ರಿಕ ಹಿನ್ನೆಲೆಯನ್ನು ವಿವರಿಸಲಾಗಿದೆ.

ಮೂರನೆಯ ಅಧ್ಯಾಯದಲ್ಲಿ, ದಾವಣಗೆರೆ ನಗರದ ೦೮ ಹತ್ತಿಗಿರಣಿಗಳ ಉಗಮ, ವಿಕಾಸ, ಅವಸಾನವನ್ನು ಕುರಿತು ವಿಶ್ಲೇಷಿಸಲಾಗುವುದು. ಅವುಗಳನ್ನು

೧. ಅವಸಾನಗೊಂಡಿರುವ

೨. ಉಳಿದಿರುವ

೩. ಅವಸಾನದ ಅಂಚಿನಲ್ಲಿರುವ ಗಿರಣಿಗಳೆಂದು ೦೩ ಭಾಗಗಳಲ್ಲಿ ವಿಭಾಗಿಸಿಕೊಳ್ಳಲಾಗಿದೆ. ಈ ಗಿರಣಿಗಳಲ್ಲಿನ ಬಂಡವಾಳ, ಉತ್ಪಾದನೆ, ಉದ್ಯೋಗ ಸೃಷ್ಟಿ, ವ್ಯಾಪಾರ ಮುಂತಾದ ವಿಷಯಗಳನ್ನು ಅಧ್ಯಯನ ಮಾಡಲಾಗಿದೆ. ಗಿರಣಿಗಳ ಅವನತಿಗೆ ಕಾರಣಗಳನ್ನೂ, ಅವುಗಳ ಮುಂದಿನ ಸವಾಲುಗಳನ್ನೂ, ಸಲಹೆಗಳನ್ನೂ ಚರ್ಚಿಸಲಾಗಿದೆ. ಅವಸಾನದ ಅಂಚಿನಲ್ಲಿರುವ ಗಿರಣಿಗಳಲ್ಲಿ ಈಗಾಗಲೇ ಸ್ವಯಂ ನಿವೃತ್ತಿ ಪಡೆದಿರುವ ಕಾರ್ಮಿಕರ ಸ್ಥಿತಿ-ಗತಿ ಕುರಿತು ವಿವರಣೆ ಮತ್ತು ವಿಶ್ಲೇಷಣೆ ಮಾಡಲಾಗಿದೆ. ಅಲ್ಲದೆ ಗಿರಣಿಗಳಿಗೆ ಪೂರಕ ಸಾಮಗ್ರಿಯಾಗಿರುವ ಹತ್ತಿಯ ಮಹತ್ವವನ್ನು ಚರ್ಚಿಸಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ, ಕಾರ್ಮಿಕ ಸಂಘಗಳ ಹುಟ್ಟು, ಬೆಳವಣಿಗೆ, ಸ್ವಭಾವ ಮತ್ತು ಸಮಸ್ಯೆಗಳನ್ನು ಕುರಿತು ಚರ್ಚಿಸಲಾಗುವುದು. ಈ ಹಿನ್ನೆಲೆಯಲ್ಲೇ ಸಂಘಗಳನ್ನು ಮುಖ್ಯವಾಗಿ ೦೨ ಹಂತಗಳಲ್ಲಿ (೧೯೩೬ ರಿಂದ ೧೯೭೦ ಮತ್ತು ೧೯೭೦ರಿಂದ ೨೦೦೫ರವರೆಗೆ) ವಿವರಿಸುವ ಪ್ರಯತ್ನ ಮಾಡಲಾಗಿದೆ. ಕಾರ್ಮಿಕ ಸಂಘಗಳ ಕಾರ್ಯಚಟುವಟಿಕೆಗಳಲ್ಲಿ ಜಾತಿ, ಹಣ, ಅಧಿಕಾರ, ಲಿಂಗ ಪ್ರಾದೇಶಿಕ ಪ್ರಭಾವವಿತ್ತೇ ಎಂದು ಚರ್ಚಿಸುವ ಪ್ರಯತ್ನವಿದೆ. ಕಾರ್ಮಿಕ ಚಳುವಳಿಯಲ್ಲಿ ಕಾರ್ಮಿಕ ಸಂಘದ ಪಾತ್ರವನ್ನೂ ಕುರಿತು ವಿಶ್ಲೇಷಣೆ ಹಾಗೂ ಸಲಹೆಗಳನ್ನು ವಿವರಿಸಲಾಗುವುದು.

ಐದನೆಯ ಅಧ್ಯಾಯದಲ್ಲಿ, ದಾವಣಗೆರೆ ನಗರದ ಹತ್ತಿಗಿರಣಿ ಕಾರ್ಮಿಕರ ಪ್ರಮುಖ ಚಳವಳಿಗಳನ್ನು ಅವಲೋಕನ ಮಾಡಲಾಗಿದೆ. ಚಳವಳಿ ಪದದ ಹುಟ್ಟು ಹಾಗೂ ಚಳವಳಿಯ ವ್ಯಾಖ್ಯಾನಮಾಡುವ ಪ್ರಯತ್ನಮಾಡಲಾಗುವುದು. ಇಲ್ಲಿ ಚಳವಳಿಗಳ ಹುಟ್ಟಿಗೆ ಸಂದರ್ಭಗಳೇನು? ಹಾಗೂ ಅಂ[illegible] ೦೬ ಮುಖ್ಯ ಸಂದರ್ಭಗಳನ್ನು ದೊರೆತಿರುವ ಆಧಾರಗಳ ಮೇಲೆ ವಾಸ್ತವವಾಗುತ್ತಿರುವುದು ಇಲ್ಲಿನ ಗಮನಾರ್ಹ ಸಂಗತಿ. ಆ ಸಂದರ್ಭದಲ್ಲಿ ವಿಶ್ಲೇಷಣೆಗೆ ಸಿದ್ಧಾಂತ ಮತ್ತು ಕಾರ್ಮಿಕ ಕಾಯಿದೆಗಳನ್ನು ಬಳಸಿಕೊಳ್ಳಲಾಗಿದೆ. ಈ ಚಳವಳಿಗಳ ಸಂದರ್ಭ ಮತ್ತು ಕಾರಣ ಹಾಗೂ ವಿವಿಧ ಪ್ರಸಂಗಗಳ ಕೊರತೆಗಳನ್ನು ಪ್ರಸ್ತಾಪಿಸಲಾಗುವುದು.

ಆರನೆಯ ಅಧ್ಯಾಯದಲ್ಲಿ, ಕಾರ್ಮಿಕರಿಗೆ ಮೂಲಭೂತವಾಗಿ ದೊರೆಯಬೇಕಾದ ಕಲ್ಯಾಣ ಕಾರ್ಯಕ್ರಮಗಳನ್ನು ಕುರಿತು ಚಿಂತಿಸಲಾಗುವುದು. ಕಾರ್ಮಿಕರ ಕಲ್ಯಾಣದ ಪರಿಕಲ್ಪನೆಯ ಹಿನ್ನೆಲೆಯಲ್ಲಿ ನಗರದ ಕಾರ್ಮಿಕರಿಗೆ ವೈದ್ಯಕೀಯ ಸೌಲಭ್ಯ, ಶಿಕ್ಷಣ, ವಸತಿ, ನೀರು, ಉಪಹಾರಗೃಹ ಮುಂತಾದ ಸೌಲಭ್ಯಗಳು ಯಾವಾಗ ದೊರೆತವು, ಅವು ಪೂರ್ಣಪ್ರಮಾಣದಲ್ಲಿ ಕಾರ್ಮಿಕರನ್ನು ತೃಪ್ತಿಪಡಿಸಿದ್ದವೆ? ಈ ಕ್ಷೇತ್ರಗಳಲ್ಲಿ ಅವರಿಗಿದ್ದ ಕೊರತೆಗಳೇನು? ಮೊದಲಾದ ವಿಷಯಗಳ ವಿಶ್ಲೇಷಣೆ ಜೊತೆಯಲ್ಲಿ ಸಲಹೆಗಳನ್ನು ಕುರಿತು ಹೊಸಚಿಂತನೆ ನಡೆಸಬೇಕಾದುದು ಇಲ್ಲಿನ ಅಗತ್ಯವೇ ಸರಿ. ಗಿರಣಿಗಳು ಅವನತಿಗೊಂಡ ನಂತರ ಕಾರ್ಮಿಕರ ಮೇಲುಂಟಾಗಿರುವ ಪರಿಣಾಮಗಳನ್ನು ಅವಲೋಕಿಸಿರುವುದು ಸ್ಪಷ್ಟ. ನಗರದ ವಾಣಿಜ್ಯ ಕ್ಷೇತ್ರದ ಮೇಲೆ ಕಾರ್ಮಿಕರ ಆರೋಗ್ಯ ಹಾಗೂ ಅವರ ಮಕ್ಕಳ ಶಿಕ್ಷಣ ಮುಂತಾದ ವಿಷಯಗಳ ಮೇಲಾಗಿರುವ ಪರಿಣಾಮಗಳ ಪಟ್ಟಿಯನ್ನು ಮಾಡಲಾಗುವುದು.

ಏಳನೆಯ ಅಧ್ಯಾಯದಲ್ಲಿ, ಕಾರ್ಮಿಕರ ಕಲ್ಯಾಣಕ್ಕೆಂದೇ ರೂಪುಗೊಂಡ ಕಾಯಿದೆಗಳು ಬಹುತೇಕ ಸಂದರ್ಭಗಳಲ್ಲಿ ಕ್ರಮಬದ್ಧವಾಗಿ ಜಾರಿಗೆ ಬಂದಿರಲಿಲ್ಲ. ಕಾರ್ಮಿಕರು ಈ ಕಾಯಿದೆಗಳ ಜಾರಿಗಾಗಿ ಚಳವಳಿ ಹಾದಿ ಹಿಡಿದರು. ಕಾರ್ಮಿಕರಿಗೆ ಸಂಬಂಧಿಸಿದ ಒಟ್ಟು ೧೩ ಕಾಯಿದೆಗಳನ್ನು ಪ್ರಸ್ತುತ ಅಧ್ಯಾಯದಲ್ಲಿ ಅಧ್ಯಯನ ಮಾಡಲಾಗಿದೆ. ಕಾಯ್ದೆಗಳಲ್ಲಿನ ಮುಖ್ಯಾಂಶಗಳೇನು? ಅವುಗಳಲ್ಲಿನ ದೋಷಗಳೇನು? ಪರಿಹಾರೋಪಾಯಗಳೇನು? ಎಂದು ಚರ್ಚಿಸುವ ಒಂದು ಪ್ರಯತ್ನ ಮಾಡಲಾಗಿದೆ. ಮುಂದುವರಿದ ಭಾಗದಲ್ಲಿ ಗಿರಣಿಗಳ ಅವನತಿ ನಂತರದಲ್ಲಿ ಕಾರ್ಮಿಕರ ಸ್ಥಿತಿ-ಗತಿಗಳೇನು? ಎಂದು ಚರ್ಚಿಸಲಾಗಿದೆ.

ಎಂಟನೆಯ ಅಧ್ಯಾಯದಲ್ಲಿ, ಕಾರ್ಮಿಕ ಚಳವಳಿಯ ರುವಾರಿಗಳಾದ ಪ್ರಮುಖ ನಾಯಕರನ್ನು ಕುರಿತು ಅಧ್ಯಯನ ಮಾಡಿ, ವಿವರಗಳನ್ನು ಬೆಳಕಿಗೆ ತರಲಾಗುವುದು. ನಾಯಕರನ್ನು 'ಒಳಗಿನ' ಮತ್ತು 'ಹೊರಗಿನ'ವರೆಂದು ಎರಡು ಭಾಗಗಳಲ್ಲಿ ಅಧ್ಯಯನ ಮಾಡಲಾಗುವುದು. ಈ ನಾಯಕರು ತಮ್ಮನ್ನು ನಂಬಿದ್ದ ಕಾರ್ಮಿಕರನ್ನು ಮುನ್ನಡೆಸಿದ್ದು ಹಾಗೂ ಅವರು ಎದುರಿಸುತ್ತಿರುವ ಆರೋಪಗಳನ್ನು ಕುರಿತು ವಿಶ್ಲೇಷಿಸುವ ಯತ್ನವಾಗಿದೆ. ನಾಯಕರು ಅಥವಾ ಮುಖಂಡರು ಹೇಗೆ ಕರ್ತವ್ಯನಿರ್ವಹಿಸಬೇಕು ಎಂಬ ಸಲಹೆ ಸೂಚನೆಗಳ ಬಗ್ಗೆ ತೌಲನಿಕವಾಗಿ ತಿಳಿಸಿರುವುದು ಶ್ಲಾಘನೀಯ.

ಒಂಬತ್ತನೇ ಅಧ್ಯಾಯದಲ್ಲಿ, ನಗರದ ಕಾರ್ಮಿಕರು ಆಚರಣೆ ಮಾಡುತ್ತಿದ್ದ 'ಹಬ್ಬವಾದ ಮೇ ದಿನಾಚರಣೆ' ಕುರಿತು ಸಮಗ್ರವಾಗಿ ವಿವರಿಸಲಾಗುವುದು. ಇಲ್ಲಿ ಮೇ ದಿನದ ಮಹತ್ವವೇನು? ಆ ಸಂದರ್ಭದಲ್ಲಿ ಚರ್ಚಿಸುತ್ತಿದ್ದ ವಿಷಯಗಳೇನು? ಎಂಬ ಸಂಗತಿಗಳನ್ನು ತಿಳಿಸುವ ಬಯಕೆಯಿದೆ. ಕಾರ್ಮಿಕ ಸಂಘಟನೆಗಳು ಇಂಥ ಆಚರಣೆಗಳ ಸಂದರ್ಭದಲ್ಲಿ ಯಾವ ಮಾರ್ಗವನ್ನು ಅನುಸರಿಸುವುದು ಸೂಕ್ತ ಎಂಬ ಸಲಹೆ ನೀಡುವ ಪ್ರಯತ್ನಗಳನ್ನು ಕಾರ್ಮಿಕರ ಮುಖಾಂತರ ತಿಳಿಸುವಲ್ಲಿ ಇದು ಫಲಕಾರಿಯಾಗಿದೆ. ಮುಂದುವರಿದು, ದಾವಣಗೆರೆ ನಗರದ ಹತ್ತಿಗಿರಣಿ ಕಾರ್ಮಿಕರು, ರಾಜ್ಯದ ಇತರೆ ಕಾರ್ಮಿಕರಿಗೆ ಮಾದರಿಯಾಗುವಂತಹ ೦೪ ಕಾರ್ಮಿಕ ಸಮ್ಮೇಳನಗಳನ್ನು ನಡೆಸಿದ್ದಾರೆ. ಇದರ ಫಲಪಡೆದಿರುವ ವಿಚಾರಗಳನ್ನು ಇಲ್ಲಿ ಚರ್ಚಿಸಲಾಗಿದೆ. ಇಂಥ ಸಮ್ಮೇಳನಗಳ ಧ್ಯೇಯಗಳೇನು? ಅವು ಕಾರ್ಮಿಕರನ್ನು ರಕ್ಷಿಸಿದವೇ? ಅಥವಾ ಕಣ್ಣೊರೆಸುವ ಸಂದರ್ಭಗಳೇ? ಅವುಗಳ ಸಾಧಕ ಬಾಧಕಗಳೇನು? ಎಂದು ವಿಶ್ಲೇಷಿಸುವ ಮತ್ತು ಸಮಸ್ಯೆಗೆ ಪರಿಹಾರವನ್ನು ಕಂಡುಹಿಡಿಯುವ ಪ್ರಯತ್ನವನ್ನು ಮಾಡಲಾಗಿದೆ.

ಸಮಾರೋಪದಲ್ಲಿ ಸಂಶೋಧನೆಯಲ್ಲಿ ಕಂಡುಕೊಂಡ ಫಲಿತಗಳನ್ನು, ಪರಿಹಾರೋಪಾಯಗಳನ್ನು, ಸಲಹೆ ಸೂಚನೆಗಳನ್ನು ವಿಶ್ಲೇಷಣೆ ಮಾಡಲಾಗುವುದು.

೧.೩. ಅಧ್ಯಯನದ ವಿಧಾನ

ಪ್ರಸ್ತುತ ಅಧ್ಯಯನವು ಆರ್ಥಿಕ ಚರಿತ್ರೆ ಕ್ಷೇತ್ರಕ್ಕೆ ಸಂಬಂಧಿಸಿರುತ್ತದೆ. ಇಲ್ಲಿ ದಾವಣಗೆರೆ ನಗರದ ಹತ್ತಿಗಿರಣಿಗಳ ಚರಿತ್ರೆ ಮತ್ತು ಅಲ್ಲಿನ ಕಾರ್ಮಿಕರ ಸ್ಥಿತಿಗತಿ ತಿಳಿಯುವ, ಚರ್ಚಿಸುವ, ವಿಶ್ಲೇಷಿಸುವ ಒಂದು ಸ್ಥೂಲ ಅಧ್ಯಯನದ ಉದ್ದೇಶವಾಗಿದೆ. ಈ ಅಧ್ಯಯನಕ್ಕೆ ಚರಿತ್ರೆಯ ವಿಧಿ ವಿಧಾನಗಳನ್ನು ಅಳವಡಿಸಿಕೊಳ್ಳಲಾಗಿದೆ. ಉದಾಹರಣೆಗೆ ಮಾಹಿತಿಯ ಸಂಗ್ರಹ, ಬಾಹ್ಯ ವಿಮರ್ಶೆ, ಆಂತರಿಕ ವಿಮರ್ಶೆ, ವಿಶ್ಲೇಷಣೆಯ ಕಾರ್ಯ ಸೂತ್ರಗಳನ್ನು ಸಂಶೋಧನೆಯಲ್ಲಿ ಅಳವಡಿಸಿಕೊಳ್ಳಲಾಗಿದೆ. ಅಲಕ್ಷಿತರಾಗಿರುವ ಕಾರ್ಮಿಕರು ದಾಖಲಾತಿಗಳ ಬಗ್ಗೆ ಅಲಕ್ಷ್ಯ ತೋರಿರುವುದು ಅವರ ಚಾರಿತ್ರಿಕ ಘಟನೆಗಳನ್ನು ಸಮಗ್ರವಾಗಿ ದಾಖಲಿಸುವಲ್ಲಿ, ಚರ್ಚಿಸುವಲ್ಲಿ ಅಲ್ಲಲ್ಲಿ ತೊಡಕಾಗಿದೆ. ಕಾರ್ಮಿಕರ ಸಂಬಂಧಿ ಅಧ್ಯಯನವು ಆರ್ಥಿಕ ಚರಿತ್ರೆಯಾಗಿದ್ದು ಹಲವು ಸಮಾಜ ವಿಜ್ಞಾನಗಳಲ್ಲಿ ಸಂಬಂಧ ಹೊಂದಿದ್ದು ವಾಣಿಜ್ಯಶಾಸ್ತ್ರ, ಸಮಾಜಶಾಸ್ತ್ರ, ಅರ್ಥಶಾಸ್ತ್ರ, ಕಾನೂನು, ಚರಿತ್ರೆ, ಭೂಗೋಳ ಮುಂತಾದ ಶಿಸ್ತುಗಳಲ್ಲಿನ ಆಕರಗಳನ್ನು ಬಳಸಿಕೊಳ್ಳಲಾಗಿದೆ. ಅಧ್ಯಯನದ ಪರಿಧಿಯಲ್ಲಿ ಅಗತ್ಯವಿರುವ ಮಾಹಿತಿಗಳನ್ನು ಪ್ರಾಥಮಿಕ ಮತ್ತು ಆನುಷಂಗಿಕ ಮೂಲಗಳಿಂದ ಪಡೆದುಕೊಳ್ಳಲಾಗಿದೆ. ಈ ಅಧ್ಯಯನದಲ್ಲಿ ವಿಷಯದ

ವಿಶ್ಲೇಷಣೆ ಮಾಡುವಾಗ ಸೈದ್ಧಾಂತಿಕ ಹಿನ್ನೆಲೆಯನ್ನೂ, ಕಾರ್ಮಿಕ ಕಾಯಿದೆಗಳ ಮಿತಿಗಳನ್ನೂ ಬಳಸಿಕೊಳ್ಳಲಾಗಿದೆ.

ಸ್ವಾತಂತ್ರ್ಯೋತ್ತರ ಕಾಲದಲ್ಲಿ, ಅಂದರೆ ೧೯೪೭ ರಿಂದ ಇಂದಿನವರೆಗಿನ ಕಾಲಘಟ್ಟದಲ್ಲಿ ಪ್ರಜಾಪ್ರಭುತ್ವ, ಪ್ರಗತಿಪರ, ರಾಷ್ಟ್ರೀಯತೆ, ಎಡ, ಬಲಪಂಥೀಯ ಆಂದೋಲನಗಳು ಮತ್ತು ಹಿಂದುಳಿದ ವರ್ಗಗಳ ಹಾಗೂ ದಲಿತ ಚಳವಳಿಗಳ ಹಿನ್ನೆಲೆಯಲ್ಲಿ ಭಾರತೀಯ ಚರಿತ್ರೆಯ ಬರವಣಿಗೆ ಹೊಸ ಹೊಸ ಆಯಾಮಗಳನ್ನು ಕಂಡುಕೊಂಡಿತು. ಜಾತ್ಯಾತೀತ ಮತ್ತು ವೈಜ್ಞಾನಿಕ ಮನೋಭಾವಕ್ಕೆ ಒತ್ತುಕೊಡುವ ಪ್ರಯತ್ನಗಳೂ ನಡೆದವು. ಜೊತೆಯಲ್ಲಿ ಆರ್ಥಿಕ ಮತ್ತು ಸಾಮಾಜಿಕ ಚರಿತ್ರೆಗೆ ಆದ್ಯತೆ ನೀಡುತ್ತಾ ರಾಜಕೀಯ ಚರಿತ್ರೆಯನ್ನು ನಗಣ್ಯ ಮಾಡಲಾಯಿತು. ಹೀಗೆ ಚರಿತ್ರೆಯ ರಚನೆಯಲ್ಲಿ ವಿಭಿನ್ನ ತಾತ್ವಿಕ ನೆಲೆಗಟ್ಟುಗಳನ್ನು ಕಂಡುಕೊಂಡಿರುವ ಹಿನ್ನೆಲೆಗಳನ್ನೆಲ್ಲಾ ಗಮನಿಸುತ್ತಾ ಪ್ರಸ್ತುತ ಅಧ್ಯಯನವನ್ನು ಪರಿಕಲ್ಪಿಸಿಕೊಳ್ಳಲಾಗಿದೆ. ಇಲ್ಲಿ ತಕ್ಕಮಟ್ಟಿಗೆ, ಆರ್ಥಿಕವಾಗಿ ಹಿಂದುಳಿದಿರುವ ಕಾರ್ಮಿಕರ ಚಳುವಳಿಗಳ ಚಾರಿತ್ರಿಕ ಅಧ್ಯಯನವನ್ನು ಮಾಡಲಾಗಿದೆ.

ಈ ಅಧ್ಯಯನಕ್ಕೆ ಬೆಂಗಳೂರಿನ ರಾಜ್ಯ ಪತ್ರಾಗಾರ ಇಲಾಖೆಯ ಆಕರಗಳನ್ನು ಬಳಸಿಕೊಳ್ಳಲಾಗಿದೆ. ಹಾಗೆಯೇ ಬೆಂಗಳೂರಿನ ಇಂಡಿಯನ್ ಕೌನ್ಸಿಲ್ ಆಫ್ ಹಿಸ್ಟಾರಿಕಲ್ ರಿಸರ್ಚ್ (ICHR), ಇನ್‌ಸ್ಟಿಟ್ಯೂಟ್ ಫರ್ ಸೋಷಿಯಲ್ ಅಂಡ್ ಎಕನಾಮಿಕ್ ಚೇಂಜ್ (ISEC), ಮಿಥಿಕ್ ಸೊಸೈಟಿಯ ಗ್ರಂಥಾಲಯಗಳಿಂದ ಪ್ರಕಟಿತ ಹಾಗೂ ಅಪ್ರಕಟಿತ ಗ್ರಂಥಗಳನ್ನು ವಿಪುಲವಾಗಿ ಬಳಸಿಕೊಳ್ಳಲಾಗಿದೆ. ಅಧ್ಯಯನದ ವ್ಯಾಪ್ತಿಯ ಇತಿಮಿತಿಗಳನ್ನು ಆಧರಿಸಿ ೧೨ ಮುಖ್ಯ ಪ್ರಶ್ನೆಗಳ ಹಾಗೂ ಅವುಗಳಲ್ಲಿ ಹಲವು ಉಪ ಪ್ರಶ್ನೆಗಳ ಪ್ರಶ್ನಾವಳಿ ಸಿದ್ದಪಡಿಸಿ ದಾವಣಗೆರೆ ಹತ್ತಿಗಿರಣಿಗಳ ೩೭ ಮಹಿಳಾ ಕಾರ್ಮಿಕರನ್ನು, ೧೫೪ ಪುರುಷ ಕಾರ್ಮಿಕರನ್ನೂ, ಖುದ್ದಾಗಿ ಸಂದರ್ಶಿಸಿ (ಒಟ್ಟು ೨೯೧) ಮಾಹಿತಿ ಸಂಗ್ರಹಿಸಿ ಅಂಕಿ ಅಂಶಗಳನ್ನು ಸಿದ್ಧಪಡಿಸಿಕೊಳ್ಳಲಾಯಿತು. ವಿವಿಧ ಸಂದರ್ಭಗಳಲ್ಲಿ ವಿಷಯ ಸಿಗದಿದ್ದಾಗ ಹಾಗೂ ಲಭ್ಯವಿರುವ ಮಾಹಿತಿಗಳನ್ನು ವಿವರ್ಶಾತ್ಮಕವಾಗಿ ಬಳಸಿಕೊಳ್ಳಲು ಅಲ್ಲಲ್ಲಿ ಅಂಕಿ ಅಂಶಗಳನ್ನು ಆವರಣಗಳಲ್ಲಿ ಬಳಸಿಕೊಳ್ಳಲಾಗಿದೆ.

ಕಾರ್ಮಿಕರ ಚಲನವಲನಗಳನ್ನು ಗಮನಿಸಿ, ಪ್ರತ್ಯಕ್ಷವಾಗಿ ಅವಲೋಕನ ಮಾಡಿದ ವಿಚಾರಗಳನ್ನು ಸಂಶೋಧನೆಯಲ್ಲಿ ಹೇಳಲಾಗಿದೆ. ಕಾರ್ಮಿಕರು ವಾಸಿಸುವ ಮನೆಗಳಿಗೆ ಭೇಟಿನೀಡಿ, ಮೇ ದಿನಾಚರಣೆ, ಸ್ಮರಣೆ ದಿನಾಚರಣೆ ಮುಂತಾದ ಸಂದರ್ಭಗಳಲ್ಲಿ ಪಾಲ್ಗೊಂಡು ನೈಜಸ್ಥಿತಿಗತಿಗಳನ್ನು ಗಮನಿಸಿ ವಿಶ್ಲೇಷಣೆಯಲ್ಲಿ ಆ ಸಂಗತಿಗಳನ್ನು ಉಪಯೋಗಿಸಿಕೊಳ್ಳಲಾಗಿದೆ. ಕಾರ್ಮಿಕ ವಲಯದಲ್ಲಿ ದೊರೆಯುವ ಲಾವಣಿಹಾಡುಗಳು ಮತ್ತು ಕ್ರಾಂತಿಗೀತೆಗಳನ್ನು ಸಂಗ್ರಹಿಸಿಕೊಂಡು ಇತರೆ ಆಕರಗಳಿಗೆ ತುಲನಾತ್ಮಕವಾಗಿ ಗಮನಿಸಿ, ಬಳಸಿರುವ ಮಾಹಿತಿಗಳನ್ನು ದೃಢಪಡಿಸಿಕೊಳ್ಳಲಾಗಿದೆ. ಭಾರತವು ಕೃಷಿಯಾಧಾರಿತ ದೇಶವಾಗಿದ್ದು, ಭೂಮಿಯು ಸಂಪತ್ತಿನ ಮೂಲಗಳಲ್ಲೊಂದು. ಇಲ್ಲಿನ ವ್ಯವಸಾಯೋತ್ಪನ್ನಗಳು ಕೈಗಾರಿಕೆಗಳಿಗೆ ಆಧಾರ ಸ್ತಂಭಗಳಾಗಿವೆ. ಆದ್ದರಿಂದ ದಾವಣಗೆರೆ ಪರಿಸರದ ಹತ್ತಿ ಕೃಷಿಕರನ್ನು ಸಂದರ್ಶಿಸಿ, ಹತ್ತಿ ಬೆಳೆಯ ಅಭಿವೃದ್ಧಿ ಮತ್ತು ಅವನತಿಯ ಬಗ್ಗೆ ಮಾಹಿತಿ ಸಂಗ್ರಹಿಸಿಕೊಂಡು ಮಹಾಪ್ರಬಂಧದಲ್ಲಿ ಬಳಸಿಕೊಳ್ಳಲಾಗಿದೆ.

ದಾವಣಗೆರೆ ನಗರದ ವ್ಯವಸಾಯೋತ್ಪನ್ನ ಮಾರುಕಟ್ಟೆಯ ಸಹಾಯಕ ನಿರ್ದೇಶಕರಿಂದ ಹತ್ತಿಬೆಲೆಯ ದಾಖಲಾತಿ ಪಡೆದು ಸಂಶೋಧನಾ ಕಾರ್ಯಕ್ಕೆ ಬಳಸಿಕೊಂಡಿರುವುದು ಗಮನಾರ್ಹ.

ಖ್ಯಾತ ವಿಚಾರವಾದಿ, ಕಾರ್ಮಿಕರಂಗದಲ್ಲಿ ದೀರ್ಘವಾದ ಸೈದ್ಧಾಂತಿಕ ಮತ್ತು ಪ್ರಾಯೋಗಿಕ ಅನುಭವವಿರುವ ಡಾ. ಜಿ. ರಾಮಕೃಷ್ಣ ಅವರಿಂದ ಮೊದಲುಗೊಂಡು, ರಾಜ್ಯಮಟ್ಟದ ಕಾರ್ಮಿಕ ಮುಖಂಡರಾದ ಡಾ. ಸಿದ್ಧನಗೌಡ ಪಾಟೀಲ, ಶ್ರೀ ಅನಂತಸುಬ್ಬರಾವ್, ಶ್ರೀ ಆನಂದತೀರ್ಥ ಇವರನ್ನು ಸಂಶೋಧನೆಗೆ ಸಂಬಂಧಿಸಿದ ವಿಚಾರಗಳಿಗೆ ಸಂದರ್ಶನ ಮಾಡಿ ಧ್ವನಿಸುರುಳಿಗಳಲ್ಲಿ ಮಾಹಿತಿ ಸಂಗ್ರಹಿಸಿಕೊಳ್ಳಲಾಗಿದೆ. "ಕರ್ನಾಟಕ ಹತ್ತಿಗಿರಣಿ ಮಾಲೀಕರ ಸಂಘ" (KTMA)ವು ಬೆಂಗಳೂರು ನಗರದ ಮಲ್ಲೇಶ್ವರಂನಲ್ಲಿದ್ದು, ಅಲ್ಲಿನ ಕಾರ್ಯದರ್ಶಿಯವರಿಂದ ಪ್ರಕಟಿತ ಗ್ರಂಥಗಳನ್ನೂ, ಪ್ರಾಯೋಗಿಕ ತೊಂದರೆಗಳಿಗೆ ಸಂಬಂಧಿಸಿದ ಮಾಹಿತಿಪಡೆದು ಅದನ್ನು ಇಲ್ಲಿ ಬಳಸಿಕೊಳ್ಳಲಾಗಿದೆ. ದಾವಣಗೆರೆ ನಗರದ ಪಿ.ಜೆ. ಬಡಾವಣೆಯಲ್ಲಿ ದಾವಣಗೆರೆ ಹತ್ತಿ ಗಿರಣಿ (ಡಿ.ಸಿ.ಎಂ.)ಯ ಆಡಳಿತ ಕಛೇರಿಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಿಕೊಳ್ಳಲಾಗಿದೆ. ಚಾಲ್ತಿಯಲ್ಲಿರುವ ಗಿರಣಿಗಳ ವಾರ್ಷಿಕ ವರದಿಗಳನ್ನು (Annual reports) ಸಂಗ್ರಹಿಸಿ ಅವಲೋಕಿಸಲಾಗಿದೆ. ಗಿರಣಿ ಮಾಲೀಕರು, ಅವಸಾನದ ಅಂಚಿನಲ್ಲಿರುವ ತೊಳಹುಣಸೆಯ ಯಲ್ಲಮ್ಮ ಗಿರಣಿಯ ನಿರ್ದೇಶಕರನ್ನು ಭೇಟಿಮಾಡಿ ಅಭಿಪ್ರಾಯಗಳನ್ನು ಸಂಗ್ರಹಿಸಿಕೊಂಡು ಸಂಶೋಧನಾ ಪ್ರಬಂಧಕ್ಕೆ ಬಳಸಿಕೊಳ್ಳಲಾಗಿದೆ. ಅವನತಿಯಾಗಿರುವ ಗಿರಣಿಗಳ ಮಾಲೀಕರ ಪರಿವಾರದೊಂದಿಗೆ ಸಂದರ್ಶನ ಮಾಡಿದ್ದೇನೆ. ಯಲ್ಲಮ್ಮ ಹತ್ತಿಗಿರಣಿಯಲ್ಲಿ ಸ್ವಯಂ ನಿವೃತ್ತಿ ತೆಗೆದುಕೊಂಡ ಕಾರ್ಮಿಕರಿಗೆ ಮೊದಲ ಹಂತದಲ್ಲಿ (೧೯೯೧) ಇತರೆ ವೃತ್ತಿಗಳನ್ನು ನಿರ್ವಹಿಸಲು ಅನುಕೂಲವಾಗುವಂತಹ ತರಬೇತಿ ನೀಡುವ ಶಿಬಿರ ನಡೆದಿತ್ತು, ಆ ಶಿಬಿರದಲ್ಲಿ ಪಾಲ್ಗೊಂಡು ಅವರ ಸಮಸ್ಯೆಗಳನ್ನು ಖುದ್ದಾಗಿ ಗಮನಿಸಲಾಗಿದೆ. ಸ್ಥಳೀಯ ಕಾರ್ಮಿಕ ಮುಖಂಡರು ಹಾಗೂ ನ್ಯಾಯಲಯದಲ್ಲಿ ಕಾರ್ಮಿಕರ ಮೊಕದ್ದಮೆಗಳನ್ನು ನೋಡಿಕೊಳ್ಳುವ ವಕೀಲರು, ಇತರರೊಂದಿಗೆ ಸಂದರ್ಶನಮಾಡಿ ಧ್ವನಿ ಸುರುಳಿಗಳಲ್ಲಿ ಮಾಹಿತಿ ಸಂಗ್ರಹ ಮಾಡಿರುವುದನ್ನು ವಿಶ್ಲೇಷಣೆ ಮಾಡಿರುವುದು ಪ್ರಸ್ತುತ ಪ್ರಬಂಧದಲ್ಲಿ ಅಧ್ಯಯನಕ್ಕೆ ತಿರುವು ತಂದಿರುವುದು ದಿಟ.

ಸ್ಥಳೀಯ ಕಾರ್ಮಿಕ ಮುಖಂಡರೂ, ಸಂಘಟನಾ ಚಳುವಳಿಯಲ್ಲಿ ಜೈಲುಶಿಕ್ಷೆ ಅನುಭವಿಸಿದ ಶ್ರೀ. ಹೆಚ್.ಕೆ. ರಾಮಚಂದ್ರಪ್ಪನವರು ದಿನಚರಿ ಬರೆಯುವ ಪ್ರವೃತ್ತಿ ಇಟ್ಟುಕೊಂಡಿದ್ದರು. ಇವರ ದಿನಚರಿ ಪುಸ್ತಕಗಳನ್ನು ಅಭ್ಯಾಸಮಾಡಿ ಮಾಹಿತಿ ಸಂಗ್ರಹಿಸಿ ಸಂಶೋಧನೆಗೆ ವಿಮರ್ಶಾತ್ಮಕವಾಗಿ ಉಪಯೋಗಿಸಿಕೊಳ್ಳಲಾಗಿದೆ. ಕಾರ್ಮಿಕ ಇಲಾಖೆ ದಾವಣಗೆರೆ, ಬಳ್ಳಾರಿ ವಿಭಾಗ ಇಲ್ಲಿಯ ಅಧಿಕೃತ ಕಾಗದ ಪತ್ರಗಳನ್ನು ಗಮನಿಸಿ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.? ಗಿರಣಿಗಳ ಅವನತಿ ನಂತರ ಕಾರ್ಮಿಕರು ಅಪರಾಧ ಕೃತ್ಯಗಳಲ್ಲೇನಾದರೂ ತೊಡಗಿಸಿಕೊಂಡಿದ್ದರೆ ಎಂಬ ಹಿನ್ನೆಲೆಯಲ್ಲಿ ಪೋಲಿಸ್ ಠಾಣೆಯ 'ಕ್ರೈಂಕೀ' ಪುಸ್ತಕಗಳನ್ನು ಅವಲೋಕಿಸಿ ಬಳಸಿಕೊಳ್ಳಲಾಗಿದೆ.

ಅಲಕ್ಷತೆಗೆ ಗುರಿಯಾದ ಕಾರ್ಮಿಕ ಚಳವಳಿಗಳನ್ನು ದಾಖಲಿಸುವ ದೃಷ್ಟಿಯಲ್ಲಿ ದಾವಣಗೆರೆ ನಗರದ ಸ್ಥಳೀಯ ಪತ್ರಿಕೆಗಳು (ಜನತಾವಾಣಿ, ನಗರವಾಣಿ) ಗಮನಾರ್ಹವಾದ ಪಾತ್ರವಹಿಸಿವೆ. ಅವು

ಸಮಕಾಲೀನ ಸಂದರ್ಭಗಳಲ್ಲಿ ಸಮಾಜದ ಹಾಗೂ ಚಳವಳಿಯ ನೈಜ ಸಂಗತಿಯನ್ನು ಪ್ರಕಟಿಸಿರುತ್ತವೆ. ಈ ಪತ್ರಿಕೆಗಳ ಮಾಹಿತಿಯನ್ನು ಚರಿತ್ರೆಯ ಸಂಶೋಧನೆಯ ವಿಧಾನದ ವ್ಯಾಪ್ತಿಯಲ್ಲಿ ಬಳಸಿಕೊಳ್ಳಲಾಗಿದೆ. ಈ ಮಾಹಿತಿಗಳು ವಿಷಯ ವಿಶ್ಲೇಷಣೆಗೆ ಆಗುವ ತೊಡಕನ್ನು ನಿವಾರಿಸಲು ಸಹಕಾರಿಯಾಗಿವೆ.

ದಾವಣಗೆರೆ ನಗರದ ವಿದ್ಯುತ್‌ಚ್ಛಕ್ತಿ ಕಛೇರಿಯಲ್ಲಿ ವಿದ್ಯುತ್‌ದರಗಳು ಮತ್ತು ಕೈಗಾರಿಕೆಗಳ ಬೆಳವಣಿಗೆಯಲ್ಲಿ ವಿದ್ಯುತ್ತಿನ ಪಾತ್ರವನ್ನು ಕುರಿತು ಮಾಹಿತಿ ಸಂಗ್ರಹಿಸಿ ಬಳಸಲಾಗಿದೆ. ಅವನತಿ ಹೊಂದಿರುವ ಹತ್ತಿಗಿರಣಿಗಳಲ್ಲಿ ಕರ್ತವ್ಯನಿರ್ವಹಿಸಿದ್ದ ಕಾರ್ಮಿಕ ಕಲ್ಯಾಣಾಧಿಕಾರಿಗಳನ್ನು ಸಂದರ್ಶಿಸಿ, ಚರ್ಚಿಸಿ, ಕಾರ್ಮಿಕರಿಗೆ ಕಲ್ಯಾಣ ಕಾರ್ಯಕ್ರಮಗಳು ಹೇಗಿರಬೇಕೆಂದು ವಿಶ್ಲೇಷಿಸುವಾಗ ಮಾಹಿತಿಗಳನ್ನು ಪ್ರಬಂಧದಲ್ಲಿ ಪ್ರಸ್ತಾಪಿಸಿರುವುದು ಬಹುಮುಖ್ಯ ಸಂಗತಿಯಾಗಿದೆ.

ಕಾರ್ಮಿಕ ಇಲಾಖೆ ಪ್ರಕಟಿಸುವ ಕಾರ್ಮಿಕ ಪತ್ರಿಕೆಗಳು, ಅಂತರ್‌ಜಾಲ (Internet) ಮಾಹಿತಿಗಳನ್ನು ಬಳಸಿಕೊಳ್ಳಲಾಗಿದೆ. ಪ್ರಸ್ತುತ ಅಧ್ಯಯನದಿಂದ ಕಂಡುಕೊಂಡ ಫಲಿತಾಂಶಗಳು ಭವಿಷ್ಯತ್ತಿನಲ್ಲಿ ಗಿರಣಿಗಳು ಅವನತಿಯಾಗುವುದನ್ನು ತಡೆಯುವ ಸಂದರ್ಭಕ್ಕೆ ಮಾರ್ಗದರ್ಶನಕ್ಕಾಗಲಿ ಅಥವಾ ಕಾರ್ಮಿಕರ ಸ್ಥಾನಮಾನ ವೃದ್ಧಿಸುವಲ್ಲಿ, ನಾಯಕರ ವ್ಯಕ್ತಿತ್ವದಲ್ಲಿನ ದೋಷಗಳನ್ನು ಕಂಡುಕೊಳ್ಳುವಲ್ಲಿ ಅವರು ತಾವು ನಡೆದು ಬಂದ ಹಾದಿಯನ್ನು ಹಿಂತಿರುಗಿ ನೋಡುವ ಸಂದರ್ಭಗಳಲ್ಲಿ, ಕಾರ್ಮಿಕ ಕಾಯಿದೆಗಳನ್ನು ತಿದ್ದುಪಡಿ ಮಾಡುವಲ್ಲಿ ಸಹಾಯಕವಾಗಬಲ್ಲವು. ಈ ಎಲ್ಲ ಸಂಗತಿಗಳನ್ನು ಪರಸ್ಪರ ಅನುಕೂಲಕ್ಕಾಗಿ ಚಿಂತಿಸಿದ್ದು ಸ್ಪಷ್ಟ. ಸರ್ಕಾರವು ಕಾರ್ಮಿಕರ ಹಾಗೂ ಕೈಗಾರಿಕಾ ನೀತಿ ರೂಪಿಸುವಲ್ಲಿ, ಯೋಜನೆಗಳನ್ನು ತಯಾರಿಸುವಲ್ಲಿ ಫಲಿತಗಳು ಸಹಕಾರಿಯಾಗಬಲ್ಲವು. ಕೈಗಾರಿಕೆಗಳು ಅವನತಿಯಾದರೆ ತಮ್ಮ ಜೀವನಾಧಾರದ ಕೆಲಸ ಕಳೆದುಕೊಳ್ಳುವ ಕಾರ್ಮಿಕರ ಜೀವನ ನಿರ್ವಹಣೆಗೆ ಸಂಬಂಧಿಸಿದಂತೆ ಕೇಂದ್ರ, ರಾಜ್ಯ ಸರ್ಕಾರಗಳು ಹೊಸ ಹೊಸ ಕಾರ್ಯಕ್ರಮ ರೂಪಿಸುವಾಗ ಈ ಅಧ್ಯಯನವು ತಕ್ಕಮಟ್ಟಿನ ಸಹಾಯಹಸ್ತ ನೀಡಬಲ್ಲದೆಂಬ ಆಶಯವಿದೆ. ಪ್ರಪಂಚೀಕರಣದ ಸಂದರ್ಭದಲ್ಲಿ ಸರ್ಕಾರದ, ಕೈಗಾರಿಕಾ ರಂಗದ, ಕಾರ್ಮಿಕರ ಮುಂದಿರುವ ಸವಾಲುಗಳನ್ನು ಎದುರಿಸಲು ಈ ಅಧ್ಯಯನವು ಸಹಾಯಕವಾಗುತ್ತದೆ ಎಂಬ ಒತ್ತಾಸೆಯನ್ನೂ ಇಲ್ಲಿ ಇಟ್ಟುಕೊಂಡಿದೆ. ಈ ನಿಟ್ಟಿನಲ್ಲಿ ದಾವಣಗೆರೆ ನಗರದ ಹತ್ತಿಗಿರಣಿ ಕಾರ್ಮಿಕರ ಚಳವಳಿಗಳ ಅಧ್ಯಯನವು ಪ್ರಸ್ತುತದಲ್ಲಿರುವ ಕಾರ್ಮಿಕರ ಚಳವಳಿ, ಹೋರಾಟ, ಸಮಸ್ತ ಶೋಷಿತರಿಗೆ ಸ್ಫೂರ್ತಿಯನ್ನುಂಟು ಮಾಡುವುದರ ಜೊತೆಗೆ ಗತಕಾಲದ ಅರಿವನ್ನು ಮೂಡಿಸುತ್ತದೆ. ಕಾರ್ಮಿಕ ಜಗತ್ತಿನ ಹೊಸಲೋಕವನ್ನು ಅನಾವರಣ ಮಾಡುವ ಮಹಾದಾಸೆ ಈ ಪ್ರಬಂಧದಲ್ಲಿ ವ್ಯಕ್ತಪಟ್ಟಿದೆ.

೧.೪. ಅಧ್ಯಯನ ಸಮೀಕ್ಷೆ

ಕಾರ್ಮಿಕ ಚಳವಳಿ ಕುರಿತಂತೆ ಅಂತರಾಷ್ಟ್ರೀಯ, ರಾಷ್ಟ್ರ, ರಾಜ್ಯ ಮಟ್ಟದಲ್ಲಿ ಸಂಶೋಧನೆ, ಅಧ್ಯಯನ, ಪರಿಚಯದ ನೆಲೆಯಲ್ಲಿ ಹಲವು ಕೃತಿಗಳು ಹೊರಬಂದಿದೆ. ರಾಜ್ಯಮಟ್ಟದ ಕಾರ್ಮಿಕ ಚರಿತ್ರೆಯ ಅಧ್ಯಯನದಲ್ಲಿ ದಾವಣಗೆರೆ ನಗರದ ಕಾರ್ಮಿಕರ ಚಳವಳಿಗಳನ್ನು ಕೆಲವೇ ಸಾಲುಗಳಲ್ಲಿ ವಿವರಿಸಿದ್ದು ವಿಪರ್ಯಾಸ. ಅಂತೆಯೇ ಕರ್ನಾಟಕದ ದಾವಣಗೆರೆ ನಗರಮಟ್ಟದಲ್ಲಿ ರಚನೆಯಾಗಿರುವ ಗ್ರಂಥಗಳಲ್ಲಿ ನಾಲ್ಕಾರು ಪುಟಗಳಲ್ಲಿ ಮಾತ್ರ ವಿವರಿಸಲಾಗಿದೆ. ಪ್ರಸ್ತುತ ಅಧ್ಯಯನಕ್ಕೆ ಪೂರಕವಾಗಿ

ಅಗತ್ಯವಿರುವ ಹಲವು ಅಧ್ಯಯನಗಳ ಸಮೀಕ್ಷೆಯನ್ನು ಇಲ್ಲಿಮಾಡಲಾಗಿದೆ. ಕಾರ್ಮಿಕ ಚಳವಳಿಗಳು ಹಲವು ಸಮಾಜ ವಿಜ್ಞಾನಗಳಲ್ಲಿ ಸಂಬಂಧ ಹೊಂದಿರುವುದರಿಂದ ಅಂತರಶಿಸ್ತುಗಳಲ್ಲಿನ ಲಭ್ಯವಿರುವ ಕೃತಿಗಳನ್ನೂ ಇಲ್ಲಿ ಸಮೀಕ್ಷೆ ಮಾಡಲಾಗಿದೆ. ಕಾರ್ಮಿಕರ ಚಳವಳಿ ಚರಿತ್ರೆ ಅರಿಯಲು ಪೂರಕವಾಗಿರುವ, ಕೈಗಾರಿಕೆಗಳನ್ನೂ ಮತ್ತು ಕಾರ್ಮಿಕರನ್ನೂ ಕುರಿತು ಚರ್ಚಿಸುವ ಲಭ್ಯವಿರುವ ಪ್ರಕಟಿತ ಕೃತಿಗಳು, ಪಿಎಚ್.ಡಿ. ಮಹಾಪ್ರಬಂಧಗಳು, ಎಂ.ಫಿಲ್ ನಿಬಂಧಗಳು, ಲೇಖನಗಳನ್ನು ಇಲ್ಲಿ ಸಮೀಕ್ಷೆ ಮಾಡುವ ಪ್ರಯತ್ನವಿದೆ. ಎನ್. ಜಯಪಾಲನ್ ಇವರು 'ಎಕನಾಮಿಕ್ ಹಿಸ್ಟರಿ ಆಫ್ ಇಂಡಿಯಾ' (ಏನ್‌ಷಿಯನ್ಟ್ ಟು ಪ್ರಸೆನ್ಟ್ ಡೇ)-೨೦೦೧ರ ಗ್ರಂಥದಲ್ಲಿ ಸಿಂಧೂಬಯಲಿನ ನಾಗರೀಕತೆಯಿಂದ ಮೊದಲುಗೊಂಡು ಪ್ರಾಚೀನ, ಮಧ್ಯಕಾಲೀನ, ಆಧುನಿಕ ಭಾರತದವರೆಗಿನ ವಿವಿಧ ರಾಜಮನೆತನಗಳ, ಸರ್ಕಾರಗಳ ಅವಧಿಯಲ್ಲಿ ಪ್ರತ್ಯೇಕವಾಗಿ ವ್ಯವಸಾಯ, ಕೈಗಾರಿಕೆ, ವ್ಯಾಪಾರ, ವಾಣಿಜ್ಯ, ಕಾರ್ಮಿಕರು, ಬಂಡವಾಳಶಾಹಿಗಳನ್ನು ಕುರಿತು ಚರ್ಚಿಸಿರುವುದನ್ನು ಗಮನಿಸಲಾಗಿದೆ.

ವಾಲ್ಟರ್ ಕೆಂಡಾಲ್‌ರವರ 'ದಿ ಲೇಬರ್ ಮೂಮೆಂಟ್ ಇನ್ ಯೂರೋಪ್' (೧೯೭೫) ಕೃತಿಯಲ್ಲಿ ಕೈಗಾರಿಕಾ ಕ್ರಾಂತಿ, ಕಾರ್ಮಿಕ ಚಳವಳಿಯ ಹುಟ್ಟು, ಬೆಳವಣಿಗೆ ಕುರಿತಂತೆ ವಿವರಣೆ ನೀಡಿರುವುದು ಸ್ಮರಣೀಯ.

ಹೆಟ್ನೆರವರ 'ದಿ ಪೊಲಿಟಿಕಲ್ ಎಕಾನಮಿ ಆಫ್ ಇನ್‌ಡೈರೆಕ್ಟ್ ರೂಲ್ ಮೈಸೂರು-೧೮೮೧-೧೯೪೭' ಕೃತಿಯಲ್ಲಿ ಮೈಸೂರು ಸಂಸ್ಥಾನದಲ್ಲಿ ಬ್ರಿಟಿಷರ ಅಪ್ರತ್ಯಕ್ಷ ಆಳ್ವಿಕೆ ಕುರಿತು ಚಿತ್ರಣ ನೀಡಿದ್ದಾರೆ. ಇದರಲ್ಲಿ ಕಾರ್ಮಿಕ ಚಳವಳಿ ಕುರಿತು ಒಂದು ಅಧ್ಯಾಯವಿದ್ದು ಕಾರ್ಮಿಕರು ಸಾಮಾನ್ಯವಾಗಿ ಹಳ್ಳಿಗಳಿಂದ ಪಟ್ಟಣಕ್ಕೆ ಬಂದವರು, ರಾಜ್ಯದ ವಿವಿಧ ಭಾಗಗಳ ಕಾರ್ಮಿಕರ ಸಂಖ್ಯೆ, ಕಾರ್ಮಿಕರ ಮುಷ್ಕರಗಳು, ಪ್ರಜಾಪ್ರತಿನಿಧಿ ಸಭೆಯಲ್ಲಿ ಕಾರ್ಮಿಕ ಶಾಸನಗಳ ಬಗ್ಗೆ (೧೯೪೧) ನಡೆದ ಚರ್ಚೆಗಳನ್ನು ಕುರಿತು ವಿವರಣೆ ನೀಡಿರುತ್ತಾರೆ. ಎಮ್.ಎಸ್. ಸತ್ಯನ್‌ರವರು ೧೯೬೫ರಲ್ಲಿ ಸಂಪಾದಿಸಿದ 'ಚಿತ್ರದುರ್ಗ ಗೆಜೆಟಿಯರ್'ನಲ್ಲಿ, ಚಿತ್ರದುರ್ಗ ಜಿಲ್ಲೆಯ ನೆಲ, ಜಲ, ಕೈಗಾರಿಕೆ, ಸಾರಿಗೆ, ಕಾರ್ಮಿಕರು, ಬಂಡವಾಳ, ಖನಿಜ ಸಂಪತ್ತು, ಆಡಳಿತ ಮೊದಲಾದ ವಿಷಯಗಳನ್ನು ಸಂಗ್ರಹಿಸಿದ್ದಾರೆ.

ಮೇರಿ ಬಿಯರ್ಡ್‌ರವರ 'ಎ ಷಾರ್ಟ್ ಹಿಸ್ಟರಿ ಆಫ್ ದಿ ಅಮೇರಿಕನ್ ಲೇಬರ್ ಮೂಮೆಂಟ್' (೧೯೬೮) ಕೃತಿಯಲ್ಲಿ ಕಾರ್ಮಿಕ ಚಳವಳಿಯ ಸ್ವರೂಪ, ಪ್ರಾಮುಖ್ಯತೆ, ಅಮೇರಿಕಾದ ಕಾರ್ಮಿಕ ಸಂಘಗಳ ಉಗಮ, ಅಮೇರಿಕಾದ ಫೆಡರೇಷನ್ ಆಫ್ ಲೇಬರ್‌ನ ಉದಯ ಮತ್ತು ರಾಜಕೀಯ, ಜಾಗತಿಕ ಮಹಾಯುದ್ಧ ಮತ್ತು ಕಾರ್ಮಿಕರನ್ನು ಕುರಿತು ವಿವರಣೆ ನೀಡಿದ್ದಾರೆ.

ಧರ್ಮಕುಮಾರ್‌ರವರ ಸಂಪಾದಕೀಯದ 'ದ ಕೇಂಬ್ರಿಡ್ಜ್ ಎಕನಾಮಿಕ್ ಹಿಸ್ಟರಿ ಆಫ್ ಇಂಡಿಯಾ ವಾಲ್ಯೂಮ್-೨' (೧೭೫೦-೧೯೭೦)ರಲ್ಲಿ (೧೯೮೨), ಭಾರತದ ಭೂಮಿ ಮತ್ತು ಜನರು, ರೈತಾಪಿವರ್ಗ, ನೀರಾವರಿ ಪದ್ಧತಿ, ಬೃಹತ್ ಕೈಗಾರಿಕೆಗಳು, ಹಣ ಮತ್ತು ಸಾಲ ವ್ಯವಸ್ಥೆ ಕುರಿತು ಭಿನ್ನನೆಲೆಗಳಲ್ಲಿ ಅಧ್ಯಯನ ಮಾಡಿರುವ ಲೇಖನಗಳಿವೆ. ಈ ಕೃತಿಯ ೭ನೇ ಅಧ್ಯಾಯದಲ್ಲಿ ೧೯೪೭ರವರೆಗಿನ ಭಾರತದ ಬೃಹತ್ ಕೈಗಾರಿಕೆಗಳ ಹುಟ್ಟು ಮತ್ತು ಅಲ್ಲಿನ ಕಾರ್ಮಿಕರ ಅವಶ್ಯಕತೆ, ಸಮಸ್ಯೆಗಳನ್ನು ಕುರಿತು ಡಿ.ಮಾರಿಸ್ ಮತ್ತು ಆರ್.ಲೂಸ್‌ರವರ ಲೇಖನ ಪ್ರಸ್ತುತ ಅಧ್ಯಯನಕ್ಕೆ ಸಹಕಾರಿಯಾಗಿದೆ.

ಜಿ.ಕೆ.-ಶರ್ಮಾರವರು "ಲೇಬರ್ ಮೂಮೆಂಟ್ ಇನ್ ಇಂಡಿಯಾ" (೧೮೮೫-೧೯೫೦) ಕೃತಿಯಲ್ಲಿ (೧೯೮೨) ಭಾರತದಲ್ಲಿನ ದುಡಿಯುವ ವರ್ಗದ ಹುಟ್ಟು, ಬೆಳವಣಿಗೆ, ಭಾರತದ ಕಾರ್ಮಿಕ ಚಳವಳಿಯ ವಿಶೇಷಗಳು ಹಾಗೂ ಈ ಚಳವಳಿಯನ್ನು ೦೩ ಹಂತಗಳಲ್ಲಿ ಚರ್ಚಿಸಿರುವುದು ಗಮನಾರ್ಹ.

ಜಿ. ರಾಮಾನುಜಮ್‌ರವರ 'ಇಂಡಿಯನ್ ಲೇಬರ್ ಮೂಮೆಂಟ್'ಗ್ರಂಥದಲ್ಲಿ (೧೯೮೬), ಕೈಗಾರಿಕೆಗಳ ಹುಟ್ಟು, ಪ್ರಥಮ ಕೈಗಾರಿಕೆ, ಪ್ರಥಮ ಕಾರ್ಮಿಕ ಸಂಘ, ಕಾರ್ಮಿಕ ಕಾಯಿದೆಗಳು, ಐ.ಎಲ್.ಓ., ಕಾರ್ಮಿಕ ಪ್ರತಿನಿಧಿಗಳನ್ನು ಕುರಿತಂತೆ ಭಾರತದ ಕಾರ್ಮಿಕ ಚಳವಳಿಯ ಚಿತ್ರಣ ನೀಡಿರುತ್ತಾರೆ. ಇವರ ಗ್ರಂಥದಲ್ಲಿ ಕಾರ್ಮಿಕ ಚಳವಳಿಯ ಎಲ್ಲಾ ಮೊದಲ ಘಟನೆಗಳನ್ನು ಗುರುತಿಸುವ ಪ್ರಯತ್ನ ಮಾಡಿರುವುದು ಈ ಅಧ್ಯಯನಕ್ಕೆ ಸ್ಫೂರ್ತಿ ನೀಡಿದೆ.

ಆರ್. ಪಾಲ್ಮೆದತ್ತರವರ 'ಇಂಡಿಯಾ ಟು-ಡೇ' ಗ್ರಂಥದಲ್ಲಿ (೧೯೭೦), ಭಾರತದಲ್ಲಿ ಬ್ರಿಟಿಷರ ಆಳ್ವಿಕೆ, ಭಾರತದ ಮೇಲೆ ಮಾರ್ಕ್ಸ್ ತತ್ವಗಳ ಪ್ರಭಾವ, ಬ್ರಿಟಿಷರು ಭಾರತದ ಸಂಪತ್ತನ್ನು ದೋಚಿದ್ದು, ಕಾರ್ಮಿಕರ ಉದಯ ಮತ್ತು ಸಮಾಜವಾದ, ಕಾರ್ಮಿಕ ಚಳವಳಿಯ ಏಳಿಗೆ ಮುಂತಾದ ಮಾಹಿತಿ ಈ ಅಧ್ಯಯನಕ್ಕೆ ಮಾದರಿಯಾಗಿದೆ. ವೈ.ಎ. ದೇವಪಾಲ್‌ರವರು ೧೯೮೮ರಲ್ಲಿ 'ವೇಜ್ ಅಂಡ್ ಸ್ಯಾಲರಿ ಅಡ್ಮಿನ್‌ಸ್ಟ್ರೇಷನ್ ಇನ್ ಟೆಕ್ಸ್‌ಟೈಲ್ ಮಿಲ್' - 'ಎ ಕೇಸ್ ಸ್ಟಡಿ ಆಫ್ ಕರ್ನಾಟಕ' ಕುರಿತು ಮೈಸೂರಿನ ಮಾನಸಗಂಗೋತ್ರಿಯ ವಾಣಿಜ್ಯ ವಿಭಾಗದಲ್ಲಿ ಪಿಎಚ್.ಡಿ ಗಾಗಿ ಸಲ್ಲಿಸಿದ ಮಹಾಪ್ರಬಂಧ (ಅಪ್ರಕಟಿತ)ದಲ್ಲಿ ಹತ್ತಿಗಿರಣಿಗಳ ಚರಿತ್ರೆ, ಕಾರ್ಮಿಕರ ಸಂಖ್ಯೆ, ವೇತನದಲ್ಲಿನ ಅಂತರಗಳನ್ನು ಕುರಿತು ವಿವರಣೆ ನೀಡಿದ್ದಾರೆ. ಎಸ್.ಎಚ್. ಸಿದ್ಧಲಿಂಗಸ್ವಾಮಿಯವರು ೧೯೯೨ರಲ್ಲಿ 'ಇಂಡಸ್ಟ್ರಿಯಲ್ ರಿಲೇಷನ್ಸ್ ಇನ್ ಟೆಕ್ಸ್‌ಟೈಲ್ಸ್ ಇಂಡಸ್ಟ್ರೀ - ಎ ಕೇಸ್ ಸ್ಟಡಿ ಆಫ್ ಕಾಟನ್ ಮಿಲ್ಸ್ ಇನ್ ದಾವಣಗೆರೆ' ಕುರಿತು ಮೈಸೂರಿನ ಮಾನಸ ಗಂಗೋತ್ರಿಯ ಅರ್ಥಶಾಸ್ತ್ರ ವಿಭಾಗದಲ್ಲಿ ಪಿಎಚ್.ಡಿಗಾಗಿ (೧೯೯೨) ಸಲ್ಲಿಸಿದ (ಅಪ್ರಕಟಿತ) ಮಹಾಪ್ರಬಂಧದಲ್ಲಿ ದಾವಣಗೆರೆ ಹತ್ತಿಗಿರಣಿಗಳಲ್ಲಿನ ಕಾರ್ಮಿಕರು ಮತ್ತು ಮಾಲೀಕರ ಸಂಬಂಧ ಕುರಿತು ಚಿತ್ರಣ ನೀಡಿದ್ದಾರೆ. ನಾದರ್ ಇ.ಎನ್.ರವರು 'ಪ್ರಾಬ್ಲಮ್ಸ್ ಆಫ್ ಲೇಬರ್ ಇನ್ ಸ್ಮಾಲ್ ಸ್ಕೇಲ್ ಇನ್ ಇಂಡಸ್ಟ್ರೀಸ್ ಇನ್ ಕಾಮರಾಜರ್ ಡಿಸ್ಟ್ರಿಕ್ಟ್ ಆಫ್ ತಮಿಳುನಾಡು' ಎಂಬ ವಿಷಯ ಕುರಿತು ಮಧುರೆಯ ಕಾಮರಾಜ ವಿ.ವಿ.ಯ ಅರ್ಥಶಾಸ್ತ್ರ ವಿಭಾಗದಲ್ಲಿ ಪಿಎಚ್.ಡಿ.ಗಾಗಿ ಸಲ್ಲಿಸಿದ ಮಹಾಪ್ರಬಂಧದಲ್ಲಿ (ಅಪ್ರಕಟಿತ) ಕಾರ್ಮಿಕ ಸಂಘಗಳಿದ್ದಲ್ಲಿ ಸಾಮಾನ್ಯವಾಗಿ ಕಾರ್ಮಿಕರ ವೇತನ ಹೆಚ್ಚಿಗೆ ಇರುತ್ತದೆ. ಕಲ್ಯಾಣ ಕಾರ್ಯಕ್ರಮಗಳು ಸಮರ್ಪಕವಾಗಿರದಿದ್ದರೆ ಕಾರ್ಮಿಕರ ಕೆಲಸ ಮತ್ತು ಜೀವನ ಮಟ್ಟದಮೇಲೆ ದುಷ್ಪರಿಣಾಮ ಬೀರುತ್ತದೆ ಎಂದು ವಿಶ್ಲೇಷಿಸಿದ್ದಾರೆ. ಎಸ್.ಬಿ. ರವಿಕುಮಾರ ರವರು 'ಗ್ರೌತ್ ಅಂಡ್ ಡೆವಲಪ್‌ಮೆಂಟ್ ಆಫ್ ಇಂಡಸ್ಟ್ರೀಸ್ ಇನ್ ಚಿತ್ರದುರ್ಗ ಡಿಸ್ಟ್ರಿಕ್ಟ್' ೧೯೦೦-೧೯೪೭ ಎಂಬ ವಿಷಯದ ಮೇಲೆ ಕುವೆಂಪು ವಿಶ್ವವಿದ್ಯಾಲಯ ಇತಿಹಾಸ ವಿಭಾಗದಲ್ಲಿ (೧೯೯೭) ಸಲ್ಲಿಸಿದ ಎಂ.ಫಿಲ್ ನಿಬಂಧವು (ಅಪ್ರಕಟಿತ), ಭಾರತದಲ್ಲಿ ೧೯೦೦ರಿಂದ ಉದಯವಾದ ಆಧುನಿಕ ಕೈಗಾರಿಕೆಗಳು, ಅದೇ ಕಾಲದಿಂದ ಚಿತ್ರದುರ್ಗ ಜಿಲ್ಲೆಯ ಆಧುನಿಕ ಕೈಗಾರಿಕೆಗಳ ಉಗಮ ಕುರಿತು ವಿವರಿಸುತ್ತಾ ದಾವಣಗೆರೆ ಹತ್ತಿಗಿರಣಿ (ಡಿ.ಸಿ.ಎಂ.) ಒಂದರ ಚರಿತ್ರೆಯನ್ನು ವಿವರಿಸಿರುತ್ತಾರೆ.

ಅಬ್ದುಲ್ ಅಜೀಜ್ ರವರ 'ಲೇಬರ್ ಪ್ರಾಬ್ಲಮ್ಸ್ ಆಫ್ ಎ ಡೆವಲಪ್‌ಮೆಂಟ್ ಎಕನಾಮಿ' ಕೃತಿಯಲ್ಲಿ ಕಾರ್ಮಿಕ ಸಂಘದ ಪಾತ್ರ, ಆಡಳಿತದಲ್ಲಿ ಕಾರ್ಮಿಕರು ಪಾಲ್ಗೊಳ್ಳುವಿಕೆಯ ಬಗ್ಗೆ ಕಾರ್ಮಿಕರ ಅಭಿಪ್ರಾಯಗಳು, ಗಾಂಧಿ ಮತ್ತು ಕೈಗಾರಿಕೆ ಕುರಿತು ಚರ್ಚಿಸಿದ್ದಾರೆ.

ಫ್ರಾನ್ಸಿಸ್ ಬುಕನಾನ್ ಎಂಬ ಪ್ರವಾಸಿ ಈಸ್ಟ್ ಇಂಡಿಯಾ ಕಂಪನಿಯ ಆದೇಶದಂತೆ ಕರ್ನಾಟಕದ ಕೆಲಭಾಗಗಳಲ್ಲಿ, ಅದರಲ್ಲೂ ದಾವಣಗೆರೆ ಸುತ್ತಮುತ್ತ ಪ್ರವಾಸ ಕೈಗೊಂಡು ಇಲ್ಲಿನ ಸ್ಥಿತಿಗತಿಗಳ ಮಾಹಿತಿ ನೀಡಿದ್ದಾನೆ. ಇವನ 'ಎ ಜರ್ನಿ ಥ್ರೂ ದಿ ಕಂಟ್ರೀಸ್ ಆಫ್ ಮದ್ರಾಸ್, ಮೈಸೂರು, ಕೆನರಾ, ಮಲಬಾರ್' ಕೃತಿಯಲ್ಲಿ ಪ್ರವಾಸದ ಸಂದರ್ಭದಲ್ಲಿ ಕಂಡುಕೇಳಿದ ವಿಷಯಗಳ ವಿವರಣೆ ನೀಡುತ್ತಾನೆ. ಈ ಕೃತಿಯು ೧೮೦೭ರಲ್ಲಿ ಪ್ರಕಟವಾಗಿದ್ದು ದಾವಣಗೆರೆ ನಗರದ ಮನೆಗಳ ಸಂಖ್ಯೆ, ಆ ಪರಿಸರದ ಜನರ ಉದ್ಯೋಗ, ವ್ಯಾಪಾರ-ವ್ಯವಹಾರ ಕುರಿತು ಮಾಹಿತಿ ನೀಡುತ್ತದೆ. ಡಾ. ಬಿ. ಷೇಕ್‌ಅಲಿ ರವರ ಸಂಪಾದಕತ್ವದಲ್ಲಿ ಕರ್ನಾಟಕ ಚರಿತ್ರೆಯ ೦೭ ಸಂಪುಟಗಳಲ್ಲಿ (೧೯೯೭), ಪ್ರೊ. ಎಸ್. ಚಂದ್ರಶೇಖರ್‌ರವರು ಸಂಪುಟ ಸಂಪಾದಕರಾಗಿರುವ ೦೭ನೇ ಸಂಪುಟವು ಪ್ರಸ್ತುತ ಅಧ್ಯಯನಕ್ಕೆ ಸಹಾಯಕವಾಗಿದೆ. ಈ ಸಂಪುಟದ ೦೭ನೇ ಅಧ್ಯಾಯವು ನಗರ ಕಾರ್ಮಿಕ ವರ್ಗದ ಪಾತ್ರ (ಕರ್ನಾಟಕದ) ಕುರಿತು ವಿವರಣೆ ನೀಡುತ್ತವೆ. ತಂಬಂಡ ವಿಜಯ್ ಪೂಣಚ್ಚ ಅವರ ಸಂಪಾದಕತ್ವದಲ್ಲಿ ಬಂದ ಕನ್ನಡ ವಿಶ್ವವಿದ್ಯಾಲಯದ ವಿಶ್ವಕೋಶ : ೪ ಚರಿತ್ರೆ, (೨೦೦೧) ಇದರಲ್ಲಿ ಕರ್ನಾಟಕದ ಭಿನ್ನ ಕ್ಷೇತ್ರಗಳಲ್ಲಿನ ಚಳವಳಿಗಳನ್ನು ಕುರಿತು ದೀರ್ಘವಾದ ಮಾಹಿತಿ ಇದೆ. ಚಳವಳಿಗಳ ಸಾಲಿನಲ್ಲಿ ಕಾರ್ಮಿಕ ಚಳವಳಿ ಕುರಿತು ೦೨ ಲೇಖನಗಳಿವೆ. ಇದರಲ್ಲಿ ಮೊದಲ ಲೇಖನವನ್ನು ಜಾನಕಿ ನಾಯರ್‌ರವರು ರಚಿಸಿದ್ದು, ಆ ಕಾರ್ಮಿಕ ಚಳವಳಿ -೦೧ ಲೇಖನವನ್ನು ಆರ್.ಎಲ್.ಅನಂತರಾಮಯ್ಯನವರು ಕನ್ನಡಕ್ಕೆ ಅನುವಾದ ಮಾಡಿದ್ದಾರೆ. ಅಬ್ದುಲ್ ಅಜೀಜ್ ರವರ ಕಾರ್ಮಿಕ ಚಳುವಳಿ-೦೨ ಲೇಖನವನ್ನು ಎಸ್.ಭಾಗ್ಯಶ್ರೀ ಅನುವಾದ ಮಾಡಿದ್ದಾರೆ. ಈ ಲೇಖನಗಳು ಕಾರ್ಮಿಕ ಚಳವಳಿಯ ಹುಟ್ಟು, ಕಾರ್ಮಿಕ ಮುಖಂಡರು, ಹೋರಾಟದ ಸಂದರ್ಭಗಳು ಮುಂತಾದವುಗಳ ಬಗ್ಗೆ ವಿವರಣೆ ನೀಡುತ್ತವೆ. ಡಾ. ಎಂ.ಜಿ. ಈಶ್ವರಪ್ಪನವರ ಸಂಪಾದಕೀಯದಲ್ಲಿ 'ಶತಮಾನದ ದಾವಣಗೆರೆ' (೨೦೦೧) ಕೃತಿ ಪ್ರಕಟವಾಗಿದ್ದು, ಅದರಲ್ಲಿದಾವಣಗೆರೆ ನಗರದ ಶಾಸನಗಳು, ನಗರಕ್ಕೆ ಗಾಂಧಿಸ್ಪರ್ಷ, ಸ್ವತಂತ್ರ ಹೋರಾಟಗಾರರು, ಇಲ್ಲಿನ ಕೈಗಾರಿಕೆಗಳು, ವಾಣಿಜ್ಯ, ಮೆರೆದ ಕಾರ್ಮಿಕಶಕ್ತಿ, ಶಿಕ್ಷಣ, ಕ್ರೀಡೆ ಮುಂತಾದ ವಿಷಯಗಳ ಮೇಲಿನ ಲೇಖನಗಳನ್ನು ಒಳಗೊಂಡಿದೆ. ಇವುಗಳಲ್ಲಿ ಡಾ.ಬಿ.ಬಕ್ಕಪ್ಪರವರ 'ಬೆಳೆದು ಕಮರಿದ ಕೈಗಾರಿಕೋದ್ಯಮ', ಬಿ.ಎನ್.ಮಲ್ಲೇಶ್ ರವರ 'ಮೆರೆದ ಕಾರ್ಮಿಕ ಶಕ್ತಿ' ಲೇಖನಗಳು ಪ್ರಸ್ತುತ ಅಧ್ಯಯನಕ್ಕೆ ಸಹಕಾರಿಯಾಗಿದೆ. ಶ್ರೀಮತಿ ಟಿ. ಗಿರಿಜರವರ 'ದಾವಣಗೆರೆ ಇದು ನಮ್ಮ ಜಿಲ್ಲೆ' (೨೦೦೧) ಗ್ರಂಥವು ದಾವಣಗೆರೆ ನಗರ ಮತ್ತು ಜಿಲ್ಲೆಗೆ ಸಂಬಂಧಿಸಿದ ಬಹಳಷ್ಟು ಕ್ಷೇತ್ರಗಳ ಮಾಹಿತಿ ನೀಡುತ್ತದೆ. ಈ ಗ್ರಂಥದ ೧೯ನೇ ಅಧ್ಯಾಯದಲ್ಲಿ ದಾವಣಗೆರೆ ಮತ್ತು ಕೈಗಾರಿಕೆ ಕುರಿತು ಮಾಹಿತಿ ನೀಡಿದ್ದಾರೆ.

ಡಾ. ದೇಜಗೌರವರ ಪ್ರಧಾನ ಸಂಪಾದಕತ್ವದಲ್ಲಿ 'ಕರ್ನಾಟಕದ ರಾಜಕೀಯ ಚಿಂತನೆ', ಎಸ್.ನಿಜಲಿಂಗಪ್ಪ ಸ್ಮರಣ ಗ್ರಂಥ (೨೦೦೩) ಪ್ರಕಟವಾಗಿದ್ದು, ಇದರಲ್ಲಿ ಎನ್.ಪಿ.

ಶಂಕರನಾರಾಯಣರಾವ್‌ರವರು ಕಾರ್ಮಿಕ ಚಳವಳಿ ಎಂಬ ಲೇಖನ ಬರೆದಿದ್ದಾರೆ. ಇದರಲ್ಲಿ ಏಕೀಕರಣಕ್ಕೆ ಮುನ್ನ, ಅಂದರೆ ಈ ಕಾಲದಲ್ಲಿ ಮೈಸೂರು ಸಂಸ್ಥಾನದಲ್ಲಾದ ಔದ್ಯಮಿಕ ಪ್ರಗತಿ, ಕರ್ನಾಟಕದ ಪ್ರಥಮ ಕಾರ್ಮಿಕ ಸಂಘ, ಕಾರ್ಮಿಕ ಕಾಯಿದೆ ಜಾರಿ, ಕಾರ್ಮಿಕರ ರಾಜಕೀಯ ಜಾಗೃತಿ ಕುರಿತಂತೆ ವಿವರಣೆ ನೀಡುತ್ತಾರೆ. ಈ ಲೇಖನದಲ್ಲಿ ದಾವಣಗೆರೆ ಕಾರ್ಮಿಕರು ನಡೆಸಿದ ಮುಷ್ಕರ ಕುರಿತು ಕೆಲವೇ ಸಂಗತಿಗಳ ಉಲ್ಲೇಖಗಳಿವೆ. ಡಾ. ಬಿ.ಎಚ್. ಅಂಜನಪ್ಪನವರು 'ಹತ್ತಿ ಹಿಂಜುವ ಕಾರ್ಖಾನೆಗಳಲ್ಲಿ ಮಹಿಳಾ ಕಾರ್ಮಿಕರ ಸಾಮಾಜಿಕ ಆರ್ಥಿಕ ಸ್ಥಿತಿಗತಿಗಳು'-ದಾವಣಗೆರೆ ನಗರ ಒಂದು ಅಧ್ಯಯನದ ಎಂ.ಫಿಲ್ ನಿಬಂಧದಲ್ಲಿ (೧೯೯೮ ಕುವೆಂಪು ವಿಶ್ವವಿದ್ಯಾಲಯ ಸಮಾಜಶಾಸ್ತ್ರ) (ಅಪ್ರಕಟಿತ) ಮಹಿಳೆಯರು, ಪುರುಷರಂತೆಯೇ ಕಾರ್ಖಾನೆಗಳಲ್ಲಿ ದುಡಿಯುತ್ತಿದ್ದು, ಅವರಿಗೆ ದುಡಿಯುವ ಪರಿಸರದಲ್ಲಿ ನ್ಯಾಯಬದ್ಧವಾದ ಸೌಲಭ್ಯಗಳು ದೊರೆಯದೇ ಇರುವ ವಿಷಯವನ್ನು ಚರ್ಚಿಸಿದ್ದಾರೆ.

ಮೇಲಿನ ಸಂಶೋಧಕರೇ 'ಹತ್ತಿ ಹಿಂಜುವ (ಜಿನ್ನಿಂಗ್) ಕಾರ್ಖಾನೆಗಳಲ್ಲಿರುವ ಮಹಿಳಾ ಕಾರ್ಮಿಕರ ಸಾಮಾಜಿಕ ಆರ್ಥಿಕ ಸ್ಥಿತಿಗತಿಗಳು', ಸಮಾಜಶಾಸ್ತ್ರೀಯ ಅಧ್ಯಯನ ಎಂಬ ಪಿಎಚ್.ಡಿ. ಮಹಾಪ್ರಬಂಧದಲ್ಲಿ (೨೦೦೨-ಕುವೆಂಪು ವಿಶ್ವವಿದ್ಯಾಲಯ, ಸಮಾಜಶಾಸ್ತ್ರ ವಿಭಾಗ) ದಾವಣಗೆರೆ ನಗರದಂತೆಯೇ ರಾಜ್ಯದ ಬಹುತೇಕ ಕಡೆಗಳಲ್ಲಿ ಮಹಿಳೆಯರ ಶೋಷಣೆ ಮುಂದುವರೆದಿದೆ. ಅವರ ಮಕ್ಕಳ ಪಾಲನೆ, ಪೋಷಣೆಯ ತೊಂದರೆಗಳು, ಆ ಮಕ್ಕಳ ಶೈಕ್ಷಣಿಕ ತೊಂದರೆಗಳನ್ನು ವಿಶ್ಲೇಷಿಸಿದ್ದಾರೆ.

ಎನ್.ಎಸ್. ಪರಮೇಶ್ವರನ್, ಎಸ್.ಶಂಕರ್‌ರವರು ರಚಿಸಿರುವ 'ಹತ್ತಿ ಬಿಳಿಯ ಬಂಗಾರ' (೧೯೮೭) ಕೃತಿಯಲ್ಲಿ ಹತ್ತಿಯ ಚರಿತ್ರೆ ವಿವರಿಸುತ್ತಾ ಎಲ್ಲೆಲ್ಲಿ ಎಷ್ಟೆಷ್ಟು ಹತ್ತಿ ಬೆಳೆಯುತ್ತಾರೆ, ಹತ್ತಿಯ ಅವಶ್ಯಕತೆ ಮುಂತಾದ ವಿಷಯಗಳನ್ನು ವಿವರವಾಗಿ ತಿಳಿಸುತ್ತಾರೆ.

ಅಧ್ಯಾಯ ೨

ದಾವಣಗೆರೆ ಜಿಲ್ಲೆಯ ಭೌಗೋಳಿಕ ಮತ್ತು ಚಾರಿತ್ರಿಕ ಹಿನ್ನೆಲೆ

ದಾವಣಗೆರೆ ಜಿಲ್ಲೆಯ ಭೌಗೋಳಿಕ ಮತ್ತು ಚಾರಿತ್ರಿಕ ಹಿನ್ನೆಲೆ

ದಾವಣಗೆರೆಯು ೧೯೯೭ ಆಗಸ್ಟ್ ೧೫ರವರೆಗೂ, ಚಿತ್ರದುರ್ಗ ಜಿಲ್ಲೆಯ ೯ ತಾಲ್ಲೂಕುಗಳಲ್ಲೊಂದಾಗಿತ್ತು. ಪ್ರಸ್ತುತ ಅಧ್ಯಯನದ ಅವಧಿಯಲ್ಲಿ ದಾವಣಗೆರೆಯು ಮೊದಲು ಚಿತ್ರದುರ್ಗ ಜಿಲ್ಲೆಯಲ್ಲೂ, ನಂತರ ದಾವಣಗೆರೆ ನಗರವೇ ಪ್ರತ್ಯೇಕ ಜಿಲ್ಲಾ ಕೇಂದ್ರದ ಸ್ಥಾನಮಾನ ಪಡೆಯಿತು. ಆದ್ದರಿಂದ ಚಿತ್ರದುರ್ಗ ಹಾಗೂ ದಾವಣಗೆರೆ ಜಿಲ್ಲೆಗಳ ಭೌಗೋಳಿಕ ಪರಿಚಯ ಮಾಡಿಕೊಳ್ಳುವುದು ಅಗತ್ಯವೆನಿಸುತ್ತದೆ.

ಏಷ್ಯಾಖಂಡದಲ್ಲೇ ಅತ್ಯಂತ ಪ್ರಾಚೀನ ನಿವೇಶನವೆಂದು ಹೆಗ್ಗಳಿಕೆಗೆ ಪಾತ್ರವಾಗಿರುವ ಚಿತ್ರದುರ್ಗವು ಪ್ರಪಂಚದ ಪುರಾತನ ಪಟ್ಟಣಗಳಲ್ಲೊಂದು. ಇಂಥ ಪ್ರಾಚೀನತೆಯುಳ್ಳ ನಗರವು ಹಲವು ಮನೆತನಗಳ ಆಳ್ವಿಕೆಗೊಳಪಟ್ಟಿತ್ತು. ಈ ಪ್ರದೇಶದ ಜನರ ಚರಿತ್ರೆಯ ಕುರುಹುಗಳು ರಾಮಾಯಣಕಾಲದಿಂದ ಮೊದಲುಗೊಂಡು, ಆಧುನಿಕ ಕಾಲದವರೆಗೂ ಬಹಳಷ್ಟು ಸಂದರ್ಭಗಳಲ್ಲಿ ಕಂಡುಬರುತ್ತವೆ.

ಉತ್ತರದ ಮೌರ್ಯರು, ಕರ್ನಾಟಕದ ಕದಂಬರಾದಿಯಾಗಿ ಅನೇಕ ಆಳರಸರು ಚಿತ್ರದುರ್ಗ ಪ್ರದೇಶದಲ್ಲಿ ಆಳ್ವಿಕೆ ಮಾಡಿದ್ದಾರೆ. ವಿಜಯನಗರದ ಕಾಲದಲ್ಲಿ ಪಾಳೆಯಗಾರರ ಮೂಲಕ ಆಳ್ವಿಕೆ ಕಂಡ ಈ ನಗರದ ಪಾತ್ರ ಚಾರಿತ್ರಿಕವಾಗಿ ಗಮನಾರ್ಹವಾದುದು.

ಚಿತ್ರದುರ್ಗ ಜಿಲ್ಲೆಯಲ್ಲಿ (೧೯೯೭ರವರೆಗೆ) ಚಳ್ಳಕೆರೆ, ಚಿತ್ರದುರ್ಗ, ದಾವಣಗೆರೆ, ಹರಿಹರ, ಹಿರಿಯೂರು, ಹೊಳಲ್ಕೆರೆ, ಹೊಸದುರ್ಗ, ಜಗಳೂರು ಮತ್ತು ಮೊಳಕಾಲ್ಮೂರು ತಾಲ್ಲೂಕುಗಳಿದ್ದವು. ಜಿಲ್ಲೆಯಲ್ಲಿ ೯ ತಾಲೂಕು ೩೦ ಹೋಬಳಿಗಳಿದ್ದು, ೧೦೮೫೨ ಚ.ಕಿಮೀ ವಿಸ್ತೀರ್ಣ ಹೊಂದಿತ್ತು.[೧] ಇಲ್ಲಿ ಮಳೆ ಬೀಳುವ ಪ್ರಮಾಣ ಕಡಿಮೆ ಇದ್ದು ಚಳ್ಳಕೆರೆ, ಜಗಳೂರು, ಮೊಳಕಾಲ್ಮೂರು, ಹಿರಿಯೂರು ಮುಂತಾದ ತಾಲ್ಲೂಕುಗಳಲ್ಲಿ ಬರದ ನೆರಳೇ ಹೆಚ್ಚಾಗಿರುತ್ತದೆ. ಜಿಲ್ಲೆಯ ಪ್ರಮುಖ ನದಿಗಳಲ್ಲಿ ವೇದಾವತಿಗೆ ಮೊದಲ ಸ್ಥಾನವಿದೆ. ಹಿರಿಯೂರಿನ ವಾಣಿವಿಲಾಸ ಸಾಗರವು ವ್ಯವಸಾಯ, ಕುಡಿಯುವ ನೀರಿನ ದೃಷ್ಟಿಯಿಂದ ಗಣನೀಯವಾಗಿದೆ. ಜಿಲ್ಲೆಯ ಉತ್ತರಕ್ಕೆ ಬಳ್ಳಾರಿ, ಪೂರ್ವಕ್ಕೆ ಚಿತ್ರದುರ್ಗ, ದಕ್ಷಿಣಕ್ಕೆ ತುಮಕೂರು, ಚಿಕ್ಕಮಗಳೂರ. ಜಿಲ್ಲೆಗಳು; ಉತ್ತರ ಪಶ್ಚಿಮಕ್ಕೆ ಹಾವೇರಿ, ಶಿವಮೊಗ್ಗಗಳಿಂದ ಆವೃತವಾಗಿವೆ. ಜಿಲ್ಲೆಯಲ್ಲಿ ಹತ್ತಿ, ಶೇಂಗಾ, ಮೆಕ್ಕೆಜೋಳ, ಮುಂತಾದವು ಪ್ರಮುಖ ಬೆಳೆಗಳಾದರೂ ಹತ್ತಿಬಟ್ಟೆಯ ಕೈಗಾರಿಕೆಗಳು ಪ್ರಾಚೀನಕಾಲದಿಂದಲೂ ಕೈಗಾರಿಕಾ ನಕ್ಷೆಯಲ್ಲಿ ಸ್ಥಾನಪಡೆದುಕೊಂಡಿವೆ.

ದಾವಣಗೆರೆಯು ಚಿತ್ರದುರ್ಗ ನಗರದಂತೆ ಕೋಟೆ ಕೊತ್ತಲಗಳಿಂದ ಕೂಡಿರದಿದ್ದರೂ ವ್ಯಾಪಾರ, ವಾಣಿಜ್ಯ, ಶಿಕ್ಷಣ ಮುಂತಾದ ಕ್ಷೇತ್ರಗಳ ಪ್ರಗತಿಯಿಂದ ಹಿಂದಿನಿಂದಲೂ ಗಮನಸೆಳೆದಿದೆ. ಇದು ೧೫-

೮-೧೯೯೭ರಲ್ಲಿ ನೂತನ ಜಿಲ್ಲೆಯಾಗಿ ಚಿತ್ರದುರ್ಗದ ಐತಿಹಾಸಿಕ ನೆಲೆಗಟ್ಟನ್ನು ಕಳೆದುಕೊಂಡಿತು. ಆದರೆ ಅಷ್ಟೇ ಚಾರಿತ್ರಿಕ, ಭೌಗೋಳಿಕ ಪರಂಪರೆ ಹೊಂದಿರುವ ಹೊನ್ನಾಳಿ, ಚನ್ನಗಿರಿ, ಹರಪನಹಳ್ಳಿಗಳನ್ನು ಇದರ ವ್ಯಾಪ್ತಿಯೊಳಗಿದೆ.

ವ್ಯವಸಾಯಕ್ಕೆ ಭದ್ರಾ ನೀರು ಬರುವವರಗೂ ಮಳೆ ಮತ್ತು ಕೆರೆಗಳ ಆಶ್ರಯವೇ ಮುಖ್ಯವಾಗಿತ್ತು. ಜಿಲ್ಲೆಯಲ್ಲಿ ವಿಸ್ತಾರದ ದೃಷ್ಟಿಯಿಂದ ಸೂಳೆ ಕೆರಯು ಪ್ರಥಮವಾದರೆ, ಕೊಡಗನೂರಿನ ಕೆರೆ ದ್ವಿತೀಯ ಸ್ಥಾನ ಪಡೆದುಕೊಂಡಿದೆ. ಇಲ್ಲಿ ಗಮನಿಸಬೇಕಾದ ಮುಖ್ಯಾಂಶವೆಂದರೆ ಹತ್ತಿ ಬೆಳೆಯು ನೀರಾವರಿ ಸೌಕರ್ಯ ಹೆಚ್ಚಾದಂತೆ ಕ್ಷೀಣಿಸಿದ್ದು. ಹತ್ತಿ ಗಿರಣಿ, ಕೈಮಗ್ಗಗಳ ಆಧಾರವಾಗಿದ್ದ ಹತ್ತಿಯ ಬೆಳೆಯು ಕ್ರಮೇಣ ದುರ್ಬಲವಾಗಿದ್ದು ಹಿಂದೆ ಕೈಗಾರಿಕೆ ಹುಟ್ಟಲು ಕಾರಣವಾದಂತೆಯೇ ಅವನತಿಯ ಮೇಲೂ ಪರಿಣಾಮ ಬೀರದೆ ಬಿಡಲಿಲ್ಲ.

ದಾವಣಗೆರೆ ಜಿಲ್ಲೆಯಲ್ಲಿ ಒಟ್ಟು ೬ ತಾಲ್ಲೂಕುಗಳಿವೆ. ಹಿಂದಿನ ಚಿತ್ರದುರ್ಗ ಜಿಲ್ಲೆಯಲ್ಲಿದ್ದ ದಾವಣಗೆರೆ, ಹರಿಹರ, ಜಗಳೂರು ತಾಲ್ಲೂಕುಗಳ ಜೊತೆಗೆ ಬಳ್ಳಾರಿ ಜಿಲ್ಲೆಯಿಂದ ಹರಪನಹಳ್ಳಿ. ಶಿವಮೊಗ್ಗ ಜಿಲ್ಲೆಯಿಂದ ಹೊನ್ನಾಳಿ, ಚನ್ನಗಿರಿ ತಾಲ್ಲೂಕುಗಳು ದಾವಣಗೆರೆ ಜಿಲ್ಲೆಗೆ ಸೇರ್ಪಡೆಯಾದವು. ದಾವಣಗೆರೆ ನಗರವು ಈ ಜಿಲ್ಲೆಗೆ ಆಡಳಿತ ಕೇಂದ್ರವಾಗಿದೆ. ಚಿತ್ರದುರ್ಗ ವಾಯುವ್ಯಕ್ಕೆ ೩೮ ಮೈಲಿ ದೂರದಲ್ಲಿ ಉತ್ತರ ಅ.೧೪° ೨೮' ಮತ್ತು ಪೂರ್ವ ರೇ.೭೫° ೫೬' ಮೇಲೆ ಇದೆ.[೨] ಜಿಲ್ಲೆಯು ೨೪ ಹೋಬಳಿಗಳನ್ನು ಹೊಂದಿದ್ದು, ಒಟ್ಟು ವಿಸ್ತೀರ್ಣವು ೫೯೧೩.೪ ಚ.ಕೀ.ಗಳಷ್ಟಿದೆ. ಜಿಲ್ಲೆಯ ಚನ್ನಗಿರಿ ತಾಲೂಕಿನಲ್ಲಿ ವಾಡಿಕೆಯಂತೆ ಹೆಚ್ಚುಮಳೆ ಬೀಳುತ್ತದೆ, ಹಾಗೂ ಕಡಿಮೆ ಮಳೆ ಬೀಳುವ ತಾಲ್ಲೂಕುಗಳಲ್ಲಿ ಮೊದಲಸ್ಥಾನ ಜಗಳೂರಿಗೂ, ನಂತರದ ಸ್ಥಾನ ಹರಿಹರಕ್ಕೂ ದೊರೆತಿದೆ. ಲಕ್ಕುವಳ್ಳಿಯಲ್ಲಿ ಭದ್ರಾನದಿಗೆ ಅಣೆಕಟ್ಟೆ ನಿರ್ಮಿಸಿದ್ದು ಇದರ ಎರಡು ಕಾಲುವೆಗಳು ಜಿಲ್ಲೆಯ ಭೂಮಿ ಮತ್ತು ಜನರಿಗೆ ನೀರುಣಿಸುತ್ತಿವೆ. ಜಿಲ್ಲೆಯ ಜಗಳೂರು ತಾಲ್ಲೂಕನ್ನು ಹೊರತುಪಡಿಸಿದಂತೆ ಇತರೆ ೫ ತಾಲ್ಲೂಕುಗಳಲ್ಲಿ ಭದ್ರಾಜಲಾಶಯದ ನೀರು ಕೃಷಿ ಚಟುವಟಿಕೆಗಳ ಮೇಲೆ ತನ್ನದೇ ಆದ ಪಾತ್ರವಹಿಸುತ್ತದೆ, ಜಿಲ್ಲೆಯ ೭೪,೦೨೬ ಹೆಕ್ಟೇರ್ ಪ್ರದೇಶದಲ್ಲಿನ ನೀರಾವರಿಗೆ ಭದ್ರಾಜಲಾಶಯವೇ ಜೀವನಾಡಿ.[೩] ಅರೆ ಮಲೆನಾಡು ಬಯಲು ಪ್ರದೇಶಗಳಿಂದ ಕೂಡಿ, ತುಂಗಭದ್ರೆಯ ಮೂಲದ ಜಲಸಂಪನ್ಮೂಲದ ಈ ಭಾಗದಲ್ಲಿ ಅಧಿಕ ಇಳುವರಿ ತಳಿ ಬೆಳೆಗಳೆಂದರೆ ಭತ್ತ, ರಾಗಿ, ಗೋಧಿ, ಜೋಳ, ಮುಸುಕಿನಜೋಳ ಇತ್ಯಾದಿಗಳಾಗಿವೆ. ೧೯೬೦ರ ದಶಕದಲ್ಲಿ ಭದ್ರಾ ಜಲಾಶಯದ ನೀರು ಈ ಭಾಗದ ರೈತರನ್ನು ತಲುಪುವವರೆಗೂ ಹತ್ತಿಬೆಳೆಯು ಕೃಷಿಕರ ಮುಖ್ಯಬೆಳೆಯಾಗಿತ್ತು. ಅದು ಕ್ರಮೇಣ ತನ್ನ ಅಸ್ತಿತ್ವ ಕಳೆದುಕೊಂಡು ಚದುರಿದಂತೆ ಅಲ್ಲೊಬ್ಬ, ಇಲ್ಲೊಬ್ಬ ರೈತ ಈ ಕೃಷಿಯನ್ನು ಮುನ್ನಡೆಸಿದ್ದಾನೆ. ಈ ಪ್ರದೇಶವನ್ನು ನೀರಾವರಿಯ ಸೌಕರ್ಯದ ನಂತರ ಭತ್ತ, ಕಬ್ಬು ಪ್ರಧಾನ ಬೆಳೆಗಳಾಗಿ ಹೊರಹೊಮ್ಮಿದವು. ಜಿಲ್ಲೆಯ ೨ ತಾಲ್ಲೂಕುಗಳು ಮಾತ್ರ ರೈಲ್ವೆ ಮಾರ್ಗದ ಸೌಕರ್ಯಪಡೆದಿವೆ. ದಾವಣಗೆರೆ ತಾಲ್ಲೂಕಿನಲ್ಲಿ ೪೦ಕಿ.ಮೀ, ಹರಿಹರ ತಾಲ್ಲೂಕಿನಲ್ಲಿ ೭ ಕಿ.ಮೀ. ರೈಲುಮಾರ್ಗ[೪]ವಿದ್ದು, ಕೃಷಿ, ಕೈಗಾರಿಕೆಗಳ ಪ್ರಗತಿಯ ದೃಷ್ಟಿಯಲ್ಲಿ ಉತ್ತಮ ಪಾತ್ರ ವಹಿಸಿದೆ. ಸಾಕ್ಷರತೆ ಪ್ರಮಾಣದಲ್ಲಿ ಜಿಲ್ಲೆಯಲ್ಲಿ ದಾವಣಗೆರೆ ತಾಲ್ಲೂಕು ಶೇ ೭೨.೩೨ (೧೯೯೧ರ

ಗಣನೆ ಪ್ರಕಾರ) ರಷ್ಟಿದ್ದು ಮೊದಲ ಸ್ಥಾನದಲ್ಲಿದ್ದರೆ, ಹರಪನಹಳ್ಳಿ ತಾಲ್ಲೂಕು ಶೇ.೪೫.೦೦ರಷ್ಟಿದ್ದು ಕೊನೆಯ ಸ್ಥಾನದಲ್ಲಿದೆ. ರಾಷ್ಟ್ರೀಯ ಹೆದ್ದಾರಿಯಲ್ಲಿ ಸಮುದ್ರಮಟ್ಟಕ್ಕಿಂತ ೬೦೨೬ಮೀ. ಎತ್ತರದಲ್ಲಿದ್ದು, ಸಮಶೀತೋಷ್ಣ ಹವೆಯೊಂದಿಗೆ. ಇರುವ ಜಿಲ್ಲೆಯು, ೪೯, ೯೧೮ ಹೆಕ್ಟೇರ್ ಅರಣ್ಯ ಪ್ರದೇಶವನ್ನು ಹೊಂದಿದೆ.[೩] ಜಿಲ್ಲೆಯ ಮಾಯಕೊಂಡ, ಅಣಜಿ, ಹೊನ್ನಾಳಿ, ಚನ್ನಗಿರಿ, ಜಗಳೂರು, ಹರಪನಹಳ್ಳಿ, ಹರಿಹರ, ಮಲೆಬೆನ್ನೂರುಗಳಲ್ಲಿ ಸಣ್ಣಸಣ್ಣ ಚಿಕ್ಕಗುಡ್ಡಗಳಿವೆ. ಇವುಗಳಲ್ಲಿ ಅತಿ ಎತ್ತರದ ಶಿಖರವು ಹೊನ್ನಾಳಿ ತಾಲ್ಲೂಕಿನಲ್ಲಿದೆ. ಅಲ್ಲಿನ ಕಲ್ವರಂಗನ ಬೆಟ್ಟವು ೧೦೩೧ಮೀ. ಎತ್ತರವಿದ್ದು ಅತ್ಯಂತ ಎತ್ತರದ್ದಾಗಿದೆ. ದಾವಣಗೆರೆ ಜಿಲ್ಲೆಯಲ್ಲಿ ಮಾಯಕೊಂಡ, ಅಣಜಿ, ಹೊನ್ನಾಳಿಗಳಲ್ಲಿ ಖನಿಜಸಂಪತ್ತು ದೊರೆಯುತ್ತಿವೆ. ದಾವಣಗೆರೆ ಮತ್ತು ಹೊಳಲ್ಕೆರೆ ತಾಲ್ಲೂಕುಗಳಲ್ಲಿ ಮ್ಯಾಂಗನೀಸ್ ಸಿಗುತ್ತದೆ.[೪] ಭೌಗೋಳಿಕ ಲಕ್ಷಣಗಳು ಆ ಪ್ರದೇಶದ ಜನಜೀವನದ ಮೇಲೆ, ಆರ್ಥಿಕ, ರಾಜಕೀಯ ಮುಂತಾದ ಕ್ಷೇತ್ರಗಳ ಮೇಲೆ ಪರಿಣಾಮ ಬೀರುವಲ್ಲಿ ಸಿಂಹಪಾಲು ಹೊಂದಿರುತ್ತದೆ. ಅಂತೆಯೇ ಜಿಲ್ಲೆಯ ಭೌಗೋಳಿಕ ಲಕ್ಷಣಗಳೂ ಸಹ ರೈತರ ಕೃಷಿ ಚಟುವಟಿಕೆ, ಅದಕ್ಕೆ ಪೂರಕವಾದ ಕೈಗಾರಿಕೆಗಳ ಬೆಳವಣಿಗೆಯ ಮೇಲೆ ಗುರುತರವಾದ ಪ್ರಭಾವಬೀರಿವೆ.

೨.೧. ದಾವಣಗೆರೆ ನಗರ

ನಗರಗಳ ಹುಟ್ಟು ಬೆಳವಣಿಗೆಯ ಚರಿತ್ರೆಯನ್ನು ಗಮನಿಸಿದಾಗ ಅವು ಭಿನ್ನ ನೆಲೆಗಳಲ್ಲಿ ಜನ್ಮ ತಾಳಿರುವುದು ಕಂಡುಬರುತ್ತದೆ. ಅಂದರೆ ಅವು ಧಾರ್ಮಿಕ, ಆಡಳಿತ, ವಾಣಿಜ್ಯ, ಬಂದರು, ಶಿಕ್ಷಣ ಮುಂತಾದ ಹಿನ್ನೆಲೆಯಲ್ಲಿ ಹುಟ್ಟಿಕೊಂಡು, ಕ್ರಮೇಣ ಅವುಗಳಲ್ಲಿ ಹಲವು ತಮ್ಮ ಸ್ವರೂಪದಲ್ಲಿ ಬದಲಾವಣೆ ಮಾಡಿಕೊಂಡಿವೆ. ಭೌಗೋಳಿಕವಾಗಿ ರಾಜ್ಯದ ಮಧ್ಯಭಾಗದಲ್ಲಿರುವ ದಾವಣಗೆರೆಯಲ್ಲಿ ವಾಣಿಜ್ಯ ಮತ್ತು ವಿದ್ಯೆಯ ಸಂಗಮವಾಗಿದೆ. ನಗರವು ಆರಂಭದಲ್ಲಿ ವ್ಯಾಪಾರಿಗಳ, ಪ್ರವಾಸಿಗರ ತಂಗುದಾಣವಾಗಿ ಕ್ರಮೇಣ ವ್ಯಾಪಾರ, ವ್ಯವಹಾರ ವೃದ್ಧಿಸಿಕೊಂಡು ವಾಣಿಜ್ಯ ನಗರವಾಗಿ ಬೆಳೆಯಿತು. ಈ ನಗರವು ದೆಹಲಿ, ಆಗ್ರ, ಝಾನ್ಸಿ, ಬೆಂಗಳೂರು, ಮೈಸೂರು, ಬಾದಾಮಿ, ಬಿಜಾಪುರಗಳಂತೆ ಯಾವುದೇ ರಾಜಮನೆತನದ ಆಳ್ವಿಕೆಯ ಕೇಂದ್ರವಾಗಿರಲಿಲ್ಲ. ಅಂತೆಯೇ ಆ ನಗರಗಳಷ್ಟು ಪ್ರಾಚೀನತೆ ಇರುವಂತೆಯೂ ಕಂಡುಬರುತ್ತಿಲ್ಲ. ೧೨ನೇ ಶತಮಾನದ ಉಚ್ಚಂಗಿ ಪಾಂಡ್ಯರ ಶಾಸನದಲ್ಲಿ ಮೊದಲಬಾರಿಗೆ 'ದಾವಣಗೆರೆ' ಎಂಬ ಹೆಸರು ಕಾಣಿಸಿಕೊಳ್ಳುತ್ತದೆ. ೧೮೦೧ರಲ್ಲಿ ಈಸ್ಟ್ ಇಂಡಿಯಾ ಕಂಪನಿಯ ಪ್ರತಿನಿಧಿಯಾದ ಪ್ರಾನ್ಸಿಸ್ ಬುಕನನ್ ದಾವಣಗೆರೆಗೆ ಭೇಟಿ ನೀಡಿದ್ದಾಗ ಅದೊಂದು ಸಣ್ಣ ಹಳ್ಳಿಯಾಗಿತ್ತು ಎಂದು ದಾಖಲಿಸಿದ್ದಾನೆ. ಆದ್ದರಿಂದ ನಗರಕ್ಕೆ ಸುಮಾರು ೯೦೦ ವರ್ಷಗಳ ಪ್ರಾಚೀನತೆ ಇದೆ ಎಂಬ ನಿರ್ಧಾರಕ್ಕೆ ಬರಬಹುದು.

ಚಿತ್ರದುರ್ಗ ಜಿಲ್ಲೆಯಲ್ಲಿ ೧೯೯೭ರವರೆಗೂ ತಾಲ್ಲೂಕಾಗಿದ್ದ ಈ ನಗರವು ಅದೇ ವರ್ಷ ಪ್ರತ್ಯೇಕ ಜಿಲ್ಲಾ ಕೇಂದ್ರದ ಸ್ಥಾನಮಾನ ಪಡೆಯಿತು. ಈ ನಗರವನ್ನು ಯಾವ ಅರಸು ಮನೆತನವೂ ಕೇಂದ್ರವಾಗಿಟ್ಟುಕೊಂಡು ಆಳ್ವಿಕೆ ನಡೆಸಿಲ್ಲದ ಕಾರಣ ಇಲ್ಲಿ ಕೋಟೆಕೊತ್ತಲಗಳು ಕಂಡುಬಂದಿಲ್ಲ. ಆದರೆ ಅತ್ಯಂತ ಪ್ರಾಚೀನಕಾಲದಿಂದಲೂ ಭಾರತ, ಕರ್ನಾಟಕವನ್ನಾಳಿದ ರಾಜಮನೆತನಗಳ ಅಪರೋಕ್ಷ

ಆಳ್ವಿಕೆಗೊಳಪಟ್ಟಿತ್ತು. ವಾಣಿಜ್ಯ ನಗರವಾಗಿ ಕಾಣುವ ದಾವಣಗೆರೆ, ಹತ್ತಿಗಿರಣಿಗಳ ನೆಲೆಯಾಗಿ ಕರ್ನಾಟಕದ ಮ್ಯಾಂಚೆಸ್ಟರ್ ನಗರವೆಂದು ಖ್ಯಾತಿ ಪಡೆದು ಬಟ್ಟೆ ಕೈಗಾರಿಕೆಯಲ್ಲಿ ಗಣನೀಯ ಸ್ಥಾನಪಡೆದುಕೊಂಡಿತ್ತು. ೧೯೯೦ರ ದಶಕದಲ್ಲಿ ಈ ಕ್ಷೇತ್ರದಲ್ಲಿ ಪಲ್ಲಟವಾಗಿ ಶಿಕ್ಷಣ ಕ್ಷೇತ್ರದಲ್ಲಿ ಮುನ್ನಡೆ ಪಡೆದು ಆಕ್ಸ್‌ಫರ್ಡ್ ನಗರವೆನ್ನಿಸಿಕೊಳ್ಳುತ್ತಿದೆ.

ಮೊದಲು ಹಳ್ಳಿಯಾಗಿ ನಂತರ ವಾಣಿಜ್ಯ, ಕೈಗಾರಿಕಾ ನಗರವಾಗಿ, ತದನಂತರ ಶೈಕ್ಷಣಿಕ ನಗರವಾಗಿ ವಿವಿಧ ಕಾಲಘಟ್ಟದಲ್ಲಿ ಬದಲಾವಣೆಗಳನ್ನು ಕಂಡಿರುವ ದಾವಣಗೆರೆ ಸ್ಥಳನಾಮದ ಬಗ್ಗೆ ಹಲವು ಚರ್ಚೆಗಳಿವೆ. ಕ್ರಿ.ಶ.೧೭೧೧ರಲ್ಲಿ ಕೇವಲ ೫೦೦ ಮನೆಗಳ ಅಜ್ಞಾತ ಹಳ್ಳಿಯಾಗಿತ್ತು ದಾವಣಗೆರೆ[೭] ಆ ನಗರದ ಸ್ಥಳನಾಮದ ಬಗ್ಗೆ ಸ್ಥಳೀಯ ಜನರ ಹೇಳಿಕೆಗಳನ್ನು ಗಮನಿಸುವುದು ಸೂಕ್ತವೆನಿಸುತ್ತದೆ. ಈಗಿರುವ ದಾವಣಗೆರೆಯ ಹಳೆಯ ಊರಿನ ದುರ್ಗಮ್ಮ ದೇವಾಲಯದ ಸುತ್ತಮುತ್ತ ಜಾಲಿನಗರ ಪ್ರದೇಶದಲ್ಲಿ ಕೆರೆಯೊಂದಿತ್ತು. ಈ ಕೆರೆಯ ಬಳಿ ಈಶ್ವರ ದೇವಾಲಯವಿದ್ದು, ಈ ಭಾಗದಲ್ಲಿ ನೀರು ಮತ್ತು ಹುಲ್ಲುಗಾವಲಿನ ಅನುಕೂಲವಿದ್ದು, ಆ ಭಾಗದಲ್ಲಿ ಪ್ರಯಾಣ ಮಾಡುತ್ತಿದ್ದ ವ್ಯಾಪಾರಿಗಳು, ಯೋಧರು, ಇತರೆ ಪ್ರಯಾಣಿಕರು ತಮ್ಮ ಎತ್ತುಗಳನ್ನು, ಕುದುರೆಗಳನ್ನು, ಇತರೆ ಪಶು ಮಂದೆಯನ್ನು 'ದಾವಣಿ' ಹಗ್ಗದಿಂದ ಕಟ್ಟಿ, ಅಲ್ಲೇ ತಂಗಿ, ವಿಶ್ರಾಂತಿ ಪಡೆದು ಮುಂದೆ ಹೋಗುತ್ತಿದ್ದರು.[೮] ಅದೂ ಒಂದೇ ಹಗ್ಗದಿಂದ, ವಿಶಿಷ್ಟವಾಗಿ ಕಟ್ಟುತ್ತಿದ್ದ ವಿಧಾನಕ್ಕೆ 'ದವಣೆಕಟ್ಟು' ಎನ್ನುತ್ತಿದ್ದರಂತೆ. ಈ ದವಣೆ ಕಟ್ಟಿನಿಂದ, ಇಲ್ಲಿಯ ಕೆರೆಯಿಂದ, ಇಲ್ಲಿಯ ಈಶ್ವರದೇವರಿಂದ ದವಣೆಕೆರೆ, ದಾವಣಿಕೆರೆ, ದಾವಣಗೆರೆಯಾಯಿತೆಂದು ಒಂದು ಅಭಿಪ್ರಾಯ.[೯]

೧೧-೧೨ನೇ ಶತಮಾನ ಕರ್ನಾಟಕದ ಇತಿಹಾಸದಲ್ಲಿ ಕ್ರಾಂತಿಕಾರಕ ಶತಮಾನ. ಈ ಪರ್ವಸಂದರ್ಭದಲ್ಲಿ ಚಿಕ್ಕ ಅಜ್ಞಾತಹಳ್ಳಿಯಾಗಿದ್ದ ದಾವಣಗೆರೆ, ಉಚ್ಚಂಗಿಪಾಂಡ್ಯರ ಪಾಂಡ್ಯಮಂಡಲದ ಒಂದು ಬಿಂದುವಾಗಿದ್ದು, ನೊಳಂಬವಾಡಿಯ ಮೂವತ್ತೆರಡು ಸಾವಿರದಲ್ಲಿ ಒಂದಾಗಿದ್ದು, ಎಲೆಬೇತೂರು, ಆನೆಕೊಂಡಗಳು (ದಾವಣಗೆರೆ ನಗರಕ್ಕೆ ಹೊಂದಿಕೊಂಡಿರುವ) ರಾಜಧಾನಿಯಾಗಿ ಮೆರೆಯುತ್ತಿದ್ದ ಸಂದರ್ಭದಲ್ಲಿ ಪ್ರಪ್ರಥಮವಾಗಿ ಕ್ರಿ.ಶ.೧೧೨೧ನೇ ಕಾಲದ ದಾವಣಗೆರೆ ೩ನೇ ಶಾಸನದಲ್ಲಿ 'ದಾವಣಗೆರೆ ಸೀಮೆಯಂ' ಎಂದು ಉಲ್ಲೇಖಿಸಿದೆ.[೧೦] ಅಂದರೆ ಮೊಟ್ಟಮೊದಲಬಾರಿಗೆ ದಾವಣಗೆರೆ ಎಂಬ ಮಾಹಿತಿ ಈ ಶಾಸನದಿಂದ ಸಿಗುತ್ತದೆ. ಇದೊಂದು ದಾನ ಶಾಸನವಾಗಿದ್ದು ದೇವಿಶೆಟ್ಟಿ ಎಂಬ ವ್ಯಾಪಾರಿಯೊಬ್ಬರು ಭೂದಾನ ನೀಡಿದ ಹೊಲಗಳ ಪರಿಸರವೇ ಇಂದಿನ ದಾವಣಗೆರೆ ಬೆಳವಣಿಗೆ ಹೊಂದಿರುವ ಸ್ಥಳ ಎಂಬ ಇನ್ನೊಂದು ಅಭಿಪ್ರಾಯವಿದೆ.

ಶ್ರೀ.ಹಿ.ಚಿ.ಶಾಂತವೀರಯ್ಯನವರು ದಾವಣಗೆರೆಯನ್ನು ಹೀಗೆ ವಿವೇಚಿಸಿದ್ದಾರೆ.

ದಾವಣ+ಕೆರೆ ದವಣಿ=ಹಗ್ಗ, ಕಣ್ಣಿ ದಾವ=ಅಡವಿ, ಕಾಡು.ಕಟ್ಟುವ ಹಗ್ಗ

ದಾವಣ=ದಾಪಣಿ, ಸಂಸ್ಕೃತ ದಾಮನಿ=ದವಣಿ=ಗುಂಪು=ಸಮೂಹ

ಕೆರೆ ಪ್ರವಾಹವನ್ನು ತಡೆದು ಏರಿ ಹಾಕಿ ನಿಲ್ಲಿಸಿದ ಪ್ರದೇಶ. ದೇವನಕೆರೆ=ದೇವ ಒಂದು ಹೆಸರು. ಈ ಹೆಸರಿನ ಸೂಚಕವಾಗಿ ಕಟ್ಟಿದ ಕೆರೆ ಅಥವಾ ದೇವಕಟ್ಟಿಸಿದ ಕೆರೆ.

ದಾವನ-ದ್ಯಾವನ-ದಾವನ-ಕೆರೆ.

ದಾವನ+ಕೇರಿ. ದಾವ ಎಂಬುವನ ಕೇರಿ

ದಾವ+ನಗರಿ, ನಗರಿ=ನಗರಗಳಲ್ಲಿ (ದೊಡ್ಡ ಊರು) ದೇವನಕೇರಿ=ದೇವರು ನೆಲೆಸಿದ ಬೀದಿ, ರಸ್ತೆ, ಸ್ಥಳ.

ದೇವನಕೆರೆ-ದ್ಯಾವನಕೆರೆ ದ್ಯಾವನಗೆರೆ-ದ್ಯಾವಣಗೆರೆ-ದಾವಣಗೆರೆ, ಎಂದು ಹೆಸರರಾಗಿದೆ ಎಂದಿದ್ದಾರೆ.[೧೧]

ಚಿತ್ರದುರ್ಗದ ಸಂಶೋಧಕರಾದ ಶ್ರೀಬಿ.ರಾಜಶೇಖರಪ್ಪನವರು ದಾವಣಗೆರೆ ದಾವಣ+ಕೆರೆ ಎಂಬ ಎರಡುಭಾಗಗಳಿಂದ ಕೂಡಿದೆ. ದಾವಣ ಎಂಬುದು 'ದಾವಣಿ' ಅರ್ಥದ ಶಬ್ದವಾಗಿಲ್ಲ[೧೨], ಎಂದು ಅಭಿಪ್ರಾಯಪಡುತ್ತಾರೆ. ಇವರು ಮಂಡ್ಯ ಜಿಲ್ಲೆಯ ನಾಗಮಂಗಲದ ೧೨ನೇ ಶತಮಾನದ ದಾನಶಾಸನ ಒಂದರಲ್ಲಿ 'ದಾವಂಣ್ಣನಕೇಜೆ' ಎಂದು ಉಲ್ಲೇಖವಿರುವ ಕಾರಣ ದಾವಣಗೆರೆ ಜಿಲ್ಲೆಯ ದಾವಣಗೆರೆ ಸಹ 'ದಾವಣ' ಎನ್ನುವ ವ್ಯಕ್ತಿಯೊಬ್ಬನ ಹೆಸರಿನ ಊರು ಎಂದು ಅಭಿಪ್ರಾಯ ಪಟ್ಟಿದ್ದಾರೆ.[೧೩] ಮೇಲ್ಕಂಡ ಶಾಸನದಲ್ಲಿ ವ್ಯಕ್ತಿಯ ಹೆಸರಿನ ಕೆರೆಯೊಂದಿದೆ. ಈ ಹಿನ್ನೆಲೆಯಲ್ಲಿ ದಾವಣಗೆರೆಯೂ ಸಹ ವ್ಯಕ್ತಿಯೊಬ್ಬನ ಹೆಸರಿನ ಊರಾಗಿರಬೇಕು ಎನ್ನುವ ಅಭಿಪ್ರಾಯ ಇಟ್ಟುಕೊಂಡಿದ್ದಾರೆ.

ಆದರೆ ಈ ದಾವಣ ಎನ್ನುವ ವ್ಯಕ್ತಿಗೂ, ದಾವಣಗೆರೆ ಸ್ಥಾಪನೆಗೂ ಸಂಬಂಧಿಸಿದ ಯಾವುದೇ ಉಲ್ಲೇಖಗಳು ಇದುವರೆಗೂ ಕಂಡುಬಂದಿಲ್ಲ. ಆದ್ದರಿಂದ ಜಾಲಿನಗರದ ಕೆರೆಯಿಂದಲೇ ದಾವಣಗೆರೆ ಆಯಿತು ಎಂಬ ತೀರ್ಮಾನಕ್ಕೆ ಬರಬಹುದು.

ಐತಿಹಾಸಿಕ ಚೌಕಟ್ಟಿನಲ್ಲಿ ದಾವಣಗೆರೆ ನಗರವನ್ನು ಗುರುತಿಸಲು ಮುಂದಾದಾಗ ದಾಖಲಾತಿಗಳ ಕೊರತೆ ಕಂಡುಬರುತ್ತದೆ. ೧೧೨೧ರ ವರೆಗೂ ದಾವಣಗೆರೆ ನಗರದ ಹೆಸರನ್ನು ಉಲ್ಲೇಖಿಸಿರುವ ಶಾಸನಗಳಾಗಲಿ ಅಥವಾ ಇತರೆ ಐತಿಹಾಸಿಕ ದಾಖಲಾತಿಗಳಾಗಲಿ ದೊರೆತಿಲ್ಲ. ಈ ಹಿನ್ನೆಲೆಯಲ್ಲಿ ನಗರದ ಐತಿಹಾಸಿಕ ಸ್ಥಾನಮಾನಗಳನ್ನು ಗುರುತಿಸಲು ಅದರ ಸುತ್ತಮುತ್ತಲಿನ ಗ್ರಾಮಗಳಲ್ಲಿ ದೊರೆತಿರುವ ಶಾಸನಗಳನ್ನು ಅವಲಂಬಿಸಬೇಕಾಗಿದೆ. ದಾವಣಗೆರೆ ನಗರಕ್ಕೆ ತೀರ ಸಮೀಪದ ಗ್ರಾಮಗಳಲ್ಲಿ ಪ್ರಾಚೀನ ಮನೆತನಗಳಾದ ಮೌರ್ಯ, ಶಾತವಾಹನರಿಂದ ಮೊದಲುಗೊಂಡು, ಕನ್ನಡನಾಡಿನ ಬಹಳಷ್ಟು ಅರಸುಮನೆತನಗಳ ಶಾಸನಗಳು ದೊರೆತಿದ್ದು, ಆಯಾ ರಾಜ್ಯಗಳ ಆಳ್ವಿಕೆಯನ್ನು ದೃಢಪಡಿಸುತ್ತವೆ. ಶಾಮನೂರು, ಬೇತೂರು, ಅಣಜಿ, ಕೊಡಗನೂರು, ಕುಂದವಾಡ ಮುಂತಾದ ನಗರದ ಸಮೀಪದ ಗ್ರಾಮಗಳಲ್ಲಿ ಶಾಸನಗಳು ದೊರೆತು ವಿವಿಧ ಕಾಲಘಟ್ಟದಲ್ಲಿ ಆಳ್ವಿಕೆಮಾಡಿದ ಮನೆತನಗಳನ್ನೂ, ಭೂ ಭಾಗಗಳ ಸಂಪರ್ಕವನ್ನೂ ಸ್ಪಷ್ಟಪಡಿಸುತ್ತವೆ. ಈ ನಿಟ್ಟಿನಲ್ಲಿ ದಾವಣಗೆರೆ ಸುತ್ತಮುತ್ತಲಿನ ಗ್ರಾಮಗಳು ಘನಮನೆತನಗಳ ಆಳ್ವಿಕೆಗೊಳಪಟ್ಟಾಗ, ಅವುಗಳಿಂದ ಕೆಲವೇ ಮೈಲಿ ದೂರದ ದಾವಣಗೆರೆ ಗ್ರಾಮ ಆ ಮನೆತನಗಳ ಆಳ್ವಿಕೆಯ ಪ್ರದೇಶದಿಂದ ಹೊರತಾಗಿರಲಿಲ್ಲ ಎಂಬ ತೀರ್ಮಾನಕ್ಕೆ ಬರಬಹುದು. ಆದರೆ ಇದೊಂದು ಸಣ್ಣ ಗ್ರಾಮವಾಗಿತ್ತು ಎಂಬುದು ಗಮನಾರ್ಹ ವಿಷಯವಾಗಿದೆ.

ಈ ಮೇಲಿನ ಚರ್ಚೆಗೆ ಪುಷ್ಟಿಸಿಗಬೇಕಾದರೆ ದಾವಣಗೆರೆ ಸುತ್ತಮುತ್ತಲಿನ ಗ್ರಾಮಗಳಲ್ಲಿ ದೊರೆತಿರುವ ಶಾಸನಗಳು, ನಾಣ್ಯಗಳು, ಧಾರ್ಮಿಕ ಕೇಂದ್ರಗಳನ್ನೂ ಉದಾಹರಿಸುವುದು ಸೂಕ್ತವೆನಿಸುತ್ತದೆ. ಮೌರ್ಯರ

ಆಳ್ವಿಕೆಯು ಕರ್ನಾಟಕದಲ್ಲಿ ಎಂದಿನಿಂದ ಆರಂಭಗೊಂಡಿತೆಂಬ ಬಗ್ಗೆ ಜಿಜ್ಞಾಸೆ ಇದೆಯಾದರೂ, ಕರ್ನಾಟಕದ ಚಾರಿತ್ರಿಕ ಘಟ್ಟವನ್ನು ಮೌರ್ಯರ ಕಾಲದಿಂದಲೇ ಗುರುತಿಸಲಾಗುವುದು. ರಾಜ್ಯದ ಗುಲ್ಬರ್ಗ, ರಾಯಚೂರು, ಕೊಪ್ಪಳ, ಬಳ್ಳಾರಿ, ಚಿತ್ರದುರ್ಗ ಜಿಲ್ಲೆಗಳಲ್ಲಿ ಅಶೋಕನ ಶಾಸನಗಳು ದೊರೆತಿವೆ. ಅಂತೆಯೆ ಚಿತ್ರದುರ್ಗ ಜಿಲ್ಲೆಯ ಬ್ರಹ್ಮಗಿರಿ, ಸಿದ್ದಾಪುರ, ಜಟಂಗಿರಾಮೇಶ್ವರಗಳಲ್ಲೂ ಮೌರ್ಯರ ಶಾಸನಗಳು ಅವರ ಆಳ್ವಿಕೆಯನ್ನು ಸ್ಪಷ್ಟಪಡಿಸುತ್ತವೆ. ಇದೇ ಜಿಲ್ಲೆಯ ಭಾಗವಾಗಿದ್ದ ದಾವಣಗೆರೆ ಹತ್ತಿರವಿರುವ ಶಾಮನೂರು, ಲೋಕಿಕೆರೆಯಲ್ಲಿನ ಬೌದ್ಧಧರ್ಮದ ಅಸ್ತಿತ್ವವನ್ನು ಗಮನಿಸಿದಾಗ, ಬೌದ್ಧ ಮತಾವಲಂಭಿಗಳಾಗಿದ್ದ ಮೌರ್ಯರ ಆಳ್ವಿಕೆಗೆ ದಾವಣಗೆರೆ ಮತ್ತು ಸುತ್ತಮುತ್ತಲಿನ ಪ್ರದೇಶಗಳು ಸೇರ್ಪಡೆಯಾಗಿದ್ದವು ಎಂದು ತಿಳಿಯಲಾಗಿದೆ.

ಮೌರ್ಯ ಸಾಮ್ರಾಜ್ಯದ ಮುಂದುವರಿಕೆಯಾಗಿ ಶಾತವಾಹನರು ಶ್ರಮಪಟ್ಟು ಸಾಮ್ರಾಜ್ಯ ನಿರ್ಮಿಸಿದ್ದಾರೆ. 'ದಕ್ಷಿಣಾಪಥದ ಒಡೆಯರಾಗಿದ್ದ' ಇವರ ಮಹತ್ವದ ನೆಲೆಗಳಲ್ಲಿ ಚಿತ್ರದುರ್ಗ ಜಿಲ್ಲೆಯ ಚಂದ್ರವಳ್ಳಿಯೂ ಒಂದು. ಈ ಜಿಲ್ಲೆಯಲ್ಲಿ ದೊರೆತಿರುವ ಅವರ ನಿವೇಶನಗಳು, ನಾಣ್ಯಗಳು ಶಾತವಾಹನರ ಆಳ್ವಿಕೆಯ ಕುರುಹುಗಳಾಗಿವೆ. ದಕ್ಷಿಣಾಪಥ ಸಾರ್ವಭೌಮರಾದ ಇವರು ತಮ್ಮನ್ನು ಕುಂತಲಸ್ವಾಮಿಗಳೆಂದು ಕರೆದುಕೊಂಡಿದ್ದಾರೆ. ಭೀಮಾ ಮತ್ತು ವೇದಾವತಿ ನದಿಗಳ ನಡುವಿನ ಪ್ರದೇಶವನ್ನು ಕುಂತಳದೇಶವೆನ್ನಲಾಗಿದೆ. ಈ ಹಿನ್ನೆಲೆಯಲ್ಲಿ ದಾವಣಗೆರೆ ಶಾತವಾಹನರಿಗೆ ಸೇರಿತ್ತೆಂದು ತಿಳಿಯಲ್ಪಡುತ್ತದೆ.

ಕ್ರಿ.ಶ.೩೪೫ರಿಂದ ೫೪೦ರ ಅವಧಿಯಲ್ಲಿ ಕದಂಬರು ಆಳ್ವಿಕೆ ನಡೆಸಿದ್ದಾರೆ. ದಾವಣಗೆರೆ ಸಮೀಪದ ಅಣಜಿ ಗ್ರಾಮದಲ್ಲಿ ಕದಂಬ ಶಿವಸ್ಕಂದವರ್ಮನಿಗೆ ಸಂಬಂಧಿಸಿದ ಶಾಸನವೊಂದು ದೊರೆತಿದೆ,[೧೪] (ಚಿತ್ರದುರ್ಗ ಜಿಲ್ಲಾ ಶಾಸನ ಸಂಖ್ಯೆ ೧೬೧). ಇದರಿಂದ ಈ ಪ್ರದೇಶವು ಕದಂಬರ ಆಳ್ವಿಕೆಗೆ ಒಳಪಟ್ಟಿತ್ತೆಂದು ತಿಳಿಯಬಹುದು. ಕ್ರಿ.ಶ.೬ನೇ ಶತಮಾನದ ನಂತರ ದಾವಣಗೆರೆ ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳು ಬಾದಾಮಿ ಚಾಲುಕ್ಯರು (ಕ್ರಿ.ಶ.೫೦೦ರಿಂದ ೭೫೪ವರೆಗೆ) ಕಲ್ಯಾಣಿ ಚಾಲುಕ್ಯರಿಗೆ (ಕ್ರಿ.ಶ.೯೭೩ ರಿಂದ ೧೨೦೦ವರೆಗೆ) ಸೇರಿದಂತೆ ತಿಳಿದು ಬರುತ್ತದೆ. ಹದಡಿ ಗ್ರಾಮದಲ್ಲಿ (ಚಿತ್ರದುರ್ಗ ಜಿಲ್ಲೆ ಶಾಸನ ಸಂಖ್ಯೆ ೧೨೪) ದೊರೆತಿರುವ ಶಾಸನದಿಂದ ಚಾಲುಕ್ಯ ಅರಸ ಸೋಮೇಶ್ವರನ ಸಾಮಂತನಾದ ಪಲ್ಲವ ನೊಳಂಬನು ಅಲ್ಲಿನ ಈಶ್ವರ ದೇವರಿಗೆ ದಾನನೀಡಿದ ಮಾಹಿತಿ ತಿಳಿಯುತ್ತದೆ.[೧೫]

೮ನೇ ಶತಮಾನದಿಂದ ೧೦ನೇ ಶತಮಾನದವರೆಗೆ (ಕ್ರಿ.ಶ. ೭೩೭ ರಿಂದ ೯೭೩) ರಾಷ್ಟ್ರಕೂಟರು ಆಳ್ವಿಕೆ ನಡೆಸಿದ್ದಾರೆ. ಇವರ ಆಳ್ವಿಕೆಗೆ ಸಂಬಂಧಿಸಿದಂತೆ ದಾವಣಗೆರೆಗೆ ಸಮೀಪದ ಕಾಡಜ್ಜಿಯಲ್ಲಿ (ಚಿತ್ರದುರ್ಗ ಜಿಲ್ಲೆ ಶಾಸನ ಸಂಖ್ಯೆ ೧೭) ದೊರೆತಿರುವ ಶಾಸನದಿಂದ ರಾಷ್ಟ್ರಕೂಟರು ಈ ಪ್ರದೇಶವನ್ನು ಆಳುತ್ತಿದ್ದರೆಂದು ತಿಳಿಸುತ್ತದೆ.[೧೬] ಸೇವುಣರು ಚಿತ್ರದುರ್ಗ ಜಿಲ್ಲೆಯಲ್ಲಿ ಆಳ್ವಿಕೆ ನಡೆಸಿರುವುದಕ್ಕೆ ಅವರ ಶಾಸನಗಳೇ ಸಾಕ್ಷಿ. ಚಿತ್ರದುರ್ಗ ಜಿಲ್ಲೆಯಲ್ಲಿ ಇವರ ೨೬ ಶಾಸನಗಳಲ್ಲಿ ದಾವಣಗೆರೆ ತಾಲೂಕಿನಲ್ಲಿಯೇ ೧೮ ಶಾಸನಗಳು ದೊರೆತಿವೆ.[೧೭] ಉಚ್ಚಂಗಿ ಪಾಂಡ್ಯರು ೧೧-೧೨ನೇ ಶತಮಾನಗಳಲ್ಲಿ ಆಳ್ವಿಕೆ ನಡೆಸುತ್ತಿದ್ದು, ಅವರ ಅರಸನಾದ ತ್ರಿಭುವನಮಲ್ಲ ಪಾಂಡ್ಯ ರಾಜಧಾನಿಯನ್ನು ಉಚ್ಚಂಗಿಯಿಂದ 'ಬೇತೂರಿಗೆ' (ದಾವಣಗೆರೆಯಿಂದ ೨ ಮೈಲಿ ದೂರದಲ್ಲಿದೆ) ವರ್ಗಾಯಿಸಿದನು. ಆಗ ದಾವಣಗೆರೆ ಒಂದು ಸಣ್ಣ

ಹಳ್ಳಿಯಾಗಿತ್ತು.[೧೮] ಈ ಹಳ್ಳಿಯು ಬೇತೂರಿನ ಹೊರಭಾಗದಲ್ಲಿತ್ತು. ಪಾಂಡ್ಯರ ರಾಜಧಾನಿ ವರ್ಗಾವಣೆಯು ದಾವಣಗೆರೆಯ ಬೆಳವಣಿಗೆಯ ಮೇಲೆ ಪರಿಣಾಮ ಬೀರಿತು ಎನ್ನಬಹುದು. ಇವರ ಕಾಲದ (ಕ್ರಿ.ಶ.೧೧೨೧), ದಾವಣಗೆರೆಯಲ್ಲಿ ದೊರೆತ ೩ನೇ ಶಾಸನದಿಂದ 'ದಾವಣಗೆರೆ ಸೀಮೆಯಂ' ಎಂಬ ಉಲ್ಲೇಖ ಕಂಡುಬರುತ್ತದೆ. ಈ ನಗರಕ್ಕೆ ಹೊಂದಿಕೊಂಡಿರುವ ಶಾಮನೂರಿನ ಶಾಸನದಿಂದ (ಚಿತ್ರದುರ್ಗ ಜಿಲ್ಲಾ ಶಾಸನ ಸಂಖ್ಯೆ ೯೦) ಚಾಲುಕ್ಯ ತ್ರಿಭುವನ ಮಲ್ಲನ ಸಾಮಂತ ಅರಸ ತ್ರಿಭುವನ ಮಲ್ಲಪಾಂಡ್ಯನು ಕ್ರಿ.ಶ.೧೧೨೮ರಲ್ಲಿ ಇಲ್ಲಿನ ದೇವಾಲಯಕ್ಕೆ ದಾನ ನೀಡಿದ ಮಾಹಿತಿ ತಿಳಿದುಬರುತ್ತದೆ.[೧೯]

ಶಾಮನೂರು, ಬೇತೂರು ಗ್ರಾಮಗಳಲ್ಲಿ ಜೈನತೀರ್ಥಂಕರರ ಮೂರ್ತಿಗಳು ದೊರೆತಿದ್ದು, ಅವು ಈ ಭಾಗದಲ್ಲಿ ಜೈನಧರ್ಮ ರೂಢಿಯಲ್ಲಿತ್ತು ಎಂದು ತಿಳಿಸುತ್ತವೆ. ಚಾಲುಕ್ಯರ ಮಾಂಡಲಿಕರಾಗಿದ್ದು, ೧೧ನೇ ಶತಮಾನದ ಆದಿಭಾಗದಲ್ಲಿ ಪ್ರಾಬಲ್ಯಕ್ಕೆ ಬಂದ ಹೊಯ್ಸಳರ ಆಳ್ವಿಕೆ ಬಗ್ಗೆ ಬಹಳಷ್ಟು ಆಧಾರಗಳಿವೆ. ಹರಿಹರ, ಬೇತೂರುಗಳಲ್ಲಿನ ಹೊಯ್ಸಳಶೈಲಿಯ ದೇವಾಲಯಗಳ ಜೊತೆಗೆ, ದಾವಣಗೆರೆ ಸಮೀಪದ ಲೋಕಿಕೆರೆ ಗ್ರಾಮದಲ್ಲಿ ದೊರೆತಿರುವ ಶಾಸನ (ಚಿತ್ರದುರ್ಗ ಜಿಲ್ಲಾ ಶಾಸನ ಸಂಖ್ಯೆ ೧೨೯) ಹೊಯ್ಸಳರ ಸಾಮಂತ ರಣಸಿಂಗಯ್ಯನು ಕಲ್ಲೇಶ್ವರ ದೇವರ ನಂದಾದೀವಿಗೆಗೆ, ಅಡಿಕೆ ಎಲೆ ಮೇಲಿನ ಹಣವನ್ನು ದಾನ ನೀಡಿದ ಮಾಹಿತಿ ನೀಡುತ್ತದೆ.[೨೦] ಲೋಕಿಕೆರೆ ಎಂಬುದು ಚಾಲುಕ್ಯರ ಅಗ್ರಹಾರವಾಗಿತ್ತು.[೨೧] ಎಂದೂ ಸಹ ತಿಳಿದು ಬರುತ್ತದೆ.

ಕ್ರಿ.ಶ. ೧೩೩೬ರಿಂದ ೧೫೬೫ರ ವರೆಗೆ ದಕ್ಷಿಣದ ಪ್ರಬಲರಾಜ್ಯವಾಗಿದ್ದ ವಿಜಯನಗರಕ್ಕೆ ಈ ಭಾಗವೆಲ್ಲಾ ಸೇರ್ಪಡೆಯಾಗಿತ್ತು. ಚನ್ನಗಿರಿಯಲ್ಲಿನ ಶಾಸನ (ಶಿವಮೊಗ್ಗ ಜಿಲ್ಲಾಶಾಸನ ಸಂಖ್ಯೆ ೨೮) ವಿಜಯನಗರದ ಇಮ್ಮಡಿ ದೇವರಾಯ, ಬುಕ್ಕರಾಯರು ಆಳುತ್ತಿದ್ದಾಗ ವೀರಭದ್ರ ದೇವರನ್ನು ಪ್ರತಿಷ್ಠಾಪಿಸಿ ಗ್ರಾಮಗಳನ್ನು ಉಂಬಳಿ ನೀಡಿದ ಮಾಹಿತಿ ನೀಡುತ್ತದೆ.[೨೨] ೧೫ನೇ ಶತಮಾನದಿಂದ ಮೈಸೂರಿನ ಒಡೆಯರ ಆಳ್ವಿಕೆ ಆರಂಭಗೊಳ್ಳುತ್ತದೆ. ದಾವಣಗೆರೆ ನಗರದ ಮೇಲೆ ಇವರ ಆಳ್ವಿಕೆಗೆ ಸಂಬಂಧಿಸಿದಂತೆ ಬಹಳಷ್ಟು ಮಾಹಿತಿಗಳಿವೆ. ೧೫ನೇ ಶತಮಾನದ ಅಂತ್ಯದಲ್ಲಿ ಏಳಿಗೆಹೊಂದಿ, ೧೮ನೇ ಶತಮಾನವರೆಗೂ ಅಧಿಕಾರದಲ್ಲಿದ್ದ (೧೪೮೫ ರಿಂದ ೧೭೭೯ ಕ್ರಿ.ಶ.) ಚಿತ್ರದುರ್ಗದ ಪಾಳೇಗಾರರು ದಾವಣಗೆರೆ ಪ್ರದೇಶದಲ್ಲಿ ಆಳ್ವಿಕೆ ಮಾಡಿದರು. ೨೦೦ ವರ್ಷಕ್ಕೂ ಹೆಚ್ಚುಕಾಲ ದಾವಣಗೆರೆಯು ಇವರ ಅಧಿಕಾರವ್ಯಾಪ್ತಿಯಲ್ಲಿತ್ತು. ೧೭೪೭-೪೮ರಲ್ಲಿ ಹರಪನಹಳ್ಳಿ ಸೋಮೇಶ್ವರ ನಾಯಕನಿಗೂ, ಚಿತ್ರದುರ್ಗ ಸಂಸ್ಥಾನದ ಪಾಳೆಯಗಾರನಾಗಿದ್ದ ಬಿಚ್ಚುಗತ್ತಿ ಭರಮಣ್ಣನಾಯಕನ ಪುತ್ರ ಹಿರೇಮದಕರಿ ನಾಯಕನಿಗೂ ದಾವಣಗೆರೆ ಹತ್ತಿರದ ಮಾಯಕೊಂಡದಲ್ಲಿ ಯುದ್ಧನಡೆಯಿತು. ಈ ಯುದ್ಧದಲ್ಲಿ ಹಿರೇಮದಕರಿನಾಯಕ ಮರಣ ಹೊಂದಿದನು. ಈಗಲೂ ಈತನ ಸಮಾಧಿ ಮಾಯಕೊಂಡದಲ್ಲಿದೆ.[೨೩] ಮೈಸೂರಿನ ಹೈದರಾಲಿ ಚಿತ್ರದುರ್ಗದ ಪಾಳೆಯಗಾರರ ಮೇಲೆ ೩ ಭಾರಿ ಯುದ್ಧಮಾಡಿ ೧೭೭೯ರಲ್ಲಿ ಐದನೆ ಮದಕರಿನಾಯಕನನ್ನು ಸೋಲಿಸಿ ಈ ಪ್ರದೇಶವನ್ನು ತನ್ನ ವಶಕ್ಕೆ ತೆಗೆದುಕೊಂಡನು.

ಆದರೆ ಈ ಪ್ರದೇಶದ ಮೇಲೆ ಮರಾಠರು ಆಗಿಂದಾಗ್ಗೆ ದಾಳಿ ಇಡುತ್ತಿದ್ದರಿಂದ ದಾವಣಗೆರೆಯನ್ನು ಮರಾಠ ಪಾಳೆಯಗಾರ ಅಪ್ಪಾಜಿರಾವ್ ಎಂಬುವವನಿಗೆ ಮಾರಿದನು. ಅಪ್ಪಾಜಿರಾವ್‌ನ ಪ್ರೋತ್ಸಾಹದಿಂದ

ದಾವಣಗೆರೆ ಗ್ರಾಮದಲ್ಲಿ ಅನೇಕ ವ್ಯಾಪಾರಸ್ಥರು ನೆಲಸಿದರು.[೨೪] ೧೮೦೧ರಲ್ಲಿ ದಾವಣಗೆರೆಗೆ ಭೇಟಿ ನೀಡಿದ್ದ ಪ್ರವಾಸಿ ಫ್ರಾನ್ಸಿಸ್ ಬುಕನನ್ ಕೂಡ ಅಪ್ಪಾಜಿರಾವ್ ದಾವಣಗೆರೆ ಬೆಳೆಯಲು ಪ್ರೋತ್ಸಾಹಿಸಿದ ಮಾಹಿತಿ ನೀಡುತ್ತಾನೆ. ಆಗಲೂ ಇಲ್ಲಿ ವ್ಯಾಪಾರವೇ ಮುಖ್ಯ ಕಸುಬಾಗಿತ್ತು.

ಮೈಸೂರಿನ ಹುಲಿ ಟಿಪ್ಪುಸುಲ್ತಾನ್ ೨ನೇ ಆಂಗ್ಲೋ-ಮೈಸೂರು ಯುದ್ಧದಲ್ಲಿ ಸೋತು (೧೭೯೦-೯೨) ಬ್ರಿಟಿಷರೊಂದಿಗೆ ಶ್ರೀರಂಗಪಟ್ಟಣ ಒಪ್ಪಂದ ಮಾಡಿಕೊಂಡನು. ಈ ಒಪ್ಪಂದದ ಪ್ರಕಾರ ಯುದ್ಧವೆಚ್ಚ ೩ ಕೋಟಿರೂಪಾಯಿಗಳನ್ನು ಬ್ರಿಟಿಷರಿಗೆ ಪಾವತಿಸಬೇಕಾಯಿತು. ಅಷ್ಟೊಂದು ಹಣ ಟಿಪ್ಪುವಿನಲ್ಲಿಲ್ಲದ ಕಾರಣ ಹರಿಹರ, ತುಂಗಭದ್ರಾ ನದಿಯ ಉತ್ತರದ ಭಾಗಗಳನ್ನು ಮರಾಠರಿಗೆ ಮಾರಿದನು. ಆಗ ದಾವಣಗೆರೆ ಮೈಸೂರು ಸಂಸ್ಥಾನದ ಉತ್ತರದ ಗಡಿಯಾಯಿತು. ಟಿಪ್ಪುಸುಲ್ತಾನನ ಕಾಲದಲ್ಲಿ ದಾವಣಗೆರೆ ನಗರದ ಕನ್ನಿಕಾ ಪರಮೇಶ್ವರಿ ರಸ್ತೆಯ ಒಂದು ಅಡ್ಡರಸ್ತೆಗೆ ಸುಲ್ತಾನ್ ಪೇಟೆ ಎಂದು ಹೆಸರಿಡಲಾಯಿತು.[೨೯] ಇಲ್ಲಿ ಹೆಚ್ಚು ಮುಸಲ್ಮಾನರೇ ನೆಲಸಿದ್ದುದಕ್ಕೆ ನಿದರ್ಶನಗಳಿವೆ.

ಟಿಪ್ಪುವಿನ ನಂತರ ಮೈಸೂರಿನ ಒಡೆಯರು ಮತ್ತು ದಾವಣಗೆರೆಯ ಸಂಬಂಧ ಬಲಗೊಂಡಿತು. ದಾವಣಗೆರೆ ನಗರದಲ್ಲಿ ಪ್ರಿನ್ಸ್ ಜಯಚಾಮರಾಜ ಬಡಾವಣೆಯೊಂದನ್ನು (ಪಿ.ಜೆ.ಬಡಾವಣೆ) ಆರಂಭಿಸಿರುವುದು ಇವರೊಂದಿಗಿನ ಸಂಬಂಧಕ್ಕೆ ನಿದರ್ಶನವಾಗಿದೆ. ದಾವಣಗೆರೆ ಹತ್ತಿಗಿರಣಿ (ಡಿ.ಸಿ.ಎಂ.) ೧೯೬೧ರಲ್ಲಿ ಬೆಳ್ಳಿಹಬ್ಬ ಆಚರಿಸಿಕೊಂಡಿತು (೧೯೩೬-೧೯೬೧). ಈ ಹಬ್ಬದ ಸವಿನೆನಪಿನ ಸ್ಮರಣಸಂಚಿಕೆಗೆ ಜಯಚಾಮರಾಜ ಒಡೆಯರು ಸಂದೇಶ ಕಳುಹಿಸಿ ದಕ್ಷಿಣಭಾರತದ ಪ್ರಮುಖ ಗಿರಣಿಗಳಲ್ಲಿ ಇದೊಂದು (ಡಿ.ಸಿ.ಎಂ.), ದೇಶ ವಿದೇಶಗಳಲ್ಲಿ ಈ ಗಿರಣಿಯ ಉತ್ಪನ್ನಗಳು (೧೯೬೦- ೬೧ರಲ್ಲಿ) ಮುಂದಿವೆ, ಇದು ೧೯೬೦-೬೧ರಲ್ಲಿ ೧.೬೮ ಕೋಟಿ ವಹಿವಾಟು ನಡೆಸಿರುವುದನ್ನು ಶ್ಲಾಘಿಸಿದ್ದಾರೆ. ಇವರು ಇದೇ ಬೆಳ್ಳಿಹಬ್ಬದ ಸಮಾರಂಭದಲ್ಲಿ ಪಾಲ್ಗೊಂಡು ಶುಭ ಹಾರೈಸಿರುವ ಘಟನೆಯು ದಾವಣಗೆರೆ ಹಾಗೂ ಒಡೆಯರ ಸಂತತಿಯೊಂದಿಗಿನ ಸಂಬಂಧಕ್ಕೆ ಮತ್ತೊಂದು ನಿದರ್ಶನವಾಗಿದೆ.

ಹೀಗೆ ಪ್ರಾಚೀನ ಕಾಲದಿಂದಲೂ ದಾವಣಗೆರೆಯು ಆಳರಸರೊಂದಿಗೆ ಹೊಂದಿದ್ದ ಸಂಬಂಧವನ್ನು ಪರಿಶೀಲಿಸಿದ ನಂತರ, ೧೯ನೇ ಶತಮಾನದಲ್ಲಿ ದಾವಣಗೆರೆಗೆ ಭೇಟಿನೀಡಿದ್ದ (೧೧-೪-೧೮೦೧) ಈಸ್ಟ್ ಇಂಡಿಯಾ ಕಂಪನಿಯ ಪ್ರವಾಸಿ ಫ್ರಾನ್ಸಿಸ್ ಬುಕನನ್ ವರದಿಯು ಈ ನಗರವನ್ನು ಕುರಿತು ನೀಡುವ ಮಾಹಿತಿ ನೋಡುವುದು ಅಗತ್ಯವಾಗಿದೆ. ಈತನ ವರದಿಯು ದಾವಣಗೆರೆಯ ನೆಲ, ವ್ಯವಸಾಯ, ಕೈಗಾರಿಕೆಗಳ ಬಗ್ಗೆ ಮಾಹಿತಿ ನೀಡುತ್ತದೆ. ಅವನ ಪ್ರಕಾರ ದಾವಣಗೆರೆಯು ೫೦೦ ಮನೆಗಳನ್ನು ಹಾಗೂ ಇತ್ತೀಚೆಗಷ್ಟೇ ನಿರ್ಮಿಸಿದ ಒಂದು ಹೊಸ ಬಜಾರನ್ನು ಹೊಂದಿತ್ತು.[೨೬] ಸಾಗರದಿಂದ ದಾವಣಗೆರೆಗೆ ಅಡಿಕೆ, ಮೆಣಸನ್ನು ತರಿಸಿಕೊಳ್ಳಲಾಗುತ್ತಿತ್ತು ಇಲ್ಲಿನ ಪರಿಸರದಲ್ಲಿ ಹತ್ತಿಯನ್ನು ಬೆಳೆಯುತ್ತಿದ್ದು, ಕಂಬಳಿಯನ್ನು ಮತ್ತು ಹತ್ತಿ ಬಟ್ಟೆಯನ್ನು ತಯಾರಿಸಲಾಗುತ್ತಿತ್ತು ಎಂಬ ಹಲವು ಮಾಹಿತಿಗಳನ್ನು ನೀಡುತ್ತಾನೆ.

ಈತನ ಬರವಣಿಗೆಯಿಂದ ಎರಡು ಮುಖ್ಯ ಮಾಹಿತಿಗಳನ್ನು ಗಮನಿಸಬಹುದು. ಮೊದಲನೆಯದಾಗಿ ಅಂದು ದಾವಣಗೆರೆ ವಾಣಿಜ್ಯ ಮತ್ತು ಕೈಗಾರಿಕಾಗ್ರಾಮ, ಎರಡನೆಯದಾಗಿ ಅದೊಂದು ಸಣ್ಣಗ್ರಾಮ.

ಈತನ ಬರಹದ ಕಾಲದ ನಂತರ (೧೧-೪-೧೮೦೧ರ ನಂತರ) ದಾವಣಗೆರೆ ಬೆಳವಣಿಗೆ ಹೊಂದಿದ್ದು ಈ ನಗರಕ್ಕೆ ಸುಮಾರು ೬೦೦ ವರ್ಷಗಳ ಇತಿಹಾಸವಿದೆ ಎಂಬ ನಿರ್ಧಾರಕ್ಕೆ ಬರಬಹುದು. ೧೮೦೧ರಲ್ಲಿ ೫೦೦ ಮನೆಗಳ ಹಳ್ಳಿಯಾಗಿದ್ದ ದಾವಣಗೆರೆಯ ಜನಸಂಖ್ಯಾ ಹೆಚ್ಚಳವನ್ನು ಈ ಕೆಳಕಂಡಂತೆ ಗಮನಿಸಬಹುದು.

೧೯೦೦ರಲ್ಲಿ	- ೧೦,೦೦೦ ಸಾವಿರ ಜನಸಂಖ್ಯೆ,
೧೯೫೧ರಲ್ಲಿ	- ೫೬,೦೧೮ ಸಾವಿರ ಜನಸಂಖ್ಯೆ,
೧೯೯೧ರಲ್ಲಿ	- ೨,೬೮,೦೦೦ ಸಾವಿರ ಜನಸಂಖ್ಯೆ
೨೦೦೧ರಲ್ಲಿ	- ೫ ಲಕ್ಷ ಜನಸಂಖ್ಯೆ[೩೩]

ನಗರದಲ್ಲಿ ವಾಸಿಸುವ ಜನಸಂಖ್ಯೆಯಲ್ಲಿನ ಏರಿಕೆಯನ್ನು ಗಮನಿಸಿದಾಗ ನಗರ ತ್ವರಿತಗತಿಯಲ್ಲಿ ಬೆಳವಣಿಗೆಯಾಗುತ್ತಿರುವುದು ಕಂಡುಬರುತ್ತದೆ. ಈ ಗ್ರಾಮವು ಆರಂಭದಲ್ಲಿ ಸಣ್ಣ ಹಳ್ಳಿಯಾಗಿದ್ದು, ೧೯೨೦ರಲ್ಲಿ ಚಿತ್ರದುರ್ಗ ಜಿಲ್ಲೆಯ ತಾಲ್ಲೂಕು ಕೇಂದ್ರವಾಯಿತು, ೧೯೯೭ರಲ್ಲಿ ಪ್ರತ್ಯೇಕ ಜಿಲ್ಲಾ ಕೇಂದ್ರದ ಸ್ಥಾನಮಾನ ಪಡೆಯಿತು. ಆರಂಭದಲ್ಲಿ ಜಾಲಿನಗರದ ಕೆರೆಯ ಸಮೀಪದ ಗ್ರಾಮಕ್ಕೆ ಆ ಕೆರೆ ನೀರೆ ಕುಡಿಯುವ ನೀರಾಗಿರಬಹುದು. ನಂತರ ದಾವಣಗೆರೆಗೆ ಕ್ರಿ.ಶ. ೧೯೦೦ರಲ್ಲಿ ಕುಡಿಯುವ ನೀರು ಸರಬರಾಜು ಮಾಡಲು ಹರಿಹರದ ತುಂಗಭದ್ರಾನದಿಗೆ ಎಂಟು ಇಂಚಿನ ಪೈಪ್‌ಲೈನ್ ಜೋಡಿಸಿ ನೀರು ಪೂರೈಸಲು ವ್ಯವಸ್ಥೆ ಮಾಡಲಾಯಿತು. ಜನಸಂಖ್ಯೆ ತೀವ್ರಗತಿಯಲ್ಲಿ ಏರತೊಡಗಿದ್ದರಿಂದ ಕುಡಿಯುವ ನೀರಿನ ಸಮಸ್ಯೆ ಉಂಟಾಯಿತು. ಜನಸಂಖ್ಯೆ ಹೆಚ್ಚಾದಂತೆ ನಗರ ವಿಸ್ತಾರಗೊಂಡು, ನಗರಕ್ಕೆ ಹೊಂದಿಕೊಂಡಿದ್ದ ಕೆರೆ ಪ್ರದೇಶಗಳೆಲ್ಲಾ (ಜಂಬಣ್ಣನಗರ, ನಿಟ್ಟುವಳ್ಳಿ, ಬೀರನಹಳ್ಳಿ ಕೆರೆಗಳು) ನಿವೇಶನಗಳಾಗಿ ಪರಿವರ್ತನೆಗೊಂಡು, ಕುಡಿಯುವ ನೀರಿನ ಮೂಲಗಳು ಅಸ್ತಿತ್ವ ಕಳೆದುಕೊಂಡವು. ಆ ಮೂಲಕ ಕುಡಿಯುವ ನೀರಿನ ಸಮಸ್ಯೆ ಉಲ್ಬಣಗೊಂಡಾಗ ೧೯೬೮ರ ನಂತರ ಭದ್ರಾ ಜಲಾಶಯದ ನಾಲೆಯಿಂದ ನಗರಕ್ಕೆ ನೀರು ಸರಬರಾಜು ಮಾಡಲಾಯಿತು.

ದಾವಣಗೆರೆಯ ನಗರದೇವತೆ ದುರ್ಗಾಂಬಿಕೆಯಾಗಿದ್ದಾಳೆ. ಈ ದೇವತೆಯ ಮಂದಿರವು, ನಗರವನ್ನೂ ಉತ್ತರ, ದಕ್ಷಿಣವಾಗಿ ಇಬ್ಭಾಗಿಸಿರುವ ರೈಲುಹಳಿಯ ಉತ್ತರಕ್ಕಿರುವ ಹಳೆಯ ನಗರದಲ್ಲಿದೆ. ದುಗ್ಗಮ್ಮ ಮೊದಲು ಬೇವಿನಮರದ ಕೆಳಗೆ ಕತ್ತಲ್ಲಲ್ಲಿರುವ ಗುಡಿಯಲ್ಲಿದ್ದಳಂತೆ.[೩೪] ಜಾನಪದ ಹೇಳಿಕೆಯಂತೆ ಈಕೆ ದುಗ್ಗತ್ತಿಯಿಂದ (ದಾವಣಗೆರೆಗೆ ಹತ್ತಿರದ ದುಗ್ಗಾವತಿ ಗ್ರಾಮ) ಬಂದು ನೆಲಸಿದಳಂತೆ.[೩೫] ೧೯೩೪ರಲ್ಲಿ ಈ ದೇವಿ ಇದ್ದ ಸಣ್ಣ ಗುಡಿಯು ಪುನರ್ ನಿರ್ಮಾಣವಾಯಿತು. ನಗರ ದೇವತೆ ದುಗ್ಗಮ್ಮನ ಹೆಸರಿನಲ್ಲಿ ೨ವರ್ಷಕ್ಕೊಮ್ಮೆ ವಿಜೃಂಭಣೆಯಿಂದ ಜಾತ್ರೆ ನಡೆಯುತ್ತದೆ. ಈ ಜಾತ್ರೆಯ ಕಾಲದಲ್ಲಿ ನಗರಕ್ಕೆ ಸಂಬಂಧಿಕರ ದಂಡೇ ಬರುತ್ತದೆ, ಹಾಗೂ ಲಕ್ಷಾಂತರ ರೂಪಾಯಿಗಳ ವಾಣಿಜ್ಯವಹಿವಾಟು ನಡೆಯುತ್ತದೆ. ಕುರಿ, ಕೋಳಿಗಳನ್ನು ಜಾತ್ರೆಯ ಸಂದರ್ಭದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬಲಿಕೊಡುವುದರಿಂದ, ಮಾಂಸದ ಅಡಿಗೆ ಸಾಮಾನ್ಯವಾಗಿರುತ್ತದೆ. ಜಾತ್ರೆಯ ಅವಧಿಯಲ್ಲೇ ದೇವಿಗೆ ಹರಕೆ ಸಲ್ಲಿಸುವುದು ಪರಿಪಾಟ. ದೇವಿಯ ಜಾತ್ರೆ ಸಂಬಂಧ ನಗರದಲ್ಲಿ ಸಾಂಸ್ಕೃತಿಕ ಚಟುವಟಿಕೆಗಳು ನಡೆಯುತ್ತವೆ. ಇವುಗಳಲ್ಲಿ ನಾಟಕ ಪ್ರದರ್ಶನ,

ಕುಸ್ತಿ, ಕುರಿಕಾಳಗಗಳು ಪ್ರಮುಖ ಪಾತ್ರವಹಿಸುತ್ತವೆ. ಈ ಜಾತ್ರೆಯಿಂದ ಪರಸ್ಪರ ಸಾಂಸ್ಕೃತಿಕ ವಿನಿಮಯಕ್ಕೆ ಅವಕಾಶವಿರುತ್ತದೆ.

ದಾವಣಗೆರೆ ನಗರದಲ್ಲಿ ಬರಗಾಲ ಬಂದರೆ, ಮಳೆಯ ಕೊರತೆಯುಂಟಾದರೆ ದುರ್ಗಾಂಬಿಕೆಯ ದೇವಾಲಯದ ಮುಂದೆ ೩ ವಾರಗಳು ನಿರಂತರವಾಗಿ ಸಂತೆ ನಡೆಸುವ ಸಂಪ್ರದಾಯವನ್ನಿಟ್ಟುಕೊಂಡಿದ್ದಾರೆ.

ಕೈಗಾರಿಕೆಗಳ ಅಭಿವೃದ್ಧಿಯ ಹಿನ್ನೆಲೆಯಲ್ಲಿ, ಅದರಲ್ಲೂ, ಹತ್ತಿ ಗಿರಣಿಗಳ ಸ್ಥಾಪನೆ, ಪ್ರಗತಿಯ ಸೃಷ್ಟಿಯಿಂದ ಆಗತ್ಯವಾಗಿದ್ದ ರೈಲ್ವೆ ತಂತಿ, ವಿದ್ಯುತ್ ಸಂಪರ್ಕವನ್ನು ದಾವಣಗೆರೆ ನಗರವು ಬಹಳ ಹಿಂದೆಯೇ ಪಡೆದುಕೊಂಡಿತು. ೧೮೮೯ರಲ್ಲಿ ಬೆಂಗಳೂರು-ಪೂನಾ (ದಾವಣಗೆರೆ ಮಾರ್ಗ) ನಡುವಿನ ನೇರ ರೈಲ್ವೆ ಸಂಪರ್ಕಪಡೆದುಕೊಂಡಿತು.[೬೦] ೧೯೩೮ರಲ್ಲೇ ೧೫ ಮೆಗಾವ್ಯಾಟ್ ಸಾಮರ್ಥ್ಯದ ಉಪವಿದ್ಯುತ್ ಕೇಂದ್ರವನ್ನು ಇಲ್ಲಿ ಸ್ಥಾಪಿಸಲಾಯಿತು.[೬೧] ೧೯೫೩ ಫೆಬ್ರವರಿ ೫ ರಂದು ೪೪ ಸಂಪರ್ಕಗಳೊಂದಿಗೆ ಪ್ರಪ್ರಥಮವಾಗಿ ತಂತಿ ಸಂಪರ್ಕವನ್ನು ಪಡೆಯಿತು.[೬೨] ಈ ಮೂಲಭೂತ ಸೌಕರ್ಯಗಳು ಕೈಗಾರಿಕಾ ಪ್ರಗತಿಯಲ್ಲಿ ಮೈಲುಗಲ್ಲಾಯಿತು ಎನ್ನಬಹುದು. ದಾವಣಗೆರೆ ನಗರ ಮೇಲ್ಕಂಡ ಸೌಲಭ್ಯಗಳನ್ನು ಆರಂಭದಲ್ಲೇ ಪಡೆದುಕೊಂಡಿದ್ದು ಇಲ್ಲಿ ಅನೇಕ ಕೈಗಾರಿಕೆಗಳು ಜನ್ಮವೆತ್ತಲು ಪ್ರೇರಣೆ ನೀಡಿವೆ ಎನ್ನಲೇಬೇಕಾಗಿದೆ. ೧೯೪೦ರ ದಶಕದಿಂದ ಶಿಕ್ಷಣರಂಗದಲ್ಲೂ ತನ್ನ ಪ್ರಗತಿಯನ್ನು ಕಾಣುತ್ತಿದೆ. ಇಲ್ಲಿ ತಾಂತ್ರಿಕ, ವೈದ್ಯಕೀಯ, ಕಲೆ, ವಿಜ್ಞಾನ, ಪಾಲಿಟೆಕ್ನಿಕ್, ಶಿಕ್ಷಕರ ತರಬೇತಿ, ಲಲಿತಕಲೆ ಮುಂತಾದ ಮೂಲಭೂತ ಶಿಕ್ಷಣ ಸಂಸ್ಥೆಗಳು ಜನ್ಮ ತಾಳಿ ವಿದ್ಯಾ ಪ್ರಗತಿಗೆ ಕಾರಣವಾಗಿವೆ.

ದಾವಣಗೆರೆ ಆರಂಭದಲ್ಲಿ ಸಣ್ಣ ಹಳ್ಳಿಯಾಗಿತ್ತು. ಕ್ರಮೇಣ ತ್ವರಿತಗತಿಯಲ್ಲಿ ಬೆಳವಣಿಗೆ ಕಂಡಿತು. ಆದ್ದರಿಂದ ಇಲ್ಲಿ ವಾಸಿಸುತ್ತಿರುವವರು ಯಾರು? ಎಂಬ ಪ್ರಶ್ನೆ ಸಹಜವಾಗಿ ಉದಯಿಸುತ್ತದೆ. ಡಿ.ಸಿ.ಎಂ. ಗಿರಣಿಯ ಸ್ಥಾಪಕರಾದಿಯಾಗಿ (ರಾಜನಹಳ್ಳಿ ಹನುಮಂತಪ್ಪ) ಬಹಳಷ್ಟು ಜನರು ನಗರ ನೆರೆಯ ಗ್ರಾಮಗಳಿಂದ ಬಂದು ನೆಲೆಸಿದ್ದು ಇಲ್ಲಿಯವರೇ ಆಗಿದ್ದಾರೆ. ಈ ನಗರದ ಉದ್ಯಮಿಗಳು, ಶಿಕ್ಷಣ, ಆರೋಗ್ಯ ಮುಂತಾದ ಕ್ಷೇತ್ರದ ದಾನಿಗಳನ್ನು ಗಮನಿಸಿದಾಗ ಇವರೆಲ್ಲಾ ಬೇರೆ ಗ್ರಾಮ/ಊರುಗಳಿಂದ ಬಂದವರೆ. ಉದಾಹರಣೆಗೆ ಶಾಮನೂರು, ರಾಜನಹಳ್ಳಿ, ಚನ್ನಗಿರಿ, ಚಿಗಟೇರಿ, ಮಾಗನೂರು, ಅಜ್ಜಂಪುರ ಮುಂತಾದ ಮನೆತನಗಳ೦. ಇವರು ಬೇರೆಡೆಯಿಂದ ಬಂದರೂ ನಗರದ ಸರ್ವತೋಮುಖ ಪ್ರಗತಿಗೆ ತಮ್ಮ ಕಾಣಿಕೆನೀಡಿದ್ದಾರೆ. ಇಲ್ಲಿರುವ ಬಹುತೇಕ ಶಿಕ್ಷಣ ಸಂಸ್ಥೆಗಳು, ಆರೋಗ್ಯ ಕೇಂದ್ರಗಳು ಮೇಲಿನ ದಾನಿಗಳ ಕೊಡುಗೆಗಳಾಗಿವೆ.

ಇಂಥ ಚಾರಿತ್ರಿಕ ಹಿನ್ನೆಲೆಯುಳ್ಳ ದಾವಣಗೆರೆ ನಗರದಲ್ಲಿ, ಇಲ್ಲಿನ ಭೌಗೋಳಿಕ ಪ್ರಭಾವದಲ್ಲಿ ಬೃಹತ್ ಕೈಗಾರಿಕೆಗಳು ಜನ್ಮವೆತ್ತಿದವು. ಅವುಗಳಲ್ಲಿ ಹತ್ತಿ ಕೈಗಾರಿಕೆಗಳು ಅಂತರಾಷ್ಟ್ರೀಯ ಖ್ಯಾತಿ ಪಡೆದವು. ದಾವಣಗೆರೆಯು ಬಟ್ಟೆವ್ಯಾಪಾರದ ಹಿನ್ನೆಲೆಯಲ್ಲಿ 'ಕರ್ನಾಟಕದ ಮ್ಯಾಂಚೆಸ್ಟರ್' ಎಂಬ ಸ್ಥಾನ ಗಳಿಸಿತು. ಆಬರೆ ೧೯೮೦ರ ದಶಕದಲ್ಲಿ ಅವು ನಾನಾಕಾರಣಗಳಿಂದ ಅವನತಿ ಹಾದಿ ಹಿಡಿದವು. ಅಲ್ಲಿ ದುಡಿಯುತ್ತಿದ್ದ ಕಾರ್ಮಿಕರು ಉದ್ಯೋಗ ಕಳೆದುಕೊಂಡು ಅತಂತ್ರಸ್ಥಿತಿ ತಲುಪಿದರು. ಆದರೆ ಕೈಗಾರಿಕೆಗಳು ವಿನಾಶದ ಹಾದಿ ಕ್ರಮಿಸುತ್ತಿದ್ದಂತೆಯೇ, ಇಲ್ಲಿ ಶಿಕ್ಷಣವು ದೊಡ್ಡ ಪ್ರಮಾಣದಲ್ಲಿ ಪ್ರಗತಿ ಕಂಡು ತನ್ನ ಹಿಂದಿನ ಅಂತರರಾಷ್ಟ್ರೀಯ ಖ್ಯಾತಿಯನ್ನು ಉಳಿಸಿಕೊಂಡಿದೆ.

ಕೊನೆಟಿಪ್ಪಣಿಗಳು

೧. ಹೆಚ್.ಎಸ್. ನಾಗರಾಜ್ (ನಿರ್ದೇಶಕರು), ಚಿತ್ರದುರ್ಗ ಜಿಲ್ಲೆಯ ಅಂಕಿ ಅಂಶಗಳ ನೋಟ ೧೯೮೮-೮೯, ಚಿತ್ರದುರ್ಗ, ಪುಟ ೬

೨. ಹಾ.ಮಾ. ನಾಯಕ, (ಪ್ರ.ಸಂ), ಕನ್ನಡ ವಿಶ್ವಕೋಶ, ಸಂ.೬, ೧೯೭೭, ಪುಟ ೫೭೯

೩. ದಿಕ್ಸೂಚಿ, ದಾವಣಗೆರೆ-ವಾಣಿಜ್ಯಕೇಂದ್ರ, ಡಿಸೆಂಬರ್ ೧೯೯೮, ಪುಟ ೭೪

೪. ಅಹಲ್ಯ ಎಸ್. ಭಟ್ (ನಿರ್ದೇಶಕರು), ದಾವಣಗೆರೆ ಜಿಲ್ಲೆಯ ಅಂಕಿ ಅಂಶಗಳ ನೋಟ ೧೯೯೭-೯೮, ಪುಟ ೧೮

೫. ಟಿ. ಗಿರಿಜ, ಹೆಚ್.ಜಿ. ಶೋಭಾ, (ಸಂ). ಕರ್ಪೂರ ಸ್ಮರಣ ಸಂಚಿಕೆ, ೨೦೦೨, ಪುಟ ೩೫

೬. ಬಿ.ಎನ್. ಸತ್ಯನ್, ಗೆಜೆಟೀಯರ್ ಆಫ್ ಇಂಡಿಯಾ, ಚಿತ್ರದುರ್ಗ ಜಿಲ್ಲೆ, ೧೯೬೭, ಪುಟ ೨೦೩

೭. ಟಿ. ಗಿರಿಜ, ದಾವಣಗೆರೆ ಸ್ಥಳನಾಮದ ಬಗ್ಗೆ ಒಂದು ಸಮೀಕ್ಷೆ, ಇತಿಹಾಸ ದರ್ಶನ, ಸಂ ೧೫, ೨೦೦೦, ಪುಟ ೨೦೭

೮. ಅದೇ.

೯. ಅದೇ

೧೦. ಟಿ. ಗಿರಿಜ, ಹೆಚ್.ಜಿ.ಶೋಭಾ (ಸಂ), ಕರ್ಪೂರ, ಸ್ಮರಣ ಸಂಚಿಕೆ, ದಾವಣಗೆರೆ ೨೦೦೦, ಪುಟ ೩೬

೧೧. ಟಿ. ಗಿರಿಜ, ದಾವಣಗೆರೆ ಇದು ನಮ್ಮ ಜಿಲ್ಲೆ, ೨೦೦೧ ಪುಟ ೨೯

೧೨. ಅದೇ, ಪುಟ ೩೦

೧೩. ಟಿ. ಗಿರಿಜ, ದಾವಣಗೆರೆ ಸ್ಥಳ ನಾಮದ ಬಗ್ಗೆ ಒಂದು ಸಮೀಕ್ಷೆ, ಇತಿಹಾಸ ದರ್ಶನ, ಸಂ.೧೫, ೨೦೦೦, ಪುಟ. ೨೦೮

೧೪. ಎಫಿಗ್ರಾಫಿಯಾ ಕರ್ನಾಟಿಕಾ, ಸಂಪುಟ ೧೧, ಚಿತ್ರದುರ್ಗ ಶಾಸನ ಸಂಖ್ಯೆ ೧೬೧, ಪುಟ. ೨೧೦

೧೫. ಅದೇ, ಶಾಸನ ಸಂಖ್ಯೆ ೧೨೪, ಪುಟ ೧೮೪

೧೬. ಅದೇ, ಶಾಸನ ಸಂಖ್ಯೆ ೧೭, ಪುಟ ೭೨

೧೭. ಟಿ. ಗಿರಿಜ, ದಾವಣಗೆರೆ ಇದು ನಮ್ಮ ಜಿಲ್ಲೆ, ಪುಟ ೨೩, ೨೦೦೧

೧೮. ಹಾ.ಮಾ. ನಾಯಕ, (ಪ್ರ.ಸಂ.) ಕನ್ನಡ ವಿಶ್ವಕೋಶ, ಸಂ.೯, ಪುಟ ೫೭೯

೧೯. ಎಪಿಗ್ರಾಫಿಯಾ ಕರ್ನಾಟಿಕಾ, ಸಂಪುಟ ೧೧, ಚಿತ್ರದುರ್ಗ ಶಾಸನಸಂಖ್ಯೆ ೯೦, ಪು ೧೬೨

೨೦. ಅದೇ, ಚಿತ್ರದುರ್ಗ ಶಾಸನಸಂಖ್ಯೆ ೧೨೯, ಪುಟ ೧೮೮

೨೧. ಹಾ.ಮಾ. ನಾಯಕ (ಪ್ರ.ಸಂ.) ಕನ್ನಡ ವಿಶ್ವಕೋಶ, ಸಂ.೬, ಪುಟ ೫೮೦

೨೨. ಎಫಿಗ್ರಾಫಿಯಾ ಕರ್ನಾಟಿಕಾ, ಸಂಪುಟ ೦೭, ಶಿವಮೊಗ್ಗ ಜಿಲ್ಲೆ ಶಾಸನ ಸಂಖ್ಯೆ ೨೮, ಪುಟ ೪೩೭

೨೩. ಟಿ. ಗಿರಿಜ, ಹೆಚ್.ಜಿ. ಶೋಭಾ, (ಸಂ) ಕರ್ಪೂರ, ಸ್ಮರಣ ಸಂಚಿಕೆ, ದಾವಣಗೆರೆ ೨೦೦೦, ಪುಟ ೩೬

೨೪. ಬಿ.ಎನ್. ಸತ್ಯನ್, ಗೆಜೆಟೀಯರ್ ಆಫ್ ಇಂಡಿಯಾ, ಚಿತ್ರದುರ್ಗ ಜಿಲ್ಲೆ, ೧೯೬೭, ಪುಟ ೩೯೫

೨೫. ಟಿ. ಗಿರಿಜ, ದಾವಣಗೆರೆ ಇದು ನಮ್ಮ ಜಿಲ್ಲೆ, ಪುಟ ೨೭, ೨೦೦೧

೨೬. ಫ್ರಾನ್ಸಿಸ್ ಬುಕನನ್, ಎ ಜರ್ನಿ ಫ್ರಮ್ ಮದ್ರಾಸ್ ಥ್ರೂ ದಿ ಕಂಟ್ರೀಸ್ ಆಫ್ ಮೈಸೂರು, ಕೆನರ ಅಂಡ್ ಮಲಬಾರ್, ಸಂಪುಟ ೧, ಪುಟ ೩೩೦, ೧೯೮೮

೨೭. ಟಿ. ಗಿರಿಜ, ದಾವಣಗೆರೆ ಇದು ನಮ್ಮ ಜಿಲ್ಲೆ, ಪುಟ ೫೪, ೨೦೦೧

೨೮. ಡಾ. ಎಂ.ಜಿ. ಈಶ್ವರಪ್ಪ (ಸಂ.) ಶತಮಾನದ ದಾವಣಗೆರೆ, ಪುಟ ೬, ೨೦೦೧

೨೯. ಅದೇ

೩೦. ಸೂರ್ಯನಾಥ್ ಯು.ಕಾಮತ್ (ಸಂ), ಕರ್ನಾಟಕ ಸ್ಟೇಟ್ ಗೆಜೆಟೀಯರ್, ಪಾರ್ಟ್ II, ೧೯೮೩ ಪುಟ. ೪೮

೩೧. ಬಿ.ಎನ್. ಸತ್ಯನ್, ಗೆಜೆಟೀಯರ್ ಆಫ್ ಇಂಡಿಯಾ, ಚಿತ್ರದುರ್ಗ ಜಿಲ್ಲೆ, ೧೯೬೭, ಪುಟ ೧೫೩

೩೨. ಅದೇ, ಪುಟ ೨೧೩

ಅಧ್ಯಾಯ ೩

ದಾವಣಗೆರೆ ನಗರದ ಹತ್ತಿಗಿರಣಿಗಳ ಉಗಮ

ದಾವಣಗೆರೆ ನಗರದ ಹತ್ತಿಗಿರಣಿಗಳ ಉಗಮ

ಹಿನ್ನೆಲೆ

ಭಾರತದ ದೇಶಿಯ ಮತ್ತು ಅಂತರ್ ದೇಶೀಯ ವ್ಯಾಪಾರದ ಪರಂಪರೆಯಲ್ಲಿ ಹತ್ತಿ ಬಟ್ಟೆಯ ಉದ್ಯಮವು ೧೮೩. ಕೃಷಿಯಾಧಾರಿತ ರಾಷ್ಟ್ರವಾದ ಇಲ್ಲಿನ ಕೈಗಾರಿಕೆಗಳು ಅಲ್ಲಿನ ಉತ್ಪನ್ನಗಳನ್ನೇ ಹೆಚ್ಚು ಅವಲಂಬಿಸಿವೆ. ಭಾರತದ ಅರ್ಥವ್ಯವಸ್ಥೆಯಲ್ಲಿ ವ್ಯವಸಾಯ ಪ್ರಧಾನ ವೃತ್ತಿಯಾದರೆ, ಕೈಗಾರಿಕೆಗಳು ಉಪಪ್ರಧಾನ ವೃತ್ತಿಗಳಾಗಿವೆ. ವ್ಯವಸಾಯೋತ್ಪನ್ನಗಳಲ್ಲಿ ಒಂದಾದ ಹತ್ತಿಗೆ ದೀರ್ಘಕಾಲದ ಇತಿಹಾಸವಿದ್ದು, ಇದರಿಂದ ಉತ್ಪಾದಿಸುವ ಬಟ್ಟೆಗಳು ವಿಶ್ವಮಾರುಕಟ್ಟೆಗಳಿಸಿದ್ದವು. ಭಾರತದ ಪ್ರಾಚೀನ ಕೈಗಾರಿಕೆಗಳಲ್ಲಿ ಹತ್ತಿ ಉದ್ಯಮವೂ ಒಂದು. ಹತ್ತಿ ಗಿರಣಿಗಳೆಂದರೆ ನೂಲು ತಯಾರಿಕೆ, ನೇಯ್ಗೆ, ಮುದ್ರಣ, ಒಣಗಿಸುವಿಕೆ ಮುಂತಾದ ಎಲ್ಲಾ ಪ್ರಕ್ರಿಯೆಗಳನ್ನೂ ಒಳಗೊಂಡಿರುತ್ತದೆ. ಈ ಹಿನ್ನೆಲೆಯುಳ್ಳ ಬಟ್ಟೆ ಕೈಗಾರಿಕೆಗಳು ಪ್ರಾಚೀನ, ಮಧ್ಯಕಾಲೀನ ಅವಧಿಯ ಆರ್ಥಿಕ ರಂಗದಲ್ಲಿ ಗಮನಾರ್ಹ ಸ್ಥಾನ ಗಳಿಸಿದ್ದು, ವಸಾಹತುಶಾಹಿ ಕಾಲದಲ್ಲಿ ಹಿಂದಿದ್ದ ಸ್ಥಾನಮಾನಗಳನ್ನು ಕಳೆದುಕೊಳ್ಳಬೇಕಾಯಿತು. ಬ್ರಿಟಿಷರು ಈ ಕೈಗಾರಿಕೆಗಳ ನಾಶದತ್ತ ಕ್ರಮಗಳನ್ನು ಕೈಗೊಂಡರು. ನಂತರದ ಕಾಲಘಟ್ಟದಲ್ಲಿ ಈ ಉದ್ಯಮವು ಚೇತರಿಸಿಕೊಂಡರೂ ೧೯೬೦ರ ದಶಕದಲ್ಲಿ ಬಹಳಷ್ಟು ಹತ್ತಿ ಗಿರಣಿಗಳು ವಿನಾಶದ ಹಾದಿಯನ್ನು ಕ್ರಮಿಸಿದವು.

ಕ್ರಿ.ಪೂ. ೨೦೦೦ದಲ್ಲೇ ಬಟ್ಟೆಗಳಿಗೆ ಬಣ್ಣ ಹಾಕಿ ಒಣಗಿಸುವ ಅತ್ಯಾಧುನಿಕ ತಂತ್ರಜ್ಞಾನವನ್ನು ಬಳಸಿಕೊಳ್ಳಲಾಗಿತ್ತು ಎಂದು ಮಹೆಂಜೊದಾರೋವಿನಲ್ಲಿ ದೊರೆತಿರುವ ಪ್ರಾಕ್ತನಾಧಾರಗಳು ದೃಢಪಡಿಸುತ್ತವೆ. ಆಂಧ್ರ ಮತ್ತು ತಮಿಳುನಾಡಿನ ಬಂದರುಗಳಿಂದ ದೊಡ್ಡ ಹಡಗುಗಳಲ್ಲಿ ಚೀನಾ ಮತ್ತು ದಕ್ಷಿಣ-ಪೂರ್ವ ಏಷ್ಯಾ ರಾಷ್ಟ್ರಗಳಿಗೆ ಭಾರತದ ಹತ್ತಿ ಬಟ್ಟೆಗಳು ರಫ್ತಾಗುತ್ತಿದ್ದವು ಎಂಬುದು ಮಾರ್ಕೊಪೋಲೊನ ಬರವಣಿಗೆಗಳಲ್ಲಿ ಕಂಡುಬರುತ್ತವೆ. ಬೌದ್ಧ ಸಾಹಿತ್ಯದಲ್ಲಿ ತಿಳಿಸಿರುವಂತೆ ಕ್ರಿ.ಪೂ. ೫೦೦ಕ್ಕೂ ಮೊದಲೇ ಭಾರತೀಯರಿಗೆ ಉಣ್ಣೆ ಸರಕುಗಳನ್ನು ಉತ್ಪಾದಿಸುವ ಜ್ಞಾನವಿತ್ತೆಂದು ಮಾಹಿತಿ ಇದೆ.

ಬ್ರಾಹ್ಮಣರ ಜನಿವಾರ ಹತ್ತಿಯಿಂದ ತಯಾರಿಸಲ್ಪಡುತ್ತಿತ್ತೆಂದು ಮನುಸ್ಮೃತಿ(Laws of Manu)ಯಿಂದ ತಿಳಿದುಬರುತ್ತದೆ.[೧] ಡಾಕಾ ಮಸ್ಲಿನ್ ಬಟ್ಟೆಯು ಭಾರತದ ಎಲ್ಲಾ ಹತ್ತಿ ಉತ್ಪಾದನೆಗಳಿಗಿಂತಲೂ ಉತ್ತಮ ಗುಣಮಟ್ಟದಾಗಿತ್ತು.[೨] ಇಷ್ಟೆಲ್ಲಾ ಪ್ರಾಚೀನತೆಯುಳ್ಳ ಈ ಉದ್ಯಮವು ಆಂಧ್ರಪ್ರದೇಶದ ಮಚಲಿಪಟ್ಟಣ, ತಮಿಳುನಾಡಿನ ಆರ್ಕಾಟ್, ಗುಜರಾತಿನ ಅಹಮದಾಬಾದ್, ಮಹಾರಾಷ್ಟ್ರದ ಟ್ರಾಂಬೆ, ಉತ್ತರಪ್ರದೇಶದ ವಾರಣಾಸಿ ಮುಂತಾದ ಕಡೆ ತನ್ನ ನೆಲೆಯನ್ನು ಕಂಡುಕೊಂಡಿತ್ತು.

ಕ್ರಿ.ಶ. ೧೮೧೮ರಲ್ಲಿ ಭಾರತದಲ್ಲಿ ಮೊಟ್ಟಮೊದಲು ಹತ್ತಿಗಿರಣಿಯನ್ನು ಕಲ್ಕತ್ತಾದಲ್ಲಿ ಸ್ಥಾಪಿಸಲಾಯಿತು.[೩] ಯಂತ್ರಗಳ ಆಮದು ಮತ್ತು ಉತ್ಪಾದಿತ ಸರಕುಗಳ ರಫ್ತಿನ ಹಿನ್ನೆಲೆಯಲ್ಲಿ ಬಂದರುಗಳಿದ್ದ ಬಾಂಬೆ, ಅಹಮದಾಬಾದ್‌ಗಳಲ್ಲಿ ಹೆಚ್ಚು ಹತ್ತಿ ಗಿರಣಿಗಳು ಕೇಂದ್ರೀಕೃತವಾಗಿದ್ದವು. ಬಟ್ಟೆಯ ಉತ್ಪಾದನೆಗೆ ಸಹಕಾರಗಳೆಂದರೆ ಕಚ್ಚಾ ಪದಾರ್ಥಗಳಾದ ಹತ್ತಿ, ರೇಷ್ಮೆ, ಸೆಣಬುಗಳಾಗಿದ್ದವು.

ವಸಾಹಾತುಶಾಹಿ ವ್ಯವಸ್ಥೆಗೂ ಮೊದಲು ಬಟ್ಟೆಗಳು ಕೈಮಗ್ಗಗಳಿಂದ ತಯಾರಿಸಲ್ಪಡುತ್ತಿದ್ದವು. ಇವು ಪ್ರಪಂಚದಲ್ಲೇ ಗುಣಮಟ್ಟಕ್ಕೆ ಮಾದರಿಯಾಗಿದ್ದು ಕೈಗಾರಿಕಾ ಕ್ರಾಂತಿ ಕಾಲದಲ್ಲಿ ಬ್ರಿಟನ್ ಮತ್ತು ಜರ್ಮನಿಗಳಲ್ಲಿ ಯಂತ್ರಗಳ ತಯಾರಿಕೆಗೆ ಹಿನ್ನೆಲೆಯಾದವು. ವಸಾಹತುಶಾಹಿ ಪದ್ಧತಿಯು ಭಾರತೀಯ ಹತ್ತಿ ಬಟ್ಟೆಯ ಸ್ಥಾನಮಾನಗಳನ್ನು ಪಲ್ಲಟಗೊಳಿಸಿತು. ಉನ್ನತ ಗುಣಮಟ್ಟದ ಭಾರತದ ಬಟ್ಟೆ ಉತ್ಪನ್ನಗಳೊಂದಿಗೆ ಸ್ಪರ್ಧಿಸುವುದು ಕಠಿಣವೆಂದು ಬ್ರಿಟಿಷರು ಅವುಗಳ ನಾಶದತ್ತ ಕ್ರಮ ತೆಗೆದುಕೊಳ್ಳಲಾರಂಭಿಸಿದರು. ಈ ಹಿನ್ನೆಲೆಯಲ್ಲಿ ವ್ಯವಸಾಯ ಮತ್ತು ಉತ್ಪಾದನಾ ರಾಷ್ಟ್ರವಾದ ಭಾರತವನ್ನು ಪ್ರಧಾನವನ್ನಾಗಿಸಿದರು. ತಮ್ಮ ರಾಜಕೀಯ ಶಕ್ತಿಯನ್ನು ಬೆಳಸಿಕೊಂಡ ಇವರು ಭಾರತದ ಹತ್ತಿ ಉತ್ಪಾದನೆಗಳ ಮೇಲೆ ೭೦% ರಿಂದ ೮೦% ರಷ್ಟು ತೆರಿಗೆ ವಿಧಿಸಿ ತಮ್ಮ ಕೈಗಾರಿಕೆಗಳ ರಕ್ಷಣೆಗಳಿಗೆ ಒತ್ತುನೀಡಿದರು. ಲಂಕಾಷೈರ್‌ನ ಯಂತ್ರದ ಬಟ್ಟೆಗಳು ಮತ್ತು ವ್ಯಾಪಾರನೀತಿ ಭಾರತದ ಹತ್ತಿ ಕೈಗಾರಿಕೆಯನ್ನು ಕೊಂದುಹಾಕಿತು.[೪] ಈ ಮೂಲಕ ಬ್ರಿಟನ್ನಿನ ಬಟ್ಟೆಗಳು ಭಾರತದ ಮಾರುಕಟ್ಟೆಗೆ ಯಾವುದೇ ನಿರ್ಬಂಧವಿಲ್ಲದೆ ಬರುವಂತೆ ಮಾಡಿ, ಭಾರತದ ಬಟ್ಟೆಗಳನ್ನು ಬ್ರಿಟನ್ ಮಾರುಕಟ್ಟೆಯಿಂದ ಹೊರಗುಳಿಯುವಂತೆ ಕ್ರಮ ಜರಗಿಸಿದರು. ಈ ಎಲ್ಲಾ ರಾಷ್ಟ್ರ ಮಟ್ಟದ ಗಿರಣಿ ಚರಿತ್ರೆಯಿಂದ ಕರ್ನಾಟಕದ ಚರಿತ್ರೆ ಹೊರತಾಗಿಲ್ಲ. ೧೮೭೭ರಲ್ಲಿ ಬೆಂಗಳೂರಿನಲ್ಲಿ ಸ್ಥಾಪನೆಯಾದ ಬಿನ್ನಿಮಿಲ್ ರಾಜ್ಯದ ಪ್ರಥಮ ಹತ್ತಿ ಉದ್ಯಮವಾಗಿದೆ. ಅಂತೆಯೇ ೧೮೮೪ರಲ್ಲಿ ಗುಲ್ಬರ್ಗಾದಲ್ಲಿ ಸ್ಥಾಪನೆಯಾದ ಎಂ.ಎಸ್.ಕೆ ಮಿಲ್ ಎರಡನೇ ಉದ್ಯಮವಾಗಿದೆ. ರಾಜ್ಯವು ದೊಡ್ಡ ಪ್ರಮಾಣದ ಜವಳಿ ಉತ್ಪಾದನೆಯಲ್ಲಿ ಒಂದು ಶತಮಾನಕ್ಕೂ ಹೆಚ್ಚಿನ ಇತಿಹಾಸ ಹೊಂದಿದೆ. ಬೆಂಗಳೂರಿನ ಮಿನರ್ವ ಮಿಲ್, ರಾಜಾಮಿಲ್, ಬಿನ್ನಿಮಿಲ್, ಮೈಸೂರಿನ ಕೆ.ಆರ್.ಮಿಲ್, ಗೋಕಾಕ್‌ನಲ್ಲಿರುವ ಹತ್ತಿ ಮತ್ತು ಬಟ್ಟೆ ಗಿರಣಿ ಪ್ರಸಿದ್ಧವಾಗಿದ್ದವು.[೫] ಈ ಗಿರಣಿಗಳು ಸಾವಿರಾರು ಜನರಿಗೆ ಪ್ರತ್ಯಕ್ಷ ಮತ್ತು ಅಪ್ರತ್ಯಕ್ಷ ಉದ್ಯೋಗ ಒದಗಿಸುವ ಮೂಲಕ ವಾಣಿಜ್ಯ ಚಟುವಟಿಕೆಗಳಿಗೆ ದೊಡ್ಡ ಪ್ರಮಾಣದ ಚಾಲನೆ ನೀಡಿದ್ದವು.

ಪ್ರಸ್ತುತ ಅಧ್ಯಯನದ ಅವಧಿಯಲ್ಲಿ ದಾವಣಗೆರೆ ನಗರವು ಚಿತ್ರದುರ್ಗ ಜಿಲ್ಲೆಯಲ್ಲಿತ್ತು. ಇಲ್ಲಿ ಆಳರಸರ ಕಾಲದಲ್ಲಿ ಗುಡಿ ಕೈಗಾರಿಕೆಗಳು ವಿಕಾಸವಾದವು. ಅವುಗಳಲ್ಲಿ ಕೈಮಗ್ಗಗಳು, ಮಡಿಕೆ, ಆಭರಣಗಳು, ಕಂಬಳಿ, ಎಣ್ಣೆ ಗಿರಣಿ, ಚರ್ಮದ ವಸ್ತುಗಳನ್ನು ತಯಾರಿಸುವುದು ಮುಖ್ಯವಾಗಿವೆ. ಈ ಜಿಲ್ಲೆಯ ಕಪ್ಪು ಮಣ್ಣಿನಲ್ಲಿ ಹತ್ತಿಯನ್ನು ಹೇರಳವಾಗಿ ಬೆಳೆಯುತ್ತಿದ್ದರು.[೬] ಕಲ್ಕತ್ತಾ ಈಸ್ಟ್ ಇಂಡಿಯಾ ಕಂಪನಿಯ ಆದೇಶದ ಮೇರೆಗೆ ಚಿತ್ರದುರ್ಗ ಜಿಲ್ಲೆಯ ಕೆಲವು ಭಾಗಗಳಲ್ಲಿ ಪ್ರವಾಸ ಕೈಗೊಂಡಿದ್ದ ಫ್ರಾನ್ಸಿಸ್ ಬುಕನಾನ್ (ಹತ್ತೊಂಬತ್ತನೆಯ ಶತಮಾನದ ಆದಿಯಲ್ಲಿ) ತನ್ನ ವರದಿಯಲ್ಲಿ ಈ ವಿಷಯವನ್ನು ದೃಢಪಡಿಸುತ್ತಾನೆ. ಜಿಲ್ಲೆಯ ಪ್ರತಿಯೊಂದು ಗ್ರಾಮದಲ್ಲೂ ಕಡಿಮೆ ಎಂದರೆ ೩ ರಿಂದ ೪ ಕೈಮಗ್ಗಗಳು

ಹತ್ತಿ ಬಟ್ಟೆ ಕೈಗಾರಿಕೆಯಲ್ಲಿ ತೊಡಗಿವೆ, ದಾವಣಗೆರೆಯಲ್ಲಿ ಹತ್ತಿ ಬಟ್ಟೆ ತಯಾರಿಸುತ್ತಾರೆ[೬] ಎಂದು ತಿಳಿಸಿದ್ದಾನೆ. ಜಿಲ್ಲೆಯ ಮೊಳಕಾಲ್ಮೂರಿನಲ್ಲಿ ರೇಷ್ಮೆ ಸೀರೆ ತಯಾರಿಸಲಾಗುತ್ತದೆ. ಈ ಉತ್ಪನ್ನಗಳು ಇಂದಿಗೂ ಈ ಭಾಗದ ಜನರಲ್ಲಿ ಬೇಡಿಕೆ ಪಡೆದಿವೆ.

ಚಿತ್ರದುರ್ಗ ಜಿಲ್ಲೆಯಲ್ಲಿ ೧೯ ಹತ್ತಿ ಗಿರಣಿಗಳಿದ್ದು ಅವುಗಳಲ್ಲಿ ೦೮ ದಾವಣಗೆರೆಯಲ್ಲಿ, ೦೧ ಹರಿಹರದಲ್ಲೂ ಸ್ಥಾಪನೆಯಾಗಿತ್ತು.[೭] ಈ ಪ್ರದೇಶದಲ್ಲಿ ಬ್ರಿಟೀಷ್ ಪೂರ್ವ ಮತ್ತು ನಂತರ ಕಾಲಾವಧಿಯಲ್ಲಿ ಸ್ಥಳೀಯ ವ್ಯಾಪಾರಿಗಳೇ ಹತ್ತಿ ವ್ಯಾಪಾರದಲ್ಲಿ ತೊಡಗಿದ್ದರು. ಬಾಂಬೆ, ಕಲ್ಕತ್ತಾಗಳಂತೆ ಬ್ರಿಟೀಷ್ ವ್ಯಾಪಾರಿಗಳ ಪಾತ್ರ ಈ ಪ್ರದೇಶ ವ್ಯಾಪಾರದಲ್ಲಾಗಲಿ, ಗಿರಣಿಗಳ ಬಂಡವಾಳದ ಮೇಲಾಗಲಿ, ಇರಲಿಲ್ಲ. ಇಂತಹ ಚರಿತ್ರೆಯುಳ್ಳ ಚಿತ್ರದುರ್ಗದ ಕೈಗಾರಿಕಾ ರಂಗದಲ್ಲಿ ಸ್ವಾತಂತ್ರ ಪೂರ್ವ ಮತ್ತು ನಂತರ ಅವಧಿಯಲ್ಲಿ ಆರಂಭವಾದ ಹತ್ತಿ ಗಿರಣಿಗಳು ಬೆಳೆದು ವಿಕಾಸಗೊಂಡು ೧೯೯೦ರ ಕಾಲಕ್ಕೆ ತನ್ನ ಅಭಿವೃದ್ಧಿಯನ್ನು ಕಳೆದುಕೊಂಡವು.

೩.೧. ದಾವಣಗೆರೆ ಹತ್ತಿ ಗಿರಣಿಗಳ ಚರಿತ್ರೆ

ಮೈಸೂರು ಸಂಸ್ಥಾನವು ವಸಾಹತುಶಾಹಿ ಆಳ್ವಿಕೆಯಿಂದ ಸ್ವತಂತ್ರವಾಗಿತ್ತಾದರೂ ಅದರ ಆರ್ಥಿಕಾಭಿವೃದ್ಧಿಯ ದೃಷ್ಟಿಯಿಂದ ಹಲವು ಅಡ್ಡಿ ಆತಂಕಗಳಿದ್ದವು. ಕೈಗಾರಿಕಾಭಿವೃದ್ಧಿ ದೃಷ್ಟಿಯಲ್ಲಿ ಗಮನಿಸಿದಾಗ ಈ ಪ್ರದೇಶ ಬಹಳಷ್ಟು ಹಿಂದುಳಿದಿತ್ತು. ಕೋಲಾರದ ಚಿನ್ನದ ಗಣಿ, ಕಾಫಿ, ಅಡಿಕೆ ತೋಟ, ಬೆಂಗಳೂರಿನ ಹತ್ತಿ ಗಿರಣಿ ಬಿಟ್ಟರೆ ಬೃಹತ್ ಕೈಗಾರಿಕೆಗಳು ಸ್ಥಾಪಿತವಾಗಿರಲಿಲ್ಲ. ಮೈಸೂರು ಸಂಸ್ಥಾನದ ದಿವಾನರಾಗಿದ್ದ ಸರ್.ಎಂ. ವಿಶ್ವೇಶ್ವರಯ್ಯನವರು ಕೈಗಾರಿಕಾ ಬೆಳವಣಿಗೆಗೆ ಪ್ರೋತ್ಸಾಹ ನೀಡಿದರು. ಅರ್ಹತೆ ಹಾಗೂ ದಕ್ಷತೆಯ ಪ್ರತಿಪಾದಕರಾಗಿದ್ದ ಅವರಿಗೆ ಕೈಗಾರಿಕಾ ಅಭಿವೃದ್ಧಿ ವಲಯದಲ್ಲಿ ರಾಷ್ಟ್ರವು ನಿಧಾನ ನಡಿಗೆಯಲ್ಲಿ ಹೋಗುತ್ತಿರುವುದು ಅಸಮಾಧಾನ ಉಂಟುಮಾಡಿತ್ತು.[೮] ಇವರು ಮತ್ತು ಮಿರ್ಜಾ ಇಸ್ಮಾಯಿಲ್ ಅವರ ಪ್ರೋತ್ಸಾಹದ ಹಿನ್ನೆಲೆಯಲ್ಲಿ ಕೈಗಾರಿಕೆಗಳ ಬೆಳವಣಿಗೆಗೆ ಚಾಲನೆ ದೊರೆಯಿತು. ದಾವಣಗೆರೆ ನಗರದಲ್ಲೂ ಬಂಡವಾಳಶಾಹಿಗಳು ಕೈಗಾರಿಕೆಗಳನ್ನು ಸ್ಥಾಪಿಸಲು ಆರಂಭಿಸಿದರು. ಹತ್ತಿ, ಎಣ್ಣೆ, ಅಕ್ಕಿ ಗಿರಣಿಗಳು ಕೈಗಾರಿಕಾ ನಕ್ಷೆಯಲ್ಲಿ ಗುರುತಿಸಿಕೊಂಡವು. ಇವುಗಳಲ್ಲಿ ಹತ್ತಿ ಗಿರಣಿಗಳು ಪ್ರಧಾನ ಪಾತ್ರ ವಹಿಸಿ ಉದ್ಯೋಗ ಸೃಷ್ಟಿ ಮತ್ತು ಆರ್ಥಿಕಾಭಿವೃದ್ಧಿಗೆ ಕೊಡುಗೆ ಸಲ್ಲಿಸಿದವು. ಆದರೆ ಕ್ರಮೇಣ ಕೆಲವು ಹತ್ತಿ ಗಿರಣಿಗಳು ಅವಸಾನದ ಹಂತವನ್ನು ತಲುಪಿದ್ದು ದುರಾದೃಷ್ಟಕರ ಸಂಗತಿಯಾಗಿದೆ.

ಈ ಅಧ್ಯಾಯದಲ್ಲಿ ಹತ್ತಿ ಗಿರಣಿಗಳ ಚರಿತ್ರೆಯನ್ನು

೧. ಅಳಿದಿರುವ

೨. ಉಳಿದಿರುವ

೩. ಅವಸಾನದ ಅಂಚಿನಲ್ಲಿರುವ ಗಿರಣಿಗಳು ಎಂಬ ಮೂರು ಭಾಗಗಳಲ್ಲಿ ಚರ್ಚಿಸಲಾಗುವುದು. ದಾವಣಗೆರೆ ಪರಿಸರದಲ್ಲಿ ಅಂತಹ ಒಟ್ಟು ೮ ಹತ್ತಿ ಗಿರಣಿಗಳು ಇವೆ. ಅವುಗಳೆಂದರೆ :

೧. ಅಳಿದಿರುವ ಗಿರಣಿಗಳೆಂದರೆ, ದಾವಣಗೆರೆ ಹತ್ತಿಗಿರಣಿ, ಶಂಕರ್, ಚಿಗಟೇರಿ, ಸಿದ್ದೇಶ್ವರ ಮತ್ತು ಚಂದ್ರೋದಯ.

೨. ಅಸ್ಥಿತ್ವ ಉಳಿಸಿಕೊಂಡಿರುವ ಗಿರಣಿಗಳೆಂದರೆ, ಆಂಜನೇಯ ಮತ್ತು ಗಣೇಶ ಹತ್ತಿಗಿರಣಿಗಳು.

೩. ಅವಸಾನದ ಅಂಚಿನಲ್ಲಿರುವ ಗಿರಣಿಯ ಸಾಲಿನಲ್ಲಿ ಯಲ್ಲಮ್ಮ ಹತ್ತಿ ಗಿರಣಿ ಇರುತ್ತವೆ.

ಇವುಗಳಲ್ಲಿ ಮೊದಲು ಅಳಿದಿರುವ ಗಿರಣಿಗಳ ಚರಿತ್ರೆಯನ್ನು ಗಮನಿಸಿದರೆ ದಾವಣಗೆರೆ ಹತ್ತಿ ಗಿರಣಿ (ಡಿ.ಸಿ.ಎಂ) ಗೋಚರಿಸುತ್ತದೆ.

೧. ದಿ ದಾವಣಗೆರೆ ಕಾಟನ್ ಮಿಲ್ಸ್ ಲಿಮಿಟೆಡ್

ದಾವಣಗೆರೆ ಪರಿಸರದ ದೊಡ್ಡ ಗಿರಣಿಯಾದ ಡಿ.ಸಿ.ಎಂ. ೨೨.೬.೧೯೩೬ರಲ್ಲಿ ಸ್ಥಾಪನೆಯಾಗಿ ೧೯೩೯ರಲ್ಲಿ ಉತ್ಪಾದನೆಯನ್ನು ಆರಂಭಿಸಿತು.[೧೦] ಗಿರಣಿಯು ಉದ್ಯೋಗ ನೀಡುವಿಕೆಯಲ್ಲಿ, ಕಚ್ಚಾ ಸಾಮಗ್ರಿ ಬಳಸುವಲ್ಲಿ, ತನ್ನ ಕಾರ್ಮಿಕರಿಗೆ ಸೌಲಭ್ಯ ನೀಡುವಲ್ಲಿ ಗುರುತಿಸಬಹುದಾದ ಸ್ಥಾನದಲ್ಲಿತ್ತು. ಗಿರಣಿಯು ೧೦ ಲಕ್ಷ ಬಂಡವಾಳದೊಂದಿಗೆ ೧೧,೨೦೦ ಸ್ಪಿಂಡಲ್ಸ್ ಸಾಮರ್ಥ್ಯದಿಂದ ಪ್ರಾರಂಭಿಸಿತು.[೧೧] ಮೈಸೂರು ಸರ್ಕಾರ ಕೈಗಾರಿಕಾ ಬೆಳವಣಿಗೆಗೆ ಪ್ರೋತ್ಸಾಹ ಕೊಡುವ ಹಿನ್ನೆಲೆಯಲ್ಲಿ ವಿದ್ಯುತ್ ಮತ್ತು ಭೂಮಿಯ ಮೇಲೆ ರಿಯಾಯಿತಿ ನೀಡಿತು. ಅದೇ ಸ್ಥಾಪಕರು ದಾವಣಗೆರೆಯಲ್ಲಿ ೧೯೨೫ರ ಸುಮಾರಿಗೆ ಸಣ್ಣದಾಗಿ ಅರಳೆ ವ್ಯಾಪಾರ ಮಾಡುತ್ತಿದ್ದ ರಾಜನಹಳ್ಳಿ ಹನುಮಂತಪ್ಪನವರು.[೧೨] ಹತ್ತಿ ಗಿರಣಿ ಸ್ಥಾಪಕರಿಗೆ ಗಾಂಧಿ ವಿಚಾರಧಾರೆಗಳೇನಾದರೂ ಪ್ರಭಾವ ಬೀರಿದ್ದವೆ ಎಂದು ಗಮನಿಸಿದರೆ, ಎಲ್ಲಾ ಗಿರಣಿಗಳ ಸ್ಥಾಪಕರ ಹಿನ್ನೆಲೆ ನೋಡಿದಾಗ ಅವರೆಲ್ಲಾ ವ್ಯಾಪಾರಿ ಮನೋಭಾವದವರು. ಆದ್ದರಿಂದ ಗಾಂಧಿ ವಿಚಾರ ಧಾರೆ ಪ್ರಭಾವ ಬೀರದೆ ಲಾಭದ ಹಿನ್ನೆಲೆ ಹೆಚ್ಚಾಗಿ ಕಂಡುಬರುತ್ತದೆ. ಉದ್ಯೋಗ ಸೃಷ್ಟಿಯ ಹಿನ್ನೆಲೆಯಲ್ಲಿ ನೋಡಿದಾಗ ೧೯೪೦ರಲ್ಲಿ ೭೩೩ ಕಾರ್ಮಿಕರಿದ್ದರೆ ೧೯೭೦ರ ದಶಕದಲ್ಲಿ ೧೯೫೬ ಕಾರ್ಮಿಕರಿಗೆ ಉದ್ಯೋಗ ನೀಡಿತ್ತು.[೧೩] ದೇಶ, ವಿದೇಶಗಳಲ್ಲಿ ಈ ಗಿರಣಿಯು ಉತ್ಪಾದಿಸುತ್ತಿದ್ದ ಉತ್ಪನ್ನಗಳಿಗೆ ಮಾರುಕಟ್ಟೆಯಿತ್ತು. ಈ ಭಾಗದ ಜನರಿಗೆ ಈ ಗಿರಣಿಯು ಜೀವ ನೀಡಿದ್ದ ಗಿರಣಿಯಾಗಿತ್ತು. ೩೧.೩.೧೯೮೮ರ ಕಾಲಕ್ಕೆ ೨,೫೯೪.೧೧ ಲಕ್ಷ ರೂ.ಗಳ ವಿದೇಶಿ ವ್ಯಾಪಾರ ವ್ಯವಹಾರ ನೆಡೆಸಿ[೧೪] ಮಹತ್ವ ಪಡೆದುಕೊಂಡಿದ್ದ ಗಿರಣಿಯು ೧೯೮೦ರ ದಶಕದಲ್ಲಿ ನಷ್ಟ ಅನುಭವಿಸಲು ಆರಂಭಿಸಿತು. ಕಾರ್ಮಿಕರ ಸಂಖ್ಯೆಯನ್ನು ಹಂತ ಹಂತವಾಗಿ ಕಡಿಮೆ ಮಾಡುತ್ತಾ ಸ್ವಯಂ ನಿವೃತ್ತಿ ಯೋಜನೆಯನ್ನು ಜಾರಿಗೊಳಿಸಲಾಯಿತು. ನಷ್ಟದ ಹಿನ್ನೆಲೆಯಲ್ಲಿ ಕಾರ್ಖಾನೆಯನ್ನು ಮುಂಬೈನ ಗೋಕುಲ್‌ದಾಸ್ ಮಿಲ್ಸ್‌ನವರಿಗೆ ಮಾರಲಾಯಿತು.[೧೫] ನಂತರ ೧೯೯೯-೨೦೦೦ದ ವರೆಗೂ ಸತತ ನಷ್ಟ ಅನುಭವಿಸಿದ ಗಿರಣಿಯು ಶಾಶ್ವತವಾಗಿ ಇತಿಹಾಸದ ಗರ್ಭದಲ್ಲಿ ಲೀನವಾಯಿತು. ಗಿರಣಿಯು ಮುಚ್ಚುವಾಗ ಸರ್ಕಾರದಿಂದ ಅನುಮತಿ ಪಡೆಯಲಿಲ್ಲ. ನಗರದ ಪಿ.ಜೆ. ಬಡಾವಣೆಯ ಡಿ.ಸಿ.ಎಂ ಆಡಳಿತ ಕಛೇರಿಯ ನೌಕರರಾದ ಅರುಣ್‌ಕುಮಾರ್ ಅವರು ತಿಳಿಸುವಂತೆ ಸರ್ಕಾರದಿಂದ ಅನುಮತಿ ಪಡೆಯಲು ಬೇಕಾಗುವಷ್ಟು ಕಾರ್ಮಿಕರು ಗಿರಣಿ ಮುಚ್ಚುವಾಗ ಕಾರ್ಯ ನಿರ್ವಹಿಸುತ್ತಿರಲಿಲ್ಲ. ಆದ್ದರಿಂದ ಕಾಯಿದೆಯ ವ್ಯಾಪ್ತಿಗೆ ಈ ವಿಷಯ ಬರುವುದಿಲ್ಲ.

ಈ ಗಿರಣಿಯ ಸ್ಥಾಪಕರಾದ ರಾಜನಹಳ್ಳಿ ಹನುಮಂತಪ್ಪನವರು ೧೯೪೨ರಲ್ಲಿ ಆರ್.ಹೆಚ್. ಧರ್ಮಶಾಲೆ (ಛತ್ರ) ಕಟ್ಟಿಸಿದರು.[೧೬] ಮದುವೆ, ಮಂಗಳ ಕಾರ್ಯಕ್ಕೆ ಈ ಛತ್ರವನ್ನು ಇಂದಿನವರೆಗೂ

ಉಚಿತವಾಗಿ ನೀಡಲಾಗುತ್ತಿದೆ, ಹಾಗೆಯೇ ನಗರದ ಹಲವು ಶಾಲಾ ಕಾಲೇಜುಗಳ ಕಟ್ಟಡ ನಿರ್ಮಾಣಕ್ಕೆ ಉದಾರ ದಾನ ನೀಡಿದ್ದಾರೆ. ಆದರೆ ಇಂತಹ ದಾನ ಧರ್ಮ ಪ್ರವೃತ್ತಿ ಹೊಂದಿದ್ದವರ ಗಿರಣಿಯಲ್ಲೇ ಕಾರ್ಮಿಕರ ಶೋಷಣೆಯೂ ನಡೆದಿತ್ತು. ಪ್ರಥಮ ಕಾರ್ಮಿಕ ಸಂಘ ಉದಯಿಸಿದ್ದೂ ಈ ಗಿರಣಿಯಲ್ಲೇ, ಹಲವು ಕಾರ್ಮಿಕ ಮುಖಂಡರ ಕೊಲೆಗಳು ನಡೆದಿದ್ದೂ ಈ ಗಿರಣಿಗೆ ಸಂಬಂಧ ಪಟ್ಟವರೆ ಎಂಬುದು ಗಮನಾರ್ಹ ವಿಷಯವಾಗಿದೆ. ಇಂದು ಡಿ.ಸಿ.ಎಂ ಹತ್ತಿ ಗಿರಣಿ ಇದ್ದ ಸ್ಥಳವನ್ನು ಡಿ.ಸಿ.ಎಂ. ಟೌನ್‌ಷಿಪ್ ಎಂದು ಪರಿವರ್ತನೆ ಮಾಡಿ ನಿವೇಶನಗಳನ್ನು ಮಾರಾಟ ಮಾಡಲಾಗುತ್ತಿದೆ. ಸಾವಿರಾರು ಜನರಿಗೆ ಉದ್ಯೋಗ ನೀಡಿದ್ದ, ಆಶ್ರಯ ನೀಡಿದ್ದ ಗಿರಣಿಯ ಪ್ರದೇಶ ಇಂದು ಸಾರ್ವಜನಿಕರ ನಿವಾಸ ಸ್ಥಳವಾಗಿದ್ದು, ಕಾರ್ಮಿಕರು ಬೀದಿ ಪಾಲಾದದ್ದು ನಗರದ ದುರದೃಷ್ಟ ಎಂಬುದು ಮುಖ್ಯ ಅಂಶವಾಗಿದೆ.

೨. ಶ್ರೀ ಶಂಕರ್ ಟೆಕ್ಸ್‌ಟೈಲ್ಸ್ ಮಿಲ್ಸ್ ಲಿಮಿಟೆಡ್

ನಗರದಲ್ಲಿ ಎರಡನೆ ಬೃಹತ್ ಗಿರಣಿಯಾಗಿ ಶಂಕರ್ ಟೆಕ್ಸ್‌ಟೈಲ್ಸ್ ಲಿಮಿಟೆಡ್, 'ಅರಳೆ ಅರಸ' ಎಂದು ಖ್ಯಾತಿ ಪಡೆದಿದ್ದ ಧರ್ಮಪ್ರಕಾಶನ ಚಿಗಟೇರಿ ಮುರಿಗೆಪ್ಪನವರು ಸ್ಥಾಪಿಸಿದರು (೧೯೪೫). ಇವರು ಅರಳೆ ವ್ಯಾಪಾರದಲ್ಲಿ ನಿಪುಣರು. ತಮ್ಮ ಅನುಭವದ ಹಿನ್ನೆಲೆಯಲ್ಲಿ ಗಿರಣಿ ಸ್ಥಾಪಿಸಲು ಮುಂದಾಗಿ ದುಡಿಯುವ ಕೈಗಳಿಗೆ ಉದ್ಯೋಗ ಅವಕಾಶ ಕಲ್ಪಿಸಿದರು. ಈ ಕಾರ್ಖಾನೆಯು ದಿನಾಂಕ ೭.೮.೧೯೪೮ ರಿಂದ ತನ್ನ ಉತ್ಪಾದನೆಯನ್ನು ಪ್ರಾರಂಭಿಸಿತು.[೧೭] ನಗರದ ಸುತ್ತಮುತ್ತಲಿನ ರೈತರು ಮುಂತಾದವರಿಂದ ಬಂಡವಾಳ ಸಂಗ್ರಹಿಸಿ ಆರಂಭವಾದ ಗಿರಣಿಯು, ೧೯೬೫-೬೬ರಲ್ಲಿ ಕಾರ್ಮಿಕರಿಗೆ ಉದ್ಯೋಗ ನೀಡಿ ೧೮,೦೪೦ ಸ್ಪಿಂಡಲ್ಸ್ ಉತ್ಪಾದನೆ ಮಾಡುತ್ತಿತ್ತು.[೧೮] ೧೯೬೦ರ ದಶಕದವರೆಗೂ ಉತ್ತಮ ಸ್ಥಿತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಗಿರಣಿಯು ನಷ್ಟದೆಡೆಗೆ ತೆರಳಿತು. ಆ ಸಂದರ್ಭದಲ್ಲಿ ಮೈಸೂರು ಸರ್ಕಾರವು ತನ್ನ ಸಹಾಯ ಹಸ್ತ ನೀಡಿತು. ಅದು ಗಿರಣಿಗೆ ಹಲವು ನಿರ್ದೇಶನಗಳನ್ನು ನೀಡಿ ೧೦ ಲಕ್ಷ ರೂ.ಗಳನ್ನು ಸಾಲವಾಗಿ ಪಾವತಿಸಿತು.[೧೯] ಈ ಮಾಹಿತಿಯಿಂದ ಮೈಸೂರು ಸಂಸ್ಥಾನ ಕೈಗಾರಿಕೆಗಳ ಯಶಸ್ಸಿಗೆ ಹೊಂದಿದ್ದ ಕಾಳಜಿಯು ಸ್ಪಷ್ಟವಾಗುತ್ತದೆ. ೧೯೭೦ರ ದಶಕದಲ್ಲಿ ಗಿರಣಿಯು ಚೇತರಿಸಿಕೊಳ್ಳಲೇ ಇಲ್ಲ. ಅನಿವಾರ್ಯ ಸ್ಥಿತಿ ಎದುರಾದಾಗ ಆಡಳಿತ ಮಂಡಳಿ ಗಿರಣಿಯನ್ನು ಮುಚ್ಚಲು ನಿರ್ಧರಿಸಿತು. ಅಂತಿಮವಾಗಿ ಕಾರ್ಖಾನೆಯು ಸತತ ನಷ್ಟದ ಪರಿಣಾಮವಾಗಿ ೧೯೮೪ರಲ್ಲಿ ತನ್ನ ಉತ್ಪಾದನೆ ನಿಲ್ಲಿಸಿ ಶಾಶ್ವತವಾಗಿ ಮುಚ್ಚಲಾಯಿತು.[೨೦] ಹೀಗೆ ಗಿರಣಿ ಮುಚ್ಚಿದಾಗ ಕಾರ್ಮಿಕ ಸಂಘ ಏನು ಕ್ರಮ ಕೈಗೊಂಡಿತು? ಎಂದು ಗಮನಿಸಿದಾಗ ಅದು ನಗರದ ಎ.ಸಿ, ಗಿರಣಿ ಮಾಲೀಕರು, ಸರ್ಕಾರವನ್ನು ಧರಣೆ ನಡೆಸುವ ಮುಖಾಂತರ, ಉಪವಾಸ ಸತ್ಯಾಗ್ರಹ ನಡೆಸುವ ಮುಖಾಂತರ ಪುನರ್ ಆರಂಭಕ್ಕೆ ಆಗ್ರಹಿಸಿತು. ಆದರೆ ಈ ವೇಳೆಗಾಗಲೇ ಬಹಳ ಪ್ರಬಲವಾಗಿ ಬೆಳೆದಿದ್ದ ಕಾರ್ಮಿಕ ಶಕ್ತಿ ಈ ವಿಷಯದಲ್ಲಿ ವಿಫಲವಾಯಿತು. ಪರಿಸ್ಥಿತಿ ಹೀಗಾದಾಗ ಅದನ್ನೇ ನಂಬಿದ್ದ ಕಾರ್ಮಿಕರು ಬಹಳ ತೊಂದರೆಗೊಳಗಾದರೆ, ಮಾಲೀಕರು ನಷ್ಟದಲ್ಲಿದ್ದ ಹಿನ್ನೆಲೆಯಲ್ಲಿ ಗಿರಣಿಯ ನಿವೇಶನವನ್ನು ಕಾರ್ಮಿಕರಿಗೆ ಪರಿಹಾರ ರೂಪದಲ್ಲಿ ನೀಡಿದರು. ಇಂದು ಶ್ರೀ ಶಂಕರ ಗಿರಣಿಯು ಇಲ್ಲಿತ್ತು ಎಂದು ಹೇಳುವಂತ ಯಾವುದೇ ಕುರುಹುಗಳೂ ಅಲ್ಲಿ ದೊರೆಯುವುದಿಲ್ಲ.

೩. ಚಿಗಟೇರಿ ಮಿಲ್ಸ್, ದಾವಣಗೆರೆ

ನಗರದ ಹತ್ತಿ ಗಿರಣಿಗಳಲ್ಲಿ ಇದು ಅತ್ಯಂತ ಸಣ್ಣ ಗಿರಣಿಯಾಗಿತ್ತು. ಈ ಗಿರಣಿಯನ್ನು ೧೯೬೩ರಲ್ಲಿ ವೀರಭದ್ರಪ್ಪ ಎಂ. ಚಿಗಟೇರಿ ಹಾಗೂ ಜಯಣ್ಣ ಎಂ. ಚಿಗಟೇರಿಯವರು ಸ್ಥಾಪಿಸಿದರು.[೨೧] ಶಂಕರ್ ಗಿರಣಿಯ ಮಾಲೀಕರಾದ ಶ್ರೀ ಮುರಿಗೆಪ್ಪ ಚಿಗಟೇರಿಯವರ ಅನುಭವದ ಹಿನ್ನೆಲೆಯಲ್ಲಿ ಅವರ ಮಕ್ಕಳು ಈ ಗಿರಣಿ ಸ್ಥಾಪಿಸಿ ಮುನ್ನೆಡುಸುತ್ತಿದ್ದರು. ಗಿರಣಿಗೆ ೬೦ ಲಕ್ಷ ಪ್ರಾಥಮಿಕ ಬಂಡವಾಳ ಹಾಕಲಾಗಿತ್ತು.[೨೨] ೧೯೬೫-೬೬ರ ಅವಧಿಯಲ್ಲಿ ೧೬೫ ಕಾರ್ಮಿಕರಿಗೆ ಉದ್ಯೋಗ ನೀಡಿದ್ದರೆ ೧೨,೦೦೦ ಸ್ಪಿಂಡಲ್ಸ್ ಉತ್ಪಾದನೆ ಮಾಡುತ್ತಿತ್ತು. ತೊಂದರೆಯಲ್ಲಿ ಸಿಲುಕಿದ ಚಿಗಟೇರಿ ಗಿರಣಿಗೆ ಮೈಸೂರು ಸರ್ಕಾರ ಮುಂದಾಗಿ ಹಲವು ನಿರ್ದೇಶನಗಳೊಂದಿಗೆ ೧೦ ಲಕ್ಷ ರೂ.ಗಳನ್ನು ಸಾಲವಾಗಿ ನೀಡಿತ್ತು.[೨೩] ಕೈಗಾರಿಕಾಭಿವೃದ್ಧಿ ದೃಷ್ಟಿಯಿಂದ ಇಲ್ಲಿ ಮೈಸೂರು ಸರ್ಕಾರದ ಪ್ರೋತ್ಸಾಹವನ್ನು ಸ್ಮರಿಸಬೇಕಾಗುತ್ತದೆ. ಹೀಗೆ ಉದ್ಯೋಗ ನೀಡಿ ಉತ್ಪಾದನೆಯಲ್ಲಿ ನಿರತವಾಗಿದ್ದ ಗಿರಣಿಯೂ ನಷ್ಟದ ಸುಳಿಯಲ್ಲಿ ಸಿಲುಕಿ ೧೯೮೮ರಲ್ಲಿ ಶಾಶ್ವತವಾಗಿ ಮುಚ್ಚಲ್ಪಟ್ಟಿತು.

ಈ ಗಿರಣಿಯನ್ನು ಮುಚ್ಚಿದಾಗ ಕಾರ್ಮಿಕರಿಗೆ ಪರಿಹಾರ ಸಿಕ್ಕಿದೆಯೇ ಎಂದು ಪ್ರಶ್ನಿಸಿದರೆ ಅಲ್ಪಸ್ವಲ್ಪ ದೊರೆತಿದೆ ಎನ್ನುತ್ತಾರೆ. ನಿಮ್ಮ ಬೇಡಿಕೆಗಳು ಏನು ಎಂದರೆ ಏನಾದರೂ ಸಿಗಬೇಕು ಎನ್ನುವ ಹಂತದಲ್ಲಿ ಕಾರ್ಮಿಕ ನಿಂತಿರುವುದಾದರೆ, ಗಿರಣಿಯ ಸ್ಥಳದಲ್ಲಿ ಅಲ್ಪಸ್ವಲ್ಪ ಅರಳೆ ವ್ಯಾಪಾರ ನಡೆದರೆ, ಹೆಚ್ಚಿನ ಭಾಗದಲ್ಲಿ ಬಾಪೂಜಿ ವಿದ್ಯಾ ಸಂಸ್ಥೆಯ ದೊಡ್ಡ ಆಸ್ಪತ್ರೆಯ ಕಟ್ಟಡ ನಿರ್ಮಾಣವಾಗಿದೆ.

೪. ಶ್ರೀ ಸಿದ್ದೇಶ್ವರ ಟೆಕ್ಸ್‌ಟೈಲ್ಸ್ ಮಿಲ್ಸ್ ಪ್ರೈ ಲಿಮಿಟೆಡ್

ಸಿದ್ಧೇಶ್ವರ ಟೆಕ್ಸ್‌ಟೈಲ್ ಮಿಲ್ಸ್ ಪ್ರೈ ಲಿಮಿಟೆಡ್ ಅನ್ನು ಜಿ. ಮಹದೇವಪ್ಪ, ಜಿ. ಸಿದ್ದಲಿಂಗಪ್ಪ ಹಾಗೂ ಜಿ.ಎಂ. ಹಾಲಪ್ಪ ಇವರುಗಳು ೧೯೫೭ರಲ್ಲಿ ಪ್ರಾರಂಭಿಸಿದರು.[೨೪] ಈ ಕಂಪನಿಯ ಪಾಲುದಾರರು ನುರಿತ ಹತ್ತಿ ವ್ಯಾಪಾರಿಗಳಾಗಿದ್ದರು. ೧೯೬೫-೬೬ರಲ್ಲಿ ೭೦೦ ನೌಕರರು ಕೆಲಸ ನಿರ್ವಹಿಸುತ್ತಿದ್ದರು.[೨೫] ಗಿರಣಿಯು ಈ ಪ್ರದೇಶದ ದುಡಿಯುವ ಕೈಗಳಿಗೆ ಉತ್ತಮ ಅವಕಾಶ ನೀಡಿತ್ತು. ಇಲ್ಲಿ ಬನೀನು ಮತ್ತು ಉತ್ತಮ ಗುಣಮಟ್ಟದ ನೂಲನ್ನು ತಯಾರಿಸಿ, ಅಂತರರಾಷ್ಟ್ರೀಯ ಮಾರುಕಟ್ಟೆಯನ್ನೂ ಪ್ರವೇಶಿಸಿ ಹೆಸರು ಮಾಡಿತ್ತು. ಗುಂಡಿ ಮಹದೇವಪ್ಪನವರಿಗೆ ಶಂಕರ್ ಗಿರಣಿಯಲ್ಲಿ ದೊರೆತ ಅನುಭವ ಈ ಗಿರಣಿಯಲ್ಲಿ ಕಾರ್ಯ ನಿರ್ವಹಿಸಿತು. ಗಿರಣಿಯು ೧೯೬೭ರಲ್ಲಿ ೨೪,೮೦೦ ಸ್ಪಿಂಡಲ್ಸ್‌ಗಳಿಗೆ ತನ್ನ ಸಾಮರ್ಥ್ಯವನ್ನು ಹೆಚ್ಚಿಸಿಕೊಂಡಿತು.[೨೬] ಈ ಹಿನ್ನೆಲೆಯಲ್ಲಿ ಗಮನಿಸಿದರೆ ಗಿರಣಿ ಉತ್ತಮ ಪ್ರಗತಿಯತ್ತ ಸಾಗುತ್ತಿರುವುದು ಗೋಚರಿಸುತ್ತದೆ. ಆದರೆ ಕ್ರಮೇಣ ಬೇಡಿಕೆಯ ಕೊರತೆ, ಸ್ಪರ್ಧೆ ಮುಂತಾದ ಕಾರಣಗಳಿಂದ ನಷ್ಟಕ್ಕೆ ಸಿಲುಕಿಕೊಂಡಿತು. ೧೯೯೦ರ ನಂತರ ಸಂಪೂರ್ಣವಾಗಿ ಕಾರ್ಯ ಸ್ಥಗಿತಗೊಳಿಸಿ,ಇಂದು ಕೇವಲ ಗಿರಣಿಯ ಕಟ್ಟಡದಲ್ಲಿ ಕಿಟಕಿ ಬಾಗಿಲುಗಳೂ ಇಲ್ಲದಂತೆ ತನ್ನ ಗತವೈಭವ ಸಾರುತ್ತಾ ಹಾಳು ಕೋಟೆಯಂತೆ ಗೋಚರಿಸುತ್ತಿದೆ.

೫. ಚಂದ್ರೋದಯ ಮಿಲ್ಸ್ ಪ್ರೈ ಲಿಮಿಟೆಡ್

ಚಂದ್ರೋದಯ ಹತ್ತಿ ಗಿರಣಿಯು ನೂಲು ತಯಾರಿಸುವ ಗಿರಣಿಯಾಗಿದ್ದು ರಾಜನಹಳ್ಳಿ ಮನೆತನದವರೇ ನಡೆಸುತ್ತಿದ್ದರು. ಉದ್ಯೋಗ ಅರಸುವ ಕಾರ್ಮಿಕರಿಗೆ ಜೀವನಾಧಾರವಾಗಿದ್ದ ಈ

ಗಿರಣಿಯಲ್ಲೂ ಉತ್ತಮ ಸೌಲಭ್ಯಗಳನ್ನು ಒದಗಿಸಲಾಗಿತ್ತು. ದಾವಣಗೆರೆ ಕಾಟನ್ ಮಿಲ್ (ಡಿ.ಸಿ.ಎಂ) ಮೂಲದ ಹಿನ್ನೆಲೆ ಹೊಂದಿದ್ದ ಗಿರಣಿಯು ಉತ್ತಮ ಪ್ರಗತಿಯನ್ನು ಕಾಣುತ್ತಾ ಮುನ್ನೆಡೆಯುತ್ತಿತ್ತು. ಈ ಕಾರ್ಖಾನೆಯ ಉತ್ಪಾದನೆಯನ್ನು ರಫ್ತು ಮಾಡಲಾಗುತ್ತಿತ್ತು.[೨೭] ವಿದೇಶಗಳಲ್ಲಿ ತನ್ನ ಸರಕಿಗೆ ಮಾರುಕಟ್ಟೆ ಪಡೆದಿದ್ದ ಗಿರಣಿಗೆ ನುರಿತ ತಂತ್ರಜ್ಞರ ನಿರ್ದೇಶಕ ಮಂಡಳಿಯೂ ನಿರ್ದೇಶನ ನೀಡುತ್ತಿತ್ತು. ಆದರೂ ನಷ್ಟವನ್ನು ಅನುಭವಿಸಿ ಅಸ್ತಿತ್ವ ಕಳೆದುಕೊಂಡಿತು.

ಹೀಗೆ ನಷ್ಟದೆಡೆಗೆ ಸಾಗಿದಾಗ ಗಿರಣಿಯ ಮಾಲೀಕರು (ಆದೇಶ ಸಂಖ್ಯೆ : ೦೮/೦೭/B/೦೦೩೬೪/PMT/KNSI/NON-SIDO/೯೮-೯೯ ದಿನಾಂಕ ೨೬.೫.೯೮ರಲ್ಲಿ) ಗಿರಣಿಯನ್ನು ಸಣ್ಣ ಪ್ರಮಾಣದ ಕೈಗಾರಿಕಾ ಘಟಕ ಎಂದು ನೋಂದಣಿ ಪಡೆದರು.[೨೮] ಈ ಪ್ರಮಾಣ ಪತ್ರ ಪಡೆದರೆ ಸರ್ಕಾರದ ನಿಯಮಗಳ ವ್ಯಾಪ್ತಿಯಿಂದ ಹೊರಬಂದು ಸರಳವಾಗಿ ಗಿರಣಿಯನ್ನು ಮುಚ್ಚಬಹುದು ಹಾಗೂ ಕಾರ್ಮಿಕರ ಪರಿಹಾರ ಮುಂತಾದ ಬೇಡಿಕೆಗಳನ್ನು ದೂರವಿಡಲು ಸಾಧ್ಯತೆಗಳಿದ್ದವು. ಈ ಸಂದರ್ಭವನ್ನರಿತ ಕಾರ್ಮಿಕ ಸಂಘ ಸರ್ಕಾರಕ್ಕೆ ಹಲವು ಮನವಿ ಸಲ್ಲಿಸಿದ್ದರ ಫಲವಾಗಿ ದಿನಾಂಕ ೧೦.೩.೧೯೯೯ ರಿಂದ ಶಾಶ್ವತವಾಗಿ ಉತ್ಪಾದನಾ ಕಾರ್ಯವನ್ನು ಸ್ಥಗಿತಗೊಳಿಸಿದ್ದ ಗಿರಣಿಗೆ ಕರ್ನಾಟಕ ಸರ್ಕಾರವು ೨೬.೫.೯೮ ರಂದು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯು, ಸಣ್ಣ ಪ್ರಮಾಣದ ಕೈಗಾರಿಕೆ ಎಂದು ನೀಡಿದ ಪ್ರಮಾಣ ಪತ್ರ ಅಸಿಂಧು ಎಂದು ಆದೇಶ ನೀಡಿದೆ.[೨೯] ಸರ್ಕಾರ ಮತ್ತು ಆಡಳಿತ ಮಂಡಳಿಯ ಈ ಕ್ರಮಗಳಿಂದ ಕಾರ್ಮಿಕರು ಸರ್ಕಾರದಿಂದ ದೊರೆಯಬೇಕಾದ ಪರಿಹಾರದಿಂದ ವಂಚಿತರಾಗಿದ್ದಾರೆ. ಈಗಾಗಲೇ ತಮಗಿದ್ದ ಜೀವನಾಧಾರ ವೃತ್ತಿಯನ್ನೂ ಕಳೆದುಕೊಂಡಿರುವ ಕಾರ್ಮಿಕ ವರ್ಗದವರು ಸರ್ಕಾರಕ್ಕೆ ಹಲವು ಮನವಿ ಸಲ್ಲಿಸಿ ದೆಹಲಿಯತ್ತ ದೃಷ್ಟಿ ಇಟ್ಟು ಕಾದು ಕುಳಿತಿದ್ದಾರೆ. ಈ ಪರಿಹಾರ ದೊರಕಿಸಿಕೊಡುವಲ್ಲಿ ಕಾರ್ಮಿಕ ಸಂಘ ಸರಿಯಾಗಿ ಸಹಕರಿಸುತ್ತಿಲ್ಲ ಎಂಬ ಆರೋಪವೂ ಇದ್ದು, ಚಂದ್ರೋದಯ ಟೆಕ್ಸ್‌ಟೈಲ್ ಮಿಲ್ಸ್, ಕಾರ್ಮಿಕರ ಗೆಳೆಯರ ಬಳಗ ಎಂಬ ಪ್ರತ್ಯೇಕ ಬಳಗದ ಮೂಲಕ ಹೋರಾಟದಲ್ಲಿ ನಿರತರಾಗಿದ್ದಾರೆ. ಚಂದ್ರೋದಯ ಮಿಲ್ಸ್‌ಗೆ ಸಣ್ಣ ಕೈಗಾರಿಕೆ ಸ್ಥಾನ ನೀಡಿದ ಗೊಂದಲದಿಂದ ಪರಿಹಾರ ನೀಡಲು ವಿಳಂಬವಾಗಿದೆ.[೩೦] ಕೇಂದ್ರ ಸರ್ಕಾರದ ಹತ್ತಿ ಗಿರಣಿ ಕೆಲಸಗಾರರ ಪುನಶ್ಚೇತನ ನಿಧಿ ಯೋಜನೆಯಡಿ, ದುಡಿದಿರುವ ಕಾರ್ಮಿಕ ವರ್ಗಕ್ಕೆ ನ್ಯಾಯಸಮ್ಮತವಾಗಿ ದೊರೆಯಬೇಕಾಗಿರುವ ಪರಿಹಾರ ದೊರತರೆ ಸಮಾಜ ಘಾತುಕ ಚಟುವಟಿಕೆಯಲ್ಲಿ ತೊಡಗಿರುವ ಕೆಲ ಕಾರ್ಮಿಕರಿಗಾದರೂ ಬದಲಾವಣೆಗೆ ಆಸ್ಪದವಾಗಬಹುದು.

೩.೨. ಹತ್ತಿ ಗಿರಣಿಗಳ ಅವನತಿಗೆ ಕಾರಣಗಳು

* ಷೇರು ಬಂಡವಾಳದ ಮೇಲೆ ಸ್ಥಾಪನೆಯಾಗಿದ್ದ ದಾವಣಗೆರೆ ಹತ್ತಿ ಗಿರಣಿ (ಡಿ.ಸಿ.ಎಂ.) ಶಂಕರ್ ಗಿರಣಿಗಳ ಪಾಲುದಾರರು ಕ್ರಮವಾಗಿ ಚಂದ್ರೋದಯ, ರವಿ ಎಣ್ಣೆ ಗಿರಣಿಯನ್ನೂ, ಚಿಗಟೇರಿ ಹತ್ತಿ ಗಿರಣಿಯನ್ನೂ ಖಾಸಗಿಯಾಗಿ ಸ್ಥಾಪಿಸಿ ಬಂಡವಾಳವನ್ನು ಬೇರೆಡೆಗೆ ವಿನಿಯೋಗಿಸಿದ್ದು.
* ಬಾಂಬೆ ಮುಂತಾದ ಬೃಹತ್ ನಗರಗಳ ಮಾದರಿಯಲ್ಲಿ, ದಾವಣಗೆರೆ ನಗರದಲ್ಲೂ ಗಿರಣಿ ಪರಿಸರಕ್ಕೆ ಹೊಂದಿಕೊಂಡಂತೆ ಭೂಮಿಯ ಬೆಲೆ ವಿಪರೀತ ಏರಿದ್ದು. ಸವಾಲುಗಳನ್ನು ಎದುರಿಸಲು ಮನಸ್ಸಿಲ್ಲದ

ಎರಡನೇ ತಲೆಮಾರಿನ ಮಾಲೀಕರು ಗಿರಣಿಗಳನ್ನು ಸ್ಥಗಿತಗೊಳಿಸಿದರೂ ತಮ್ಮ ಬಂಡವಾಳಕ್ಕೆ ಧಕ್ಕೆ ಇಲ್ಲ ಎಂದು ನೆಮ್ಮದಿಯಿಂದ ಇರಲು ಆಲೋಚಿಸಿರುವುದು.

* ಕಾರ್ಮಿಕ ಚಳವಳಿ ಬಲಗೊಂಡಂತೆ, ಘರ್ಷಣೆಗಳ ಸರಮಾಲೆಯೇ ಸೃಷ್ಟಿಯಾದದ್ದು ಮಾಲೀಕರಿಗೆ ಚೈತನ್ಯ ನೀಡಲಿಲ್ಲ.

* ಯಂತ್ರಗಳ ಆಧುನೀಕರಣಕ್ಕೆ ಕಾರ್ಮಿಕ ಸಂಘ ವಿರೋಧಿಸಿದ್ದಕ್ಕೆ ನಿದರ್ಶನಗಳಿದ್ದು, ಗಿರಣಿಗಳು ಸ್ಪರ್ಧೆ ಎದುರಿಸಲು ಅರ್ಹತೆ ಪಡೆಯಲಿಲ್ಲ.

* ಗಿರಣಿಗಳು ರೋಗಗ್ರಸ್ಥವಾಗಲು ಕಾರ್ಮಿಕರ ತೊಂದರೆಗಳು ೨% ಎಂದು ಆರ್.ಬಿ.ಐ ವರದಿ ನೀಡಿರುವುದು ಗಮನಾರ್ಹ.[೬೧] ಈ ವರದಿ ಕಾರ್ಮಿಕರೇ ಗಿರಣಿಗಳ ಅವನತಿಗೆ ಪ್ರಧಾನ ಕಾರಣವಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತದೆ.

* ಸರ್ಕಾರ ಕೈಮಗ್ಗ ಮುಂತಾದ ಕೈಗಾರಿಕೆಗಳಿಗೆ ತೆರಿಗೆಯಲ್ಲಿ ವಿನಾಯ್ತಿ ನೀಡಿದೆ, ಆದರೆ ಹತ್ತಿ ಗಿರಣಿಗಳಿಗೆ ಈ ಸೌಲಭ್ಯವಿರುವುದಿಲ್ಲ. ಒಟ್ಟಿನಲ್ಲಿ ಸರ್ಕಾರದ ತಾರತಮ್ಯ ನೀತಿಯೂ ಸಹ ಗಿರಣಿಗಳ ಅವನತಿಗೆ ಕಾರಣವಾಗಿದೆ.

* ಬಹಳಷ್ಟು ಗಿರಣಿಗಳು ಹಳೆಯ ಯಂತ್ರಗಳನ್ನು ಹೊಂದಿದ್ದು ಹೆಚ್ಚು ವಿದ್ಯುತ್ ಬಳಕೆಯಾಗಿ, ಉತ್ಪಾದನಾ ವೆಚ್ಚ ಅಧಿಕವಾಯಿತು.

* ನಿರಂತರ ವಿದ್ಯುತ್ ಸರಬರಾಜಾಗದೆ, ಕಾರ್ಮಿಕರಿಗೆ ವಿದ್ಯುತ್ ಸರಬುರಾಜು ಇಲ್ಲದಿದ್ದಾಗಲೂ ವೇತನ ನೀಡಬೇಕಾದ ಪರಿಸ್ಥಿತಿ.

* ಸಣ್ಣ ಕೈಗಾರಿಕೆಗಳಿಗೆ ವಿದ್ಯುತ್ ಸರಬರಾಜಿನಲ್ಲಿ ರಿಯಾಯಿತಿ ಇದೆ, ಆದರೆ ಹತ್ತಿ ಗಿರಣಿಗಳಿಗೆ ಈ ಸೌಲಭ್ಯವಿಲ್ಲ.

* ಇತರೆ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದಲ್ಲಿ ವಿದ್ಯುತ್ ಬೆಲೆ ಹೆಚ್ಚಾಗಿರುವುದು, ಉತ್ಪಾದನಾ ವೆಚ್ಚದ ಮೇಲೆ ಪರಿಣಾಮ ಬೀರುತ್ತದೆ.

* ೧೯೬೫ರ ನಂತರ ದಾವಣಗೆರೆ ಪರಿಸರಕ್ಕೆ ಭದ್ರಾ ಅಣೆಕಟ್ಟೆಯಿಂದ ವ್ಯವಸಾಯಕ್ಕೆ ನೀರು ಸರಬರಾಜಾದ ನಂತರ ಹತ್ತಿ ಬೆಳೆಯುವ ಪ್ರಮಾಣ ಕಡಿಮೆಯಾಯಿತು.

* ಹತ್ತಿ ಬೆಲೆಯಲ್ಲಿ ಏರಿಕೆಯುಂಟಾಯಿತು. ಅದು ೧೯೬೦-೬೧ರಲ್ಲಿ ಕ್ವಿಂಟಾಲ್‌ಗೆ ಗರಿಷ್ಠ ೪೮೯ ರೂ, ೧೯೭೦-೭೧ರಲ್ಲಿ ೭೮೩ ರೂ, ೧೯೮೦-೮೧ರಲ್ಲಿ ೧೭೧೦ರೂ,[೬೨] ಹೀಗೆ ಏರಿಕೆಯಾಗುತ್ತಾ ಸಾಗಿದ್ದು ಉತ್ಪಾದನಾ ವೆಚ್ಚ ಹೆಚ್ಚಾಗಲು ಕಾರಣವಾಯಿತು.

* ಗಿರಣಿಗಳ ಅವನತಿಗೆ ಕಾರ್ಮಿಕರನ್ನು ಪ್ರಶ್ನಿಸಿದಾಗ ದೊರೆತ ಉತ್ತರಗಳೆಂದರೆ ಆಡಳಿತ ವರ್ಗ ಮತ್ತು ಮಾಲೀಕರು ಹಾಗೂ ಮಾಲೀಕರು ಮತ್ತು ಕಾರ್ಮಿಕರ ನಡುವೆ ಹೊಂದಾಣಿಕೆ ಇಲ್ಲದಿರುವುದು, ಮಾಲೀಕರು ನೇರವಾಗಿ ಗಿರಣಿಯ ಉಸ್ತುವಾರಿ ನೋಡದಿದ್ದದ್ದು, ಅವರ ಮಕ್ಕಳು ಆ ಜವಾಬ್ದಾರಿಯನ್ನು ತೆಗೆದುಕೊಳ್ಳದ್ದು, ಕಚ್ಚಾ ಸಾಮಗ್ರಿ ಖರೀದಿಯಲ್ಲಿದ್ದ ಲೋಪದೋಷಗಳು ಕಾರಣವಾದವು.

* ಹತ್ತಿ ಬಟ್ಟೆಗಳ ನಿರ್ವಹಣೆ ಇತರೆ ಬಟ್ಟೆಗಳಿಗೆ ಹೋಲಿಸಿದಲ್ಲಿ ತುಸು ವೆಚ್ಚದಾಯಕವಾದದ್ದು ಅವುಗಳ ಬೇಡಿಕೆ ಕುಂದಿಸಿತು.

* ದಾವಣಗೆರೆ ನಗರದ ಕಾರ್ಮಿಕರನ್ನು ಪ್ರಶ್ನಾವಳಿ ಮುಖಾಂತರ ಸಂಪರ್ಕಿಸಿದಾಗ ೨೪.೦೫% ಭಾಗ ಕಾರ್ಮಿಕ ಚಳವಳಿ ಗಿರಣಿಗಳ ಅವನತಿಗೆ ಕಾರಣ ಎನ್ನುತ್ತಾರೆ. ಸಾಮಾನ್ಯವಾಗಿ ಕಮ್ಯುನಿಸ್ಟ್‌ರ ಪ್ರಭಾವವಿದ್ದೆಡೆ ಸ್ವಲ್ಪ ಹೆಚ್ಚಿನ ಪ್ರಮಾಣದ ಹೋರಾಟಗಳಿರುತ್ತವೆ. ಆದರೆ ಕಾರ್ಮಿಕರ ಚಳವಳಿ ಒಂದು ಮಾತ್ರ ಹತ್ತಿ ಗಿರಣಿಗಳ ಅವನತಿಗೆ ಕಾರಣವಲ್ಲ.

* ಮೇಲ್ಕಂಡ ಹಲವಾರು ಅಂಶಗಳು ಉದ್ಯೋಗ ನೀಡಿ ದೇಶದ ಆರ್ಥಿಕ ಪ್ರಗತಿಗೆ ಪ್ರೇರಕವಾಗಿದ್ದ ಗಿರಣಿಗಳ ಅವಸಾನಕ್ಕೆ ಕಾರಣವಾಗಿವೆ. ಅಲ್ಲದೆ ದಾವಣಗೆರೆ ನಗರದಲ್ಲಿ ಮಾತ್ರ ಗಿರಣಿಗಳು ಅವಸಾನ ಕಂಡಿಲ್ಲ. ರಾಷ್ಟ್ರ ಮತ್ತು ರಾಜ್ಯಮಟ್ಟದಲ್ಲೂ ಉದಾರೀಕರಣ, ಜಾಗತೀಕರಣದ ಹಿನ್ನೆಲೆಯಲ್ಲಿ ಬಹಳಷ್ಟು ಕೈಗಾರಿಕೆಗಳು ಅವಸಾನ ಗೊಂಡಿವೆ. ಉದಾಹರಣೆಗೆ ನಮ್ಮ ರಾಜ್ಯವೊಂದರಲ್ಲೇ ಮೈಸೂರಿನ ಐಡಿಯಲ್ ಜಾವಾ, ಬೆಂಗಳೂರಿನ ಇಂಡಿಯನ್ ಟೆಲಿಕಾಂ ಇಂಡಸ್ಟ್ರೀ, ಬಿನ್ನಿ ಮಿಲ್, ಎಲೆಕ್ಟ್ರಿಕ್ ವಸ್ತು ಉತ್ಪಾದನೆಯ ಎನ್.ಜಿ.ಇ.ಎಫ್ ಕಾರ್ಖಾನೆ, ಮೈಸೂರು ಲ್ಯಾಂಪ್ ಕಾರ್ಖಾನೆ, ಹುಬ್ಬಳ್ಳಿಯ ಮಹದೇವ ಜವಳಿ ಕಾರ್ಖಾನೆ, ಮಂಡ್ಯದ ನ್ಯಾಷನಲ್ ಪೇಪರ್ ಮಿಲ್ಸ್, ಹರಿಹರದ ಕಿರ್ಲೋಸ್ಕರ್‌ಗಳು ಅವಸಾನ ಹೊಂದಿರುವುದು ಈಗಾಗಲೇ ವರದಿಯಾಗಿದೆ. ಈ ಕೈಗಾರಿಕೆಗಳಲ್ಲೂ ನಮ್ಮ ನಗರದ ಗಿರಣಿಗಳಂತೆ ಆಧುನೀಕರಣ ಆಗದೆ, ವಿಶ್ವ ಮಾರುಕಟ್ಟೆಯಲ್ಲಿ ಸ್ಪರ್ಧೆಯನ್ನು ಎದುರಿಸಲಾರದೆ, ಇನ್ನು ಮುಂತಾದ ಕಾರಣಗಳು ಅವಸಾನದ ಕೂಪಕ್ಕೆ ತಳ್ಳಿವೆ ಎನ್ನಬಹುದು.

೩.೩. ಚಾಲ್ತಿಯಲ್ಲಿರುವ ಹತ್ತಿ ಗಿರಣಿಗಳು

ಜಾಗತೀಕರಣ ಮುಂತಾದ ಪ್ರವಾಹದಲ್ಲೂ ಧೈರ್ಯದಿಂದ ಈಜುತ್ತಿರುವ ಹತ್ತಿ ಗಿರಣಿಗಳೆಂದರೆ,

೧. ಗಣೇಶ ಹತ್ತಿ ಗಿರಣಿ

೨. ಆಂಜನೇಯ ಹತ್ತಿ ಗಿರಣಿ

೧. ಗಣೇಶ ಹತ್ತಿ ಗಿರಣಿ

ಅರಳೆ ವ್ಯಾಪಾರದಲ್ಲಿ ಅನುಭವಗಳಿಸಿದ್ದ, ಸಿದ್ದೇಶ್ವರ ಹತ್ತಿ ಗಿರಣಿಯನ್ನೂ ನಡೆಸುತ್ತಿದ್ದ ಶ್ರೀ ಗುಂಡಿ ಮಹದೇವಪ್ಪನವರು ನೂಲನ್ನು ತಯಾರಿಸುವ ಈ ಗಿರಣಿಯನ್ನು ೧೯೫೬ರಲ್ಲಿ ಸ್ಥಾಪಿಸಿದರು. ಶ್ರೀಯುತರು ೫ ಲಕ್ಷ ಬಂಡವಾಳವನ್ನು ಯಂತ್ರೋಪಕರಣಗಳ ಮೇಲೆ ಹಾಕಿದರು.[೬೬] ಗಿರಣಿಯ ಆಧುನೀಕರಣಕ್ಕೂ ಮಹತ್ವ ನೀಡಲಾಯಿತು. ೧೯೬೦-೬೧ರ ವರೆಗೂ ಹಿಂತಿರುಗಿ ನೋಡದೆ ನಡೆಯುತ್ತಿದ್ದ ಗಿರಣಿ ೧೯೬೭-೬೯ರ ವರೆಗೆ ತಾತ್ಕಾಲಿಕವಾಗಿ ಕಾರ್ಯವನ್ನು ಸ್ಥಗಿತಗೊಳಿಸಿತು. ೧೯೭೦ರಲ್ಲಿ ಖಾಸಗಿ ವ್ಯಕ್ತಿಗಳ ಹಣಕಾಸಿನ ಸಹಾಯದಿಂದ ಪುನಃ ತನ್ನ ಉತ್ಪಾದನಾ ಕಾರ್ಯವನ್ನು ಆರಂಭಿಸಿತು.[೬೭] ಜಗತ್ತಿನ ಮಾರುಕಟ್ಟೆಯನ್ನು ಪಡೆಯುವಲ್ಲಿ ವ್ಯವಹಾರ ಚತುರತೆ, ಚಾಣಾಕ್ಷತೆ ಇರುವಂತಹ ಶ್ರೀ ಅಥಣಿ ಕೊಟ್ರೇಶ್ ಸಹೋದರರು ಗಿರಣಿಯನ್ನು ಮುನ್ನೆಡೆಸುತ್ತಿದ್ದಾರೆ. ಪ್ರಸ್ತುತದಲ್ಲಿ ಐದು ನೂರಕ್ಕೂ ಅಧಿಕ

ಖಾಯಂ ಕೆಲಸಗಾರರಿದ್ದಾರೆ. ಈ ಗಿರಣಿಯ ಕ್ಯಾಂಟೀನ್ ಹಾಗೂ ಗೇಟ್ ಮುಂಭಾಗಕ್ಕೆ ಹೊಂದಿಕೊಂಡಿರುವ ಗೋಡೆಯ ಮೇಲೆ 'ಕೆಲಸ ಖಾಲಿ ಇದೆ' ಎಂದು ಉದ್ಯೋಗದ ಸ್ಥಿತಿ ಮಂಕಾಗಿರುವ ವಾತಾವರಣದಲ್ಲೂ ಬರೆದಿರುವುದು ಆಶ್ಚರ್ಯವೆನಿಸುತ್ತದೆ. ಉತ್ಪಾದನಾ ವೆಚ್ಚ ಕಡಿಮೆಗೊಳಿಸಿ, ಮಾರುಕಟ್ಟೆ ಗಳಿಸಿ, ಲಾಭ ಕಾಣಬೇಕಾದರೆ ಇಂದಿನ ಪೈಪೋಟಿ ಯುಗದಲ್ಲಿ ಬಹಳಷ್ಟು ಬದಲಾವಣೆಗಳನ್ನು ಜಾರಿಗೊಳಿಸಬೇಕಾಗಿದೆ. ದಾವಣಗೆರೆ ನಗರದಲ್ಲಿ ಕೈಗಾರಿಕೆಗಳು ವಿನಾಶ ಹೊಂದಿ, ನಿರುದ್ಯೋಗ ಸ್ಥಿತಿ ಇರುವಾಗಲೂ ಈ ಆಹ್ವಾನದ ಗುಟ್ಟೇನು ಎಂಬುದು ಪ್ರಶ್ನೆಯಾದರೆ, ಹಿಂದೆ ನಗರದಲ್ಲಿ ಕಾರ್ಮಿಕರಿಗೆ ನೀಡುತ್ತಿದ್ದಷ್ಟು ಕೂಲಿಯನ್ನು ಇಲ್ಲಿ ನೀಡುತ್ತಿಲ್ಲ ಹಾಗೂ ನೀಡಲು ಸಾಧ್ಯವೂ ಇಲ್ಲ. ನೇಮಕಾತಿಯ ನಿಯಮಗಳಲ್ಲಿ ಬದಲಾವಣೆಗಳುಂಟಾಗಿರುವುದು ಈ ಸ್ಥಿತಿಗೆ ಕಾರಣವಾಗಿದೆ.

೨. ಶ್ರೀ ಆಂಜನೇಯ ಕಾಟನ್ ಮಿಲ್ಸ್ ಪ್ರೈ ಲಿಮಿಟೆಡ್

ಈ ಗಿರಣಿಯು ದಾವಣಗೆರೆ ನಗರಕ್ಕೆ, ಬೆಂಗಳೂರು-ಹುಬ್ಬಳ್ಳಿ ರೈಲ್ವೆ ಹಳಿಯ ರಸ್ತೆಗೆ ಹೊಂದಿಕೊಂಡಿರುವ ತೋಳ ಹುಣಸೆ ಗ್ರಾಮದ ಪ್ರದೇಶದಲ್ಲಿದೆ. ಶ್ರೀ ಎಂ. ರಂಗಪ್ಪ ತಿಮ್ಮಪ್ಪ ಮಲ್ಲಾಡಿಹಳ್ಳಿಯವರು ೧೯೬೨ರಲ್ಲಿ ಗಿರಣಿಯನ್ನು ಸ್ಥಾಪಿಸಿದರು.[೬೫] ಗಿರಣಿಗೆ ೫೦ ಲಕ್ಷ ರೂ.ಗಳ ಆರಂಭಿಕ ಬಂಡವಾಳವನ್ನು ಹಾಕಲಾಯಿತು.[೬೬] ಯಂತ್ರಗಳ ಆಧುನೀಕರಣಕ್ಕೆ ವಿವಿಧ ಸಂದರ್ಭಗಳಲ್ಲಿ ಬೃಹತ್ ಬಂಡವಾಳವನ್ನು ವಿನಿಯೋಗಿಸಿದರೂ ನಗರದ ಬಹುತೇಕ ಗಿರಣಿಗಳಂತೆ ನಷ್ಟದ ಹಾದಿ ತುಳಿಯಿತು. ೧೯೯೨ ಜೂನ್‌ನಲ್ಲಿ ಈ ಕಾರ್ಖಾನೆಯನ್ನು ಚಳ್ಳಕೆರೆ ವೀರಭದ್ರಪ್ಪ ಎಂಬುವವರು ಖರೀದಿಸಿ ಮತ್ತೆ ಹೊಸ ಚಾಲನೆ ನೀಡಿದರು. ನಂತರ ಗಣೇಶ ಹತ್ತಿ ಗಿರಣಿ ನಡೆಸುತ್ತಿರುವ ಅಥಣಿ ಕೊಟ್ರೇಶ್ ಸಹೋದರರು ಹಾಗೂ ಚಂದ್ರಣ್ಣ ಎಂಬುವ ಅರಳೆ ವ್ಯಾಪಾರದ ಅನುಭವ ಹೊಂದಿರುವವರ ಸಮೂಹ ಮುನ್ನೆಡೆಸುತ್ತಿದೆ. ಈ ಗಿರಣಿಯಲ್ಲಿ ಅತ್ಯಾಧುನಿಕ ಯಂತ್ರಗಳನ್ನು ಬಳಸಿ ಉತ್ತಮ ರೀತಿಯಲ್ಲಿ ಮುನ್ನೆಡಿಸಿಕೊಂಡು ಮುಚ್ಚಿರುವ ಗಿರಣಿಗಳ ಸಾಲಿಗೆ ಸೇರದೆ ಕೈಗಾರಿಕಾ ರಂಗದಲ್ಲಿ ತಮ್ಮದೇ ಛಾಪು ಮೂಡಿಸಿದ್ದಾರೆ.

೩.೪. ಭವಿಷ್ಯತ್ತಿನಲ್ಲಿ ಗಿರಣಿಗಳ ಬಗೆಗಿನ ಸವಾಲುಗಳು ಮತ್ತು ಸಲಹೆಗಳು

ಪ್ರಪಂಚವೆಲ್ಲಾ ಒಂದೇ ಮಾರುಕಟ್ಟೆ ಎಂಬ ಕಲ್ಪನೆಯಲ್ಲಿರುವ ಇಂದಿನ ಜಾಗತೀಕರಣದ ಸಂದರ್ಭದಲ್ಲಿ ಉಳಿದಿರುವ ಗಿರಣಿಗಳು ಭವಿಷ್ಯತ್ತಿನ ಸವಾಲುಗಳನ್ನು ದಿಟ್ಟತನದಿಂದ ಎದುರಿಸಬೇಕಾಗಿದೆ.

ಹಳೆಯ ಯಂತ್ರೋಪಕರಣಗಳನ್ನು ಬದಲಾಯಿಸಿ ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವ ಮೂಲಕ ಉತ್ಪಾದನಾ ವೆಚ್ಚವನ್ನು ಕಡಿಮೆ ಮಾಡಿ ಜಗತ್ತಿನ ಮಾರುಕಟ್ಟೆಯನ್ನು ಪ್ರವೇಶಿಸಬೇಕಾಗಿದೆ. ಅದಕ್ಕೆ ಬೃಹತ್ ಬಂಡವಾಳ ಹೂಡಿಕೆ ಅನಿವಾರ್ಯ. ಈ ಬಂಡವಾಳ ಎಲ್ಲಿಂದ ಬರುತ್ತದೆ ಎಂಬುದೊಂದು ಸವಾಲು. ಈಗ ಜವಳಿ ಉದ್ಯಮ ಒಂದು ಕ್ರಾಂತಿಯನ್ನು ಕಾಣಬೇಕಾಗಿದೆ. ಖಾಸಗಿಯವರು ತಮ್ಮಲ್ಲಿರುವ ಬಂಡವಾಳವನ್ನು ಉತ್ಸಾಹದಿಂದ ತೊಡಗಿಸಬೇಕು ಹಾಗೂ ಸರ್ಕಾರ ಪರಿಣಾಮಕಾರಿ ಕ್ರಮಗಳನ್ನು ತೆಗೆದುಕೊಳ್ಳಬೇಕು. ಸರ್ಕಾರ 'ಜವಳಿ ಉದ್ಯಮದ ಆಧುನೀಕರಣ ನಿಧಿಯನ್ನು' ಹೊಂದಿದೆ. ಇದರ ಮೂಲಕ ಗಿರಣಿಗಳಿಗೆ ಹಣಕಾಸಿನ ನೆರವು ನೀಡಬೇಕಾಗಿದೆ. ಸಣ್ಣ ಪ್ರಮಾಣದ ಜವಳಿ ಗಿರಣಿಗಳಲ್ಲಿ

ಬಂಡವಾಳ ಹೂಡುವವರಿಗೆ ಬಡ್ಡಿ ದರದಲ್ಲಿ ರಿಯಾಯಿತಿ ನೀಡುತ್ತಿದೆ. ಈ ರಿಯಾಯಿತಿಯನ್ನು ಎಲ್ಲಾ ಹತ್ತಿ ಗಿರಣಿಗಳಿಗೂ ವಿಸ್ತರಿಸುವುದು ಅಗತ್ಯವಾಗಿದೆ.

ಸಣ್ಣ ಗಿರಣಿಗಳಿಗೆ ಸಂಬಂಧಿಸಿದಂತೆ ಕಾರ್ಮಿಕ ಕಾಯ್ದೆಗಳು ಬಿಗಿಯಾಗಿಲ್ಲ.[೩೭] ಈ ಹಿನ್ನೆಲೆಯಲ್ಲಿ ಬಂಡವಾಳದಾರರಲ್ಲಿ ಬೃಹತ್ ಕೈಗಾರಿಕೆಗಳನ್ನು ಸ್ಥಾಪಿಸಿ, ಬೃಹತ್ ಜವಾಬ್ದಾರಿಯನ್ನು ಹೊರಲು ಉತ್ಸಾಹ ಇರುವಂತೆ ಕಾಣುತ್ತಿಲ್ಲ. ಆದ್ದರಿಂದ ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ಸ್ಥಾಪಿಸುವತ್ತ ಗಮನ ಹರಿಸಲಾಗುತ್ತಿದೆ. ಆದರೆ ಇಂತಹ ಉತ್ಪಾದನೆಯಿಂದ, ಜಾಗತಿಕ ಮಟ್ಟದ ಸ್ಪರ್ಧೆ ಎದುರಿಸುವುದು ಅಷ್ಟು ಸರಳವಲ್ಲ. ಆದ್ದರಿಂದ ದೊಡ್ಡ ಪ್ರಮಾಣದ ಆಧುನಿಕ ಯಂತ್ರಗಳ ಕೈಗಾರಿಕೆಗಳೇ ಸೂಕ್ತ, ಅವುಗಳ ಸ್ಥಾಪನೆಗೆ ಸೂಕ್ತಕ್ರಮ ಅಗತ್ಯ.

ನಮ್ಮ ರಾಜ್ಯದಲ್ಲಿ ಕೈಗಾರಿಕಾ ರಂಗ ಮಂಕಾಗಿದೆ. ಅದು ಕಳೆಗಟ್ಟಬೇಕಾದರೆ ಏನು ಮಾಡಬೇಕು? ತಮಿಳುನಾಡಿನಲ್ಲಿ ಜವಳಿ ಉದ್ಯಮ ವೇಗವಾಗಿ ಸಾಗುತ್ತಿದೆ. ಇದಕ್ಕೆ ಅಲ್ಲಿನ ಸರ್ಕಾರದ ಪ್ರೋತ್ಸಾಹ ಮತ್ತು ಉದ್ಯಮಿಗಳ ಆಸಕ್ತಿ, ನಿಷ್ಠೆಯಿಂದ ದುಡಿಯುವ ಕಾರ್ಮಿಕರು ಮುಖ್ಯ ಎನ್ನುತ್ತಾರೆ, ಜವಳಿ ಸಚಿವಾಲಯದ ಜಂಟಿ ಆಯುಕ್ತ ನಾಗೇಶ್ ಎಂ. ಮುಗದುರ್[೩೮] ಇವರ ಅಭಿಪ್ರಾಯ, ಸಲಹೆಯನ್ನು ನಾವೂ ಸಹ ಸ್ವೀಕರಿಸಿದರೆ ಉತ್ತಮ ಪೂರ್ಣವಿರಾಮ, ಉತ್ಸಾಹ, ಸರ್ಕಾರದ ಪ್ರೋತ್ಸಾಹ ಹಾಗೂ ನಿಷ್ಠಾವಂತ ಕಾರ್ಮಿಕ, ಗಿರಣಿಯ ಯಶಸ್ಸಿಗೆ ಅಡಿಪಾಯವೂ ಹೌದು.

ತಮಿಳುನಾಡು ಜವಳಿ ಉತ್ಪನ್ನಗಳನ್ನು ರಫ್ತು ಮಾಡಲು ಮುಂಚೂಣಿಯಲ್ಲಿದೆ, ಅದಕ್ಕೆ ಕಾರಣ ಆಧುನಿಕ ತಂತ್ರಜ್ಞಾನದ ಅಳವಡಿಕೆ. ಈ ಕಾರ್ಯ ನಮ್ಮ ಎಲ್ಲಾ ಗಿರಣಿಗಳಲ್ಲೂ ಆಗಬೇಕಾಗಿದೆ. ಯುವ ಉದ್ಯಮಿಗಳು, ಉತ್ಸಾಹಿಗಳು ಮುಂದೆ ಸಮಸ್ಯೆಗಳೇ ಇವೆ ಅವುಗಳನ್ನು ಧೈರ್ಯದಿಂದ ಎದುರಿಸುತ್ತೇನೆ ಎಂಬ ಮನೋಧರ್ಮ ಉಳ್ಳವರಾಗಿ ಬಂಡವಾಳ ತೊಡಗಿಸಿ ಎದುರಿಸಬೇಕಾಗಿದೆ.

ನಮ್ಮ ರಾಜ್ಯದಲ್ಲಿನ ವಿದ್ಯುತ್ತಿನ ಅಭಾವ ಕೈಗಾರಿಕಾ ರಂಗಕ್ಕೆ ದೊಡ್ಡ ಸವಾಲಾಗಿದೆ. ಈ ವಿದ್ಯುತ್ತಿಗೆ ಪ್ರತಿಯಾಗಿ ಕರ್ನಾಟಕ ಸಿಲ್ಕ್ ಇಂಡಸ್ಟ್ರೀಸ್ ಕಾರ್ಪೋರೇಷನ್, ಮೈಸೂರು ಫ್ಯಾಕ್ಟರಿಯಲ್ಲಿ ಸೋಲಾರ್ ವಿದ್ಯುತ್ ಅನ್ನು ಬಳಸುತ್ತಿದ್ದಾರೆ. ಈ ಮಾದರಿಯ ಬದಲಾವಣೆಯನ್ನು ತಂದರೆ ಒಂದೇ ವ್ಯವಸ್ಥೆಯ ಮೇಲೆ ಅವಲಂಬನೆ ಹಾಗೂ ಒತ್ತಡ ಕಡಿಮೆಯಾಗುವ ಸಾಧ್ಯತೆ ಇದೆ.

ವಸ್ತುವೊಂದು ಉತ್ಪಾದನೆಯಾಗಿ ಮಾರುಕಟ್ಟೆ ಪ್ರವೇಶಿಸಿದರೆ ಅದರ ಬೆಲೆ ಹಾಗೂ ಬಾಳಿಕೆ ಮಾತ್ರ ವಸ್ತುವಿನ ಬೆಲೆಯನ್ನು ನಿರ್ಧರಿಸದೆ, ಆಧುನಿಕ ಕಾಲದಲ್ಲಿ ಅದರ ವಿನ್ಯಾಸವೂ ಸಹ ಆಕರ್ಷಣೀಯ ಅಂಶವಾಗಿದೆ. ಆದ್ದರಿಂದ ಬೇಡಿಕೆಗೆ ತಕ್ಕಂತೆ ಉತ್ತಮ ಗುಣಮಟ್ಟ ಹಾಗೂ ವಿನ್ಯಾಸ ಶೈಲಿಯನ್ನೂ ಅಳವಡಿಸಿಕೊಳ್ಳಬೇಕಾಗಿದೆ.

ಈಗಾಗಲೇ ಪ್ರಗತಿಯಲ್ಲಿದ್ದು, ವಿದೇಶಿ ಮಾರುಕಟ್ಟೆಯಲ್ಲಿ ಮಹತ್ವ ಪಡೆದುಕೊಂಡಿರುವ ತಮಿಳುನಾಡಿನಂತಹ ಬಟ್ಟೆ ಗಿರಣಿಗಳಿಗೆ ಕಾರ್ಮಿಕರನ್ನು ವರ್ಷಕ್ಕೊಮ್ಮೆಯಾದರೂ ಪ್ರವಾಸಕ್ಕೆ ಕಳುಹಿಸುವ ಮೂಲಕ ಅಲ್ಲಿ ಅಳವಡಿಸಿಕೊಂಡಿರುವ ವಿಧಿ, ವಿಧಾನಗಳ ಅರಿವು ಮೂಡಿಸಬೇಕಾಗಿದೆ.

ಭವಿಷ್ಯತ್ತಿನ ಸವಾಲನ್ನು ಎದುರಿಸಲು ನಾಳಿನ ವಿಧಾನವನ್ನು ಇಂದೇ ಅಳವಡಿಸಿಕೊಳ್ಳುವ ಮನೋಭಾವ ಮೂಡಿ, ಅಳವಡಿಸಿಕೊಂಡು, ಬದಲಾವಣೆ ಎಂಬ ವಿಚಾರಕ್ಕೆ ಮಾನ್ಯತೆ ನೀಡಿ, ಗತಿಸಿ ಹೋಗಿರುವ ಇತಿಹಾಸದ ವೈಭವವನ್ನು ಮತ್ತೆ ಗಳಿಸಬೇಕಾಗಿದೆ.

ದಾವಣಗೆರೆ ನಗರದಲ್ಲಿ ಅಳಿದಿರುವ ಕೈಗಾರಿಕೆಗಳೇ ಹೆಚ್ಚಾಗಿರುವಾಗ, ಉಳಿದಿರುವ ಆಂಜನೇಯ ಹತ್ತಿ ಗಿರಣಿ ನಡೆಸುತ್ತಿರುವ ಶ್ರೀ ಅಥಣಿ ಕೊಟ್ರೇಶ್ ಅವರನ್ನು 'ನಿಮ್ಮ ಯಶಸ್ಸಿನ ಗುಟ್ಟೇನು' ಎಂದು ಕೇಳಿದಾಗ ಅವರು ಹೇಳುತ್ತಾರೆ, 'ಜಾಗತೀಕರಣವೆಂಬುದು ತಾತ್ಕಾಲಿಕ ತೊಂದರೆ, ದೇಶದ ಎಲ್ಲಾ ಗಿರಣಿಗಳೂ ಇದರಿಂದ ಅವಸಾನ ಹೊಂದಿಲ್ಲ. ಆದರಿಂದ ಸವಾಲನ್ನು ಎದುರಿಸಿ, ಕಾರ್ಮಿಕರನ್ನು ಮಾನವೀಯತೆಯ ದೃಷ್ಟಿಯಿಂದ ನೋಡಿಕೊಳ್ಳಬೇಕು, ವ್ಯವಹಾರ ಚತುರತೆಯಿಂದ ಮಾರುಕಟ್ಟೆ ಪಡೆಯಬೇಕು, ವಿದ್ಯುತ್ ಸರಬರಾಜಿನಲ್ಲಿ ಸರ್ಕಾರ ರಿಯಾಯಿತಿ ನೀಡಬೇಕು' ಎಂದಿದ್ದಾರೆ. ಇವರ ಈ ದೂರದೃಷ್ಟಿಯ ಆಲೋಚನೆಗಳು ಈ ಭಾಗದ ಕಾರ್ಮಿಕರ, ದೇಶದ ಆರ್ಥಿಕ ಪ್ರಗತಿಗೆ ಪೂರಕವಾಗಬಹುದು.

೩.೫. ಅವಸಾನದ ಅಂಚಿನಲ್ಲಿರುವ ಹತ್ತಿ ಗಿರಣಿ

ಶ್ರೀ ಯಲ್ಲಮ್ಮ ಕಾಟನ್, ಉಲ್ಲನ್ ಅಂಡ್ ಸಿಲ್ಕ್ ಮಿಲ್ಸ್ ಲಿಮಿಡೆಟ್

ದಾವಣಗೆರೆ ನಗರದ ವ್ಯಾಪ್ತಿಯ ಗಿರಣಿಗಳಲ್ಲಿ ಅತ್ಯಂತ ಭಿನ್ನವಾದುದು ಯಲ್ಲಮ್ಮ ಗಿರಣಿ. ಈ ಗಿರಣಿಯು ಹತ್ತಿಯಿಂದ ನೂಲು ತಯಾರಿಸುವುದರ ಜೊತೆಗೆ, ರೇಷ್ಮೆಯಿಂದ ನೂಲನ್ನೂ ತಯಾರಿಸುವ ಘಟಕವಾಗಿದೆ. ದಾವಣಗೆರೆ ನಗರಕ್ಕೆ ಹೊಂದಿಕೊಂಡಿರುವ ತೋಳಹುಣಸೆ ಗ್ರಾಮದಲ್ಲಿ ಜುಲೈ ೧೯೫೫ರಲ್ಲಿ ಶ್ರೀ ಯಲ್ಲಮ್ಮ ಕಾಟನ್, ಉಲ್ಲನ್ ಅಂಡ್ ಸಿಲ್ಕ್ ಮಿಲ್ಸ್ ಲಿಮಿಟೆಡ್ ಆರಂಭವಾಯಿತು.[೩೯] ೧,೦೦,೦೦,೦೦೦ ಬಂಡವಾಳ ತೊಡಗಿಸಿ ಹತ್ತಿ, ಉಣ್ಣೆ ಮತ್ತು ರೇಷ್ಮೆ ಉತ್ಪಾದನೆ ಆರಂಭಿಸಿತು.[೪೦] ಈ ಪ್ರದೇಶದಲ್ಲಿ ಬೆಳೆಯುತ್ತಿದ್ದ ಅಲ್ಪಸ್ವಲ್ಪ ರೇಷ್ಮೆಯ ಉಪಯೋಗಕ್ಕೆ ಈ ಗಿರಣಿಯಿಂದ ಅನುಕೂಲವಾಯಿತು. ೧೯೬೫-೬೬ರ ಅವಧಿಯಲ್ಲಿ ೪೪೦ ಕಾರ್ಮಿಕರಿಗೆ ಗಿರಣಿಯು ಉದ್ಯೋಗಾವಕಾಶ ಕಲ್ಪಿಸಿತ್ತು.[೪೧] ಹೀಗೆ ಉದ್ಯೋಗಾವಕಾಶ ನೀಡಿದ ಗಿರಣಿಯನ್ನು

೧. ಶ್ರೀ ಅಂಬರ್‌ಕರ್ ವಿರೂಪಣ್ಣ ದೊಡ್ಡ ಎಲ್ಲಪ್ಪ

೨. ಶ್ರೀ ರಾಮಚಂದ್ರರಾವ್ ವೈ. ಅಂಬರ್‌ಕರ್

೩. ಶ್ರೀ ಅಂಬರ್‌ಕರ್ ವೈ. ಪಾಂಡುರಂಗರಾವ್ ಇವರು ಖಾಸಗಿ ಕಂಪನಿಯಾಗಿ ಸ್ಥಾಪಿಸಿದರು. ೧೯೬೬ರ ವರೆಗೂ ಚೆನ್ನಾಗಿ ಮುನ್ನಡೆಸಿದ ಗಿರಣಿ ಕಾಲಕ್ರಮೇಣ ರೋಗಗ್ರಸ್ಥವಾಯಿತು. ೧೯೭೨ರಲ್ಲಿ ರೋಗಗ್ರಸ್ಥ ಗಿರಣಿಗಳನ್ನು ಕೇಂದ್ರ ಸರ್ಕಾರ ವಹಿಸಿಕೊಳ್ಳುವ ಯೋಜನೆಯಡಿಯಲ್ಲಿ ಎನ್.ಟಿ.ಸಿ (ನ್ಯಾಷನಲ್ ಟೆಕ್ಸ್‌ಟೈಲ್ ಕಾರ್ಪೊರೇಷನ್) ಈ ಗಿರಣಿಯನ್ನು ವಹಿಸಿಕೊಂಡು ಜೀವದಾನ ನೀಡಿತು. ರೋಗ ಗ್ರಸ್ಥವಾಗಿದ್ದ ಈ ಗಿರಣಿ ಅಭಿವೃದ್ಧಿಗೆ ಕೇಂದ್ರ ಸರ್ಕಾರ ೧೯೭೬ ರಿಂದ ೧೯೭೮ರ ಅವಧಿಯಲ್ಲಿ ೭೯ ಲಕ್ಷ ಬಂಡವಾಳ ಹಾಕಿ ಅಭಿವೃದ್ಧಿಯೆಡೆಗೆ ಕೊಂಡೊಯ್ಯಲು ಯತ್ನಿಸಿತು.[೪೨] ಆದರೂ ಈ ಗಿರಣಿ

ಏಕೆ ಲಾಭದತ್ತ ಸಾಗಲಿಲ್ಲ ಎಂಬುದು ಪ್ರಮುಖ ಪ್ರಶ್ನೆಯಾಗಿದೆ. ಇತರೆ ಗಿರಣಿಗಳ ಅವನತಿಗೆ ಕಾರಣವಾದ ಅಂಶಗಳೇ ಇಲ್ಲಿಯೂ ಸಾಮಾನ್ಯವಾಗಿ ಎದುರಾಗುತ್ತವೆ. ಅಲ್ಲದೆ ಸರ್ಕಾರದ ವ್ಯಾಪ್ತಿಗೆ ಬಂದ ಕಾರ್ಮಿಕರು ಸಮಯ ಪ್ರಜ್ಞೆಯಿಂದ ಕರ್ತವ್ಯ ನಿರ್ವಹಿಸುತ್ತಿಲ್ಲವೇ? ಎಂದರೆ ಅಲ್ಲಿ ಕಾರ್ಮಿಕರು ೮ ಘಂಟೆ ಕೆಲಸದಲ್ಲಿ ಇಷ್ಟು ಉತ್ಪತ್ತಿ ಕೊಡಲೇಬೇಕೆಂಬ ನಿಯಮವಿರುತ್ತದೆ. ಆದ್ದರಿಂದ ಕಾರ್ಮಿಕ ಸೋಮಾರಿಯಾಗಲು ಸಾಧ್ಯವಿಲ್ಲ. ಆದರೆ ಸರ್ಕಾರ ಆಧುನೀಕರಣಕ್ಕೆ ಮಹತ್ವ ನೀಡಿಲ್ಲ ಎಂಬುದು ಒಂದು ಮುಖ್ಯ ಅಂಶವಾಗಿದೆ. ಅಲ್ಲಿ ಹಳೆಯ ಯಂತ್ರಗಳದೇ ಕಾರ್ಯಕ್ಷೇತ್ರ. ಒಟ್ಟಾರೆ ನಷ್ಟದೆಡೆಗೆ ಸಾಗಿದ ಗಿರಣಿಯ ನೌಕರರಿಗೆ ಸ್ವಯಂ ನಿವೃತ್ತಿಯೋಜನೆ ಜಾರಿಗೊಳಿಸಲಾಗಿದೆ. ಈ ಯೋಜನೆ ಅಡಿಯಲ್ಲಿ ೧೯೮೫ರಲ್ಲಿ ೫೦ ಮಹಿಳಾ ಕಾರ್ಮಿಕರು, ೧೯೯೬ರಲ್ಲಿ ೨೩೦ ಪುರುಷ ಕಾರ್ಮಿಕರು ಕೆಲಸವನ್ನು ತ್ಯಜಿಸಿದರು.[೪೩] ಮೇಲ್ಕಂಡ ಕಾರ್ಮಿಕರು ತಮ್ಮ ವೃತ್ತಿಯನ್ನು ತ್ಯಜಿಸಿದರೂ ಗಿರಣಿ ಅಭಿವೃದ್ಧಿ ಹೊಂದಲಿಲ್ಲ. ಹಾಲಿ ೨೭೭ ಕಾರ್ಮಿಕರು ಹಾಗೂ ೨೨ ಜನ ಸಿಬ್ಬಂದಿ ವರ್ಗ ಮಾತ್ರ ಗಿರಣಿಯಲ್ಲಿ ಉಳಿದಿದ್ದಾರೆ.[೪೪] ಇಂತಹ ಚರಿತ್ರೆ ಹೊಂದಿರುವ ಗಿರಣಿ ರೋಗ ಗ್ರಸ್ಥವಾಗಿಯೇ ಉಳಿಯಲು ಕಾರಣಗಳೇನು? ಎಂದರೆ, ದಾವಣಗೆರೆ ಪರಿಸರದಲ್ಲಿ ರೇಷ್ಮೆ ಮತ್ತು ಉಲ್ಲನ್ ಕಚ್ಚಾ ಸಾಮಗ್ರಿಯು ಬಹಳಷ್ಟು ಲಭ್ಯವಿಲ್ಲ. ಈ ಹಿನ್ನೆಲೆಯಲ್ಲಿ ಅವುಗಳ ಉತ್ಪಾದನೆ ನಿರೀಕ್ಷಿತ ಮಟ್ಟ ಮುಟ್ಟಲಿಲ್ಲ. ನಂತರ ಈ ಗಿರಣಿಯಲ್ಲಿ ಹವಾ ನಿಯಂತ್ರಣ ವ್ಯವಸ್ಥೆ ಇದ್ದು ಗುಣಮಟ್ಟದ ಉತ್ಪಾದನೆಗೆ ಇದು ಅನಿವಾರ್ಯವೂ ಹೌದು. ಈ ವ್ಯವಸ್ಥೆ ಈಗ ಬಿಳಿಯಾನೆಯಾಗಿದೆ. ಏಕೆಂದರೆ ಗಿರಣಿಯ ಎಲ್ಲಾ ಯಂತ್ರಗಳೂ ಉತ್ಪಾದನಾ ಕಾರ್ಯದಲ್ಲಿ ನಿರತವಾಗಿಲ್ಲ. ಆದರೆ ಹವಾ ನಿಯಂತ್ರಣ ಯಂತ್ರಗಳು ಎಲ್ಲಾ ಕಡೆ ಚಾಲ್ತಿಯಲ್ಲಿದ್ದು ವಿದ್ಯುತ್ ಬಿಲ್ಲು ವಿಪರೀತವಾಗುತ್ತದೆ. ಅಲ್ಲಿರುವಂತಹ ಯಂತ್ರಗಳು ತುಂಬಾ ಹಳೆಯವಾಗಿದ್ದು ಹೆಚ್ಚಿನ ಪ್ರಮಾಣದ ವಿದ್ಯುತ್ ಬಳಕೆಯಾಗುವುದರೊಂದಿಗೆ, ವೇಗದ ಮಿತಿ ಕಡಿಮೆ ಇದ್ದು ಉತ್ಪಾದನಾ ಪ್ರಮಾಣವೂ ಕಡಿಮೆಯಾಗುತ್ತದೆ. ಇಂತಹ ಈಗಿನ ಸ್ಥಿತಿಯಲ್ಲಿ ಗಿರಣಿ ಉಳಿವು ಸಾಧ್ಯವಿಲ್ಲ ಎನ್ನುತ್ತಾರೆ ಆಡಳಿತ ವರ್ಗ ಹಾಗೂ ಕಾರ್ಮಿಕ ಸಮೂಹ.

ಅಸ್ತಿತ್ವ ಉಳಿಸಿಕೊಂಡಿರುವ ಗಿರಣಿಗಳಿಗೂ ಮತ್ತು ಎನ್.ಟಿ.ಸಿ ವ್ಯಾಪ್ತಿಯ ಯಲ್ಲಮ್ಮ ಗಿರಣಿಗೂ ಇರುವ ವ್ಯತ್ಯಾಸಗಳು

ಇಂದಿನ ಸ್ಪರ್ಧಾ ಯುಗದಲ್ಲೂ ಅಸ್ತಿತ್ವ ಉಳಿಸಿಕೊಂಡಿರುವ ಗಿರಣಿಗಳಲ್ಲಿ ಖಾಯಂ ನೌಕರರ ಸಂಖ್ಯೆ ಕಡಿಮೆ ಇದೆ. ಅಲ್ಲಿ 'ಹೈರ್ ಅಂಡ್ ಫೈರ್' (ಸಂದರ್ಭದ ಅನಿವಾರ್ಯತೆಯ ಹಿನ್ನೆಲೆಯಲ್ಲಿ) ಪದ್ಧತಿಯಲ್ಲಿ ಕಾರ್ಮಿಕ ನೇಮಕಾತಿ ವ್ಯವಸ್ಥೆ ಇದೆ. ಆದರೆ ಯಲ್ಲಮ್ಮ ಗಿರಣಿಯಲ್ಲಿ ಉದ್ಯೋಗ ಭದ್ರತೆ ಇರುವ ಕಾರ್ಮಿಕರಿದ್ದಾರೆ. ಅಸ್ಥಿತ್ವ ಉಳಿಸಿಕೊಂಡಿರುವ ಇತರೆ ಗಿರಣಿಗಳಲ್ಲಿ ತಾತ್ಕಾಲಿಕ ಕಾರ್ಮಿಕರೇ ಹೆಚ್ಚು ಜನರಿದ್ದು ಅವರಿಗೆ ದಿನಕ್ಕೆ ೫೦ ರೂ ವೇತನ ನೀಡಿದರೆ ಯಲ್ಲಮ್ಮ ಗಿರಣಿಯ ಜನರಲ್ ಮ್ಯಾನೇಜರ್ ಗಿರಣಿಯ ಆರ್ಥಿಕ ದುಸ್ಥಿತಿಗೆ ಈ ಅಂಶವನ್ನೂ ಮುಂದಿಡುತ್ತಾರೆ. ಎರಡೂ ಗಿರಣಿಗಳಲ್ಲಿ ಇಷ್ಟೇ ಉತ್ಪಾದನೆ ಮಾಡಬೇಕೆಂಬ ನಿಯಮವಿದೆ, ಆದರೆ ಕೂಲಿಯಲ್ಲಿರುವ ವ್ಯತ್ಯಾಸ ಆದಾಯದ ಮೇಲೆ ಪರಿಣಾಮ ಬೀರುತ್ತದೆ.

ಯಲ್ಲಮ್ಮ ಹತ್ತಿ ಗಿರಣಿಯ ಕಛೇರಿಯ ಸಿಬ್ಬಂದಿ ಕೇವಲ ೩೧ ಜನರಿದ್ದರೆ, ಕಾರ್ಮಿಕರು ೭೨೨ ಜನರಿದ್ದಾರೆ. ಆದರೆ ಕಛೇರಿ ಸಿಬ್ಬಂದಿ ವೇತನ ಅಧಿಕ ಸಂಖ್ಯೆಯ ಕಾರ್ಮಿಕರಿಗೆ ನೀಡುವ ವೇತನಕ್ಕಿಂತಲೂ ಹೆಚ್ಚಾಗಿರುತ್ತದೆ. ಇಂತಹ ಹಲವು ಸಂಗತಿಗಳು ಶ್ರೀ ಯಲ್ಲಮ್ಮ ಕಾಟನ್, ಉಲ್ಲನ್ ಅಂಡ್ ಸಿಲ್ಕ್ ಮಿಲ್ಸ್ ಲಿಮಿಟೆಡ್ ಗಿರಣಿ ಚೇತರಿಸಿಕೊಳ್ಳಲು ಅಡ್ಡಿಯುಂಟು ಮಾಡುತ್ತಿದೆ.

ಈಗಾಗಲೇ ಸ್ವಯಂ ನಿವೃತ್ತಿ ಪಡೆದುಕೊಂಡ ಶ್ರೀ ಯಲ್ಲಮ್ಮ ಗಿರಣಿ ಕಾರ್ಮಿಕರ ಸ್ಥಿತಿ-ಗತಿ

ಈ ಹಿಂದೆ ಸ್ವಯಂ ನಿವೃತ್ತಿ ಪಡೆದುಕೊಂಡ ೬ ಮಹಿಳೆಯರು, ೧೩ ಪುರುಷ ಕಾರ್ಮಿಕರನ್ನು ಸಂದರ್ಶನ ಮಾಡಿ ಸಂಗ್ರಹಿಸಿದ ಮಾಹಿತಿಯಿಂದ ಅವರ ಸಮಸ್ಯೆಗಳನ್ನು ಪ್ರಸ್ತಾಪಿಸುತ್ತಿದ್ದೇನೆ.

ಸ್ವಯಂ ನಿವೃತ್ತಿ (ವಿ.ಆರ್.ಎಸ್) ತೆಗೆದುಕೊಳ್ಳಲು ಸಂಘ ಸಹಕರಿಸಲಿಲ್ಲವೇ? ಎಂಬ ಪ್ರಶ್ನೆಗೆ ಕಾರ್ಮಿಕ ಮುಖಂಡರೇ ಮೊದಲು ನಿವೃತ್ತಿಗೆ ಅರ್ಜಿ ಸಲ್ಲಿಸಿದ್ದರಿಂದ ನಾವೂ ಮುಂದಾದೆವು. ಮುಂದೆ ಗಿರಣಿ ಬಂದ್ ಆದರೆ ಈ ಸೌಲಭ್ಯವೂ ಸಿಗುವುದಿಲ್ಲ ಎಂದು, ಹಾಗೂ ಕೆಲವರು ಒಂದೇ ಭಾರಿ ಬಹಳ ಹಣ ಸಿಗುತ್ತದೆ, ಏನಾದರೂ ವ್ಯವಹಾರ ಮಾಡಬಹುದೆಂದು ನಿವೃತ್ತಿ ಪಡೆದುಕೊಂಡರು. ಆದರೆ ಈ ಹಣ ಸದ್ಬಳಕೆಯಾಗದೆ ಬಹುಪಾಲು ಪೋಲಾಗಿ ಅದೆಷ್ಟೋ ಕಾರ್ಮಿಕರು ಮನಸ್ಸಿನ ಸ್ಥಿಮಿತತೆ ಕಳೆದುಕೊಂಡಿದ್ದಾರೆ.

ಬಂದ ಹಣದಿಂದ ಹೆಚ್ಚು ಹೆಣ್ಣುಮಕ್ಕಳಿರುವವರು ಅವರ ವಿವಾಹಕ್ಕೆ ಹಣ ತೊಡಗಿಸಿಕೊಂಡರು. ವರದಕ್ಷಿಣೆ ಅಥವ ದುಬಾರಿ ವೆಚ್ಚಗಳಿಲ್ಲದೆ ಮದುವೆಗಳು ಬಹಳಷ್ಟು ಸಂದರ್ಭಗಳಲ್ಲಿ ನಡೆಯುವುದಿಲ್ಲ. ಸ್ವಲ್ಪ ಹಣ ನೀಡಿ, ಮುಂದೆ ಸ್ವಲ್ಪ ಕೊಡುತ್ತೇವೆಂದು, ಕೊಡಲಾರದೆ ಅನಾಹುತಗಳು ಸಂಭವಿಸಿವೆ. ಇದೇ ಗಿರಣಿ ಕಾರ್ಮಿಕರಾದ ಶ್ರೀ ಕೆ.ಎಚ್. ಬಸವರಾಜಪ್ಪ (ಟೋಕನ್ ಸಂಖ್ಯೆ ೨೮೩) ಹಾಗೂ ಶ್ರೀಮತಿ ಲಕ್ಷ್ಮೀಬಾಯಿ (ಟೋಕನ್ ಸಂಖ್ಯೆ ೧೬೬) ತಮ್ಮ ಕುಟುಂಬದಲ್ಲಾದ ಅನಾಹುತಗಳನ್ನು ತಿಳಿಸುತ್ತಾ ಕಣ್ಣೀರಿಟ್ಟಿದ್ದಾರೆ.

ಗಂಡುಮಕ್ಕಳು ತಮ್ಮಂತೆಯೇ ಅವಿದ್ಯಾವಂತರಾಗಬಾರದೆಂದು ವಿದ್ಯೆ ಕೊಡಿಸುತ್ತಿದ್ದು ಬಹುಪಾಲು ಅವರೂ ಅರ್ಧದಲ್ಲೇ ವಿದ್ಯಾಭ್ಯಾಸ ನಿಲ್ಲಿಸಿ, ಕೆಟ್ಟು ಹೋಗಿ ತಂದೆ-ತಾಯಿಗಳ ಮಾತನ್ನು ಕೇಳದಂತಾಗಿದ್ದಾರೆ. ಶಿಕ್ಷಣವಿಲ್ಲದ ನಮಗೆ ನಿವೃತ್ತಿ ಹೊಂದುವಾಗ ಯಾವ ಆಧಾರದ ಮೇಲೆ ಪರಿಹಾರ ನೀಡಿದರು? ಹುಟ್ಟಿದ ದಿನಾಂಕವನ್ನು ಎಲ್ಲಿಗೆ ನಿರ್ಧರಿಸಿದರು? ಎಷ್ಟು ಪರಿಹಾರ ಬರಬೇಕು? ಎಂಬುದು ತಿಳಿಯದೆ, ಹೇಳಿದೆಡೆಯಲ್ಲಾ ಸಹಿ ಹಾಕಿ ಪರಿಹಾರ ಪಡೆದವು. ಆದರೆ ಪಿಂಚಣಿ ಪಡೆಯಲು ಇದು ಅಡ್ಡಿಯಾಗಿದೆ ಎನ್ನುವ ನಿವೃತ್ತ ಕಾರ್ಮಿಕರು, ಸಂಘ ಇಂತಹ ವಿಚಾರಗಳ ಬಗ್ಗೆ ಸರಿಯಾದ ಮಾರ್ಗದರ್ಶನ ನೀಡಬೇಕಿತ್ತು, ಆದರೆ ಆ ಕೆಲಸ ಮಾಡಲಿಲ್ಲ ಎಂಬ ಆರೋಪ ಮಾಡಿದ್ದಾರೆ.

ಇವರ ಆಶೋತ್ತರಗಳೇನು? ಗಿರಣಿ ಬಂದ್ ಆಗುತ್ತದೆ ಎಂದು ನಿವೃತ್ತಿ ಪಡೆದುಕೊಂಡ ಇವರು ಇನ್ನೂ ಗಿರಣಿ ಕುಂಟುತ್ತಾ ಸಾಗುತ್ತಿರುವುದನ್ನು ಗಮನಿಸಿ, ಕೆಲಸದಲ್ಲಿದ್ದಿದ್ದರೆ ಈ ಅನಾಹುತ, ತೊಂದರೆಗಳಿಂದ ಮುಕ್ತವಾಗಬಹುದಿತ್ತು ಎಂಬ ಆಲೋಚನೆಯಲ್ಲಿ 'ತಮ್ಮ ಮಕ್ಕಳಿಗಾದರೂ ಈ ಗಿರಣಿಯಲ್ಲಿ ಉದ್ಯೋಗ ನೀಡಬೇಕೆನ್ನುತ್ತಾರೆ'. ಆದರೆ ನಿಯಮಾನುಸಾರ ಅಂತಹ ಸಾಧ್ಯತೆಗಳಿರುವುದಿಲ್ಲ.

ಹುಟ್ಟಿದ ದಿನಾಂಕವನ್ನು ಸ್ಪಷ್ಟಪಡಿಸಿಕೊಂಡು ಪಿಂಚಣಿ ನಿಗದಿಪಡಿಸಬೇಕೆನ್ನುತ್ತಾರೆ. ಇದನ್ನು ದುಡಿದು ದಣಿದು ಸಂಕಷ್ಟದಲ್ಲಿರುವ ಇವರಿಗೆ ನಿಯಮಾನುಸಾರ ನೀಡಬೇಕಾದದ್ದು ಮಾನವೀಯತೆಯಾಗಿದೆ.

೧೯೮೫ ಹಾಗೂ ೧೯೯೬ರಲ್ಲಿ ಸ್ವಯಂ ನಿವೃತ್ತಿಗೊಂಡ ಕಾರ್ಮಿಕರಿಗೆ ಮುಂದಿನ ದಿನಗಳನ್ನು ಹೇಗೆ ಎದುರಿಸಬೇಕು ಎಂಬ ತರಬೇತಿಯನ್ನು ನೀಡಬೇಕಾಗಿತ್ತು. ಆದರೆ ಭಾರತ ಸರ್ಕಾರ ಈಗ ಕಣ್ಣು ತೆರೆದು (ಡಿಸೆಂಬರ್ ೨೦೦೪) ವಿವಿಧ ವೃತ್ತಿಗಳಿಗೆ ಉಚಿತ ತರಬೇತಿ ನೀಡಲು ಮುಂದಾಗಿದೆ. ತೊಳಹುಣಸೆ ಗ್ರಾಮದಲ್ಲಿ ಈ ಕಾರ್ಯವು ಡಿಸೆಂಬರ್ ೨೦೦೪ನೇ ಮಾಹೆಯಲ್ಲಿ ನಡೆಯುತ್ತಿದೆ. ಆದರೆ ಈಗಾಗಲೇ ಇಳಿವಯಸ್ಸಿನಲ್ಲಿ ಈ ತರಬೇತಿ ನೀಡುತ್ತಿರುವುದು ಅವರು ಪಡೆಯುವ ಶಿಷ್ಯವೇತನ ಬಿಟ್ಟು ಬೇರೇನೂ ಲಾಭವಾಗದು. ಮಹಿಳೆಯರು ಹೊಲಿಗೆ ತರಬೇತಿಯಲ್ಲಿ ನಿರತರಾಗಿದ್ದಾರೆ. ಅಲ್ಲಿರುವ ಮಹಿಳೆಯರಿಗೆ ಬಹುಪಾಲು ಮಂಡಿನೋವಿದ್ದು ಯಂತ್ರ ತುಳಿಯಲು ಆಗುವುದಿಲ್ಲ ಹಾಗೂ ಉತ್ಸಾಹ ಇರುವುದಿಲ್ಲ. ಏಕೆಂದರೆ ಅವರು ಕೆಲಸ ಮಾಡುವ ಪರಿಸ್ಥಿತಿ ಅಷ್ಟು ಉತ್ತಮವಾಗಿರದೆ ಅಸ್ತಮಾ, ಟಿ.ಬಿ ಮುಂತಾದ ಖಾಯಿಲೆಗಳಿಗೆ ಸಹಜವಾಗಿ ತುತ್ತಾಗಿರುತ್ತಾರೆ. ಪುರುಷರಿಗೆ ಪ್ಲಂಬರ್ ಕೆಲಸ, ಯಂತ್ರಗಳ ರಿಪೇರಿ ಮುಂತಾದ ತರಬೇತಿ ನೀಡುತ್ತಿದ್ದು ಅವರಲ್ಲೂ ಸಹ ಕಠಿಣವಾದ ಕೆಲಸ ಮಾಡುವ ಶಕ್ತಿ ಇಲ್ಲದಂತಾಗಿದೆ. ಹೀಗೆ ಸ್ವಯಂ ನಿವೃತ್ತಿ ಪಡೆದ ಕಾರ್ಮಿಕರ ಚಿತ್ರಣ ಕಂಡುಬರುತ್ತದೆ.

೩.೬. ಹತ್ತಿಯ ಮಹತ್ವ

ಪ್ರಪಂಚದಲ್ಲಿ ಮನುಷ್ಯನಿಗೆ ಬದುಕಲು ಆಹಾರ ಮತ್ತು ಬಟ್ಟೆ ಜೀವನಾವಶ್ಯಕ ವಸ್ತುಗಳಾಗಿವೆ. ಮನುಷ್ಯನು ನಾಗರೀಕತೆಯ ಪೂರ್ವದಲ್ಲಿ ಶರೀರವನ್ನು ರಕ್ಷಿಸಿಕೊಳ್ಳಲು ಎಲೆ, ಮರದ ತೊಗಟೆಗಳನ್ನು ಬಳಸುತ್ತಿದ್ದನು. ಅವನಲ್ಲಿ ನಾಗರೀಕತೆ ಮೂಡಿದಂತೆ ಬಟ್ಟೆ ಬಳಸುವುದನ್ನು ರೂಢಿಸಿಕೊಂಡನು, ಮುಂದುವರೆದು ವಿವಿಧ ಶೈಲಿಯಲ್ಲಿ ಬಟ್ಟೆ ತಯಾರಿಸಿಕೊಂಡನು. ಈ ರೀತಿಯ ಬಟ್ಟೆ ತಯಾರಿಸಲು ಅವನು ಹತ್ತಿಯನ್ನು ಪ್ರಧಾನ ಕಚ್ಚಾ ಸರಕಾಗಿ ಬಳಸಿಕೊಂಡನು. ಪ್ರಪಂಚದ ಬಹುತೇಕ ರಾಷ್ಟ್ರಗಳಲ್ಲಿ ಹತ್ತಿಯನ್ನು ಬೆಳೆಯಲಾಗುತ್ತಿದ್ದು, ಭಾರತದಲ್ಲಿ ಅದೊಂದು ವಾಣಿಜ್ಯ ಬೆಳೆಯಾಗಿ ಅರ್ಥವ್ಯವಸ್ಥೆಯಲ್ಲಿ ಪ್ರಮುಖ ಪಾತ್ರ ವಹಿಸಿದೆ. ಭಾರತ ಪ್ರಪಂಚದ ಹತ್ತಿ ಉತ್ಪಾದನೆಯಲ್ಲಿ ನಾಲ್ಕನೇ ಸ್ಥಾನವನ್ನೂ, ಕರ್ನಾಟಕವು ದೇಶದಲ್ಲಿ ನಾಲ್ಕನೇ ಸ್ಥಾನವನ್ನೂ ಪಡೆದುಕೊಳ್ಳುವುದರ ಜೊತೆಗೆ, ಕರ್ನಾಟಕದಲ್ಲಿ ದಾವಣಗೆರೆಯು ಕಪ್ಪುಮಣ್ಣಿನ ಭೂಭಾಗ ಹೊಂದಿ ಹತ್ತಿ ಬೆಳೆಗೆ ಪ್ರಸಿದ್ಧಿ ಪಡೆದಿದ್ದಿತು.

ಇಷ್ಟು ಪ್ರಾಮುಖ್ಯತೆ ಪಡೆದಿರುವ ಹತ್ತಿಯು ಭಾರತದಲ್ಲಿ ಅತ್ಯಂತ ಪ್ರಾಚೀನ ಕಾಲದಿಂದ ಮೊದಲುಗೊಂಡು ಅರಸು ಮನೆತನಗಳ ಆಳ್ವಿಕೆಯಲ್ಲೂ ಪ್ರಮುಖ ವಾಣಿಜ್ಯ ಬೆಳೆಯಾಗಿತ್ತು. ಪ್ರಪಂಚದಲ್ಲಿ ಹತ್ತಿ ಬೆಳೆಯುವ ಪ್ರದೇಶದ ಆಧಾರದ ಮೇಲೆ ಭಾರತವು ಅತಿ ಹೆಚ್ಚು ಪ್ರದೇಶದಲ್ಲಿ ಹತ್ತಿ ಬೆಳೆಯುತ್ತಿದ್ದು, ಉತ್ಪಾದನೆಯಲ್ಲಿ ೫೫ ಮುಖ್ಯ ರಾಷ್ಟ್ರಗಳಲ್ಲಿ ಅಮೆರಿಕ, ರಷ್ಯಾ, ಚೀನಾದ ನಂತರ ನಾಲ್ಕನೇ ಸ್ಥಾನ ಪಡೆದಿದೆ.[೪೫]

ಸಿಂಧೂ ನಾಗರೀಕತೆಯ ಮೊಹೆಂಜೊದಾರೋವಿನಲ್ಲಿ ದೊರೆತಿರುವ ಬಟ್ಟೆ ನೇಯ್ಗೆಯ ಚಕ್ರಗಳು ಹತ್ತಿ, ಉಣ್ಣೆ ಬಟ್ಟೆ ನೇಯ್ಗೆ ಕುರಿತು ಪ್ರಾಚೀನ ಭಾರತೀಯ ಪ್ರಜ್ಞೆಯನ್ನು ತಿಳಿಸುತ್ತವೆ.[೪೬] ಅಂತೆಯೇ ಮೊಘಲರ ಕಾಲದಲ್ಲಿ ಇಡೀ ಉತ್ತರ ಭಾರತದಲ್ಲಿ ಹತ್ತಿಯನ್ನು ಬೆಳೆಯಲಾಗುತ್ತಿತ್ತು[೪೭] ಎನ್ನಲಾಗಿದೆ ಯಾದರೂ ಹತ್ತಿಯನ್ನು ಉತ್ತರದ ಹಿಮಾಲಯದಿಂದ ದಕ್ಷಿಣದ ಕನ್ಯಾಕುಮಾರಿಯವರೆಗೂ ಮಣ್ಣಿನ, ಹವಾಮಾನದ ಗುಣಗಳ ಆಧಾರದ ಮೇಲೆ ಬೆಳೆಯಲಾಗುತ್ತಿತ್ತು. ಅಕ್ಬರನ ಕಾಲದಲ್ಲಿ ಹತ್ತಿ ಬಟ್ಟೆ ಉದ್ಯಮ ಪ್ರಗತಿಯಲ್ಲಿತ್ತು. ಈ ಕಾಲದಲ್ಲಿ ಉತ್ಪಾದಿಸಿದ ಬಟ್ಟೆಗಳನ್ನು ಆಫ್ರಿಕಾ, ಅರೇಬಿಯಾ, ಈಜಿಪ್ಟ್, ಬರ್ಮ ಮತ್ತು ಮೆಕ್ಕಾಗಳಿಗೆ ರಫ್ತು ಮಾಡಲಾಗುತ್ತಿತ್ತು.[೪೮] ವಿದೇಶಿ ಪ್ರವಾಸಿಯಾದ ಬಾರ್ಬೋಸ ತನ್ನ ಬರವಣಿಗೆಯಲ್ಲಿ ಕ್ಯಾಂಬೆ ಪ್ರದೇಶ ಹತ್ತಿ ಬೆಳೆಗೆ ಪ್ರಸಿದ್ಧವಾಗಿತ್ತು ಎಂದು ಉಲ್ಲೇಖಿಸಿದ್ದಾನೆ.[೪೯] ಉತ್ತಮ ಗುಣಮಟ್ಟದ ಡಾಕಾ ಮಸ್ಲಿನ್ ಬಟ್ಟೆಗೆ ವಿದೇಶಗಳಲ್ಲೂ ಬೇಡಿಕೆ ಇತ್ತು. ಹೀಗೆ ಪ್ರಾಚೀನ ಕಾಲದಿಂದಲೂ ಪ್ರಮುಖ ಪಾತ್ರ ವಹಿಸಿದ್ದ ಹತ್ತಿಯು ವಸಾಹತುಶಾಹಿ ಕಾಲದಲ್ಲಿ ಹಲವು ವೈಪರಿತ್ಯಗಳನ್ನು ಕಂಡಿತು.

ಪ್ರಪಂಚದಲ್ಲಿ ಮೊಟ್ಟಮೊದಲು ಹತ್ತಿ ಕೃಷಿ ಆರಂಭಿಸಿದ ದೇಶ ಸ್ಪೈನ್ ನಂತರ ರಷ್ಯಾ, ಅಮೇರಿಕಾ, ಇಂಗ್ಲೆಂಡ್ ಮುಂತಾದ ರಾಷ್ಟ್ರಗಳಿಗೆ ಅದು ವಿಸ್ತರಿಸಿತು. ಇಂಗ್ಲೆಂಡಿನಲ್ಲಿ ಮೊದಲು ಹತ್ತಿಯನ್ನು ಮೇಣದ ಬತ್ತಿಗಾಗಿ ಬಳಸಲಾಗುತ್ತಿತ್ತು.[೫೦] ಈ ದೇಶವು ಅಮೇರಿಕಾ ಮುಂತಾದ ದೇಶಗಳಿಂದ ಹತ್ತಿಯನ್ನು ಆಮದು ಮಾಡಿಕೊಳ್ಳುತ್ತಿತ್ತು. ಅಲ್ಲಿ ಹತ್ತಿ ಕೈಗಾರಿಕೋದ್ಯಮ ತೀವ್ರ ಪ್ರಗತಿಗೊಂಡು ಕಚ್ಚಾ ಸಾಮಗ್ರಿಯ ಕೊರತೆಯುಂಟಾದಾಗ ಭಾರತವನ್ನು ಆಳುತ್ತಿದ್ದ ಈಸ್ಟ್ ಇಂಡಿಯ ಕಂಪನಿಯು ಇಲ್ಲಿ ಹೆಚ್ಚು ಹತ್ತಿ ಬೆಳೆಯಲು ಉತ್ತೇಜನ ನೀಡಿತು. ಆದರೆ ಇಲ್ಲಿನ ಹತ್ತಿಯನ್ನು ತಮ್ಮ ಕೈಗಾರಿಕೆಗಳಿಗೆ ಬಳಸಿಕೊಳ್ಳುವ ಮೂಲಕ ಭಾರತೀಯ ಹತ್ತಿ ಕೈಗಾರಿಕೋದ್ಯಮವನ್ನು ಹಾಳು ಮಾಡುವ ಕ್ರಮ ಕೈಗೊಂಡರು.

ಕರ್ನಾಟಕದಲ್ಲಿ ರಾಯಚೂರು, ಧಾರವಾಡ, ಚಿತ್ರದುರ್ಗ, ಗುಲ್ಬರ್ಗಾ, ಬಳ್ಳಾರಿ, ಬಿಜಾಪುರ, ಬೆಳಗಾಂ, ಶಿವಮೊಗ್ಗ ಪ್ರಮುಖ ಹತ್ತಿ ಬೆಳೆಯುವ ಜಿಲ್ಲೆಗಳಾಗಿವೆ. ಕರ್ನಾಟಕದಲ್ಲಿ ಸುಮಾರು ಹತ್ತು ಲಕ್ಷ ಹೆಕ್ಟೇರ್ (೧೯೭೭-೭೮) ಗಳಷ್ಟು ಕ್ಷೇತ್ರದಲ್ಲಿ ಹತ್ತಿಯನ್ನು ಬೆಳೆಯುತ್ತಾರೆ.[೫೧] ಇಂದು ಸುಮಾರು ೨೦೦ಲಕ್ಷ ಎಕರೆ ಪ್ರದೇಶದಲ್ಲಿ ಹತ್ತಿಯನ್ನು (೨೦೦೪) ಬೆಳೆಯುತ್ತಿದ್ದಾರೆ,[೫೨] ಎಂಬುದು ಇತ್ತೀಚಿನ ದಿನಗಳ ಮಾಹಿತಿಯಾಗಿದೆ. ಈ ಅಂಕಿ ಅಂಶಗಳಿಂದ ಕರ್ನಾಟಕದಲ್ಲಿ ಹತ್ತಿಯು ಪ್ರಮುಖ ಬೆಳೆಯೆಂಬುದು ಸ್ಪಷ್ಟವಾಗುತ್ತದೆ. ಈ ಅಧ್ಯಯನದ ವಿಷಯದ ಪ್ರವೇಶವು ೧೯೯೭ರ ವರೆಗೂ ಚಿತ್ರದುರ್ಗ ಜಿಲ್ಲೆಯಲ್ಲಿದ್ದು ಅಲ್ಲಿಯೂ ಹತ್ತಿ ಬೆಳೆಯಲು ಕೃಷಿ ಯೋಗ್ಯವಾದ ಕಪ್ಪು ಮಣ್ಣು ಹೆಚ್ಚಾಗಿತ್ತು. ಇಲ್ಲಿನ ಪರಿಸರ ಹತ್ತಿ ಕೃಷಿಗೆ ಆರಂಭದಲ್ಲಿ (ಭದ್ರಾ ಅಣೆಕಟ್ಟು ನೀರು ಬರುವವರೆಗೆ) ಉತ್ತೇಜನಕಾರಿಯಾಗಿತ್ತು. ಈ ಬೆಳೆಯು ಹತ್ತಿ ವ್ಯಾಪಾರವನ್ನು ಹೆಚ್ಚಿಸಿ ಆ ಕ್ಷೇತ್ರದಲ್ಲಿ ಪಳಗಿದ ವ್ಯಾಪಾರಿಗಳು ಎಂಟು ಹತ್ತಿ ಗಿರಣಿಗಳನ್ನು ಸ್ಥಾಪಿಸಲು ಪ್ರೇರಣೆ ನೀಡಿತು. ಚಿತ್ರದುರ್ಗ ಜಿಲ್ಲೆಯು ಭೌಗೋಳಿಕವಾಗಿ ಒಟ್ಟು ೨೬, ೭೧, ೨೪೨ ಎಕರೆ ಪ್ರದೇಶ ಒಳಗೊಂಡಿದ್ದು, ಅದರಲ್ಲಿ ೧೨,೮೦,೨೩೬ ಎಕರೆ ಪ್ರದೇಶ ವ್ಯವಸಾಯಕ್ಕೆ

ಬಳಕೆಯಾಗುತ್ತಿದೆ.[೭೩] ಇದರಲ್ಲಿ ೧,೧೧,೫೫೭ ಎಕರೆ ಪ್ರದೇಶ ೧೯೬೪-೬೫ ಹತ್ತಿ ಬೆಳೆಯಲು ಬಳಸಲಾಗುತ್ತಿತ್ತು.[೭೪] ಸುಧಾರಿತ ತಳಿಯಾದ ಲಕ್ಷ್ಮಿ ಹತ್ತಿಯನ್ನು ಹೆಚ್ಚಾಗಿ ಈ ಪ್ರದೇಶದಲ್ಲಿ ಬೆಳೆಯಲಾಗುತ್ತಿತ್ತು. ನಂತರ ನೆರೆಯ ಧಾರವಾಡ ಜಿಲ್ಲೆಯಿಂದ 'ಜಯಧರ' ತಳಿಯನ್ನು ಬಳಸಿ ಹತ್ತಿ ಬೆಳೆಯುತ್ತಿದ್ದರು. ಕ್ರಮೇಣ ಬಿ-೪೦,ಎಂ.ಎ. ೫ ಮುಂತಾದ ತಳಿಗಳನ್ನು ಬಳಸಿ ಹತ್ತಿ ಬೆಳೆಯಲಾಯಿತು. ಆದರೆ ೧೯೬೦ರ ದಶಕದಲ್ಲಿ ಭದ್ರಾ ಆಣೆಕಟ್ಟಿನ ನೀರು ದಾವಣಗೆರೆ, ಹರಿಹರ ಮುಂತಾದ ಚಿತ್ರದುರ್ಗ ಜಿಲ್ಲೆಯ ಪ್ರದೇಶಗಳಿಗೆ ವ್ಯವಸಾಯಕ್ಕೆ ಲಭ್ಯವಾಯಿತು. ಇಲ್ಲಿಂದ ಮುಂದೆ ಚಿತ್ರದುರ್ಗ ಜಿಲ್ಲೆಯ ಹತ್ತಿ ಬೆಳೆಯ ಮೇಲೆ ತೀವ್ರ ಪರಿಣಾಮ ಉಂಟಾಗಿ ಉತ್ಪಾದನೆಯಲ್ಲಿ ಕುಸಿತ ಉಂಟಾಯಿತು. ಫ್ರಾನ್ಸಿಸ್ ಬುಕನಾನ್ ತನ್ನ ವರದಿಯಲ್ಲಿ ತಿಳಿಸುವಂತೆ 'ಹತ್ತಿ ಕೃಷಿಗೆ ಯೋಗ್ಯವಾದ ಕಪ್ಪು ಮಣ್ಣಿನ ಪ್ರದೇಶವು ನೀರಾವರಿ ಸೌಕರ್ಯಕ್ಕೊಳಪಟ್ಟಾಗ, ರೈತರು ತಾವು ಬೆಳೆಯುತ್ತಿದ್ದ ವಾಣಿಜ್ಯ ಬೆಳೆಗಳಲ್ಲಿ ಬದಲಾವಣೆ ಮಾಡಿಕೊಂಡರು. ಹತ್ತಿ ಬೆಳೆಯುತ್ತಿದ್ದವರು ಅದೇ ಮಣ್ಣಿನಲ್ಲಿ ಭತ್ತ, ಅಡಿಕೆ, ತೆಂಗು, ಶೇಂಗಾ, ಮೆಕ್ಕೆಜೋಳ, ಸೂರ್ಯಕಾಂತಿಯನ್ನು ಹೆಚ್ಚು ಹೆಚ್ಚು ಬೆಳೆಯಲಾರಂಭಿಸಿದರು'.

ರೈತರು ಹತ್ತಿ ಬೆಳೆಯಲು ನಿರಾಸಕ್ತರಾಗಲು ಒಣಭೂಮಿ ನೀರಾವರಿಯಾಗಿ ಮಾರ್ಪಟ್ಟಿದ್ದು ಒಂದೇ ಕಾರಣವಲ್ಲ. ಈ ಬದಲಾವಣೆಯ ಜೊತೆಗೆ ಕೈಜೋಡಿಸಿದ ಇತರೆ ಕಾರಣಗಳನ್ನು ಗುರುತಿಸುವ ಅಗತ್ಯವಿದೆ. ಹತ್ತಿ ಬೆಳೆಯು ದೀರ್ಘಾವಧಿ ಬೆಳೆಯಾಗಿದ್ದು, ಇತರೆ ವಾಣಿಜ್ಯ ಬೆಳೆಗಳಾದ ಅಡಿಕೆ, ತೆಂಗು, ಶೇಂಗಾ, ಸೂರ್ಯಕಾಂತಿಯಂತೆ ಶ್ರಮದಾಯಕವಾಗಿರಲಿಲ್ಲ. ಆರಂಭದಲ್ಲಿ ಹತ್ತಿ ಬೆಳೆಗೆ ಕೀಟಗಳ ಬಾಧೆ ಕಡಿಮೆ ಇದ್ದು ಕ್ರಮೇಣ ಅಧಿಕವಾಯಿತು. ಬಹುಕಾಲದಿಂದಲೂ ಹತ್ತಿ ಬೆಳೆಯುವವರ ಬಾಳು ಆರ್ಥಿಕವಾಗಿ ಬಲಗೊಳ್ಳುತ್ತಿದ್ದುದು ಬದಲಾಗಿ, ಕೀಟಗಳ ವಿಪರೀತ ಹಾವಳಿಯಿಂದ ರೈತರ ಬದುಕನ್ನೇ ಹತ್ತಿಕ್ಕಿತು. ಈ ಕೀಟಗಳನ್ನು ಕೊಲ್ಲಲು ಯಥೇಚ್ಛವಾಗಿ ಕ್ರಿಮಿನಾಶಕಗಳನ್ನು ಬಳಸಬೇಕಾಯಿತು. ಒಂದೆಡೆ ಕ್ರಿಮಿನಾಶಕಗಳ ಬೆಲೆ ತೀವ್ರವಾಗಿ ಏರತೊಡಗಿದರೆ, ಇನ್ನೊಂದೆಡೆ ಎಷ್ಟೇ ವಿಷ ಬಳಸಿದರೂ ಕೀಟಗಳೇ ಗೆಲ್ಲತೊಡಗಿದವು. ಇದರಿಂದ ಒಂದೆಡೆ ಹತ್ತಿಯ ಉತ್ಪಾದನಾ ವೆಚ್ಚ ಅಧಿಕವಾದರೆ, ಮತ್ತೊಂದೆಡೆ ರೈತ ತನ್ನನ್ನು ಹತ್ತಿಕ್ಕುತ್ತಿರುವ ಹತ್ತಿ ಬೆಳೆಯ ಬಗ್ಗೆ ಆಸಕ್ತಿ ಕಳೆದುಕೊಂಡನು. ದಾವಣಗೆರೆ ಪ್ರದೇಶದ ಹತ್ತಿ ಬೆಲೆಯಲ್ಲಿ ಏರಿಕೆ ಕಂಡು ಬಂದಿತಾದರೂ, ಕೀಟನಾಶಕಗಳ ಬೆಲೆಯಲ್ಲಿ ಉಂಟಾದ ಏರಿಕೆಯಷ್ಟು ಹತ್ತಿ ಬೆಲೆಯಲ್ಲಾಗಲಿಲ್ಲ. ಲಕ್ಷ್ಮಿ, ಜಯಧರ ಮುಂತಾದ ತಳಿಯ ಹತ್ತಿಯನ್ನು ಬೆಳೆಯುತ್ತಿದ್ದಾಗ ನಕಲಿ ಬೀಜಗಳ ಹಾವಳಿ ಅಷ್ಟಾಗಿ ಇರಲಿಲ್ಲ. ಕ್ರಮೇಣ ನಕಲಿ ಬೀಜಗಳ ಹಾವಳಿ ವಿಪರೀತವಾಯಿತು. ಈ ಹಾವಳಿ ಎಷ್ಟಿತ್ತೆಂದರೆ ಅಸಲಿ ಬೀಜ ಯಾವುದು, ನಕಲಿ ಬೀಜ ಯಾವುದು ಎಂದು ಗುರುತಿಸಲಾಗದಷ್ಟು ಬಲವಾಗಿತ್ತು. ರೈತ ಸಂಘಗಳ ಪದಾಧಿಕಾರಿಗಳು ನಕಲಿ ಬೀಜದ ಹಾವಳಿ ವಿರುದ್ಧ ಹೋರಾಟ ಮಾಡಿದ್ದಕ್ಕೆ ಸಾಕಷ್ಟು ನಿದರ್ಶನಗಳಿವೆ. ೫.೧೦.೧೯೭೭ರಲ್ಲಿ ಸ್ಥಳೀಯ ಪತ್ರಿಕೆಯೊಂದರಲ್ಲಿ (ಜನತಾವಾಣಿ) ದಾವಣಗೆರೆಯ ಕಾಟನ್ ಸೂಪರ್‌ವೈಸರ್ ಅವರು ಪ್ರಕಟಣೆ ನೀಡಿ "ಹತ್ತಿ ತಳಿಯಲ್ಲಿ ಶುದ್ಧತೆ" ಕಾಪಾಡಿ ಎಂದು ರೈತರಿಗೆ ಸಲಹೆ ನೀಡಿದ್ದಾರೆ. ಇದರಿಂದ ತಳಿಯಲ್ಲಿ ನಕಲಿಹಾವಳಿ ಇದ್ದುದು ಸ್ಪಷ್ಟಗೊಳ್ಳುತ್ತದೆ.

ದೀರ್ಘಾವಧಿಯ ಕೃಷಿಯಾದ ಹತ್ತಿ ಬೆಳೆಯಲು ಹೆಚ್ಚು ಕೆಲಸಗಾರರು ಸದಾ ಕಾರ್ಯನಿರತ ವಾಗಿರಬೇಕು. ಅವಿಭಕ್ತ ಕುಟುಂಬಗಳಿಗೆ ಸೂಕ್ತವಾಗಿರುವ ಈ ಬೆಳೆಯು, ವಿಭಕ್ತ ಕುಟುಂಬಗಳಿಂದ ಆಕರ್ಷಣೆಗೊಳಗಾಲಿಲ್ಲ. ಹತ್ತಿ ಬಿಡಿಸುವಾಗ ಮೈಕೈಗೆಲ್ಲಾ ಗಿಡದ ಕಡ್ಡಿಗಳು ಹಾನಿಯುಂಟು ಮಾಡುತ್ತಿದ್ದವು. ನೀರಾವರಿ ಪ್ರದೇಶದ ರೈತರು ಭತ್ತ, ಶೇಂಗಾ ಮುಂತಾದ ಕೃಷಿಯಲ್ಲಿ ನಿರತವಾಗಿ ಹತ್ತಿ ಕೃಷಿಕರಂತೆ ಶ್ರಮಪಡದೆ ಇತರ ಬೆಳೆಗಳನ್ನು ಬೆಳೆಯುತ್ತಿದ್ದುದು ನೆರೆಯ ರೈತರ ಮೇಲೂ ಪರಿಣಾಮ ಬೀರಿತು. ತನ್ನ ನೆರೆಯ ರೈತ ತನ್ನಷ್ಟು ಶ್ರಮಪಡದೆ ಕೃಷಿ ಕಾರ್ಯದಲ್ಲಿ ತೊಡಗಿಸಿಕೊಂಡಿರುವುದು ಶ್ರಮಪಡುವ ಹತ್ತಿ ಬೆಳೆಗಾರರಿಗೂ ಮನಃ ಪರಿವರ್ತನೆ ಮಾಡಿತು.

ದಾವಣಗೆರೆ ಸುತ್ತಮುತ್ತಲಿನ ಚನ್ನಗಿರಿ, ಹೊನ್ನಾಳಿ, ದಾವಣಗೆರೆ ತಾಲ್ಲೂಕುಗಳಲ್ಲಿ ವ್ಯವಸಾಯಕ್ಕೆ ಭದ್ರಾ ನೀರು ಪಡೆದ ರೈತರು ಆರ್ಥಿಕವಾಗಿ ಅಭಿವೃದ್ಧಿಗೊಂಡಾಗ ನೀರಾವರಿ ಸೌಕರ್ಯದಿಂದ ಹೊರಗುಳಿದಿದ್ದ ನೆರೆಯ ರೈತರು ಅವರ ಬಾಳನ್ನು ಗಮನಿಸಿ ಕೊಳವೆ ಬಾವಿಗಳತ್ತ ತೆರಳಿದರು. ಹತ್ತಿ ಬೆಳೆಯುತ್ತಿದ್ದ ಕಪ್ಪು ಮಣ್ಣಿನ ಪ್ರದೇಶದಲ್ಲಿ ಕೊಳವೆ ಬಾವಿಗಳನ್ನು ತೋಡಿಸಿ ಆ ನೀರಿನಿಂದ ನೀರಾವರಿ ಪ್ರದೇಶದ ಜನರಂತೆ, ತಾವು ಬೆಳೆಯುವ ಪಾರಂಪರಿಕ ಬೆಳೆಗಳಿಗೆ ವಿದಾಯ ಹೇಳಿದರು. ಹೀಗೆ ಕೊಳವೆ ಬಾವಿಗಳು ಹತ್ತಿ ಬೆಳೆಯ ಕುಂಟಿತಕ್ಕೆ ಕಾರಣವಾದವು.

ಆರ್ಥಿಕವಾಗಿ ತೊಂದರೆಯಲ್ಲೇ ಇರುವ ಹೆಚ್ಚಿನ ರೈತರು ಸಾಲ, ಸೋಲಮಾಡಿ ವ್ಯವಸಾಯಕ್ಕೆ ಹಣ ತೊಡಗಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಅವರು ದೀರ್ಘಾವಧಿ ಬೆಳೆಗಳಿಗಿಂತ ಅಲ್ಪಾವಧಿ ಬೆಳೆಗಳಾದ ಇತರೆ ವಾಣಿಜ್ಯ ಬೆಳೆಗಳನ್ನು ಅವಲಂಬಿಸಿದರು. ಇಂತಹ ಹಲವಾರು ಕಾರಣಗಳ ಜೊತೆಯಲ್ಲಿ ದಾವಣಗೆರೆಯಲ್ಲಿದ್ದ ಹತ್ತಿ ಗಿರಣಿಗಳ ಮಾಲೀಕರು, ಮಾರುಕಟ್ಟೆಯ ದಲ್ಲಾಳಿಗಳಂತೆ ಹತ್ತಿ ಬೆಳೆಯುವ ರೈತರನ್ನು ಓಲೈಸಲಿಲ್ಲ. ಆದರೆ ಭತ್ತ, ಶೇಂಗಾ, ಸೂರ್ಯಕಾಂತಿ, ಅಡಿಕೆ ಮುಂತಾದ ವಾಣಿಜ್ಯ ಬೆಳೆಗಳನ್ನು ಬೆಳೆಯುತ್ತಿದ್ದ ರೈತರಿಗೆ ಮಾರುಕಟ್ಟೆಯ ದಲ್ಲಾಳಿಗಳು ಹಣದ ಚೀಲ ಹಿಡಿದು ಹಳ್ಳಿಗಳಿಗೆ ತೆರಳಿ ಆರ್ಥಿಕ ತೊಂದರೆಯಲ್ಲಿರುವ ರೈತರಿಗೆ ಸಾಲದ ಸಹಕಾರ ನೀಡಿದರು. ಆದರೆ ಹತ್ತಿ ಬೆಳೆಯುತ್ತಿದ್ದ ರೈತರಿಗೆ ಗಿರಣಿ ಮಾಲೀಕರಿಂದಾಗಲಿ, ದಲ್ಲಾಳಿಗಳಿಂದಾಗಲಿ ಸಾಲದ ಸೌಲಭ್ಯದಂತಹ ಆರ್ಥಿಕ ಸಹಾಯ ನೀಡುವ ಪ್ರಯತ್ನಗಳು ನಡೆಯಲಿಲ್ಲ.

ಚಿತ್ರದುರ್ಗ ಜಿಲ್ಲೆ, ಆನಗೋಡು ತಾಲ್ಲೂಕು, ನೇರ್ಲಿಗೆ ಗ್ರಾಮದ ಪ್ರಗತಿಪರ ರೈತರಾದ ಎನ್.ಜಿ. ರಂಗಪ್ಪನವರು ಅಭಿಪ್ರಾಯ ಪಡುವಂತೆ, ಮೇಲಿನ ಕಾರಣಗಳ ಜೊತೆಗೆ ಕೂಲಿ ಕಾರ್ಮಿಕರ ಸಮಸ್ಯೆ, ಕಡಿಮೆ ಖರ್ಚಿನ ಬೆಳೆಗಳ ಆಕರ್ಷಣೆ ಹತ್ತಿ ಬೆಳೆಯುವ ಪ್ರಮಾಣದಲ್ಲಿ ಕಡಿಮೆಯಾಗಲು ಕಾರಣವಾಯಿತು. ಅವಿಭಕ್ತ ಕುಟುಂಬಗಳು ಕಣ್ಮರೆಯಾಗಲಾರಂಭಿಸಿದ ಸಂದರ್ಭಗಳನ್ನು ಅವಲೋಕಿಸಿದಾಗ ಕೂಲಿ ಕಾರ್ಮಿಕರ ಅಭಾವದ ವಿಷಯವು ದೃಢಪಡುತ್ತದೆ. ಮಾರುಕಟ್ಟೆಯಲ್ಲಿ ಹತ್ತಿಯ ಬೆಲೆಯು ಕ್ರಮೇಣ ಹೆಚ್ಚಾಗುತ್ತಿರುವುದು ಈ ಕೆಳಗಿನ ಹತ್ತಿ ಬೆಲೆ ಪಟ್ಟಿಯಿಂದ ತಿಳಿದುಬರುತ್ತದೆ.

೧೯೬೦-೬೧ ರಿಂದ ೩೦೦೨-೦೪ರ ವರೆಗಿನ ದಾವಣಗೆರೆ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ
ಹತ್ತಿಯ ಕನಿಷ್ಟ, ಗರಿಷ್ಟ, ಬೆಲೆಗಳ ವಿವರ

ಕ್ರ.ಸಂ	ವರ್ಷ	ಕನಿಷ್ಟ	ಗರಿಷ್ಟ	ವರ್ಷ	ಕನಿಷ್ಟ	ಗರಿಷ್ಟ	ವರ್ಷ	ಕನಿಷ್ಟ	ಗರಿಷ್ಟ
೧	೧೯೬೦-೬೧	೫೦	೧೩೦	೧೯೭೫-೭೬	೧೮೦	೪೮೯	೧೯೯೦-೯೧	೪೬೯	೧೭೧೦
೨.	೧೯೬೧-೬೨	೩೦	೧೩೮	೧೯೭೬-೭೭	೧೬೦	೬೮೧	೧೯೯೧-೯೨	೫೧೧	೩೩೩೯
೩.	೧೯೬೨-೬೩	೫೫	೧೬೨	೧೯೭೭-೭೮	೧೭೫	೬೦೭	೧೯೯೨-೯೩	೬೮೧	೨೩೯೮
೪.	೧೯೬೩-೬೪	೫೭	೧೪೯	೧೯೭೮-೭೯	೧೦೦	೫೫೬	೧೯೯೩-೯೪	೧೧೬೦	೨೪೯೨
೫.	೧೯೬೪-೬೫	೪೧	೧೬೭	೧೯೭೯-೮೦	೧೬೦	೬೮೯	೧೯೯೪-೯೫	೧೧೫೧	೩೪೦೦
೬.	೧೯೬೫-೬೬	೭೧	೧೯೯	೧೯೮೦-೮೧	೨೦೫	೬೭೫	೧೯೯೫-೯೬	೧೫೦೦	೩೫೦೯
೭.	೧೯೬೬-೬೭	೬೬	೨೩೯	೧೯೮೧-೮೨	೨೪೧	೬೮೯	೧೯೯೬-೯೭	೧೦೦೦	೩೦೧೦
೮.	೧೯೬೭-೬೮	೮೬	೨೩೪	೧೯೮೨-೮೩	೨೦೦	೭೧೫	೧೯೯೭-೯೮	೮೭೯	೩೨೬೧
೯.	೧೯೬೮-೬೯	೧೦೫	೨೨೫	೧೯೮೩-೮೪	೧೮೭	೮೧೫	೧೯೯೮-೯೯	೪೫೯	೨೯೧೦
೧೦.	೧೯೬೯-೭೦	೧೩೫	೨೪೫	೧೯೮೪-೮೫	೧೮೦	೬೫೯	೧೯೯೯-೨೦೦೦	೭೧೦	೨೮೭೦
೧೧.	೧೯೭೦-೭೧	೧೧೧	೪೦೭	೧೯೮೫-೮೬	೨೦೦	೭೮೩	೨೦೦೦-೦೧	೫೧೧	೨೮೬೧
೧೨.	೧೯೭೧-೭೨	೯೦	೩೧೦	೧೯೮೬-೮೭	೩೦೧	೧೦೦೯	೨೦೦೧-೦೨	೫೦೧	೨೮೧೬
೧೩.	೧೯೭೨-೭೩	೧೦೦	೩೫೬	೧೯೮೭-೮೮	೨೧೫	೧೪೬೧	೨೦೦೨-೦೩	೫೧೧	೨೯೩೦
೧೪.	೧೯೭೩-೭೪	೧೭೫	೬೪೯	೧೯೮೮-೮೯	೩೦೦	೧೭೦೧	೨೦೦೩-೦೪	೮೧೦	೨೯೩೯
೧೫.	೧೯೭೪-೭೫	೨೦೦	೫೪೮	೧೯೮೯-೯೦	೩೫೧	೧೯೦೨			

ಕೃಪೆ : ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ದಾವಣಗೆರೆ, ದಿನಾಂಕ ೫.೭.೨೦೦೪

೫.೭.೨೦೦೪ರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಬೆಲೆ ವಿವರ ಪಟ್ಟಿಯನ್ನು ಗಮನಿಸಿದಾಗ ಹತ್ತಿಯ ಬೆಲೆಯಲ್ಲಿ ಏರಿಕೆಯಾಗಿರುವುದು ಕಂಡುಬರುತ್ತದೆಯಾದರೂ ರೈತರ ವೆಚ್ಚಕ್ಕೆ ಹೋಲಿಕೆಯಾಗಲಿಲ್ಲವೆಂಬ ಮಾಹಿತಿ ಮೇಲ್ಕಂಡ ರೈತರಿಂದ ದೊರೆತಿದ್ದು ಅದು ನೈಜ ಸಂಗತಿಯೂ ಆಗಿದೆ. ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಅಂಕಿ ಸಂಖ್ಯೆಗಳ ಪುಸ್ತಕಗಳಲ್ಲಿನ ಹತ್ತಿ ಬೆಳೆಯುವ ಪ್ರದೇಶವನ್ನು ಗಮನಿಸಿದಾಗ ಗಣನೀಯವಾಗಿ ಕಡಿಮೆಯಾಗಿರುವುದು ಕಂಡುಬರುತ್ತದೆ. ಈಗ ಹತ್ತಿ ೩೧೦೫೩ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗುತ್ತಿದೆ.[೫೫] ನಗರದ ಸುತ್ತಮುತ್ತಲ ಪ್ರದೇಶ ಹಾಗೂ ತಾಲ್ಲೂಕುಗಳಲ್ಲಿ ಪ್ರವಾಸ ಮಾಡಿದರೆ ಹತ್ತಿಯ ಹೊಲಗಳೇ ಕಾಣದಂತಹ ಪರಿಸ್ಥಿತಿ ಕಂಡುಬರುತ್ತಿದೆ.

ಒಂದು ಕಾಲಕ್ಕೆ ಈ ಪ್ರದೇಶ ಹತ್ತಿ ಬೆಳೆಗೆ ಪ್ರಸಿದ್ಧಿ ಪಡೆದು, ಹತ್ತಿ ವ್ಯಾಪಾರ ಮಾಡಿ ಅನುಭವ ಗಳಿಸಿದ್ದ ಸ್ಥಳೀಯರು ಬೃಹತ್ ಹತ್ತಿ ಗಿರಣಿ ಸ್ಥಾಪಿಸಲು ಮುಂದಾದರು. ಹೀಗೆ ಉತ್ತೇಜನಕಾರಿಯಾಗಿದ್ದ

ಹತ್ತಿ ಬೆಳೆಯು ಇಂದು ಮೂಲೆ ಗುಂಪಾಗಿದೆ. ರೈತರ ಬದುಕನ್ನೇ ಹತ್ತಿಕ್ಕಿ, "ಹತ್ತಿ ಬೆಳೆದ ರೈತ ಬಿಕ್ಕಿ ಬಿಕ್ಕಿ ಅತ್ತ" ಎಂಬ ಅನುಭವದ ಮಾತು ಮರೆಯಾಗಬೇಕಾದರೆ ಹತ್ತಿ ಬೀಜದಲ್ಲಿನ ನಕಲಿ ಬೀಜದ ಹಾವಳಿ ಕಡಿಮೆಯಾಗಬೇಕಾಗಿದೆ. ಹಾಗೆಯೇ 'ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುವಂತಹ ತಳಿಗಳ' ಸಂಶೋಧನೆ ಆಗಬೇಕಿದೆ. ವಿದೇಶಿ ಬೀಜದ ಕಂಪನಿಗಳು ಬಿಡುಗಡೆಗೊಳಿಸುತ್ತಿರುವ ಮರುಮೊಳಕೆಯೊಡೆಯುವ ಶಕ್ತಿಯೇ ಇಲ್ಲದ ಬೀಜಗಳನ್ನು ತಿರಸ್ಕರಿಸಬೇಕು, ರಾಸಾಯನಿಕ ಗೊಬ್ಬರಗಳನ್ನು ರೈತರಿಗೆ ಸಬ್ಸಿಡಿ ದರದಲ್ಲಿ ನೀಡಬೇಕು. ಹೀಗೆ ಸಮಸ್ಯೆಯ ಬೇರಿನಲ್ಲಿ ಬದಲಾವಣೆ ತಂದು ರೈತರ ಮನೋಭಾವನೆಯನ್ನು ಬದಲಾಯಿಸುವ ಪ್ರಯತ್ನವಾಗಬೇಕಾಗಿದೆ. ಕೈಗಾರಿಕೆಗಳ ಅಭಿವೃದ್ಧಿಗೆ, ಆರ್ಥಿಕ ಪ್ರಗತಿಗೆ ಪೂರಕವಾಗಿರುವ ಔದ್ಯಮಿಕ ಬೆಳೆಯಾದ, 'ಬಿಳಿಯ ಬಂಗಾರ'ವೆನಿಸಿಕೊಂಡಿರುವ ಹತ್ತಿ ಬೆಳೆಯನ್ನು ಅಭಿವೃದ್ಧಿ ಮಾಡುವ ಅಗತ್ಯವಿದೆ.

ಕೊನೆಟಿಪ್ಪಣಿಗಳು

೧. ವೈ.ಎಂ. ದೇವಪಾಲು, ವೇಜ್ ಅಂಡ್ ಸ್ಯಾಲರಿ ಅಡ್ಮಿನಿಸ್ಟ್ರೇಷನ್ ಇನ್ ಟೆಕ್ಸ್‌ಟೈಲ್ ಮಿಲ್ಸ್, ರೋಲ್ ಆಫ್ ಟೆಕ್ಸ್‌ಟೈಲ್ ಇಂಡಸ್ಟ್ರೀ ಇನ್ ಇಂಡಿಯನ್ ಎಕಾನಮಿ, ಅಪ್ರಕಟಿತ ಪಿಎಚ್.ಡಿ ಪ್ರಬಂಧ, ೧೯೮೮, ಪು. ೦೧

೨. ಅದೇ

೩. ಎಚ್.ಆರ್. ಕೃಷ್ಣಮೂರ್ತಿ, ಭಾರತದ ಆರ್ಥಿಕ ವ್ಯವಸ್ಥೆ, ೨೦೦೩, ಪು. ೩೨೨

೪. ವಿ.ಬಿ. ಕುಲಕರ್ಣಿ, ಹಿಸ್ಟರಿ ಆಫ್ ದಿ ಇಂಡಿಯನ್ ಕಾಟನ್ ಟೆಕ್ಸ್‌ಟೈಲ್ ಇಂಡಸ್ಟ್ರೀ, ೧೯೭೯, ಪು. ೦೨

೫. ಎಲ್.ಎಸ್. ಶೇಷಗಿರಿರಾವ್ ಪ್ರ.ಸಂ., ಕಿರಿಯರ ಕರ್ನಾಟಕ, ೧೯೯೪, ಪು. ೧೩೬

೬. ಬಿ.ಎನ್. ಸತ್ಯನ್ (ಸಂ.), ಮೈಸೂರು ರಾಜ್ಯ ಗೆಜೆಟಿಯರ್, ಚಿತ್ರದುರ್ಗ ಜಿಲ್ಲೆ, ೧೯೬೭, ಪು. ೧೫೯

೭. ಫ್ರಾನ್ಸಿಸ್ ಬುಕನಾನ್, ಎ ಜರ್ನಿ ಫ್ರಮ್ ಮದ್ರಾಸ್ ಥ್ರೋ ದ ಕಂಟ್ರೀಸ್ ಆಫ್ ಮೈಸೂರು, ಕೆನರ ಮತ್ತು ಮಲಬಾರ್, ೧೯೮೮, ಪು. ೩೩೦

೮. ಬಿ.ಎನ್. ಸತ್ಯನ್ (ಸಂ.), ಮೈಸೂರು ರಾಜ್ಯ ಗೆಜೆಟಿಯರ್, ಚಿತ್ರದುರ್ಗ ಜಿಲ್ಲೆ, ೧೯೬೭, ಪು. ೧೫೯

೯. ಡಾ. ಎಸ್. ಚಂದ್ರಶೇಖರ್, ಕನ್ನಡಕ್ಕೆ ಸಿ. ನಾಗಣ್ಣ, ದಕ್ಷಿಣ ಭಾರತ ವಸಾಹತುಶಾಹಿ ರಾಷ್ಟ್ರೀಯತೆ ಮತ್ತು ಸಂಘರ್ಷ, ೨೦೦೦, ಪು. ೨೫೩

೧೦. ಡಿ.ಸಿ.ಎಂ. ಗಿರಣಿಯ ಕಛೇರಿಯ ಪತ್ರದ ಮಾಹಿತಿಯಿಂದ

೧೧. ಮೈಸೂರು ಮತ್ತು ಮಾರ್ಡನ್ ಇಂಡಸ್ಟ್ರೀಸ್, ಮೈಸೂರು ದಿವಾನರಾದ ಸರ್ ಮಿರ್ಜಾ ಇಸ್ಮಾಯಿಲ್ ಮಾಡಿದ ಆಕಾಶವಾಣಿ ಭಾಷಣ, ೫.೮.೧೯೩೮, ಪು. ೫೯

೧೨. ಜನತಾವಾಣಿ, ಸಾಪ್ತಾಹಿಕ ಸಂಚಯ, ೪.೯.೨೦೦೦, ಪು. ೧

೧೩. ೧೯೬೧ರ ದಾವಣಗೆರೆ ಹತ್ತಿ ಗಿರಣಿಯ ಬೆಳ್ಳಿ ಹಬ್ಬದ ಸ್ಮರಣ ಸಂಚಿಕೆ, ಪು. ೨೦

೧೪. ಸಿದ್ಧಲಿಂಗಸ್ವಾಮಿ, ಇಂಡಸ್ಟ್ರಿಯಲ್ ರಿಲೇಷನ್ಸ್ ಇನ್ ಟೆಕ್ಸ್‌ಟೈಲ್ ಇಂಡಸ್ಟ್ರೀ, ಎ ಕೇಸ್ ಸ್ಟಡಿ ಆಫ್ ಕಾಟನ್ ಮಿಲ್ಸ್ ಇನ್ ದಾವಣಗೆರೆ, ಅಪ್ರಕಟಿತ ಪಿಎಚ್.ಡಿ ಪ್ರಬಂಧ, ೧೯೯೨, ಪು. ೫೦

೧೫. ಡಾ. ಎಂ.ಜಿ. ಈಶ್ವರಪ್ಪ (ಸಂ.), ಶತಮಾನದ ದಾವಣಗೆರೆ, ೨೦೦೧, ಪು. ೪೨

೧೬. ಜನತಾವಾಣಿ, ಸಪ್ತಾಹಿಕ ಸಂಚಯ, ೪.೬.೨೦೦೦, ಪು. ೧
೧೭. ಡಾ. ಎಂ.ಜಿ. ಈಶ್ವರಪ್ಪ (ಸಂ.), ಶತಮಾನದ ದಾವಣಗೆರೆ, ೨೦೦೧, ಪು. ೪೪
೧೮. ಬಿ.ಎನ್. ಸತ್ಯನ್, ಮೈಸೂರು ರಾಜ್ಯ ಗ್ಯಾಸೆಟಿಯರ್, ಚಿತ್ರದುರ್ಗ ಜಿಲ್ಲೆ, ೧೯೬೭, ಪು. ೧೬೦
೧೯. ಪ್ರೊಸೀಡಿಂಗ್ಸ್ ಆಫ್ ದಿ ಗೌರ್ನಮೆಂಟ್ ಆಫ್ ಮೈಸೂರು, ೧೯೪೭, ಪು. ೬೪
೨೦. ಡಾ. ಎಂ.ಜಿ. ಈಶ್ವರಪ್ಪ (ಸಂ.), ಶತಮಾನದ ದಾವಣಗೆರೆ, ಪು. ೪೪
೨೧. ಅದೇ, ಪು. ೪೬
೨೨. ಬಿ.ಎನ್. ಸತ್ಯನ್, ಮೈಸೂರು ರಾಜ್ಯ ಗ್ಯಾಸೆಟಿಯರ್-ಚಿತ್ರಮರ್ಗ ಜಿಲ್ಲೆ, ೧೯೬೬, ಪು. ೧೬೦
೨೩. ಪ್ರೊಸಿಡಿಂಗ್ಸ್ ಆಫ್ ದಿ ಗೌರ್ನಮೆಂಟ್ ಆಫ್ ಮೈಸೂರು, ಜೂನ್, ೧೯೪೭, ಪು. ೬೮
೨೪. ಡಾ. ಎಂ.ಜಿ. ಈಶ್ವರಪ್ಪ (ಸಂ.), ಶತಮಾನದ ದಾವಣಗೆರೆ, ೨೦೦೧, ಪು. ೪೫
೨೫. ಬಿ.ಎನ್. ಸತ್ಯನ್, ಮೈಸೂರು ರಾಜ್ಯ ಗ್ಯಾಸೆಟಿಯರ್, ಚಿತ್ರದುರ್ಗ ಜಿಲ್ಲೆ, ೧೯೬೭, ಪು. ೧೬೦
೨೬. ಸಿದ್ಧಲಿಂಗಸ್ವಾಮಿ, ಇಂಡಸ್ಟ್ರಿಯಲ್ ರಿಲೇಷನ್ಸ್ ಇನ್ ಟೆಕ್ಸ್‌ಟೈಲ್ ಇಂಡಸ್ಟ್ರೀ, ಎ ಕೇಸ್ ಸ್ಟಡಿ ಆಫ್ ಕಾಟನ್ ಮಿಲ್ಸ್ ಇನ್ ದಾವಣಗೆರೆ, ಅಪ್ರಕಟಿತ ಪಿಎಚ್.ಡಿ ಪ್ರಬಂಧ, ೧೯೯೨, ಪು. ೭೬
೨೭. ಡಾ. ಎಂ.ಜಿ. ಈಶ್ವರಪ್ಪ (ಸಂ.), ಶತಮಾನದ ದಾವಣಗೆರೆ, ೨೦೦೧, ಪು. ೪೫
೨೮. ಆದೇಶ ಪತ್ರ, ಸಹಾಯಕ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ದಾವಣಗೆರೆ ಸಂಖ್ಯೆ DIC/DVG/ IPO/SSI/DE-REG (CTM) ೨೦೦೪-೦೫ ದಿನಾಂಕ. ೧೬.೧೧.೨೦೦೪
೨೯. ಅದೇ

೩೦. ಪ್ರಜಾವಾಣಿ ದಿನಪತ್ರಿಕೆ, ದಿ. ೯.೧೦.೨೦೦೪, ಪು. ೨
೩೧. ಎಚ್.ಪಿ.ಎಸ್. ಪಾವ್ಲ, ಭಾರತ್ಸ್ ಸಿಕ್ ಇಂಡಸ್ಟ್ರೀಸ್ ಮತ್ತು ಬಿ.ಐ.ಎಫ್.ಆರ್.ಡಿ.ಸಿ, ೨೦೦೦, ಪು.೮
೩೨. ದಾವಣಗೆರೆ ಕೃಷಿ ಮಾರುಕಟ್ಟೆ ಹತ್ತಿ ಬೆಲೆ ಪಟ್ಟಿ, ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ದಾವಣಗೆರೆ, ದಿ. ೫.೭.೨೦೦೪
೩೩. ರಿಫೋರ್ಟ್ ಆನ್ ದಿ ಅಡ್ಮಿನಿಸ್ಟ್ರೇಷನ್ ಆಫ್ ಮೈಸೂರು, ೧೯೪೫-೪೬, ಪು. ೧೦೬
೩೪. ಸಿದ್ಧಲಿಂಗಸ್ವಾಮಿ, ಇಂಡಸ್ಟ್ರಿಯಲ್ ರಿಲೇಷನ್ಸ್ ಇನ್ ಟೆಕ್ಸ್‌ಟೈಲ್ ಇಂಡಸ್ಟ್ರೀ, ಎ ಕೇಸ್ ಸ್ಟಡಿ ಆಫ್ ಕಾಟನ್ ಮಿಲ್ಸ್ ಇನ್ ದಾವಣಗೆರೆ, ಅಪ್ರಕಟಿತ ಪಿಎಚ್.ಡಿ ಪ್ರಬಂಧ, ೧೯೯೨, ಪು. ೬೧
೩೫. ಡಾ. ಎಂ.ಜಿ. ಈಶ್ವರಪ್ಪ (ಸಂ.), ಶತಮಾನದ ದಾವಣಗೆರೆ, ೨೦೦೧, ಪು. ೪೫
೩೬. ಬಿ.ಎನ್. ಸತ್ಯನ್, ಮೈಸೂರು ರಾಜ್ಯ ಗ್ಯಾಸೆಟಿಯರ್, ಚಿತ್ರದುರ್ಗ ಜಿಲ್ಲೆ, ೧೯೬೭, ಪು. ೧೬೦
೩೭. ಕನ್ನಡ ಪ್ರಭ ದಿನಪತ್ರಿಕೆ, ವಿತ್ತಪ್ರಭ ವಿಶೇಷ, ದಿ. ೨೨.೯.೨೦೦೩, ಪು. ೩
೩೮. ಪ್ರಜಾವಾಣಿ ದಿನಪತ್ರಿಕೆ, ದಿ. ೧೧.೧೦.೨೦೦೪, ಪು.೪
೩೯. ರಿಫೋರ್ಟ್ ಆನ್ ದಿ ಆಡ್ಮಿನಿಸ್ಟ್ರೇಷನ್ ಆಫ್ ಮೈಸೂರು, ೧೯೫೧-೫೨, ಪು. ೧೫೪
೪೦. ಅದೇ
೪೧. ಬಿ.ಎನ್. ಸತ್ಯನ್, ಮೈಸೂರು ರಾಜ್ಯ ಗ್ಯಾಸೆಟಿಯರ್, ಚಿತ್ರದುರ್ಗ ಜಿಲ್ಲೆ, ೧೯೬೭, ಪು. ೧೬೦
೪೨. ಶ್ರೀ ಯಲ್ಲಮ್ಮ ಕಾಟನ್ ಉಲ್ಲನ್ ಅಂಡ್ ಸಿಲ್ಕ್ ಮಿಲ್ಸ್ ಎಂಪ್ಲಾಯೀಸ್ ಅಸೋಸಿಯೇಷನ್ ಪತ್ರ, ದಿ. ೮.೮.೨೦೦೪, ಪು. ೧
೪೩. ಜನತಾವಾಣಿ ದಿನಪತ್ರಿಕೆ, ದಾವಣಗೆರೆ, ದಿ. ೧೨.೨.೧೯೯೭

೪೪. ಶ್ರೀ ಯಲ್ಲಮ್ಮ ಕಾಟನ್ ಉಲ್ಲನ್ ಅಂಡ್ ಸಿಲ್ಕ್ ಮಿಲ್ಸ್ ಎಂಪ್ಲಾಯೀಸ್ ಅಸೋಸಿಯೇಷನ್ ಪತ್ರ, ದಿ. ೮.೮.೨೦೦೪, ಪು. ೧

೪೫. ಕೆ.ವಿ. ಶಿವಯ್ಯ ಮತ್ತು ವಿ.ಎಂ.ಬಿ. ದಾಸ್, ಇಂಡಿಯನ್ ಇಂಡಸ್ಟ್ರಿಯಲ್ ಎಕಾನಮಿ, ೧೯೭೨, ಪು. ೩೯೯

೪೬. ಎನ್. ಜಯಪಾಲನ್, ಎಕನಾಮಿಕ್ ಹಿಸ್ಟರಿ ಆಫ್ ಇಂಡಿಯ, ೨೦೦೧, ಪು. ೧೨

೪೭. ಇರ್ಫಾನ್ ಹಬೀಬ್, ದ ಅಗ್ರೇರಿಯನ್ ಸಿಸ್ಟಮ್ ಆಫ್ ಮೊಗಲ್ ಇಂಡಿಯ, ೧೫೫೬-೧೭೦೭, ೧೯೯೯, ಪು. ೪೪

೪೮. ಎನ್. ಜಯಪಾಲನ್, ಎಕನಾಮಿಕ್ ಹಿಸ್ಟರಿ ಆಫ್ ಇಂಡಿಯ, ೨೦೦೧, ಪು. ೭೮

೪೯. ಪ್ರಜಾವಾಣಿ ಪತ್ರಿಕೆ-'ಕೃಷಿ' ದಿ. ೧.೯.೨೦೦೪, ಪು. IV

೫೦. ಎನ್.ಎಸ್. ಪರಮೇಶ್ವರ, ಹತ್ತಿ-ಬಿಳಿ ಬಂಗಾರ, ೧೯೮೭, ಪು. ೩

೫೧. ಅದೇ, ಪು. ೭೧

೫೨. ಪ್ರಜಾವಾಣಿ ದಿನಪತ್ರಿಕೆ-'ಕೃಷಿ', ದಿ.೧.೯.೨೦೦೪, ಪು. IV

೫೩. ರವಿಕುಮಾರ್ ಎಸ್.ಬಿ., ಗ್ರೋತ್ ಅಂಡ್ ಡೆವಲಪ್‌ಮೆಂಟ್ ಆಫ್ ಇಂಡಿಸ್ಟ್ರೀಸ್ ಇನ್ ಚಿತ್ರದುರ್ಗ ಡಿಸ್ಟ್ರಿಕ್ಟ್- ೧೯೦೦-೧೯೪೭, ಅಪ್ರಕಟಿತ ಎಂ.ಫಿಲ್ ನಿಬಂಧ, ೧೯೯೭, ಪು. ೭೧

೫೪. ಬಿ.ಎನ್. ಸತ್ಯನ್ (ಸಂ.), ಮೈಸೂರು ರಾಜ್ಯ ಗೆಜೆಟಿಯರ್, ಚಿತ್ರದುರ್ಗ ಜಿಲ್ಲೆ, ೧೯೬೭, ಪು. ೧೩೧

೫೫. ಎಂ.ಜಿ. ಈಶ್ವರಪ್ಪ, (ಸಂ.), ಶತಮಾನದ ದಾವಣಗೆರೆ, ೨೦೦೨, ಪು. ೪೬

ಅಧ್ಯಾಯ ೪

ಕಾರ್ಮಿಕ ಸಂಘಟನೆ ಉದಯ

ಕಾರ್ಮಿಕ ಸಂಘಟನೆ ಉದಯ

ಆಧುನಿಕ ಕಾರ್ಮಿಕ ಸಂಘಗಳ ಬೇರುಗಳನ್ನು ಕೈಗಾರಿಕಾ ಕ್ರಾಂತಿ ಮತ್ತು ಅದರ ಅಂಗವಾದ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಕಾಣಬಹುದು. ಕೈಗಾರಿಕಾ ಕ್ರಾಂತಿಯಿಂದ ವಿಶ್ವದ ಹಲವು ಭಾಗಗಳಲ್ಲಿ ಬಂಡವಾಳಶಾಹಿಗಳು ಏಳಿಗೆ ಹೊಂದಿ ಕಾರ್ಮಿಕರನ್ನು ಅಸಡ್ಡೆಯಿಂದ ನೋಡಿಕೊಂಡಿದ್ದರಿಂದ ಕಾರ್ಮಿಕ ಸಂಘಟನೆ ಹಾಗೂ ಸಂಘಗಳು ಹುಟ್ಟಿಕೊಂಡವು. ಬಂಡವಾಳಶಾಹಿ ಬೇರುಗಳು ವಿಷಫಲ ಉಣಿಸುತ್ತಿದ್ದರಿಂದ ಕಾರ್ಮಿಕರು ವ್ಯವಸ್ಥೆಯ ವಿರುದ್ಧ ಸಂಘಟಿತರಾಗುತ್ತಾ ಮುನ್ನಡೆದರು.

ಅಖಿಲ ಭಾರತ ಕಾರ್ಮಿಕ ಸಂಘಗಳ ಏಳಿಗೆಯ ಒಂದು ಭಾಗವಾಗಿ ದಾವಣಗೆರೆ ನಗರದ ಕಾರ್ಮಿಕ ಸಂಘಟನೆಗಳಿದ್ದವು. ಆರಂಭದಲ್ಲಿ ಮೈಸೂರು ಸಂಸ್ಥಾನದಲ್ಲಿ ಮೊದಲು ಇದು ಭಿನ್ನವಾಗಿಯೇ ಇತ್ತು. ಮೈಸೂರು ಸಂಸ್ಥಾನದಲ್ಲಿ ದಿವಾನರಾಗಿದ್ದ ಮಿರ್ಜಾಇಸ್ಮಾಯಿಲ್, ಸರ್.ಎಂ. ವಿಶ್ವೇಶ್ವರಯ್ಯನವರು ಕೈಗಾರಿಕೆಗಳ ಏಳಿಗೆಗೆ ಅವಕಾಶ ಕಲ್ಪಿಸಿದ್ದರಾದರೂ ಕಾರ್ಮಿಕರ ಸಂಘಟನೆಯನ್ನು ಸಕಾರಾತ್ಮಕವಾಗಿ ನೋಡಲಿಲ್ಲ. ಈ ಹಿನ್ನೆಲೆಯಲ್ಲಿ ಮೈಸೂರು ಸಂಸ್ಥಾನದ ಕಾರ್ಮಿಕ ಚಳವಳಿ ಮಹತ್ವ ಪಡೆದುಕೊಂಡಿದೆ.

ವೆಬ್ಸ್‌ರವರ ವ್ಯಾಖ್ಯಾನದಂತೆ "ಕಾರ್ಮಿಕ ಸಂಘವು ಕೂಲಿ ಅಥವಾ ವೇತನ ಪಡೆಯುವವರ ನಿರಂತರ ಸಂಸ್ಥೆಯಾಗಿದ್ದು ದುಡಿಯುವ ವರ್ಗದ ಸ್ಥಿತಿ-ಗತಿಗಳನ್ನು ಸುಧಾರಿಸುವ ಅಥವಾ ಅಭಿವೃದ್ಧಿ ಪಡಿಸುವುದಾಗಿದೆ".[೧]

ಮಾಜಿ ಕಾರ್ಮಿಕ ಮಂತ್ರಿಗಳು ಹಾಗೂ ಮಾಜಿ ಉಪರಾಷ್ಟ್ರಪತಿಗಳಾದ ವಿ.ವಿ. ಗಿರಿಯವರ ಪ್ರಕಾರ "ಕಾರ್ಮಿಕ ಸಂಘವು ಕೆಲಸಗಾರರ ಐಚ್ಛಿಕ ಸಂಘಟನೆಯಾಗಿದ್ದು, ಕಾರ್ಮಿಕ ಹಿತಾಸಕ್ತಿಯನ್ನು ರಕ್ಷಿಸಲು ಸಾಮೂಹಿಕ ಶಕ್ತಿಯಿಂದ ಕೆಲಸ ಮಾಡುವ ಸಂಸ್ಥೆಯಾಗಿದೆ".[೨]

ಕಾರ್ಮಿಕ ಸಂಘ ಅಥವಾ ಸಂಘಟನೆ ವೇತನಕ್ಕಾಗಿ ದುಡಿಯುವವರು ತಮ್ಮ ದುಡಿಮೆಯ ಪರಿಸ್ಥಿತಿಯನ್ನು ಉಳಿಸಿಕೊಂಡು ಇನ್ನೂ ಉತ್ತಮವಾಗಿಸಲು ರೂಪಿಸಿಕೊಂಡ ಸಂಘಟನೆ.[೩]

ಟ್ರೇಡ್ ಯೂನಿಯನ್‌ಗಳು ಲೆನಿನ್ ಅಭಿಪ್ರಾಯ ಪಡುವಂತೆ "ಆಡಳಿತೆಯ ಮತ್ತು ವ್ಯವಸ್ಥಾಪನೆಯ ಶಾಲೆಗಳು, ಕಮ್ಯೂನಿಸಂ ಶಾಲೆಗಳು, ಪಾರ್ಟಿಯ ಮತ್ತು ಕಾರ್ಮಿಕ ಸಂಘಗಳ ಉದ್ದೇಶಗಳು ಒಂದೇ ಆಗಿರುತ್ತವೆ.[೪]

"ಕೂಲಿಕಾರರ ಜೀವನ ಹಾಗೂ ಅವರ ಪರಿಸ್ಥಿತಿಯನ್ನು ಸುಧಾರಿಸಲು ನಿರಂತರವಾಗಿ ಕೂಲಿಕಾರರಿಂದಲೇ ಸಂಘಟಿಸಲ್ಪಟ್ಟ ಸಂಘಟನೆ"ಯೇ ಕಾರ್ಮಿಕ ಸಂಘವೆಂದು ಬಿ.ಎಲ್.ಗ್ರೋವೆರ್ ಮತ್ತು ಎಸ್. ಗ್ರೋವೆರ್ ವ್ಯಾಖ್ಯಾನಿಸಿದ್ದಾರೆ.[೫]

ಕಾರ್ಮಿಕ ಸಂಘಗಳು ಸಾಮಾನ್ಯವಾಗಿ ದುಡಿಯುವವರ ಸಂಘವಾಗಿದ್ದು ಇಲ್ಲಿ ಅವರ ಆರ್ಥಿಕ ಹಿತಾಸಕ್ತಿಗಳನ್ನು ರಕ್ಷಿಸಿ, ವೃದ್ಧಿಸಿ ಸಾಮಾಜಿಕ ಸ್ಥಾನಮಾನ ಸುಧಾರಿಸುವುದಾಗಿದೆ.

ಇಂಗ್ಲೆಂಡ್ ಕಾರ್ಮಿಕ ಚಳುವಳಿಯ ತಾಯ್ನಾಡಾಗಿದೆ. ಕೈಗಾರಿಕಾ ಕ್ರಾಂತಿಯ ಪ್ರಭಾವ ಆಧುನಿಕ ಕಾರ್ಮಿಕ ಸಂಘಗಳ ಸ್ಥಾಪನೆಗೆ ಹಿನ್ನೆಲೆಯಾದರೂ ಕೈಗಾರಿಕಾ ಕ್ರಾಂತಿಪೂರ್ವದಲ್ಲಿ ಅವು ಅಸ್ತಿತ್ವದಲ್ಲಿರಲಿಲ್ಲ ಎಂದು ಹೇಳಲಾಗದು. ಇಂಗ್ಲೆಂಡಿನ ಲಂಕಾಶೈರ್ ಮುಂತಾದ ಕೈಗಾರಿಕಾ ನಗರಗಳಲ್ಲಿ ಕಾರ್ಮಿಕರು ಅಧಿಕವಾಗಿದ್ದರೂ ಶಕ್ತಿಯುತ, ಸ್ಥಿರವಾದ ಧೃಡವಾದ ನೆಲೆಗಟ್ಟಿನ ಮೇಲೆ ಕಾರ್ಮಿಕ ಸಂಘಗಳು ಅಸ್ತಿತ್ವಕ್ಕೆ ಬಂದಿರಲಿಲ್ಲ. ಕಾರ್ಮಿಕರ ಜೀವನ ದುಬಾರಿಯಾಗಿ, ಕೈತುಂಬಾ ಕೆಲಸ ನಿರ್ವಹಿಸುತ್ತಾ, ಜೀವನ ನಿಭಾಯಿಸಲು ಹೆಣಗುತ್ತಿದ್ದರು. ಅಲ್ಲಿನ ಸರ್ಕಾರವೂ ಸಹ ೧೭೯೯ರ ಕಾಲಕ್ಕೆ ಇಂತಹ ಕಾರ್ಮಿಕ ಸಂಘಟನೆಗಳನ್ನು ಘುಟ್ಟುಗೋಲು ಹಾಕಲು ಪ್ರಯತ್ನಿಸಿತು. ಕೈಗಾರಿಕಾ ಕ್ರಾಂತಿಗೂ ಮೊದಲು ಕಾರ್ಮಿಕರು ಮತ್ತು ಮಾಲೀಕರ ಸಹಭಾಗಿತ್ವದಲ್ಲಿ 'ವೃತ್ತಿಸಂಘಗಳು' ಅಸ್ತಿತ್ವದಲ್ಲಿದ್ದು ಕಾರ್ಯನಿರತವಾಗಿದ್ದವು. ಈ ಸಂಘಗಳು ಆಧುನಿಕ ಕಾರ್ಮಿಕ ಸಂಘಗಳ ಗುಣಲಕ್ಷಣಗಳನ್ನು ಹೊಂದಿದಂತೆ ಕಂಡುಬರುವುದಿಲ್ಲ.

ಅಂತೆಯೇ ಭಾರತದಲ್ಲೂ ಸ್ಥಿರರೂಪದ, ಶಕ್ತಿಯುತ ಕಾರ್ಮಿಕ ಸಂಘಗಳು ಕೈಗಾರಿಕಾ ಕ್ರಾಂತಿಯವರೆಗೂ ಅಸ್ತಿತ್ವಕ್ಕೆ ಬರಲಿಲ್ಲ. ಸ್ವತಂತ್ರ ಪೂರ್ವದಲ್ಲಿ ಮೊದಲುಗೊಂಡು ಹಲವಾರು ಸ್ಥಿರರೂಪದ, ಸೈದ್ಧಾಂತಿಕ ನೆಲೆಗಟ್ಟನ್ನು ಪಡೆದ ಕಾರ್ಮಿಕ ಸಂಘಗಳು ಅಸ್ತಿತ್ವಕ್ಕೆ ಬಂದವು. ಅವುಗಳನ್ನು ಈ ಕೆಳಕಂಡಂತೆ ಗುರುತಿಸಬಹುದು.

೧. ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್ [AITUC] ೧೯೨೦.

೨. ಇಂಡಿಯನ್ ನ್ಯಾಷನಲ್ ಟ್ರೇಡ್ ಯೂನಿಯನ್ ಕಾಂಗ್ರೆಸ್ [INTUC] ೧೯೪೭.

೩. ಹಿಂದ್ ಮಜದೂರ್ ಸಭಾ [HMS] ೧೯೪೮.

೪. ಭಾರತೀಯ ಮಜದೂರ್ ಸಂಘ [BMS] ೧೯೫೪.

೫. ಯುನೈಟೆಡ್ ಟ್ರೇಡ್ ಯೂನಿಯನ್ ಕಾಂಗ್ರೆಸ್ [UTUC] ೧೯೪೯.

೬. ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ [CITU] ೧೯೭೦. ಇವುಗಳ ಚಾರಿತ್ರಿಕ ಹಿನ್ನೆಲೆ ಈ ಕೆಳಕಂಡಂತಿದೆ.

೧ ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್ (AITUC)

ಈ ಸಂಘಟನೆಯು ೩೧-ಅಕ್ಟೋಬರ್, ೧೯೨೦ರಲ್ಲಿ ಸ್ಥಾಪನೆಗೊಂಡು, ಭಾರತದ ರಾಷ್ಟ್ರೀಯ ಕಾಂಗ್ರೆಸ್‌ನ ಅಧ್ಯಕ್ಷರಾಗಿದ್ದ ಲಾಲಾ ಲಜಪತ್‌ರಾಯ್‌ರವರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಲಾಯಿತು.

೧. ಇದು ತನ್ನ ಕಾರ್ಯಚಟುವಟಿಕೆಗಳಲ್ಲಿ ಇಂಗ್ಲೆಂಡಿನ ಕಾರ್ಮಿಕ ಸಂಘಗಳ ಸ್ವರೂಪದ ಕೆಲ ವಿಚಾರಗಳನ್ನು ಮೈಗೂಡಿಸಿಕೊಂಡಿತು. ಇದಕ್ಕೆ ೧೯೨೭ರ ಕಾಲಕ್ಕೆ ೫೭ ಸಂಘಟನೆಗಳು ಸಂಯೋಜನೆಗೊಂಡವು.

೨. ಆದರೆ ೧೯೨೭ರ ವೇಳೆಗಾಗಲೇ ಎ.ಐ.ಟಿ.ಯು.ಸಿ. ಇಬ್ಭಾಗವಾಗಿ ಕಮ್ಯೂನಿಸ್ಟರ ಪ್ರಭಾವಕ್ಕೆ ಒಳಗಾಯಿತು. ಕಾಂಗ್ರೇಸಿನ ಅಧ್ಯಕ್ಷರಾಗಿದ್ದ ಲಾಲಾ ಲಜಪತರಾಯರು ರಾಷ್ಟ್ರಮಟ್ಟದಲ್ಲಿನ ಕಾರ್ಮಿಕರನ್ನು ಸಂಘಟಿಸಲು ಪ್ರೇರಣೆ ನೀಡಿದರು. ಮೊದಲ ಸ್ಥಿರ ಕಾರ್ಮಿಕ ಸಂಘಟನೆಯಾದ ಲಾಲಾ ಲಜಪತರಾಯರ ನೇತೃತ್ವದ ಎ.ಐ.ಟಿ.ಯು.ಸಿ.ಯನ್ನು ಅಂತಾರಾಷ್ಟ್ರೀಯ ಕಾರ್ಮಿಕ ಸಂಘಟನೆಗೆ (ILO) ಪ್ರತಿನಿಧಿಯಾಗಿ ಮಾಡಲಾಯಿತು.

೩. ಈ ಬೆಳವಣಿಗೆಯಿಂದ ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾರತದ ಕಾರ್ಮಿಕ ಸಂಘಟನೆ ಮಾನ್ಯತೆ ಪಡೆಯಲು ಸಾಧ್ಯವಾಯಿತು.

ಮುಂದೆ ಎ.ಐ.ಟಿ.ಯು.ಸಿ ಯಲ್ಲಿನ ಭಿನ್ನಾಭಿಪ್ರಾಯಗಳಿಂದ ಪುನಃ ಒಂದು ಗುಂಪು ಎ.ಐ.ಟಿ.ಯು.ಸಿಯಿಂದ ಹೊರಬಂದಿತು. ಎಂ.ಎನ್.ರಾಯ್‌ರವರ ಗುಂಪು ಎ.ಐ.ಟಿ.ಯು.ಸಿಯಿಂದ ಹೊರಬಂದು ಭಾರತೀಯ ಕಾರ್ಮಿಕ ಮಹಾಮಂಡಳಿ (೧೯೪೦) ಎಂಬ ಹೊಸ ಸಂಸ್ಥೆಯನ್ನು ಸ್ಥಾಪಿಸಿತು.

೪. ಈ ರೀತಿ ಕಾರ್ಮಿಕ ಸಂಘಟನೆಯ ಒಡಕು ಕಾರ್ಮಿಕರಲ್ಲಿ ಬಲವನ್ನು ಕುಂದಿಸುವಲ್ಲಿ ಪ್ರೇರಕ ಅಂಶವಾಗಿದೆ. ಈ ಕಾರ್ಮಿಕ ಸಂಘಟನೆಯು ಇಂದೂ ಸಹ ಭಾರತೀಯ ಕಮ್ಯೂನಿಸ್ಟ್ ಪಕ್ಷದ ನಿಯಂತ್ರಣದಲ್ಲಿದೆ.

ದಾವಣಗೆರೆ ನಗರಕ್ಕೆ ಸಂಬಂಧಿಸಿದಂತೆ ಎ.ಐ.ಟಿ.ಯು.ಸಿ ಸಂಘಟನೆ ನೆಲೆಗಟ್ಟು ಪಡೆದುಕೊಳ್ಳಲು ದೊಡ್ಡ ಚಳವಳಿಯನ್ನೇ ನಡೆಸಲಾಯಿತು. ಆದರೆ ರಾಷ್ಟ್ರ ಮಟ್ಟದಲ್ಲಿ ಭಾರತೀಯ ಕಮ್ಯೂನಿಸ್ಟ್ ಪಕ್ಷವು (೧೯೭೦ರಲ್ಲಿ) ಇಬ್ಭಾಗವಾಗಲಾಗಿ ಇದರ ಪ್ರಭಾವ ಇಲ್ಲೂ ಉಂಟಾಯಿತು. ಇದರಿಂದ ಶ್ರೀ ಸುರೇಶ, ಶ್ರೀ ಶೇಖರಪ್ಪ ಎಂಬ ಇಬ್ಬರು ಸಿ.ಪಿ.ಐ. ಸಂಘಟನೆಯ ಕಮ್ಯೂನಿಸ್ಟ್ ನಾಯಕರು ಹತ್ಯೆಗೀಡಾದರು. ಇದು ದಾವಣಗೆರೆಯಲ್ಲಿ ಎ.ಐ.ಟಿ.ಯು.ಸಿ ಸಂಘಟನೆ ಬಲಗೊಳ್ಳಲು ಸಹಕಾರಿಯಾಯಿತು. ೧೯೭೦ ರಿಂದ ೧೯೯೦ರ ವರೆಗೂ ದಾವಣಗೆರೆಯಲ್ಲಿ ಎ.ಐ.ಟಿ.ಯು.ಸಿ ಮೂಲದ ಸಿ.ಪಿ.ಐ ಸಂಘಟನೆಯು ಒಂದು ಶಕ್ತಿಯಂತೆ ಗುರುತಿಸಲ್ಪಟ್ಟಿತು.

೨. ಇಂಡಿಯನ್ ನ್ಯಾಷನಲ್ ಟ್ರೇಡ್ ಯೂನಿಯನ್ ಕಾಂಗ್ರೆಸ್ (INTUC) ೧೯೪೭:

೧೯೪೭ರಲ್ಲಿ ಭಾರತದ ರಾಷ್ಟ್ರೀಯ ಕಾಂಗ್ರೇಸ್ ಈ ಕಾರ್ಮಿಕ ಸಂಘಟನೆಯನ್ನು ಸ್ಥಾಪಿಸಿತು. ಇಂತಹ ಕಾರ್ಮಿಕ ಸಂಘಟನೆಯು ಈಗಾಗಲೇ ಅಸ್ತಿತ್ವದಲ್ಲಿತ್ತಾದರೂ ಅದು ಕಾರ್ಮಿಕ ಮತ್ತು ರಾಷ್ಟ್ರೀಯತೆ ವಿರೋಧಿ ಚಟುವಟಿಕೆ ನಡೆಸುತ್ತಿದೆ ಎಂದು ಇಂಟಕ್ ಸಂಘಟನೆ ರೂಪ ತಾಳಿತು. ಈ ಸಂಘಟನೆಯೂ ಸಹ ೧೯೪೮ರಲ್ಲಿ ದುಡಿಯುವ ವರ್ಗದ ಪ್ರತಿನಿಧಿಯಾಗಿ ಐ.ಎಲ್.ಓ ಸದಸ್ಯತ್ವ ಪಡೆಯಿತು.

ಈ ಸಂಘಟನೆಯು ಕಾರ್ಮಿಕರ ಮೇಲಾಗುವ ಶೋಷಣೆಗಳಿಂದ ಮುಕ್ತರನ್ನಾಗಿ ಮಾಡುವ ಗುರಿ ಹೊಂದಿತ್ತು. ಅದು ಉದ್ಯಮಗಳ ಆಡಳಿತದಲ್ಲಿ ಮತ್ತು ಹತೋಟಿಯಲ್ಲಿ ಕಾರ್ಮಿಕರು ಭಾಗವಹಿಸಬೇಕೆಂದು ಒತ್ತಾಯಿಸುತ್ತದೆ. ಆದರೆ ಈ ಸಂಘಟನೆಯು ಮೇಲಿನಂತೆ ಕಾರ್ಮಿಕರು ಭಾಗವಹಿಸುವಂತಹ ಹಲವು

ಕ್ರಮಗಳನ್ನು ಜಾರಿಯಲ್ಲಿ ತರಲು ತೀವ್ರವಾದ ವಿಧಾನಗಳನ್ನು ಅನುಸರಿಸಲು ಇಚ್ಛಿಸುವುದಿಲ್ಲ. ಆದ್ದರಿಂದ ಇದು ಬಲಶಾಲಿ ಬಂಡವಾಳಗಾರರನ್ನು ಧೈರ್ಯವಾಗಿ ಎದುರು ಹಾಕಿಕೊಳ್ಳುವಲ್ಲಿ ವಿಫಲವಾಗುತ್ತದೆ.

ದಾವಣಗೆರೆ ನಗರದಲ್ಲಿ ಗಿರಣಿಗಳು ಆರಂಭಗೊಂಡಾಗ ಇದೇ (INTUC) ಸಂಘಟನೆ ಅಸ್ತಿತ್ವದಲ್ಲಿತ್ತು. ಈ ಸಂಘಟನೆಯಿಂದ ಹೊರತಂದು ಎ.ಐ.ಟಿ.ಯು.ಸಿ ಸ್ಥಾಪನೆಗಾಗಿಯೇ ನಡೆದ ಹೋರಾಟ, ಕೊಲೆ, ಘರ್ಷಣೆಗಳನ್ನು ಅಲ್ಲಲ್ಲಿ ಸಾಂದರ್ಭಿಕವಾಗಿ ಚರ್ಚಿಸಲಾಗಿದೆ.

೩. ಹಿಂದ್ ಮಜದೂರ್ ಸಭಾ (HMS) (೧೯೪೮)

೧೯೪೮ರಲ್ಲಿ ಸಮಾಜವಾದಿಗಳಿಂದ ಎಚ್.ಎಂ.ಎಸ್ ಸಂಘಟನೆ ಅಸ್ತಿತ್ವಕ್ಕೆ ಬಂದಿತು. ಜೀವನಾವಶ್ಯಕ ಕೂಲಿ ನೀಡುವುದು, ವಿಶ್ರಾಂತಿ, ರಜೆಯ ಅವಧಿಯಲ್ಲಿ ಕಾರ್ಮಿಕರಿಗೆ ವೇತನದ ರಕ್ಷಣೆ ನೀಡುವುದು, ಅವರ ಕಲ್ಯಾಣ ಕಾರ್ಯಕ್ರಮಗಳಿಗೆ ಒತ್ತು ನೀಡುವುದು, ಮುಂತಾದ ಉದ್ದೇಶ ಹೊಂದಿರುತ್ತದೆ. ಕಾರ್ಮಿಕ ಚಳವಳಿ ಹಿನ್ನಲೆಯಲ್ಲಿ ದಾವಣಗೆರೆ ನಗರದಲ್ಲಿ ಈ ಸಂಘಟನೆಗೆ ಅವಕಾಶ ಸಿಗಲಿಲ್ಲ.

೪. ಯುನೈಟೆಡ್ ಟ್ರೇಡ್ ಯೂನಿಯನ್ ಕಾಂಗ್ರೆಸ್ (UTUC) (೧೯೪೯)

ಯುನೈಟೆಡ್ ಟ್ರೇಡ್ ಯೂನಿಯನ್ ಕಾಂಗ್ರೆಸ್ ೧೯೪೯ರಲ್ಲಿ ಸ್ಥಾಪನೆಯಾಯಿತು. ಇದು ಕ್ರಾಂತಿಕಾರಿ ಸಮಾಜವಾದಿ ಪಕ್ಷದ ಹತೋಟಿಯಲ್ಲಿದೆ. ಅಧ್ಯಯನದ ಅವಧಿ ಮತ್ತು ಕ್ಷೇತ್ರದಲ್ಲಿ ಈ ಸಂಘಟನೆಯ ಪಾತ್ರ ಕಂಡುಬರುವುದಿಲ್ಲ.

೫. ಭಾರತೀಯ ಮಜದೂರ್ ಸಂಘ (BMS) (೧೯೫೪)

ಭಾರತೀಯ ಜನತಾ ಪಕ್ಷದ ಅಧೀನದಲ್ಲಿ ೧೯೫೪ರಲ್ಲಿ ಭಾರತೀಯ ಮಜದೂರ್ ಸಂಘ ಸ್ಥಾಪಿಸಲ್ಪಟ್ಟಿತು. ೧೯೯೦ ದಶಕದವರೆಗೂ ರಾಷ್ಟ್ರದ ಬೇರೆ ಬೇರೆ ಭಾಗಗಳಲ್ಲಿ ಈ ಸಂಘಟನೆ ಬಲಗೊಂಡರೂ ದಾವಣಗೆರೆ ನಗರದಲ್ಲಿ ಮಾನ್ಯತೆ ಪಡೆದುಕೊಳ್ಳಲಿಲ್ಲ. ೧೯೯೧ರಲ್ಲಿ ಡಿ.ಸಿ.ಎಂ. ಗಿರಣಿಯಲ್ಲಿ ಮೊದಲು ತನ್ನ ನೆಲೆ ಕಂಡುಕೊಂಡಿತು. ಆದರೆ ಈ ಸಂಘಟನೆ ದಾವಣಗೆರೆಯಲ್ಲಿ ನೆಲೆ ಕಂಡುಕೊಂಡಾಗ, ಇಲ್ಲಿನ ಹತ್ತಿಗಿರಣಿಗಳು ಆಗಲೇ ಅವಸಾನದ ಹಾದಿ ಕ್ರಮಿಸಲಾರಂಭಿಸಿದ್ದವು.

ಅವಸಾನಗೊಳ್ಳುತ್ತಿದ್ದ ಗಿರಣಿ ಕಾರ್ಮಿಕರಿಗೆ ಹಾಲಿ ಅಸ್ತಿತ್ವದಲ್ಲಿದ್ದ ಎ.ಐ.ಟಿ.ಯು.ಸಿ ಸಂಘಟನೆಯ ಮೂಲದ ಸಿ.ಪಿ.ಐ ಸರಿಯಾಗಿ ಸ್ಪಂದಿಸುತ್ತಿಲ್ಲ, ಆಡಳಿತ ಮಂಡಳಿಗಳೊಂದಿಗೆ ಶಾಮೀಲಾಗಿದೆ ಎಂದೆಲ್ಲಾ ಆರೋಪದಲ್ಲಿ ತೊಡಗಿಸಿಕೊಂಡಿತು. ದೀರ್ಘಕಾಲ ತಾನೊಂದೇ ಕಾರ್ಮಿಕರ ಆಶಾಕಿರಣವೆಂದು ಅಸ್ತಿತ್ವದಲ್ಲಿದ್ದ ಸಿ.ಪಿ.ಐ. ಸಂಘಟನೆ ತಾನು ನಡೆದುಕೊಂಡು ಬಂದ ಹಾದಿಯನ್ನು ಹಿಂತಿರುಗಿ ನೋಡಲು ಈ ಸಂಘಟನೆಯ ಆಗಮನ ಅನುಕೂಲವಾಯಿತು.

೬. ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ (CITC) (೧೯೭೦)

ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ ೧೯೭೦ರಲ್ಲಿ ಜನ್ಮತಾಳಿತು. ಇದು ಸಿ.ಪಿ.ಐ. (ಎಂ) ಪಕ್ಷದ ನಿಯಂತ್ರಣದಲ್ಲಿದೆ. ಈ ಸಂಘಟನೆಯು ಮೊದಲು ಎ.ಐ.ಟಿ.ಯು.ಸಿಯ

ಅಂಗವಾಗಿತ್ತು. ರಾಷ್ಟ್ರಮಟ್ಟದಲ್ಲಿ ಭಾರತೀಯ ಕಮ್ಯೂನಿಸ್ಟ್ ಪಕ್ಷ ಇಬ್ಭಾಗವಾಗಲಾಗಿ (೧೯೭೦) ಅಲ್ಲಿಂದ ಹೊರಬಂದಿದ್ದೇ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್.

ಅಧ್ಯಯನದ ಅವಧಿಯಲ್ಲಿ ದಾವಣಗೆರೆ ನಗರದಲ್ಲೂ ಸಂಘಟನೆಯಲ್ಲಿ ಒಡಕುಂಟಾಗಿ ಭಾರಿ ಹೋರಾಟಗಳು ನಡೆದು ಕೊಲೆಯಲ್ಲಿ ಅಂತ್ಯವಾಯಿತು. ಇಲ್ಲಿ ಸಿ.ಪಿ.ಐ. ಸಂಘಟನೆ ನಾಯಕರು ಹತ್ಯೆಯಾಗಿದ್ದು, ಬಹುಪಾಲು ಆ ಸಂಘಟನೆಗೆ ಅನುಕಂಪ ದೊರೆತಂತಾಯಿತು. ಈ ಘಟನೆಯಿಂದ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ ದಾವಣಗೆರೆ ಪರಿಸರದಲ್ಲಿ ತನ್ನ ಸಂಪೂರ್ಣ ನೆಲೆಯನ್ನು ಕಳೆದುಕೊಂಡಿತು. ಈ ನೆಲದಲ್ಲಿ ಅದು ಚೇತರಿಸಿಕೊಳ್ಳಲು ಸಿ.ಪಿ.ಐ. ಸಂಘಟನೆ ಮುಂದೆ ಅವಕಾಶ ನೀಡಲಿಲ್ಲ.

ಬ್ರಿಟಿಷರು ೧೯ನೇ ಶತಮಾನದಲ್ಲಿ ದೊಡ್ಡ ಮತ್ತು ಆಧುನಿಕ ಯಂತ್ರಗಳ ಕೈಗಾರಿಕೆಗಳನ್ನು ಭಾರತದಲ್ಲಿ ಸ್ಥಾಪಿಸಲು ಮುಂದಾದಂತೆಯೇ, ಕಾರ್ಮಿಕ ಸಂಘಗಳ ಏಳಿಗೆಯೂ ಆರಂಭವಾಯಿತು. ಅಹಮದಾಬಾದ್‌ನಲ್ಲಿ ಮೊಟ್ಟಮೊದಲಬಾರಿಗೆ ಕಾರ್ಮಿಕ ಸಂಘ ಅಸ್ತಿತ್ವಕ್ಕೆ ಬಂದಿತು. ಅಹಮದಾಬಾದಿನ ಹತ್ತಿಗಿರಿಣಿಯ ಏಜೆಂಟರ ಮಗಳಾದ ಅನುಸೂಯಾಬಿನ್ ಸಾರಾಬಾಯಿ ಇಂಗ್ಲೆಂಡಿಗೆ ಭೇಟಿ ನೀಡಿ ಅಲ್ಲಿನ ಕಾರ್ಮಿಕ ಸಂಘಗಳು ನಿರ್ವಹಿಸುತ್ತಿದ್ದ ಕಾರ್ಯಗಳನ್ನು ವೀಕ್ಷಿಸಿ ತಾಯ್ನಾಡಿಗೆ ಹಿಂತಿರುಗಿದರು. ಅವರ ಮಾರ್ಗದರ್ಶನದಲ್ಲಿ ೦೪.೧೨.೧೯೧೭ರಲ್ಲಿ ಕಾರ್ಮಿಕ ಸಂಘ ಅಹಮದಾಬಾದಿನಲ್ಲಿ ಸ್ಥಾಪನೆಯಾಯಿತು. ಈ ಅಂಶವನ್ನು ಗಮನಿಸಿದಾಗ ಭಾರತದಲ್ಲಿ ಪ್ರಥಮ ಕಾರ್ಮಿಕ ಸಂಘದ ನಾಯಕತ್ವವನ್ನು ನೀಡಿದವರು ಮಹಿಳೆಯಾಗಿದ್ದಾರೆ.[೬] ನಂತರ ಮದ್ರಾಸಿನಲ್ಲಿ ಡಾ. ಅನಿಬೆಸೆಂಟರ ಮಾರ್ಗದರ್ಶನದಲ್ಲಿ ಬಿ.ಪಿ.ವಾಡಿಯಾ ಮದ್ರಾಸ್ ಕಾರ್ಮಿಕ ಸಂಘ ಸ್ಥಾಪಿಸಿದರು.[೭]

ಹೀಗೆ ಅಖಿಲ ಭಾರತ ಮಟ್ಟದಲ್ಲಿ ಕಾರ್ಮಿಕ ಸಂಘಟನೆಗಳು ಆರಂಭವಾದರೆ, ಮೈಸೂರು ಸಂಸ್ಥಾನದಲ್ಲಿ ಕಾರ್ಮಿಕ ಸಂಘಟನೆ ಕೈಗಾರಿಕಾ ರಂಗ ಬೆಳೆದ ಪ್ರಮಾಣದಲ್ಲಿ ಬೆಳೆಯಲಿಲ್ಲ. ೧೯೨೬ರಲ್ಲಿ ಬ್ರಿಟಿಷ್ ಇಂಡಿಯಾದಲ್ಲಿ ಟ್ರೇಡ್ ಯೂನಿಯನ್ ಆಕ್ಟ್ ಜಾರಿಗೆ ಬಂದಿತು. ಆ ಆಕ್ಟ್‌ನಿಂದ ಚಳವಳಿಗಳು ನ್ಯಾಯಬದ್ಧವಾದವು. ಆದರೆ ಮೈಸೂರು ಸಂಸ್ಥಾನ ೧೯೪೧ರ ವರೆಗೂ ಅಂಥದೊಂದು ಶಾಸನವನ್ನು ಜಾರಿಗೆ ತರಲು ಬಲವಾಗಿ ನಿರಾಕರಿಸಿತು.[೮] ಇದರಿಂದ ಕಾರ್ಮಿಕ ಸಂಘಟನೆಯ ಮೇಲೆ ದುಷ್ಪರಿಣಾಮ ಉಂಟಾಯಿತು. ಇದೇ ಸಂದರ್ಭದಲ್ಲಿ ಮೈಸೂರು ಸಂಸ್ಥಾನದ ಬೆಂಗಳೂರು, ಕೋಲಾರ, ಮುಂತಾದ ಸ್ಥಳಗಳಲ್ಲಿ ಕೈಗಾರಿಕೆಗಳು ಗರಿಗೆದರಿ ಕಾರ್ಮಿಕರ ಸಂಖ್ಯೆ ವೃದ್ಧಿಸಿದಾಗ ಅವರ ಮೇಲಾಗುತ್ತಿದ್ದ ಶೋಷಣೆ ಹಿನ್ನೆಲೆಯಲ್ಲಿ ಅವರೂ ಸಂಘಟನೆಯತ್ತ ತೆರಳಲೇಬೇಕಾಯಿತು. ಆದರೆ ಮೈಸೂರು ಸಂಸ್ಥಾನದಲ್ಲಿ ಕಾರ್ಮಿಕರ ಸಂಘಟನೆಯನ್ನು ಹತ್ತಿಕ್ಕುವ ಕ್ರಮ ನಡೆಯಿತು. ಆಗಿನ ರೈಲ್ವೆ ಕಾರ್ಮಿಕ ಒಕ್ಕೂಟದ ಮಹಾಕಾರ್ಯದರ್ಶಿಯಾಗಿದ್ದ ವಿ.ವಿ.ಗಿರಿಯವರಿಗೆ ಮೈಸೂರನ್ನು ಪ್ರವೇಶಿಸದಂತೆ ಸರ್ಕಾರ ತಡೆಯಿತು.[೯] ಕಾರ್ಮಿಕ ಮುಖಂಡರೊಬ್ಬರು ಕಾರ್ಮಿಕರನ್ನು ಸಂಘಟಿಸಲು ಮುಂದಾದಾಗ ಮೈಸೂರು ಸಂಸ್ಥಾನ ನಡೆದುಕೊಂಡ ರೀತಿಯಿಂದ ಅವರ ಅನಿಸಿಕೆಗಳು ಸ್ಪಷ್ಟವಾಗುತ್ತವೆ. ಕಾರ್ಮಿಕ ಸಮೂಹದಲ್ಲಿ ಹೋರಾಟದ ಭಾವನೆಗಳು ಬಲಗೊಳ್ಳತೊಡಗಿದಾಗ ಮೈಸೂರು ಸಂಸ್ಥಾನ ಕಾರ್ಮಿಕ ಕಾಯಿದೆಯನ್ನು ಜಾರಿಗೊಳಿಸಿತು.

೧೯೪೧ರ ಅಕ್ಟೋಬರ್‌ನಲ್ಲಿ ಮೈಸೂರು ಕಾರ್ಮಿಕ ತುರ್ತುಶಾಸನವು ಜಾರಿಯಾಗಿ ೧೯೪೨ರಲ್ಲಿ ಅದು ಕಾರ್ಮಿಕ ಕಾಯಿದೆಯಾಯಿತು.[೧೦] ಈ ಕಾಯಿದೆಯಿಂದ ಮೈಸೂರು ಸಂಸ್ಥಾನದಲ್ಲಿ ಕಾರ್ಮಿಕ ಸಂಘ ಸ್ಥಾಪನೆಗೊಂಡು, ಬೇಡಿಕೆಗಳನ್ನು ಮಂಡಿಸಿ ಮಾಲಿ ಕರೊಂದಿಗೆ ಚರ್ಚಿಸಲು ಅವಕಾಶ ಲಭ್ಯವಾಯಿತು. ಇಲ್ಲಿಂದ ಮುಂದೆ ಕಾರ್ಮಿಕ ಸಂಘಟನೆಗೆ ಬಲ ಬಂದು ವಿಕಸನವಾಯಿತು.

ದಾವಣಗೆರೆ ಹತ್ತಿ ಗಿರಣಿ ಕಾರ್ಮಿಕರ ಸಂಘಟನೆಯನ್ನು ಮುಖ್ಯವಾಗಿ ಎರಡು ಹಂತಗಳಲ್ಲಿ ನೋಡಬಹುದು.

೧. ೧೯೩೬ ರಿಂದ ೧೯೭೦ರ ವರೆಗಿನ ಹಂತ, ಹಾಗೂ

೨. ೧೯೭೦ ರಿಂದ ೧೯೯೦ರ ವರಗಿನ ಹಂತಗಳು.

ಇವುಗಳಲ್ಲಿ ಮೊದಲ ಹಂತ ಶೋಷಣೆಯ ವಿರುದ್ಧ ಹೋರಾಡಲು ಮಾಡಿದ ಪ್ರಯತ್ನ, ತ್ಯಾಗ, ಬಲಿದಾನಗಳಾದರೆ, ಎರಡನೆಯ ಹಂತ ಪ್ರಗತಿಯ ಕಾಲ. ಈ ಕಾಲದಲ್ಲಿ ಕಾರ್ಮಿಕ ಶಕ್ತಿ ಬಲಿಷ್ಠವಾಗಿ ನಡೆದುಕೊಂಡ ರೀತಿಗಳಾವುವು ಎಂಬುದಾಗಿದೆ. ತದನಂತರ ದಾವಣಗೆರೆ ನಗರದಲ್ಲಿ ಕಾರ್ಮಿಕ ಸಂಘಗಳ ಅವನತಿ, ಪೈಪೋಟಿಯನ್ನು ಗಮನಿಸಬಹುದು.

ದಾವಣಗೆರೆ ನಗರವು ಕರ್ನಾಟಕದ ಕೈಗಾರಿಕಾ ರಂಗದಲ್ಲಿ ಸ್ಥಾನ ಪಡೆಯಲು ಆರಂಭಿಸಿತು. ಅಲ್ಲಿ ಹಲವು ಹತ್ತಿಗಿರಣಿ, ಎಣ್ಣೆ ಗಿರಣಿಗಳು ಅಸ್ತಿತ್ವಕ್ಕೆ ಬಂದವು. ೧೯೩೬ರಲ್ಲಿ ದೊಡ್ಡ ಪ್ರಮಾಣದ, ಅತ್ಯಾಧುನಿಕ ಯಂತ್ರಗಳ (ಆಗಿನ ಕಾಲಕ್ಕೆ) ಹತ್ತಿಗಿರಣಿಯು ದಾವಣಗೆರೆಯಲ್ಲಿ ಸ್ಥಾಪನೆಯಾಯಿತು. ಆರಂಭದಲ್ಲಿ ಅದು ನೂರಾರು ಕಾರ್ಮಿಕರಿಗೆ ಉದ್ಯೋಗ ಅವಕಾಶ ಕಲ್ಪಿಸಿತು. ಇದರೊಂದಿಗೆ ಅನೇಕ ಹತ್ತಿಗಿರಣಿಗಳು ತಮ್ಮ ಅಸ್ತಿತ್ವವನ್ನು ಕಂಡುಕೊಂಡಾಗ, ಕಾರ್ಮಿಕರಿಗೆ ಅಗತ್ಯ ಸೌಲಭ್ಯಗಳನ್ನು ನೀಡುವಲ್ಲಿ ಅವರು ಮುಂದಾ.ಲಿಲ್ಲ. ಮೈಸೂರು ಸಂಸ್ಥಾನದಲ್ಲೇ ಇದ್ದ ದಾವಣಗೆರೆ ನಗರಕ್ಕೂ ಅವರ ದೃಷ್ಟಿ ತಾಕಿದ್ದಿತು. ಏಕೆಂದರೆ ೧೯೪೨ರ ವರೆಗೂ ಕಾರ್ಮಿಕ ಕಾಯಿದೆ ಜಾರಿಯಾಗದಿದ್ದದ್ದರಿಂದ ಕಾರ್ಮಿಕರ ಶೋಷಣೆಗೆ ಬಲ ಬಂದಿತು. ಕಾನೂನಿನ ರಕ್ಷಣೆ ಇದ್ದಾಗಲೇ ಕಾರ್ಮಿಕನ ಬದುಕು ಅಸಹನೀಯವಾಗಿದ್ದಾಗ, ಶಾಸನವೊಂದಿಲ್ಲಾ ಎಂಬುದು ಊಹೆಗೆ ನಿಲುಕದ ವಿಚಾರವಾಗಿದೆ. ಹೀಗಿರುವಾಗ ನಗರದ ಗಿರಣಿಗಳ ಮಾಲೀಕರು ಇಂಟಕ್ ಮೂಲದ ಒಳ ಸಂಘಗಳ ಸ್ಥಾಪನೆಗೆ ಅವಕಾಶ ನೀಡಿದ್ದರು. ವಿ.ವಿ.ಗಿರಿಯವರು "ಕಾರ್ಮಿಕ ಸಂಘವು ಕೆಲಸಗಾರರ ಐಚ್ಛಿಕ ಸಂಘಟನೆಯಾಗಿದ್ದು, ಕಾರ್ಮಿಕರ ಹಿತಾಸಕ್ತಿಯನ್ನು ರಕ್ಷಿಸಲು ಸಾಮೂಹಿಕ ಶಕ್ತಿಯಿಂದ ಕೆಲಸ ಮಾಡುವ ಸಂಸ್ಥೆಯಾಗಿದೆ" ಎನ್ನುವ ವ್ಯಾಖ್ಯೆಯನ್ನು ಮೇಲಿನ ಒಳ ಸಂಘಕ್ಕೆ ಹೋಲಿಸಿದರೆ ಸಂಪೂರ್ಣ ತದ್ವಿರುದ್ಧವಾಗಿದೆ. ಒಳ ಸಂಘಗಳು ಮಾಲಿ ಕರ ಸಂಬಂಧಿಕರಿಂದ ಕೂಡಿದ್ದ ಸಂಘಗಳಾಗಿದ್ದವು. ಇವು ಇಂಟಕ್ ಸಂಘದೊಂದಿಗೆ ನಂಟನ್ನು ಹೊಂದಿದ್ದವು. ಸೈದ್ಧಾಂತಿಕವಾಗಿ ಇಂಟಕ್ ಸಂಘವು ಘರ್ಷಣೆ ಬಯಸುವುದಿಲ್ಲ. ಈ ಸಂಘವು ಕೆಲಸ ನಿಲ್ಲಿಸದೆ ಸಮಾಲೋಚನೆ, ಸಮನ್ವಯ[೧೧] ಮುಂತಾದ ಉದ್ದೇಶಗಳನ್ನು ತನ್ನ ಸಿದ್ಧಾಂತದಲ್ಲಿ ಅಡಗಿಸಿಕೊಂಡಿತ್ತು. ಈ ಮಾದರಿಯ ಸಂಘಗಳಿಂದ ಕಾರ್ಮಿಕರ ಶ್ರೇಯೋಭಿವೃದ್ಧಿ ಗಗನ ಕುಸುಮವೇ ಸರಿ. ಕಾರ್ಮಿಕರ ಹಿತಾಸಕ್ತಿಗಳನ್ನು

ಇಂತಹ ವಾತಾವರಣದಲ್ಲಿ ಕಾಪಾಡಲು ಸಾಧ್ಯವಿರಲಿಲ್ಲ ಹಾಗೂ ಈ ವಾತಾವರಣದಲ್ಲಿ ಕಾರ್ಮಿಕರು ಹಕ್ಕಿಗಾಗಿ ಮಾತಾನಾಡುವುದನ್ನು ಕಲ್ಪಿಸಿಕೊಳ್ಳಲೂ ಸಾಧ್ಯವಿಲ್ಲ.

ಇಂಥ ವಾತಾವರಣದಲ್ಲಿ ಕಾರ್ಮಿಕ ಸಂಘಟನೆಯತ್ತ ಸಾಗಲು ಕಾರಣ ಏನು? ಮಾಲಿ ಕರೊಂದಿಗೆ ಮನಃಸ್ತಾಪ ಮೂಡಲು ಹಿನ್ನೆಲೆ ಏನು? ಮಾಲೀಕರು ಉತ್ತಮ ಲಾಭ ಪಡೆದುಕೊಂಡು ಗಿರಣಿಗಳನ್ನು ನಡೆಸುತ್ತಿದ್ದಾಗ, ಕಾರ್ಮಿಕರಿಗೆ ಮೂಲಭೂತ ಸೌಲಭ್ಯಗಳನ್ನು ನೀಡುವಲ್ಲಿ ಅಲಕ್ಷ್ಯ ತೋರಿದರು. ಮೈಸೂರು ಸಂಸ್ಥಾನ ಸಂಘಟನೆಗೆ ಅಗತ್ಯವಾದ ಶಾಸನ ರೂಪಿಸದಿದ್ದರೆ ಜೀವನಾವಶ್ಯಕ ವಸ್ತುಗಳ ಬೆಲೆಗಳು ನಿಂತಲ್ಲಿ ನಿಲ್ಲದೆ ಏರತೊಡಗಿದವು. ೧೯೪೦ರ ಕಾಲದಲ್ಲಿ ದಾವಣಗೆರೆ (ಡಿ.ಸಿ.ಎಂ). ಹತ್ತಿಗಿರಣಿಯಲ್ಲಿ ತಿಂಗಳಿಗೆ ೩೦ ರೂ ಕೂಲಿ ನೀಡುತ್ತಿದ್ದರು.[೧೨] ಅತ್ಯಂತ ಕಡಿಮೆ ಕೂಲಿ ಪಡೆಯುತ್ತಿದ್ದ ಕಾರ್ಮಿಕರ ಜೀವನ ದುಬಾರಿಯಾಯಿತು.ಈ ಬದುಕನ್ನು ಸರಿದೂಗಿಸಲು ವೇತನ ಭತ್ಯೆ ಅಥವಾ ಕೂಲಿಯನ್ನು ಹೆಚ್ಚಿಸಲಿಲ್ಲ. ಹೆರಿಗೆ ರಜೆಯಾಗಲಿ, ಭತ್ಯೆಯಾಗಲಿ, ಬೋನಸ್ ಆಗಲಿ ಕಾರ್ಮಿಕರು ಕಾಣಲಿಲ್ಲ.[೧೩] ಹೀಗೆ ಕಾರ್ಮಿಕರ ಸಮಸ್ಯೆಗಳು ಮೊಳಕೆಯೊಡೆಯ ತೊಡಗಿದವು. ಮಾಲೀಕರು, ಕಾರ್ಮಿಕರ ನಡುವೆ ಬಿರುಕಿನ ಸೆಳಕು ಮೂಡುತ್ತಾ ಕಂದಕ ಹಿರಿದಾಗುತ್ತಾ ಬಂದಿತು. ಕಾರ್ಮಿಕರ ಬೇಡಿಕೆಗಳಿಗೆ ಮಾಲೀಕರಿಂದ ಮಾನ್ಯತೆ ದೊರೆಯದೇ ಹೋಯಿತು. ಇಂತಹ ವಾತಾವರಣ ಕಾರ್ಮಿಕರ ಚರಿತ್ರೆಯನ್ನು ಸಂಘರ್ಷಮಯ ಚರಿತ್ರೆಯನ್ನಾಗಿ ರೂಪಿಸಿತು. ಕಾರ್ಮಿಕರ ಇಂತಹ ಶೋಚನೀಯ ಸ್ಥಿತಿಗಳು ಅವರನ್ನು ಕಮ್ಯೂನಿಸ್ಟ್ ಸಿದ್ಧಾಂತಗಳತ್ತ ಸೆಳೆದವು. ಕಮ್ಯೂನಿಸ್ಟ್ ಕಾರ್ಯಕರ್ತರಾದ ಎಂ.ಎಸ್.ರಾಮರಾವ್, ಬಿ.ಸಿ.ಮೊನ್ನಯ್ಯ ಹಾಗೂ ಎನ್.ಡಿ.ಶಂಕರ್‌ರವರು ಕೈಗಾರಿಕಾ ನಗರಗಳಲ್ಲಿ ಕಾರ್ಮಿಕರ ನಡುವೆ ಕೆಲಸ ಮಾಡಲು ಪ್ರಾರಂಭಿಸಿದರು.[೧೪] ಕಾರ್ಮಿಕರ ಅಭಿವೃದ್ಧಿಗಾಗಿ ಒಂದುಗೂಡುವ ಅನಿವಾರ್ಯತೆಯನ್ನು ನಾಯಕರು ತಿಳಿಸಲು ಮಾಡಿದ ಪ್ರಯತ್ನ ಗಮನಾರ್ಹವಾಗಿದೆ.

ಭಾರತೀಯ ಕಮ್ಯೂನಿಸ್ಟ್ ಪಕ್ಷದ ಉದಯ

ದಾವಣಗೆರೆ ನಗರದಲ್ಲಿ ಕಮ್ಯೂನಿಸ್ಟ್ ಪಕ್ಷವನ್ನೂ, ಕಾರ್ಮಿಕ ಸಂಘಟನೆಯನ್ನೂ ಅನಾಯಾಸವಾಗಿ ಕಟ್ಟಲು ಉತ್ತಮ ವಾತಾವರಣವಿತ್ತೆಂದರೆ ಅದು ತಪ್ಪು ಕಲ್ಪನೆಯಾಗುತ್ತದೆ. ಇದು ಬಂಡವಾಳಶಾಹಿಗಳ ಹಾಗೂ ಬದಲಾವಣೆಯ ವಿರೋಧಿಗಳ ಕೇಂದ್ರವಾಗಿತ್ತು. ಸಂಘಟನೆಯನ್ನು ಹುಟ್ಟುವಾಗಲೇ ಕೊಲ್ಲುವ ಕಂಸನಂತೆ ಹಲವು ಮಾಲೀಕರು ನಿರತರಾಗಿದ್ದರು.

ಆದರೆ ಜಗತ್ತಿನ ಇತರ ಭಾಗಗಳಲ್ಲಿ ಮಾರ್ಕ್ಸ್‌ನ ತತ್ವಗಳು ಜನಪ್ರಿಯವಾಗುತ್ತಿದ್ದಂತಹ ಸಂದರ್ಭವಿದಾಗಿತ್ತು. ಅವನ ಶ್ರಮಕ್ಕೆ ತಕ್ಕ ಪ್ರತಿಫಲ ಮತ್ತು ಶೋಷಣೆಯ ವಿರುದ್ಧದ ಹೋರಾಟ ತತ್ವಗಳು ಕಾರ್ಮಿಕರನ್ನು ಸೆಳೆದವು.[೧೫] ಈ ತತ್ವಗಳನ್ನು ದಾವಣಗೆರೆ ಕಾರ್ಮಿಕ ವರ್ಗಕ್ಕೆ ತಲುಪಿಸಲು ಹಲವು ಮುಖಂಡರು ಯತ್ನಿಸುತ್ತಿದ್ದರು. ಬಿ.ವಿ. ಕಕ್ಕಿಲಾಯ, ಎನ್.ಡಿ.ಶಂಕರ್ ಮುಂತಾದ ಮುಖಂಡರು ದಾವಣಗೆರೆಗೆ ಬಂದು ಸಂಘಟನೆ ಬಗ್ಗೆ ಕಾಳಜಿ ವಹಿಸಿದ್ದೂ ಉಂಟು.[೧೬] ಹೀಗೆ ದಾವಣಗೆರೆಗೆ ಕಮ್ಯೂನಿಷ್ಟ್ ಮುಖಂಡರು ಅರಿವು ಮೂಡಿಸಲು ಆಗಮಿಸಿದಾಗ ಪುಡಾರಿ ಮುರಿಗೆಯ್ಯನವರು ಅವರಿಂದ ಆಕರ್ಷಿತರಾದರು. 'ಪುಡಾರಿ' ಎಂಬ ಪತ್ರಿಕೆಯನ್ನು ದಾವಣಗೆರೆಯಲ್ಲಿ ಬಹುಕಾಲ ನಡೆಸಿದ

ಮುರುಗಯ್ಯನವರು ಈ ನಗರದಲ್ಲಿ ಕಮ್ಯೂನಿಷ್ಟ್ ಪಕ್ಷವನ್ನು ಹುಟ್ಟುಹಾಕಿದರು.[೧೭] ಹೀಗೆ ಮಾರ್ಕ್ಸ್‌ನ ವಿಚಾರಧಾರೆಗಳು ದಾವಣಗೆರೆ ಕಾರ್ಮಿಕರನ್ನು ಸ್ಪರ್ಶಿಸಿದಾಗ ಸಂಘ ಕಟ್ಟಲು ಭಾರಿ ಹೋರಾಟ, ಕೋಲೆ, ಶಿಕ್ಷೆಗಳನ್ನು ಅನುಭವಿಸಬೇಕಾಯಿತು. ದಿ.೧೭.೭.೧೯೪೨ರಂದು ೧೦೦೦ ಸದಸ್ಯರನ್ನು ಹೊಂದಿದ (ನೊಂದಣಿ ಸಂಖ್ಯೆ ೪೪), ದಿ ದಾವಣಗೆರೆ ಕಾಟನ್ ಮಿಲ್ಸ್ ಎಂಪ್ಲಾಯಿಸ್ ಅಸೋಷಿಯೇಷನ್ ಅಸ್ತಿತ್ವಕ್ಕೆ ಬಂದಿತು.[೧೮] ಹೀಗೆ ಅಸ್ತಿತ್ವಕ್ಕೆ ಬಂದ ಸಂಘಟನೆ ಸಂವಿಧಾನಬದ್ಧ ಹಕ್ಕುಗಳಿಗೆ ಬಾದ್ಯಸ್ಥರಾದರೂ ಹಕ್ಕುಗಳನ್ನು ಗಳಿಸಿಕೊಳ್ಳಲು ಹೋರಾಟದ ಹಾದಿ ತುಳಿಯಲೇ ಬೇಕಾಯಿತು. ೧೯೪೨ರಲ್ಲಿ ಅಸ್ತಿತ್ವಕ್ಕೆ ಬಂದ ಕಮ್ಯೂನಿಸ್ಟ್ ಪಕ್ಷ ೧೯೬೮ರವರೆಗೂ ಭದ್ರವಾದ ನೆಲೆಗಟ್ಟಿನ ಮೇಲೆ ನಿಲ್ಲಲು ಬಹಳಷ್ಟು ಹೋರಾಟಗಳನ್ನು ನಡೆಸಿತು. ೧೯೪೭ರಲ್ಲಿ ಎನ್.ಡಿ. ಶಂಕರ್, ಸ್ಥಳೀಯ ಪುಡಾರಿ ಮುರಿಗೆಯ್ಯನವರೊಂದಿಗೆ ಸಂಘಟನೆಯ ಹೊಸ್ತಿಲಲ್ಲಿ ನಿಂತಾಗ ಆವರಗೆರೆ ಗ್ರಾಮದ ಸಮೀಪ ಗೂಂಡಾ ದಾಳಿಗೆ ತುತ್ತಾಗಿ ತಮ್ಮ ಹಲ್ಲುಗಳನ್ನು ಕಳೆದುಕೊಂಡರು.[೧೯] ನಂತರ ಒಳಸಂಘ ಮತ್ತು ಕಮ್ಯೂನಿಷ್ಟ್ ಪಕ್ಷಗಳಲ್ಲಿ ತಮ್ಮ ಅಸ್ತಿತ್ವ ಉಳಿಸಿಕೊಳ್ಳಲು ಹೋರಾಟಗಳು ನಿರಂತರವಾಗಿ ಸಾಗಿ ೧೯೬೪ರಲ್ಲಿ ಕಾಟನ್ ಮಿಲ್ಲಿನಲ್ಲಿ ಹೆಗ್ಗಪ್ಪನ ಕೊಲೆ ನಡೆಯಿತು.[೨೦] ಇದರಿಂದ ಕಮ್ಯುನಿಷ್ಟ್ ಪಕ್ಷದಡಿಯಲ್ಲಿ ಕಾರ್ಮಿಕರನ್ನು ಸಂಘಟಿಸುತ್ತಿದ್ದ ಮುಖಂಡರು ಸೆರೆವಾಸಿಗಳಾದರು (ಶ್ರೀ. ಶೇಖರಪ್ಪ, ಶ್ರೀ. ತಿಪ್ಪೇಸ್ವಾಮಿ, ಶ್ರೀ. ಪಂಪಾಪತಿ, ಶ್ರೀ. ಎಂ.ಮೂರ್ತಿ). ಮಾಲೀಕರು ಮತ್ತು ಕಾರ್ಮಿಕರ ನಡುವೆ ಸಂಘರ್ಷ ಮುಂದುವರೆದು ೧೯೬೮ರಲ್ಲಿ ಆಡಳಿತ ಮಂಡಳಿಯ ಕೈಗೊಂಬೆ ಸಂಘದ ನಾಯಕತ್ವ ವಹಿಸಿ ರಂಗ ಪ್ರವೇಶಿಸಿದ್ದ ರೇವಣಸಿದ್ದಪ್ಪನವರ ಕೊಲೆ ನಡೆಯಿತು. ಆಗಲೂ ಕಾರ್ಮಿಕ ಮುಖಂಡರು ಸೆರೆವಾಸಿಗಳಾದರು.

ಸಂಘವು ತನ್ನ ಸ್ಥಾನಭದ್ರಪಡಿಸಿಕೊಳ್ಳಲು ಇಂತಹ ಹಲವಾರು ಘರ್ಷಣೆ, ಕೊಲೆಯಂತಹ ಘಟನೆಗಳನ್ನು ಅನಿವಾರ್ಯವಾಗಿಸಿಕೊಂಡಿತು. ಆದರೆ ೧೯೬೪ರಲ್ಲಿ ರಾಷ್ಟ್ರಮಟ್ಟದಲ್ಲಿ ಕಮ್ಯೂನಿಷ್ಟ್ ಪಕ್ಷವು ಇಬ್ಭಾಗವಾದದ್ದು, ದಾವಣಗೆರೆ ನಗರದ ಕಮ್ಯೂನಿಷ್ಟ್ ಪಕ್ಷವನ್ನು ತನ್ನ ತೆಕ್ಕೆಗೆ ತೆಗೆದುಕೊಂಡಿತು. ಚಿತ್ರದುರ್ಗದಲ್ಲಿ ವಕೀಲರಾಗಿದ್ದ ಶ್ರೀ ಹನುಮಂತರೆಡ್ಡಿಯವರು ಸಿ.ಪಿ.ಐ.(ಎಂ) ಘಟಕಕ್ಕೆ ಅಧ್ಯಕ್ಷರಾದರೆ ಸಿ.ಪಿ.ಐ. ಗುಂಪಿಗೆ ಹರಿಹರದ ಕಿರ್ಲೋಸ್ಕರ್‌ನಲ್ಲಿ ನಾಯಕರಾಗಿದ್ದ ಎಂ.ಸಿ.ನರಸಿಂಹನ್ ಅವರು ಅಧ್ಯಕ್ಷರಾದರು.[೨೧] ಪಕ್ಷದ ಇಬ್ಭಾಗ ಕಾರ್ಮಿಕರ ಸಂಘಟನೆಯ ಮೇಲೂ ಪರಿಣಾಮ ಬೀರಿತು. ಆದರೆ ಗಣೇಶ ಹತ್ತಿಗಿರಣಿಯ ಕಾರ್ಮಿಕರು ಮಾತ್ರ ಸಿ.ಪಿ.ಐ.(ಎಂ) ಘಟಕಕ್ಕೆ ಮಾನ್ಯತೆ ನೀಡಿದರು. ಭಾರತೀಯ ಕಮ್ಯುನಿಸ್ಟ್ ಪಕ್ಷ (ಸಿ.ಪಿ.ಐ.) ಬಹುಪಾಲು ಕಾರ್ಮಿಕರನ್ನು ತನ್ನತ್ತ ಸೆಳೆದುಕೊಂಡು, ಕಾರ್ಮಿಕರನ್ನು ತಮ್ಮ ಶೋಷಣೆಗಳಿಂದ ಮುಕ್ತ ಮಾಡುವ ಜವಾಬ್ದಾರಿ ಹೊರಲು ಹೊರಟಿದ್ದ ಸಂಘ ವಿಭಜನೆಗೊಂಡಿದ್ದು ದುರಾದೃಷ್ಟ ಎನ್ನಬೇಕಾಗುತ್ತದೆ. ಏಕೆಂದರೆ ಈ ವಿಭಜನೆ ಮುಂದೆ ಮತ್ತೊಂದು ಕೊಲೆಗೆ ಕಾರಣವಾಯಿತು. ಈ ಸಂದರ್ಭದಲ್ಲಿ ಆಲ್‌ಫ್ರೆಡ್ ರಾಬರ್ಟ್‌ರವರ ಉದ್ಗಾರವನ್ನು ಗಮನಿಸುವುದು ಸೂಕ್ತ. ಅವರಂತೆ "Too many unions and too Little unity"[೨೨] ಸತ್ಯವಾಯಿತು. ಅನೈಕ್ಯತೆ ಹಾಗೂ ವಿವಿಧತೆಯಿಂದ ಕಾರ್ಮಿಕ ಚಳವಳಿ ಪರಿಣಾಮಕಾರಿಯಾಗಿ ಸಾಗಲು ಸಾಧ್ಯವಾಗಲಿಲ್ಲ. ಅಂತಿಮವಾಗಿ ೧೯೭೦ರಲ್ಲಿ ಸಿ.ಪಿ.ಐ. ಸಂಘಟನಯ ಮುಂದಾಳುಗಳಾದ ಶ್ರೀ ಸುರೇಶ್, ಶ್ರೀ ಶೇಖರಪ್ಪ, ಶ್ರೀ ಪಂಪಾಪತಿಯವರ

ಮೇಲೆ ಹಲ್ಲೆ ನಡೆದು ಶ್ರೀ ಸುರೇಶ್, ಶ್ರೀ ಶೇಖರಪ್ಪನವರು ಸಾವನ್ನಪ್ಪಿದರು. ಶ್ರೀಪಂಪಾಪತಿಯವರು ಈ ಘಟನೆಯಲ್ಲಿ ಬದುಕುಳಿದಾಗ ಸಿ.ಪಿ.ಐ. ಪಕ್ಷ ನಗರ ಹಾಗೂ ಚಿತ್ರದುರ್ಗ ಜಿಲ್ಲೆಯಲ್ಲಿ ಅನುಕಂಪ ಪಡೆದು ಭಾರಿ ಪ್ರಬಲ ಸಂಘಟನೆಯಾಯಿತು.

೧೯೭೦ರಿಂದ ೧೯೯೦ರ ವರೆಗಿನ ಕಾರ್ಮಿಕ ಸಂಘದ ಅವಧಿಯು ಏಳುಬೀಳುಗಳ ಕಾಲವೂ ಆಗಿದೆ. ಈ ಅವಧಿಯಲ್ಲಿ ಕಮ್ಯೂನಿಷ್ಟ್ ಪಕ್ಷಕ್ಕೆ ನಗರಸಭೆ ಅಧಿಕಾರ ದೊರೆತದ್ದಲ್ಲದೆ, ಮುಖಂಡರಾದ ಶ್ರೀ ಪಂಪಾಪತಿಯವರು ವಿಧಾನಸಭೆಗೆ ಆಯ್ಕೆಯಾಗಿ ತಮ್ಮ ಶಕ್ತಿ ಸಾಮರ್ಥ್ಯ ತೋರ್ಪಡಿಸಿದರು. ಇದೇ ಅವಧಿಯಲ್ಲಿ ಗಿರಣಿಗಳ ಅವಸಾನವೂ ಆರಂಭವಾಗಿ ರಷ್ಯಾದಲ್ಲೂ ಕಮ್ಯೂನಿಸಂ ಅಸ್ತಿತ್ವ ಕಳೆದುಕೊಂಡಿತು.

೧೯೯೧ರಲ್ಲಿ ನಗರದಲ್ಲಿ 'ಭಾರತೀಯ ಮಜ್ದೂರ್ ಸಂಘ' (ಬಿ.ಎಂ.ಎಸ್) ದಾವಣಗೆರೆ ಕಾಟನ್ ಮಿಲ್ಲಿನಲ್ಲಿ (ಡಿ.ಸಿ.ಎಂ) ಜಯಶಾಲಿಯಾಗಿ ತನ್ನ ಪಾದವನ್ನು ಪ್ರಥಮಬಾರಿಗೆ ಈ ನಗರಕ್ಕೆ ಸ್ಪರ್ಶಿಸಿತು. ೧೯೪೨ರಲ್ಲಿ ದಾವಣಗೆರೆ ಕಾಟನ್ ಮಿಲ್ಲಿನಲ್ಲಿ ಆರಂಭವಾದ ಸಿ.ಪಿ.ಐ. ಪಕ್ಷದ ಸಂಘಟನೆ ೧೯೬೫ರ ಕಾಲಕ್ಕೆ ೨೭ ಸಂಘಟನೆಗಳ ಮುಖಂಡತ್ವ ಹೊಂದಿ ೭೫೪೯ ಸದಸ್ಯರನ್ನು ಹೊಂದಿದ್ದು ಇದರಲ್ಲಿ ಗಿರಣಿ ಕಾರ್ಮಿಕರ ಜೊತೆಗೆ, ಸಕ್ಕರೆ, ರಾಜ್ಯ ರಸ್ತೆ ಸಾರಿಗೆ, ಕಿರ್ಲೋಸ್ಕರ ಹೀಗೆ ಹಲವಾರು ಸಂಸ್ಥೆಯ ಕಾರ್ಮಿಕರು ಸೇರ್ಪಡೆಯಾಗಿದ್ದರು.[೨೩]

ಭಾರತೀಯ ಮಜ್ದೂರ್ ಸಂಘ (ಬಿ.ಎಂ.ಎಸ್)

೧೯೯೧ರಲ್ಲಿ ದಾವಣಗೆರೆ ಕಾಟನ್‌ಮಿಲ್ (ಡಿ.ಸಿ.ಎಂ.) ಕಾರ್ಮಿಕರ ಸಂಘಕ್ಕೆ ನಡೆದ ಚುನಾವಣೆಯಲ್ಲಿ ಮೊಟ್ಟಮೊದಲ ಬಾರಿಗೆ ಭಾರತೀಯ ಮಜ್ದೂರ್ ಸಂಘದ (ಬಿ.ಎಂ.ಎಸ್.) ಸಂಘಟನೆ ಯಶಸ್ವಿಯಾಯಿತು. ಕೆ.ತಿಮ್ಮಪ್ಪನವರು ಮುಖಂಡರಾಗಿ ೩.೧೨.೧೯೯೧ರಲ್ಲಿ (ನೊಂದಣಿ ಸಂಖ್ಯೆ ೩೬೧) ೧೮೦೦ ಕಾರ್ಮಿಕರ ಸಂಘವನ್ನು ನೋಂದಾಯಿಸಿದರು.[೨೪] ಇಲ್ಲಿಂದ ಪುನಃ ಸಂಘ ವೈಷಮ್ಯ ಆರಂಭವಾಗಿ ಪರಸ್ಪರ ಆರೋಪ, ಪ್ರತ್ಯಾರೋಪಗಳು ಆರಂಭಗೊಂಡವು. ಹಲವು ದಶಕಗಳ ಕಾಲ ಪ್ರಬಲ ಕೋಟೆ ನಿರ್ಮಿಸಿದ್ದ ಭಾರತೀಯ ಕಮ್ಯೂನಿಸ್ಟ್ ಪಕ್ಷದ (ಸಿ.ಪಿ.ಐ.) ಸಂಘಟನೆಗೆ ಮುತ್ತಿಗೆ ಆರಂಭವಾಯಿತು.

ಈ ರೀತಿಯಲ್ಲಿ ಏರಿಳಿತ ಹೊಂದಿರುವ ಕಾರ್ಮಿಕ ಸಂಘಗಳಲ್ಲಿ ಜಾತಿ, ಹಣ, ಅಧಿಕಾರದ ಪಾತ್ರವೇನು? ಸಂಘಗಳ ಬೆಳವಣಿಗೆಗೆ ಜಾತಿಯು ದಾವಣಗೆರೆ ನಗರದ ಕಾರ್ಮಿಕ ವಲಯದಲ್ಲಿ ಯಾವುದೇ ಪ್ರಭಾವ ಬೀರಿದ ನಿದರ್ಶನಗಳಿಲ್ಲ. ಸಮಾಜವಾದದ ಸೈದ್ಧಾಂತಿಕ ನೆಲೆಯನ್ನು ಹೊಂದಿ ಸಂಘಟನೆಯಲ್ಲಿ ನಿರತರಾಗಿದ್ದವರಲ್ಲಿ ಎಲ್ಲಾ ಜಾತಿಯ ಮುಖಂಡರೂ ಇದ್ದರು. ಇಲ್ಲಿನ ೮ ಹತ್ತಿ ಗಿರಣಿಗಳ ಪೈಕಿ ೪ ಹತ್ತಿಗಿರಣಿಗಳಲ್ಲಿ ಲಿಂಗಾಯತ ಕೋಮಿನವರು ಮಾಲೀಕರಾಗಿದ್ದರು. ಹಾಗೆಯೇ ಸಂಘಟನೆಯ ಘರ್ಷಣೆಯಲ್ಲಿ ಸಾವನ್ನಪ್ಪಿದ ಕಾರ್ಮಿಕ ಮುಖಂಡ ಶ್ರೀ. ಶೇಖರಪ್ಪನವರು ಲಿಂಗಾಯಿತ ಕೋಮಿನವರೇ ಆಗಿದ್ದರು. ಮಾಲೀಕರ ಶೋಷಣೆಯ ವಿರುದ್ಧ ಕಾರ್ಯಚಟುವಟಿಕೆ ನಡೆಸುತ್ತಿದ್ದ ಕಾರ್ಮಿಕರ ಗುರಿ ಬಂಡವಾಳಶಾಹಿ ವ್ಯವಸ್ಥೆಯಾಗಿದ್ದಿತು. ಹಾಗೆಯೇ ಕಾರ್ಮಿಕ ಮುಖಂಡ ಪಂಪಾಪತಿಯವರು ದಾವಣಗೆರೆ ಪರಿಸರಕ್ಕೆ ಹೊಸಬರು (ತಮಿಳುನಾಡಿನ ಮೂಲದವರು). ಪ್ರಬಲಕೋಮಿನವರಲ್ಲದ ಶ್ರೀಯುತರು ಕಾರ್ಮಿಕರ ಬದುಕು ಅಹಸನೀಯವಾಗಿದ್ದಾಗ, ಬಂಡವಾಳಶಾಹಿ

ವ್ಯವಸ್ಥೆಯಲ್ಲಿ ಹಕ್ಕಿಗಾಗಿ ಮಾತನಾಡುವುದು ಕಲ್ಪನೆಗೂ ನಿಲುಕದ ಸಂದರ್ಭದಲ್ಲಿ, ದಿಟ್ಟನತದ ನಾಯಕತ್ವ ನೀಡಿದ್ದೇ ಅವರನ್ನು ನಾಯಕರನ್ನಾಗಿ ಸ್ವೀಕರಿಸಲು ಒಂದು ಮಾನದಂಡವಾಯಿತು. ಆದ್ದರಿಂದ ಇಲ್ಲಿ ಜಾತಿಯು ಸಂಘಟನೆಯನ್ನು ಕಟ್ಟಲು ಅನುಕೂಲವನ್ನೂ ಮಾಡಲಿಲ್ಲ ಹಾಗೂ ಅನಾನುಕೂಲವನ್ನು ಉಂಟುಮಾಡಲಿಲ್ಲ. ಆದರೆ ಹಲವು ಸಂದರ್ಭಗಳಲ್ಲಿ ಕೆಲನಾಯಕರು ಸೈದ್ಧಾಂತಿಕ ನೆಲೆಯೊಂದಿಗೆ ಹೊಂದಾಣಿಕೆ ಮಾಡಿಕೊಂಡಂತೆ ಗೋಚರಿಸುತ್ತದೆ. ಮೂಲಭೂತವಾಗಿ ಜಾತಿ, ಪಂಥ, ಧರ್ಮಗಳಿಗೆ ಕಮ್ಯೂನಿಷ್ಟ್ ಸಿದ್ಧಾಂತದಲ್ಲಿ ಅವಕಾಶ ಇಲ್ಲದಿರುವ ಹಿನ್ನೆಲೆಯು ಪ್ರೇರಕ ಅಂಶವಾಗಿದೆ. ಅಧಿಕಾರದ ನೆಲೆಯಲ್ಲಿ ನೋಡಿದಾಗ ಕಮ್ಯೂನಿಷ್ಟ್ ಪಕ್ಷದ ನಾಯಕರು ಕಾರ್ಮಿಕರಾಗಿ, ಕಾರ್ಮಿಕರ ನಾಯಕರಾಗಿ, ಕಾರ್ಮಿಕರಿಂದಲೇ ಬೆಳವಣಿಗೆ ಹೊಂದಿದರು. ಇವರು ರಾಜಕೀಯ ಅಧಿಕಾರ ಪಡೆದುಕೊಂಡ ಮೇಲೆ ಕಾರ್ಮಿಕರಿಗೆ ವಸತಿ ಮುಂತಾದ ಮೂಲಭೂತ ಸೌಕರ್ಯಗಳನ್ನು ಒದಗಿಸಲಿಲ್ಲ ಎಂಬ ಆರೋಪದ ಜೊತೆಗೆ ಅವರ ಅಧಿಕಾರವಿರುವಾಗಲೆ ದಾವಣಗೆರೆ ಗಿರಣಿಗಳು ಅವನತಿಯಾಗುತ್ತಿವೆ ಎಂಬ ಆರೋಪ ಕೂಡ ಕೇಳಿಬರುತ್ತಿದೆ. ಆದರೆ ಅವರ ವ್ಯಾಪ್ತಿ ಮೀರಿದ ವಿಚಾರಗಳಿಗೆ ಮೇಲ್ಕಂಡ ಆರೋಪಗಳಿವೆ ಎನ್ನಬಹುದು. ಮುಖಂಡನಾದವನು ಯಾವುದೇ ರಾಜಕೀಯ ಪಕ್ಷದ ಅಥವಾ ಇತರೆ ಯಾವುದೇ ಅಧಿಕಾರದ ಚುಕ್ಕಾಣಿ ಹಿಡಿಯಬಾರದು, ಏಕೆಂದರೆ ಅವನು ರಾಶಿ ನೋಡಿದ ಕೂಡಲೇ ಮನಸ್ಸನ್ನು ಬದಲಾಯಿಸುತ್ತಾನೆ ಎಂದು ಡಿ.ಸಿ.ಎಂ.ಗಿರಣಿಯ ಕಾರ್ಮಿಕ ಗಾಯಕ ವೀರಣ್ಣ ಅಭಿಪ್ರಾಯ ಪಟ್ಟಿರುವುದರ ಹಿನ್ನೆಲೆಯಲ್ಲಿ ಸಂಶಯ ಉಂಟಾಗುತ್ತದೆ. ಈ ಅಭಿಪ್ರಾಯದಿಂದ ಅಧಿಕಾರ ದುರುಪಯೋಗವು ಗಮನಕ್ಕೆ ಬರುತ್ತದೆ.[೨೫] ಒಟ್ಟಾರೆ ಅಧಿಕಾರವಿದ್ದಾಗ ಕಮ್ಯೂನಿಷ್ಟ್ ಪಕ್ಷದ ಕಾರ್ಮಿಕರ ಅಪೇಕ್ಷೆಗೆ ನಿಲುಕುವಷ್ಟು ಕಾರ್ಯ ಮಾಡಲಾಗಲಿಲ್ಲ ಎಂಬುದು ಇಲ್ಲಿನ ಮುಖ್ಯಾಂಶವಾಗಿದೆ.

ಹಣದ ನೆಲೆಯಲ್ಲಿ ಕಮ್ಯೂನಿಷ್ಟ್ ಪಕ್ಷದ ಕಾರ್ಯಚಟುವಟಿಕೆಗಳನ್ನು ಗಮನಿಸಿದರೆ ಹಣವನ್ನು ಬಳಸಿ ಸಂಘ ಒಡೆಯುವ ಪ್ರಯತ್ನವನ್ನು ಮಾಡಲಿಲ್ಲ. ಏಕೆಂದರೆ ಇವರ ಅಧಿಕಾರವಿದ್ದಾಗ ಬೇರೆ ಸಂಘಟನೆಗಳು ಉದಯಿಸಲೇ ಇಲ್ಲ. ಆದರೆ ನಾನು ನಾಯಕನಾಗಿದ್ದೇನೆ, ನಿಮ್ಮ ಹಿತವನ್ನು ಕಾಪಾಡುತ್ತೇನೆ ಎಂದು ಕಾರ್ಮಿಕರಿಗೆ ಭರವಸೆ ನೀಡಿ ಮಾಲೀಕರೊಂದಿಗೆ ಸಂಧಾನ ಮಾಡಿಕೊಂಡು ಕಾರ್ಮಿಕರಿಗೆ ಅನ್ಯಾಯ ಮಾಡಿದ್ದಾರೆ ಎಂಬ ಆರೋಪವಿದೆ. ಆಡಳಿತ ಮಂಡಳಿಯವರ ಜೊತೆ ಶಾಮೀಲಾಗಿ ಕಾರ್ಖಾನೆಯನ್ನು ಮುಚ್ಚುವ ಪ್ರಯತ್ನದಲ್ಲಿ ಕಮ್ಯೂನಿಷ್ಟ್ ಸಂಘಟನೆ ಹೆಜ್ಜೆ ಇಟ್ಟಿದೆ,[೨೬] ಎಂದು ಭಾರತೀಯ ಮಜ್ದೂರ್ (ಬಿ.ಎಂ.ಎಸ್.) ಸಂಘಟನೆಯ ಅಧ್ಯಕ್ಷರಾದ ಕೆ.ತಿಮ್ಮಪ್ಪನವರು ಆರೋಪಿಸಿದರು. ಆದರೆ ಇಂತಹ ಭ್ರಷ್ಟಾಚಾರಗಳನ್ನು, ಅನೀತಿಯುತವಾದ ಮಾರ್ಗಗಳನ್ನು ಸಾಬೀತು ಪಡಿಸಲು ಪುರಾವೆಗಳಿಲ್ಲ. ಹಿಂದಿನಕಾಲದಿಂದಲೂ ಇಂತಹ ಘಟನೆಗಳು ಒಂದಲ್ಲಾ ಒಂದು ಹಂತದಲ್ಲಿ ನಡೆದುಕೊಂಡು ಬರುತ್ತಲೇ ಇವೆ. ಆದ್ದರಿಂದ ಪುರಾವೆಗಳಿಲ್ಲದ ಇಂತಹ ಆರೋಪಗಳನ್ನು ಪರಿಗಣಿಸಬೇಕಾದ ಅಗತ್ಯ ಬರುವುದಿಲ್ಲ.

ಕಾರ್ಮಿಕ ಚಳುವಳಿಯಲ್ಲಿ ದಾವಣಗೆರೆ ನಗರದ ಹತ್ತಿಗಿರಣಿ ಕಾರ್ಮಿಕ ಸಂಘಗಳ ಪಾತ್ರ

ದಾವಣಗೆರೆ ನಗರದ ಕಾರ್ಮಿಕ ಸಂಘಗಳ ಪಾತ್ರವೆಂದರೆ, ೧೯೯೦ರವರೆಗೂ ದೀರ್ಘಕಾಲ ಪ್ರಬಲ ಸಂಘವಾಗಿದ್ದ ಭಾರತೀಯ ಕಮ್ಯುನಿಸ್ಟ್ ಪಕ್ಷದ (ಸಿ.ಪಿ.ಐ.) ಪಾತ್ರವೆಂದೇ ಹೇಳಬೇಕಾಗುತ್ತದೆ. ದಾವಣಗೆರೆ ನಗರದಲ್ಲಷ್ಟೇ ಅಲ್ಲ ಕರ್ನಾಟಕ ರಾಜ್ಯದಲ್ಲೇ ಕಾರ್ಮಿಕ ಚಳವಳಿಯಲ್ಲಿ ಗಣನೀಯ

ಸ್ಥಾನದಲ್ಲಿದ್ದ ಈ ಸಂಘಟನೆಯ ಸಾಧಕ ಬಾಧಕಗಳನ್ನು ಚರ್ಚಿಸುವುದು ಈ ಸಂದರ್ಭದ ಮುಖ್ಯಾಂಶವಾಗಿದೆ.

* ದಾವಣಗೆರೆ ನಗರದ ಕಾರ್ಮಿಕ ಸಂಘವು ಕಾರ್ಮಿಕರ ಸಮ್ಮೇಳನಗಳನ್ನು ನಡೆಸುವ ಮೂಲಕ, ನಗರದ ಗಿರಣಿ ಕಾರ್ಮಿಕರ ಹಾಗೂ ರಾಜ್ಯದ ಗಿರಣಿ ಕಾರ್ಮಿಕರ ವೇತನ ಹೆಚ್ಚಿಸುವಲ್ಲಿ, ಆ ಮೂಲಕ ಕಾರ್ಮಿಕರ ಆರ್ಥಿಕಾಭಿವೃದ್ಧಿಗೆ ಶ್ರಮಿಸಿದೆ. ಕೂಲಿ ಶಾಶ್ವತವಾಗಿ ಏರುವಂತೆ ಕಾರ್ಮಿಕ ಸಂಘಗಳು ಮಾಡಲಾರವೆಂದು ಪ್ರಾಚೀನ ಅರ್ಥಶಾಸ್ತ್ರಜ್ಞರು ಅಭಿಪ್ರಾಯಪಟ್ಟಿರುವಂತೆ ಇಂದು ನಡೆಯುತ್ತಿರುವ ಗಿರಣಿಗಳಲ್ಲಿ ಕೂಲಿಯು ಕಡಿಮೆಯಾಗಿರುವುದು ಗಮನಾರ್ಹವಾಗಿದೆ (ಈಗ ಚಾಲ್ತಿಯಲ್ಲಿರುವ ಆಂಜನೇಯ, ಗಣೇಶ ಗಿರಣಿಗಳಲ್ಲಿ ತಾತ್ಕಾಲಿಕ ಕಾರ್ಮಿಕರಿಗೆ ೫೦ರೂ, ಖಾಯಂ ಕಾರ್ಮಿಕರಿಗೆ ೭೦ ರೂ ಕೂಲಿ ಇದೆ).

* ಅಧಿಕ ಕೆಲಸದ ಅವಧಿ, ಕಡಿಮೆ ಕೂಲಿ ಮುಂತಾದ ಮೂಲಭೂತ ಶೋಷಣೆಯಿಂದ ಕಾರ್ಮಿಕರನ್ನು ಮುಕ್ತಗೊಳಿಸಿ ಅವರ ಅಭಿವೃದ್ಧಿಗೆ ಯತ್ನಿಸಿದೆ.

* ಭಾರತೀಯ ಕಮ್ಯುನಿಸ್ಟ್ (ಸಿ.ಪಿ.ಐ.) ಪಕ್ಷವು ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್ ಎಂಬ (ಎ.ಐ.ಟಿ.ಯು.ಸಿ.) ರಾಷ್ಟ್ರೀಯ ಸಂಘಟನೆಯೊಂದಿಗೆ ಸಂಬಂಧ ಹೊಂದಿದ್ದರಿಂದ ರಾಷ್ಟ್ರಮಟ್ಟದ ನಾಯಕರ ಸಲಹೆ, ಮಾರ್ಗದರ್ಶನ ಪಡೆದು ಕಾರ್ಮಿಕರ ಸ್ಥಿತಿ-ಗತಿ ಸುಧಾರಣೆಗೆ ಯತ್ನಿಸಲು ಸಾಧ್ಯವಾಯಿತು. ೧೯೪೨ರಲ್ಲಿ ೧೦೦೦ ಸದಸ್ಯರಿಂದ ಆರಂಭವಾದ ಸಂಘಟನೆ ೧೯೫೫ರ ಕಾಲಕ್ಕೆ ೭೫೪೬ ಕಾರ್ಮಿಕರನ್ನು ತನ್ನ ಸದಸ್ಯರಾಗಿಸಿಕೊಂಡಿತ್ತು. ಈ ಸಂಖ್ಯೆಯು ಪಕ್ಷ ಬೆಳವಣಿಗೆಯ, ಸಂಘಟನೆಯ ಶಕ್ತಿಯನ್ನು ಸೂಚಿಸುತ್ತದೆ.

* ದಾವಣಗೆರೆ ನಗರದ ಹತ್ತಿ ಗಿರಣಿ ಕಾರ್ಮಿಕರಲ್ಲಿ ಹೆಚ್ಚಿನ ಕಾರ್ಮಿಕರು ಕನ್ನಡಿಗರಾಗಿದ್ದು, ಬಹಳಷ್ಟು ಗಿರಣಿಗಳು ಪೂನ, ಬೆಂಗಳೂರು ರಸ್ತೆಗೆ ಸಮೀಪವಿದ್ದುದು, ಅಶಿಕ್ಷಿತರಾದ ಬಹುಸಂಖ್ಯೆಯ ಕಾರ್ಮಿಕರನ್ನು ಸಂಘಟಿಸಲು ಸಹಕಾರಿ ಅಂಶವಾಗಿತ್ತು.

* ಕಾರ್ಮಿಕ ಸಂಘವು ಬಲಗೊಂಡ ನಂತರ ಬಂಡವಾಳಶಾಹಿಗಳ ಹಿಂಸೆ, ಶೋಷಣೆ, ಸಂಘ ಒಡೆಯಲು ಉಪಯೋಗಿಸುತ್ತಿದ್ದ ಗೂಂಡಾಗಿರಿ, ಮುಖಂಡರ ಮೇಲೆ ಆಗುತ್ತಿದ್ದ ಪೋಲಿಸ್ ಕೇಸುಗಳು ಮುಂತಾದವು ೯೦% ಭಾಗ ಕಡಿಮೆಯಾದವು. ಕಾರ್ಮಿಕ ಸಂಘಟನೆ ಬೇಡಿಕೆಗಳನ್ನು ಮುಂದಿಟ್ಟರೆ, ಮಾಲೀಕರಾಗಲಿ, ಸರ್ಕಾರವಾಗಲಿ ಗಣನೆಗೆ ತೆಗೆದುಕೊಳ್ಳಲು ಆರಂಭಿಸಿದರು.

* ರಾಜಕೀಯ ಅಧಿಕಾರ ಪಡೆದುಕೊಂಡು ಭಾರತೀಯ ಕಮ್ಯೂನಿಸ್ಟ್ ಪಕ್ಷದ ನೇತೃತ್ವದ ಸಂಘಟನೆ ಅತ್ಯುತ್ತಮ ಅವಕಾಶ ಪಡೆದುಕೊಂಡಿತು. ಈ ಅವಕಾಶದ ಸಂದರ್ಭವು ಹಲವು ಟೀಕೆಗಳಿಗೆ ಗುರಿಯಾಗಿದ್ದರೂ ಅದೊಂದು ಒಳ್ಳೆಯ ಸಂದರ್ಭವಾಗಿತ್ತು. ಆದರೆ ಈ ಸಂದರ್ಭದಲ್ಲಿ ರಾಜಕೀಯಕ್ಕೆ ಹೆಚ್ಚು ಮಹತ್ವ ನೀಡುವುದರ ಬದಲಾಗಿ, ಕಾರ್ಮಿಕರ ಏಳಿಗೆಗೂ ಹೆಚ್ಚಿನ ಪ್ರಾಮುಖ್ಯತೆ ನೀಡಬೇಕಾಗಿದ್ದಿತು. ರಾಜಕೀಯಕ್ಕೆ ಹೆಚ್ಚಿನ ಗಮನ ನೀಡಿ, ಗಿರಣಿ ಕಾರ್ಮಿಕರೊಂದಿಗೆ ಸ್ಪಂದಿಸಲು ಸಮಯದ ಅಭಾವ ಉಂಟಾಗಿ ಸಂಘ ಮತ್ತು ಕಾರ್ಮಿಕರ ನಡುವೆ ಅಂತರ ಹೆಚ್ಚಾಯಿತು.

* ಸಂಘವು ತಾಂತ್ರಿಕ ಉನ್ನತಿಗೆ ಪ್ರೇರಣೆ ನೀಡದೆ ವಿರೋಧಮಾಡಿದ್ದು ಗಿರಣಿಗಳು ಜಾಗತಿಕ ಮಟ್ಟದ ಸ್ಪರ್ಧೆ ಎದುರಿಸಲು ಅಸಮರ್ಥವಾದವು.

* ವರ್ಗ ಸಂಘರ್ಷಕ್ಕೆ ಮಹತ್ವನೀಡಿ ಮುಷ್ಕರ ಮುಂತಾದ ಚಟುವಟಿಕೆಗಳಲ್ಲಿ ನಿರತವಾದುದರಿಂದ ಸಾರ್ವಜನಿಕರ ಅನುಕಂಪಗಳಿಸಲಿಲ್ಲ. ಈ ಹಿನ್ನೆಲೆಯಲ್ಲಿಯೆ ಕಮ್ಯೂನಿಷ್ಟ್‌ರೆಂದರೆ 'ಘರ್ಷಣೆ ಹಾದಿ ತುಳಿಯುವವರು', 'ಅವರ ಚಳವಳಿಯೇ ಗಿರಣಿಗಳ ಅವನತಿಗೆ ಕಾರಣ' ಎಂಬ ಆರೋಪಕ್ಕೆ ಗುರಿಯಾಯಿತು.

* ಸಮುದಾಯದ ಪಾಲಿಗೆ ಭರವಸೆ ನೀಡುವ ಶಕ್ತಿಯಾಗಿ ಉದಯಿಸಿದ ಸಂಘ, ತಾನು ನಡೆದು ಬಂದ ಹಾದಿಯನ್ನು ಹಿಂತಿರುಗಿ ನೋಡಿ ಆತ್ಮ ವಿಮರ್ಶೆ ಮಾಡಿಕೊಳ್ಳುವ ಪ್ರಯತ್ನ ಮಾಡಲಿಲ್ಲವೇ? ಅದು ತಾನು ಸಾಗುತ್ತಿರುವ ದಾರಿಯನ್ನು ವಿಮರ್ಶೆಗೊಳಪಡಿಸಬೇಕಾಗಿತ್ತು. ಸಂಘಟನೆಯು ಸಾಗಿಬರುತ್ತಿರುವ ಸಂದರ್ಭಗಳನ್ನು ಅವಲೋಕಿಸಿದರೆ ಸಮಗ್ರವಾದ ವಿಮರ್ಶೆ ಆಗಬೇಕಿತ್ತು. ಅನಿವಾರ್ಯ ಸಂದರ್ಭಗಳಲ್ಲಿ ಸೈದ್ಧಾಂತಿಕ ಚೌಕಟ್ಟನ್ನು ಬಿಟ್ಟು, ಹೊಂದಾಣಿಕೆ ಮನೋಭಾವನೆಯನ್ನು ಆಚರಣೆಗೆ ತರಬೇಕಿತ್ತು. ತನ್ನನ್ನೇ ಒಂದು ಶಕ್ತಿ ಎಂದು ಅಭಿಮಾನದಿಂದ ಹೊರಟು ಈ ಕಾರ್ಯವನ್ನು ಕೈಗೊಳ್ಳಲಿಲ್ಲ. ಆದರೆ ಮುಖಂಡರಾದ ಶ್ರೀಪಂಪಾಪತಿಯವರು ೧೯೬೪ರಲ್ಲಿ ನರಗುಂದದ ಬಟ್ಟೆ ಗಿರಣಿಯು ವಿನಾಶದ ಹಾದಿಯಲ್ಲಿ ಸಾಗುತ್ತಿದ್ದಾಗ ಕಾರ್ಮಿಕರು ಕೂಲಿ ಕಡಿಮೆ ಮಾಡಿಕೊಂಡು ಕೆಲಸ ನಿರ್ವಹಿಸಲು ಒಪ್ಪಿಕೊಂಡರು. ಇದರಿಂದ ಗಿರಣಿ ಉಳಿದರೂ ಹಲವು ಟೀಕೆಗಳಿಗೆ ಗುರಿಯಾಯಿತು. ಏಕೆಂದರೆ ರಾಜ್ಯದ ಬಹುತೇಕ ಗಿರಣಿಗಳಲ್ಲಿ ಕೂಲಿಯಲ್ಲಿ ಹಿನ್ನಡೆಯಾಗಿ ಅವರೆಲ್ಲಾ ಶ್ರೀ ಪಂಪಾಪತಿಯವರೇ ಈ ವ್ಯವಸ್ಥೆಗೆ ಕಾರಣವೆನ್ನುತ್ತಾರೆ. ಆದರೆ ಜಾಗತೀಕರಣದ ಈ ಕಾಲದಲ್ಲಿ ಆತ್ಮವಿಮರ್ಶೆ, ಬದಲಾವಣೆ ಅನಿವಾರ್ಯವಾಗಿದೆ.

ಕೊನೆಟಿಪ್ಪಣಿಗಳು

೧. ಸಿಂಡ್ರೆ ವೆಬ್ ಮತ್ತು ಬಿಯಾಟ್ರೈಸ್‌ವೆಬ್, ದ ಹಿಸ್ಟರಿ ಆಫ್ ಟ್ರೇಡ್ ಯೂನಿಯನಿಸಂ, ೧೯೨೦, ಪು. ೧

೨. ಕೆ. ಭೈರಪ್ಪ, ಔದ್ಯೋಗಿಕ ಸಮಾಜಶಾಸ್ತ್ರ, ೧೯೯೮, ಪುಟ.೩೩೩

೩. ಎಸ್. ಡ್ಯಾನಿಯಲ್ ಸತ್ಯವೀರ್, ಕಾರ್ಮಿಕ ಸಂಘಟನೆ ಮತ್ತು ಹೊಣೆಗಾರಿಕೆ, ಕರ್ನಾಟಕ ಕಾರ್ಮಿಕ ಪತ್ರಿಕೆ, ಸೆಪ್ಟೆಂಬರ್ ೧೯೮೫, ಪುಟ.೭೫

೪. ಎಂ. ಕಲ್ಯಾಣ ಸುಂದರಂ, ಸೋಮಿಯ್ ಟ್ರೇಡ್ ಯೂನಿಯನ್‌ಗಳು, ೧೯೮೨, ಪು. ೧೬

೫. ಬಿ.ಎಲ್. ಗ್ರೋವರ್ ಮತ್ತು ಎಸ್. ಗ್ರೋವರ್, ಎ ನ್ಯೂ ಔಟ್‌ಲುಕ್ ಅಟ್ ಮಾಡ್ರನ್ ಇಂಡಿಯನ್ ಹಿಸ್ಟರಿ, ೨೦೦೨, ಪು. ೪೯೧

೬. ಜಿ. ರಾಮಾನುಜಂ, ಇಂಡಿಯನ್ ಲೇಬರ್ ಮೂಮೆಂಟ್, ೧೯೮೬, ಪುಟ.೧೩

೭. ಅದೇ, ಪುಟ.೧೪

೮. ಜಾನಕಿನಾಯರ್, ಅನು: ಆರ್.ಎಲ್. ಅನಂತರಾಮಯ್ಯ, ಕಾರ್ಮಿಕ ಚಳವಳಿ-೧, ವಿಜಯ್ ತಂಬಂಡ ಪೂಣಚ್ಚ (ಸಂ), ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ: ೪, ಚರಿತ್ರೆ, ೨೦೦೧, ಪುಟ. ೮೩೩

೯. ಪ್ರೊ. ಎಸ್.ಚಂದ್ರಶೇಖರ್, ನಗರ ಕಾರ್ಮಿಕರ ಪಾತ್ರ, ಚರಿತ್ರೆ ಮಾಲೆ ೭, ಕರ್ನಾಟಕ ಚರಿತ್ರೆ, ಪ್ರ.ಸಂ. ಪ್ರೊ. ಬಿ.ಷೇಕ್ ಅಲಿ (ಪ್ರ.ಸಂ), ೧೯೯೭, ಪುಟ.೧೪೨

೧೦. ಎಸ್. ನಿಜಲಿಂಗಪ್ಪ (ಪ್ರ.ಸಂ), ಜನ್ಮಶತಮಾನೋತ್ಸವ ಸಂಸ್ಮರಣೆ, ಡಾ. ದೇ.ಜ.ಗೌ, ೨೦೦೩, ಪು.೩೪೩

೧೧. ಹಾ.ಮಾ. ನಾಯಕ (ಪ್ರ.ಸಂ), ಕನ್ನಡ ವಿಶ್ವಕೋಶ, ಸಂಪುಟ-೪, ೧೯೭೨, ಪುಟ.೫೫೩

೧೨. ಸಂದರ್ಶನ ಮಾಹಿತಿ, ಡಿ.ಸಿ.ಎಂ ಗಿರಣಿ ಕಾರ್ಮಿಕರಾದ ಗಾಯಕವೀರಣ್ಣ, ದಾವಣಗೆರೆ, ದಿ.೧೨.೪.೨೦೦೪

೧೩. ಸಂದರ್ಶನ ಮಾಹಿತಿ ಶ್ರೀ ಎಂ.ಜಿ. ತಿಪ್ಪೇಸ್ವಾಮಿ, ಕಾರ್ಮಿಕ ಮುಖಂಡರು, ದಾವಣಗೆರೆ, ದಿ.೧೧.೯.೨೦೦೪

೧೪. ಪ್ರೊ. ಎಸ್. ಚಂದ್ರಶೇಖರ್, ನಗರ ಕಾರ್ಮಿಕರ ಪಾತ್ರ, ಚರಿತ್ರೆ ಮಾಲೆ-೭, ಕರ್ನಾಟಕ ಚರಿತ್ರೆ (ಪ್ರ.ಸಂ.) ಪ್ರೊ. ಬಿ. ಷೇಕ್‌ಅಲಿ, ೧೯೯೭, ಪುಟ.೧೪೫

೧೫. ಎನ್.ಡಿ. ಶಂಕರ್, ಕೆ.ಎಸ್.ಎ.ಬಿ, ೫೩.

೧೬. ಡಾ. ಎಂ.ಜಿ. ಈಶ್ವರಪ್ಪ (ಸಂ.), ಶತಮಾನದ ದಾವಣಗೆರೆ, ೨೦೦೧, ಪುಟ.೬೯

೧೭. ಅದೇ

೧೮. ಸಹಾಯಕ ಕಾರ್ಮಿಕ ಆಯುಕ್ತರು, ಬಳ್ಳಾರಿ ವಿಭಾಗ, ದಾವಣಗೆರೆ ಇವರ ಕಛೇರಿಯ ಪತ್ರದ ಮಾಹಿತಿಯಿಂದ

೧೯. ಸಂದರ್ಶನ ಮಾಹಿತಿ, ಶ್ರೀ ಎಂ.ಜಿ. ತಿಪ್ಪೇಸ್ವಾಮಿ, ಕಾರ್ಮಿಕ ಮುಖಂಡರು, ದಾವಣಗೆರೆ, ದಿ.೧೨.೪.೨೦೦೪

೨೦. ಡಾ. ಎಂ.ಜಿ. ಈಶ್ವರಪ್ಪ (ಸಂ.), ಶತಮಾನದ ದಾವಣಗೆರೆ, ೨೦೦೧, ಪುಟ.೭೦

೨೧. ಸಿದ್ಧಲಿಂಗ ಸ್ವಾಮಿ, ಇಂಡಸ್ಟ್ರೀಯಲ್ ರಿಲೇಷನ್ಸ್ ಇನ್ ಟೆಕ್ಸ್‌ಟೈಲ್ ಇಂಡಸ್ಟ್ರಿ, ಎ ಕೇಸ್ ಸ್ಟಡಿ ಆಫ್ ಕಾಟನ್ ಮಿಲ್ಸ್ ಇನ್ ದಾವಣಗೆರೆ, ಅಪ್ರಕಟಿತ ಪಿಎಚ್.ಡಿ.ಪ್ರಬಂಧ, ೧೯೯೨, ಪುಟ ೧೨೦

೨೨. ಎಂ.ಎಸ್. ಚಾಂದವಟೆ, ಕಾರ್ಮಿಕ ಚಳವಳಿ ಮತ್ತು ಸಾಮಾಜಿಕ ಹೊಣೆಗಾರಿಕೆ, ೧೯೯೨, ಪು.೩೮

೨೩. ಸಹಾಯಕ ಕಾರ್ಮಿಕ ಆಯುಕ್ತರು, ಬಳ್ಳಾರಿ ವಿಭಾಗ, ದಾವಣಗೆರೆ ಇವರ ಕಛೇರಿ ಪತ್ರದ ಮಾಹಿತಿಯಿದೆ

೨೪. ಅದೇ

೨೫. ಸಂದರ್ಶನ ಮಾಹಿತಿ, ಗಾಯಕ ವೀರಣ್ಣ, ದಾವಣಗೆರೆ. ದಿ.೧೨.೦೪.೨೦೦೪

೨೬. ಜನಮಿಡಿತ ದಿನಪತ್ರಿಕೆ, ದಾವಣಗೆರೆ ದಿ. ೧೩.೭.೧೯೯೮

ಅಧ್ಯಾಯ ೫

ದಾವಣಗೆರೆ ನಗರದ ಹತ್ತಿಗಿರಣಿ ಕಾರ್ಮಿಕರ ಪ್ರಮುಖ ಚಳವಳಿಗಳು

ದಾವಣಗೆರೆ ನಗರದ ಹತ್ತಿಗಿರಣಿ ಕಾರ್ಮಿಕರ ಪ್ರಮುಖ ಚಳವಳಿಗಳು

ಈ ಅಧ್ಯಾಯದಲ್ಲಿ ದಾವಣಗೆರೆ ನಗರದ ಹತ್ತಿಗರಣಿ ಕಾರ್ಮಿಕರ ಪ್ರಮುಖ ಚಳುವಳಿಗಳನ್ನು ವಿಶ್ಲೇಶಿಸುವ ಪ್ರಯತ್ನವಿದೆ. ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ 'ಚಳವಳಿ' ಎಂದರೇನು? ನಂತರ ಅವುಗಳ ಚಾರಿತ್ರಿಕ ಹಿನ್ನೆಲೆಯನ್ನು ಅವಲೋಕಿಸಿಸುವುದು ಸೂಕ್ತ. ವಿವಿಧ ಸಂದರ್ಭಗಳಲ್ಲಿ ಮಾನವನು, ಮಾನವನನ್ನೇ ಶೋಷಣೆ ಮಾಡಲು ಮುಂದಾದಾಗ ಸಾಮೂಹಿಕವಾಗಿ ಹೋರಾಡುವ ನಿಟ್ಟಿನಲ್ಲಿ ಚಳವಳಿ ಎಂಬ ಅಸ್ತ್ರ ಹುಟ್ಟಿಕೊಂಡಿತು. ಚಳವಳಿ ಎಂಬುದು ತಕ್ಷಣದಲ್ಲಿ ಉದ್ಭವಿಸುವ ಘಟನೆಯಲ್ಲ. ಅದು ಸಮೂಹದ ಅಥವ ಸಮಾಜದ ಆಶಯಗಳ ಮೂಲದಲ್ಲಿ ಹುಟ್ಟನ್ನು ಪಡೆಯುತ್ತದೆಂಬುದು ಸ್ಪಷ್ಟ. ೧೭೮೯ರ ಪ್ರಾನ್ಸಿನ ಮಹಾಕ್ರಾಂತಿ, ೧೯೧೭ರ ರಷ್ಯಾ ಕ್ರಾಂತಿಗಳಲ್ಲದೆ, ವಿಶ್ವದಾದ್ಯಂತ ಮಹಿಳಾ ಚಳವಳಿಗಳು, ರೈತಚಳವಳಿಗಳು, ಕಾರ್ಮಿಕ ಚಳವಳಿಗಳು ಮೊದಲಾದ ಅನೇಕ ಘಟನೆಗಳು ಸಂಭವಿಸಿವೆ. ಇವು ಮಾನವನ ಶೋಷಣೆಯ ವಿರುದ್ಧ ಹೋರಾಟ ನಡೆದಿರುವ ಬಗೆಯನ್ನು ಚರಿತ್ರೆಯ ವಿವಿಧ ಕಾಲಘಟ್ಟಗಳಲ್ಲಿನ ಒತ್ತಡ-ಒಲವುಗಳನ್ನು ಕಾರಣಗಳ ಮೂಲಕ ತಿಳಿಸುತ್ತವೆ.

ಹತ್ತಿಗಿರಣಿ ಕಾರ್ಮಿಕರ ಪ್ರಮುಖ ಚಳವಳಿಗಳು ಎಂದು ಚರ್ಚಿಸುವ ಸಂದರ್ಭದಲ್ಲಿ ಕಾರ್ಮಿಕ ಎಂದರೆ ಯಾರು ಎಂದು ತಿಳಿಯುವುದು ಸೂಕ್ತ. 'ಕಾರ್ಮಿಕ' ಎನ್ನುವ ಪದಕ್ಕೆ ವಿವಿಧ ಕಾರ್ಮಿಕ ಕಾಯಿದೆಗಳು ವಿವಿಧ ಅರ್ಥವನ್ನು ನೀಡುತ್ತವೆ. ಅಂದಾಗ ಕಾಯಿದೆಗಳ ವ್ಯಾಪ್ತಿಯಲ್ಲೇ ಸ್ಪಷ್ಟ ಅರ್ಥವಿವರಣೆ ಕಾಣುವುದು ಕಷ್ಟದ ವಿಷಯವಾಗಿದೆ.

೧೯೪೭ರ ಕೈಗಾರಿಕಾ ವಿವಾದಗಳ ಕಾಯಿದೆಯ ಸೆಕ್ಷನ್ ೨ಎಸ್‌ನಲ್ಲಿ, ಯಾವುದೇ ವ್ಯಕ್ತಿ ಒಂದು ಕೈಗಾರಿಕೆಯಲ್ಲಿ ದೈಹಿಕವಾಗಿ ಅಥವಾ ಬೌದ್ಧಿಕವಾಗಿ ಅಥವಾ ಬೌದ್ಧಿಕವಲ್ಲದ, ತಾಂತ್ರಿಕ, ಚಾಲನೆ, ಕಛೇರಿ ಸಿಬ್ಬಂದಿ, ಅಥವ ಮೇಲ್ವಿಚಾರಣಾ ಕೆಲಸವನ್ನು ಬಾಡಿಗೆಗೋಸ್ಕರ ಅಥವಾ ಸಂಬಳಕ್ಕೋಸ್ಕರ ಅವರನ್ನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ನೇಮಕ ಮಾಡಿಕೊಂಡಂತವರನ್ನು 'ಕಾರ್ಮಿಕ' ಎಂದು ಕರೆಯುತ್ತಾರೆ.

ಕೌಟಿಲ್ಯನು ಅರ್ಥಶಾಸ್ತ್ರದಲ್ಲಿ "ಶ್ರಮಕ್ಕೆ ಬದಲಾಗಿ ವೇತನ ಪಡೆಯುವವನೇ" ಕಾರ್ಮಿಕ ಎನ್ನುತ್ತಾನೆ.

ಪ್ರಸ್ತುತ ಅಧ್ಯಯನದಲ್ಲಿ ಕಾರ್ಮಿಕ ಎಂದರೆ "ನಿಯೋಜಕನಿಂದ ನೇಮಿಸಲ್ಪಟ್ಟು ಶ್ರಮವನ್ನೇ ಉಪಯೋಗಿಸಿ ವೇತನ ಪಡೆಯುವವನಾಗಿದ್ದಾನೆ" ಎನ್ನುವ ಅರ್ಥದಲ್ಲಿ ಬಳಸಿಕೊಳ್ಳಲಾಗಿದೆ.

ಕನ್ನಡದಲ್ಲಿ ಚಳವಳಿ ಎಂಬ ಪದವನ್ನು Movement ಎಂಬ ಇಂಗ್ಲಿಷ್ ಪದಕ್ಕೆ ಸಂವಾದಿಯಾಗಿ ಬಳಸುತ್ತಾರೆ. ಲ್ಯಾಟೀನ್ ಅಥವಾ ಗ್ರೀಕ್ ಮೂಲದಿಂದ ಈ ಪದ ಬಂದಿರಬೇಕು. ಕಾಂಪ್ಯಾಕ್ಟ್ ಆಕ್ಸ್‌ಫರ್ಡ್ ಶಬ್ದಕೋಶವು Movement ಪದಕ್ಕೆ - 'A group of People with a shared Cause' ಎಂಬ ಅರ್ಥವನ್ನು ನೀಡುತ್ತದೆ. ಅಂದರೆ, ಮಹತ್ತರವಾದ ಸಾರ್ವತ್ರಿಕ ಉದ್ದೇಶಕ್ಕಾಗಿ ಸಂಘಟಿತಗೊಂಡ ವ್ಯಕ್ತಿಗಳ ಚಟುವಟಿಕೆಗಳು ಎಂದಾಗುತ್ತದೆ.

ಚಳವಳಿಗಳ ಸ್ವರೂಪದಲ್ಲಿ ಭಿನ್ನತೆ ಇದೆ. ಚಳವಳಿಗಳು ಘಟಿಸುವ ಆಧಾರದ ಮೇಲೆ ಅವುಗಳ ಕಾರಣ, ಸ್ವರೂಪ ಮತ್ತು ಪರಿಣಾಮವನ್ನು ಗುರುತಿಸಲಾಗುತ್ತದೆ. ಜಾತಿ ವ್ಯವಸ್ಥೆ, ಪರಿಸರ ರಕ್ಷಣೆ, ರೈತಸಮಸ್ಯೆ, ಜಾಗತೀಕರಣದ ವಿರುದ್ಧ ಹೋರಾಟಗಳೇ ಚಳವಳಿಗಳು ಹುಟ್ಟಲು ಕಾರಣ. ಈ ಚಳವಳಿಗಳಿಗೆ ಆರ್ಥಿಕ, ರಾಜಕೀಯ, ಸಾಮಾಜಿಕ ಮೊದಲಾದ ಕ್ಷೇತ್ರಗಳ ಸ್ಥಿತಿಗತಿಗಳು ಕಾರಣ ಮತ್ತು ಮುಖ್ಯಸಂಗತಿಗಳಾಗಿದ್ದು ಗಮನಾರ್ಹ.

ಈವರೆಗೆ ಚಳವಳಿಗೆ ಏಕರೂಪದ ವ್ಯಾಖ್ಯಾನ ನೀಡಲು ಸಾಧ್ಯವಾಗಿಲ್ಲ. ಏಕೆಂದರೆ, ಚಳವಳಿಗಳನ್ನು ಆಯಾ ಕ್ಷೇತ್ರ, ಪ್ರತ್ಯೇಕ ನೆಲೆಗಳಲ್ಲಿ ಅರ್ಥೈಸಬೇಕಾಗಿದೆ. "ಜಾಗೃತಗೊಂಡ ಸಂಘಟಿತ ಜನಸಮೂಹ ನಿರ್ದಿಷ್ಟ ಗುರಿಯೆಡೆಗೆ ಮುನ್ನಡೆಯುವ ಸಂಯುಕ್ತ ಯತ್ನವೇ ಚಳವಳಿ" ಎಂಬ ಸಾಮಾನ್ಯ ವ್ಯಾಖ್ಯೆಯನ್ನು ನೀಡಿರುವ ವಿದ್ವಾಂಸರ ಅಭಿಪ್ರಾಯವನ್ನು ಇಲ್ಲಿ ಪರಿಗಣಿಸಲಾಗಿದೆ. ಮುಂದುವರಿದು ಹೇಳುವುದಾದರೆ, ಯಾವುದೇ ವ್ಯವಸ್ಥೆಯಲ್ಲಿ ಬದಲಾವಣೆ ತರಲು ನಿರ್ದಿಷ್ಟ ಧ್ಯೇಯವನ್ನಿಟ್ಟುಕೊಂಡು ಮಾಡುವ ಸಾಮೂಹಿಕ ಪ್ರಯತ್ನವೇ ಚಳವಳಿ ಎಂಬುದನ್ನು ಒಪ್ಪಬಹುದಾಗಿದೆ.

ಒಟ್ಟಿನಲ್ಲಿ ಚಳವಳಿಗಳ ಉದ್ದೇಶ, ಆಶಯ ಒಂದು ಸಮೂಹವನ್ನು ಹೊಸ ದಿಕ್ಕಿನತ್ತ ಕೊಂಡೊಯ್ಯುವ ಜವಾಬ್ದಾರಿಯನ್ನು ಹೊಂದಿರುತ್ತವೆ, ಅಲ್ಲದೆ ಒಂದು ಸಮಾಜವನ್ನು ಅಥವ ಸಮೂಹವನ್ನು ಹೆಚ್ಚು ಹೆಚ್ಚು ಮಾನವೀಯಗೊಳಿಸುವ ಒಂದು ಪ್ರಕ್ರಿಯೆಯಾಗಿದೆ.

ವಿಶ್ವದಾದ್ಯಂತ ನಡೆದ ಚಳವಳಿಗಳಲ್ಲಿ ಕಾರ್ಮಿಕ ಚಳವಳಿಯೂ ಒಂದು. ಈ ಕಾರ್ಮಿಕ ಚಳವಳಿ ತಾತ್ವಿಕ ಸ್ವರೂಪ, ಭಿನ್ನತೆಗಳಿಂದ ಕೂಡಿದೆ. ವಿವಿಧ ಕೈಗಾರಿಕೆಗಳಲ್ಲಿ ಕೂಲಿ ಪಡೆಯುತ್ತಿರುವ ಕಾರ್ಮಿಕರು ತಮ್ಮ ಸ್ಥಿತಿಗತಿ ಸುಧಾರಿಸುವ ಹಿನ್ನೆಲೆಯಲ್ಲಿ ನಡೆಸುವ ಸಾಮೂಹಿಕ ಹೋರಾಟವಾಗಿದೆ. ದೀರ್ಘಕಾಲದ ಶೋಷಣೆಯಿಂದ ಕಾರ್ಮಿಕರಲ್ಲಿ ಅಡಗಿದ್ದ ಅತೃಪ್ತಿಗಳು ಸ್ಫೋಟಗೊಂಡು ಪ್ರತಿಭಟನೆಯ ರೂಪ ಪಡೆದದ್ದು ಚಳವಳಿಯಾಗಿದೆ. ಕಾರ್ಮಿಕ ಚಳವಳಿ ಮತ್ತು ಕಾರ್ಮಿಕ ಸಂಘಟನಾ ಚಳವಳಿ ಇವೆರಡರ ನಡುವಿನ ಅರ್ಥದಲ್ಲಿ ವ್ಯತ್ಯಾಸವಿದೆ. ಕಾರ್ಮಿಕ ಸಂಘಟನೆ ಕಾರ್ಮಿಕ ಚಳವಳಿಗೆ ಅಡಿಪಾಯವಾಗಿದೆ. ಆದರೆ ಕಾರ್ಮಿಕ ಸಂಘದ ಚಳವಳಿಯಲ್ಲಿ ಕಾರ್ಮಿಕನೇ ಕೇಂದ್ರಬಿಂದುವಾಗಿರುತ್ತಾನೆ. ಕಾರ್ಮಿಕ ಚಳವಳಿಗೆ ಸಂಘಟನೆಯ ಬಲ ಸಿಕ್ಕಾಗ ಹೋರಾಟಗಳಿಗೆ ಶಕ್ತಿ ಬರುತ್ತದೆ. ಭಾರತದಲ್ಲಿ ಕಾರ್ಮಿಕ ಚಳವಳಿಯು ಆಯಾಯ ಸಂದರ್ಭಗಳಲ್ಲಿನ ಕಾರ್ಮಿಕ ವಿಷಯವೊಂದನ್ನು ಆಯ್ಕೆ ಮಾಡಿಕೊಂಡು, ಅದನ್ನು ಸಮಸ್ಯೆ ಎಂದು ಗುರುತಿಸಿ, ಅಭಿಪ್ರಾಯ ರೂಪಿಸಿ, ಕಾನೂನುಬದ್ಧ ಪರಿಹಾರಕ್ಕಾಗಿ ಒತ್ತಾಯ ತರುವ ಪ್ರಧಾನ ಲಕ್ಷಣವನ್ನು ಹೊಂದಿರುತ್ತದೆ. ಪ್ರತಿಯೊಂದು ಚಳವಳಿಗೂ ಒಂದು ನಿರ್ದಿಷ್ಟ ಗುರಿ ಮತ್ತು ತಾತ್ವಿಕತೆ

ಇರುತ್ತದೆ. ಹಾಗೆಯೇ ಕಾರ್ಮಿಕ ಚಳವಳಿಯು ತನ್ನದೇ ಆದ ತತ್ವ, ವಿಧಾನಗಳ ಮುಖಾಂತರ ಗುರಿ ಸಾಧಿಸಲು ಯತ್ನಿಸುತ್ತದೆ. ಈ ಚಳವಳಿಯಲ್ಲಿ ಒಡೆಯ ಮತ್ತು ಕಾರ್ಮಿಕರ ಸಂಬಂಧಗಳನ್ನು ಸುಧಾರಿಸಿ, ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಮಹತ್ವ ನೀಡಲಾಗಿದೆ. ಕರ್ನಾಟಕ ರಾಜ್ಯದ ದಾವಣಗೆರೆ ನಗರದ ಕಾರ್ಮಿಕ ಚಳವಳಿ ಕುರಿತ ಅಧ್ಯಯನವು ಮೇಲಿನ ಅಂಶಗಳಿಂದ ಕೂಡಿದೆ.

ದೀರ್ಘಕಾಲ ಸಮಾಜವಾದದ ಹಿನ್ನೆಲೆಯನ್ನು ಹೊಂದಿತ್ತು ಈ ಚಳವಳಿ. ಶೋಷಿತ ವ್ಯವಸ್ಥೆಯ ವಿರುದ್ಧ ಬದಲಾವಣೆಯನ್ನು ತರಲು ಬಯಸಿತ್ತು. ಕಾರ್ಮಿಕ ಚಳವಳಿಯ ಮೂಲಕ ನಡೆದ ಹೋರಾಟಗಳಲ್ಲಿ ದೀರ್ಘಕಾಲದ ಚಾರಿತ್ರಿಕ ಹಿನ್ನೆಲೆ ಉಳ್ಳದ್ದಾಗಿಲ್ಲ. ಈ ಚಳವಳಿಯು ಕೈಗಾರಿಕಾ ಕ್ರಾಂತಿಗೆ ನಾಂದಿಯಾಗಿತ್ತು. ಕೈಗಾರಿಕಾ ಕ್ರಾಂತಿಯಿಂದ ಆದಾಯ ಮತ್ತು ಸಂಪತ್ತಿನ ಹೆಚ್ಚುಪಾಲು ಮಾಲೀಕರು ಮತ್ತು ಕೈಗಾರಿಕೋದ್ಯಮಿಗಳ ಪಾಲಾಯಿತು. ಈ ವ್ಯವಸ್ಥೆಯಲ್ಲಿ ಕಾರ್ಮಿಕ ತೀವ್ರ ಶೋಷಣೆಗೊಳಗಾದ ಕೈಗಾರಿಕಾ ಕ್ರಾಂತಿ ಬಡತನ ನಿರ್ಮೂಲನೆ ಮಾಡುವ ಬದಲು, ಬಡವರನ್ನು ಹೆಚ್ಚು ಶೋಷಣೆಗೆ ಗುರಿಮಾಡಿತು. ಇದು ಚಳವಳಿಗೆ ಪ್ರೇರಣೆ ನೀಡಿದ್ದು ಸಹಜ. ಇದರ ಫಲವಾಗಿ ಕೈಗಾರಿಕಾ ಕ್ರಾಂತಿಯ ಉಗಮ ಸ್ಥಾನವಾದ ಇಂಗ್ಲೆಂಡಿನಲ್ಲೂ ಕಾರ್ಮಿಕ ಚಳವಳಿಗಳು ಆರಂಭವಾದವು. ಇಂಗ್ಲೆಂಡಿನಲ್ಲಿ ಚಳವಳಿಗಳು ಸಂಭವಿಸಿದಂತೆ ಅಮೆರಿಕಾದಲ್ಲಿ ನಡೆಯಲಿಲ್ಲ. ೧೯ನೇ ಶತಮಾನದ ಮಧ್ಯಭಾಗದಲ್ಲಿ ಅಲ್ಲಿ ಕಾರ್ಮಿಕ ಚಳವಳಿಗಳು ಹುಟ್ಟಿಕೊಂಡವು. ಭಾರತದಲ್ಲಿ ಬ್ರಿಟಿಷರ ಮತ್ತು ಭಾರತೀಯರ ಒಡೆತನದ ಕೈಗಾರಿಕೆಗಳು ಸ್ಥಾಪನೆಗೊಂಡು ಕಾರ್ಮಿಕ ವರ್ಗ ರೂಪುಗೊಂಡಿತು. ಇಲ್ಲೂ ಸಹ ಕಾರ್ಮಿಕರ ಅಸಹನೀಯ ಶೋಷಣೆ ಆರಂಭವಾಗಿ ಚ೯ವಳಿ ನಡೆಸಲು ಅನುವುಮಾಡಿಕೊಟ್ಟಿತು. ಕೊಲ್ಕತ್ತಾ, ನಾಗಪುರ, ಮುಂಬೈ ಮುಂತಾದೆಡೆಗಳಲ್ಲಿ ೧೯ನೇ ಶತಮಾನದ ಆರಂಭದಿಂದಲೇ ಕಾರ್ಮಿಕ ಚಳವಳಿಗಳು ಆರಂಭವಾದವು. ೧೮೮೧ರಲ್ಲಿ ಭಾರತದಲ್ಲಿನ ಬ್ರಿಟಿಷ್ ಸರ್ಕಾರವು ಫ್ಯಾಕ್ಟರಿ ಕಾಯಿದೆಯನ್ನು ಜಾರಿಗೆ ತಂದಿತು.[೧] ಈ ಕಾಯಿದೆಯನ್ನು ವಿರೋಧಿಸುವ ಚಳವಳಿಗಳು ಆಗಲೇ ಆರಂಭವಾದವು. ನಂತರದ ಹಂತದಲ್ಲಿ ಕಾರ್ಮಿಕರು ಸ್ವತಂತ್ರ ಹೋರಾಟದಲ್ಲಿ ಪಾಲ್ಗೊಂಡು ಚಳವಳಿಯ ಅಂಗವಾದರು. ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್ ಸ್ಥಾಪನೆ, (AITUC) ಕಾರ್ಮಿಕ ಚಳವಳಿಯ ಮುನ್ನಡೆಯಲ್ಲಿ ಮಹತ್ವದ ಪಾತ್ರ ವಹಿಸಿತು. ಅದು ಕಾರ್ಮಿಕರನ್ನು ಸ್ವತಂತ್ರ ಚಳವಳಿಯ ವ್ಯಾಪ್ತಿಗೊಳಪಡಿಸಲು ಬಲವಾದ ಪ್ರಯತ್ನ ಮಾಡಿತು. ಅದು ಕಾರ್ಮಿಕರನ್ನು 'ನೀವು ಸ್ವತಂತ್ರ ಚಳವಳಿಯನ್ನು ಅಲಕ್ಷಿಸದೆ ಅದರ ಅಂಗವಾಗಿ ಎಂದು ಕರೆಕೊಟ್ಟು ಅವರ ಭವಿಷ್ಯತ್ತಿನ ಬಗ್ಗೆ ಮಾರ್ಗದರ್ಶನ ಮಾಡಿತು.[೨] ಹಾಗೆಯೇ ಪ್ರಥಮ ಮತ್ತು ದ್ವಿತೀಯ ಮಹಾಯುದ್ಧಗಳ ಅವಧಿಯಲ್ಲೂ ಕಾರ್ಮಿಕರ ಹಕ್ಕುಗಳನ್ನು ಪಡೆದುಕೊಳ್ಳಲು ಚಳವಳಿಗಳನ್ನು ಸಂಘಟಿಸಿದ್ದಕ್ಕೆ ಭಾರತ ಹಾಗೂ ಕರ್ನಾಟಕದಲ್ಲಿ ಇಂಥಾ ಬಹಳಷ್ಟು ನಿದರ್ಶನಗಳಿವೆ.

ದಾವಣಗೆರೆಯಲ್ಲಿ ಕಾರ್ಮಿಕ ಚಳವಳಿಗಳು ಹುಟ್ಟಲು ಕಾರಣಗಳೇನು?

೧೯೩೬ರ ಕಾಲಕ್ಕೆ ದಾವಣಗೆರೆಯಲ್ಲಿ ಹತ್ತಿಗಿರಣಿಗಳ ಸ್ಥಾಪನೆ ಆರಂಭಗೊಂಡಿತು. ಕ್ರಮೇಣ ಅಭಿವೃದ್ಧಿ ನೆಪದಲ್ಲಿ ಶೋಷಣೆಯು ಹುಟ್ಟಿಕೊಂಡಿತು. ಗಿರಣಿ ಮಾಲೀಕರು ಕಾರ್ಮಿಕರಿಗೆ ನೀಡಬೇಕಾಗಿದ್ದ ಕಾನೂನುಬದ್ಧ ಸೌಲಭ್ಯಗಳನ್ನು ನೀಡದೆ ಕಾರ್ಮಿಕರ ಅಭಿಪ್ರಾಯಕ್ಕೆ ವಿಮುಖವಾದರು. ಕಾರ್ಮಿಕರ

ಬದುಕು ದುಬಾರಿಯಾಗಿ ಅವರು ಬಡವರಾಗುತ್ತಾ ಹೋದರು. ಇಂತಹ ಬಡತನದ ಬದುಕನ್ನು ಸರಿದೂಗಿಸಲು ವೇತನ ಭತ್ಯೆ, ಬೋನಸ್, ರಜಾ ಸೌಲಭ್ಯ ಮುಂತಾದವುಗಳನ್ನು ನಿಯಮಬದ್ಧವಾಗಿ ನೀಡಲಿಲ್ಲ. ಕಾರ್ಮಿಕರು ಹಕ್ಕುಗಳಿಗೆ ಬಾಧ್ಯಸ್ಥರಾದರೂ ಅವುಗಳನ್ನು ಗಳಿಸಲು ಚಳವಳಿಯ ಹಾದಿಯನ್ನು ತುಳಿಯಬೇಕಾಯಿತು. ಮೈಸೂರು ಸಂಸ್ಥಾನದಲ್ಲಿ ಕೈಗಾರಿಕೆಗಳ ಸ್ಥಾಪನೆಗೆ ಒತ್ತು ನೀಡಿದರೂ, ಆರಂಭದಲ್ಲಿ ಕಾರ್ಮಿಕರ ಪರ ನೀತಿ ಅನುಸರಿಸಲಿಲ್ಲ. ಅಂತೆಯೇ ಮೈಸೂರು ಸಂಸ್ಥಾನದ ವ್ಯಾಪ್ತಿಯ ದಾವಣಗೆರೆ ನಗರದಲ್ಲೂ ಕಾರ್ಮಿಕ ಚಳವಳಿ ಹುಟ್ಟಿಕೊಳ್ಳಲು ಸ್ವಲ್ಪ ವಿಳಂಬವಾಯಿತು.

ದಾವಣಗೆ ಹತ್ತಿಗಿರಣಿ ಕಾರ್ಮಿಕರ ಕೆಲವು ಚಳವಳಿಗಳನ್ನು ಇಲ್ಲಿ ಸಂದರ್ಭ, ಕಾಲದ ನೆಲೆಯಲ್ಲಿ ಚರ್ಚಿಸಲಾಗಿದೆ. ಕಾರ್ಮಿಕ ಚಳವಳಿಗಳು ೧೯೪೮ರಿಂದಲೇ ದಾವಣಗೆರೆಯಲ್ಲಿ ಕಾಣಿಸಿಕೊಳ್ಳುತ್ತವೆ. ಆದರೆ ೧೯೭೦ರ ನಂತರ ರಾಜಕೀಯ ಅಧಿಕಾರವನ್ನು ಪಡೆದ ಕಾರ್ಮಿಕ ಸಂಘಟನೆ ಚಳವಳಿಗಳನ್ನು ತೀವ್ರಗೊಳಿಸಿತು. ಅಧ್ಯಯನದ ಅವಧಿಯ ಆರಂಭದ ಕಾಲದಲ್ಲಿ ಚಳವಳಿಗಳು ಹಕ್ಕುಗಳನ್ನು ಪಡೆದುಕೊಳ್ಳುವ ಹಿನ್ನೆಲೆ ಉಳ್ಳವಾಗಿದ್ದರೆ, ೧೯೮೦ರ ದಶಕದಲ್ಲಿ ತಮ್ಮ ಕೆಲಸಗಳನ್ನು ಉಳಿಸಿಕೊಳ್ಳುವ ಚಳವಳಿಗಳಾಗಿ ರೂಪಾಂತರಗೊಂಡವು. ನಂತರ ಪರಿಹಾರ ಪಡೆದುಕೊಳ್ಳುವ ಸ್ವರೂಪ ಪಡೆದುಕೊಂಡವು.

ಕೆಲವು ಕಡೆ ಕಾರ್ಮಿಕರ ಹೋರಾಟ ಮತ್ತು ಚಳವಳಿಗಳನ್ನು ದಾಖಲಿಸಿರುವುದು ವಿರಳ. ಆದರೆ ದಾವಣಗೆರೆ ನಗರದಲ್ಲಿ ಜನತಾವಾಣಿ, ನಗರವಾಣಿ ದಿನಪತ್ರಿಕೆಗಳು ಕಾರ್ಮಿಕರ ಚಳವಳಿಗಳನ್ನು ಮಾನ್ಯ ಮಾಡಿ ಬಹಳಷ್ಟು ಘಟನೆಗಳನ್ನು ಪ್ರಕಟಿಸಿವೆ. ಅಂದಿನ ಮಾಧ್ಯಮದ ವ್ಯವಸ್ಥೆಯ ಹಿನ್ನೆಲೆಯಲ್ಲಿ ಸ್ಥಳೀಯವೇ ಆದ ಈ ಪತ್ರಿಕೆಗಳಿಂದ ಹೆಚ್ಚು ವಿಷಯವನ್ನು ಸಂಗ್ರಹಿಸಲಾಗಿದೆ. ಪ್ರಸ್ತುತ ಅಧ್ಯಯನದಲ್ಲಿ ಚರ್ಚಿಸಿರುವ ಮುಖ್ಯ ಚಳವಳಿಗಳೆಂದರೆ

೧. ಕಾರ್ಮಿಕರ ಸ್ಥಿತಿಗತಿ ಸುಧಾರಣೆಗಾಗಿ

೨. ಕೆಲಸ ಕಳೆದುಕೊಂಡವರ ಪುನರ್ ನೇಮಕಕ್ಕಾಗಿ

೩. ಕೃಷಿ ಕಾರ್ಮಿಕರ ಪರ ಹೋರಾಟ

೪. ಬೆಲೆ ಏರಿಕೆ ವಿರುದ್ಧ

೫. ಬೋನಸ್ ಪ್ರಮಾಣದ ಹೆಚ್ಚಳಕ್ಕಾಗಿ

೬. ಮುಚ್ಚಿದ ಗಿರಣಿಗಳ ತೆರವಿಗಾಗಿ

೭. ಇತರೆ ಕಾರಣಗಳು

೧. ಕಾರ್ಮಿಕರ ಸ್ಥಿತಿ-ಗತಿ ಸುಧಾರಣೆಗಾಗಿ ಚಳವಳಿ

ಕ್ರಿ.ಶ. ೧೯೪೮ರ ಜನವರಿ ೩೦ ರಂದು ರಾಷ್ಟ್ರಪಿತ ಮಹಾತ್ಮಗಾಂಧಿ ಹತ್ಯೆಗೀಡಾದಾಗ, ಅವರ ಚಿತಾಭಸ್ಮ ವಿಸರ್ಜನೆಯ ವಿಷಯ ದಾವಣಗೆರೆ ಕಾರ್ಮಿಕರಲ್ಲಿ ಚಳವಳಿ ಹಂತ ತಲುಪಿತು. ಮಹಾತ್ಮರ ಚಿತಾಭಸ್ಮವನ್ನು ಹರಿಹರದ ತುಂಗಭದ್ರಾ ನದಿಯಲ್ಲಿ ವಿಸರ್ಜಿಸುವ ಯೋಜನೆ ಇತ್ತು. ನಗರದ ಕಾರ್ಮಿಕರು ಈ ವಿಸರ್ಜನೆಯ ದರ್ಶನಕ್ಕೆ ಮಾಲಿಕರ ಅನುಮತಿ ಇಲ್ಲದೆ ತೆರಳಿದರು. ಈ ಘಟನೆಯು

ಡಿ.ಸಿ.ಎಂ. ಗಿರಣಿಯ ಬೀಗಮುದ್ರೆಗೆ ಆಸ್ಪದವಾಯಿತು. ೧೫ ದಿನಗಳ ನಂತರ ಎ.ಹೆಚ್. ಶಿವಾನಂದ ಸ್ವಾಮಿಯವರ ನಾಯಕತ್ವದಲ್ಲಿ ಮಿಲ್ ಗೇಟ್ ತೆರೆಯಿತು.[೬] ಆದರೆ ಸಂಘಟನೆಯಲ್ಲಿ ತೊಡಗಿದ್ದ ೨೫ ಕಾರ್ಮಿಕರನ್ನು ಕೆಲಸದಿಂದ ವಜಾಮಾಡಲಾಯಿತು. ಇದು ದಾವಣಗೆರೆ ನಗರದ ಕಾರ್ಮಿಕ ಚಳವಳಿಯ "ಮೊದಲ ಘಟನೆ"ಯಾಗಿ ವೈಫಲ್ಯದಲ್ಲಿ ಅಂತ್ಯವಾಯಿತು

ಗಿರಣಿಗೆ ಅಪಾರ ಬಂಡವಾಳ ಹೂಡಿದವರು ಕಾರ್ಮಿಕ ಚಳವಳಿಯನ್ನು ಹತ್ತಿಕ್ಕಲು ಯತ್ನಿಸುವುದು ಸಹಜ. ಈ ನಿಟ್ಟಿನಲ್ಲಿ ಉದ್ಭವಿಸುವ ಸಮಸ್ಯೆಗಳು ಕಾರ್ಮಿಕರಿಗೆ ಮಾರಕವಾಗಿರುತ್ತವೆ. ಇಂಥ ಸಂದರ್ಭಗಳಲ್ಲಿ ಸಂಘಟನೆ, ಮುಖಂಡರು ಅಮೂಲ್ಯ ಪಾತ್ರವಹಿಸಬೇಕಾಗುತ್ತದೆ. ಆದರೆ ಈ ಕಾಲವು ಅವೆರಡರ ದೃಷ್ಟಿಯಲ್ಲಿ ಮೊಳಕೆಯ ಕಾಲವಾಗಿತ್ತು. ಆದ್ದರಿಂದ ಈ ಚಳವಳಿಯಲ್ಲಿ ಮಾಲಿಕರೇ ಮೇಲುಗೈ ಸಾಧಿಸಿದ್ದು ಕಂಡುಬರುತ್ತದೆ.

ದಾವಣಗೆರೆ ಹತ್ತಿಗಿರಣಿ(ಡಿಸಿಎಂ)ಯಲ್ಲಿ ಕಾರ್ಮಿಕರು ತಮ್ಮ ಸ್ಥಿತಿಗತಿ ಸುಧಾರಿಸಿಕೊಳ್ಳಲು ಮುಷ್ಕರ ನಿರತರಾದರು. ಈ ವ್ಯಾಜ್ಯವು ಸರ್ಕಾರದ ಮುಂದೆ ಪಂಚಾಯಿತಿ ಕಟ್ಟೆ ಏರಿತು.[೭] ಇದು ಕಾರ್ಮಿಕ ಚಳವಳಿಯಲ್ಲಿ ಸ್ಮರಣಾರ್ಹ ಘಟನೆಯಾಗಿದೆ. ಏಕೆಂದರೆ, ಆಡಳಿತ ವರ್ಗದ ವಿರುದ್ಧ ಮಾತನಾಡುವುದಿರಲಿ, ಎದುರು ನಿಲ್ಲಲೂ ಧೈರ್ಯವಿಲ್ಲದ ಸಂದರ್ಭದಲ್ಲಿ ಕಾರ್ಮಿಕರು ಮುಂದುವರಿದಿರುವುದು ಗಮನಾರ್ಹವಾಗಿದೆ. ಹೀಗೆ ಆರಂಭವಾದ ಇಂತಹ ಚಳವಳಿಗಳು ಬಹಳಷ್ಟಿವೆ.

೨. ಕೆಲಸ ಕಳೆದುಕೊಂಡವರ ಪುನರ್‌ನೇಮಕಕ್ಕಾಗಿ ಚಳವಳಿ

ಆಧುನಿಕ ಯಂತ್ರಗಳ ಬಳಕೆ, ವೆಚ್ಚ ಕಡಿಮೆ ಮಾಡುವ ಸಂಬಂಧ, ಸಂಘಟನೆಯಲ್ಲಿ ತೊಡಗಿಸಿಕೊಂಡಿದ್ದು, ಹಲವು ಕಾರಣಗಳ ಹಿನ್ನೆಲೆಯಲ್ಲಿ ಬಹಳಷ್ಟು ಕಾರ್ಮಿಕರು ತಮ್ಮ ಕೆಲಸ ಕಳೆದುಕೊಂಡಿದ್ದಾರೆ. ಹೀಗೆ ನಾನಾ ಕಾರಣಗಳಿಂದ ಕೆಲಸ ಕಳೆದುಕೊಂಡ ಕಾರ್ಮಿಕರ ಸಂಬಂಧ ಬಿರುಸಿನ ಚಳವಳಿಗಳು ನಡೆದಿವೆ. ಅವುಗಳಲ್ಲಿ ಉದಾಹರಣೆ ಎಂದರೆ, ೧೯೬೬ರಲ್ಲಿ ದಾವಣಗೆರೆ ಹತ್ತಿ ಗಿರಣಿಯಲ್ಲಿ (ಡಿಸಿಎಂ) ವೆಚ್ಚ ಕಡಿತಗೊಳಿಸುವ ಸಂಬಂಧ ೬೫ ಕಾರ್ಮಿಕರನ್ನು ಕೆಲಸದಿಂದ ವಜಾಗೊಳಿಸಲಾಯಿತು. ಇದರಿಂದ ಅವರ ಕೆಲಸ ಮುಂದುವರಿಸಲು ಕೋರಿ ೪೨ ದಿನಗಳ ಕಾಲ ಕಾರ್ಮಿಕರು ಮುಷ್ಕರ ಹೂಡಿದರು. ವಜಾಗೊಂಡವರಲ್ಲಿ ಕಾರ್ಮಿಕ ನಾಯಕಿ ಶ್ರೀಮತಿ ಜಾಹಿರಾಬಿಯವರೂ ಇದ್ದು ಚಳವಳಿ ವಿಫಲವಾಯಿತು.[೮] ವಜಾಗೊಂಡ ಶ್ರೀಮತಿ ಜಾಹಿರಾಬಿಯವರು ಸಂಘಟನೆಯಲ್ಲಿ ತೊಡಗಿಸಿಕೊಂಡು ದಿಟ್ಟ ನಾಯಕಿಯಾಗಿ ರೂಪುಗೊಂಡರು. ಇನ್ನೊಂದು ಮುಖ್ಯ ವಿಷಯವೆಂದರೆ ಸಂಘಟನೆಯಲ್ಲಿದ್ದ ಬಹುತೇಕ ಮುಖಂಡರೂ ವಜಾಗೊಂಡವರೇ ಆಗಿದ್ದಾರೆ.

ಮತ್ತೊಂದು ಪ್ರಮುಖ ನಿದರ್ಶನವೆಂದರೆ, ಮೇ ೨೫, ೧೯೬೮ರಲ್ಲಿ ಶ್ರೀ ಸಿದ್ದೇಶ್ವರ ಗಿರಣಿಯಲ್ಲಿ ಕಾರ್ಮಿಕರಾದ ಗೋವಿಂದಪ್ಪ, ರುದ್ರಪ್ಪನವರನ್ನು ಕೆಲಸದಿಂದ ತೆಗೆದುಹಾಕಿದರು. ಆಗ ಎರಡನೆ ಪಾಳಯದ ಕೆಲಸಗಾರರು ಕೆಲಸಕ್ಕೆ ಹಾಜರಾಗದೆ ಮುಷ್ಕರ ಹೂಡಿದರು.[೯] ಮುಷ್ಕರವು ೮೨ ದಿನಗಳ ದೀರ್ಘಕಾಲ ನಡೆಯಿತು. ಈ ಸಂಬಂಧ ಸಂಘಟನೆಯ ಮುಖಂಡರನ್ನು ಗಿರಣಿಯೊಳಗೆ ಬಿಡುವುದಿಲ್ಲವೆಂಬುದು

ಮಾಲೀಕರ ವಾದವಾದರೂ, ಅವರು ಗಿರಣಿ ಪ್ರವೇಶಿಸುವಲ್ಲಿ ಯಶಸ್ವಿಯಾದರು. ಮುಷ್ಕರದ ಅವಧಿಯಲ್ಲಿ ಕಾರ್ಮಿಕರು ವೇತನ ಕಳೆದುಕೊಂಡರು. ಈ ಸಂದರ್ಭದಲ್ಲಿ ಸಮಾಜವಾದಿ ನಾಯಕ ಎ.ಹೆಚ್. ಶಿವಾನಂದ ಸ್ವಾಮಿ ಪ್ರವೇಶ ಮಾಡಿ ಮಾಲೀಕರು ಮತ್ತು ಕಾರ್ಮಿಕರ ಮಧ್ಯೆ ಸಮನ್ವಯತೆ ತರಲು ಯತ್ನಿಸಿದಾಗ, ಕಾರ್ಮಿಕರು ಬಲವಾಗಿ ವಿರೋಧಿಸಿದರೂ ಫಲಿಸಲಿಲ್ಲ. ಮುಂದೆ ಅಂದಿನ ಕಾರ್ಮಿಕ ಮಂತ್ರಿ ಶ್ರೀ ಪುಟ್ಟಸ್ವಾಮಿಯವರು ಮಧ್ಯಸ್ಥಿಕೆ ವಹಿಸಿ ಮಾತುಕತೆ ನಡೆಸಿದರು. ಪ್ರವಾಸಿ ಮಂದಿರದಲ್ಲಿ ನಡೆದ ಮಾತುಕತೆಯಲ್ಲಿ ಶ್ರೀ ರುದ್ರಪ್ಪ ಮತ್ತು ಶ್ರೀ ಗೋವಿಂದಪ್ಪ (ಕೆಲಸ ಕಳೆದುಕೊಂಡವರು)ನವರನ್ನು ಕಾರ್ಮಿಕ ನ್ಯಾಯಾಲಯಕ್ಕೆ ಬಿಟ್ಟು ಉಳಿದವರು ಕೆಲಸಕ್ಕೆ ಹಾಜರಾಗುವಂತೆ ತೀರ್ಮಾನಿಸಲಾಯಿತು.[೭] ಕಾರ್ಮಿಕರು ತಮ್ಮ ಐಕ್ಯತಾ ಶಕ್ತಿ ಎಷ್ಟಿದೆ ಎಂದು ತೋರಿಸಲು ಚಳವಳಿಗಳು ವೇದಿಕೆ ಸಜ್ಜುಗೊಳಿಸಿದ್ದವು. ಈ ಸಂಬಂಧ ಕಾರ್ಮಿಕರು ಯಶಸ್ವಿಯಾದರೂ, ಮಂತ್ರಿಗಳು ತೆಗೆದುಕೊಂಡ ತೀರ್ಮಾನಗಳು ಅರ್ಥಪೂರ್ಣವಾಗಿವೆ. ನೂರಾರು ಕಾರ್ಮಿಕರು ದೀರ್ಘಕಾಲ ಕೆಲಸವಿಲ್ಲದೆ ಜೀವನ ನಿರ್ವಹಣೆ ಕಠಿಣ ಹಾಗೂ ದುಬಾರಿಯಾಗಿತ್ತು. ಒಂದೆಡೆ ಕೆಲಸ ಕಳೆದುಕೊಂಡವರು ನ್ಯಾಯಾಲಯದ ಕಟಕಟೆ ಏರಿದರೆ, ಅವರಿಗೆ ಸಹಕರಿಸಿದ ಕಾರ್ಮಿಕರು ಪುನಃ ಚಳವಳಿ ಹೋರಾಟಗಳಲ್ಲದೆ, ವೈಯಕ್ತಿಕ ಜೀವನಕ್ಕೆ ಮಾರು ಹೋದರು. ಎಷ್ಟೋ ವರ್ಷಗಳ ಹೋರಾಟದ ಫಲವಾಗಿ ತಾನೇ ಫ್ರಾನ್ಸಿನ ಮಹಾಕ್ರಾಂತಿ ನಡೆದದ್ದು. ಅದೇ ರೀತಿ ಭಾರತಕ್ಕೆ ದೊರೆತ ಸ್ವಾತಂತ್ರ್ಯವು ಸಹ. ಈ ಬಗೆಯ ಹೋರಾಟಗಳಲ್ಲಿ ಅನೇಕ ವೈಪರೀತ್ಯಗಳು ಸಹಜವಾಗಿರುತ್ತವೆ.

೩. ಕೃಷಿ ಕಾರ್ಮಿಕರ ಪರ ಹೋರಾಟ

ತುರ್ತುಪರಿಸ್ಥಿತಿ ಕಾಲದ ೨೦ ಅಂಶಗಳ ಕಾರ್ಯಕ್ರಮದಡಿ ಉಳುವವನಿಗೇ ಭೂಮಿ ದೊರಕಿಸಿಕೊಡಲು ಸಿ.ಪಿ.ಐ. ಪಕ್ಷದ ನೇತೃತ್ವದಲ್ಲಿ ದಾವಣಗೆರೆ ನಗರದ ಕಾರ್ಮಿಕರು ಗ್ರಾಮೀಣ ಪ್ರದೇಶದಲ್ಲಿ ಚಳವಳಿ ಆರಂಭಿಸಿದರು. ಈ ಚಳವಳಿಯ ನೇತೃತ್ವವನ್ನು ಕೃಷಿ ಕಾರ್ಮಿಕ ಮುಖಂಡ ಹಾಗೂ ನಗರದ ಕಾರ್ಮಿಕ ಮುಖಂಡರೂ ಆದ ಆನಗೋಡು ರಾಮಚಂದ್ರಪ್ಪನವರು ವಹಿಸಿದ್ದರು.[೮] ನಮ್ಮ ರಾಷ್ಟ್ರದಲ್ಲಿ ಭೂರಹಿತ ಕಾರ್ಮಿಕರನ್ನು ಸುಧಾರಿಸುವ ಪ್ರಯತ್ನ ವಿಳಂಬವೂ ಆಗಿತ್ತು. ಇಂಗ್ಲೆಂಡ್ ಮತ್ತು ಅಮೆರಿಕಾಗಳಲ್ಲಿ ಬಹಳಷ್ಟು ಹಿಂದೆಯೇ ಕಾರ್ಮಿಕ ಚಳವಳಿಯು ಕೃಷಿ ಕಾರ್ಮಿಕರನ್ನೊಳಗೊಂಡಿತ್ತು.[೯] ಈ ನಿಟ್ಟಿನಲ್ಲಿ ದಾವಣಗೆರೆ ಕಾರ್ಮಿಕರು ಹಮ್ಮಿಕೊಂಡ ಈ ಚಳವಳಿಯು ಅರ್ಥಪೂರ್ಣವಾಗಿದೆ. ದಾವಣಗೆರೆಯಿಂದ ೧೬ ಕಿ.ಮೀ ದೂರದಲ್ಲಿರುವ ಆನಗೋಡು ಹೋಬಳಿಯ ಹತ್ತಾರು ಹಳ್ಳಿಗಳಲ್ಲಿ ಭೂಮಾಲಿಕರ ವಿರುದ್ಧ ಚಳವಳಿ ಸಂಘಟಿಸಿದವರು. ಈ ಚಳವಳಿಯ ಸಾಧಕ ಬಾಧಕಗಳೇನು? ಎಂದಾಗ ಕೊಗ್ಗನೂರು, ಆನಗೋಡು, ಆಲೂರು ಹಟ್ಟಿ (ಆನಗೋಡು ಪಂಚಾಯಿತಿ ವ್ಯಾಪ್ತಿ) ಮುಂತಾದ ಗ್ರಾಮಗಳಲ್ಲಿ ಕೃಷಿ ಕಾರ್ಮಿಕರಿಗೆ ಬಲಬಂದಿತು. ಆದರೆ ಇದೇ ಪ್ರದೇಶದಲ್ಲಿ ತಾಲ್ಲೂಕು ಬೋರ್ಡ್ ಚುನಾವಣೆಗೆ ಸ್ಪರ್ಧಿಸಿದ ಚಳವಳಿ ನಾಯಕ ಶ್ರೀ. ಆನಗೋಡು ರಾಮಚಂದ್ರಪ್ಪನವರನ್ನು ಸೋಲಿಸಲಾಯಿತು. ಈ ಚಳವಳಿ ಸಂದರ್ಭದಲ್ಲಿ ಶ್ರೀ. ಆನಗೋಡು ರಾಮಚಂದ್ರಪ್ಪನವರಿಗೆ ಸಹಕಾರ ನೀಡುತ್ತಿದ್ದ ಓಬಣ್ಣನವರು ಪೊಲೀಸರ ಲಾಟಿ ಚಾರ್ಜಿನಲ್ಲಿ ಮರಣ ಹೊಂದಿದರು.[೧೦] ಈ ಎಲ್ಲಾ ಸೋಲು, ಸಾವು,

ನೋವುಗಳು ಮುಂದಿನ ಯಶಸ್ಸಿಗೆ ಮೆಟ್ಟಿಲುಗಳಾದವು. ೧೯೭೮ರಲ್ಲಿ ಶ್ರೀ ಆನಗೋಡು ರಾಮಚಂದ್ರಪ್ಪನವರು ಗ್ರಾಮಪಂಚಾಯಿತಿ ಚುನಾವಣೆಗೆ ಸ್ಪರ್ಧಿಸಿ, ಆಯ್ಕೆಯಾಗಿ ಛೇರ್ಮನ್ ಆದರು. ಮಾರ್ಕ್ಸ್ ಲೆನಿನ್ ವಾದದಲ್ಲಿ ಹೇಳುವಂತೆ ಕಾರ್ಮಿಕ ವರ್ಗವು ಆಡಳಿತಾಧಿಕಾರವನ್ನು ವಶಪಡಿಸಿಕೊಂಡು ದುಡಿಮೆಗಾರರ ಪ್ರಭುತ್ವವನ್ನು ಸ್ಥಾಪಿಸುತ್ತದೆ. ಆದರೆ ಪಕ್ಷ, ಸಿದ್ಧಾಂತಗಳು ಅಧಿಕಾರ ಪಡೆಯುವವರೆಗೆ ಮಾತ್ರ ಮಾನದಂಡವಾಗಬಾರದು. ದಾವಣಗೆರೆ ಕಾರ್ಮಿಕರ ಶಕ್ತಿ ಹಳ್ಳಿಯವರೆಗೂ ವಿಸ್ತರಿಸಿದಾಗ ಉತ್ತಮ ಆಡಳಿತವನ್ನು ನೀಡಿದರು. ಅವರ ಪ್ರಯತ್ನಗಳನ್ನು ವಿಫಲಗೊಳಿಸುವ ಭೂ ಹಿಡುವಳಿಗಾರ ವರ್ಗ ಕ್ರಿಯಾಶೀಲವಾಗಿಯೇ ಇತ್ತು. ಈ ನಿಟ್ಟಿನಲ್ಲಿ ಅವರ ಪ್ರಭುತ್ವ ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಈ ಚಳವಳಿಯ ನೇತೃತ್ವ ವಹಿಸಿದ್ದ ಶ್ರೀ ಆನಗೋಡು ರಾಮಚಂದ್ರಪ್ಪನವರು, ಇಂದು ದಾವಣಗೆರೆ ನಗರದ ಆಶ್ರಯ ಮನೆಯೊಂದರಲ್ಲಿ ಆಶ್ರಯ ಪಡೆದುಕೊಂಡಿದ್ದಾರೆ. ಇವರ ಇಂದಿನ ಆರ್ಥಿಕ ಸ್ಥಿತಿಗತಿಗಳನ್ನು ನೋಡಿದಾಗ, ಅಧಿಕಾರವಿದ್ದಾಗ ನಿಸ್ವಾರ್ಥ ಸೇವೆ ಸಲ್ಲಿಸಿ ತೃಪ್ತಿಪಟ್ಟುಕೊಂಡಿದ್ದಾರೆ ಎಂಬುದು ಸ್ಪಷ್ಟಪಡುತ್ತದೆ.

೪. ಬೆಲೆ ಏರಿಕೆ ವಿರುದ್ಧ ಚಳವಳಿ

ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ಜೀವನಾವಶ್ಯಕ ವೇತನ ಮತ್ತು ನಿಜವಾದ ವೇತನದ ಅಂತರ ಅಧಿಕವಾಗುತ್ತದೆ. ಆಗ ಜೀವನ ನಿರ್ವಹಣೆಯೂ ಸಹ ದುಬಾರಿಯಾಗುತ್ತದೆ. ಅಂದರೆ ಕಾರ್ಮಿಕ ವೇತನ ಹಾಗೂ ಜೀವನ ನಿರ್ವಹಣೆಗೂ ಅವಿನಾಭಾವ ಸಂಬಂಧವಿದೆ. ಈ ಹಿನ್ನೆಲೆಯಲ್ಲಿ ಸಮಾಜವಾದದ (ಸಿ.ಪಿ.ಐ.) ಸಂಘಟನೆ, ಬೆಲೆಗಳು ಏರಿದಾಗ ಆಗಾಗ್ಗೆ ಪ್ರತಿಭಟನೆ ಮಾಡಿದ್ದಕ್ಕೆ ನಿದರ್ಶನಗಳಿವೆ. ಅಂತಹ ಒಂದು ಉದಾಹರಣೆ ನೀಡುವುದಾದರೆ ಫೆಬ್ರುವರಿ ೧೯೮೬ರಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅಗತ್ಯ ವಸ್ತುಗಳ ಬೆಲೆಯಲ್ಲಿ ತೀವ್ರ ಹೆಚ್ಚಳ ಮಾಡಿದಾಗ ನಗರದ ಕಾರ್ಮಿಕರು ವಿರೋಧಿಸಿದರು. ಕೇಂದ್ರ ಸರ್ಕಾರವು ಪೆಟ್ರೋಲ್, ಡೀಸೆಲ್, ಅಕ್ಕಿ, ಗೋಧಿ ಬೆಲೆಗಳನ್ನೂ, ರಾಜ್ಯ ಸರ್ಕಾರವು ಬಸ್ ಪ್ರಯಾಣ ದರ ಹಾಗೂ ಆಹಾರ ಸಾಮಗ್ರಿಗಳ ಬೆಲೆ ಏರಿಸಿರುವುದರ ವಿರುದ್ಧ ಕಾರ್ಮಿಕ ಮುಖಂಡರಾದ ಶ್ರೀ ಹೆಚ್.ಕೆ. ರಾಮಚಂದ್ರಪ್ಪನವರು, ಶ್ರೀ ಎಂ.ಜಿ. ತಿಪ್ಪೇಸ್ವಾಮಿ ಮುಂತಾದವರ ನೇತೃತ್ವದಲ್ಲಿ ವಿರೋಧಿಸಿ, ಬೆಲೆ ಕಡಿಮೆ ಮಾಡಲು ಉಪ ವಿಭಾಗಾಧಿಕಾರಿ, ದಾವಣಗೆರೆ ಇವರಿಗೆ ಮನವಿಪತ್ರ ನೀಡಿದರು.[೧೧] ಸಮಾಜಕ್ಕೆ ಇಂಥ ಚಳವಳಿಗಳಿಂದ ಕೊಡುಗೆ ಏನು ಎಂದು ನೋಡುವುದಾದರೆ, ತೀವ್ರವಾಗಿ ಏರುತ್ತಿರುವ ಜೀವನಾವಶ್ಯಕ ವಸ್ತುಗಳ ಬೆಲೆ ಏರಿಕೆಯನ್ನು ವಿರೋಧಿಸದಿದ್ದರೆ ಸಮಾಜದ ಮೇಲೆ ದುಷ್ಪರಿಣಾಮಗಳೇ ಹೆಚ್ಚು. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಪ್ರತಿಭಟನೆಯ ಹಕ್ಕಿದೆಯಾದರೂ ಸಂಘಟನೆ, ನಾಯಕತ್ವದ ಅಭಾವಗಳು ಚಳವಳಿ ನಡೆಸಲು ಅಡ್ಡಿಯಾಗಿರುತ್ತವೆ. ಸಿದ್ಧಾಂತ ಹಾಗೂ ಸಂಘಟನೆಯ ಬಲವನ್ನು ಪಡೆದಿದ್ದ ನಗರದ ಕಾರ್ಮಿಕರಿಗೆ ಚಳವಳಿ ನಡೆಸುವುದು ಅನುಕೂಲವಾಗಿತ್ತು. ಇಂಥ ಚಳವಳಿಗಳು ಸಮಾಜದ ಜನಜೀವನದ ಮೇಲೆ ನಿಜವಾಗಿಯೂ ಪ್ರತ್ಯಕ್ಷ ಹಾಗೂ ಪರೋಕ್ಷ ಪರಿಣಾಮಗಳನ್ನು ಬೀರುವುದರಲ್ಲಿ ಸಂದೇಹವಿಲ್ಲ.

೫. ಬೋನಸ್ ಪ್ರಮಾಣದ ಹೆಚ್ಚಳಕ್ಕಾಗಿ ಚಳವಳಿ

ದಾವಣಗೆರೆ ಹತ್ತಿಗಿರಣಿ ಕಾರ್ಮಿಕರು ಬೋನಸ್‌ಗಾಗಿ ಅನೇಕ ಚಳವಳಿಗಳನ್ನು ನಡೆಸಿದ್ದಾರೆ. ಬೋನಸ್ ಕೊಡುವುದು ೧೯೬೫ರವರೆಗೂ ಒಂದು ಕಾಯಿದೆ ರೂಪದಲ್ಲಿರಲಿಲ್ಲ. ಅಲ್ಲಿಯವರೆಗೂ

ಮಾಲೀಕರು ತಾವು ಪಡೆದುಕೊಂಡ ಲಾಭಾಂಶದ ಸಂಬಂಧ ಹಬ್ಬಹರಿದಿನಗಳಲ್ಲಿ ಕಾರ್ಮಿಕರಿಗೆ ಬಟ್ಟೆ, ಶೇಂಗಾ, ಶೇಂಗಾ ಎಣ್ಣೆ ಮುಂತಾದವುಗಳನ್ನು ಬೋನಸ್ ರೂಪದಲ್ಲಿ ನೀಡುತ್ತಿದ್ದರು. ಇದರಿಂದ ಕಾಯಿದೆ ಬರುವ ಮೊದಲೇ ವಸ್ತುವಿನ ರೂಪದಲ್ಲಿ ಬೋನಸ್ ನೀಡುತ್ತಿದ್ದ ಬಗ್ಗೆ ತಿಳಿದುಬರುತ್ತದೆ. ಕಾರ್ಮಿಕ ಸಂಘಟನೆಯಲ್ಲಿ ತೊಡಗಿ ಕೊಲೆ, ಅಪಾದನೆಗಳ ಮೇಲೆ ೧೦ ವರ್ಷಗಳ ಕಾಲ ಜೈಲುಶಿಕ್ಷೆ ಅನುಭವಿಸಿರುವ ಮುಖಂಡ ಶ್ರೀ. ಎಂ.ಜಿ. ತಿಪ್ಪೇಸ್ವಾಮಿಯವರೂ ಸಹ ಸಂದರ್ಶನದ ಅವಧಿಯಲ್ಲಿ ಮೇಲಿನ ವಿಷಯವನ್ನು ದೃಢಪಡಿಸುತ್ತಾರೆ.

೧೯೬೫ರಲ್ಲಿ ಅಖಿಲ ಭಾರತ ಮಟ್ಟದಲ್ಲಿ ಬೋನಸ್ ಕಾಯಿದೆ ಜಾರಿಗೊಳಿಸಲ್ಪಟ್ಟು, ೧೯೭೨ರಲ್ಲಿ ಅದು ತಿದ್ದುಪಡಿಯಾಯಿತು. ಈ ಕಾಯ್ದೆಯಂತೆ ಮಾಲಿಕರು ಕನಿಷ್ಟ ೮.೩೩, ಗರಿಷ್ಟ ೨೦.೦೦ ಬೋನಸ್ ನೀಡಬೇಕೆಂದು ತಿಳಿಸಲಾಗಿ ಚೌಕಾಶಿಗೆ ಅವಕಾಶ ಕಲ್ಪಿಸಿಕೊಟ್ಟಿತು. ಇಂತಹ ಚೌಕಾಶಿಯ ವಿಷಯ ಬೋನಸ್ ವಿವಾದಗಳನ್ನು ತೀವ್ರಗೊಳಿಸಿತು. ಎಲ್ಲಿ ಕಾರ್ಮಿಕ ಸಂಘಟನೆ ಬಲವಾಗಿತ್ತೋ ಅಲ್ಲಿ ಪ್ರಚೋದನೆಗೊಳಗಾಗಿ ಹೆಚ್ಚು ಹೆಚ್ಚು ಬೋನಸ್‌ಗಾಗಿ ಚಳವಳಿಗಳು ನಡೆದಿವೆ. ಇಂಥ ಚಳವಳಿಗಳಿಂದ ದಾವಣಗೆರೆ ಕಾರ್ಮಿಕರು ಪ್ರಮುಖ ಪಾತ್ರವಹಿಸಿದ್ದರು.

ಸಮಾಜವಾದದ ಪ್ರಭಾವವಿದ್ದ ಈ ನಗರದಲ್ಲಿ ಡಿ.ಸಿ.ಎಂ. ಕಾರ್ಮಿಕರು ಅಧಿಕ ಬೋನಸ್‌ಗಾಗಿ ಮುಷ್ಕರದಲ್ಲಿ ನಿರತರಾದರು. ದ್ವಿತೀಯ ಮಹಾಯುದ್ಧದ ಅವಧಿಯ ಡಿ.ಸಿ.ಎಂ. ಗಿರಣಿಯ ಆಯವ್ಯಯ ಪಟ್ಟಿಯನ್ನು ಗಮನಿಸಿದಾಗ ಗಿರಣಿಯು ಲಾಭ ಪಡೆದುಕೊಂಡದ್ದು ಸ್ಪಷ್ಟಪಡುತ್ತದೆ. ಈ ಅವಧಿಯಲ್ಲಿ ಕಾರ್ಮಿಕರು ಮುಷ್ಕರ ಹೂಡಿ ನಗದು ರೂಪದಲ್ಲಿ ಬೋನಸ್ ನೀಡಲು ಬೇಡಿಕೆ ಇಟ್ಟರು. ಅಂದಿನ ವಸ್ತುರೂಪದ ಬೋನಸ್ ಹಿನ್ನೆಲೆಯಲ್ಲಿ ಬೇಡಿಕೆ ನ್ಯಾಯಬದ್ಧವಾಗಿದೆ. ಆದರೆ ಕ್ರಮೇಣ ಕಾಯಿದೆಯಲ್ಲಿ ಚೌಕಾಶಿಗೆ ಅವಕಾಶ ನೀಡಿದಾಗ ಚಳವಳಿಗಳು ತೀವ್ರಗೊಳ್ಳತೊಡಗಿದವು.

೧೯೭೨ರ ಬೋನಸ್ ತಿದ್ದುಪಡಿ ಕಾಯಿದೆಯಂತೆ ಗರಿಷ್ಠ ಬೋನಸ್ ಪ್ರಮಾಣ ಶೇ. ೨೦ ಆಗಿತ್ತು.[೧೨] ಈ ಹಿನ್ನೆಲೆಯಲ್ಲಿ ಡಿ.ಸಿ.ಎಂ. ಕಾರ್ಮಿಕರು ೧೯೮೪ರಲ್ಲಿ ಶೆ. ೨೦ರಷ್ಟು ಬೋನಸ್ ನೀಡಬೇಕೆಂದು ಮುಷ್ಕರ ನಿರತರಾದರು. ಈ ಬೇಡಿಕೆ ಮುಂದಿಟ್ಟುಕೊಂಡು ಗಿರಣಿ ಮುಂಭಾಗದಲ್ಲಿ ಸರದಿ ಉಪವಾಸ ಸತ್ಯಾಗ್ರಹ ಆರಂಭಿಸಿದರು.[೧೩] ಕಾರ್ಮಿಕರೇನೋ ಕಾನೂನುಬದ್ಧವಾಗಿ ಬೇಡಿಕೆ ಇಟ್ಟರಾದರೂ ಅದೇ ಕಾಲಕ್ಕೆ ಗಿರಣಿಯ ಆರ್ಥಿಕ ಸ್ಥಿತಿ ಕುಸಿದಿತ್ತು. ೧೯೮೨-೮೩ರಲ್ಲಿ ೫೧.೦೨ ಲಕ್ಷ ಲಾಭಗಳಸಿದ್ದ ಗಿರಣಿ ೧೯೮೩-೮೪ರಲ್ಲಿ ಕೇವಲ ೧ ಲಕ್ಷ ಲಾಭಕ್ಕಿಳಿಯಿತು.[೧೪] ಗಿರಣಿಯ ಆರ್ಥಿಕ ಸ್ಥಿತಿ ಹೀಗಿದ್ದಾಗಲೂ ಗರಿಷ್ಟ ಪ್ರಮಾಣದ ಬೋನಸ್ ಬೇಡಿಕೆ ಸೂಕ್ತವಲ್ಲ. ಈ ಹಿನ್ನೆಲೆಯಲ್ಲಿ ಮಾಲೀಕರು ಹಣಕಾಸು ವರ್ಷದಲ್ಲಿ ಹೆಚ್ಚು ಬೋನಸ್ ಕೊಡಬಹುದಾದ ಪರಿಸ್ಥಿತಿಯಲ್ಲಿದ್ದರೂ ನಗದು ವ್ಯವಹಾರವನ್ನು ಕಡಿಮೆ ಸೂಚಿಸುವ ಸಾಧ್ಯತೆಗಳನ್ನು ಕಾರ್ಮಿಕರು ತಿಳಿಸುತ್ತಾರೆ. ಆದರೆ ದಾವಣಗೆರೆಯ ಬಹುತೇಕ ಹತ್ತಿಗಿರಣಿಗಳು ಆರ್ಥಿಕ ದುಸ್ಥಿತಿಯತ್ತ ತಲುಪುತ್ತಿದ್ದ ಕಾಲಾವಧಿಯಾಗಿದ್ದರಿಂದ ಇಂಥ ಸಂಶಯಗಳನ್ನು ತಳ್ಳಿಹಾಕಬಹುದು.

ಕಾರ್ಮಿಕರ ಗರಿಷ್ಟ ಬೇಡಿಕೆಯ ಸಂದರ್ಭದಲ್ಲಿ ರಾಷ್ಟ್ರಪಿತ ಗಾಂಧಿಯವರ ಅಭಿಪ್ರಾಯ ಗಮನಿಸುವುದು ಸೂಕ್ತ. ಅವರು "ಕಾರ್ಮಿಕ ಮತ್ತು ನಾಯಕರು ಬೇಡಿಕೆಗಳ ಬಗ್ಗೆ ಜಾಗರೂಕತೆಯಿಂದ

ಅಭ್ಯಾಸ ಮಾಡಬೇಕು. ಬೇಡಿಕೆಗಳನ್ನು ವೈಭವೀಕರಿಸಬಾರದು" ಎಂದಿದ್ದಾರೆ.[೧೫] ಗಾಂಧೀಜಿಯವರ ಅಭಿಪ್ರಾಯವನ್ನು ಗಮನದಲ್ಲಿಟ್ಟುಕೊಂಡು ಈ ಸಮಸ್ಯೆಯನ್ನು ಮುಂದಿಡುವುದು ಸೂಕ್ತ. ಕಾಯಿದೆಯಲ್ಲಿ ಇಂತಿಷ್ಟು ಬೋನಸ್ ನೀಡಬೇಕು ಎಂದಿದೆಯಾದರೂ, ಗಿರಣಿಯ ಆರ್ಥಿಕ ಸ್ಥಿತಿಯನ್ನೂ ಲೆಕ್ಕಿಸಬೇಕಾಗುತ್ತದೆ. ಇಲ್ಲಿ ಕಾರ್ಮಿಕರ ವಾದವೆಂದರೆ ಗಿರಣಿ ೫೨ ವರ್ಷಗಳಿಂದ ದಿನೇ ದಿನೇ ಸುಧಾರಿಸಿದೆ, ಆದರೆ ಈ ವರ್ಷ ಮಾತ್ರ ಲಾಭಾಂಶ ಕಡಿಮೆ ಇದೆ ಎಂದು ೮.೩೩ರಷ್ಟು ಬೋನಸ್ ನೀಡುವುದಾಗಿ ಹೇಳಿದೆ, ಎಂಬುದಾಗಿದೆ.[೧೬] ಕಾರ್ಮಿಕರ ಈ ವಾದವನ್ನು ಒಪ್ಪಲಾಗದು. ಅವರೇ ಹೇಳಿದಂತೆ ಹಿಂದಿನ ವರ್ಷಗಳಲ್ಲಿ ಆಡಳಿತ ವರ್ಗವು ಶೇ. ೧೮, ೧೯ ಹಾಗೂ ೨೦ರವರೆಗೂ ಬೋನಸ್ ನೀಡಿದೆ.[೧೭] ಮುಂದೆ ಈ ಹೋರಾಟದ ಫಲಿತಾಂಶದಲ್ಲಿ ಕಾರ್ಮಿಕರ ವಾದಕ್ಕೆ ಉತ್ತರ ದೊರೆಯುತ್ತದೆ.

ಇಂಥ ಚಳವಳಿಗಳಿಗೆ ಇತರೆ ಗಿರಣಿ ಕಾರ್ಮಿಕರ ಹಾಗೂ ನಗರದ ನಾಗರಿಕರ ಬೆಂಬಲವಿತ್ತೇ? ಎಂದು ಚರ್ಚಿಸುವುದು ಅಗತ್ಯ. ಚಳವಳಿಗಳು ಯಶಸ್ಸು ಕಾಣಬೇಕಾದರೆ ತನ್ನ ಸದಸ್ಯರು ಹಾಗೂ ನಾಗರೀಕರ ಅನುಮೋದನೆಯೂ ಅಗತ್ಯವಾಗುತ್ತದೆ. ದಾವಣಗೆರೆ ಹತ್ತಿಗಿರಣಿ ಕಾರ್ಮಿಕರ ಸಂಬಂಧ ಹೇಳುವುದಾದರೆ, ಏಕಸೈದ್ಧಾಂತಿಕ ಹಿನ್ನೆಲೆ, ಏಕ ಕಾರ್ಮಿಕ ಸಂಘಟನೆ (ಸಿಪಿಐ) ಕಾರ್ಮಿಕರಿಂದ ಈ ಅನುಮೋದನೆ ಪಡೆದುಕೊಳ್ಳುವಲ್ಲಿ ಸಫಲವಾಯಿತು. ನಗರದ ಹತ್ತಿಗಿರಣಿಗಳಾದ ಗಣೇಶ, ಚಂದ್ರೋದಯ, ಸಿದ್ದೇಶ್ವರ ಮೊದಲಾದ ಎಲ್ಲಾ ಗಿರಣಿಗಳ ಕಾರ್ಮಿಕರೂ ಬೆಂಬಲ ನೀಡಿದರು. ದಾವಣಗೆರೆ ನಗರದ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿದ್ದ ಶ್ರೀ ಟಿ.ಜಿ. ಶಿವಯೋಗಪ್ಪ, ರಾಜ್ಯಸಭೆಯ ಮುಖ್ಯ ಸಚೇತಕ ಶ್ರೀ ಕೆ.ಜಿ. ಮಹೇಶ್ವರಪ್ಪ ಚಳವಳಿ ಸ್ಥಳಕ್ಕೆ ಭೇಟಿನೀಡಿ ಕಾರ್ಮಿಕರಿಗೆ ಬೆಂಬಲ ವ್ಯಕ್ತಪಡಿಸಿದರು.[೧೮] ಈ ಬೆಂಬಲವು ರಾಜಕೀಯ ಹಿನ್ನೆಲೆಯಲ್ಲಿತ್ತು ಎಂದು ಗುರುತಿಸಬೇಕಾಗುತ್ತದೆ. ಗಿರಣಿಯ ಆರ್ಥಿಕ ಸ್ಥಿತಿ, ಕಾಯಿದೆಯ ಅರಿವು ಈ ಸಂದರ್ಭವನ್ನು ಸರಿದೂಗಿಸಲು ಸಾಧ್ಯವಾಗಬಹುದಲ್ಲವೆ.

ಈ ಚಳವಳಿ ತ್ರಿಪಕ್ಷೀಯ ಮಾತುಕತೆಗೆ ಅವಕಾಶವಾಗಿ ಸಂಧಾನ ವಿಫಲವಾಯಿತು.[೧೯] ಆಗ ಚಳವಳಿ ತೀವ್ರಗೊಂಡು ಆಡಳಿತ ವರ್ಗದ ಶ್ರೀ ಆರ್. ಶ್ರೀನಿವಾಸ ಮೂರ್ತಿಯವರ ಪ್ರತಿಕೃತಿ ದಹನ ಮಾಡಿದರು.[೨೦] ಬೋನಸ್ ಚೌಕಾಶಿಯಲ್ಲಿ ಕಾರ್ಮಿಕರು ವಿಫಲವಾದಾಗ ಈ ರೀತಿ ತಮ್ಮ ಸಿಟ್ಟನ್ನು ವ್ಯಕ್ತಪಡಿಸಿದರು. ಆದರೆ ಸಾರ್ವಜನಿಕರ ಅನುಮೋದನೆ, ಅನುಕಂಪ ಗಳಿಸುವಲ್ಲಿ ಇಂಥ ಘಟನೆಗಳು ಫಲಕಾರಿಯಾಗಲಿಲ್ಲ. ಕಾರ್ಮಿಕರು ಮೆರವಣಿಗೆ ನಡೆಸುವಾಗ ಮಾಲಿಕರ ವಿರುದ್ಧ ಘೋಷಣೆಗಳನ್ನು ಹಾಕುವಾಗ, ಸಾರ್ವಜನಿಕರು ಅನ್ನ ನೀಡಿದ ಧಣಿಗೆ ಅಪಮಾನ ಮಾಡುತ್ತಿದ್ದಾರೆಂದು ಕೊಂಡರು.[೨೧] ಇಂಥ ಅನಿಸಿಕೆಗಳು ಕಾರ್ಮಿಕ ಚಳವಳಿಗಳ ಬಗ್ಗೆ ಕೆಟ್ಟ ಅಭಿಪ್ರಾಯಗಳು ಮೂಡಲು ಹಿನ್ನೆಲೆಯಾದವು. ಕಾನೂನುಬಾಹಿರವಾದ ಚಳವಳಿಯಾಗದಿದ್ದರೂ, ಧಾರ್ಮಿಕ ಹಿನ್ನೆಲೆಯುಳ್ಳ ದೇಶ, ಧರ್ಮ ಮತ್ತು ಕರ್ಮ ಸಿದ್ಧಾಂತಗಳಲ್ಲಿ ನಂಬಿಕೆ ಉಳ್ಳ ಜನ ಮಾಲಿಕರ ವಿರುದ್ಧದ ಚಳವಳಿಗಳನ್ನು ಈ ರೀತಿ ಅರ್ಥೈಸಿದರು.

'ಮುಷ್ಕರ ದುಡಿಯುವ ವರ್ಗದ ಹಕ್ಕು' ಆದರೆ ಒಪ್ಪಂದಗಳು ಮುರಿದು ಬಿದ್ದಾಗ ಮಾತ್ರ ಮುಷ್ಕರ ಹೂಡಬೇಕೆಂದು ಗಾಂಧೀಜಿ[೨೨] ಅಭಿಪ್ರಾಯ ಪಟ್ಟಿರುವಂತೆ ತ್ರಿಪಕ್ಷೀಯ ಸಮಿತಿಯ ಸಂಧಾನ

ಮುರಿದು ಬಿದ್ದಾಗ ಮುಷ್ಕರ ಮುಂದುವರಿಯಿತು. ಈ ಸಂದಿಗ್ಧ ಸಮಯದಲ್ಲಿ ಅಂದಿನ ಕಾರ್ಮಿಕ ಸಚಿವರಾಗಿದ್ದ ಶ್ರೀ ಎಂ.ಪಿ. ಪ್ರಕಾಶ್‌ರವರು ಸಂಧಾನ ನಡೆಸಿ ೧೫ರಷ್ಟು ಬೋನಸ್ ಹಾಗೂ ೧೦೦ರೂ ಮುಂಗಡ ಹಣ ನೀಡಬೇಕೆಂದು ತೀರ್ಮಾನವಾಯಿತು.[೨೩] ಶೇ ೨೦ರಷ್ಟು ಬೋನಸ್ ಕೋರಿಕೆ ಚಳವಳಿ ಮಾಲಿಕರು ನಿರ್ಧರಿಸಿದ್ದ ೮.೩೩ಕ್ಕಿಂತಲೂ ಅಧಿಕ, ಕಾರ್ಮಿಕರು ಬಯಸಿದ್ದಕ್ಕಿಂತಲೂ (ಶೇ. ೨೦) ಕಡಿಮೆ ಪ್ರಮಾಣದಲ್ಲಿ ನಿಗದಿಯಾಗಿ ಅಂತ್ಯಗೊಂಡಿತು.

ಬೋನಸ್ ಕಾಯಿದೆಯು ಇಂತಹ ಚರ್ಚೆ, ಹೋರಾಟಗಳಿಗೆ ಅವಕಾಶ ನೀಡಿದ್ದರ ಹಿನ್ನೆಲೆಯಲ್ಲಿ ಹಲವು ಚಳವಳಿಗಳು ನಡೆದಿವೆ. ಇಲ್ಲಿ ಉದಾಹರಣೆಯಾಗಿ ಈ ಚಳವಳಿಯನ್ನು ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ.

೬. ಮುಚ್ಚಿದ ಗಿರಣಿಗಳ ತೆರವಿಗಾಗಿ ಚಳವಳಿ

ದಾವಣಗೆರೆ ನಗರದ ಹತ್ತಿಗಿರಣಿ ಕಾರ್ಮಿಕರು ನ್ಯಾಯಬದ್ಧ ಹಕ್ಕುಗಳಿಗಾಗಿ ಚಳವಳಿ ಮಾರ್ಗ ಹಿಡಿಯುತ್ತಿದ್ದ ಸಂದರ್ಭದಲ್ಲೇ ಶಂಕರ್ ಹತ್ತಿ ಗಿರಣಿಯು ಆರ್ಥಿಕ ದುಸ್ಥಿತಿಯಿಂದ ಮುಚ್ಚಲ್ಪಟ್ಟಿತು. ಈ ಘಟನೆಯು ಅಲ್ಲಿನ ೮೦೦ ಕಾರ್ಮಿಕರ ಬಡತನದ ಬಾಳಿಗೆ ಭಂಗವನ್ನುಂಟುಮಾಡಿತು. ಆಗ ಕಾರ್ಮಿಕರು ಪುನಃ ಚಳವಳಿ ಮಾರ್ಗವನ್ನೇ ಹಿಡಿದು ಮುನ್ನಡೆದರು. ಶಂಕರ್ ಗಿರಣಿ ತೆರವಿಗಾಗಿ ಹಂತ ಹಂತದ ಚಳವಳಿ ಹಮ್ಮಿಕೊಂಡರು. ಈ ಚಳವಳಿಗೆ ಉಳಿದ ಎಲ್ಲಾ ಗಿರಣಿಗಳ ಕಾರ್ಮಿಕರ ಬೆಂಬಲವೂ ಇತ್ತು. ಇದರಿಂದ ಚಳವಳಿ ಯಶಸ್ವಿಯಾಗಿ ಗಿರಣಿ ಪುನರ್ ಆರಂಭಗೊಂಡಿತು (೧೯೭೨).

ಶಂಕರ್ ಗಿರಣಿಯ ತೆರವಿಗೆ ಮೊದಲ ಹಂತದಲ್ಲಿ ಸಂಘಟನೆಯ ರಾಜ್ಯಮಟ್ಟದ ನಾಯಕರಾಗಿದ್ದ ಶ್ರೀ ಎಂ.ಸಿ. ನರಸಿಂಹನ್ ರವರು ಆಡಳಿತವರ್ಗ ಗಿರಣಿ ತೆರೆಯದಿದ್ದರೆ ಎನ್.ಟಿ.ಸಿ.ಯು ವಹಿಸಿಕೊಳ್ಳಲಿ ಎಂದು ಸಲಹೆ ನೀಡಿದರು.[೨೪] ರೋಗಗ್ರಸ್ಥ ಗಿರಣಿಗಳನ್ನು ಎನ್.ಟಿ.ಸಿ. ವಹಿಸಿಕೊಳ್ಳುವ ಪ್ರಕ್ರಿಯೆ ಭಾರತದಲ್ಲಿ ಆರಂಭವಾಗಿತ್ತು. ಕಾರ್ಮಿಕ ನಾಯಕರ ನಿರ್ದೇಶನದಂತೆ ಈ ಗಿರಣಿಯನ್ನು ಎನ್.ಟಿ.ಸಿ. ವಹಿಸಿಕೊಂಡಿದ್ದರೆ ಉಳಿಯುವ ಸಾಧ್ಯತೆಗಳಿದ್ದವು. ಏಕೆಂದರೆ ನಗರದ ಯಲ್ಲಮ್ಮ ಹತ್ತಿಗಿರಣಿಯು ಎನ್.ಟಿ.ಸಿ ವ್ಯಾಪ್ತಿಯಲ್ಲಿದ್ದು, ಇನ್ನೂ ಅಸ್ತಿತ್ವ ಉಳಿಸಿಕೊಂಡಿರುವುದನ್ನು ನೋಡಿದರೆ, ಕಾರ್ಮಿಕರಿಗೆ ಜೀವದಾನ ಸಿಗುತ್ತಿತ್ತೇನೋ ಅನ್ನಿಸುತ್ತದೆ. ಆದರೆ ಎನ್.ಟಿ.ಸಿ ವ್ಯಾಪ್ತಿಯ ಗಿರಣಿಗಳೂ ರೋಗಗ್ರಸ್ಥವಾಗಿ ಸರ್ಕಾರಕ್ಕೆ ಹೊರೆಯಾಗಿರುವುದು ದೇಶದ ಆರ್ಥಿಕ ಅಸ್ತಿತ್ವಕ್ಕೆ ಧಕ್ಕೆ ತರುವಂತಹ ಕ್ರಮವಲ್ಲದೆ ಮತ್ತೇನೂ ಅಲ್ಲ.

ದ್ವಿತೀಯ ಹಂತದಲ್ಲಿ ೨೯.೮.೧೯೭೭ರಿಂದ ಅಸಿಸ್ಟೆಂಟ್ ಕಮಿಷನರ್ ಅವರ ಕಛೇರಿಯ ಮುಂದೆ ಕಾರ್ಮಿಕರು ತಮ್ಮ ಮಡದಿ ಮಕ್ಕಳೊಂದಿಗೆ ಧರಣಿ ಹೂಡಲು ನಿರ್ಧರಿಸಿದರು.[೨೫] ಅಂತೆಯೇ "ಕೆಲಸ ಕೊಡಿ ಇಲ್ಲವೆ ಊಟ ಕೊಡಿ" ಎಂಬ ಎದೆ ಬಿರಿಯುವಂತಹ ಕೂಗನ್ನು ಶಂಕರ್ ಗಿರಣಿಯ ಕಾರ್ಮಿಕರು ಹಾಕುತ್ತಿದ್ದರು.[೨೬] ಗಿರಣಿ ಮುಚ್ಚಿದಾಗ ಈ ಹಿಂದಿನ ಸೇವೆಯ ಹಿನ್ನೆಲೆಯಲ್ಲಿ ಪ್ರಾವಿಡೆಂಟ್ ಫಂಡ್ (ಪಿ.ಎಫ್) ಪಡೆದು ಜೀವನ ಸಾಗಿಸಿದರು. ಬಾಡಿಗೆ ಮನೆಗಳಲ್ಲಿ ವಾಸವಾಗಿದ್ದ ಕಾರ್ಮಿಕರು ಬಾಡಿಗೆ

ಕಟ್ಟಲಾರದೆ ಸಂಕಷ್ಟಕ್ಕೊಳಗಾದರು. ದಾವಣಗೆರೆಯಂತಹ ನಗರಗಳಲ್ಲಿ ಉದ್ಯೋಗ, ವರಮಾನವಿಲ್ಲದೆ ಜೀವನ ನಿರ್ವಹಣೆ ಸರಳವಲ್ಲವೆಂಬುದು ತೆರೆದ ಸತ್ಯ.

ಕಾರ್ಮಿಕರು ಇಂಥ ದುಸ್ಥಿತಿ ತಲುಪಿದಾಗ ಸಂಘಟನೆ ಮಾಡಿದ್ದೇನು? ಎ.ಐ.ಟಿ.ಯು.ಸಿ. ಕಾರ್ಯದರ್ಶಿ ಆನಗೋಡು ರಾಮಚಂದ್ರಪ್ಪನವರು ಪತ್ರಿಕಾ ಹೇಳಿಕೆ ನೀಡಿ ಕಾರ್ಮಿಕರಿಗೆ ಬಾಡಿಗೆ ಮನೆ ನೀಡಿರುವ ಮಾಲೀಕರು ಕಿರುಕುಳ ನೀಡಬೇಡಿ, ಕೆಲಸವಿಲ್ಲದೆ ಅವರ ಜೀವನ ದುಸ್ತರವಾಗಿದೆ ಎಂದು ಮನವಿ ಮಾಡಿಕೊಂಡರು. ಈ ಪರಿಸ್ಥಿತಿ ನಿಭಾಯಿಸಿದ ಸಂಬಂಧ ಕಾರ್ಯದರ್ಶಿಯವರನ್ನು ಸಂದರ್ಶಿಸಿದಾಗ ಕಾರ್ಮಿಕರು ಸಾಲ ಮಾಡಿಕೊಂಡು ಜೀವನ ನಿರ್ವಹಣೆ ಮಾಡುತ್ತಿದ್ದರೆಂದು ತಿಳಿದುಬರುತ್ತದೆ. ಈ ರೀತಿಯ ಚಳವಳಿಗಳ ಫಲವಾಗಿ ೧೯೭೭ರಲ್ಲಿ ಗಿರಣಿ ಪುನರ್ ಆರಂಭಗೊಂಡಿತಾದರೂ ೧೯೮೪ರಲ್ಲಿ ಶಾಶ್ವತವಾಗಿ ಮುಚ್ಚಲ್ಪಟ್ಟಿತು.

ದಾವಣಗೆರೆ ಕಾರ್ಮಿಕರು ಬಹಳಷ್ಟು ಚಳವಳಿಗಳಲ್ಲಿ ನ್ಯಾಯ ಸಿಗುತ್ತದೆ ಎಂಬ ಭರವಸೆಯಲ್ಲಿ ಸಾಗಿ ಹಲವು ಸಂದರ್ಭಗಳಲ್ಲಿ ಯಶಸ್ಸಿನ ಮೆಟ್ಟಿಲನ್ನೇರಿದ್ದಾರೆ. ರಾಜ್ಯದ ಇತರೆ ಗಿರಣಿಗಳ ಕಾರ್ಮಿಕರ ಚಳವಳಿಗೆ ಹೋಲಿಸಿದರೆ ಇಲ್ಲಿನ ಬಲವಾದ ಸಂಘಟನೆ ಈ ಯಶಸ್ಸಿಗೆ ಕಾರಣ ಎಂಬ ವಿಷಯ ಸ್ಪಷ್ಟವಾಗುತ್ತದೆ. ಉದಾಹರಣೆಗೆ ಬೆಳಗಾವಿ ತಾಲ್ಲೂಕು ಪಂತ್ರೆ ಬಾಳೆ ಕುಂದ್ರಿ ಹತ್ತಿ ಗಿರಣಿಯ ಬಾಗಿಲು ಬಂದಾಯಿತು.[೨೭] ಸಂಘಟನೆ ಬಲವಾಗಿಲ್ಲದ ಕಾರಣ ಇಲ್ಲಿ ಪುನರ್ ಆರಂಭಕ್ಕೆ ಚಳವಳಿ ನಡೆಯಲಿಲ್ಲ. ಮೈಸೂರು ರಾಜರು ಸ್ಥಾಪಿಸಿದ್ದ ಕೆ.ಆರ್.ಮಿಲ್ಸ್, ಮೈಸೂರು, ತನ್ನ ಗತ ವೈಭವ ಮುಗಿಸಿ ಹೆಸರು ಮಾತ್ರ ಉಳಿಸಿಕೊಂಡಿದೆ. ಇಲ್ಲಿ ದಾವಣಗೆರೆ ಕಾರ್ಮಿಕರಿಗಿದ್ದಂತಹ ಬಲವಾದ ಏಕೈಕ ಸಂಘಟನೆ ಇಲ್ಲದೆ ಕಾರ್ಮಿಕ ಸಂಘಗಳ ಪೈಪೋಟಿಯಿಂದಲೇ ಗಿರಣಿ ಮುಚ್ಚಿರುವ ಮಾಹಿತಿಯು ದಿ. ೨೬.೮.೨೦೦೪ರ ವಿಜಯ ಕರ್ನಾಟಕ ಪತ್ರಿಕೆಯ ವರದಿಯಿಂದ ಸ್ಪಷ್ಟಪಡುತ್ತದೆ. ೧೯೯೦ರ ನಂತರ ದಾವಣಗೆರೆಯಲ್ಲೂ ಇಂತಹ ಪೈಪೋಟಿಯೂ ನಡೆದಿದೆ. ಆದರೆ ೧೯೭೦ರ ದಶಕದಲ್ಲಿ ಸಂಘಟನೆ ದಿಟ್ಟ ಹೆಜ್ಜೆಗಳನ್ನೇ ಇಟ್ಟಿತು.

ಶಂಕರ್ ಗಿರಣಿ ಮುಚ್ಚಿದ್ದು, ಪುನರ್ ಆರಂಭಿಸಲು ಯಶಸ್ವಿಯಾದ ಚಳವಳಿ ನಡೆಯಿತು. ನಂತರ ೧೯೮೦ರ ದಶಕದಲ್ಲಿ ಇಂಥ ನಾಲ್ಕು ಗಿರಣಿಗಳು ಅವಸಾನ ಕಂಡು ಸಾವಿರಾರು ಕಾರ್ಮಿಕರು ನಿರುದ್ಯೋಗಿಗಳಾದರು. ಈ ಸಂದರ್ಭವೂ ಸಹ ಸಂಘಟನೆಗೆ ಸವಾಲಾಗಿ, ಹೋರಾಟವು ಮುಂದುವರಿಯಿತು. ಈ ಕಾಲದ ಚಳವಳಿಯಿಂದ ಗಣೇಶ ಹತ್ತಿಗಿರಣಿ ಮಾತ್ರ ಪುನರಾರಂಭಗೊಂಡಿತೇ ಹೊರತು ಉಳಿದ ಗಿರಣಿಗಳು ಶಾಶ್ವತವಾಗಿ ಮುಚ್ಚಲ್ಪಟ್ಟವು.

ನಾಲ್ಕು ಹತ್ತಿಗಿರಣಿಗಳು ಮುಚ್ಚಲ್ಪಟ್ಟಾಗ ಸಂಘಟನೆಯು ಚಳವಳಿ ಆರಂಭಿಸಿ ಸಂಬಂಧಪಟ್ಟ ಸಚಿವರು, ಅಧಿಕಾರಿಗಳನ್ನು ಕಂಡು ಚರ್ಚಿಸಿತು. ಇಂಥ ಚರ್ಚೆಗಳು ಫಲಿಸದಿದ್ದಾಗ ಅಸಿಸ್ಟೆಂಟ್ ಕಮೀಷನರ್, ತಹಶೀಲ್ದಾರ್ ಮತ್ತು ಸಬ್ ರಿಜಿಸ್ಟ್ರಾರ್ ಕಛೇರಿಗಳ ಮುಂದೆ ಪಿಕೆಟಿಂಗ್ ಹಾಗೂ ಜೈಲ್ ಭರೋ ಕಾರ್ಯಕ್ರಮವನ್ನು ಹಮ್ಮಿಕೊಂಡಿತು.[೨೮] ನಾಲ್ಕು ಹತ್ತಿಗಿರಣಿಗಳ ಕಾರ್ಮಿಕರು ತೀವ್ರ ಸ್ವರೂಪದ ಹೋರಾಟ ನಡೆಸುತ್ತಿದ್ದ ಹಿನ್ನೆಲೆಯಲ್ಲಿ ಚಳವಳಿಗಾರರನ್ನು ಬಂಧಿಸುವ ಕ್ರಮ ಕೈಗೊಳ್ಳಲಾಯಿತು. ೫೪೯

ಮಹಿಳಾ, ೮೪೬ ಪುರುಷ ಕಾರ್ಮಿಕರನ್ನು ಪೋಲಿಸರು ಬಂಧಿಸಿದರು.[೨೯] ಇಂತಹ ಅದೆಷ್ಟೋ ಚಳವಳಿ ನಡೆಸಿದ್ದ ಸಂಘಟನೆ ಗಿರಣಿಗಳ ಪುನರ್ ಆರಂಭದ ನೆಲೆಯಲ್ಲಿ ಮುಂದುವರೆಯಿತು. ದಿ.೨೬.೬.೧೯೮೭ರಂದು ಕೈಗಾರಿಕಾ ಮಂತ್ರಿ ಶ್ರೀ ಜೆ.ಹೆಚ್. ಪಟೇಲ್, ಕಾರ್ಮಿಕ ಮಂತ್ರಿ ಶ್ರೀ ಎಸ್.ಕೆ. ಕಾಂತಾ ಹಾಗೂ ಮಾಲೀಕರೊಡನೆ ಮಾತುಕತೆ ನಡೆಯಿತು.[೩೦] ಆರ್ಥಿಕವಾಗಿ ದುಸ್ಥಿತಿಯಲ್ಲಿದ್ದ ಗಿರಣಿಗಳ ಪುನರ್ ಆರಂಭ ಹಾಗೂ ಕಾರ್ಮಿಕರಿಗೆ ನಿಂತಿರುವ ಕೂಲಿ ಪಾವತಿಸಬೇಕೆಂಬ ಬೇಡಿಕೆ ಪರಿಹಾರ ಕಾಣಲಿಲ್ಲ. ಗಿರಣಿಗಳ ಆರ್ಥಿಕ ಸ್ಥಿತಿಗತಿಯ ಹಿನ್ನೆಲೆಯಲ್ಲಿ ಈ ಸಮಸ್ಯೆ ಅಷ್ಟು ಸರಳವಾದದ್ದಾಗಿರಲಿಲ್ಲ. ಈ ವೇಳೆಗಾಗಲೇ ದಾವಣಗೆರೆ ನಗರವೊಂದೇ ಅಲ್ಲದೆ, ದೇಶದ ನೂರಾರು ಗಿರಣಿಗಳು ಪ್ರಪಂಚ ಮಾರುಕಟ್ಟೆಯ ಪೈಪೋಟಿ ಎದುರಿಸಲಾಗದೆ ಅವನತಿಯಾಗುತ್ತಿದ್ದವು. ಈ ಎಲ್ಲಾ ಆಶಾಭಾವನೆಯ ಸಂದರ್ಭ ಇದಾಗಿರಲಿಲ್ಲ. ಆಗ ಎ.ಐ.ಟಿ.ಯು.ಸಿ. ಸಂಘಟನೆ ಚಿತ್ರದುರ್ಗ ಜಿಲ್ಲಾಯಾದ್ಯಾಂತ ಪಿಕೆಟಿಂಗ್ ಕಾರ್ಯಕ್ರಮ ಹಮ್ಮಿಕೊಂಡಿತು. ಈ ಹಂತದಲ್ಲೂ ಯಾವುದೇ ಗೆಲವು ಕಾಣದ ಕಾರಣ ದಿ.೨೮.೧.೧೯೮೮ರಂದು ಜೈಲ್‌ಭರೋ ಕಾರ್ಯಕ್ರಮ ಹಮ್ಮಿಕೊಂಡಿತು.[೩೧] ಈ ಸಂದರ್ಭದಲ್ಲಿ ಕಾರ್ಮಿಕ ಮುಖಂಡರಾದ ಶ್ರೀ ಪಂಪಾಪತಿ, ಶ್ರೀ ಹೆಚ್.ಕೆ.ರಾಮಚಂದ್ರಪ್ಪ ಮುಂತಾದ ೯ ಜನರನ್ನು ಬಳ್ಳಾರಿ ಜೈಲಿಗೆ ಕಳುಹಿಸಲಾಯಿತು.

ಜಾಗತೀಕರಣ ತನ್ನ ನಾಲಿಗೆ ಚಾಚುತ್ತಿದ್ದ ಸಂದರ್ಭ ಇದಾಗಿದ್ದು ಉತ್ಪಾದನೆ, ಮಾರಾಟ ಸಮರಗಳು ತೀವ್ರವಾಗುತ್ತಿದ್ದವು. ಇಂಥ ಸಮರಗಳ ಕಾಲಕ್ಕೆ ನಗರದಲ್ಲಿ ಮುಚ್ಚಿದ್ದ ಗಣೇಶ ಹತ್ತಿಗಿರಣಿಯು ೧೯೯೦ರಲ್ಲಿ ಪುನರ್ ಆರಂಭಗೊಂಡು ಜಗತ್ತಿನ ಸ್ಫರ್ಧೆಯನ್ನು ಎದುರಿಸಿ ಮುನ್ನಡೆದಿದೆ. ಆದರೆ ಚಳವಳಿ ಉಳಿದ ಗಿರಣಿಗಳನ್ನು ತೆರೆಸುವಲ್ಲಿ ಫಲಕಾರಿಯಾಗಲಿಲ್ಲ. ಕಾರ್ಮಿಕರು ತಮ್ಮ ಚಳುವಳಿಯ ಆಶಯಗಳಲ್ಲಿ ಅನಿವಾರ್ಯವಾಗಿ ಬದಲಾವಣೆ ಮಾಡಿಕೊಳ್ಳಬೇಕಾಯಿತು. ಗಿರಣಿಗಳ ಪುನರಾರಂಭ ಸಾಧ್ಯವಿಲ್ಲ ಎಂದು ಗಮನಿಸಿ ಪರಿಹಾರ ಪಡೆದುಕೊಳ್ಳುವ ಚಳವಳಿಯನ್ನಾಗಿ ಪರಿವರ್ತಿಸಿಕೊಂಡರು. "ಹತ್ತಿ ಗಿರಣಿ ಕೆಲಸಗಾರರ ಪುನಶ್ಚೇತನ ನಿಧಿ ಯೋಜನೆಯನ್ವಯ" ನೀಡಲಾಗುವ ಪರಿಹಾರವನ್ನು ತಮಗೂ ನೀಡಬೇಕೆಂದು ಕೇಂದ್ರ ಜವಳಿಖಾತೆ ಸಚಿವ ಷಾನವಾಜ್ ಹುಸೇನ್[೩೨] ಮುಂತಾದವರನ್ನು ಭೇಟಿಮಾಡಿ ತಾವು ಎದುರಿಸುತ್ತಿರುವ ಸಮಸ್ಯೆಗಳನ್ನು ವಿವರಿಸಿದ್ದಾರೆ. ಇದರ ಫಲ ಇನ್ನೂ ಕೆಲವರಿಗೆ ಲಭ್ಯವಾಗಬೇಕಿದ್ದು, ಚಂದ್ರೋದಯ ಗಿರಣಿಯ ಕಾರ್ಮಿಕರು ಪ್ರಯತ್ನ ಮುಂದುವರಿಸಿದ್ದಾರೆ. ಆದರೆ ಈ ಚಳವಳಿ ಸಂಘಗಳ ಪೈಪೋಟಿಯಿಂದ ಕವಲು ದಾರಿ ಹಿಡಿದಿದೆ. ೧೯೯೦ರ ವರೆಗೂ ಏಕೈಕ ಸಂಘಟನೆ ನಗರದ ಕಾರ್ಮಿಕ ವಲಯದಲ್ಲಿತ್ತು. ೧೯೯೦ರ ದಶಕದಲ್ಲಿ ಬಿ.ಎಂ.ಎಸ್. ಎಂಬ ಹೊಸ ಸಂಘಟನೆ ಹುಟ್ಟಿ ಪರಸ್ಪರ ಆರೋಪಗಳಲ್ಲಿ ತೊಡಗಿವೆ. ಬಂಡವಾಳಿಗರು ಯಂತ್ರೋಪಕರಣ ಬಳಕೆಯನ್ನು ವೃದ್ಧಿಸಿದಾಗ ಕೈಗಾರಿಕಾ ಸೈನಿಕರನ್ನು (ಕಾರ್ಮಿಕ) ವಜಾ ಮಾಡುತ್ತಾ ಹೋಗುತ್ತಾರೆ ಎಂದು ಮಾರ್ಕ್ಸ್ ಅಭಿಪ್ರಾಯಪಟ್ಟಿದ್ದಾರೆ.[೩೩] ಆದರೆ ನಮ್ಮ ನಗರದ ಹತ್ತಿಗಿರಣಿಗಳು ಹೊಸ ಹೊಸ ಯಂತ್ರೋಪಕರಣಗಳನ್ನು ಬಳಸಿ ಕಾರ್ಮಿಕರು ಕೆಲಸ ಕಳೆದುಕೊಳ್ಳಲಿಲ್ಲ. ಬದಲಿಗೆ ಜಗತ್ತಿನ ಮಾರುಕಟ್ಟೆಯ ಸ್ಫರ್ದೆಗೆ ಬೇಕಾದ ಯಂತ್ರೋಪಕರಣಗಳನ್ನು ಅಳವಡಿಸದೆ ಕೆಲಸವನ್ನು ಕಳೆದುಕೊಂಡರು.

ಸಂಘಸ್ಥಾಪನೆಗಾಗಿ ದಾವಣಗೆರೆ ಹತ್ತಿಗಿರಣಿ ಕಾರ್ಮಿಕರು ದೀರ್ಘಕಾಲದ ಚಳವಳಿ ನಡೆಸಿದ್ದಾರೆ. ಈ ಸಂಬಂಧ ಕಾರ್ಮಿಕ ಮುಖಂಡರು ಹಾಗೂ ಗಿರಣಿ ಮ್ಯಾನೇಜರ್ ಹತ್ಯೆ ಪ್ರಕರಣಗಳೂ ನಡೆದ ಅಂಶಗಳನ್ನು ಕಾರ್ಮಿಕ ಸಂಘದ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಚಳವಳಿಗಳನ್ನು ಕುರಿತು ಕಾರ್ಮಿಕರ ಅಭಿಪ್ರಾಯವೇನು ಎಂದು ಈ ಸಂದರ್ಭದಲ್ಲಿ ಚರ್ಚಿಸುವುದು ಅಗತ್ಯವಾಗಿದೆ. ಚಳವಳಿಗಳಿಂದಾದ ಪರಿಣಾಮಗಳನ್ನು ಕುರಿತು ಅವರನ್ನು ಪ್ರಶ್ನಿಸಿದಾಗ, ಚಳವಳಿಗಳಿಂದ "ಸಮಸ್ಯೆ ಪರಿಹಾರವಾಗಿದೆ" ಎಂದು ಕೆಲವರು ಅಭಿಪ್ರಾಯಪಟ್ಟರೆ, ಕೆಲವರು (೨೪.೦೫%) ಚಳವಳಿಗಳಿಂದ ಮಿಲ್ ಬಂದಾಗಿದೆ ಎಂದು ಅಭಿಪ್ರಾಯ ಪಟ್ಟಿರುತ್ತಾರೆ. ಗಿರಣಿಗಳಲ್ಲಿ ದುಡಿಯುತ್ತಿದ್ದ ಕಾರ್ಮಿಕರೂ ಸಹಾ ಚಳವಳಿಗಳ ಸಂಬಂಧ ಸಾಮಾನ್ಯ ಜನರ ಅಭಿಪ್ರಾಯವನ್ನು ಪುಷ್ಟೀಕರಿಸುತ್ತಾರೆ. ಆದರೆ ಚಳವಳಿ ಒಂದೇ ಗಿರಣಿಗಳ ಅವನತಿಗೆ ಕಾರಣವಲ್ಲ, ಎಂಬುದು ಸ್ಪಷ್ಟ ಸಂಗತಿಯಾಗಿದೆ. ಕಾರ್ಮಿಕರು ಈ ನಿರ್ಧಾರಕ್ಕೆ ಬರಲು ಕಾರಣವೇನು? ಎಂದರೆ ತಮ್ಮ ನಾಯಕರಲ್ಲಿ ಅವರಿಗಿದ್ದ ನಂಬಿಕೆ ಮರೆಯಾದಂತೆ ಕಂಡುಬರುತ್ತದೆ. ಗಿರಣಿಗಳು ಮುಚ್ಚುವಾಗ ಮತ್ತು ಪರಿಹಾರ ಪಡೆದುಕೊಳ್ಳುವಲ್ಲಿ ಅವರು ಸಂಪೂರ್ಣವಾಗಿ ಸಹಕರಿಸದೆ ಪಕ್ಷಪಾತವೆಸಗಿದ್ದಾರೆ ಎಂಬುದು ಅವರ ನಿಲುವಾಗಿದೆ.

೭. ಇತರೆ ಚಳವಳಿಗಳು

ಕಾರ್ಮಿಕ ಚಳವಳಿಗಳು ಇಳಿಮುಖವಾದಾಗ ಸಂಘಟನೆ, ನಾಯಕರ ಅಗತ್ಯ ಮತ್ತು ಅಸ್ತಿತ್ವಗಳೇನು? ಗಿರಣಿಗಳ ಅವನತಿಯಿಂದ, ಕೆಲ ಕಾರ್ಮಿಕರು ಪರ್ಯಾಯ ಉದ್ಯೋಗಗಳತ್ತ ತೆರಳಿದಾಗ, ಕಾರ್ಮಿಕ ನಾಯಕರೂ ಸಹ ನಿರುದ್ಯೋಗಿಗಳಾದರು. ೧೯೭೦, ೮೦ರ ದಶಕಗಳಲ್ಲಿ ಇಲ್ಲಿನ ಸಂಘಟನೆಯಾದ ಸಿ.ಪಿ.ಐ.ಪಕ್ಷ ೩ ಭಾರಿ ವಿಧಾನಸಭೆಗೆ ಕಾರ್ಮಿಕ ಪ್ರತಿನಿಧಿಯನ್ನು ಆಯ್ಕೆಮಾಡಿ ಚಳವಳಿಯಲ್ಲಿ ಉತ್ತುಂಗದಲ್ಲಿತ್ತು. ಇಂತಹ ಚರಿತ್ರೆಯುಳ್ಳ ಸಂಘಟನೆ ಗಿರಣಿಗಳನ್ನು ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ ಎಂಬ ಆಪಾದನೆ ಹೊತ್ತಿತಾದರೂ ದೀರ್ಘಕಾಲ ಕೈಕಟ್ಟಿಕೂರಲಿಲ್ಲ. ಚಳವಳಿ ಸಂಘಟಿಸಲು ಪರ್ಯಾಯ ಕ್ಷೇತ್ರಗಳತ್ತ ಗಮನ ಹರಿಸಿದರು. ಆಶ್ರಯ ಮನೆ ನಿವಾಸಗಳು, ಅಂಗನವಾಡಿ ಕಾರ್ಯಕರ್ತೆಯರು, ವಿಮಾ ಇಲಾಖೆ, ಬ್ಯಾಂಕ್ ನೌಕರರ ಸಂಘಟನೆಯತ್ತ ತೆರಳಿ ತಮಗಿದ್ದ ಇತಿಹಾಸವನ್ನು ಉಳಿಸಿಕೊಳ್ಳಲು ಯತ್ನಿಸುತ್ತಿದೆ.

ಉತ್ತುಂಗ ಕಾಲದ ಚಳವಳಿಗಳಿಗೂ, ಇಂದಿನ ಚಳವಳಿಗಳಿಗೂ ತೀವ್ರತೆಯಲ್ಲಿ ಭಿನ್ನತೆ ಇದೆ. ಅಂದು ಸಂಘಟನಾ ಚಳವಳಿಯಲ್ಲಿ ಹಿಂಸಾತ್ಮಕ ಸ್ವರೂಪ ಪಡೆದುಕೊಂಡಿದ್ದ ಚಳವಳಿಗಳು ಇಂದು ಮಂದಗತಿಯಲ್ಲಿ ಹೆಜ್ಜೆ ಹಾಕುತ್ತಿವೆ. ಇಂದಿಗೂ ಅವನತಿಯಾದ ಗಿರಣಿಯ ಹಲವು ಕಾರ್ಮಿಕರಿಗೆ ಪರಿಹಾರ ದೊರೆತಿಲ್ಲ. ಸಂಘಟನೆ, ಪರಿಹಾರದ ಬಾಕಿ ಹಣಕ್ಕೆ ಈಗಲೂ ಸಣ್ಣ ಪ್ರಮಾಣದ ಚಳವಳಿಗಳನ್ನು ನಡುಸುತ್ತಲೇ ಇವೆ. ಆದರೆ ಚಳವಳಿಯ ಮೂಲ ಸ್ವರೂಪದಲ್ಲಿ ಬದಲಾವಣೆಗಳು ಕಂಡುಬಂದಿವೆ.

ಹಾಗೆಯೇ ಸಂಘಟನೆಯಲ್ಲಿದ್ದ ನಾಯಕರ ಬಗ್ಗೆ ಗಮನಿಸಿದಾಗ ಹಿಂದಿದ್ದ ನಾಯಕರೇ ಮುಂದುವರೆದಿದ್ದಾರೆಯೇ ಹೊರತು ಹೊಸ ನಾಯಕರು ಬಂದಿಲ್ಲ. ಅವರಲ್ಲಿ ದಕ್ಷ ನಾಯಕ ಶ್ರೀ. ಪಂಪಾಪತಿಯವರು ಮರಣಹೊಂದಲಾಗಿ ಧೀಮಂತ ವ್ಯಕ್ತಿತ್ವವೊಂದು ಕಣ್ಮರೆಯಾಯಿತು. ಸಿ.ಪಿ.ಐ. ಸಂಘಟನೆಯಲ್ಲಿದ್ದ ಶ್ರೀ ಎಂ.ಜಿ.ತಿಪ್ಪೇಸ್ವಾಮಿ, ಶ್ರೀಮತಿ ಜಾಹಿರಾಬಿ ಮುಂತಾದ ಕೆಲ ನಾಯಕರು ಸಿದ್ಧಾಂತವನ್ನು ಬದಿಗಿಟ್ಟು ಬೇರೆ ಬೇರೆ ಪಕ್ಷಗಳಿಗೆ ತೆರಳಿದ್ದಾರೆ. ಇಲ್ಲಿ ಮಹಿಳೆಯರು ಸಹ ಕಾರ್ಮಿಕ ಚಳವಳಿಗೆ ಹೆಗಲು ಕೊಟ್ಟಿದ್ದು ಶ್ಲಾಘನೀಯ.

ನಾಯಕರಿಗೂ ಅಭದ್ರತೆಯ ಸ್ಥಿತಿ ಎರಗಿದಾಗ ಬೇರೆ ಪಕ್ಷಗಳತ್ತ ತೆರಳಲು ಕೆಲವರಿಗೆ ಸಿದ್ಧಾಂತ ಅವಕಾಶ ನೀಡಲಿಲ್ಲ. ಆ ಸಂದರ್ಭದಲ್ಲಿ ಕಾರ್ಮಿಕ ನಾಯಕರು ಇತರೆ ವಲಯದ ನೌಕರರನ್ನು, ಸೌಲಭ್ಯ ವಂಚಿತರನ್ನು ಸಂಘಟನೆ ಮಾಡಲು ಮುಂದಾದರು. ಗಿರಣಿ ಕಾರ್ಮಿಕರಿಗೆ ಸರ್ಕಾರ, ಮಾಲೀಕರು ಮುಂತಾದವರಿಂದ ನ್ಯಾಯ ಒದಗಿಸಲು ಹಲವು ಸಂದರ್ಭಗಳಲ್ಲಿ ಸಂಕಷ್ಟಕ್ಕೆ ಸಿಲುಕಿದ ನಾಯಕರು ಇಂದು ಸರ್ಕಾರದ ಸವಲತ್ತುಕೊಡಿಸುವ ಪರ ಚಳವಳಿಗಳಲ್ಲಿ ತೊಡಗಿಸಿಕೊಂಡಿದ್ದಾರೆ.

ದಾವಣಗೆರೆ ನಗರದ ಹತ್ತಿಗಿರಣಿ ಕಾರ್ಮಿಕರ ಚಳವಳಿಗಳ ಪ್ರಕಟಣೆ, ವಿಶ್ಲೇಷಣೆಯಲ್ಲಿ ಪತ್ರಿಕೆಗಳ ಪಾತ್ರವೇನು? ದಾವಣಗೆರೆ ನಗರದಲ್ಲಿ ೧೯೭೦ರ ದಶಕದಲ್ಲಿ ನಗರವಾಣಿ, ಜನತಾವಾಣಿ ಎಂಬ ಸ್ಥಳೀಯ ಪತ್ರಿಕೆಗಳು ಆರಂಭವಾದವು. ನಗರವಾಣಿ ಪತ್ರಿಕೆಯ ಸಂಪಾದಕರಾದ ಶ್ರೀ. ಕೇಶವಮೂರ್ತಿಯವರು ಕಾರ್ಮಿಕರ ಚಳವಳಿಗಳಿಗೆ ಸಂಬಂಧಿಸಿದಂತೆ ನೇರ ಸಂಬಂಧ ಹೊಂದಿ ಸಮಸ್ಯೆಗಳ ಇತ್ಯರ್ಥಕ್ಕೆ ಪ್ರಯತ್ನಿಸುತ್ತಿದ್ದರು. ಇವರು ತಮ್ಮ ಪತ್ರಿಕೆಯಲ್ಲಿ ಕಾರ್ಮಿಕ ಚಳವಳಿಗಳನ್ನು ವೈಭವೀಕರಿಸದೆ, ನಗಣ್ಯಮಾಡದೆ ಯತಾಸ್ಥಿತಿಯ ಚಿತ್ರಣ ನೀಡಲು ಯತ್ನಿಸಿದ್ದಾರೆ. ಹಾಗೆಯೆ ಜನತಾವಾಣಿ ಪತ್ರಿಕೆಯ ಸಂಪಾದಕರಾದ ಶ್ರೀ. ಹೆಚ್.ಎನ್. ಷಡಕ್ಷರಪ್ಪನವರು ಕಾರ್ಮಿಕ ಮುಖಂಡರಾದ ಶ್ರೀ. ಪಂಪಾಪತಿಯವರೊಂದಿಗೆ ಒಡನಾಟಹೊಂದಿ ಸೈದ್ಧಾಂತಿಕವಾಗಿ ಬಲ್ಲವರಾಗಿದ್ದರು. ಇವರೂ ಸಹ ಕಾರ್ಮಿಕ ಚಳವಳಿಗಳನ್ನು ಮಾನ್ಯಮಾಡಿ ನೈಜ ಸಂಗತಿಗಳನ್ನು ಪ್ರಕಟಿಸಿರುತ್ತಾರೆ. ಚಳವಳಿಗಳ ಅಧ್ಯಾಯದ ಆಕರಗಳನ್ನು ಗಮನಿಸಿದರೆ ಈ ವಿಷಯ ಸ್ಪಷ್ಟಗೊಳ್ಳುತ್ತದೆ.

ಕಾರ್ಮಿಕರ ಚಳವಳಿಗಳನ್ನು ಪ್ರಕಟಿಸುವಾಗ ಮಾಲೀಕರನ್ನೋ ಅಥವಾ ಕಾರ್ಮಿಕರನ್ನೋ ಪ್ರಚೋದಿಸುವಂತಹ ಪತ್ರಿಕಾ ವರದಿಗಳು ನನ್ನ ಗಮನಕ್ಕೆ ಬಂದಿಲ್ಲ. ಘಟನೆಗಳ ವಿವರಣೆ ನೀಡುವ, ವಿಶ್ಲೇಷಣೆ ಮಾಡುವ ಮಾಹಿತಿಗಳು ಈ ಪತ್ರಿಕೆಗಳಲ್ಲಿ ಲಭ್ಯವಿವೆ. ಬೃಹತ್ ಬಂಡವಾಳ ತೊಡಗಿಸಿದ್ದ ಬಂಡವಾಳಶಾಹಿಗಳು ಗಿರಣಿ ಮುಂತಾದ ಕೈಗಾರಿಕೆಗಳನ್ನು ನಡೆಸುತ್ತಿದ್ದಾಗ ಪತ್ರಿಕಾ ವರದಿಗಳ ಮೇಲೆ ತಮ್ಮ ಸ್ವಾಮ್ಯ ಸ್ಥಾಪಿಸಿದ್ದಂತಹ ವಿವರಗಳು ಕಂಡುಬಂದಿಲ್ಲ.

ಹಾಗೆಯೇ ೧೯೮೧ರಲ್ಲಿ ಕಮ್ಯುನಿಸ್ಟ್ ಪಕ್ಷವು (ಸಿ.ಪಿ.ಐ) ಕಾರ್ಮಿಕ ಮುಖಂಡ ಶ್ರೀ ಪಂಪಾಪತಿಯವರ ಸಂಪಾದಕತ್ವದಲ್ಲಿ 'ಕ್ರಾಂತಿದೂತ' ಎಂಬ ಸ್ಥಳೀಯ ಪತ್ರಿಕೆಯನ್ನು ಆರಂಭಿಸಿತು. ಕಾರ್ಮಿಕರದೇ ಆದ ಈ ಪತ್ರಿಕೆ ಕಾರ್ಮಿಕರ ಚಳವಳಿಗಳನ್ನು ಪ್ರಕಟಿಸುವಲ್ಲಿ ಮುಂದಾಯಿತು. ದಾವಣಗೆರೆ ಮಟ್ಟಿಗೆ ಇದು ಮೊದಲ ಪ್ರಯತ್ನ. ಈ ಪತ್ರಿಕೆಯಲ್ಲಿ ತಮ್ಮ ಸಮಸ್ಯೆ, ಸಾಧನೆಗಳನ್ನು ವಿಶೇಷ ಮಹತ್ವ ನೀಡಿ ಪ್ರಕಟಿಸಲಾಗಿದೆ. ಗಿರಣಿಗಳ ಸದ್ದು ನಿಂತಂತೆಯೇ ಈ ಪತ್ರಿಕೆಯೂ ೧೯೯೦ರ ದಶಕದಲ್ಲಿ ಪ್ರಕಟಣೆಯನ್ನು ನಿಲ್ಲಿಸಿತು. ಆದರೆ ವ್ಯವಸ್ಥಾಪಕರು ಹಳೆಯ ಈ ಪತ್ರಿಕೆಗಳನ್ನು ರಕ್ಷಿಸದಿರುವುದು ಪ್ರಮುಖ ಸಮಸ್ಯೆಯಾಗಿದೆ. ರಾಜ್ಯಮಟ್ಟದ ಪತ್ರಿಕೆಗಳೂ ಸಹ ಘಟನೆಗಳನ್ನು ಪ್ರಕಟಿಸಿವೆಯಾದರೂ, ಅಂದಿನ ಮಾಧ್ಯಮಗಳ ಸೌಲಭ್ಯದ ಹಿನ್ನೆಲೆಯಲ್ಲಿ ತುಸು ವಿಳಂಬವಾಗುತ್ತಿತ್ತು. ಕಾರ್ಮಿಕರ ಹೋರಾಟಗಳನ್ನು ನಾನಾ ಕಾರಣಗಳಿಂದ ದಾಖಲಿಸುವುದು ವಿರಳ. ಆದರೆ ನಗರದ ಪತ್ರಿಕೆಗಳು ಆ ನಿಟ್ಟಿನಲ್ಲಿ ಒಳ್ಳೆ ಪ್ರಯತ್ನಮಾಡಿವೆ.

ಚಳವಳಿಗಳಲ್ಲಿನ ಕೊರತೆ ಮತ್ತು ಸವಾಲುಗಳು

ಕಾರ್ಮಿಕ ಚಳವಳಿಗಳ ಸಾಲುಗಳನ್ನು ಗಮನಿಸಿದಾಗ, ಸ್ಥಿತಿಗತಿ ಸುಧಾರಣೆಗಾಗಿ, ಆರ್ಥಿಕ ಸೌಲಭ್ಯಗಳಿಗಾಗಿ, ಅಸ್ತಿತ್ವದ ರಕ್ಷಣೆಗಾಗಿ, ಪರಿಹಾರಕ್ಕಾಗಿ ಹೀಗೆ ಹಲವು ಸಂದರ್ಭಗಳನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಆದರೆ ಇಲ್ಲಿ ಮೂಲಭೂತವಾಗಿ ಗಮನಿಸಬಹುದಾದ ವಿಷಯವೆಂದರೆ ಕಾರ್ಮಿಕ ವರ್ಗ ಶಿಕ್ಷಣದಿಂದ ವಂಚಿತವಾಗಿತ್ತು. ಸರ್ಕಾರ ವಯಸ್ಕರಿಗೆ ನೀಡುತ್ತಿರುವ ಶಿಕ್ಷಣದ ಮಾದರಿಯಲ್ಲಿ ಕಾರ್ಮಿಕರ ಸಾಕ್ಷರತೆಯ ಕಡೆಗೆ ಗಮನ ಹರಿಸುವಂತಹ ಚಳವಳಿ ಮಾಡಬೇಕಾಗಿತ್ತು. ತಾಂತ್ರಿಕ ಶಿಕ್ಷಣವಿರಲಿ ಸಾಮಾನ್ಯ ಶಿಕ್ಷಣವಾದರೂ ದೊರೆತಿದ್ದರೆ ಪಿಂಚಣಿ, ಗೈರುಹಾಜರಿ ಮುಂತಾದವುಗಳ ಪ್ರಾಮುಖ್ಯತೆಯಾದರೂ ಅವರಿಗೆ ತಿಳಿಯುತ್ತಿತ್ತು. ಗಿರಣಿಗಳು ಅವಸಾನಗೊಂಡು ಪರಿಹಾರ ಪಡೆಯಲು ಮುಂದಾದಾಗಲೇ ಅವರಿಗೆ ಶಿಕ್ಷಣದ ಮಹತ್ವ ಅರಿವಾದದ್ದು. ತಮ್ಮ ಹುಟ್ಟಿದ ದಿನಾಂಕ ನೀಡುವುದರಿಂದ ಮೊದಲುಗೊಂಡು ಹಲವು ಸಂದರ್ಭಗಳಲ್ಲಿ ಶಿಕ್ಷಣದ ಅಭಾವದಿಂದ ಎಡವಿದ್ದಾರೆ. ಈ ನಿಟ್ಟಿನಲ್ಲಿ ಸಂಘಟನೆ ಸಮರ್ಪಕವಾಗಿ ಪ್ರಯತ್ನ ಮಾಡಲಿಲ್ಲ.

ಕ್ಷೇತ್ರಕಾರ್ಯ ಸಂದರ್ಭದಲ್ಲಿ ಹೆಚ್ಚಿನ ಸಂಖ್ಯೆಯ ಕಾರ್ಮಿಕರು ಕುಡಿತ ಮುಂತಾದ ಹವ್ಯಾಸಗಳಲ್ಲಿ ಮಗ್ನರಾಗಿರವುದು ದೃಢಪಟ್ಟಿದೆ. ತಮಗೆ ಬರುವ ಆದಾಯದಲ್ಲಿ ಇಂತಹ ಹವ್ಯಾಸಗಳ ಹಾವಳಿಗಳಿಗೆ ತುತ್ತಾದ ಸಂದರ್ಭಗಳಿಂದ ಹೊರ ತರಲು ಚಳವಳಿಗಳು ಫಲಕಾರಿಯಾಗಲಿಲ್ಲ. ಆ ಮುಖಾಂತರ ಆರೋಗ್ಯವಂತ ಕಾರ್ಮಿಕರನ್ನಾಗಿ ಮಾಡಲು ಸಂಘಟನೆಗಳು ಜಾಗೃತಿ ಮೂಡಿಸಬೇಕಾದ ಅನಿವಾರ್ಯತೆ ಇದೆ. ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಹೋರಾಟ ಅನಿವಾರ್ಯವಾದಾಗ ಹೋರಾಡಿದಂತೆಯೇ ಅಡಿಪಾಯದ ಹಂತಗಳಾದ ಇಲ್ಲಿ ಸಂಘಟನೆಗಳು ಪ್ರಯತ್ನ ಮಾಡಬೇಕು.

ಹಾಗೆಯೇ ಮಹಿಳೆ, ಜಾತಿ ಮುಂತಾದ ಅನೇಕ ಸಂದರ್ಭಗಳಲ್ಲಿ ರಾಜಕೀಯ ಮೀಸಲಾತಿ ನೀಡಲಾಗುತ್ತಿದೆ. ಅಂತೆಯೇ ಅಲಕ್ಷಿತ ವರ್ಗವಾಗಿರುವ, ಆರ್ಥಿಕವಾಗಿ ಬಡವರಾಗಿರುವ ಕಾರ್ಮಿಕವರ್ಗಕ್ಕೂ ರಾಜಕೀಯ ಮೀಸಲಾತಿ ನೀಡಿ ಅಧಿಕಾರದ ಅವಕಾಶ ಕಲ್ಪಿಸಿಕೊಡಬೇಕು. ಆಗ ಕಾರ್ಮಿಕರ ಸಮಸ್ಯೆಗಳಿಗೆ ಬಾಯಿ ಮತ್ತು ಶಕ್ತಿ ದೊರೆಯುತ್ತದೆ. ಕೇಳದೆ ಏನನ್ನೂ ಕೊಡದ ಸಂದರ್ಭಗಳಲ್ಲಿ ರಾಜಕೀಯ ಮೀಸಲಾತಿ ಪಡೆದುಕೊಳ್ಳಲು ಕಾರ್ಮಿಕರು ಚಳವಳಿ ನಡಸಬೇಕಾಗಿದೆ.

ಪ್ರಬಲ ರಾಷ್ಟ್ರಗಳಿಗೆ ನಮ್ಮ ದೇಶವನ್ನು ಮಾರುಕಟ್ಟೆ ಮಾಡುವಂತಹ ಧೋರಣೆಗಳನ್ನು ತೀವ್ರವಾಗಿ ಪ್ರತಿಭಟಿಸಬೇಕಾಗಿತ್ತು. ಈ ಹಿನ್ನೆಲೆಯಲ್ಲಿ ಸಾಮ್ರಾಜ್ಯಶಾಹಿ ಕ್ರಮಗಳು ನಡೆಯದಂತೆ ಅಡ್ಡಿಯನ್ನುಂಟು ಮಾಡುವುದು ಅನಿವಾರ್ಯ. ಸ್ವಾತಂತ್ರ್ಯದ ಮೂಲಭೂತ ಹಕ್ಕುಗಳನ್ನು ಕಳೆದುಕೊಳ್ಳುವ ಸಂದರ್ಭ ನಿರ್ಮಾಣವಾಗುತ್ತಿದೆ. ಯಾವುದೋ ಹಣಕಾಸು ಸಂಸ್ಥೆಯ ಒತ್ತಡಕ್ಕೆ ಮಣಿದು ನಮ್ಮ ಆರ್ಥಿಕ ಚಟುವಟಿಕೆಗಳನ್ನು ನಿಯಂತ್ರಿಸುವ ಸ್ವಾತಂತ್ರ್ಯವನ್ನು ಕಳೆದುಕೊಳ್ಳುತ್ತಿದ್ದೇವೆ. ಆದ್ದರಿಂದ ಕಾರ್ಮಿಕರಷ್ಟೇ ಅಲ್ಲ ದೇಶದ ಪ್ರಜ್ಞಾವಂತರು ದಬ್ಬಾಳಿಕೆ, ಶೋಷಣೆ ವಿರುದ್ಧ ಚಳವಳಿ ರೂಪಿಸಬೇಕೆಂದು ನಿರ್ಧರಿಸಿದರು.

ನಮ್ಮ ರಾಷ್ಟ್ರದಲ್ಲಿ ಎಲ್ಲಾ ಕಾರ್ಮಿಕರಿಗೂ ಅನ್ವಯಿಸುವ ಏಕರೂಪದ ಸಿದ್ಧಾಂತವಾಗಲಿ ಮತ್ತು ಹೋರಾಟದ ವಿಧಾನಗಳಾಗಲಿ ಇಲ್ಲ. ಇದು ಕಾರ್ಮಿಕ ಚಳವಳಿಯ ಸೋಲಿಗೆ ಕಾರಣವಾದರೂ

ದಾವಣಗೆರೆ ನಗರದ ಮಟ್ಟಿಗೆ ೧೯೭೦-೮೦ರ ದಶಕಕ್ಕೆ ಮಾತ್ರ ಸಂಬಂಧ ಪಡುವುದಿಲ್ಲ. ಕಾರ್ಮಿಕರು ಹೀಗೆ ಅತಂತ್ರ ಸ್ಥಿತಿಯಲ್ಲಿರುವಾಗ ನೊಂದ ಕಾರ್ಮಿಕರನ್ನೆಲ್ಲಾ ಒಂದುಗೂಡಿಸುವ, ಆತ್ಮಸ್ಥೈರ್ಯ ತುಂಬುವ ಚಳವಳಿಗಳು ಹೊಸ ಆಶಯಗಳೊಂದಿಗೆ ಮುನ್ನುಗ್ಗಬೇಕಾಗಿದೆ.

ಕೊನೆಟಿಪ್ಪಣಿಗಳು

೧. ಎನ್.ಪಿ. ಶಂಕರನಾರಾಯಣ, ಸ್ವಾತಂತ್ರ್ಯಗಂಗೆಯ ಸಾವಿರ ತೊರೆಗಳು, ೧೯೯೧, ಪುಟ. ೩೦೫

೨. ಬಿಪಿನ್‌ಚಂದ್ರ, ಇಂಡಿಯಾಸ್ ಸ್ಟ್ರಗಲ್ ಫಾರ್ ಇಂಡಿಪೆಂಡೆನ್ಸ್ ೧೯೯೮, ಪುಟ. ೨೧೭-೨೧೮

೩. ಕೆ.ಹೆಚ್. ಗಂಗಪ್ಪ, ಕಾರ್ಮಿಕ ರತ್ನರ ಕೆಂಪುಕಥೆ, ೧೯೮೧, ಪುಟ. ೩

೪. ರಿಪೋರ್ಟ್ ಆನ್ ದಿ ಅಡ್ಮಿನಿಸ್ಟ್ರೇಷನ್ ಆಫ್ ಮೈಸೂರು ೧೯೪೭-೪೮, ಪುಟ. ೧೧೯

೫. ಸಂದರ್ಶನದ ಮಾಹಿತಿ, ಶ್ರೀಮತಿ ಜಾಹಿರಾಬಿ, ಕಾರ್ಮಿಕ ನಾಯಕಿ, ದಿ.೧೭-೯-೨೦೦೪, ದಾವಣಗೆರೆ

೬. ಕೆ.ಹೆಚ್. ಗಂಗಪ್ಪ, ಕಾರ್ಮಿಕ ರತ್ನರ ಕೆಂಪುಕಥೆ, ೧೯೮೧, ಪುಟ. ೨೨

೭. ಅದೇ ಪುಟ ೨೭

೮. ಪಂಪಾಪತಿ (ಸಂ.), ಸ್ಮರಣ ಸಂಚಿಕೆ, ಅಖಿಲಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್, ೪ನೇ ಸಮ್ಮೇಳನ, ೧೯೭೯, ಪುಟ. ೪೦

೯. ಎಂ.ಎಸ್. ಚಾಂದಕವಟೆ, ಕಾರ್ಮಿಕ ಚಳವಳಿ ಮತ್ತು ಸಾಮಾಜಿಕ ಹೊಣೆಗಾರಿಕೆ, ೧೯೯೨,, ಪುಟ. ೨೪

೧೦. ಸಂದರ್ಶನ ಮಾಹಿತಿ, ಶ್ರೀ ಆನಗೋಡು ರಾಮಚಂದ್ರಪ್ಪ, ಕೃಷಿ-ಕಾರ್ಮಿಕ ಮುಖಂಡ, ದಿ.೫.೬.೨೦೦೪, ದಾವಣಗೆರೆ

೧೧. ಜನತಾವಾಣಿ ದಿನಪತ್ರಿಕೆ ದಿ.೨೧-೨-೧೯೮೬, ಪುಟ. ೧

೧೨. ಕೆ. ಭೈರಪ್ಪ, ಔದ್ಯೋಗಿಕ ಸಮಾಜಶಾಸ್ತ್ರ, ೧೯೯೮, ಪುಟ. ೩೭೩

೧೩. ಜನತಾವಾಣಿ ದಿನಪತ್ರಿಕೆ ದಿ.೨೧-೧೦-೧೯೮೪, ಪುಟ. ೧

೧೪. ಡಿ.ಸಿ.ಎಂ.ಕಛೇರಿಯ ಆಯವ್ಯಯ ಪಟ್ಟಿ. ೧೯೮೩-೮೪

೧೫. ಡಾ. ಎಸ್.ಜೆ. ಚೌಹಾಣ್, ಗಾಂಧಿಯನ್ ಅಪ್ರೋಚ್ ಟು ಟ್ರೇಡ್ ಯೂನಿಯನ್, ಕರ್ನಾಟಕ ಕಾರ್ಮಿಕ ಪತ್ರಿಕೆ, ೧೯೮೧, ಪುಟ. ೦೬

೧೬. ಜನತಾವಾಣಿ, ದಿನಪತ್ರಿಕೆ, ದಿ. ೨೧-೧೦-೧೯೮೪, ಪುಟ. ೨

೧೭. ಅದೇ

೧೮. ಜನತಾವಾಣಿ ದಿನಪತ್ರಿಕೆ ದಿ. ೨೨-೧೦-೧೯೮೪ ಪುಟ. ೧

೧೯. ಜನತಾವಾಣಿ ದಿನಪತ್ರಿಕೆ ದಿ.೨೩-೧೦-೧೯೮೪ ಪುಟ. ೧

೨೦. ಅದೇ

೨೧. ಸಂದರ್ಶನ ಮಾಹಿತಿ, ಶ್ರೀ ಆನಗೋಡು ರಾಮಚಂದ್ರಪ್ಪ, ಕೃಷಿ ಕಾರ್ಮಿಕ ಮುಖಂಡರು, ದಿ.೫-೯-೨೦೦೪, ದಾವಣಗೆರೆ

೨೨. ಡಾ. ಎಸ್.ಜೆ. ಚೌಹಾಣ್, ಗಾಂಧಿಯನ್ ಅಪ್ರೋಚ್ ಟು ಟ್ರೇಡ್ ಯುನಿಯನ್, ಕರ್ನಾಟಕ ಕಾರ್ಮಿಕ ಪತ್ರಿಕೆ, ನವೆಂಬರ್ ೧೯೮೧, ಪುಟ.೦೬

೨೩. ಜನತಾವಾಣಿ ದಿನಪತ್ರಿಕೆ ದಿ.೩೧-೧೦-೧೯೮೪ ಪುಟ. ೧

೨೪. ಜನತಾವಾಣಿ ದಿನಪತ್ರಿಕೆ ದಿ.೬-೪-೧೯೭೬ ಪುಟ. ೧

೨೫. ಜನತಾವಾಣಿ ದಿನಪತ್ರಿಕೆ ದಿ.೨೮-೮-೧೯೭೭ ಪುಟ. ೨

೨೬. ಅದೇ

೨೭. ಸಂಯುಕ್ತ ಕರ್ನಾಟಕ ದಿನಪತ್ರಿಕೆ, ದಿ. ೨-೧೧-೨೦೦೩, ಪುಟ ೮

೨೮. ಕಾರ್ಮಿಕ ಮುಖಂಡ ಶ್ರೀ ಹೆಚ್.ಕೆ. ರಾಮಚಂದ್ರಪ್ಪನವರ ದಿನಚರಿಯಿಂದ, ದಿ.೫-೮-೧೯೮೭

೨೯. ಅದೇ

೩೦. ಅದೇ

೩೧. ಸಂದರ್ಶನ ಮಾಹಿತಿ, ಕಾರ್ಮಿಕ ಮುಖಂಡ ಶ್ರೀ ಹೆಚ್.ಕೆ. ರಾಮಚಂದ್ರಪ್ಪ ದಿ. ೨೨-೬-೨೦೦೪

೩೨. ಕಾರ್ಮಿಕ ಮುಖಂಡ ಶ್ರೀ ಹೆಚ್.ಕೆ. ರಾಮಚಂದ್ರಪ್ಪನವರ ದಿನಚರಿಯಿಂದ, ದಿ.೨೮-೧-೧೯೮೮

೩೩. ಡಾ. ಕೆ. ಮರುಳಸಿದ್ದಪ್ಪ, ಸಂಗಾತಿ, ಡಾ.ಜಿ.ರಾಮಕೃಷ್ಣ ಅಭಿನಂಧನಾ ಗ್ರಂಥ ೨೦೦೩, ಪುಟ. ೯೦

ಅಧ್ಯಾಯ ೬

ಕಾರ್ಮಿಕರ ಕಲ್ಯಾಣ ಮತ್ತು ಹತ್ತಿಗಿರಣಿಗಳ ಅವನತಿಯ ನಂತರ ಕಾರ್ಮಿಕರ ಸ್ಥಿತಿ-ಗತಿ

ಕಾರ್ಮಿಕರ ಕಲ್ಯಾಣ ಮತ್ತು ಹತ್ತಿಗಿರಣಿಗಳ ಅವನತಿಯ ನಂತರ ಕಾರ್ಮಿಕರ ಸ್ಥಿತಿ-ಗತಿ

೬.೧. ಕಾರ್ಮಿಕರ ಕಲ್ಯಾಣ

ದೊಡ್ಡ ಪ್ರಮಾಣದ ಕೈಗಾರಿಕೆಗಳು ಆರಂಭವಾದ ನಂತರ ಅಲ್ಲಿ ದುಡಿಯುವ ಕಾರ್ಮಿಕರ ಸಂಖ್ಯೆಯೂ ತೀವ್ರಗತಿಯಲ್ಲಿ ಏರತೊಡಗಿತು. ಇಂತಹ ಕೈಗಾರಿಕೆಗಳಲ್ಲಿ ರಾಷ್ಟ್ರದ ನಿಸರ್ಗ ಸಂಪತ್ತು ಸರಕಾಗಿ ಜನರ ಕೈಸೇರಬೇಕಾದರೆ ಕಾರ್ಮಿಕ ಮಹತ್ವದ ಪಾತ್ರ ವಹಿಸುತ್ತಾನೆ. ಹೊಟ್ಟೆಪಾಡಿಗಾಗಿ ಇತರರ ಅಧೀನನಾಗಿ ದುಡಿಯುವ ಕಾರ್ಮಿಕ ಯಂತ್ರದೊಂದಿಗೆ, ಯಂತ್ರದಂತೆ ದುಡಿದು ಸರಕನ್ನು ಉತ್ಪಾದಿಸುತ್ತಾನೆ. ಇಂಥ ಕೈಗಾರಿಕೆಗಳ ಸ್ಥಾಪನೆಯಿಂದ ನಿರುದ್ಯೋಗ ಸಮಸ್ಯೆ ಪರಿಹಾರವಾಗುವುದಲ್ಲದೆ, ಜೀವನಮಟ್ಟವೂ ಸುಧಾರಣೆಯಾಗುತ್ತದೆ. ಕೈಗಾರಿಕೆಯಲ್ಲಿ ಕಾರ್ಮಿಕರು ಮತ್ತು ಮಾಲೀಕರು ರಥದ ಎರಡು ಗಾಲಿಗಳಿದ್ದಂತೆ. ಔದ್ಯೋಗಿಕ ಶಾಂತಿ ನೆಲಸಬೇಕಾದರೆ, ಆರ್ಥಿಕವಾಗಿ ಪ್ರಗತಿ ಕಾಣಬೇಕಾದರೆ ರಥದ ಹಾದಿ ಸುಗಮವಾಗಿ ಸಾಗಬೇಕಾಗಿದೆ. ಹಾಗೆಯೇ ಸುಗಮವಾಗಿ ಸಾಗಬೇಕಾದರೆ ಅಲ್ಲಿ ದುಡಿಯುವ ಕಾರ್ಮಿಕರಿಗೆ ಕನಿಷ್ಟ ಸೌಲಭ್ಯ ದೊರಕಿಸಿಕೊಟ್ಟಲ್ಲಿ, ಸಂತುಷ್ಟ ಕಾರ್ಮಿಕನಿಂದ ಉತ್ಪಾದನೆಯು ಹೆಚ್ಚಿ ಗಿರಣಿಗಳ ಆರ್ಥಿಕ ಸ್ಥಿತಿ ವೃದ್ಧಿಯಾಗುತ್ತದೆ. ಸಂತುಷ್ಟ ದೇಹದಲ್ಲಿ ಸಂತುಷ್ಟ ಮನಸ್ಸು ಇರಬೇಕು ಎಂಬುದೊಂದು ಉಕ್ತಿ. ಮಾನವ ವ್ಯಕ್ತಿತ್ವವನ್ನು ದಕ್ಷತೆಯನ್ನೂ ಬಳೆಸಿಕೊಂಡು ಉಳಿಸಿಕೊಳ್ಳಲು ಇವೆರಡೂ ಜೊತೆಗೂಡಬೇಕು.[೧] ಆರ್ಥಿಕ ಅಭಿವೃದ್ಧಿಗೆ ಬುನಾದಿ ನೀಡುವ ಕಾರ್ಮಿಕ ಸದೃಢವಾಗಿದ್ದರೆ ಸಂತುಷ್ಟ ಮನಸ್ಸನ್ನು ಹೊಂದಿ ಸಂಪನ್ಮೂಲಗಳನ್ನು ಸಮರ್ಥವಾಗಿ ಬಳಸಬಹುದು. ಸಂತುಷ್ಟ ಕಾರ್ಮಿಕನಿಲ್ಲದಿದ್ದರೆ ಅವನ ಕುಟುಂಬಕ್ಕೆ ಮಾತ್ರವಲ್ಲದೆ, ರಾಷ್ಟ್ರೀಯ ಸಂಪನ್ಮೂಲಗಳಿಗೂ ಧಕ್ಕೆ ಉಂಟಾಗುತ್ತದೆ. ಆದ್ದರಿಂದ ಕಾರ್ಮಿಕರ ಆರೋಗ್ಯ ಮತ್ತು ಯೋಗಕ್ಷೇಮದ ಕಡೆ ಗಮನಹರಿಸಿ ಅವರಿಗೆ ಅಗತ್ಯ ಸೌಲಭ್ಯಗಳನ್ನು ನೀಡುವುದು ಅಗತ್ಯವಾಗಿದೆ.

ಅಂಥ ಅಗತ್ಯ ಸೌಲಭ್ಯಗಳನ್ನು ಏಕೆ ನೀಡಬೇಕು? ಎಂದು ಚರ್ಚಿಸುವುದಾದರೆ, ಕೈಗಾರಿಕಾ ಕ್ರಾಂತಿಯಿಂದ, ನಗರೀಕರಣ ಉಂಟಾಯಿತು. ದೊಡ್ಡ ನಗರಗಳಲ್ಲಿ ವಿವಿಧ ಪ್ರದೇಶಗಳಿಂದ ಉದರ ಪೋಷಣೆಗಾಗಿ ಧಾವಿಸಿದ ಕಾರ್ಮಿಕರು ಉತ್ತಮ ವಾತಾವರಣದಲ್ಲಿ ಲೀನವಾಗಲಿಲ್ಲ. ಒಂದೆಡೆ ಬೃಹತ್ ಯಂತ್ರಗಳು ಅಪಾಯಕಾರಿಯಾಗಿದ್ದು ಅಲ್ಲಿನ ಧೂಳು, ಶಾಖ, ಶಬ್ದಗಳಲ್ಲಿ ಕೆಲಸ ಮಾಡಬೇಕಾಯಿತು. ಇದು ಹೊಸ ವ್ಯವಸ್ಥೆಯಾಗಿದ್ದಲ್ಲದೆ, ಬೆಳೆಯುತ್ತಿದ್ದ ನಗರಗಳಲ್ಲಿ ಬಾಡಿಗೆ ಮನೆಗಳು ಮತ್ತು ನಿವೇಶನಗಳು ದುಬಾರಿಯಾಗಿದ್ದರಿಂದ ಉತ್ತಮ ವಸತಿ ವ್ಯವಸ್ಥೆಯಲ್ಲೂ ಏರ್ಪಡೆಯಾಗಲಿಲ್ಲ. ಹೊಸ ವಾತಾವರಣದಲ್ಲಿ

ಕಡಿಮೆ ಸೌಲಭ್ಯಗಳನ್ನು ಪಡೆದುಕೊಂಡು ಜೀವನ ಆರಂಭಿಸಿದ ಇವರ ಆರೋಗ್ಯದ ಮೇಲೆ ಕೆಟ್ಟ ಪರಿಣಾಮಗಳುಂಟಾಗುವುದರಲ್ಲಿ ಸಂಶಯವೇ ಇಲ್ಲ. ಆಗ ಅನಾರೋಗ್ಯವಂತ, ಆರೋಗ್ಯವಂತನಿಗಿಂತ ಕಳಪೆ ಮಟ್ಟದಲ್ಲಿ ವೃತ್ತಿಯನ್ನು ನಿರ್ವಹಿಸುವಂತಹ ಸ್ಥಿತಿ ನಿರ್ಮಾಣವಾಯಿತು. ಇಂತಹ ಕೈಗಾರಿಕಾ ಕಾರ್ಮಿಕರು ಜೀವನದ ಕೆಳಮಟ್ಟದಿಂದ ಬಂದವರಾಗಿದ್ದು ಇವರ ಕಲ್ಯಾಣ ಕಾರ್ಯಕ್ರಮ ನೋಡಿಕೊಳ್ಳುವುದು ಮಾಲೀಕರ ಮತ್ತು ಸರ್ಕಾರದ ಜವಾಬ್ದಾರಿಯಾಯಿತು.

ಈ ಹಿನ್ನೆಲೆಯಲ್ಲಿ ಗಿರಣಿಗಳಲ್ಲಿ ದುಡಿಯುವ ಕಾರ್ಮಿಕರಿಗೆ ಕಲ್ಯಾಣ ಕಾರ್ಯ ಕೈಗೊಳ್ಳಬೇಕಾದರೆ ಯಾವ ಪರಿಕಲ್ಪನೆಯಲ್ಲಿ ಮುಂದಾಗಬೇಕು? ಎಂಬ ಪ್ರಶ್ನೆ ಉದ್ಭವವಾಗುತ್ತದೆ. ಈ ಸಂದರ್ಭದಲ್ಲಿ ಕಾರ್ಮಿಕ ಕಲ್ಯಾಣದ ಪರಿಕಲ್ಪನೆಯತ್ತ ಹೊರಳಿದರೆ ಅಲ್ಲಿ ಎರಡು ವಿಭಾಗಗಳು ಕಂಡುಬರುತ್ತವೆ. ಅವುಗಳೆಂದರೆ,

೧. ಕಾರ್ಮಿಕ ಕಲ್ಯಾಣದ ಬಗ್ಗೆ ಅಂತರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ಪರಿಕಲ್ಪನೆ.

೨. ಭಾರತೀಯ ಪರಿಕಲ್ಪನೆಯಲ್ಲಿ ಕಾರ್ಮಿಕ ಕಲ್ಯಾಣ

ಅಂತರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ನಿರ್ದೇಶನದಂತೆ ಎಲ್ಲ ರೀತಿಯ ಕಲ್ಯಾಣ ಕಾರ್ಯಗಳನ್ನು ಎರಡು ವರ್ಗಗಳಾಗಿ ವಿಂಗಡಿಸಲಾಗಿದೆ.

ಅ. ಕಾರ್ಖಾನೆ ಅಥವಾ ಸಂಸ್ಥೆಯೊಳಗೆ; ಆರೋಗ್ಯ, ಶಿಶುಪಾಲನಾ ಕೇಂದ್ರ, ಉಪಾಹಾರ ಗೃಹ, ಕುಡಿಯುವ ನೀರಿನ ಸರಬರಾಜು[೨] ಇತ್ಯಾದಿ ಮತ್ತು

ಆ. ಕಾರ್ಖಾನೆಯ ಹೊರಗಡೆ; ವಸತಿ ಸೌಕರ್ಯ, ನೀರು ಸರಬರಾಜು, ಆಸ್ಪತ್ರೆ ಮತ್ತು ಔಷಧಾಲಯ, ಶಿಕ್ಷಣ, ವಿಹಾರ ಮತ್ತು ಸಹಕಾರ ಸಂಘ[೩] ಇತ್ಯಾದಿ.

ಭಾರತೀಯ ಪರಿಕಲ್ಪನೆಯಲ್ಲಿ ಕಾರ್ಮಿಕ ಕಲ್ಯಾಣವನ್ನು ಹಲವು ಆಯೋಗಗಳ ವರದಿ, ಅಧ್ಯಯನಗಳ ಹಿನ್ನೆಲೆಯಲ್ಲಿ ಗಮನಿಸಬಹುದು. ೧೯೫೯ರ ಅಧ್ಯಯನ ತಂಡವು ಕಲ್ಯಾಣ ಕಾರ್ಯಕ್ರಮಗಳನ್ನು ೩ ಗುಂಪುಗಳಾಗಿ ವಿಂಗಡಿಸುತ್ತದೆ.[೪]

ಅವುಗಳೆಂದರೆ :

೧. ಸಂಸ್ಥೆಯ ಆವರಣದೊಳಗಿನ ಕಲ್ಯಾಣ ಕಾರ್ಯಕ್ರಮಗಳು.

೨. ಸಂಸ್ಥೆಯ ಹೊರಗಿನ ಕಲ್ಯಾಣ ಕಾರ್ಯಕ್ರಮಗಳು.

೩. ಸಾಮಾಜಿಕ ಭದ್ರತೆ.

ಮೇಲಿನ ೩ ಗುಂಪುಗಳಲ್ಲಿ ಶೌಚಾಲಯ, ಶಿಶುಪಾಲನೆ, ಉಪಾಹಾರ, ವಿಶ್ರಾಂತಿ ಕೊಠಡಿ, ಹೆರಿಗೆ ಸೌಲಭ್ಯ, ಸಾಮಾಜಿಕ ವಿಮಾ ಸೌಲಭ್ಯ, ಆರೋಗ್ಯ, ಶಿಕ್ಷಣ, ಮನೋರಂಜನೆ, ಸಹಕಾರ ಸಂಘ, ವಸತಿ, ಭವಿಷ್ಯನಿಧಿ, ಪಿಂಚಣಿ ಮುಂತಾದವು ಸೇರಿವೆ.[೫] ಕಾರ್ಮಿಕರ ಕೆಲಸದ ಪರಿಸರದಲ್ಲಿ ಹಾಗೂ ಸಮಾಜದಲ್ಲಿ ಉತ್ತಮ ವಾತಾವರಣದಲ್ಲಿ ಕರ್ತವ್ಯ ನಿರ್ವಹಿಸಿ ಜೀವಿಸಲು ಅನುಕೂಲವಾಗುವಂತಹ ಮೇಲಿನ ಕಲ್ಯಾಣ ಕಾರ್ಯಗಳನ್ನು ಸೂಚಿಸಿರುವುದು ಉತ್ತಮ ಕ್ರಮವಾಗಿದೆ. ಈ ಪರಿಕಲ್ಪನೆಯನ್ನು ಕಾರ್ಮಿಕರು ಇದು

ಕೇವಲ ಜನೋಪಯೋಗಿ ಕಾರ್ಯವಾಗದೆ ನಿಯಮಬದ್ಧವಾಗಿ ದೊರೆಯಬೇಕೆಂದರು. ಅವರು ಕಾರ್ಮಿಕ ಕಲ್ಯಾಣವೆನ್ನುವುದು ಒಬ್ಬ ಯಜಮಾನ ಕೇವಲ ಜನೋಪಕಾರಿ ಧೋರಣೆಯಿಂದ ಕಾರ್ಮಿಕರಿಗೆ ಒದಗಿಸುವ ಮುಫತ್ತಾದ ಸಹಾಯವಾಗಬಾರದೆಂದು ಅಭಿಪ್ರಾಯಪಟ್ಟರು.[೬] ಕಾರ್ಮಿಕರು ಈ ರೀತಿ ಅಭಿಪ್ರಾಯಪಟ್ಟಿರುವುದು ಸೂಕ್ತವೆನಿಸುತ್ತದೆ. ಅವರು ಕಾರ್ಮಿಕ ಕಲ್ಯಾಣದ ಪ್ರಯೋಜನಗಳು ಶಾಸನ ಮತ್ತು ಒಪ್ಪಂದಗಳ ಪ್ರಕಾರ ದಕ್ಕಬೇಕಾದ ಹಕ್ಕುಗಳಾಗಬೇಕೆಂದು ತಿಳಿದುಕೊಂಡರು.[೭] ಕಾರ್ಮಿಕರ ಈ ಧೋರಣೆ ಅವರಿಗೆ ಕಲ್ಯಾಣ ಕಾರ್ಯಕೈಗೊಳ್ಳುವವರ ಬಗ್ಗೆ ನಂಬಿಕೆ ಇಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಕಾಯಿದೆಗಳು ಜಾರಿಗೆ ಬಂದರೂ ನಮ್ಮ ಬಂಡವಾಳಿಗರು ದುಡಿಯುವ ಕಾರ್ಮಿಕರಿಗೆ ಅನೇಕ ವರ್ಷಗಳವರೆಗೂ ಸೌಲಭ್ಯಗಳನ್ನು ನೀಡದಿದ್ದನ್ನು ಗಮನಿಸಿದಾಗ ಅವರ ಧೋರಣೆಯು ದೃಢಪಡುತ್ತದೆ.

ನಮ್ಮ ಅಧ್ಯಯನದ ವ್ಯಾಪ್ತಿಯಲ್ಲಿ ಯಾವ ಕಾಲಕ್ಕೆ ಕ್ಷೇಮಾಭಿವೃದ್ಧಿ ಕಾರ್ಯಗಳು ನಡೆದವು, ಕಾರ್ಮಿಕರಿಗೆ ಲಭ್ಯವಾಗಿದ್ದ ಕ್ಷೇಮಾಭಿವೃದ್ಧಿ ಕಾರ್ಯಗಳು ಏನು? ಅವು ಕಾರ್ಮಿಕರನ್ನು ಸಮಾಧಾನ ಪಡಿಸಿದ್ದವೆ? ಯಾವ ಕಾಲಕ್ಕೆ ಹಲಕೆಲವು ಕ್ಷೇಮಾಭಿವೃದ್ಧಿ ಕಾರ್ಯಕ್ರಮಗಳು ನಡೆದವು? ಎಂಬ ಹಲವು ಪ್ರಶ್ನೆಗಳೊಂದಿಗೆ ಚರ್ಚಿಸುವ ಅಗತ್ಯವಿದೆ.

ದಾವಣಗೆರೆ ನಗರದ ಹತ್ತಿಗಿರಣಿ ಕಾರ್ಮಿಕರು ೧೯೭೦ರ ವರೆಗೂ ಪರಿಕಲ್ಪನೆಯಲ್ಲಿರುವ ಬಹುತೇಕ ಸೌಲಭ್ಯಗಳನ್ನು ಪಡೆದುಕೊಳ್ಳಲಿಲ್ಲ. ಭಾರತದಲ್ಲಿ ಕಾರ್ಮಿಕ ಕಲ್ಯಾಣದ ಉಗಮವು ೧೯೧೪-೧೮ರ ಮಹಾಯುದ್ಧದ ಅವಧಿಯಲ್ಲಿ ಕಂಡುಬರುತ್ತದೆ.[೮] ಅಂದರೆ ರಾಷ್ಟ್ರಮಟ್ಟದಲ್ಲಿ ೧೯೧೪-೧೮ರ ಅವಧಿಯಲ್ಲಿ ಕಾರ್ಮಿಕ ಕಲ್ಯಾಣ ಉಗಮವಾದರೆ, ದಾವಣಗೆರೆ ನಗರಕ್ಕೆ ಅದು ಬರಲು ದೀರ್ಘಕಾಲವನ್ನೇ ತೆಗೆದುಕೊಂಡಿತು. ಏಕೆಂದರೆ ಈ ನಗರದಲ್ಲಿ ಕಾರ್ಮಿಕ ಸಂಘಟನೆ ದೃಢವಾಗಿ ನಿಂತದ್ದು ೧೯೭೦ರ ದಶಕದಲ್ಲಿ. ಇಲ್ಲಿ ಕಾರ್ಮಿಕ ಸಂಘಟನೆ ಬಲವಾದ ನಂತರವೇ ಹಲವು ಕಲ್ಯಾಣ ಕಾರ್ಯಗಳು ಆರಂಭವಾದವು. ಅದರಲ್ಲಿ ಕಾರ್ಮಿಕರಿಗೆ ವಸತಿ ಸೌಲಭ್ಯವಂತೂ ಗಗನಕುಸುಮವಾಗಿಯೇ ಉಳಿಯಿತು. ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಉಪಕಾರ, ದಯಾಮಯತೆ, ಅನುಕಂಪ ಮುಂತಾದವುಗಳಿಗೆ ಸ್ಥಳವೇ ಇಲ್ಲದ್ದು ಇಂಥ ವ್ಯವಸ್ಥೆಗಳಿಂದ ಕಾರ್ಮಿಕರು ಬಹಳ ಕಾಲ ಹೊರಗುಳಿಯಬೇಕಾಯಿತು.

ನಗರದ ಗಿರಣಿ ಕಾರ್ಮಿಕರು ವೈದ್ಯಕೀಯ ಸೌಲಭ್ಯ, ಶೈಕ್ಷಣಿಕ ಸೌಲಭ್ಯ, ವಸತಿ ಸೌಲಭ್ಯ, ನೀರಿನ ವ್ಯವಸ್ಥೆ, ಕ್ಯಾಂಟೀನ್ ಸೌಲಭ್ಯ, ಕಾಯಿದೆಗಳ ಜಾರಿಗೆ ಮಾಡಿದ ಪ್ರಯತ್ನ ಮುಂತಾದವುಗಳನ್ನು ಪರಿಶೀಲಿಸುತ್ತಾ ಹೋಗುವುದು ಅಗತ್ಯವೆನಿಸುತ್ತದೆ. ಮಾನವೀಯ ಅಂಶಗಳಿಂದ ದೂರವಿರುವ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಮೇಲ್ಕಂಡ ಹಲವು ಕಲ್ಯಾಣ ಕಾರ್ಯಗಳು ಹೇಗಿದ್ದವು ಎಂಬುದು ಆಸಕ್ತ ವಿಷಯವಾಗಿದೆ.

ಕಾರ್ಮಿಕ ಇಲಾಖೆಯ ಸ್ಥಾಪನೆ

ಕ್ಷೇಮಾಭಿವೃದ್ಧಿ ಕಾರ್ಯಗಳು ಸಹಾಯದ ರೀತಿಯಲ್ಲಿ ಮುಫತ್ತಾಗಿರದೆ ಕಾಯಿದೆಯ ವ್ಯಾಪ್ತಿಗೊಳಪಡಬೇಕು ಎಂಬ ಕಾರ್ಮಿಕರ ಅಭಿಪ್ರಾಯಕ್ಕೆ ಒತ್ತು ನೀಡಿತು. ೧೯೪೧ರ ಮೈಸೂರು ಕಾರ್ಮಿಕ ಕಾಯಿದೆ

ಜಾರಿಗೊಳಿಸಲು ಈ ಇಲಾಖೆಯನ್ನು ಸ್ಥಾಪಿಸಲಾಯಿತು.[೯] ಅವುಗಳನ್ನು ಕಾರ್ಯಗತಗೊಳಿಸಲು ಮೈಸೂರು ಸರ್ಕಾರವು ೧೯೪೨ರಲ್ಲಿ ಕಾರ್ಮಿಕ ಇಲಾಖೆಯನ್ನು ಸ್ಥಾಪಿಸಿತು.[೧೦] ಇಂತಹ ಕ್ರಮವು ಅತಿ ಜರೂರಾಗಿತ್ತು. ಏಕೆಂದರೆ ಕಾಯಿದೆಗಳು ಈಗಾಗಲೇ ಅಸ್ತಿತ್ವದಲ್ಲಿದ್ದರೂ ಅವುಗಳು ಸಮಗ್ರವಾಗಿ ಕಾರ್ಯನಿರ್ವಹಿಸುತ್ತಿರಲಿಲ್ಲ. ಆದ್ದರಿಂದ ಕಾರ್ಮಿಕ ಇಲಾಖೆ ಸ್ಥಾಪನೆಯು ಸ್ವಲ್ಪಮಟ್ಟಿಗಾದರೂ ಉಪಯೋಗವಾಯಿತು. ಮೈಸೂರು ಸರ್ಕಾರ ಜನಪರಸರ್ಕಾರ ಎಂದೆಲ್ಲಾ ಖ್ಯಾತಿ ಪಡೆದಿದ್ದರೂ ಕಾರ್ಮಿಕ ಚಳವಳಿಯನ್ನು ನಿರ್ದಯವಾಗಿ ಹತ್ತಿಕ್ಕುತ್ತಿದ್ದಕ್ಕೆ ಹಲವಾರು ನಿದರ್ಶನಗಳಿವೆ. ಇಂಥ ರಾಜ್ಯದಲ್ಲಿ ಕಾರ್ಮಿಕ ಇಲಾಖೆ ಸ್ಥಾಪನೆ ಗಮನಾರ್ಹವಾದ ಬೆಳವಣಿಗೆಯಾಗಿದೆ.

ಮನರಂಜನಾ ಕೇಂದ್ರಕ್ಕೆ ಪ್ರಯತ್ನ

ದಾವಣಗೆರೆ ನಗರವು ಕೈಗಾರಿಕೆಗಳ ಕೇಂದ್ರವಾಗಿದ್ದು ಕಾರ್ಮಿಕರಿಗೆ ಮನರಂಜನಾ ಕೇಂದ್ರ ಬೇಕು ಎಂಬ ಬೇಡಿಕೆಯನ್ನು ಸರ್ಕಾರದ ಮುಂದೆ ಇಡಲಾಗಿತ್ತು.[೧೧] ಈ ಬೇಡಿಕೆಯು ೧೯೫೧-೫೨ರಲ್ಲಿ ಇರುವುದನ್ನು ಗಮನಿಸಿದಾಗ ಗೋಚರಿಸುವ ಸಂಗತಿ, ಅಲ್ಲಿಯವರೆಗೂ ಇಂತಹ ಸೌಕರ್ಯಗಳು ನಗರದ ಕಾರ್ಮಿಕರಿಗೆ ಲಭ್ಯವಿರಲಿಲ್ಲ ಎಂಬುದಾಗಿದೆ.

ಕಾರ್ಮಿಕರ ರಾಜ್ಯ ವಿಮಾ ಆಸ್ಪತ್ರೆ ಸೌಲಭ್ಯ (ಇ.ಎಸ್.ಐ)

ಕಾರ್ಮಿಕರ ರಾಜ್ಯವಿಮಾ ಆಸ್ಪತ್ರೆ ಮತ್ತು ಅಲ್ಲಿನ ಸೌಲಭ್ಯಗಳಂತೂ ಕೊನೆಗಾಲದವರೆಗೂ ಸುಧಾರಣೆಗೊಳ್ಳಲೇ ಇಲ್ಲ. ಇ.ಎಸ್.ಐ. ಸೌಲಭ್ಯವನ್ನು ೧೯೬೫-೬೬ರಲ್ಲಿ ದಾವಣಗೆರೆ ನಗರದ ಕಾರ್ಮಿಕರಿಗೆ ವಿಸ್ತರಿಸಲಾಯಿತು.[೧೨] ಕಾರ್ಮಿಕ ವರ್ಗ ಗಿರಣಿಗಳಲ್ಲಿ ಕರ್ತವ್ಯ ನಿರ್ವಹಿಸುವಾಗ ಎದುರಿಸುವ ಅಪಘಾತಗಳಿಗೆ ಚಿಕಿತ್ಸೆ ನೀಡಲು ಅಗತ್ಯವಾಗಿದ್ದ ಸೌಲಭ್ಯ ಸ್ವಲ್ಪವಾದರೂ ಗುಣಮಟ್ಟದಲ್ಲಿ ದೊರೆತದ್ದು ೧೯೬೦ರ ದಶಕದಲ್ಲಿ. ಈ ಆಸ್ಪತ್ರೆಗಳು ಶೋಷಣೆಯ, ಭ್ರಷ್ಟಾಚಾರದ, ಅಮಾನವೀಯತೆ ಕೇಂದ್ರಗಳು ಎಂದರೆ ಉತ್ಪ್ರೇಕ್ಷೆಯಾಗಲಾರದು. ಇಲ್ಲಿ ಕಾರ್ಮಿಕರನ್ನು ನಾನಾ ಸಂದರ್ಭಗಳಲ್ಲಿ ಶೋಷಿಸಲಾಗುತ್ತದೆ. ಸರ್ಕಾರದಿಂದ ಇ.ಎಸ್.ಐ. ಸೌಲಭ್ಯ ದಾವಣಗೆರೆ ನಗರಕ್ಕೆ ವಿಸ್ತರಿಸಿದರೆ ಅಗತ್ಯವಾದ ಕಟ್ಟಡ, ಸಿಬ್ಬಂದಿಯ ಕೊರತೆ ಆರಂಭದಲ್ಲೇ ಮೊಳಕೆಯೊಡೆಯಿತು. ಮಾಯಕೊಂಡ ಕ್ಷೇತ್ರದ (ಚಿತ್ರದುರ್ಗ ಜಿಲ್ಲೆ) ಶಾಸಕಿಯಾಗಿದ್ದ ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರು ಕಾರ್ಮಿಕರ ನಗರವಾಗಿರುವ ದಾವಣಗೆರೆಯಲ್ಲಿ ಈಗಿರುವ ಸಾರ್ವಜನಿಕ ಆಸ್ಪತ್ರೆ ಪಕ್ಕದಲ್ಲಿ ೧೦೦ ಹಾಸಿಗೆಯ ಇ.ಎಸ್.ಐ. ಆಸ್ಪತ್ರೆ ನಿರ್ಮಾಣ ಮಾಡಿ ಎಂದು ಸರ್ಕಾರವನ್ನು ಕೇಳಿಕೊಂಡರು.[೧೩] ಇವರ ಕೋರಿಕೆಯು ಸೂಕ್ತವಾಗಿದ್ದರೂ ಸರ್ಕಾರ ೫೦ ಹಾಸಿಗೆ ಆಸ್ಪತ್ರೆ ನಿರ್ಮಾಣಕ್ಕೆ ಕ್ರಮತೆಗೆದುಕೊಂಡಿತು.ಈ ವೇಳೆಗಾಗಲೇ ಕಾರ್ಮಿಕ ಮುಖಂಡ ಶ್ರೀ. ಪಂಪಾಪತಿಯವರೂ ಶಾಸಕರಾಗಿದ್ದು ಅವರೂ ಆಸ್ಪತ್ರೆಯ ದುಸ್ಥಿತಿಯ ಬಗ್ಗೆ ಹೋರಾಟಕ್ಕೆ ಸಿದ್ಧರಾಗಿದ್ದರು. ರಾಷ್ಟ್ರದ ಸಂಪನ್ಮೂಲವಾಗಿರುವ ಕಾರ್ಮಿಕರಿಗೆ ನಿಯಮಬದ್ಧವಾಗಿ ಸಿಗಬೇಕಾದ ಸೌಲಭ್ಯಗಳು ಸಿಗುತ್ತಿರಲಿಲ್ಲ. ಶ್ರೀ. ಪಂಪಾಪತಿಯವರು ನಗರದ ಕೆ.ಟಿ.ಜಂಬಣ್ಣ ನಗರದ ಇ.ಎಸ್.ಐ. ಆಸ್ಪತ್ರೆಯಲ್ಲಿ ಒಂದೇ ಕೋಣೆ ಇದೆ. ಅಲ್ಲಿ ಗಂಡಸರು ಮತ್ತು ಹೆಂಗಸರನ್ನು ಒಂದೇ ಕೋಣೆಯಲ್ಲಿ ಪರೀಕ್ಷಿಸಲಾಗುತ್ತಿದೆ.[೧೪] ಗಂಡಸರೆದುರು ಹೆಣ್ಣುಮಕ್ಕಳನ್ನು ಪರೀಕ್ಷಿಸುವುದು ಅನಾಗರಿಕತೆಯ ಲಕ್ಷಣ,

ಪ್ರತಿದಿನ ಸಹಸ್ರಾರು ರೋಗಿಗಳು ಆಸ್ಪತ್ರೆಗೆ ಹೋಗುತ್ತಿದ್ದು ಕೇವಲ ೩ ವೈದ್ಯರಿದ್ದಾರೆ.[೧೫] ಇಲ್ಲಿ ಎಲ್ಲಾ ಕಾಯಿಲೆಗಳಿಗೂ ಔಷಧಿ ದೊರೆಯಬೇಕು,[೧೬] ಇತ್ಯಾದಿ ವಿಷಯಗಳನ್ನು ಇ.ಎಸ್.ಐ. ನಿರ್ದೇಶಕರ ಗಮನಕ್ಕೆ ತಂದರು. ಈ ವಿಷಯ ಆಸ್ಪತ್ರೆ ಸೌಲಭ್ಯದ ಸ್ಥಿತಿಗೆ ಹಿಡಿದ ಕನ್ನಡಿಯಾಗಿದೆ. ಇಂಥ ಎಲ್ಲಾ ದೀರ್ಘ ಪ್ರಯತ್ನಗಳು ನಡೆದರೂ ಇವು ಸುಧಾರಿಸಲಿಲ್ಲ.

ಮತ್ತೊಬ್ಬ ಕಾರ್ಮಿಕ ಮುಖಂಡ ಶ್ರೀಹೆಚ್.ಕೆ.ರಾಮಚಂದ್ರಪ್ಪನವರ ಡೈರಿಯಲ್ಲಿ ಕಾರ್ಮಿಕರ ರಾಜ್ಯ ವಿಮಾ ಆಸ್ಪತ್ರೆ ನಿರ್ದೇಶಕರಿಗೆ ಇಟ್ಟ ಬೇಡಿಕೆಗಳ ಪಟ್ಟಿ (೧೯೭೭) ದೊರೆತಿದೆ. ಅದರ ಪ್ರಕಾರ ಕಾರ್ಮಿಕರಿಗೆ ಕನ್ನಡಕ ತೆಗೆದುಕೊಳ್ಳಲು ೫೦ರೂ ನೀಡುತ್ತಿದ್ದೀರಿ, ಬದಲಿಗೆ ನೀವೇ ಕನ್ನಡಕ ಕೊಡಿರಿ, ಕಾರ್ಮಿಕ ನಿಧನನಾದರೆ ೨೦೦ ರೂ ನೀಡುತ್ತಿದ್ದರು (ಶವಸಂಸ್ಕಾರಕ್ಕೆ). ಅದನ್ನು ಕನಿಷ್ಠ ೧೦೦೦ರೂಗೆ ಏರಿಸಬೇಕು. ಮಕ್ಕಳು ಮತ್ತು ಮಹಿಳೆಯರನ್ನು ಪರೀಕ್ಷಿಸಲು ತಜ್ಞವೈದ್ಯರು ಬೇಕು[೧೭] ಎಂಬ ಕುಂದುಕೊರತೆಗಳನ್ನು ಬೇಡಿಕೆಯಾಗಿ ಅರ್ಪಿಸಿದರು. ಇ.ಎಸ್.ಐ. ಆಸ್ಪತ್ರೆ ಸಂಬಂಧ ಚರ್ಚೆ, ಬೇಡಿಕೆಗಳೆಲ್ಲಾ ಅಲ್ಲಿನ ಸ್ಥಿತಿ ಸುಧಾರಿಸಿ ಕಾರ್ಮಿಕರಿಗೆ ಸೌಲಭ್ಯ ನೀಡಬೇಕೆಂಬುದೇ ಆಗಿರುತ್ತದೆ. ೫೦೦ ಕಾರ್ಡುದಾರರಿಗೆ ಒಂದು ಶಾಖೆ ಇರಬೇಕೆಂದು ನಿಯಮವಿದ್ದರೂ ೫೦೦ ರಿಂದ ೧೦೦೦ ಕಾರ್ಡಾದಾರರಿಗೂ ಸಹ ಒಂದೇ ಕಡೆ ಚಿಕಿತ್ಸೆ ಕೊಡುತ್ತಿರುವುದು ಸರಿಯಲ್ಲ[೧೮] ಎಂದು ಕಾರ್ಮಿಕ ಮಂತ್ರಿಯೂ, ಉಪಮುಖ್ಯಮಂತ್ರಿಯೂ ಆಗಿದ್ದ ಶ್ರೀಸಿದ್ದರಾಮಯ್ಯನವರಲ್ಲಿ ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೇಸ್ (ಎ.ಐ.ಟಿ.ಯು.ಸಿ.) ಜಿಲ್ಲಾಧ್ಯಾಕ್ಷರಾಗಿದ್ದ ಶ್ರೀ. ರಾಮಚಂದ್ರಪ್ಪನವರು ೧೯೯೭ರಲ್ಲಿ ಬೇಡಿಕೆ ಇಟ್ಟರು. ಈ ವೇಳೆಗಾಗಲೇ ಕೈಗಾರಿಕಾ ರಂಗ ವಿನಾಶದ ಹಾದಿ ತುಳಿಯುತ್ತಿತ್ತು. ಆ ಕಾಲದಲ್ಲೇ ಇಂಥ ದುಸ್ಥಿತಿ ಆಸ್ಪತ್ರೆಯಲ್ಲಿದ್ದದ್ದು ಶೋಚನೀಯ ಸಂಗತಿಯಾಗಿದೆ. ಮಾಹಿತಿದಾರರು (೮೪.೫೩%) ಇ.ಎಸ್.ಐ. ಸೌಲಭ್ಯ ಇತ್ತು ಎಂದು ಒಪ್ಪಿಕೊಂಡಿದ್ದರಾದರೂ ಈ ಆಸ್ಪತ್ರೆ ಸಮಸ್ಯೆಗಳ ಆಗರವಾಗಿತ್ತು ಎಂಬುದು ಸ್ಪಷ್ಟವಾಗುತ್ತದೆ. ಕಾಯಿದೆಯಲ್ಲಿ ಬದಲಾವಣೆ ತಂದು ಕಾರ್ಮಿಕರಿಗೆ ಸಿಗಬೇಕಾದ ಸೌಲಭ್ಯಗಳು ನ್ಯಾಯಯುತವಾಗಿ ದಕ್ಕುವಂತೆ ಮಾಡಬೇಕಾಗಿದೆ.

ದಾವಣಗೆರೆ ನಗರ ಬಂಡವಾಳಶಾಹಿಗಳ ನಗರ. ಇಲ್ಲಿನ ಜೀವನ ವೆಚ್ಚ ಕೂಡ ದುಬಾರಿಯಾದದ್ದು. ಇಂತಹ ನಗರದಲ್ಲಿ ಕಾರ್ಮಿಕರು ಉತ್ತಮ ವಸತಿ ಸೌಲಭ್ಯ ಹೊಂದುವುದು ಸಾಮಾನ್ಯ ಕೆಲಸವಲ್ಲ. ಇವರಿಗೆ ಸರ್ಕಾರ ಮತ್ತು ಮಾಲೀಕರಿಂದ ವಸತಿ ಸೌಲಭ್ಯ ಸುಮಾರು ಶೇ.೮೫ ಭಾಗ ದೊರೆಯಲೇ ಇಲ್ಲ. ಆರಂಭದಲ್ಲಿ ದಾವಣಗೆರೆ ಹರಿಹರಗಳಲ್ಲಿ ಕಾರ್ಮಿಕರಿಗಾಗಿ ಮೈಸೂರು ಹೌಸಿಂಗ್ ಬೋರ್ಡ್ ಅನೇಕ ಮನೆಗಳನ್ನು ನಿರ್ಮಾಣ ಮಾಡಿತ್ತು,[೧೯] ಇದು ತೀರಾ ಸಣ್ಣ ಪ್ರಮಾಣದದ್ದಾರೂ ಇಲ್ಲಿ ಬಹುಪಾಲು ಕಛೇರಿ ನೌಕರರು ಅನುಕೂಲ ಪಡೆದುಕೊಂಡಿದ್ದರು. ದೊಡ್ಡ ಪಟ್ಟಣಕ್ಕೆ ಬಂದು ಸೇರ್ಪಡೆಯಾದ ಕಾರ್ಮಿಕರು ಉತ್ತಮ ವಸತಿ ಸೌಲಭ್ಯವನ್ನು ಪಡೆಯಲೇ ಇಲ್ಲ. ಕೈಗಾರಿಕೆಗಳು ಅಳಿದು ಕೆಲವು ಮಾತ್ರ ಉಳಿದುಕೊಂಡಿರುವ ಸಂದರ್ಭದಲ್ಲೂ ೪೫.೦೨% ಕಾರ್ಮಿಕರು ಸ್ವಂತ ಮನೆಯಲ್ಲಿ ವಾಸಿಸುತ್ತಿದ್ದು, ೫೪.೯೮% ಕಾರ್ಮಿಕರು ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದಾರೆ. ಈ ಚಿತ್ರಣವು ನಮಗೆ ಸ್ಪಷ್ಟ ಮಾಹಿತಿ ನೀಡುತ್ತಿದ್ದು ವಸತಿ ವ್ಯವಸ್ಥೆಯಲ್ಲಿ ಕಾರ್ಮಿಕರಿಗೆ ಅನುಕೂಲ ಆಗಲೇ ಇಲ್ಲ ಎಂದು

ಹೇಳಬೇಕಾಗುತ್ತದೆ. ಬದಲಾಗಿ ನಗರದಲ್ಲಿ ಹಲವು ಕೊಳಚೆ ಪ್ರದೇಶಗಳು ಬೆಳವಣಿಗೆ ಹೊಂದಿದವು. ನಗರದ ಕೆ.ಟಿ. ಜಂಬಣ್ಣ ನಗರ, ನಿಟ್ಟುವಳ್ಳಿ ಬಡಾವಣೆ, ಭಾರತ್ ಕಾಲೋನಿ, ದುಗ್ಗಮ್ಮನ ಪೇಟೆ, ಚಿಕ್ಕನಹಳ್ಳಿ, ಆವರಗೆರೆ, ಶೇಖರಪ್ಪ ನಗರಗಳಲ್ಲಿ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುತ್ತಿದ್ದರು. ಈ ಭಾಗದಲ್ಲಿ ಬಹುಪಾಲು ಒಂದಕ್ಕೊಂದು ಮನೆಗಳು ಹೊಂದಿಕೊಂಡಿದ್ದು, ಗಾಳಿ, ಬೆಳಕಿನ ಅಭಾವ ಎದ್ದುಕಾಣುತ್ತಿತ್ತು. ಲೆನಿನ್‌ನಗರ, ಶೇಖರಪ್ಪ ನಗರಗಳು ಕೊಳಚೆ ಪ್ರದೇಶಗಳೇ ಆಗಿದ್ದವು. ಅಲ್ಲಿ ಸೊಳ್ಳೆ ಮುಂತಾದ ಕ್ರಿಮಿಕೀಟಗಳ ಹಾವಳಿ ಅತಿಯಾಗಿತ್ತು. ದಿನೇ ದಿನೇ ಇವುಗಳ ಹಾವಳಿ ಹೆಚ್ಚಾಗುತ್ತಿದ್ದು ಹೀಗೆಯೇ ಮುಂದುವರೆದರೆ ಜನರು ಮಲೇರಿಯಾ ಮತ್ತು ಕಾಲರರೋಗಕ್ಕೆ ತುತ್ತಾಗುವ ಸಂಭವವಿದೆ, ಆದ್ದರಿಂದ ಕ್ರಮಕೈಗೊಳ್ಳಬೇಕೆಂದು ಅಲ್ಲಿನ ನಿವಾಸಿಗಳು ಅಧಿಕಾರಿಗಳನ್ನು ಪ್ರಾರ್ಥಿಸಿಕೊಂಡರು.[೨೦] ಈ ಚಿತ್ರಣವು ಅವರು ಎಂಥ ಪ್ರದೇಶದಲ್ಲಿ, ಪರಿಸರದಲ್ಲಿ ವಾಸಿಸುತ್ತಿದ್ದರು ಎಂಬುದನ್ನು ಸ್ಪಷ್ಟಪಡಿಸುತ್ತದೆ. ಇಂಗ್ಲೆಂಡ್ ಮುಂತಾದ ರಾಷ್ಟ್ರಗಳಂತೆ ನಮ್ಮ ನಗರದಲ್ಲೂ ಕೈಗಾರಿಕೆಗಳಿಂದ ಜನಸಂಖ್ಯೆ ಹೆಚ್ಚಾದರೂ ಅವರ ಕ್ಷೇಮಾಭಿವೃದ್ಧಿಯ ಕಡೆಗೆ ಹೆಚ್ಚಿನ ಗಮನಹರಿಸಲಿಲ್ಲ. ಆದರೆ ಮುಂದುವರೆದ ರಾಷ್ಟ್ರಗಳಲ್ಲಿ ಇಷ್ಟು ಹೀನಾಯವಾಗಿ ಕಾರ್ಮಿಕರನ್ನು ನೋಡಲಿಲ್ಲ ಎಂಬುದನ್ನು ಮನಗಾಣಬೇಕಾಗುತ್ತದೆ. ದಾವಣಗೆರೆಯ ಶ್ರೀ ಶೇಖರಪ್ಪ, ಶ್ರೀ ಸುರೇಶ್ ನಗರಗಳಲ್ಲಿ, ಕೆ.ಟಿ.ಜಂಬಣ್ಣ ನಗರದಲ್ಲಿ ಮಳೆಯಿಂದ ನೀರು ನುಗ್ಗಿ ತುಂಬಾ ಹಾನಿಯಾಗಿದೆ (೨೮.೯.೧೯೭೫ರಲ್ಲಿ) ಎಂದು ತಿಳಿದುಬರುತ್ತದೆ.[೨೧] ಇದರಿಂದ ಕಾರ್ಮಿಕರು ವಾಸಿಸುತ್ತಿದ್ದ ಮನೆಯಲ್ಲೂ ಸಹಾ ನೆಮ್ಮದಿ ಇರಲಿಲ್ಲ, ಅವರು ಪ್ರಕೃತಿ ವಿಕೋಪಗಳನ್ನೂ ಎದುರಿಸಬೇಕಾಗುತ್ತಿತ್ತು ಎಂಬುದು ಸ್ಪಷ್ಟವಾಗಿ ಗೋಚರಿಸುತ್ತದೆ. ಕೈಗಾರಿಕಾ ನಗರಗಳಲ್ಲಿ ಕೊಳಚೆಪ್ರದೇಶಗಳು ಬಹಳಷ್ಟು ರಾಷ್ಟ್ರಗಳಲ್ಲಿ ಬೆಳೆದವು. ಅಂತೆಯೇ ಇಂಗ್ಲೆಂಡಿನಲ್ಲಿ ಕೊಳಚೆ ಪ್ರದೇಶಗಳು ಹೆಚ್ಚಾದವು. ಆ ಸಂದರ್ಭದಲ್ಲಿ ಅಲ್ಲಿ ೧೯೫೪ರಿಂದ ಕೊಳಚೆ ಪ್ರದೇಶಗಳ ನಿರ್ಮೂಲನಾ ಕೆಲಸ ಆರಂಭವಾಯಿತು.[೨೨] ಆದರೆ ನಮ್ಮ ನಗರದಲ್ಲಿ ಅಂಥ ಪ್ರಯತ್ನಗಳು ೧೯೮೦ರ ದಶಕದವರೆಗೂ ನಡೆಯಲಿಲ್ಲ.

ಇಂಗ್ಲೆಂಡಿನಲ್ಲಿ ರಾಜ್ಯ ಸರ್ಕಾರದ ಧನ ಸಹಾಯದ ಜೊತೆಗೆ ಕೇಂದ್ರ ಸರ್ಕಾರ ಸಬ್ಸಿಡಿ ನೀಡಿ, (ಕಾರ್ಮಿಕರಿಗೆ) ಮನೆ ನಿರ್ಮಾಣಕ್ಕೆ ಪ್ರೋತ್ಸಾಹ ನೀಡುತ್ತಿತ್ತು.[೨೩] ನಮ್ಮ ರಾಷ್ಟ್ರದಲ್ಲಿ ಇಂಥ ಆಲೋಚನೆಗಳಿದ್ದರೂ ದಿಟ್ಟತನದ ಪ್ರಯತ್ನಗಳು ನಡೆಯಲಿಲ್ಲ. ದೆಹಲಿಯಲ್ಲಿ ಅಖಿಲಭಾರತ ಹೌಸಿಂಗ್ ಸಮ್ಮೇಳನ ೧೯೫೨ರಲ್ಲಿ ನಡೆಯಿತು.[೨೪] ಈ ಸಮ್ಮೇಳನದಲ್ಲಿ ಮೈಸೂರಿನ ಕಾರ್ಮಿಕರು ಮತ್ತು ಉದ್ಯೋಗಸ್ಥರು ಪಾಲ್ಗೊಂಡಿದ್ದರು. ಈ ಸಮ್ಮೇಳನದಲ್ಲಿ ರಾಜ್ಯ ಸರ್ಕಾರವು ೫ ವರ್ಷಗಳ ಯೋಜನೆ ತಯಾರಿಸಿ ಕಾರ್ಮಿಕರಿಗೆ ಮನೆಗಳನ್ನು ಕಟ್ಟಿಕೊಡಬೇಕೆಂದಿತು. ಆದರೆ ನಮ್ಮ ನಗರದಲ್ಲಿ ಈ ಯೋಜನೆ ಜಾರಿಗೂ ಬರಲಿಲ್ಲ, ಕಾರ್ಮಿಕ ಅಂತಹ ಸೌಕರ್ಯ ಪಡೆಯಲೂ ಇಲ್ಲ. ನಗರದ ಕಾರ್ಮಿಕರ ಮುಖಂಡರಾದ ಶ್ರೀ ಪಂಪಾಪತಿಯವರು ಶಾಸಕರಾಗಿದ್ದಾಗ ಸರ್ಕಾರದ ಮಟ್ಟದಲ್ಲಿ ಗೃಹ ಸೌಲಭ್ಯಕ್ಕಾಗಿ ಪ್ರಯತ್ನಪಟ್ಟರು. ಅವರು ಕೈಗಾರಿಕೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಕಡ್ಡಾಯವಾಗಿ ಮನೆಗಳನ್ನು ಒದಗಿಸಲೇಬೇಕು ಎನ್ನುವ ಒಂದು ಕಾಯಿದೆ ತಂದರೆ ಮನೆ ಸಮಸ್ಯೆ ನಿವಾರಣೆ ಮಾಡಲು ಸಾಧ್ಯ ಎಂದರು.[೨೫] ಆದರೆ ಅಂಥ ಕಾಯಿದೆ ಬರಲಿಲ್ಲ, ಕಾರ್ಮಿಕರಿಗೆ ಆ ಸೌಲಭ್ಯ ದೊರೆಯಲಿಲ್ಲ. ಅಧಿಕಾರದ

ಗದ್ದುಗೆ ಹಿಡಿದ ನಗರದ ಕಾರ್ಮಿಕ ಮುಖಂಡರೂ ಸಹ ವಸತಿ ವಿಷಯದಲ್ಲಿ ಯಾವ ಕ್ರಮವನ್ನೂ ಕೈಗೊಳ್ಳಲಿಲ್ಲ. ಏಕೆಂದರೆ ಅವರಿಗೆ ಈ ರೀತಿ ಮಾಡಿ ಎಂದು ಕೇಳುವ, ಬೇಡಿಕೆ ಇಡುವ ಅಧಿಕಾರ ಇತ್ತೇ ವಿನಹ, ಮಾಡಲೇ ಬೇಕು ಎಂದು ಆದೇಶ ನೀಡುವ ಅಧಿಕಾರ ಇರಲಿಲ್ಲ.

ಮಕ್ಕಳ ಮತ್ತು ಕಾರ್ಮಿಕರ ಶೈಕ್ಷಣಿಕ ಸೌಲಭ್ಯ

ಶೈಕ್ಷಣಿಕ ವಿಚಾರವಾಗಿ ಕಾರ್ಮಿಕರಿಗೆ ಇದ್ದ ಸೌಲಭ್ಯವನ್ನು ಗಮನಿಸಿದರೆ ದುಃಖವೆನಿಸುತ್ತದೆ. ಗಿರಣಿಗಳಲ್ಲಿ ದುಡಿಯುತ್ತಿದ್ದ ಕಾರ್ಮಿಕರು ಬಡತನದಿಂದ ಜೀವನ ನಿರ್ವಹಣೆಗೆ ಬಂದವರು. ಇವರಲ್ಲಿ ಬಹಳಷ್ಟು ಮಂದಿ ಅಶಿಕ್ಷಿತರು, ಇವರ ಶೈಕ್ಷಣಿಕ ಪ್ರಗತಿ ಹೇಗೆ ಸಾಧ್ಯ? ಶಾಲೆಗೆ ಕಳುಹಿಸಿ ಶಿಕ್ಷಣ ನೀಡಲು ಸಮಯ ಹಾಗೂ ದುಡಿದು ದಣಿವಾಗಿದ್ದ ದೇಹಕ್ಕೆ ಮನಸ್ಸೂ ಇರಲು ಸಾಧ್ಯವಿಲ್ಲ. ಈ ವಾತಾವರಣದಲ್ಲಿ ಕಾರ್ಮಿಕರಿಗೆ ಜೀವನ ನಿರ್ವಹಣೆಗೆ ಅಗತ್ಯ ಶಿಕ್ಷಣವನ್ನು ನೀಡುವುದು ಅನಿವಾರ್ಯವಾಗುತ್ತದೆ. ಕೈಗಾರಿಕಾ ನಗರ ದಾವಣಗೆರೆಯಲ್ಲಿ ಒಂದು ಕೈಗಾರಿಕಾ ಶಾಲೆ ತೆರೆಯಬೇಕೆಂಬ ಪ್ರಯತ್ನ ಬಹಳ ಹಿಂದೆಯೇ ಇಲ್ಲಿ ನಡೆದಿತ್ತು. ಮೈಸೂರು ಲೆಜಿಸ್ಲೇಟೀವ್ ಕೌನ್ಸಿಲ್‌ನ ಸದಸ್ಯರಾಗಿದ್ದ ಶ್ರೀ. ಡಿ.ಎಚ್. ಚಂದ್ರಶೇಖರಯ್ಯನವರು ದಾವಣಗೆರೆಯಲ್ಲಿ ಕೈಗಾರಿಕಾ ಶಾಲೆ ತೆರೆಯಲು ಕೇಳಿಕೊಂಡರು.[೨೬] ಈ ವೇಳೆಗಾಗಲೇ ಜಿಲ್ಲಾ ಕೇಂದ್ರ ಚಿತ್ರದುರ್ಗದಲ್ಲಿ ಈ ಶಾಲೆ ಕಾರ್ಯನಿರ್ವಹಿಸುತ್ತಿದ್ದು, ಆ ಸೇವೆಯನ್ನು ದಾವಣಗೆರೆ ನಗರಕ್ಕೂ ವಿಸ್ತರಿಸುವಂತೆ ಚರ್ಚಿಸಲಾಯಿತು. ಏಕೆಂದರೆ ಕೈಗಾರಿಕೆಗಳಲ್ಲಿ ದುಡಿಯುತ್ತಿದ್ದ ತಾಂತ್ರಿಕ ಪರಿಣಿತರು ಕೇವಲ ೦೨.೦೬% ಇದ್ದದ್ದನ್ನು ನೋಡಿದಾಗ ಇಂಥ ಶಾಲೆಗಳು ಅಗತ್ಯವೆನಿಸುತ್ತವೆ.

ದಾವಣಗೆರೆಯ ಶಂಕರ್ ಗಿರಣಿ, ದಾವಣಗೆರೆ ಕಾಟನ್ ಮಿಲ್‌ಗಳ ಕಾರ್ಮಿಕರಿಗೆ ವೈದ್ಯಕೀಯ ಚಿಕಿತ್ಸೆ, ಕ್ಯಾಂಟಿನ್, ಸಹಕಾರ ಸಂಘ, ಶಾಲೆ ಮತ್ತು ಗ್ರಾಚುಟಿ ನಿಧಿ ಸೌಲಭ್ಯಗಳನ್ನು ನೀಡಿದ್ದರು,[೨೭] ಎಂದು ತಿಳಿಯುತ್ತದೆ. ದಾವಣಗೆರೆ ನಗರದಲ್ಲಿ ಇದ್ದ ಗಿರಣಿಗಳಲ್ಲೇ ಅತ್ಯುತ್ತಮವಾದ ಗಿರಣಿ ದಾವಣಗೆರೆ ಹತ್ತಿಗಿರಣಿ (ಡಿ.ಸಿ.ಎಂ.). ಇಲ್ಲಿ ಕಾರ್ಮಿಕರಿಗೆ ಹಲವು ಸೌಲಭ್ಯಗಳನ್ನು ನೀಡಿದ್ದು ಸ್ವಾಗತಾರ್ಹ ಹಾಗೂ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಕಾರ್ಮಿಕರ ಕ್ಷೇಮಾಭಿವೃದ್ಧಿಗೆ ಗಮನಹರಿಸುವುದು ಒಳ್ಳೆಯ ಕ್ರಮ. ಆದರೆ ೧೯೭೦ರವರೆಗೂ ಇಂಥ ಸೌಲಭ್ಯಗಳನ್ನು ನೀಡಲಿಲ್ಲ. ದಾವಣಗೆರೆ ಹತ್ತಿ ಗಿರಣಿಯ ಮಾಲೀಕರಾದ (ಡಿ.ಸಿ.ಎಂ.) ಹನುಮಂತಪ್ಪ ಮನೆತನದ ಶ್ರೀನಿವಾಸ ಮೂರ್ತಿಯವರು ಅಭಿವೃದ್ಧಿಶೀಲ ಮನೋಭಾವ ಉಳ್ಳವರಾಗಿದ್ದರು. ಹಾಗಾಗಿ ಕಾರ್ಮಿಕರ ಮಕ್ಕಳಿಗೆ ಉಚಿತ ಶಿಕ್ಷಣ ನೀಡುವ ಶಾಲೆ ತೆರೆದಿದ್ದರು.[೨೮] ಆದರೆ ಈ ಶಾಲೆಯಲ್ಲಿ ಕಾರ್ಮಿಕರ ಎಲ್ಲಾ ಮಕ್ಕಳಿಗೂ ಸ್ಥಳಾವಕಾಶ ದೊರೆಯಲಿಲ್ಲ. ಅಂತೂ ಅನುಕಂಪ, ಕನಿಕರ ರಹಿತವಾದ ಬಂಡವಾಳ ವ್ಯವಸ್ಥೆಯಲ್ಲಿ ಈ ಶಾಲೆ ನಿರ್ಮಾಣ ಮೆಚ್ಚುವ ಕ್ರಮವಾಗಿದೆ. ಈ ಒಂದು ಶಾಲೆ ಬಿಟ್ಟರೆ ಗಿರಣಿ ಕಾರ್ಮಿಕರಿಗೆ ಉಚಿತ ಶಾಲೆ ಸೌಲಭ್ಯ ಸಿಗಲೇ ಇಲ್ಲ. ಕಾರ್ಮಿಕ ಸಂಘ ಪ್ರಬಲವಾದಾಗ ಲೆನಿನ್ ನಗದರಲ್ಲಿ ಶಿಶುವಿಹಾರ ಮುಂತಾದ ಶಿಕ್ಷಣ ನೀಡಲು ಪ್ರಯತ್ನಗಳನ್ನು ಮಾಡಿತು. ಮಾಹಿತಿದಾರರು ಮಕ್ಕಳಿಗೆ ಶಾಲಾ ಸೌಲಭ್ಯವಿರಲಿಲ್ಲವೆಂದೇ ಹೇಳುತ್ತಾರೆ. ಅವರ ಅಭಿಪ್ರಾಯ ಸತ್ಯವೂ ಆಗಿದೆ. ಗಿರಣಿಗಳಲ್ಲಿ ದುಡಿಯುವ ಕಾರ್ಮಿಕರ ಎಲ್ಲಾ

ಮಕ್ಕಳಿಗೂ ಶಾಲಾ ಸೌಲಭ್ಯ ದೊರೆತಿರಲಿಲ್ಲ. ಇದೊಂದು ವಸತಿ ಸಮಸ್ಯೆಯಂತೆಯೇ, ಸಮಸ್ಯೆಯಾಗಿಯೇ ಉಳಿದಿದೆ.

ಕಾರ್ಮಿಕ ಸಂಘವು ಪ್ರಬಲವಾದ ನಂತರ ಕಾರ್ಮಿಕರಿಗೆ ಹಲವು ಮಾದರಿಯ ಶೈಕ್ಷಣಿಕ ತರಬೇತಿ ನೀಡಲು ಮುಂದಾಯಿತು. ನಗರದ ಹತ್ತಿ ಗಿರಣಿ ಕಾರ್ಮಿಕರಲ್ಲಿ ಮಹಿಳೆಯರು ಪುರುಷರಂತೆಯೇ ಸಂಘದ ಚಟುವಟಿಕೆ, ಚಳವಳಿಯಲ್ಲಿ ಉತ್ಸಾಹದಿಂದ ಪಾಲ್ಗೊಳ್ಳುತ್ತಿದ್ದರು. ಅವರನ್ನು ಜಾಗೃತಿಗೊಳಿಸಲು ಶ್ರೀ ಪಂಪಾಪತಿಯವರು, ಡಾ.ಅನುಪಮಾ ನಿರಂಜನ ಎಂಬ ತಜ್ಞರನ್ನು ಆಹ್ವಾನಿಸಿ ಉಪನ್ಯಾಸ ನೀಡಿಸಿದರು. ಅವರು ಮಹಿಳೆಯರನ್ನು ಕುರಿತು ವಿದ್ಯಾವಂತರಾಗಿ ಗಂಡಸರೊಂದಿಗೆ ಸರಿಸಮಾನವಾಗಿ ದುಡಿಯಬೇಕೆಂದು (೧೯೭೬) ಕರೆ ಇತ್ತರು.[೨೯] ಮಹಿಳೆಯರಿಗೆ ಈ ಮಾರ್ಗದರ್ಶನ ಅಗತ್ಯ ಮತ್ತು ಅರ್ಥಪೂರ್ಣವಾಗಿತ್ತು. ಮಹಿಳೆ ನಾಲ್ಕು ಗೋಡೆಗಳ ಮಧ್ಯೆ ಗೃಹಕೃತ್ಯಕ್ಕೇ ಸೀಮಿತ ಎನ್ನುವ ವಾತಾವರಣದಲ್ಲಿ ಅವರನ್ನು ಜಾಗೃತಿಗೊಳಿಸಬೇಕಾದದ್ದು ಅನಿವಾರ್ಯ ಸಂದರ್ಭವೂ ಆಗಿತ್ತು. ಚಂದ್ರೋದಯ ಗಿರಣಿ ಕೆಲಸಗಾರರ ಸಂಘ ಗಿರಣಿ ಮುಂಭಾಗದಲ್ಲಿ ಜನನ ನಿಯಂತ್ರಣದ ಬಗ್ಗೆ ತಿಳುವಳಿಕೆ ನೀಡಲು ಸಭೆ ಏರ್ಪಡಿಸಿ ಮಕ್ಕಳು ಹೆಚ್ಚಾದರೆ ಶಿಕ್ಷಣ, ಬಟ್ಟೆ ಮುಂತಾದ ಸಮಸ್ಯೆ ಉದ್ಭವಿಸುತ್ತವೆ. ಆದ್ದರಿಂದ ೨ ಅಥವಾ ೩ ಮಕ್ಕಳನ್ನು ಹೊಂದುವುದರಿಂದ ಮಕ್ಕಳನ್ನು ಬುದ್ಧಿವಂತರನ್ನಾಗಿ ಮಾಡಲು ಸಾಧ್ಯ (೧೯೭೬) ಎಂದು ಶ್ರೀ ಪಂಪಾಪತಿಯವರು ಕಾರ್ಮಿಕರನ್ನು ಎಚ್ಚರಗೊಳಿಸಿದರು.[೩೦] ಜಗತ್ತಿನ ಜನಸಂಖ್ಯೆಯಲ್ಲಿ ಎರಡನೇ ಸ್ಥಾನದಲ್ಲಿರುವ ನಮ್ಮ ರಾಷ್ಟ್ರದ ಜನರನ್ನು ಜಾಗೃತಗೊಳಿಸುವುದು ತುಂಬಾ ಸಾಂದರ್ಭಿಕ. ಅದರಲ್ಲೂ ಬಡತನದಲ್ಲಿ ಬೇಯುತ್ತಿದ್ದ ಕಾರ್ಮಿಕ ವರ್ಗ ಹೆಚ್ಚು ಮಕ್ಕಳನ್ನು ಹೊಂದುವುದರಿಂದ ಕುಟುಂಬದಲ್ಲಿ ಯಾರನ್ನೂ ಸಂತೃಪ್ತರಾಗಿ ಇಡಲು ಸಾಧ್ಯವಿಲ್ಲ. ಬರುವ ವೇತನದಲ್ಲಿ ಸಂಸಾರದ ರಥ ಸಾಗಿಸಲು ಇಂತಹ ಪ್ರಜ್ಞೆ ಮೂಡಿಸಬೇಕಾಗಿದೆ. ಇದೇ ಸಂದರ್ಭದಲ್ಲಿ ದಾವಣಗೆರೆ ಹತ್ತಿಗಿರಣಿ (ಡಿ.ಸಿ.ಎಂ.) ಮಾಲೀಕರೂ ತಮ್ಮ ಕೈಜೋಡಿಸಿ ಸಂತಾನಹರಣ ಚಿಕಿತ್ಸೆ ಮಾಡಿಸಿಕೊಂಡ ಹೆಣ್ಣುಮಕ್ಕಳಿಗೆ ೨೫ರೂ ಮತ್ತು ೨ ದಿನ ಪೌಷ್ಟಿಕ ಆಹಾರ ಕೊಡಲಾಗುವುದು, ಅಲ್ಲದೆ ಒಂದು ಸೀರೆ, ಒಂದು ಪ್ಯಾಂಟು ಕೊಡಲು ಒಪ್ಪಿದ್ದಾರೆ ಎಂದು ತಿಳಿಸಿದರು.[೩೧] ಉದ್ಯೋಗದಾತರು ರಾಷ್ಟ್ರ ಮತ್ತು ತನ್ನ ಕಾರ್ಮಿಕರ ಬಗ್ಗೆ ಕಾಳಜಿಹೊಂದಿ ಸೌಲಭ್ಯನೀಡಲು ಮುಂದಾದದ್ದು ಮಾದರಿಯಾಗಿದೆ. ಹೀಗೆಯೇ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಎಲ್ಲರೂ ಮುಂದಾದರೆ ಚರಿತ್ರೆಯಲ್ಲಿ ಒಂದು ಅಧ್ಯಾಯವೇ ಇರಲು ಸಾಧ್ಯವಿಲ್ಲ. ಕಾರ್ಮಿಕರ ಮಕ್ಕಳು ವಿದ್ಯಾವಂತರಾಗುವುದೇ ಕಾರ್ಮಿಕರ ಆಸ್ತಿ ಎಂದು ಮುಖಂಡ ಶ್ರೀ ಪಂಪಾಪತಿ ಕಾರ್ಮಿಕರನ್ನು ಸಭೆ ಸಮಾರಂಭಗಳಲ್ಲಿ ಎಚ್ಚರಗೊಳಿಸುತ್ತಿದ್ದರು. ಮಹಿಳೆಯರು ಈ ಎಲ್ಲಾ ಶಿಕ್ಷಣದ ಅನುಭವದ ಮೇಲೆ ಸಂಘಟನೆಯು ಏರ್ಪಡಿಸುವ ಚಳವಳಿಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದರು. ೭.೯.೧೯೭೮ರಲ್ಲಿ ಸಿ.ಪಿ.ಐ. ಸಂಘಟನೆಯು ತುರ್ತುಬೇಡಿಕೆಗಳ ಈಡೇರಿಕೆಗಾಗಿ ಚಳವಳಿ ಹಮ್ಮಿಕೊಂಡಾಗ ೧೨೪ ಸತ್ಯಾಗ್ರಹಿಗಳನ್ನು ಬಂಧಿಸಲಾಯಿತು. ಅವರಲ್ಲಿ ೨೪ ಮಹಿಳಾ ಕಾರ್ಮಿಕರಿದ್ದರು.[೩೨] ಈ ಸಂಖ್ಯೆ ಮಹಿಳಾ ಕಾರ್ಮಿಕರು ಎಷ್ಟು ಪ್ರಮಾಣದಲ್ಲಿ ಚಳವಳಿಗಳಲ್ಲಿ ಪಾಲ್ಗೊಳ್ಳುತ್ತಿದ್ದರು ಎಂಬುದಕ್ಕೆ ನಿದರ್ಶನವಾಗಿದೆ.

ಇತರೆ ಸೌಲಭ್ಯಗಳು

ದಾವಣಗೆರೆ ಹತ್ತಿಗಿರಣಿಯು (ಡಿ.ಸಿ.ಎಂ) ೧೯೬೧ರಲ್ಲಿ ಬೆಳ್ಳಿಹಬ್ಬವನ್ನು ಆಚರಣೆ ಮಾಡಿತು. ಈ ಸಂದರ್ಭದಲ್ಲಿ ಬಿಡುಗಡೆಮಾಡಿದ ಸಂಚಿಕೆಯಲ್ಲಿ ೧೨೦ ಮಕ್ಕಳು, ಉತ್ತಮ ಸಿಬ್ಬಂದಿ ಇರುವ ಅವರು ನಡೆಸುವ ಶಾಲೆಯಲ್ಲಿ ಅಭ್ಯಾಸ ಮಾಡುತ್ತಿದ್ದರು ಎಂದು ಚಿತ್ರದ ಮೂಲಕ ತಿಳಿಸುತ್ತದೆ, ಅಲ್ಲದೆ ಶಿಶುಪಾಲನ ಕೇಂದ್ರ, ಕೈಗಾರಿಕಾ ಕ್ಯಾಂಟಿನ್, ಕಾರ್ಮಿಕರ ಸಹಕಾರ ಸಂಘ, ಸಿನಿಮಾ ಮಂದಿರಗಳನ್ನು ನಡೆಸುತ್ತಿರುವ ಮಾಹಿತಿ ನೀಡುತ್ತದೆ. ಈ ಎಲ್ಲಾ ಸೌಲಭ್ಯಗಳನ್ನು ೧೯೬೦ರ ದಶಕದಲ್ಲೇ ಮೇಲ್ಕಂಡ ಗಿರಣಿಯು ನೀಡುತ್ತಿದ್ದುದು ನಗರದ ಕಾರ್ಮಿಕರ ಚರಿತ್ರೆಯಲ್ಲಿಯೇ ಗಮನಿಸಲರ್ಹವಾದ ವಿಷಯವಾಗಿದೆ. ಇದೇ ನೀತಿಯನ್ನು ದಾವಣಗೆರೆ ನಗರದ ಎಲ್ಲಾ ಹತ್ತಿಗಿರಣಿ ಮಾಲೀಕರೂ ಅನುಕರಣೆ ಮಾಡಿದ್ದರೆ ತ್ಯಾಗ, ಬಲಿದಾನಗಳು ನಡೆಯಲು ಆಸ್ಪದವಾಗುತ್ತಿರಲಿಲ್ಲ ಎನಿಸುತ್ತದೆ. ಪಾಶ್ಚಾತ್ಯ ರಾಷ್ಟ್ರಗಳಂತೆಯೇ ಈ ಗಿರಣಿಯು (ಬಹಳ ಬೇಗ) ಇಂಥ ಸೌಲಭ್ಯ ನೀಡಿದ್ದು ಭವಿಷ್ಯದತ್ತ ಮುಖ ಮಾಡಿನಿಂತಿದ್ದ ಕಾರ್ಮಿಕರಿಗೆ ಸಂತಸದ ಸಂಗತಿಯಾಗಿತ್ತು. ಆದರೆ ಇಲ್ಲೂ ಸೌಲಭ್ಯಗಳು ನಗರದ ಎಲ್ಲಾ ಗಿರಣಿಯ ಕಾರ್ಮಿಕರಿಗೆ ಕೊನೆಯವರೆಗೂ ಲಭ್ಯವಾಗದೆ ಸಂಘಟನೆ ಶಕ್ತಿಯಾಗಿ ಬೆಳೆದ ಮೇಲೆ ಕೆಲವು ಸೌಲಭ್ಯಗಳು ಲಭ್ಯವಾದವು. ೧೯೭೦ರ ನಂತರ ಎಲ್ಲಾ ಗಿರಣಿಗಳಲ್ಲೂ ೮ ಗಂಟೆ ಕೆಲಸ, ರಜಾ ಸೌಲಭ್ಯಗಳು, ಕೂಲಿಯ ಜೊತೆಗೆ ಬೋನಸ್, ಪ್ರಾವಿಡೆಂಟ್ ಫಂಡ್, ವಿಶ್ರಾಂತಿಗೃಹ, ಗಿರಣಿಯ ಒಳಗಡೆ ಉಪಹಾರ ಗೃಹ (೭೭.೨೨%), ಶೌಚಾಲಯ (೧೦೦%) ಮುಂತಾದ ಬಹುತೇಕ ಸಂಸ್ಥೆಯ ಆವರಣದ ಒಳಗಿನ ಹಾಗೂ ಹೊರಗಿನ ಕಲ್ಯಾಣ ಸೌಲಭ್ಯಗಳನ್ನು ಪಡೆದುಕೊಂಡರು. ಬಂಡವಾಳಿಗ ಹಸನ್ಮುಖಿಯಲ್ಲ ಏಕೆಂದರೆ ಆತ ತಾನು ಹಾಕಿರುವ ಬಂಡವಾಳಕ್ಕೆ ತಕ್ಕ ಲಾಭ ಬರಬೇಕೆಂಬ ಮನೋಭಾವನೆಯಲ್ಲಿ ಕಾರ್ಯಪರನಾದಾಗ ಈ ಎಲ್ಲಾ ಸೌಲಭ್ಯಗಳನ್ನು ನೀಡಲು ಮುಂದಾಗುವುದಿಲ್ಲ ಎಂಬುದಕ್ಕೆ ದಾವಣಗೆರೆ ನಗರದ ಹಲವು ಗಿರಣಿಗಳ ಮಾಲೀಕರು ನಿದರ್ಶಕರಾಗಿದ್ದಾರೆ. ತನ್ನ ಜೀವನ ನಿರ್ವಹಣೆಗೆ ತನ್ನನ್ನೇ ತೊಡಗಿಸಿಕೊಂಡಿರುವ ಕಾರ್ಮಿಕರಿಗೆ ಕಾಯಿದೆ ಪ್ರಕಾರ ಸೌಲಭ್ಯ ನೀಡಿ, ಅವರ ಬದುಕನ್ನು ಹಸನಗೊಳಿಸಲು ಆರಂಭದಿಂದಲೇ ಮುಂದಾಗದಿದ್ದದ್ದು ಖೇದದ ವಿಷಯವಾಗಿದೆ.

ಅಮೇರಿಕಾದಲ್ಲಿ ಕಾರ್ಮಿಕ ಸಂಘ ವಿಮಾ ಕಂಪನಿಯನ್ನು ನಡೆಸುತ್ತಿದೆ.[೬೬] ಆದರೆ ದಾವಣಗೆರೆ ನಗರದ ಕಾರ್ಮಿಕ ಸಂಘ ಇಂಥ ಕ್ಷೇಮಾಭಿವೃದ್ಧಿ ಕಾರ್ಯವನ್ನು ಕೈಗೊಳ್ಳಲಿಲ್ಲ. ಕಾರ್ಮಿಕ ಸಂಘಗಳು ಕೇವಲ ಕೆಲವೇ ತಾತ್ಕಾಲಿಕ ಲಾಭಕ್ಕಾಗಿ ಮಾತ್ರ ಕಾರ್ಯನಿರ್ವಹಿಸದೆ ಸಾಮಾರ್ಥ್ಯದ ಮೇಲೆ ಶಾಶ್ವತವಾಗಿ ತಮ್ಮ ಸದಸ್ಯರಿಗೆ ಅನುಕೂಲವಾಗುವಂತಹ ಕ್ರಮಗಳನ್ನು ಕೈಗೊಳ್ಳಬೇಕಾಗಿತ್ತು. ಆದರೆ ಅಂಥ ಪ್ರಯತ್ನವನ್ನು ಮಾಡಿದ್ದಕ್ಕೆ ನಿದರ್ಶನಗಳಿಲ್ಲ. ಕಾರ್ಮಿಕ ಸಂಘಗಳು ಠೇವಣಿ ಸಂಗ್ರಹಿಸಿ ರೋಗ ರುಜಿನ, ಕಷ್ಟ ಕಾರ್ಪಣ್ಯಗಳ ಕಾಲದಲ್ಲಿ, ವೃದ್ಧಾಪ್ಯಕ್ಕೆ ಬಂದವರಿಗೆ, ಅಪಘಾತಗಳಾದಾಗ ತನ್ನ ಸದಸ್ಯರಿಗೆ ಸಹಾಯ ಮಾಡಬೇಕು. ಆ ಮೂಲಕ ಕ್ಷೇಮಾಭಿವೃದ್ಧಿಯಲ್ಲಿ ತೊಡಗಿಸಿಕೊಳ್ಳಬೇಕು. ಮೂಲಭೂತವಾಗಿ ಆರ್ಥಿಕ ಅಡಿಪಾಯವೇ ಸ್ಥಿರವಾಗಿಲ್ಲದ ಅವು ಇಂತಹ ಕ್ರಮಕೈಗೊಳ್ಳುವುದು, ಬಡತನವೆಂಬ ಅಂಧಕಾರದಲ್ಲಿ

ಬಂಧಿತವಾಗಿರುವ ಕಾರ್ಮಿಕರನ್ನು ಅಭಿವೃದ್ಧಿ ಪಡಿಸುವುದು ಸಾಧ್ಯವಾಗಲಿಲ್ಲ. ದಾವಣಗೆರೆ ಕಾರ್ಮಿಕರು ೨ ರೂಗಳಿಂದ ೫ ರೂಗಳವರೆಗೆ ತಮ್ಮ ಸಂಘಕ್ಕೆ ಚಂದಾ ನೀಡುತ್ತಿದ್ದರು. ಈ ಅಲ್ಪ ಚಂದಾ ಹಣ ಅವರ ಸಾಮಾನ್ಯ ಚಟುವಟಿಕೆಗಳಿಗೂ ಸಾಲದಾಗಿತ್ತು. ಸಾಕಷ್ಟು ಆರ್ಥಿಕ ಸಂಕಷ್ಟಗಳನ್ನು ಅನುಭವಿಸುತ್ತಿದ್ದ, ಕಾರ್ಮಿಕರಿಗೆ ಸಂಘಗಳು ಆಶಾವಾದ ಮೂಡಿಸಿ, ಭವಿಷ್ಯತ್ತಿನ ಆಪತ್ತುಗಳ ಬಗ್ಗೆ ಅರಿವನ್ನು ಭಿತ್ತಿ ಉಳಿಸಿ ಬೆಳೆಸಲು ಮಾರ್ಗದರ್ಶನ ನೀಡಿ ಕಾರ್ಯೋನ್ಮುಖವಾಗ ಬೇಕಿತ್ತು.

ಆದರೆ ಅಂಥ ಪ್ರಯತ್ನಗಳನ್ನು ಮಾಡಲು ಅವರು ಮೊದಲು ಸ್ಥಿರವಾಗಿ ಒಂದು ಸದೃಢ ಸ್ಥಾನದಲ್ಲಿ ನಿಲ್ಲಬೇಕಾಗಿತ್ತು. ಅಧಿಕಾರ ಆಕ್ರಮಿಸುವುದಕ್ಕೆ ಕಾರ್ಮಿಕ ಸಂಘಗಳು ಆಯುಧಗಳಿದ್ದಂತೆ ಎಂಬ ಮಾರ್ಕ್ಸ್ ಮತ್ತು ಏಂಗೆಲ್ಸ್ ಅಭಿಪ್ರಾಯದಂತೆ ದಾವಣಗೆರೆ ನಗರದ ಕಾರ್ಮಿಕರು ಆಯುಧವಾಗಿಯೇ ಅಧಿಕಾರ ಪಡೆದು ಸ್ಥಿರವಾಗಿ ನಿಂತ ಮೇಲಾದರೂ ತಮ್ಮ ಸದಸ್ಯರ ಭವಿಷ್ಯತ್ತಿನ ಬಗ್ಗೆ ಕಾಳಜಿವಹಿಸಬೇಕಾಗಿತ್ತು, ಆದರೆ ಆ ಕೆಲಸ ಆಗಲಿಲ್ಲ. ಒಟ್ಟಿನಲ್ಲಿ ಸರ್ಕಾರ, ಮಾಲೀಕರು, ಕಾರ್ಮಿಕ ಸಂಘಗಳು ಕಾರ್ಮಿಕರ ಕ್ಷೇಮಾಭಿವೃದ್ಧಿ ಕಾರ್ಯಗಳಲ್ಲಿ ಕೆಲವು ಪ್ರಯತ್ನಗಳನ್ನು ಮಾಡಿ, ಬಹಳಷ್ಟು ಸಂದರ್ಭಗಳಲ್ಲಿ ಸಂಪೂರ್ಣ ಯಶಸ್ಸು ಕಾಣದ ಸಂದರ್ಭಗಳನ್ನು ಗಮನಿಸಲಾಗಿದೆ.

೫೦೦ ರಿಂದ ೨೦೦೦ ಕಾರ್ಮಿಕರವರೆಗೆ ಕೆಲಸ ಮಾಡುವ ಕೈಗಾರಿಕೆಗಳಲ್ಲಿ ಒಬ್ಬ ಕಾರ್ಮಿಕ ಕಲ್ಯಾಣ ಅಧಿಕಾರಿಯನ್ನು ನೇಮಿಸಿಕೊಳ್ಳಬೇಕೆಂಬ ನಿಯಮವಿದೆ.[೪೪] ಅದರಂತೆ ಕಾರ್ಯನಿರ್ವಹಿಸುವ ಕಲ್ಯಾಣಾಧಿಕಾರಿಯು ಹಲವು ಕರ್ತವ್ಯಗಳನ್ನು ಹೊಂದಿದ್ದು ಮಾಲೀಕರು ಮತ್ತು ಕಾರ್ಮಿಕರ ಮಧ್ಯೆ ಸಂಪರ್ಕಕೊಂಡಿಯಾಗಿ ಮಾರ್ಗದರ್ಶನ, ಸಲಹೆಗಳನ್ನು ನೀಡಲು ಅವಕಾಶವಿರುತ್ತದೆ. ಆದರೆ ಕ್ರಮತೆಗೆದುಕೊಳ್ಳಲು ಕಲ್ಯಾಣಾಧಿಕಾರಿಗೆ ಅವಕಾಶವಿಲ್ಲ. ಆದ್ದರಿಂದ ಈ ಹಂತದಲ್ಲೂ ಕಾರ್ಮಿಕರು ಅತಂತ್ರದಲ್ಲಿ ಸಿಲುಕುವಂತಾಗಿದೆ. ಈ ಹಿನ್ನೆಲೆಯಲ್ಲಿ ಕಾರ್ಮಿಕ ಕಲ್ಯಾಣಾಧಿಕಾರಿಗೆ ಹೆಚ್ಚಿನ ಅಧಿಕಾರ ನೀಡಬೇಕಾಗಿದೆ. ಹಾಗೆಯೇ ಇಷ್ಟು ಅವಧಿಯಲ್ಲಿ, ಇಷ್ಟು ಉತ್ಪಾದಿಸಬೇಕೆನ್ನುವ ಮಾಲೀಕರಿಗೆ ಕಾರ್ಮಿಕ ಕಲ್ಯಾಣದ ಬಗ್ಗೆ ಆಸಕ್ತಿ ಮೂಡುವಂತಹ, ಮನಪರಿವರ್ತನೆ ಮಾಡುವ ಶಿಕ್ಷಣ ನೀಡುವುದೂ ಅಗತ್ಯವಾಗಿದೆ.

೬.೨. ಹತ್ತಿಗಿರಣಿಗಳ ಅವನತಿಯ ನಂತರ ಕಾರ್ಮಿಕರ ಸ್ಥಿತಿ-ಗತಿ

ದಾವಣಗೆರೆ ನಗರದಲ್ಲಿ ೧೯೩೦ರ ಸುಮಾರಿಗೆ ದಾವಣಗೆರೆ ಹತ್ತಿಗಿರಣಿ (ಡಿ.ಸಿ.ಎಂ) ತಲೆ ಎತ್ತಿದ ನಂತರ, ಅನೇಕ ಹತ್ತಿಗಿರಣಿಗಳು ಉಗಮಗೊಂಡವು. ಅವು ನಗರ ಮತ್ತು ಸುತ್ತಮುತ್ತಲ ಗ್ರಾಮಗಳ ಸಾವಿರಾರು ಕುಟುಂಬಗಳಿಗೆ ಉದ್ಯೋಗದ ಮೂಲಕ ಆಶ್ರಯ ನೀಡಿದವು. ಹೀಗೆ ಜನ್ಮವೆತ್ತಿ ಬೆಳವಣಿಗೆ ಹೊಂದಿದ ಗಿರಣಿಗಳಲ್ಲಿ ೧೯೮೦ರ ದಶಕದಲ್ಲಿ ಒಂದೊಂದೇ ಅವನತಿಯಾಗುತ್ತಾ, ಒಟ್ಟು ೫ ಹತ್ತಿಗಿರಣಿಗಳು ಇತಿಹಾಸ ಗರ್ಭವನ್ನು ಸೇರಿಕೊಂಡವು. ಈ ವಿಷಯವನ್ನು ಹೆಚ್ಚಾಗಿ ಕ್ಷೇತ್ರಕಾರ್ಯದಲ್ಲಿ ಸಂಗ್ರಹಿಸಿದ ಮಾಹಿತಿಯನ್ನು ಬಳಸಿಕೊಂಡು ಚರ್ಚಿಸುವ ಪ್ರಯತ್ನ ಮಾಡಲಾಗಿದೆ.

ದಾವಣಗೆರೆ ಹತ್ತಿಗಿರಣಿಯ (ಡಿ.ಸಿ.ಎಂ) ಸಂಸ್ಥಾಪಕರಾದ ರಾಜನಹಳ್ಳಿ ಹನುಮಂತಪ್ಪನವರು, ಆರ್.ಜಿ.ಗೌರಿಶಂಕರ್ ಎಂಬುವವರು (ಸ್ಥಳೀಯರು) ಹರಳೆ ವ್ಯಾಪಾರಕ್ಕಿಳಿದಾಗ ಆ ವ್ಯವಹಾರಕ್ಕೆ ಎಷ್ಟು

ಜಾಣ್ಮೆ ಇದ್ದರೂ ಸಾಲದೆಂದು ಹೇಳಿದ ಮಾತೊಂದು ಅರ್ಥಗರ್ಭಿತವಾಗಿದೆ. "ನೋಡಪ್ಪಾ ಗೌರಿಶಂಕರ್ ಹಾವು ಕಚ್ಚಿದರೆ ಔಷಧಿ ಇದೆ, ಆದರೆ ಹರಳೆ ಕಚ್ಚಿದರೆ ಯಾವ ಔಷಧಿ ಇಲ್ಲ, ಎಲ್ಲ ನೆಲಸಮ" ಅಂದಿದ್ದರಂತೆ."[೬೯] ದಾವಣಗೆರೆ ನಗರದ ಗಿರಣಿಗಳ ಪತನದ ಹಿನ್ನೆಲೆಯಲ್ಲಿ ರಾಜನಹಳ್ಳಿ ಹನುಮಂತಪ್ಪನವರ ಮಾತು ಗಮನಾರ್ಹವಾಗಿದೆ. ಅದರಂತೆಯೇ ಮುಂದೆ ದುರಂತಗಳೇ ನಡೆದುಹೋದದ್ದುಂಟು.

ಕಾರ್ಮಿಕರ ಬೇಡಿಕೆಗಳು, ಮಾರುಕಟ್ಟೆಯ ವೈಪರೀತ್ಯ, ಆಡಳಿತ ಮಂಡಳಿಗಳ ನಿರಾಸಕ್ತಿ ಮುಂತಾದವುಗಳ ಸಮರದಲ್ಲಿ ಹೆಣವಾದವು ನಗರದ ಹಲವು ಹತ್ತಿಗಿರಣಿಗಳು. ಅಳಿದಿರುವ ಗಿರಣಿಗಳಲ್ಲಿ, ಬಹುತೇಕ ಗಿರಣಿಗಳ ಕಟ್ಟಡಗಳು ಭಗ್ನವಾಗಿ, ಅವಶೇಷಗಳು ಘೋರ ರಣರಂಗದಲ್ಲಿ ಬಿದ್ದ ಹೆಣದ ರಾಶಿಯಂತೆ ಗೋಚರಿಸುತ್ತವೆ. ಹೀಗೆ ಗಿರಣಿ ಕಟ್ಟಡಗಳು ನೆಲಕ್ಕುರುಳುತ್ತಿರುವಾಗ ಅಲ್ಲಿ ದುಡಿಯುತ್ತಿದ್ದ ಕಾರ್ಮಿಕರು ವೃತ್ತಿ ಕಳೆದುಕೊಂಡು ಅತಂತ್ರ ಸ್ಥಿತಿ ತಲುಪಿದ್ದಾರೆ. ಇದರಿಂದ ಅವರ ಆರ್ಥಿಕ, ಆರೋಗ್ಯ, ಸಾಮಾಜಿಕ, ಮಕ್ಕಳ ಶಿಕ್ಷಣ ಮುಂತಾದ ಕ್ಷೇತ್ರಗಳ ಮೇಲೆ ಘೋರ ಪರಿಣಾಮ ಬೀರಿ ಹಲವರು ದಂಡನಾರ್ಹ ಅಪರಾಧ ಕೃತ್ಯಗಳಲ್ಲಿ ತೊಡಗಿದ್ದರು.

ಇಂಥ ಸಂದರ್ಭದಲ್ಲಿ ಅವರ ಸ್ಥಿತಿ-ಗತಿಗಳು ಹೇಗಿವೆ? ಜೀವನ ನಿರ್ವಹಣೆಗೆ ಕೈಗೊಂಡಿರುವ ಕ್ರಮಗಳೇನು? ಬಯಕೆಗಳೇನು? ಎಂದು ಚರ್ಚಿಸುವುದು ಸೂಕ್ತವಾಗಿದೆ.

ಅವನತಿಯ ನಂತರ ನಿರ್ವಹಿಸುತ್ತಿರುವ ಕೆಲಸಗಳು ಮತ್ತು ಅವರ ಸ್ಥಿತಿ-ಗತಿಗಳು

ಗಿರಣಿಗಳ ಅವನತಿ ನಂತರ ನಗರದ ಕಾರ್ಮಿಕರ ಸ್ಥಿತಿ-ಗತಿ ಸಂಬಂಧ ನಡೆಸಿದ ಕ್ಷೇತ್ರಕಾರ್ಯದಿಂದ, ಕಾರ್ಮಿಕರು ಬದುಕನ್ನು ಸಾಗಿಸಲು ವಿಭಿನ್ನ ವೃತ್ತಿಗಳಲ್ಲಿ ನಿರತರಾಗಿರುವುದು ಕಂಡುಬರುತ್ತದೆ. ಅದರಂತೆ ಕೈಗಾಡಿ ಎಳೆಯುವುದು, ಕಾವಲುಗಾರ, ಹಣ್ಣು ತರಕಾರಿ ಮಾರುವುದು, ಆಟೋಚಾಲನೆ, ಕೂಲಿ ಕೆಲಸ ಮುಂತಾದ ಕಾರ್ಯಗಳಲ್ಲಿ ನಿರತರಾಗಿದ್ದಾರೆ. ಕೆಲಸ ಕಳೆದುಕೊಂಡ ನಂತರ ಯಾವ ಕೆಲಸವನ್ನೂ ಮಾಡದವರೂ (೧೪.೪೩%) ಇದ್ದಾರೆ. ಅಂತೆಯೇ ಕೂಲಿ ಕೆಲಸ ಮಾಡುವವರೇ (೧೯.೯೩%) ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಕೆಲವರು ೫೦ ವರ್ಷದ ಹೊಸ್ತಿಲನ್ನು ದಾಟಿದ್ದು ಅವರಿಗೆ ಬೇರೆ ವೃತ್ತಿಮಾಡುವ ಶೈಕ್ಷಣಿಕ ಜ್ಞಾನವೂ ಇಲ್ಲ, ಮನಸ್ಸೂ ಇಲ್ಲದಂತಾಗಿದೆ. ತಮ್ಮ ಮುಂದಿನ ದಿನಗಳನ್ನು ಆಲೋಚಿಸಿ ಮಾನಸಿಕ ಸ್ಥಿಮಿತತೆಯನ್ನು ಕಳೆದುಕೊಂಡವರೂ ಇಲ್ಲದಿಲ್ಲ. ಗಿರಣಿಗಳಲ್ಲಿ ಧೂಳಿನ ವಾತಾವರಣದಲ್ಲಿ ದುಡಿಯುತ್ತಿದ್ದ ಬಹುತೇಕರಿಗೆ ಅಸ್ತಮಾ ಮುಂತಾದ ಖಾಯಿಲೆಗಳಿದ್ದು ಬೇರೆ ವೃತ್ತಿ ನಿರ್ವಹಿಸಲು ಅಡ್ಡಿಯುಂಟುಮಾಡಿದೆ. ಹಲವರು ದುರಭ್ಯಾಸಗಳಿಗೆ ಮಾರುಹೋಗಿ ಕುಟುಂಬ ನಿರ್ವಹಣೆಯ ಜವಾಬ್ದಾರಿಯಿಂದ ಮುಕ್ತರಾಗಿದ್ದಾರೆ.

ಕೆಲಸ ಕಳೆದುಕೊಂಡ ನಂತರ ಪಡೆದುಕೊಂಡ ಪರಿಹಾರ ಹಣವನ್ನು ಸದುಪಯೋಗ ಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಲಿಲ್ಲ. ಕೆಲವರು ಪಡೆದ ಪರಿಹಾರ ಮೊತ್ತವನ್ನು ನಗರದ ಫೈನಾನ್ಸ್ ಕಾರ್ಪೋರೇಷನ್‌ಗಳಲ್ಲಿ ಠೇವಣಿಯಾಗಿಟ್ಟಿದ್ದರು. ದುರಾದೃಷ್ಟವಶಾತ್ ಹಲವು ಫೈನಾನ್ಸ್‌ಗಳು ೧೯೯೦ರ ದಶಕದಲ್ಲಿ ರಾತ್ರೋ ರಾತ್ರಿ ಬೀಗ ಹಾಕಿಕೊಂಡು ಜಾಗ ಖಾಲಿಮಾಡಿದವು. ಅವರ ಗೋಳನ್ನು ಇಮ್ಮಡಿಗೊಳಿಸಿದವು. ಕೆಲವರಿಗೆ ಬಂದ ಪರಿಹಾರ ಹಣವನ್ನು ಆಟೋ ಕೊಳ್ಳಲು ಬಳಸಿ ಅನುಭವವಿಲ್ಲದ

ಕ್ಷೇತ್ರಕ್ಕೆ ಕೈ ಹಾಕಿ ಕೈಸುಟ್ಟುಕೊಂಡರು. ಹೆಣ್ಣುಮಕ್ಕಳ ವಿವಾಹಕ್ಕೆ ಪ್ರಾಶಸ್ತ್ಯ ನೀಡಿ ಬಂದ ಪರಿಹಾರದ ಹಣವನ್ನೆಲ್ಲಾ ವಿವಾಹಕ್ಕೆ ಬಳಸಿ ಮುಂದಿನ ಬದುಕಿಗೆ ವಿದಾಯ ಹೇಳಿದರು. ಆದರೆ ಜಾಣ್ಮೆ, ತಾಳ್ಮೆ, ಇರುವ ಹಲವರು ಹಣ ರಕ್ಷಿಸಿಕೊಂಡು ಅದರಿಂದಲೇ ಜೀವನ ಸಾಗಿಸುತ್ತಿದ್ದಾರೆ ಎಂದು ದಾವಣಗೆರೆ ಹತ್ತಿಗಿರಣಿಯ (ಡಿ.ಸಿ.ಎಂ) ಕಾರ್ಮಿಕರಾದ ಶ್ರೀ ಲಾವಣಿ ಬುಡೇನ್‌ಸಾಬ್ ಅಭಿಪ್ರಾಯಪಡುತ್ತಾರೆ.

ಒಂದು ಕಾಲಕ್ಕೆ ಶೋಷಣೆಯಿಂದ ಮುಕ್ತಿಯನ್ನು ಬಯಸಿ ೮ ಗಂಟೆ ಕೆಲಸದ ಅವಧಿಗಾಗಿ ಹೋರಾಡಿದ ಕೈಗಳು ಗಿರಣಿಗಳ ಅವನತಿ ನಂತರ ಎಷ್ಟು ಗಂಟೆ ದುಡಿಯುತ್ತಿವೆ? ಎಂದು ನೋಡಿದಾಗ "ಕಾಯಕವೇ ಕೈಲಾಸ" ಯಾವ ಕಾಲಕ್ಕೂ ಪ್ರಸ್ತುತ, ಆದರೆ ಪ್ರಜ್ಞೆ, ಜಾಣತನ ಅಗತ್ಯವೆನಿಸುತ್ತದೆ. ಒಂದು ನಿಗಧಿತ ಅವಧಿಗೆ, ನಿಗಧಿತ ಸ್ಥಳದಲ್ಲಿ ದುಡಿಯುತ್ತಿದ್ದ ಕೈಗಳು ದಿನವಿಡೀ ಅಲೆದಾಡಿ ಜೀವನದ ಬಂಡಿಯನ್ನು ಸಾಗಿಸಬೇಕಾಗಿದೆ. ಈಗ ವೃತ್ತಿನಿಷ್ಠೆಗೆ ಮೌಲ್ಯ ಬಂದಿದೆ. ಅಂದರೆ ಈ ಹಿಂದೆ ಅವರೆಲ್ಲರಿಗೂ ವೃತ್ತಿನಿಷ್ಠೆ ಇರಲಿಲ್ಲವೆಂದರ್ಥವಲ್ಲ. ಅಲ್ಪಪ್ರಮಾಣದ ಕೊರತೆಯ ಸುಳಿವು ಕ್ಷೇತ್ರಕಾರ್ಯ ಸಂದರ್ಭದಲ್ಲಿ ದೊರೆಯುತ್ತದೆ.

ಕೈಗಾರಿಕೆಗಳ, ಕಾರ್ಮಿಕರ, ವಾಣಿಜ್ಯ ಚಟುವಟಿಕೆಗಳ, ನಗರವೆಂದೇ ಖ್ಯಾತಿ ಗಳಿಸಿದ್ದ ದಾವಣಗೆರೆಯು ಹತ್ತಿ ಹಾಗೂ ಇತರೆ ಕೈಗಾರಿಕೆಗಳ ಅವನತಿ ನಂತರ ಆರ್ಥಿಕ ವಹಿವಾಟಿನಲ್ಲಿ ಭಾರೀ ವೈಪರೀತ್ಯಗಳನ್ನು ಕಂಡಿತು. ಸಾವಿರಾರು ಕಾರ್ಮಿಕರಿದ್ದ ಇಲ್ಲಿ ವೇತನ ವಿತರಣೆಯಾದ ದಿವಸ ಮತ್ತು ನಂತರದ ದಿನದ ಮಾರುಕಟ್ಟೆಯನ್ನು "ತೇರಿಲ್ಲದ ಜಾತ್ರೆ" ಎಂದೇ ಕರೆಯಲಾಗಿತ್ತು. ಆ ದಿನಗಳಲ್ಲಿ ನಗರದ ಅಂಗಡಿಗಳಲ್ಲಿ ನಿಲ್ಲಲು ಸ್ಥಳಾವಕಾಶವಿರುತ್ತಿರಲಿಲ್ಲ. ದೀಪಾವಳಿ ಹಬ್ಬಕ್ಕೆ ಮಿಲ್ಲುಗಳು ಕಾರ್ಮಿಕರಿಗೆ ಬೋನಸ್ ಘೋಷಿಸುತ್ತಿದ್ದುದುಂಟು.[೩೬] ಆ ಸಂದರ್ಭದಲ್ಲಿ ಕೋಟ್ಯಾಂತರ ರೂಪಾಯಿ ವಹಿವಾಟು ನಗರದಲ್ಲಿ ನಡೆದು ಹೋಗುತ್ತಿತ್ತು. ಕೇವಲ ದೀಪಾವಳಿ ಹಬ್ಬದ ಕಾಲದಲ್ಲಾಗುವ ವರ್ತಕರ ವಹಿವಾಟು ಇಡೀ ವರ್ಷದ ವಹಿವಾಟಿನ ಅಗತ್ಯವನ್ನು ತಳ್ಳಿಹಾಕುವಂತಿತ್ತು. ಆದರೆ ಅವನತಿ ನಂತರ ಆಗಿರುವುದೇನು?

ನಗರದ ವಾಣಿಜ್ಯ ವ್ಯವಹಾರ ತೀವ್ರವಾಗಿ ಕುಸಿಯಿತು. ಇದರಿಂದ ಅಂಗಡಿ ಮಾಲೀಕರು ಕೊಳ್ಳುವವರಿಗಾಗಿ ಹಾದಿ ನೋಡಿ ಕಣ್ಣುಗಳು ಸೋಲುತ್ತಿವೆ. ತೇರಿಲ್ಲದ ಜಾತ್ರೆ ಸದ್ದು ಗದ್ದಲನ್ನು ನಿಲ್ಲಿಸಿ ಶಾಂತವಾಗಿದೆ. ಬೀದಿಗೆ ಬಿದ್ದ ಕಾರ್ಮಿಕರು ತಮ್ಮ ದಿನಚರಿಗಾಗಿ ಹುಡುಕಾಟದಲ್ಲಿ ನಿರತರಾಗಿದ್ದಾರೆ. ಆದರೆ ಮರಳಿ ಬದುಕಿನ ಹಳಿ ಹಿಡಿದ ಸಾಹಸಿಗಳಿಲ್ಲದಿಲ್ಲ. ಜೀವನಕ್ಕಾಗಿ ಉದ್ಯೋಗ ಹುಡುಕುವ ಸಾಹಸ ಮಾಡಲಿಲ್ಲ!.

ಇಲ್ಲಿ ಜವಳಿ ಉದ್ಯಮ ಅವನತಿ ಹೊಂದಿದ ಹಿನ್ನೆಲೆಯಲ್ಲಿಯೆ 'ಆಹಾರ ಉದ್ಯಮ' ಪರ್ಯಾಯವಾಗಿ ಬೆಳೆಯುತ್ತಿದೆ.[೩೭] ಉದ್ಯೋಗ ಕಳೆದುಕೊಂಡ ಪುರುಷರು ಮತ್ತು ಮಹಿಳೆಯರು, ಆಹಾರ ಉದ್ಯಮಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು, ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಹಲವರಿಗೆ ಉದ್ಯೋಗವನ್ನೂ ಸೃಷ್ಟಿಸಿರುವುದು ಒಂದು ಮುಖ್ಯ ಅಂಶವಾಗಿದೆ. ರೊಟ್ಟಿ, ಚಟ್ನಿ, ಶಾವಿಗೆ ಮುಂತಾದ ಆಹಾರ ಪದಾರ್ಥಗಳ ತಯಾರಿಕೆಯಲ್ಲಿ ತೊಡಗಿಸುವುದು ಕಾರ್ಮಿಕ ತನ್ನ ಬದುಕನ್ನು ಕಟ್ಟಲೇಬೇಕೆಂಬ ಸತ್ಯವನ್ನು ಸಾರುವಂತಿದೆ.

ಮಕ್ಕಳ ಶಿಕ್ಷಣದ ಮೇಲಾದ ಪರಿಣಾಮಗಳು

ಕಾರ್ಮಿಕರ ಮಕ್ಕಳ ಶಿಕ್ಷಣದ ಮೇಲೂ ಗಿರಣಿಗಳ ಅವನತಿಯ ಛಾಯೆ ಮೂಡದೆ ಉಳಿಯಲಿಲ್ಲ. ಹತ್ತಿಬಟ್ಟೆ ವ್ಯಾಪಾರದಲ್ಲಿ ಮ್ಯಾಂಚೆಸ್ಟರ್ ಎಂದು ಪ್ರಸಿದ್ಧವಾಗಿದ್ದ ದಾವಣಗೆರೆ ನಗರ ೧೯೯೦ರ ದಶಕದಲ್ಲಿ ಆ ಹೆಸರನ್ನು ಉಳಿಸಿಕೊಳ್ಳಲಿಲ್ಲ. ನಂತರ ಅದು ಆಕ್ಸ್‌ಫರ್ಡ್ ನಗರ ಎಂಬ ಹೆಗ್ಗಳಿಕೆಗೆ ಪಾತ್ರವಾಯಿತು. ಆದರೆ ಮ್ಯಾಂಚೆಸ್ಟರ್ ನಗರದಲ್ಲಿ ದುಡಿಯುತ್ತಿದ್ದ ಕಾರ್ಮಿಕರಲ್ಲಿ ಬಹುಪಾಲು ಅಶಿಕ್ಷಿತರಾಗಿದ್ದು, ತಮ್ಮಂತೆ ತಮ್ಮ ಮಕ್ಕಳು ಶಿಕ್ಷಣದಿಂದ ವಂಚಿತರಾಗಬಾರದೆಂದು ಶಿಕ್ಷಣ ಕೊಡಿಸಲು ಮುಂದಾಗಿದ್ದರು. ಆದರೆ ಕೆಲಸ ಕಳೆದುಕೊಂಡಿದ್ದರಿಂದ ಬಹುತೇಕ ಕಾರ್ಮಿಕರ ಮಕ್ಕಳೂ ಸಹಾ, ತಾವು ಪಡೆಯುತ್ತಿದ್ದ ಶಿಕ್ಷಣವನ್ನು ಅರ್ಧಕ್ಕೇ ನಿಲ್ಲಿಸಬೇಕಾಯಿತು ಎಂದು ಚಂದ್ರೋದಯ ಗಿರಣಿ ಕಾರ್ಮಿಕರಾದ ಶ್ರೀ ಜಯಣ್ಣ ಅಭಿಪ್ರಾಯಪಡುತ್ತಾರೆ. ವಿದ್ಯಾಭ್ಯಾಸವೆಂದರೆ "ಅಂತರ್ಗತ ಭಾವನೆಗಳು ಬಹಿರ್ಮುಖವಾಗುವುದು" ಎಂದು ತತ್ವಜ್ಞಾನಿ ಜಾನ್‌ಲಾಕ್ ಅಭಿಪ್ರಾಯಪಡುತ್ತಾನೆ. ಮಾನವರಲ್ಲಿ ಅಂತರ್ಗತವಾಗಿರುವ ಅದೆಷ್ಟೋ ಜ್ಞಾನವನ್ನು ಗಳಿಸಲು ಮೂಲಭೂತ ಶಿಕ್ಷಣ ಅಗತ್ಯವಾಗಿದೆ. ಇಲ್ಲಿ ಕಾರ್ಮಿಕರ ಮಕ್ಕಳೆಲ್ಲ ಅಂತರ್ಗತವಾಗಿರುವ ಜ್ಞಾನವನ್ನು ಪ್ರಭುದ್ದವಾಗಿಸಲು ಸಾಧ್ಯವಾಗಲಿಲ್ಲ.

ಕಾರ್ಮಿಕರ ಮಕ್ಕಳ ಅರೆ ಶಿಕ್ಷಣ ಯಾವ ಉದ್ಯೋಗಕ್ಕೂ ಅರ್ಹತೆ ಇಲ್ಲದಂತೆ ಮಾಡಿತು. ಇದೇ ಸಂದರ್ಭದಲ್ಲಿ ಬಹಳಷ್ಟು ಗಂಡುಮಕ್ಕಳು ಪೋಷಕರ ಮಾತುಗಳನ್ನು ನಿರ್ಲಕ್ಷಿಸಿ ಉದ್ಧಟತನದಿಂದ ವರ್ತಿಸುತ್ತಿರುವ ನಿದರ್ಶನಗಳಿವೆ. ಉದ್ಯೋಗ ಕಳೆದುಕೊಂಡರು ಎಂದ ಮಾತ್ರಕ್ಕೆ ಎಲ್ಲರೂ ತಮ್ಮ ಮಕ್ಕಳ ಶಿಕ್ಷಣವನ್ನು ಮಧ್ಯಂತರದಲ್ಲಿ ನಿಲ್ಲಿಸಿದ್ದಾರೆಂದರ್ಥವಲ್ಲ. ಜೀವನ ಕಲೆಯಲ್ಲಿ ಜಾಣ್ಮೆಯ ಅರಿವಿದ್ದವರು ಮಕ್ಕಳ ಶಿಕ್ಷಣ ಮುಂದುವರೆಸಿದ್ದಾರೆ. ಆರಂಭದಿಂದಲೆ ಕಾರ್ಮಿಕರು, ಮಾಲೀಕರು, ಸರ್ಕಾರದ ಕಡೆಯಿಂದ, ಮುಂದಾಲೋಚನೆಗಳಿದಿದ್ದರೆ ಇಂಥ ಅನಾಹುತಗಳನ್ನು ಸಂಭವಿಸದಂತೆ ತಡೆಯಬಹುದಿತ್ತು.

ಮ್ಯಾಂಚೆಸ್ಟರ್ ನಗರ ಆಕ್ಸ್‌ಫರ್ಡ್ ನಗರವಾಗಿದ್ದು

ಕರ್ನಾಟಕದ ಹೆಸರುವಾಸಿ ನಗರಗಳ ಚರಿತ್ರೆಯಲ್ಲಿ ದಾವಣಗೆರೆಗೆ ಒಂದು ಸ್ಥಾನವಿದೆ. ದಾವಣಗೆರೆ ನೇರವಾಗಿ ಯಾವುದೇ ರಾಜಮನೆತನದಿಂದ ಆಳಲ್ಪಡದಿದ್ದರೂ ವಾಣಿಜ್ಯ, ವಿದ್ಯಾನಗರಿಯಾಗಿ ಗುರುತಿಸಲ್ಪಟ್ಟಿದೆ. ಹತ್ತಿಗಿರಣಿಗಳ ವಹಿವಾಟಿನ ಹಿನ್ನೆಲೆಯಲ್ಲಿ ಕರ್ನಾಟಕದ ಮ್ಯಾಂಚೆಸ್ಟರ್ ನಗರವೆಂದು ಕರೆಯಲ್ಪಟ್ಟಿದ್ದ ಈ ನಗರವು ೧೯೯೦ ಮತ್ತು ೨೦೦೦ದ ಮೊದಲ ದಶಕದಲ್ಲಿ ಆಕ್ಸ್‌ಫರ್ಡ್ ನಗರವೆಂದು ಕರೆಯಲ್ಪಟ್ಟಿತು. ವಿಭಿನ್ನ ಕಾರಣಗಳಿಂದ ಹತ್ತಿಗಿರಣಿಗಳು ವಿನಾಶದ ಹಾದಿಯನ್ನು ಕ್ರಮಿಸುತ್ತಾ ಸಾಗಿದನಂತರ ಊರಿನ ತುಂಬಾ ಶಿಕ್ಷಣ ಸಂಸ್ಥೆಗಳು ಹರಡಿಕೊಂಡವು. ವಾಣಿಜ್ಯ ನಗರಿ ವಹಿವಾಟಿನಲ್ಲಿ ಹಿನ್ನಡೆ ಕಂಡ ನಂತರ ಶಿಕ್ಷಣ ಪ್ರಸಾರದತ್ತ ಮುನ್ನಡೆದು ಆಕ್ಸ್‌ಫರ್ಡ್ ನಗರವೆನಿಸಿಕೊಂಡಿತು.

ಶಿಕ್ಷಣಕ್ಕೆ ಮತ್ತೊಂದು ಹೆಸರಾದ ಆಕ್ಸ್‌ಫರ್ಡ್ ನಗರ ಎನಿಸಿಕೊಳ್ಳಲು ಕಾರಣಗಳೇನು? ಇಲ್ಲಿ ನೀಡುತ್ತಿರುವ ಶಿಕ್ಷಣದ ಸ್ವರೂಪವೇನು? ಈ ರೀತಿ ದಾವಣಗೆರೆಯು ಸ್ಥಿತ್ಯಂತರಗೊಳ್ಳಲು ಹಿನ್ನೆಲೆ ಏನು ಎಂದು ಚರ್ಚಿಸುವುದು ಅಗತ್ಯವಾಗಿದೆ.

ಭೌಗೋಳಿಕವಾಗಿ ದಾವಣಗೆರೆ ನಗರದ ಸುತ್ತಮುತ್ತ ೧೦೦ ಕಿ.ಮೀ. ಗೂ ಹತ್ತಿರದಲ್ಲಿ ಇಲ್ಲಿಯಷ್ಟು ಶಿಕ್ಷಣ ಸಂಸ್ಥೆಗಳಿಲ್ಲ. ೧೯೬೦ರ ದಶಕದಲ್ಲಿ ಭದ್ರಾ ಅಣೆಕಟ್ಟೆಯ ನೀರು ಈ ಪ್ರದೇಶದ ರೈತರಿಗೆ ವ್ಯವಸಾಯಕ್ಕೆ ಲಭ್ಯವಾಗಿ, ಅವರು ಆರ್ಥಿಕವಾಗಿ ತಮ್ಮ ಸ್ಥಾನಮಾನಗಳನ್ನು ಸುಧಾರಿಸಿಕೊಂಡರು. ಅವರು ವ್ಯವಸಾಯಕ್ಕೆ ಆಧುನಿಕ ಯಂತ್ರೋಪಕರಣಗಳನ್ನು ಬಳಸಿದ್ದು, ಕುಟುಂಬದ ಎಲ್ಲಾ ಸದಸ್ಯರೂ ವ್ಯವಸಾಯ ಮಾಡಲೇಬೇಕೆಂಬ ಅನಿವಾರ್ಯತೆಯನ್ನು ಕಡಿಮೆ ಗೊಳಿಸಿತು. ರೈತರ ಮನೋಭಾವನೆಯಲ್ಲೂ ಬದಲಾವಣೆಗಳುಂಟಾಗಿ ತಮ್ಮ ಮಕ್ಕಳೂ ಶಿಕ್ಷಣ ಗಳಿಸಲಿ ಎಂದು ಆಲೋಚಿಸಿದರು. ಆ ಸಂದರ್ಭದಲ್ಲಿ ಕರ್ನಾಟಕದ ಬೆಂಗಳೂರು, ಮೈಸೂರು, ಹುಬ್ಬಳ್ಳಿ ನಗರಗಳನ್ನು ಬಿಟ್ಟರೆ ಶೈಕ್ಷಣಿಕವಾಗಿ ಬೆಳೆದಿದ್ದ ಹತ್ತಿರದ ನಗರವೆಂದರೆ ದಾವಣಗೆರೆಯಾಗಿದ್ದು ವಿದ್ಯಾರ್ಥಿಗಳಿಂದ ಆಕರ್ಷಣೆಗೊಳಗಾಯಿತು.

ದಾವಣಗೆರೆ ನಗರದಲ್ಲಿ ಆರಂಭದಿಂದಲೂ ಬಾಪೂಜಿ ವಿದ್ಯಾಸಂಸ್ಥೆ ಖ್ಯಾತಿ ಪಡೆದಿದೆ. ಪ್ರಾಥಮಿಕ ಶಿಕ್ಷಣದಿಂದ ಮೊದಲುಗೊಂಡು ವೈದ್ಯಕೀಯ, ತಾಂತ್ರಿಕ, ಸ್ನಾತಕೋತ್ತರ ಶಿಕ್ಷಣದವರೆಗೆ ತನ್ನ ಬಾಹುಗಳನ್ನು ಚಾಚಿತ್ತು. ಈ ಸಂಸ್ಥೆಯು ಶಿಕ್ಷಣ ನೀಡುತ್ತಾ, ಉದ್ಯೋಗಾವಕಾಶಗಳನ್ನು ನೀಡುವುದರ ಜೊತೆಗೆ ಸಮಾಜದಲ್ಲಿ ಗೌರವವನ್ನೂ ಪಡೆದುಕೊಂಡಿತ್ತು. ಹೀಗಿದ್ದ ಸಂದರ್ಭದಲ್ಲಿ ಶಿಕ್ಷಣಕ್ಕಾಗಿ ಈ ನಗರದತ್ತ ಬರುವವರ ಸಂಖ್ಯೆ ಅಧಿಕವಾಗಿ ಬಾಪೂಜಿ ವಿದ್ಯಾಸಂಸ್ಥೆಯ ಮೇಲೆ ಒತ್ತಡ ಹೆಚ್ಚಾಯಿತು. ಬೆಳೆಯುತ್ತಿದ್ದ ಜನಸಂಖ್ಯೆಗೆ ಶಿಕ್ಷಣದ ಬೇಡಿಕೆ ಪೂರೈಸಲು ಸಂಸ್ಥೆಗೆ ಸರ್ಕಾರದ ಇತಿಮಿತಿಗಳೂ ಅಡ್ಡಿಯುಂಟುಮಾಡಿದವು.

ಇದೇ ಸಂದರ್ಭಕ್ಕೆ ಹತ್ತಿಗಿರಣಿಗಳು ಇತಿಹಾಸದ ಪುಟಗಳನ್ನು ಸೇರಲಾರಂಭಿಸಿದವು. ಈ ನಗರದಲ್ಲಿ ಬಂಡವಾಳ ತೊಡಗಿಸಿದ್ದವರು ಅಂತಹ ಶಿಕ್ಷಿತರಾಗಿರಲಿಲ್ಲ. ಅಲ್ಪಮಟ್ಟಿನ ವ್ಯವಹಾರ ಜ್ಞಾನ ಇರುವವರ ಕೈಯಲ್ಲಿ ವಾಣಿಜ್ಯ ನಗರಿ ಇತ್ತು. ಇವರು ಕ್ರಮೇಣ ತಮ್ಮ ನಂತರದ ತಲೆಮಾರು ವಾಣಿಜ್ಯ ಶಿಕ್ಷಣ ಪಡೆದುಕೊಳ್ಳಲು ಅಪೇಕ್ಷಿಸಿದರು.

ಗಿರಣಿಗಳಲ್ಲಿ ಬಂಡವಾಳ ತೊಡಗಿಸಿ, ಕಾರ್ಮಿಕರೊಂದಿಗೆ ಸಂಘರ್ಷದ ಹಾದಿಯನ್ನು ಕ್ರಮಿಸಿದ್ದ ಇಲ್ಲಿನ ಚರಿತ್ರೆ ವಿದ್ಯಾಕ್ಷೇತ್ರದತ್ತ ಗಮನ ಹರಿಸುವತ್ತ ಪ್ರೇರೇಪಿಸಿತು. ಲಂಡನ್‌ಗೆ ೫೭ ಮೈಲಿ ಅಂತರದಲ್ಲಿರುವ ಆಕ್ಸ್‌ಫರ್ಡ್ ನಗರವೂ ಸಹ ಮೊದಲು ವ್ಯಾಪಾರಿನಗರವಾಗಿತ್ತು. ನಂತರ ಅದೊಂದು ಶಿಕ್ಷಣ ಸಂಸ್ಥೆಗಳ ನೆಲೆವೀಡಾಯಿತು. ಅದರಂತೆ ದಾವಣೆಗೆರೆ ನಗರದಲ್ಲೂ ಬದಲಾವಣೆಗಳಾಗಿ ಶಿಕ್ಷಣಕ್ಕೆ ಪ್ರಾಮುಖ್ಯತೆ ನೀಡಲಾಯಿತು. ವಾಣಿಜ್ಯನಗರಿಯಲ್ಲಿ ವಹಿವಾಟು ನಡೆಸುತ್ತಿದ್ದವರು ತಮ್ಮ ಮಕ್ಕಳಿಗೆ ವಾಣಿಜ್ಯಶಿಕ್ಷಣ ನೀಡುವಂತೆ ಆಸಕ್ತಿವಹಿಸಿದರು. ತಮ್ಮಂತೆ ತಮ್ಮ ಮಕ್ಕಳು ಮುಂದುವರೆಯುತ್ತಿರುವ ಸ್ಪರ್ಧಾ ಜಗತ್ತಿನಲ್ಲಿ ಸಾಮಾನ್ಯ ಶಿಕ್ಷಣ ಗಳಿಸಿದರೆ ಸಾಲದು ಎಂದು ಬಗೆದು ವಾಣಿಜ್ಯ ಶಿಕ್ಷಣ ನೀಡುವತ್ತ ಮುಂದಾದರು. ಆಗ ವಾಣಿಜ್ಯ ಶಿಕ್ಷಣಗಳಾದ ಬಿ.ಕಾಂ., ಬಿ.ಬಿ.ಎಂ, ಎಂ.ಬಿ.ಎ, ಎಂ.ಕಾಂ ಮುಂತಾದ ಕೋರ್ಸ್‌ಗಳಿಗೆ ಬೇಡಿಕೆ ಹೆಚ್ಚಾಯಿತು. ಈ ಸಂದರ್ಭದಲ್ಲಿ ಹುಟ್ಟಿಕೊಂಡ ಶಿಕ್ಷಣ ಸಂಸ್ಥೆಗಳು ವ್ಯಾಪಾರೀ ಮನೋಭಾವನೆಯನ್ನು ಬೆಳೆಸಿಕೊಂಡವು. ದಾನಿಗಳ ತವರು ಎಂದು ಗಮನ

ಸೆಳೆದಿದ್ದ ದಾವಣಗೆರೆ ನಗರ ಶಿಕ್ಷಣ ವ್ಯಾಪಾರದ ಸ್ವರೂಪ ಪಡೆಯಿತು. ತಾಂತ್ರಿಕ, ವೈದ್ಯಕೀಯ ಶಿಕ್ಷಣಗಳೂ ಈ ನಿಟ್ಟಿನಲ್ಲಿ ಮುಂದಾದವು. ಆದರೆ ಬಾಪೂಜಿ ವಿದ್ಯಾಸಂಸ್ಥೆಯು ಇಂತಹ ಶಿಕ್ಷಣ ನೀಡುವಾಗ ಸಮಾಜಕ್ಕೆ ತನ್ನದೇ ಆದ ಸೇವೆ ಸಲ್ಲಿಸುತ್ತಾ ಗುಣಮಟ್ಟದ ಶಿಕ್ಷಣ ನೀಡುತ್ತಿದೆ.

ಶಿಕ್ಷಣ ಪಡೆಯುವವರ ಸಂಖ್ಯೆ ಹೆಚ್ಚಾಗಿ, ಈ ನಗರದ ಮೇಲೆ ಒತ್ತಡ ಹೆಚ್ಚಾದಾಗ ಬೃಹತ್ ಶಿಕ್ಷಣ ಸಂಸ್ಥೆಗಳಿಂದ ಮೊದಲುಗೊಂಡು, ಬೀದಿ, ಬೀದಿಗಳಲ್ಲೂ ಶಾಲಾ ಕಾಲೇಜುಗಳು ಜನ್ಮತಾಳಿದವು. ಯಲ್ಲಮ್ಮ ಹತ್ತಿಗಿರಣಿಯ ಎದುರೇ ತೊಳಹುಣಸೆಯಲ್ಲಿ ಕುವೆಂಪು ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗವು ಆರಂಭವಾಯಿತು. ಹೀಗೆ ಶಿಕ್ಷಣ ಸಂಸ್ಥೆಗಳೇನೋ ತ್ವರಿತಗತಿಯಲ್ಲಿ ಬೆಳವಣಿಗೆ ಹೊಂದಿದವು. ಆದರೆ ಅವು ಶಿಕ್ಷಣದ ಮಾರಾಟ ಮನೋಭಾವನೆ ಬೆಳಸಿಕೊಂಡವು. ಬಹಳಷ್ಟು ಶಿಕ್ಷಣ ಸಂಸ್ಥೆಗಳು ಹಣಕ್ಕೆ ಮಾನ್ಯತೆ ನೀಡುತ್ತಿವೆ. ನಗರವನ್ನು ಯಾವುದೇ ಮುಖ್ಯರಸ್ತೆಗಳಿಂದ ಸಂಪರ್ಕಿಸಿದರೂ ದೊಡ್ಡ ದೊಡ್ಡ ಶಿಕ್ಷಣ ಸಂಸ್ಥೆಗಳಿಂದ ಸ್ವಾಗತ ಸಿಗುತ್ತದೆ. ಅಂದು ಗಿರಣಿಗಳ ಸೈರನ್‌ಗಳು (ಕರೆಗಂಟೆ) ಜನರನ್ನು ಎಬ್ಬಿಸುತ್ತಿದ್ದರೆ ಇಂದು ಶಿಕ್ಷಣ ಸಂಸ್ಥೆಗಳು ಜನರನ್ನು ಎಚ್ಚರಿಸುತ್ತಿವೆ. ಉದ್ಯೋಗ ಕಳೆದುಕೊಂಡು ಕಾರ್ಮಿಕರಲ್ಲಿ ಕೆಲವರಿಗೆ ಈ ಸಂಸ್ಥೆಗಳು ಉದ್ಯೋಗ ನೀಡುವುದಲ್ಲದೆ, ಅವರ ಮಕ್ಕಳಿಗೆ ಶಿಕ್ಷಣವನ್ನು ನೀಡುತ್ತಿವೆ. ಅಂತೂ ಮ್ಯಾಂಚೆಸ್ಟರ್ ನಗರವೆನಿಸಿದ ದಾವಣಗೆರೆ ನಗರ ಆಕ್ಸ್‌ಫರ್ಡ್ ಎನಿಸಿಕೊಂಡು ರಾಜ್ಯದಲ್ಲಿ ಗುರುತಿಸಬಹುದಾದ ಸ್ಥಾನ ಪಡೆದುಕೊಂಡಿದ್ದು ಒಂದಡೆಯಾದರೆ, ಮತ್ತೊಂದೆಡೆ ವ್ಯಾಪಾರ ಮನೋಭಾವ ಬಿಡದಿದ್ದದ್ದು ಮತ್ತೊಂದೆಡೆಯಾಗಿದ್ದೇ ಮುಖ್ಯ ವಿಷಯವಾಗಿದೆ.

ಮಹಿಳಾ ಕಾರ್ಮಿಕ ಸ್ಥಿತಿ-ಗತಿಗಳು

ನಗರದ ಹತ್ತಿಗಿರಣಿಗಳಲ್ಲಿ ಮಹಿಳಾ ಕಾರ್ಮಿಕರು ಗಮನಾರ್ಹವಾದ ಪಾತ್ರವಹಿಸಿದ್ದರು. ಗಿರಣಿಗಳ ಅವನತಿಯೆಂಬ ದುರಂತದಿಂದ ಮಹಿಳಾ ಕಾರ್ಮಿಕರಾದರೂ ನೆಮ್ಮದಿಯಾಗಿದ್ದಾರೆ ಎಂದು ನೋಡಿದರೆ ಅವರ ಪರಿಸ್ಥಿತಿಯೂ ಆಶಾದಾಯಕವಾಗಿಲ್ಲ. ಕುಟುಂಬ ಸಲಹುವ ಜವಾಬ್ದಾರಿಯ ಜೊತೆಗೆ ವೈಪರೀತ್ಯಗಳಿಂದ ಕೂಡಿರುವ ಆರ್ಥಿಕಸ್ಥಿತಿಯ ಆತಿಥ್ಯವನ್ನು ಪಡೆಯುತ್ತಿದ್ದಾಳೆ. ಮದ್ಯಪಾನ ವ್ಯಸನಿಗಳೇ ಹೆಚ್ಚಾಗಿರುವ (೬೦.೪೮%) ಕಾರ್ಮಿಕ ವರ್ಗದಲ್ಲಿ ಮಹಿಳೆ ಹೆಚ್ಚು ಜವಾಬ್ದಾರಿಯನ್ನೇ ನಿಭಾಯಿಸಬೇಕಾಗಿದೆ. ಮಹಿಳಾ ಕಾರ್ಮಿಕರನ್ನು ಸಂಪರ್ಕಿಸಿದಾಗ ಗಂಡ ಸತ್ತು ಬರೇ ಹೆಣ್ಣುಮಕ್ಕಳಿದ್ದು ಅಂಥ ಮಕ್ಕಳ ಜವಾಬ್ದಾರಿ ಹೊತ್ತಿರುವವರೂ ಇದ್ದಾರೆ. ಚಂದ್ರೋದಯ ಹತ್ತಿಗಿರಣಿಯಲ್ಲಿ ದುಡಿಯುತ್ತಿದ್ದ ನಾಗಮ್ಮ ಎಂಬ ಮಹಿಳೆ ಒಂದು ಕಾಲದಲ್ಲಿ ದೇಶದ ಆರ್ಥಿಕ ಪ್ರಗತಿಗೆ ಕೈ ಜೋಡಿಸಿದ್ದು, ಇಂದು ನಗರದ ಬಸ್ ನಿಲ್ದಾಣದಲ್ಲಿ ಶೇಂಗಾಬೀಜ/ಕಾಯಿ ಮಾರಿ ಅಲ್ಲೇ ಮಲಗುತ್ತಿದ್ದಾರೆ. ಆ ಸ್ಥಿತಿಗೆ ಆಕೆಯ ಗಂಡುಮಕ್ಕಳ ನಿರ್ಲಕ್ಷ್ಯವೇ ಕಾರಣವೆಂದು ತಿಳಿದು ದುಃಖವೆನಿಸುತ್ತದೆ. ಮಹಿಳಾ ಕಾರ್ಮಿಕರು ಜೋಳದರೊಟ್ಟಿ ಮಾರಿಕೊಂಡು, ಮನೆಗೆಲಸ ಮಾಡಿಕೊಂಡು ಜೀವನವನ್ನು ಸಾಗಿಸುತ್ತಿದ್ದಾರೆ ಎಂದು ದಾವಣಗೆರೆ ಹತ್ತಿಗಿರಣಿಯ ಮಹಿಳಾ ಕಾರ್ಮಿಕ ಮುಖಂಡರಾದ ಜಾಹಿರಾಬಿಯವರು ಸ್ಪಷ್ಟಪಡಿಸುತ್ತಾರೆ. ಕೆಲವೇ ಪುರುಷ ಕಾರ್ಮಿಕರು ಸಮಾಜ ವಿರೋಧಿ ಚಟುವಟಿಕೆಗಳಲ್ಲಿ ತೊಡಗಿರುವುದಕ್ಕೆ ಪೊಲೀಸ್ ದಾಖಲಾತಿಗಳಿದ್ದರೆ, ಮಹಿಳೆಯರ ಅಂಥ ಚಟುವಟಿಕೆಗಳ ಬಗ್ಗೆ ಯಾವುದೇ ಪೊಲೀಸ್ ದಾಖಲಾತಿಗಳು ದೊರೆತಿರುವುದಿಲ್ಲ. ಕ್ಷೇತ್ರಕಾರ್ಯ ಸಂದರ್ಭದಲ್ಲಿ ಆರ್ಥಿಕ ದುಸ್ಥಿತಿಯ ಹಿನ್ನೆಲೆಯಲ್ಲಿ ಕೆಲ ಮಹಿಳೆಯರು

ವೇಶ್ಯಾವೃತ್ತಿ ಹಿಡಿದಿರುವುದು ಸೂಕ್ಷ್ಮವಾಗಿ ತಿಳಿದುಬರುತ್ತದೆ. ಕೆಲ ಕಾರ್ಮಿಕರು ಇಂತಹ ಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಲು ನಿರಾಕರಿಸುತ್ತಿರುವುದು ಅವರು ಆತ್ಮಗೌರವವನ್ನು ಕಾಪಾಡಿಕೊಳ್ಳಲು ಯತ್ನಿಸುತ್ತಿದ್ದಾರೆಂಬುದು ಸ್ಪಷ್ಟಪಡುತ್ತದೆ.

ಸಂಘಟನೆಗಳ ಪಾತ್ರ ಮತ್ತು ಸ್ಥಿತಿ-ಗತಿ

ಕಾರ್ಮಿಕರ ಚಳವಳಿಯಲ್ಲಿ ಗಣನೀಯ ಪಾತ್ರವಹಿಸಿದ್ದ ಸಂಘಟನೆಗಳು ಗಿರಣಿಗಳು ಅವನತಿಯತ್ತ ತೆರಳುವಾಗ ಕೈಗೊಂಡ ಕ್ರಮಗಳೇನೆಂದು ಪರಿಶೀಲಿಸುವುದು ಸಂದರ್ಭೋಚಿತವಾಗಿದೆ. ಗಿರಣಿಗಳ ಪತನಾನಂತರ ಪರಿಹಾರ ಪಡೆದುಕೊಳ್ಳುವಲ್ಲಿ ಸಂಘಟನೆ ಸಹಕರಿಸಿಲ್ಲವೆಂದು (೫೧.೫೫%) ಹೆಚ್ಚಿನ ಕಾರ್ಮಿಕರ ಅಭಿಪ್ರಾಯವಾದರೆ, ಕೆಲವರು (೪೮.೪೫%) ಸಹಕರಿಸಿದೆ ಎಂಬ ಮಾಹಿತಿ ನೀಡುತ್ತಾರೆ. ಈ ಅಂಶವನ್ನು ಗಮನಿಸಿದರೆ, ಸಂಘಟನೆ ತನ್ನ ಸದಸ್ಯರನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿಲ್ಲ, ಹಾಗೂ ಸಂಪೂರ್ಣ ಸಹಕರಿಸಿಲ್ಲ ಎಂಬ ಸ್ಪಷ್ಟ ಚಿತ್ರಣ ಸಿಗುತ್ತದೆ. ದಾವಣಗೆರೆ ನಗರದ ಕಾರ್ಮಿಕ ಸಂಘಟನೆ, ಚಳವಳಿ ಎಂದರೆ ರಾಷ್ಟ್ರ, ರಾಜ್ಯ ಮಟ್ಟದಲ್ಲಿ ಗುರುತಿಸುವಂತಾಗಿದೆ. ಇದು ನಿರ್ಣಾಯಕ ಹಂತ ತಲುಪಿದ್ದು, ಅವನತಿ ಹಂತದಲ್ಲಿ ಸಂಪೂರ್ಣವಾಗಿ ಸಹಕರಿಸದೇ ಇದ್ದುದು ದುರ್ದೈವ. ಸಂಘಟನೆಗೆ ಬಲವನ್ನು ತಂದುಕೊಟ್ಟಿದ್ದ, ಅದನ್ನೇ ನಂಬಿದ್ದ ಸದಸ್ಯರನ್ನು ನಡುನೀರಿನಲ್ಲಿ ಕೈಬಿಡಬಾರದು. ಅವರನ್ನು ದಡ ತಲುಪಿಸುವ ಅದು ಕ್ರಮವನ್ನು ಸಂಘಟನೆ ಕೈಗೊಳ್ಳಲೇಬೇಕು.

ಕಾರ್ಮಿಕರ ಕಡೆಗೆ ಸಂಘಟನೆ ಸಂಬಂಧ ಹೀಗಿದ್ದರೆ, ಸಂಘಟನೆಯ ದೃಷ್ಟಿಯಲ್ಲಿ ಕಮ್ಯೂನಿಸ್ಟ್ ಕೋಟೆಯಾಗಿದ್ದ ದಾವಣಗೆರೆ ನಗರದಲ್ಲಿ ೧೯೯೦ರ ವೇಳೆಗೆ ಭಾರತೀಯ ಮಜ್ದೂರ್ ಸಂಘ (ಬಿ.ಎಂ.ಎಸ್.) ಪ್ರವೇಶ ಪಡೆಯಿತು. ಇದರಿಂದ ಭಾರತೀಯ ಕಮ್ಯುನಿಸ್ಟ್ ಪಕ್ಷದ (ಸಿ.ಪಿ.ಐ.) ಬಲ ಕಡಿಮೆಯಾಯಿತಲ್ಲದೆ, ಮೊದಲಿದ್ದ ಶಕ್ತಿಯನ್ನು ಕಳೆದುಕೊಂಡಿತು. ಭಾರತೀಯ ಕಮ್ಯುನಿಸ್ಟ್ ಪಕ್ಷದ ಕೋಟೆಯಾದ ಈ ನಗರದಲ್ಲಿ ಸಂಘಟನೆಗಳೆರಡಾದಾಗ ಸಹಜವಾಗಿ ಪೈಪೋಟಿ ಆರಂಭವಾಯಿತು.

ಅಸ್ತಿತ್ವ ಉಳಿಸಿಕೊಂಡಿರುವ ಹತ್ತಿಗಿರಣಿ ಮತ್ತು ಇತರೆ ಕೈಗಾರಿಕೆಗಳ ಕಾರ್ಮಿಕರು ಸಂಘಟನೆಯತ್ತ ತೆರಳಲು ಕಾಲ ಪಕ್ವವಾಗಿಲ್ಲ. ಇಂಥ ವಾತಾವರಣದಲ್ಲಿ ಸಂಘಟನೆಗಳ ಮುಂದೆ ದೊಡ್ಡ ಸವಾಲಿದೆ. ಇಂದಿನ ಸ್ಪರ್ಧಾಜಗತ್ತಿಗೆ, ಜಾಗತೀಕರಣಕ್ಕೆ ಹೊಂದಿಕೊಳ್ಳುವ ಚಳವಳಿ ರೂಪಿಸಬೇಕು. ಬಂಡವಾಳಶಾಹಿ ವ್ಯವಸ್ಥೆ ಪುನಃ ಮಹತ್ವ ಪಡೆದುಕೊಳ್ಳುತ್ತಿದೆ. ಈ ವಾತಾವರಣ ಮುಂದೊಂದು ಕ್ರಾಂತಿಗೆ ಎಡೆಮಾಡಿಕೊಡಬಹುದು. ಅಲ್ಲಿಯವರೆಗೂ ತೀವ್ರ ಸ್ವರೂಪದ ಘರ್ಷಣೆಗಳಿಗೆ ಆಸ್ಪದ ನೀಡದೆ, ಪರಸ್ಪರ ಮಾತುಕತೆ, ಹೊಂದಾಣಿಕೆಗಳ ಮೂಲಕ ಸಮಸ್ಯೆ ಪರಿಹಾರಕ್ಕೆ ಮಹತ್ವ ನೀಡುವುದು ಅಗತ್ಯವಾಗಿದೆ. ಇಂಥ ಪ್ರಯತ್ನಗಳಿಂದ ಮುಂದೆ ಫಲಸಿಕ್ಕಿ, ಹಿಂದಿನ ತಪ್ಪು ಹೆಜ್ಜೆಗಳನ್ನು ವಿಮರ್ಶೆಗೊಳಪಡಿಸಿ, ಛಲದ ನೆರಳಿನಲ್ಲಿ ತನ್ನ ಬಲವನ್ನು ಅರಳಿಸಬೇಕಾಗಿದೆ.

ಆರೋಗ್ಯದ ಮೇಲಾದ ಪರಿಣಾಮಗಳು

"ಆರೋಗ್ಯವೇ ಭಾಗ್ಯ" ಎಂಬ ಅನುಭವದ ಮಾತು ಸುಳ್ಳಲ್ಲ. ಆರೋಗ್ಯ ಹದಗೆಡುವಂತಹ ವಾತಾವರಣದಲ್ಲಿ ಸದಾ ಕಾರ್ಯಪ್ರವೃತ್ತರಾಗಿದ್ದ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ಆರೋಗ್ಯಭಾಗ್ಯದಿಂದ ವಂಚಿತರಾಗಿರುತ್ತಾರೆ. ಹದಗೆಟ್ಟ ಆರ್ಥಿಕ ಪರಿಸ್ಥಿತಿಯಲ್ಲಿ ಇತ್ತ ಆಸ್ಪತ್ರೆಗೆ ತೆರಳಲು ಹಣವಿಲ್ಲ ಅತ್ತ

ಹಿಂದಿದ್ದ ಇ.ಎಸ್.ಐ. ಆಸ್ಪತ್ರೆ ಸೌಲಭ್ಯವೂ ಇಲ್ಲದೆ ಅತಂತ್ರದಲ್ಲಿದ್ದಾರೆ. ಉದ್ಯೋಗದಲ್ಲಿ ನಿರತರಾಗಿದ್ದಾಗ ಪಡೆಯುತ್ತಿದ್ದ ಇ.ಎಸ್.ಐ. ಸೌಲಭ್ಯದಿಂದ ಹೊರಗುಳಿಯುವುದು ನಿಯಮ. ಈ ಸೌಲಭ್ಯವು ವಂತಿಕೆ ಆಧಾರದ ಮೇಲಿದ್ದು ಪಾವತಿ ನಿಂತನಂತರ ಸೌಲಭ್ಯವೂ ಅಂತ್ಯಗೊಳ್ಳುತ್ತದೆ. ಹೀಗೆ ಗಿರಣಿ ಕಾರ್ಮಿಕರು ಇಳಿವಯಸ್ಸಿನಲ್ಲಿ ಇತ್ತ ಕೆಲಸವಿಲ್ಲದೆ, ಅತ್ತ ಆಸ್ಪತ್ರೆಗೆ ತೆರಳಲಾರದೆ ತೊಂದರೆಯಲ್ಲಿದ್ದಾರೆ.

ಪ್ರಜಾಸರ್ಕಾರದ ವ್ಯವಸ್ಥೆಯಲ್ಲಿ ಪ್ರಜೆಗಳ ರಕ್ಷಣೆ ಸರ್ಕಾರದ ಹೊಣೆಯಲ್ಲವೆ?. ಈ ಹಿನ್ನೆಲೆಯಲ್ಲಾದರೂ ಕಾರ್ಮಿಕರು ಹೊಸ ವ್ಯವಸ್ಥೆಗೆ ಹೊಂದಿಕೊಳ್ಳುವವರೆಗೂ, ಕಾರ್ಡುದಾರರಿಗೆ ಇ.ಎಸ್.ಐ. ಸೌಲಭ್ಯವನ್ನು ಕನಿಷ್ಟ ೧ ವರ್ಷದ ಅವಧಿಗಾದರೂ ಮುಂದುವರೆಸಬೇಕಾಗಿತ್ತು. ಈ ಎಲ್ಲಾ ಅವಾಂತರಗಳಿಗೆ ಭವಿಷ್ಯತ್ತಿನ ಬಗ್ಗೆ ಆಲೋಚನೆಯಲ್ಲಿನ ಕೊರತೆಯು ಕಾರಣವಾಗಿದೆ. ಈ ಕೊರತೆಯ ಫಲ ಉಣ್ಣುವ ಕಾರ್ಮಿಕರಿಗೆ ಮುಂದೆ ಸರ್ಕಾರ ಇಂಥ ಕ್ರಮ ಕೈಗೊಳ್ಳುವುದು ಸೂಕ್ತವೆನಿಸುತ್ತದೆ.

ದಾವಣಗೆರೆ ನಗರದ ಕಾರ್ಮಿಕರು ರಾಜಕೀಯವಾಗಿ ಅಧಿಕಾರಪಡೆದುಕೊಂಡ ಕಾಲವೊಂದಿತ್ತು. ಆದರೆ ಇಂದು ಬೇರೆ ರಾಜಕೀಯ ಪಕ್ಷಗಳಿಗೆ ತನ್ನ ಸಹಾಯಹಸ್ತ ನೀಡುತ್ತಾ, ಚರಿತ್ರೆಯ ಪುಟಗಳನ್ನು ಸ್ಮರಿಸುತ್ತಾ ಮುನ್ನಡೆದಿದೆ. ಮಾರ್ಕ್ಸ್ ಕೂಡ ಅಭಿಪ್ರಾಯಪಡುವಂತೆ ಸಾಮಾಜಿಕ ಸ್ಥಾನಮಾನ ಪಡೆದುಕೊಳ್ಳಲು, ಆರ್ಥಿಕ ಹೋರಾಟಗಳು ಅನಿವಾರ್ಯ. ಈ ಹಿನ್ನೆಲೆಯಲ್ಲಿ ಇಲ್ಲಿನ ಕಾರ್ಮಿಕರನ್ನು ಗಮನಿಸಿದಾಗ ಅವರ ಆರ್ಥಿಕ ಅಸ್ಥಿರತೆಯಿಂದ ತಮ್ಮನ್ನು ಸಾಮಾಜಿಕವಾಗಿ ಗುರುತಿಸಿಕೊಳ್ಳಲಾಗುತ್ತಿಲ್ಲ.

ದಂಡನಾರ್ಹವಾದ ಪ್ರಕರಣಗಳು

ಮೇಲಿನಂತೆ ಕಾರ್ಮಿಕರ ಸ್ಥಿತಿ-ಗತಿಗಳ ಚಿತ್ರಣವನ್ನು ಗಮನಿಸಿದಾಗ ಉದ್ಯೋಗ ಕಳೆದುಕೊಂಡಿರುವವರು ಅವರೇನಾದರೂ ದಂಡನಾರ್ಹವಾದ ತಪ್ಪುಗಳನ್ನು ಮಾಡುತ್ತಿದ್ದಾರೆಯೆ? ಎಂದು ಚರ್ಚಿಸುವುದು ಸೂಕ್ತ. ಪೊಲೀಸ್ ದಾಖಲಾತಿಗಳನ್ನು ಗಮನಿಸಿದಾಗ ಕಾನೂನಿನ ಪ್ರಕಾರ ದಂಡನಾರ್ಹವಾದ ತಪ್ಪುಗಳನ್ನು ಮಾಡುತ್ತಿರುವುದು ಕಂಡುಬರುತ್ತದೆ. ಕ್ಷೇತ್ರಕಾರ್ಯದ ಮಾಹಿತಿಯಂತೆ ಕಾರ್ಮಿಕರಿಂದ ಅಪರಾಧಗಳು (೬೨.೨೦%) ಹೆಚ್ಚಾಗುತ್ತಿವೆ ಎಂದು ಸ್ಪಷ್ಟಪಡುತ್ತದೆ. ಹಲವು ಕಾರ್ಮಿಕರು (೩೭.೮೦%) ಈ ಅಭಿಪ್ರಾಯವನ್ನು ತಿರಸ್ಕರಿಸುತ್ತಾರೆ. ಗಿರಣಿಗಳು ಕಾರ್ಯನಿರತವಾಗಿದ್ದಾಗಿನ ಹಾಗೂ ನಂತರದ ಪೊಲೀಸ್ ದಾಖಲಾತಿಗಳನ್ನು ಪರಿಶೀಲಿಸಿದಾಗ ದಂಡನಾರ್ಹವಾದ ಘಟನೆಗಳು ಹೆಚ್ಚುತ್ತಿವೆ ಎಂದು ದೃಢಪಡುತ್ತದೆ.

ಪೊಲೀಸ್ ದಾಖಲಾತಿಯಂತೆ ಕಾರ್ಮಿಕರು ಶಿಕ್ಷಾರ್ಹ ಕೃತ್ಯಗಳಲ್ಲಿ ತೊಡಗಿರುವ ಪ್ರಮಾಣವನ್ನು ಈ ಕೆಳಗಿನಂತೆ ಗುರುತಿಸಬಹುದು. ಅದರಂತೆ ೧೯೯೬ರಲ್ಲಿ ೨ ಬೆದರಿಕೆ ಒಡ್ಡುವ ಕೇಸು, ೧೯೯೭ರಲ್ಲಿ ೨ ಜೂಜಾಟದ ಕೇಸು, ೧೯೯೮ರಲ್ಲಿ ೩ ದೊಂಬಿ ಕೇಸುಗಳು, (೧೯೯೯-ರಲ್ಲಿ ಇರುವುದಿಲ್ಲ) ೨೦೦೦ರಲ್ಲಿ ೧ ನಕಲಿ ತಂಪು ಪಾನೀಯ ತಯಾರಿಸುವ ಕೇಸು, ೨೦೦೧ರಲ್ಲಿ ೧ ಹಾಗೂ ೨೦೦೨ರಲ್ಲಿ ೨ ಜೂಜಾಟದ ಕೇಸುಗಳು ವಿವಿಧ ಗಿರಣಿ ಕಾರ್ಮಿಕರ ಹೆಸರಿನಲ್ಲಿ ದಾಖಲಾಗಿರುವುದು ಕಂಡುಬರುತ್ತದೆ. ಮೇಲ್ಕಂಡ ಶಿಕ್ಷಾರ್ಹ ಕೃತ್ಯಗಳಿಗೆ ದಂಡ ತೆತ್ತಿರುವ ಮಾಹಿತಿಯು ದಾವಣಗೆರೆ ನಗರದ ಕೆ.ಟಿ.ಜಂಬಣ್ಣಾ ನಗರದ ಪೊಲೀಸ್ ಠಾಣೆಯ 'ಕ್ರೈಂ ಕೀ' (೧೯೯೬ ರಿಂದ ೨೦೦೨) ಪುಸ್ತಕಗಳಿಂದ ತಿಳಿದುಬರುತ್ತದೆ.

ಈ ಎಲ್ಲಾ ಘಟನೆಗಳಿಗೂ ಕಾರಣಗಳೇನೆಂದು ವಿಷಾದದಿಂದಲೇ ಹೇಳಬೇಕಾಗುತ್ತದೆ. "ಬಡತನವೇ -ಕ್ರಾಂತಿ ಹಾಗೂ ಅಪರಾಧಿಗಳ ತಾಯಿ-ತಂದೆ" ಎಂಬ ಅರಿಸ್ಟಾಟಲ್‌ನ ಅಭಿಪ್ರಾಯವನ್ನು ಉದಾಹರಿಸಲೇ ಬೇಕಾಗುತ್ತದೆ. ಕೆಲಸ ಕಳೆದುಕೊಂಡ ಕಾರ್ಮಿಕರ ಗಿರಣಿಗಳ ಸದ್ದು ಶಾಂತವಾದರೆ, ಅವರ ತುತ್ತಿನ ಚೀಲದ ಸದ್ದು ಶಾಂತವಾಗಬೇಕಲ್ಲ. ಅದು ತನ್ನ ಸದ್ದನ್ನು ನಿಲ್ಲಿಸಬೇಕಾದರೆ ಅದರ ಅಗತ್ಯಗಳನ್ನು ಪೂರೈಸಬೇಕಲ್ಲವೆ? ಈ ನಿಟ್ಟಿನಲ್ಲಿ ಯಾವುದೋ ಒಂದು ವೃತ್ತಿ ಅನಿವಾರ್ಯವಾಯಿತು. ಒಂದು ನಿರ್ದಿಷ್ಟ ಆಯವ್ಯಯಕ್ಕೆ ಹೊಂದಿಕೊಂಡಿದ್ದ ಇವರು ಕೆಲಸವಿಲ್ಲದೆ ಗಳಿಕೆ ನಿಂತಾಗ, ತಮ್ಮ ಜೀವನ ನಿರ್ವಹಣೆ ನಿಲ್ಲಿಸಲು ಸಾಧ್ಯವಿಲ್ಲ. ಇಂಥ ಬಡತನ ಅವರನ್ನು ಅಪರಾಧಗಳತ್ತ ಕೊಂಡೊಯ್ಯುತ್ತಿದೆ. ಈ ಹಿನ್ನೆಲೆಯಲ್ಲಿ ಅರಿಸ್ಟಾಟಲ್‌ನ ಅಭಿಪ್ರಾಯ ಅರ್ಥಪೂರ್ಣ ಮತ್ತು ಸಂದರ್ಭೋಚಿತವಾಗಿದೆ. ಅವನತಿ ಎಂಬ ಅನಿವಾರ್ಯ ಘಟನೆ ಈ ಎಲ್ಲ ಅನಾಹುತಗಳಿಗೆ ಕಾರಣವಾಗಿದೆ.

ಆದರೆ ದಾವಣಗೆರೆ ಕಾರ್ಮಿಕರ ಅಪರಾಧಗಳನ್ನು, ಇತರೆ ನಗರಗಳಿಗೆ ಹೋಲಿಸಿದಾಗ ಅವರ ಕೃತ್ಯಗಳು ನಗಣ್ಯವೆನಿಸುತ್ತವೆ. ರಾಷ್ಟ್ರೀಯ ಅಪರಾಧ ದಾಖಲೆಗಳ ಮಂಡಲಿಯ ಅಂಕಿ ಸಂಖ್ಯೆಗಳ ಪ್ರಕಾರ ಬೆಂಗಳೂರು ನಗರದಲ್ಲಿ ೨೦೦೧-೦೩ರ ಅವಧಿಯಲ್ಲಿ ಏರುತ್ತಿರುವ ಅಪರಾಧಗಳ ಸಂಖ್ಯೆಯಂತೆ ದಾವಣಗೆರೆ ನಗರದಲ್ಲಾಗಿಲ್ಲ. ಅಲ್ಲಿನ ಅಪರಾಧಗಳು ಕೊಲೆ, ಸುಲಿಗೆ, ದರೋಡೆ, ಡಕಾಯಿತಿ ಸ್ವರೂಪ ಪಡೆದಿವೆ ಹಾಗೂ ಅಂಥ ಕೃತ್ಯಗಳಲ್ಲಿ ಕೆಲಸ ಕಳೆದುಕೊಂಡವರು ಮಾತ್ರವಿಲ್ಲ. ಆದರೆ ದಾವಣಗೆರೆ ನಗರದ ಕಾರ್ಮಿಕರ ಅಪರಾಧಗಳ ಪಟ್ಟಿಯನ್ನು ಪರಿಶೀಲಿಸಿದರೆ ಅಂಥ ತೀವ್ರ ಸ್ವರೂಪದ ಅಪರಾಧಗಳೆನ್ನುವ ಉದಾಹರಣೆಗಳಿಲ್ಲ. ಸಾವಿರಾರು ಕಾರ್ಮಿಕರು ತೊಂದರೆಯಲ್ಲಿ ಸಿಲುಕಿದಾಗ, ಇತರೆ ನಗರಗಳಿಗೆ ಹೋಲಿಸಿದರೆ ಈ ಎಲ್ಲಾ ಅಪರಾಧಗಳೂ ನಗಣ್ಯವೆನಿಸುತ್ತದೆ.

ಮಾಲೀಕರ ಸ್ಥಿತಿ-ಗತಿಗಳು

ಕಾರ್ಮಿಕರ ಸ್ಥಿತಿ-ಗತಿಗಳು ಹೀಗಿದ್ದರೆ ಅಳಿದ ಗಿರಣಿಗಳ ಮಾಲೀಕರ ಸ್ಥಿತಿಗಳು ಹೇಗಿವೆ? ಎಂದು ಗಮನಿಸುವುದು ಅರ್ಥಪೂರ್ಣ. ಅಳಿದಿರುವ ಗಿರಣಿಗಳ ಮಾಲೀಕರೂ ಸಹಾ ಮತ್ತೊಂದೆಡೆ ಬಂಡವಾಳ ತೊಡಗಿಸಿ ಕಮರಿದ ಕೈಗಾರಿಕಾ ರಂಗವನ್ನು ಅಭಿವೃದ್ಧಿಪಡಿಸಿಲ್ಲ. ಶಂಕರ್ ಮತ್ತು ಸಿದ್ದೇಶ್ವರ ಗಿರಣಿ ನಡೆಸುತ್ತಿದ್ದ ಗುಂಡಿ ಮನೆತನದ ಬಹುಜನರು ನಗರ ಬಿಟ್ಟು ಹುಬ್ಬಳ್ಳಿಯಲ್ಲಿ ನೆಲೆಸಿದ್ದಾರೆ. ಹಾಗೆಯೇ ಚಿಗಟೇರಿ ಗಿರಣಿಯ ಚಿಗಟೇರಿ ಮನೆತನದವರು ಬೆಂಗಳೂರು ನಗರದಲ್ಲಿ ವಾಸಿಸುತ್ತಿದ್ದಾರೆ. ಈ ಮನೆತನಗಳ ಆರ್ಥಿಕ ಸ್ಥಿತಿ-ಗತಿಗಳು ಉತ್ತಮವಾಗಿರುವಂತೆ ಕಂಡುಬರುತ್ತಿಲ್ಲ. ಗಿರಣಿಗಳ ಯಂತ್ರಸಾಮಾಗ್ರಿಗಳನ್ನು ಮಾರಿ ಅಲ್ಪ ಪ್ರಮಾಣದಲ್ಲಿ ಸಾಲ ಮರುಪಾವತಿಸಿದ್ದಲ್ಲದೆ, ಗಿರಣಿ ಜಾಗವನ್ನು ಮಾರಿ ಕಾರ್ಮಿಕರಿಗೆ ಪರಿಹಾರ ನೀಡಿದ್ದೇವೆ. ಆದರೂ ಸಹಾ ಕೆಲ ಕಾರ್ಮಿಕರು ಮಾಲೀಕರ ಮನೆ ಮುಂದಿನ ಮ್ಯಾನ್‌ಹೋಲ್‌ಗಳನ್ನು ತೆರವುಗೊಳಿಸಿ, ಪ್ರತಿಭಟನೆಯಲ್ಲಿ ತೊಡಗುತ್ತಿದ್ದರು. ಇಂಥ ಘಟನೆಗಳಿಂದ ಬೇಸತ್ತು ಗಿರಣಿಗಳ ಮಾಲೀಕರು ನಗರ ಬಿಡುವ ಪ್ರಯತ್ನಮಾಡಿದ್ದಾರೆಂದು ಈ ಮನೆತನದ ಮೂಲಗಳಿಂದ ತಿಳಿದುಬರುತ್ತದೆ. ಸಾಕಷ್ಟು ನೊಂದಿರುವ ಮಾಲೀಕರಲ್ಲಿ ಹೆಚ್ಚಿನವರು ಗಿರಣಿ ಚರಿತ್ರೆ ಹಾಗೂ ಅವರ ಇಂದಿನ ಸ್ಥಿಗತಿಗಳ ಬಗ್ಗೆ ಮಾಹಿತಿ ನೀಡಲು ಸಿದ್ಧರಿಲ್ಲ. ಅವರ ಪ್ರಕಾರ

ಕಾರ್ಮಿಕ ಸಂಘಟನೆಗಳ ತೀವ್ರ ಹೋರಾಟದ ಮನೋಭಾವ, ಮಾರುಕಟ್ಟೆಯಲ್ಲಿನ ವೈಪರೀತ್ಯಗಳು ಇಂಥ ದುಸ್ಥಿತಿಗೆ ಮೂಲವೆನ್ನುತ್ತಾರೆ.

ಈ ಎಲ್ಲಾ ಚಾರಿತ್ರಿಕ ಹಿನ್ನೆಲೆಯಲ್ಲಿ ದಾವಣಗೆರೆ ನಗರ ಕೈಗಾರಿಕಾ ಸೂರ್ಯನನ್ನು ಕಾಣುತ್ತದೆಯಾ ಎಂಬ ಪ್ರಶ್ನೆಯೂ ಕಾಡುತ್ತದೆ? ಉತ್ತರಕ್ಕಾಗಿ ಕೆಲಕಾಲ ಕಾಯಬೇಕಾಗುತ್ತದೆ. ಇಂದು ನಗರದ ಕೆಲ ವಾಣಿಜ್ಯೋದ್ಯಮಿಗಳು 'ಟೆಕ್ಸ್‌ಟೈಲ್ ಪಾರ್ಕ್' ಎಂಬ ಸಿದ್ಧ ಉಡುಪುಗಳ ಕೈಗಾರಿಕೆ ತೆರೆಯಲು ಮುಂದಾಗಿರುವುದು ಆಶಾಭಾವನೆಗಳಿಗೆ ನೀರೆರೆದಿವೆ.

ಅಂತಿಮವಾಗಿ ಕಾರ್ಮಿಕರ ಆಶಯಗಳೇನು? ಎಂದರೆ ದೊರೆಯಬೇಕಾದ ಪರಿಹಾರ ನ್ಯಾಯಬದ್ಧವಾಗಿ ದೊರೆತಿಲ್ಲ? ಆದ್ದರಿಂದ ನಮಗೆ ನ್ಯಾಯದೊರೆಯಬೇಕು ಎಂಬುದಾಗಿದೆ. ಪರಿಹಾರ ವಿತರಿಸುವಲ್ಲಿನ ತಾರತಮ್ಯದ ಬಗ್ಗೆ ಆಡಳಿತ ವರ್ಗವನ್ನು ಸಂಪರ್ಕಿಸಿದಾಗ ದೊರೆಯುವ ಚಿತ್ರವೇ ಬೇರೆಯಾಗಿದೆ. ಅವಿದ್ಯಾವಂತರೇ ಹೆಚ್ಚಾಗಿದ್ದ ಕಾರ್ಮಿಕರು ಕೆಲಸಕ್ಕೆ ಸೇರ್ಪಡೆಯಾದಾಗ ಪ್ರಾವಿಡೆಂಟ್ ಫಂಡ್ (ಇ.ಎಸ್.ಐ., ಪಿ.ಎಫ್)ಗಳಿಗೆ ದಾಖಲಾತಿ ನೀಡುವಾಗ ಪರಸ್ಪರ ತದ್ವಿರುದ್ಧವಾದ, ಭಿನ್ನವಾದ ಮಾಹಿತಿ ನೀಡಿದ್ದಾರೆ. ಈ ದ್ವಂದ್ವ ಪರಿಹಾರ ನಿರ್ಧಾರದಲ್ಲಿ ತೊಡಕಾಗಿದೆ. ಮೇಲಿನ ಸೌಲಭ್ಯಗಳು ವಂತಿಕೆ ಆಧಾರದ ಮೇಲೆ ದೊರೆಯುತ್ತವೆ. ಬಹಳಷ್ಟು ಕಾರ್ಮಿಕರು ನಿಗಧಿಪಡಿಸಿದಷ್ಟು ದಿನಗಳ ಕೆಲಸ ನಿರ್ವಹಿಸದೆ ಗೈರುಹಾಜರಾಗುತ್ತಾರೆ. ಗೈರುಹಾಜರಾಗುವುದು ಹೆಚ್ಚಾದಂತೆ ವಂತಿಕೆ ಸಲ್ಲಿಸುವ ಪ್ರಮಾಣವೂ ಕಡಿಮೆಯಾಗುತ್ತದೆ. ಈ ಎಲ್ಲಾ ಹಿನ್ನೆಲೆಯಲ್ಲಿ ಪರಿಹಾರ ಮೊತ್ತ ವ್ಯತ್ಯಾಸವಾಗಿದೆ. ಈ ಸಮಸ್ಯೆ ಪರಿಹಾರವಾಗಬೇಕಾದರೆ ಹುಟ್ಟಿದ ದಿನಾಂಕ ಮತ್ತು ಕೆಲಸಕ್ಕೆ ಸೇರಿದ ದಿನಾಂಕಗಳನ್ನು ಸ್ಪಷ್ಟವಾಗಿ ನಮೂದಿಸಬೇಕಾಗಿದೆ. ಶಿಕ್ಷಣದ ಅಭಾವ ಮುಖ್ಯವಾಗಿ ಈ ಸಮಸ್ಯೆಗೆ ಕಾರಣವಾಗಿದೆ. ಗಿರಣಿಗಳು ಆರ್ಥಿಕ ದುಸ್ಥಿತಿಯಲ್ಲಿದ್ದಾಗಲೂ ಕಾರ್ಮಿಕರು ಬೋನಸ್ ಮುಂತಾದ ಹಕ್ಕುಬದ್ಧ ಸೌಲಭ್ಯಗಳಿಗೆ ಹೋರಾಟ ಮಾಡಿದರು ಎಂಬ ಬಲವಾದ ಆರೋಪವಿದೆ. ಇಂಥ ಸಂದರ್ಭದಲ್ಲಿ ಗಿರಣಿಗಳಿಗೆ ಸರ್ಕಾರದಿಂದ ನಿರ್ದೇಶಕರೊಬ್ಬರನ್ನು ನೇಮಿಸಿ, ಕಾರ್ಮಿಕರಿಗೇ ಆಡಳಿತ ನಡೆಸುವ ಜವಾಬ್ದಾರಿಯನ್ನು ನೀಡಬೇಕಾಗಿತ್ತು. ಮುಂದಾದರೂ ಇಂಥ ಕ್ರಮ ತೆಗೆದುಕೊಂಡರೆ, ಹೇಗೆ ಗಿರಣಿಯನ್ನು ಮುನ್ನೆಡೆಸುತ್ತಾರೆ ಎಂದು ಮಾದರಿಯಾಗಬಹುದು ಹಾಗೂ ಇಂಥ ಆರೋಪಗಳಿಗೆ ಉತ್ತರ ದೊರೆಯಬಹುದು.

ಕೆಲಸ ಕಳೆದುಕೊಂಡ ಕಾರ್ಮಿಕರ ಬದುಕು ಹಸನಾಗಬೇಕಾದರೆ, ಅವರ ಕ್ಷೇಮಾಭಿವೃದ್ಧಿ ಮತ್ತು ಮಕ್ಕಳ ಶಿಕ್ಷಣಕ್ಕೆ ನೆರವು ನೀಡಬೇಕು. ಈ ನೆರವನ್ನು ಸಮಗ್ರವಾಗಿ ಸರ್ಕಾರವಾಗಲಿ ಅಥವಾ ಮಾಲೀಕರಾಗಲಿ ನೀಡುವುದು ಸಾಧ್ಯವಿಲ್ಲವೆಂಬುದು ಸತ್ಯ. ಈ ಹಿನ್ನೆಲೆಯಲ್ಲಿ ಸೇವಾನಿರತ ಕಾರ್ಮಿಕರು, ಉನ್ನತ ಹುದ್ದೆಯಲ್ಲಿರುವ ನೌಕರರು, ಕೆಲಸ ಕಳೆದುಕೊಂಡವರ 'ನಿಧಿ' ತೆರೆದು ಉದಾರ ಮನಸ್ಸಿನಿಂದ ನೆರವು ನೀಡಲು ಮುಂದಾಗಬೇಕು. ಅಂತರಾಷ್ಟ್ರೀಯ ಕಾರ್ಮಿಕ ಸಂಸ್ಥೆ (ಐ.ಎಲ್.ಓ) ಕಾರ್ಮಿಕರ ಜೀವನಮಟ್ಟ ವೃದ್ಧಿಸಲು ಶ್ರಮಿಸುತ್ತಿದೆ. ಆದರೆ ಅವನತಿಯಂತಹ ಅನಿವಾರ್ಯ ಘಟನೆ ಸಂಭವಿಸಿದರೆ ಕಾರ್ಮಿಕರನ್ನು ಹೇಗೆ ರಕ್ಷಿಸಬೇಕೆಂದು ಚರ್ಚಿಸಿ ಯೋಜನೆ ರೂಪಿಸಬೇಕು. ಈ ಸಂಬಂಧ ಹೊರೆಯಾದರೂ ಕೆಲ ಅಗತ್ಯ ಸೌಲಭ್ಯಗಳನ್ನು ೧ ರಿಂದ ೨ವರ್ಷಗಳವರೆಗಾದರೂ ವಿಸ್ತರಿಸಬೇಕು. ದೀರ್ಘಕಾಲ ಇಂಥ

ಕ್ರಮಗಳು ಸಾಧ್ಯವಿಲ್ಲವಾದರೂ ಆಕಸ್ಮಿಕ ಘಟನೆ ಎಂದು ಪರಿಗಣಿಸಿ ಕಾರ್ಮಿಕರು ಚೇತರಿಸಿಕೊಳ್ಳಲು ಅವಕಾಶ ನೀಡಬೇಕು.

ಹೀಗೆ ತೊಂದರೆಯಲ್ಲಿರುವ ಕಾರ್ಮಿಕರನ್ನು ನಗರದ ಗಣ್ಯರು, ಹಿತಚಿಂತಕರು, ಮಾನವತಾವಾದಿಗಳು ಸಭೆ, ಸಮಾರಂಭಗಳನ್ನು ನಡೆಸಿ ಅವರ ಮನಸ್ಸಿನ ಮೇಲಾಗಿರುವ ಅಘಾತದಿಂದ ಹೊರತರಲು ಯತ್ನಿಸಬೇಕಾಗಿದೆ. ಈ ಸಂದರ್ಭದಲ್ಲಿ ಮನೋಸ್ಥೈರ್ಯ ಮೊದಲ ಮೆಟ್ಟಿಲಾಗಬೇಕಾಗಿದೆ. ಗಿರಣಿಗಳಲ್ಲಿ ನಿರ್ವಹಿಸುತ್ತಿದ್ದ ಕಾರ್ಯಗಳಿಗೇ ಹೊಂದಿಕೊಂಡು ಇಂದಿನ ಸಮಾಜದ ಕಟ್ಟಡ ನಿರ್ಮಾಣ, ವಿದ್ಯುತ್ ಸಂಪರ್ಕಕಲ್ಪಿಸಲು ಅಗತ್ಯ ತರಬೇತಿಗಳು, ಸಣ್ಣ ಪ್ರಮಾಣದ ವ್ಯಾಪಾರ ಮುಂತಾದ ಕಾರ್ಯಗಳಲ್ಲಿ ಸ್ವಯಂ ಸೇವಾ ಸಂಘಗಳು, ಸರ್ಕಾರೇತರ ಸಂಸ್ಥೆಗಳು ತರಬೇತಿ ನೀಡಬೇಕು. ಹಾಗಾದರೆ ಕಾರ್ಮಿಕರಲ್ಲಿ ಮನೋಬಲ ವೃದ್ಧಿಯಾಗಿ ಬಾಹುಗಳಿಗೆ ಚೈತನ್ಯ ಸಿಗಬಹುದು. ಕಾರ್ಮಿಕರಾದರೂ ಕಷ್ಟಜೀವಿಗಳು, ಅವರು ಅನಿವಾರ್ಯತೆಯಿಂದ ಹೊರಬಂದು ಧೃತಿಗೆಡದೆ ಮುನ್ನಡೆಯಬೇಕು. ಬೃಹತ್ ಪ್ರಮಾಣದಲ್ಲಿ ಬೆಳೆಯುತ್ತಿರುವ ದಾವಣಗೆರೆ ನಗರದಲ್ಲಿ ಕಷ್ಟಪಡುವವರಿಗೆ ಅವಕಾಶಗಳಿವೆ. ಇಂಥ ಅವಕಾಶಗಳನ್ನು ಬಳಸಿಕೊಂಡು ತಮ್ಮ ಹೊಸಬಾಳನ್ನು ಕಟ್ಟಿಕೊಳ್ಳಲಿ, ಅರ್ಧಕ್ಕೆ ನಿಂತಿರುವ ಮಕ್ಕಳ ಶಿಕ್ಷಣ ಮುಂತಾದ ಯೋಜನೆಗಳು ಪೂರ್ಣಗೊಳ್ಳಲಿ ಎಂಬುದು ಆಶಯವಾಗಿದೆ. ಅಪವ್ಯಯ ಮತ್ತು ಅನುತ್ತೀರ್ಣಗೊಂಡ ಮಕ್ಕಳಿಗೆ ಭದ್ರತೆ, ಶಿಕ್ಷಣ ಸೌಲಭ್ಯವನ್ನು ಕಲ್ಪಿಸಬೇಕಾಗಿದೆ.

ಕೊನೆಟಿಪ್ಪಣಿಗಳು

೧. ಶ್ರೀ. ವಿ.ಎಸ್. ಸುಂದರಮ್, ಭಾರತದಲ್ಲಿ ಕಾರ್ಮಿಕ ಕಲ್ಯಾಣ ಸಂಸ್ಥೆಗಳು, ಮೈಸೂರು ಕಾರ್ಮಿಕ ಪತ್ರಿಕೆ, ಸೆಪ್ಟೆಂಬರ್, ೧೯೭೨, ಪುಟ. ೨೨

೨. ಶ್ರೀ ಧರ್ನಿಧರ್, ಗಣಿಕಾರ್ಮಿಕರ ಕಲ್ಯಾಣ, ಮೈಸೂರು ಕಾರ್ಮಿಕ ಪತ್ರಿಕೆ, ಏಪ್ರಿಲ್ ೧೯೭೩, ಪು.೩೪

೩. ಅದೇ

೪. ಡಾ. ಹೆಚ್.ಎಂ. ಮರುಳಸಿದ್ದಯ್ಯ (ಸಂ.), ಭಾರತ ಸಮಾಜಕಾರ್ಯ ವಿಶ್ವಕೋಶ, ೧೯೯೪, ಪುಟ.೪

೫. ಅದೇ

೬. ಅದೇ

೭. ಅದೇ

೮. ಆರ್.ಪಿ. ಸಕ್ಸೇನ, ಲೇಬರ್ ಪ್ರಾಬ್ಲಮ್ಸ್ ಅಂಡ್ ಸೋಷಿಯಲ್ ವೆಲ್‌ಫೇರ್, ೧೯೭೪, ಪುಟ. ೩೨೬

೯. ಅದೇ

೧೦. ರಿಪೋರ್ಟ್ ಆನ್ ದಿ ಅಡ್ಮಿನಿಸ್ಟ್ರೇಷನ್ ಆಫ್ ಮೈಸೂರು, ೧೯೪೧-೪೨ ಪುಟ ೭೩

೧೧. ರಿಪೋರ್ಟ್ ಆನ್ ದಿ ಅಡ್ಮಿನಿಸ್ಟ್ರೇಷನ್ ಆಫ್ ಮೈಸೂರು, ೧೯೫೧-೫೨ ಪುಟ ೧೬೨.

೧೨. ರಿಪೋರ್ಟ್ ಆನ್ ದಿ ಅಡ್ಮಿನಿಸ್ಟ್ರೇಷನ್ ಆಫ್ ಮೈಸೂರು, ೧೯೬೫-೬೬, ಪುಟ ೧೨೨

೧೩. ಕರ್ನಾಟಕ ವಿಧಾನಸಭೆ ನಡವಳಿಕೆಗಳು, ೯ನೇ ವಿಧಾನಸಭೆ ಅಧಿಕೃತವರದಿ. ಸಂಖ್ಯೆ ೨೮ (೮-ಜುಲೈ-೧೯೮೦-೧೪- ಜುಲೈ ೧೯೮೦) ಪುಟ ೫೪೪

೧೪. ಜನತಾವಾಣಿ ದಿನಪತ್ರಿಕೆ, ದಿ.೭-೧೦-೧೯೭೪, ಪು.೧

೧೫. ಅದೇ

೧೬. ಅದೇ

೧೭. ಕಾರ್ಮಿಕ ಮುಖಂಡ ಶ್ರೀ ಹೆಚ್.ಕೆ. ರಾಮಚಂದ್ರಪ್ಪನವರ ಡೈರಿಯಿಂದ, ದಿ.೧೪-೧೦-೭೭

೧೮. ದಾವಣಗೆರೆ ಟೈಮ್ಸ್ ದಿನಪತ್ರಿಕೆ, ದಿ.೩೧-೫-೧೯೯೭, ಪು ೨

೧೯. ಬಿ.ಎನ್. ಸತ್ಯನ್ (ಸಂ.), ಮೈಸೂರು ರಾಜ್ಯ ಗೆಜೆಟಿಯರ್, ಚಿತ್ರದುರ್ಗ ಜಿಲ್ಲೆ ೧೯೬೭, ಪು. ೩೬೮

೨೦. ಜನತಾವಾಣಿ ದಿನಪತ್ರಿಕೆ, ದಿ. ೪.೧೦.೧೯೭೮, ಪು. ೨

೨೧. ಕಾರ್ಮಿಕ ಮುಖಂಡ ಶ್ರೀ ಹೆಚ್.ಕೆ. ರಾಮಚಂದ್ರಪ್ಪ ನವರ ಡೈರಿಯಿಂದ, ದಿ. ೨೪.೯.೧೯೭೫

೨೨. ಆರ್.ಪಿ. ಸಕ್ಸೇನ, ಲೆಬರ್ ಪ್ರಾಬ್ಲಮ್ಸ್ ಅಂಡ್ ಸೋಷಿಯಲ್ ವೆಲ್‌ಫೇರ್, ೧೯೭೪, ಪು. ೩೧೯

೨೩. ಅದೇ-ಪು.೩೨೧

೨೪. ಸಿ.ವಿ. ರಾವ್ (ಸಂ.), ಮೈಸೂರು ಎಕಾನಾಮಿಕ್ ರಿವ್ಯೂ, ವಾಲ್ಯೂಂ ನಂ.೪, ಅಕ್ಟೋಬರ್ ೧೯೫೨, ಪುಟ ೧೨

೨೫. ಕರ್ನಾಟಕ ವಿಧಾನಸಭೆ ನಡವಳಿಕೆಗಳು, ೬ನೇ ವಿಧಾನಸಭೆ, ಅಧಿಕೃತ ವರದಿ, ಸಂ.೧೭, ೧೪ ಮೇ ೧೯೭೯-೨೧ ಮೇ ೧೯೭೯, ಪುಟ ೨೬೧

೨೬. ಪ್ರೊಸೀಡಿಂಗ್ಸ್ ಆಫ್ ದಿ ಮೈಸೂರು ಲೆಜಿಸ್ಲೇಟೀವ್ ಕೌನ್ಸಿಲ್ ಜೂನ್-ಜುಲೈ ಅಧಿವೇಶನ, ೧೯೩೭ ಪುಟ ೩೧೫

೨೭. ಬಿ.ಎನ್. ಸತ್ಯನ್ (ಸಂ.), ಮೈಸೂರು ರಾಜ್ಯ ಗೆಜೆಟಿಯರ್ ಚಿತ್ರದುರ್ಗ ಜಿಲ್ಲೆ ೧೯೬೭, ಪು. ೩೬೮

೨೮. ಜನತಾವಾಣಿ ದಿನಪತ್ರಿಕೆ, ಸಾಪ್ತಾಹಿಕ ಸಂಚಯ ದಿ.೪-೬-೨೦೦೦, ಪುಟ ೧

೨೯. ಜನತಾವಾಣಿ, ದಿನಪತ್ರಿಕೆ, ದಿ.೧೪-೧-೧೯೭೬ ಪುಟ ೧

೩೦. ಜನತಾವಾಣಿ, ದಿನಪತ್ರಿಕೆ, ದಿ.೧೮-೩-೧೯೭೬ ಪುಟ ೧

೩೧. ಅದೇ

೩೨. ಜನತಾವಾಣಿ, ದಿನಪತ್ರಿಕೆ, ದಿ.೮-೯-೧೯೭೮ ಪುಟ ೧

೩೩. ಆರ್.ಪಿ. ಸಕ್ಸೇನ, ಲೇಬರ್ ಪ್ರಾಬ್ಲಮ್ಸ್ ಅಂಡ್ ಸೋಷಿಯಲ್ ವೆಲ್‌ಫೇರ್, ೧೯೭೪, ಪುಟ. ೧೪೮

೩೪. ರೂಲ್ಸ್ ಅಂಡ್ ನೋಟಿಫಿಕೇಷನ್ ಪಬ್ಲಿಷರ್ಸ್, ಕರ್ನಾಟಕ ಸರ್ಕಾರ, ಡಿಪಾರ್ಟಮೆಂಟ್ ಆಫ್ ಫ್ಯಾಕ್ಟರೀಸ್ ಮತ್ತು ಬಾಯ್ಲರ್ಸ್, ೧೯೭೯, ಪುಟ ೩೧೭

೩೫. ಜನತಾವಾಣಿ, ಸಾಪ್ತಾಹಿಕ ಸಂಚಯ, ದಿ ೧೧-೬-೨೦೦೦, ಪುಟ ೩

೩೬. ಡಾ. ಎಂ.ಜಿ. ಈಶ್ವರಪ್ಪ (ಸಂ), ಶತಮಾನದ ದಾವಣಗೆರೆ, ೨೦೦೨ ಪುಟ ೬೯

೩೭. ಪ್ರಜಾವಾಣಿ ದಿನಪತ್ರಿಕೆ, ವಾಣಿಜ್ಯ-ಕೃಷಿ-ಪುರಾವಣಿ, ದಿ ೧೨-೫-೨೦೦೪ ಪುಟ ೧

ಅಧ್ಯಾಯ ೭

ಕಾರ್ಮಿಕರ ಕಾಯಿದೆಗಳು

ಕಾರ್ಮಿಕರ ಕಾಯಿದೆಗಳು

ಈಗಿನ ಕಾಯಿದೆ ಸ್ವರೂಪ ಪ್ರಾಚೀನ ಕಾಲದಲ್ಲಿ ನೀತಿ, ನಿಯಮ, ವಿಧಿಗೆ ಸಂವಾದಿಯಾಗಿ ಬಳಸಲಾಗಿದೆ. ಕಾಯಿದೆ ಎಂದರೇನು? ಪ್ರಾಚೀನ ಕಾಲದಿಂದಲೂ ಭಾರತೀಯರಿಗೆ ಕಾಯಿದೆಗಳ ಪ್ರಜ್ಞೆ ಇರುವ ಬಗ್ಗೆ ದಾಖಲೆಗಳಿವೆ. ವೇದಗಳ ಕಾಲದಲ್ಲಿ ಸಂಪ್ರದಾಯದ ಆಧಾರದ ಮೇಲೆ ಕಾಯಿದೆಗಳು ರಚನೆಯಾಗಿದ್ದವು. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಕಾರ್ಮಿಕರಿಗೆ ಸವಲತ್ತುಗಳನ್ನು ನೀಡಬೇಕೆಂಬುದು ಆರಂಭದ ಉಲ್ಲೇಖವಾಗಿದೆ. ಕಾಯಿದೆಗಳ ಅರ್ಥವಿವರಣೆ ಮಾಡುವ ಅಧಿಕಾರ ರಾಜನಿಗಿರುತ್ತಿತ್ತು. ವಿವಿಧ ಕಾಲಘಟ್ಟದಲ್ಲಿ ಕಾಯಿದೆಗಳ ಮೇಲೆ ಧರ್ಮದ ಪ್ರಭಾವವಿದ್ದುದು ಕಂಡುಬರುತ್ತದೆ. ಇದು ಸಾಮಾನ್ಯ ಕಾಯಿದೆಗಳ ಚರಿತ್ರೆಯಾದರೆ, ಕಾರ್ಮಿಕರಿಗೆ ಪ್ರತ್ಯೇಕ ಕಾಯಿದೆಗಳಿದ್ದದ್ದು ಗಮನಾರ್ಹ. ಕಾರ್ಮಿಕರಿಗೆ ಪ್ರತ್ಯೇಕ ಕಾಯಿದೆಯ ರಚನೆ ಬ್ರಿಟಿಷರ ಆಳ್ವಿಕೆ ಕಾಲದಲ್ಲಿ ಕಂಡುಬರುತ್ತದೆ. ಕೈಗಾರಿಕಾ ಕ್ರಾಂತಿಯಿಂದ ಬೃಹತ್ ಕೈಗಾರಿಕೆಗಳು ಜನ್ಮತಾಳಿ ಕಾರ್ಮಿಕ ವರ್ಗವೂ ಅಷ್ಟೇ ಪ್ರಮಾಣದಲ್ಲಿ ಬೆಳವಣಿಗೆ ಹೊಂದಿತು. ಅಲ್ಲಿ ಶ್ರಮಿಸುವ ಕಾರ್ಮಿಕರು ಅಮಾನವೀಯ ಸಂದರ್ಭಗಳನ್ನು, ಸುರಕ್ಷತೆಯ ಸಮಸ್ಯೆಗಳನ್ನು ಎದುರುಗೊಂಡರು.

ಇವರು ತಮ್ಮ ನೌಕರಿ ಭದ್ರವಲ್ಲ, ಸುರಕ್ಷಿತವಲ್ಲ ಎಂದು ಅರಿತಾಗ ಶ್ರದ್ಧೆಯಿಂದ, ನಿಷ್ಠೆಯಿಂದ ದುಡಿಯಲು ಸಾಧ್ಯವಾಗಲಿಲ್ಲ. ಇವರ ಭದ್ರತೆ ಖಚಿತವಾದರೆ ಕೈಗಾರಿಕಾ ಪ್ರಗತಿ ಸಾಧ್ಯವಿದೆ. ಆದ್ದರಿಂದ ಕಾರ್ಮಿಕರ ಸ್ಥಾನ ಮತ್ತು ವರಮಾನಗಳು ಏನೇ ಇರಲಿ ಅವರಿಗೆ ಸೂಕ್ತವಾದ ದುಡಿಮೆಯ ಭದ್ರತೆ ನೀಡುವುದು ಅಗತ್ಯ. ಹೊಸದಾಗಿ ಮನೆಯೊಂದನ್ನು ಕಟ್ಟಿ ವಾಸಿಸಲು ನಿರ್ಧರಿಸಿದಾಗ ಮಾತ್ರ ಅಲ್ಲಿನ ಸಮಸ್ಯೆಗಳ ಅನುಭವವಾಗುತ್ತದೆ. ಅಂತೆಯೇ ಹೊಸದಾಗಿ ಬೃಹತ್ ಪ್ರಮಾಣದಲ್ಲಿ ಹುಟ್ಟಿದ ಕೈಗಾರಿಕೆಗಳಲ್ಲಿ ಕಾರ್ಮಿಕರನ್ನು ಬಳಸುವಾಗ ಶೋಷಣೆಯ ಅನುಭವವಾಗಿದ್ದು ಸ್ಪಷ್ಟ. ಈ ಸಂದರ್ಭವು ಕಾರ್ಮಿಕರು ತಮ್ಮ ಉದ್ಯೋಗ ಭದ್ರತೆಗೆ ಕಾಯಿದೆಗಳನ್ನು ಪಡೆಯುವಂತಾಯಿತಾದರೂ, ಭಾರತದಲ್ಲಿ ಕಾರ್ಮಿಕ ಕಾಯಿದೆಗಳ ಚರಿತ್ರೆಯು ಬ್ರಿಟಿಷರ ಪ್ರಭಾವದಿಂದ ಮೊದಲುಗೊಂಡಿತು.

ಭಾರತದಲ್ಲಿ ೧೮೮೧ರಲ್ಲಿ ಕಾರ್ಖಾನೆಗಳ ಕಾಯಿದೆ ಜಾರಿಗೊಳ್ಳಲು ಬ್ರಿಟಿಷ್ ವಸಹಾತುಶಾಹಿ ನೀತಿ ಪ್ರಭಾವ ಬೀರಿತ್ತು. ತಮ್ಮ ರಾಜಕೀಯ ಸ್ಥಾನಮಾನ, ಆರ್ಥಿಕ ಶ್ರೇಯಸ್ಸಿನ ಹಿನ್ನೆಲೆಯಲ್ಲಿ ಬ್ರಿಟಿಷರು ಇಲ್ಲಿ ಕಾರ್ಮಿಕ ಕಾಯಿದೆಗಳ ಚರಿತ್ರೆ ಆರಂಭಿಸುತ್ತಾರೆ. ಪ್ರಾಚೀನತೆಯುಳ್ಳ ಭಾರತದ ಬಟ್ಟೆ ಕೈಗಾರಿಕೆ, ಗುಣಮಟ್ಟದಲ್ಲಿ ಹೆಸರುವಾಸಿಯಾಗಿತ್ತು. ಭಾರತೀಯ ಬಟ್ಟೆಗಳು ಇಂಗ್ಲೆಂಡಿನ ಲಂಕಾಷೈರ್,

ಯಾರ್ಕ್‌ಷೈರ್ ಮಾರುಕಟ್ಟೆಯಲ್ಲಿ ಉತ್ತಮ ಬೇಡಿಕೆ ಗಳಿಸಿದ್ದವು. ಆಗ ಬ್ರಿಟಿಷ್ ಕೈಗಾರಿಕೋತ್ಪನ್ನಗಳು ಮಾರುಕಟ್ಟೆ ಕಳೆದುಕೊಳ್ಳಲಾರಂಭಿಸಿದವು. ಇದೇ ಸಂದರ್ಭದಲ್ಲಿ ಲಂಕಾಷೈರ್, ಯಾರ್ಕ್‌ಷೈರ್ ಕೈಗಾರಿಕೆಗಳನ್ನು ಉಳಿಸಿಕೊಳ್ಳಲು ಬ್ರಿಟನ್ ಪಾರ್ಲಿಮೆಂಟಿನ ಮೇಲೆ ಒತ್ತಡ ಹೇರಲಾಯಿತು. ಹಾಗೆಯೆ ಬ್ರಿಟಿಷರು ಭಾರತದಲ್ಲೂ ಬಂಡವಾಳ ತೊಡಗಿಸಿ ಕೈಗಾರಿಕೆಗಳನ್ನು ಆರಂಭಿಸಿದರು. ಭಾರತದ ಬಟ್ಟೆಗಳ ಪೈಪೋಟಿಯನ್ನು ತಮ್ಮ ರಾಷ್ಟ್ರದಲ್ಲಿ ತಡೆಗಟ್ಟಲು ಅವರು ಆಲೋಚಿಸಿದ್ದು ಭಾರತೀಯ ಬಟ್ಟೆ ಕೈಗಾರಿಕೆ ಮತ್ತು ಕಾರ್ಮಿಕರತ್ತ. ಆಗ ಭಾರತದ ಬಟ್ಟೆಗಳನ್ನು ದುಬಾರಿಗೊಳಿಸಲು ಕಾರ್ಮಿಕರಿಗೆ ಸಂಬಂಧಿಸಿದ ಕಾರ್ಖಾನೆ ಕಾಯಿದೆ ಜಾರಿಗೊಳಿಸಿದರು.

ಕಾರ್ಖಾನೆ ಕಾಯಿದೆಯಿಂದ ಕಾರ್ಮಿಕರಿಗೆ ೮ ಗಂಟೆ ದುಡಿಮೆ ಅವಧಿ, ರಾತ್ರಿವೇಳೆಯಲ್ಲಿ ಮಹಿಳೆಯರ ದುಡಿಮೆ ನಿಷೇಧ, ೮ ಗಂಟೆಗೂ ಅಧಿಕ ಕಾಲಕ್ಕೆ ದುಡಿದರೆ ಹೆಚ್ಚುವರಿ ವೇತನ ಎಂಬ ನಿಯಮಗಳ ಕಾಯಿದೆಯನ್ನು ಜಾರಿಗೊಳಿಸಿದರು. ಈ ಮೂಲಕ ಭಾರತೀಯ ಬಟ್ಟೆ ಮುಂತಾದ ಕೈಗಾರಿಕೋತ್ಪನ್ನಗಳ ಉತ್ಪಾದನಾ ವೆಚ್ಚ ಏರುವಂತೆ ಮಾಡಿ ತಮ್ಮ ಕೈಗಾರಿಕೆಗಳನ್ನು ರಕ್ಷಿಸುವ ಹಿನ್ನೆಲೆ ಇಟ್ಟುಕೊಂಡಿದ್ದರು. ಬ್ರಿಟಿಷರ ಈ ಕ್ರಮವು ಭಾರತೀಯ ಕೈಗಾರಿಕೋತ್ಪನ್ನಗಳು ಮಾರುಕಟ್ಟೆ ಕಳೆದುಕೊಳ್ಳಲು ಆಸ್ಪದವಾದರೆ, ಶೋಷಣೆಗೆ ಒಳಗಾಗಿದ್ದ ಕಾರ್ಮಿಕರಿಗೆ ವರದಾನವಾಯಿತು. ಅವರ ಈ ದುರುದ್ದೇಶದ ಕ್ರಮ ನಮ್ಮ ರಾಷ್ಟ್ರದಲ್ಲಿ ಹಲವು ಕಾರ್ಮಿಕ ಕಾಯಿದೆಗಳ ಉಗಮಕ್ಕೆ ಕಾರಣವಾಯಿತು. ಈ ಅಧ್ಯಾಯದಲ್ಲಿ ಮೂಲಭೂತವಾಗಿ ಕಾರ್ಮಿಕರ ರಕ್ಷಣೆಗೆ ನಿಂತ ಕೆಲವು ಉಪಯುಕ್ತ ಕಾಯಿದೆಗಳನ್ನು ತಕ್ಕಮಟ್ಟಿಗೆ ಅಧ್ಯಯನ ಮಾಡಲಾಗಿದೆ. ಅಂಥ ಕಾಯಿದೆಗಳು ಈ ಅಧ್ಯಯನ ಅವಧಿಯಲ್ಲಿ ಕಾರ್ಮಿಕರಿಗೆ ಸಾಂದರ್ಭಿಕವಾಗಿ ಹೇಗೆ ಸಹಕಾರಿಯಾದವು, ಅವುಗಳ ಲೋಪದೋಷಗಳೇನು ಎಂದು ಚರ್ಚಿಸುವ ಪ್ರಯತ್ನ ಮಾಡಲಾಗಿದೆ. ೧೯೨೩ರ ಕಾರ್ಮಿಕ ನಷ್ಟ ಪರಿಹಾರ ಕಾಯಿದೆಯಿಂದ ಮೊದಲುಗೊಂಡು ಒಟ್ಟು ೧೩ ಕಾಯಿದೆಗಳನ್ನು ಅಧ್ಯಯನ ಮಾಡಲಾಗಿದೆ. ಅವು ಈ ಕೆಳಗಿನಂತಿವೆ.

ಕಾರ್ಮಿಕ ನಷ್ಟ ಪರಿಹಾರ ಕಾಯಿದೆ ೧೯೨೩

ಕಾರ್ಮಿಕ ನಷ್ಟಪರಿಹಾರ ಕಾಯಿದೆಯು ಮೊದಲಬಾರಿಗೆ ೧೮೮೪ರಲ್ಲಿ ಜರ್ಮನಿಯಲ್ಲಿ ಜಾರಿಗೊಂಡಿತು. ಬಿಸ್ಮಾರ್ಕನು ಮಾರ್ಕ್ಸ್‌ನ ತತ್ವಗಳ ಹಿನ್ನೆಲೆಯಲ್ಲಿ ಈ ಕಾಯಿದೆಯನ್ನು ಜಾರಿಗೊಳಿಸಿದನು. ನಂತರ ಇಂಗ್ಲೆಂಡ್ ೧೮೯೭ರಲ್ಲೂ, ಭಾರತ ೧೯೨೩ರಲ್ಲೂ ಜಾರಿಗೆ ತಂದಿತು. ಈ ಕಾಲದಲ್ಲಿ ಭಾರತವು ಬ್ರಿಟಿಷರ ಆಳ್ವಿಕೆಗೊಳಪಟ್ಟಿದ್ದು, ಇಲ್ಲಿ ಬ್ರಿಟಿಷ್ ಕಾಯಿದೆಯ ಅನುಕರಣೆ ಇದೆ.[೧]

ಕಾರ್ಖಾನೆಗಳಲ್ಲಿ ದುಡಿಯುವ ಕಾರ್ಮಿಕರಿಗೆ ಅಪಘಾತ ಸಂಭವಿಸಿದರೆ ಅಥವಾ ಸಾವನ್ನಪ್ಪಿದರೆ ಅವಲಂಬಿತರು ಸಂಕಷ್ಟಕ್ಕೊಳಗಾಗುತ್ತಾರೆ. ಇಂಥ ಅನಾಹುತಗಳನ್ನು ನಿಯಂತ್ರಿಸಲು ನಷ್ಟಕ್ಕೊಳಗಾಗಿರುವ ಕಾರ್ಮಿಕರಿಗೆ ಪರಿಹಾರ ಒದಗಿಸುವುದು ಅವಶ್ಯವಾಗಿದೆ. ಈ ದಿಸೆಯಲ್ಲಿ ೧೯೨೩ರ ಕಾರ್ಮಿಕ ನಷ್ಟ ಪರಿಹಾರ ಕಾಯಿದೆ ದಿಟ್ಟ ಹೆಜ್ಜೆಯಾಗಿದೆ. ಕಾರ್ಮಿಕರ ಹಿತರಕ್ಷಣೆಯ ಮೂಲ ಉದ್ದೇಶದ ಕಾಯಿದೆಯು ಜುಲೈ ೧, ೧೯೨೪ರಿಂದ ಜಾರಿಗೆ ಬಂದಿದ್ದು ಇಡೀ ಭಾರತಕ್ಕೆ ಅನ್ವಯವಾಗಿದೆ.

ಕಾರ್ಮಿಕನಿಗೆ ನಷ್ಟವಾದರೆ ಕಾಯಿದೆಯಲ್ಲಿ ಪರಿಹಾರವೆಷ್ಟು? ಕಾರ್ಮಿಕರ ತಪ್ಪಿನಿಂದಲೇ ನಷ್ಟವಾದರೆ ಅವನಿಗೆ ಪರಿಹಾರಸಿಗುತ್ತದೆಯೇ ಎಂಬ ಪ್ರಶ್ನೆಗಳು ಉದ್ಭವವಾಗುತ್ತವೆ.

ಕಾರ್ಮಿಕನು ಕಾರ್ಖಾನೆಯಲ್ಲಿ ಕೆಲಸಮಾಡುವಾಗ ಅವನಿಗೆ ನಷ್ಟವಾದರೆ ಆ ನಷ್ಟವನ್ನು ಮಾಲೀಕ ಭರಿಸಬೇಕಾಗುತ್ತದೆ. ಇಲ್ಲಿ ನಷ್ಟಪರಿಹಾರದ ಮೊತ್ತ ನಿರ್ಣಯಿಸುವಾಗ ಕಾರ್ಮಿಕನ ವೇತನ ಮತ್ತು ಅಪಘಾತದ ಸ್ವರೂಪವನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತದೆ. ಪರಿಹಾರ ಮೊತ್ತವನ್ನು, ನಷ್ಟ ಪರಿಹಾರ ಕಮಿಷನರ್‌ರವರು ನಿರ್ಧರಿಸುವ ಅಧಿಕಾರ ಹೊಂದಿರುತ್ತಾರೆ. ಕಾರ್ಮಿಕರಿಗೆ ಕಮೀಷನರ್ ತೀರ್ಪು ನೀಡಿದ ೧ ತಿಂಗಳೊಳಗಾಗಿ ಪರಿಹಾರ ನೀಡಬೇಕು. ಒಂದು ವೇಳೆ ಕಾರ್ಮಿಕ ರಕ್ಷಣಾ ನಿಯಮಗಳನ್ನು ಮೀರಿ ನಡೆದುಕೊಂಡು ಅಪಘಾತ ಸಂಭವಿಸಿದರೆ ಮಾಲೀಕರು ಪರಿಹಾರ ನೀಡಬೇಕಾಗಿಲ್ಲ.

ಜಾಗತೀಕರಣ, ಖಾಸಗೀಕರಣಗಳ ಪ್ರಭಾವದಿಂದ ಕಾರ್ಮಿಕರು ಒತ್ತಡದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಒತ್ತಡದಿಂದ ಕೆಲಸ ನಿರ್ವಹಿಸಿ ಮನೆಗೆ ತೆರಳಿ ಅಲ್ಲಿ ಸಾವನ್ನಪ್ಪುವ ಸಾಧ್ಯತೆಗಳೂ ಇರುತ್ತವೆ. ಕಾರ್ಮಿಕರ ಭದ್ರತೆಯ ದೃಷ್ಟಿಯಿಂದ ವಿಶಾಲ ದೃಷ್ಟಿಕೋನವಿಟ್ಟುಕೊಂಡು ಕಾಯಿದೆಯ ವ್ಯಾಪ್ತಿಯನ್ನು ಇಂಥ ಸಂದರ್ಭಗಳಿಗೂ ವಿಸ್ತರಿಸಬೇಕಾಗಿದೆ.

ಈ ಕಾಯಿದೆಯಿಂದ ಕಾರ್ಮಿಕನಿಗೆ ಬೃಹತ್‌ಯಂತ್ರಗಳಿಂದಾಗುವ ಅಪಘಾತಗಳಿಂದ ರಕ್ಷಣೆ ದೊರೆತಿದೆ. ಉದ್ಯೋಗ ಭದ್ರತೆ ದೊರೆತ ಕಾಯಿದೆಯ ಸದುಪಯೋಗದೊಂದಿಗೆ ದುರುಪಯೋಗವೂ ಹೆಚ್ಚಾಗುವ ಸಾಧ್ಯತೆಗಳಿವೆ. ೧೯೨೩ರಲ್ಲಿ ಜಾರಿಯಾದ ಈ ಕಾಯಿದೆಯ ನಂತರ ಇ.ಎಸ್.ಐ. (೧೯೪೮) ಕಾಯಿದೆ ಜಾರಿಗೆ ಬಂದಿದ್ದರಿಂದ ಕಾರ್ಮಿಕರ ನಷ್ಟ ಪರಿಹಾರ ಕಾಯಿದೆ ಮೇಲಿನ ಒತ್ತಡ ಕಡಿಮೆಯಾಗಿದೆ. ನಷ್ಟಪರಿಹಾರ ಕಾಯಿದೆಯ ಕೆಲ ಜವಾಬ್ದಾರಿಗಳನ್ನು (ಆಸ್ಪತ್ರೆ ಸೌಲಭ್ಯ) ರಾಜ್ಯವಿಮಾ ಯೋಜನೆಯ ಕಾಯಿದೆ (ಇ.ಎಸ್.ಐ) ನೋಡಿಕೊಳ್ಳುತ್ತಿದೆ.

ಕಾರ್ಮಿಕ ಸಂಘಗಳ ಕಾಯಿದೆ ೧೯೨೬

ಸಂಘಟನಾ ಸ್ವಾತಂತ್ರ್ಯವು ಸಮಾಜದ ಬಹುಮುಖ್ಯ ಅಂಗವಾಗಿದೆ. ಈ ನಿಟ್ಟಿನಲ್ಲಿ ಕಾರ್ಮಿಕ ಸಂಘಗಳ ಕಾಯಿದೆಯು ಕಾರ್ಮಿಕ ಚಳವಳಿಯಲ್ಲಿ ಒಂದು ಮುಖ್ಯ ಘಟ್ಟವಾಗಿದೆ. ಕಾರ್ಮಿಕರು ತಮ್ಮ ಶೋಷಣೆಯ ವಿರುದ್ಧ ಸಂಘಟನಾತ್ಮಕ ಹೋರಾಟ ನಡೆಸಲು ಈ ಕಾಯಿದೆಯು ಕಾನೂನಿನ ಮುದ್ರೆಯೊತ್ತಿತು. ಶೋಷಿತ ವರ್ಗವು ತಮ್ಮ ಸ್ಥಿತಿಗತಿ ಸುಧಾರಿಸಿಕೊಳ್ಳುವ ಸಂಘಟನಾತ್ಮಕ ಹೋರಾಟ ಹೂಡಲು ಅನುವು ಮಾಡಿಕೊಟ್ಟು ಕಾರ್ಮಿಕರನ್ನು ರಕ್ಷಿಸಿತು. ಸಂಘಟನೆಯ ಮೂಲಕ ಮಾಲೀಕರ ಮುಂದೆ ಬೇಡಿಕೆ ಇಟ್ಟು ಸೂಕ್ತ ಪರಿಹಾರ ಪಡೆಯಲು ಕಾಯಿದೆಯಿಂದ ಸಾಧ್ಯವಾಗುತ್ತದೆ.

ಕಾಯಿದೆಯಲ್ಲಿ ಸಂಘದ ನೋಂದಣಿ, ಸದಸ್ಯನಾಗಲು ಅರ್ಹತೆ, ಕಾರ್ಯಕಾರಿ ಮಂಡಳಿ ನೇಮಕ, ನೋಂದಣಿ ರದ್ಧತಿ, ಹಕ್ಕುಗಳು ಮುಂತಾದ ಅಂಶಗಳಿದ್ದು, ಇಡೀ ಭಾರತಕ್ಕೆ ಅನ್ವಯವಾಗುತ್ತದೆ.

ಸಂಘಗಳನ್ನು ನೋಂದಾಯಿಸಿಕೊಳ್ಳಲೇಬೇಕೆಂಬ ಕಡ್ಡಾಯವೇನಿಲ್ಲ. ಆದರೆ ಕಾನೂನಿನಂತೆ ದೊರೆಯುವ ಸಿವಿಲ್ ಮತ್ತು ಕ್ರಿಮಿನಲ್ ಹೊಣೆಗಾರಿಕೆಯ ವಿನಾಯಿತಿಗಳು ನೋಂದಣಿ ಆಗದ

ಸಂಘಗಳಿಗೆ ದೊರೆಯುವುದಿಲ್ಲ. ೧೫ ವರ್ಷ ವಯಸ್ಸಿನವರು ಸಂಘದ ಸದಸ್ಯರಾಗಲು ಅರ್ಹರಾಗಿರುತ್ತಾರೆ.[೨] ಸಂಘವು ಸ್ಥಾಪನೆಯಾಗಲು ಕನಿಷ್ಟ ೭ಮಂದಿ ಸೇರ್ಪಡೆಯಾಗಬೇಕೆಂದು ಕಾಯಿದೆಯು ತಿಳಿಸುತ್ತದೆ. ಈ ಸಂಖ್ಯೆಯನ್ನು ಕೊನೆಯಪಕ್ಷ ಕಾರ್ಖಾನೆ ಕಾರ್ಮಿಕರಲ್ಲಿ ೧೦%ಕ್ಕೆ ಏರಿಸಬೇಕೆಂಬುದು ಉತ್ತಮ ಆಲೋಚನೆಯಾಗಿದೆ. ಏಕೆಂದರೆ ಪ್ರಮಾಣವನ್ನು ಹೆಚ್ಚಿಸುವುದರಿಂದ ಒಂದೇ ಕಾರ್ಖಾನೆಯಲ್ಲಿ ಹುಟ್ಟುವ ಅನೇಕ ಸಂಘಗಳ ಸಂಖ್ಯೆಯನ್ನು ಸ್ವಲ್ಪವಾದರೂ ಕಡಿಮೆ ಮಾಡಬಹುದು. ಸಂಘದ ಸದಸ್ಯರ ಸಂಖ್ಯೆ ಕಡಿಮೆ ಇದ್ದಷ್ಟು ಒಂದು ಸಣ್ಣ ಕೈಗಾರಿಕೆಯಲ್ಲಿ ಹುಟ್ಟುವ ಹಲವು ಕಾರ್ಮಿಕ ಸಂಘಗಳನ್ನು ತಡೆಯಬಹುದು.

ಕಾಯಿದೆಯಂತೆ ಸಂಘಗಳ ನೋಂದಣಿಯಲ್ಲಿ ಕಡ್ಡಾಯವಿರುವುದಿಲ್ಲ. ಇದರಿಂದ ಹೆಚ್ಚು ಸಂಘಗಳು ಹುಟ್ಟಿ ತಮ್ಮ ಸಮುದಾಯದಲ್ಲಿ ಗೊಂದಲ ಸೃಷ್ಟಿಸಿ, ಮೋಸ ಮಾಡುವ ಸಾಧ್ಯತೆಗಳೂ ಇರುತ್ತವೆ. ಉದಾಹರಣೆಗೆ ದಾವಣಗೆರೆ ಚಂದ್ರೋದಯ ಹತ್ತಿಗಿರಣಿ ಕಾರ್ಮಿಕರು ನೋಂದಾಯಿತ ಸಂಘದಿಂದ ಹೊರಬಂದು ಗೆಳೆಯರ ಬಳಗ ರಚಿಸಿಕೊಂಡು ನೊಂದಾಯಿಸಿಕೊಂಡಿಲ್ಲ. ಆ ಗಿರಣಿ ಅವನತಿಯಾದಾಗ ಪರಿಹಾರ ಪಡೆಯಲು ಅದೆ ಗೆಳೆಯರ ಬಳಗ ಹೋರಾಟವನ್ನು ನಡೆಸಿತು. ಆದರೆ ಪರಿಹಾರ ದೊರೆಯುವ ಹಂತದಲ್ಲಿ ನೊಂದಾಯಿತ ಸಂಘದ ಸದಸ್ಯರು ಆಕ್ಷೇಪಿಸಲಾಗಿ, ಕಾರ್ಮಿಕ ಅತಂತ್ರದಲ್ಲಿರುವುದು ಒಂದು ಉದಾಹರಣೆಯಾಗಿದೆ.

ಸಂಘವು ಸಾಮಾನ್ಯ ಹಾಗೂ ರಾಜಕೀಯ ನಿಧಿಗಳನ್ನು ಹೊಂದಲು ಅವಕಾಶವಿದೆ. ಸಾಮಾನ್ಯ ನಿಧಿಯನ್ನು ಸಂಘಟನೆ ಖರ್ಚು ವೆಚ್ಚಕ್ಕಾಗಿ, ರಾಜಕೀಯ ನಿಧಿಯನ್ನು ಚುನಾವಣೆ ಮುಂತಾದ ರಾಜಕೀಯ ಚಟುವಟಿಕೆಗಳಿಗೆ ಬಳಸಲು ಅವಕಾಶ ಕಲ್ಪಿಸಲಾಗಿದೆ. ಆದರೆ ಇಂತ ನಿಧಿಗಳ ಸದುಪಯೋಗವಾಗಬೇಕಿದೆ.

ನೊಂದಾಯಿತ ಸಂಘದ ಕಾರ್ಯಕಾರಿ ಮಂಡಳಿ ಸದಸ್ಯರು ಮಾಲೀಕರೊಂದಿಗೆ ಒಪ್ಪಂದ ಮಾಡಿಕೊಳ್ಳುವ ಅಧಿಕಾರವಿರುತ್ತದೆ.[೩] ಇದು ಸದುದ್ದೇಶ ಪೂರಿತವಾದರೂ ಕಾಲಾಂತರದಲ್ಲಿ ಭ್ರಷ್ಟತೆ ನುಸುಳಿ ಸಂಘಟನೆ ಭ್ರಷ್ಟಾಚಾರದಲ್ಲಿ ತೊಡಗಿರುವ ಬಹಳಷ್ಟು ಆರೋಪಗಳಿವೆ. ಆದ್ದರಿಂದ ಈ ಅಧಿಕಾರಕ್ಕೆ ಕಡಿವಾಣ ಹಾಕುವಂತಹ ವ್ಯವಸ್ಥೆ ಆಗಬೇಕಿದೆ. ಈ ಹಿನ್ನೆಲೆಯಲ್ಲಿ ಸಂಘದ ಸದಸ್ಯರ ಸಮ್ಮುಖದಲ್ಲೇ ಒಪ್ಪಂದಗಳು ನಡೆಯುವುದು ಸೂಕ್ತ.

ಸಮಗ್ರ ಭಾರತಕ್ಕೆ ಅನ್ವಯವಾಗುವ ಈ ಕಾಯಿದೆಯನ್ನು ೧೯೨೬ರಲ್ಲಿ ಜಾರಿಗೆ ತರಲಾಯಿತಾದರೂ, ಮೈಸೂರು ಸಂಸ್ಥಾನ ಮಾತ್ರ ೧೯೪೨ರ ವರೆಗೂ ಜಾರಿಗೊಳಿಸದಿದ್ದುದು ಗಮನಾರ್ಹವಾಗಿದೆ. ಅಧ್ಯಯನ ವ್ಯಾಪ್ತಿಯ ಕಾರ್ಮಿಕರು ಸಂಘಟನಾ ಹಕ್ಕನ್ನು ಪಡೆದುಕೊಳ್ಳಲು ಅಲ್ಲಿಯವರೆಗೂ ಕಾಯಬೇಕಾಯಿತು. ಈ ಸಂಬಂಧ ಮೈಸೂರು ಸಂಸ್ಥಾನ, ಕಾರ್ಮಿಕ ಸಂಘಟನಾ ವಿರೋಧಿ ನೀತಿ ತಾಳಿದ್ದು ಕಂಡುಬರುತ್ತದೆ.

೧೯೫೧ ಏಪ್ರಿಲ್ ೧ರಂದು ಭಾರತೀಯ ಕಾರ್ಮಿಕ ಸಂಘಗಳ ಕಾಯಿದೆಯನ್ನು ನಮ್ಮ ರಾಜ್ಯಕ್ಕೆ ವಿಸ್ತರಿಸಲಾಯಿತು.[೪] ರಾಷ್ಟ್ರಮಟ್ಟದ ಕಾಯಿದೆ ರಾಜ್ಯಕ್ಕೆ ಅನ್ವಯವಾಗುವುದು ವಿಳಂಬವಾಯಿತು. ಬಂಡವಾಳಶಾಹಿ ವ್ಯವಸ್ಥೆಯ ಶೋಷಣೆಯ ವಿರುದ್ಧ ಕಾರ್ಮಿಕ ವರ್ಗವನ್ನು ಹೆಚ್ಚು ಹೆಚ್ಚು ಮಾನವೀಯಗೊಳಿಸುವ ಪ್ರಕ್ರಿಯೆಯನ್ನು ಆರಂಭಿಸಲು ಇದು ಅನುವು ಮಾಡಿಕೊಟ್ಟಿತು.

ವೇತನ ಪಾವತಿ ಕಾಯಿದೆ ೧೯೩೬

ಈ ಕಾಯಿದೆಯೂ ಸಹ ಕಾರ್ಮಿಕ ಕಲ್ಯಾಣದ ದೃಷ್ಟಿಯಿಂದ ಒಂದು ಮುಖ್ಯ ಸಾಮಾಜಿಕ ಭದ್ರತೆ ಎನ್ನಬಹುದು. ಕನಿಷ್ಟ ಕೂಲಿಯನ್ನೂ ನೀಡದ ವಾತಾವರಣದಲ್ಲಿ, ದುಡಿಮೆಯ ಫಲವಾದ ಕೂಲಿಯನ್ನು ಸರಿಯಾದ ಸಮಯಕ್ಕೆ ಪಾವತಿಸಬೇಕಾದದ್ದು ನ್ಯಾಯ. ಉದ್ಯೋಗದಾತರು ವೇತನವನ್ನು ಸರಿಯಾದ ಸಮಯಕ್ಕೆ ಪಾವತಿಸದೆ ವಿಳಂಬ ಮಾಡುವುದಲ್ಲದೆ, ಕೆಲವರು ಹಣದ ರೂಪದಲ್ಲಿ ಪಾವತಿಸಿದರೆ, ಕೆಲವರು ವಸ್ತುವಿನ ರೂಪದಲ್ಲಿ ಪಾವತಿಸುತ್ತಿದ್ದರು. ಇಷ್ಟೇ ಅಲ್ಲದೆ ಕೂಲಿಯಲ್ಲಿ ಬಹಳಷ್ಟು ಕಡಿತ ಮಾಡಿ ಕಡಿಮೆ ಕೂಲಿಯನ್ನು ಪಾವತಿಸುತ್ತಿದ್ದರು. ಇದು ಕಾರ್ಮಿಕರ ಜೀವನ ನಿರ್ವಹಣೆ ಮೇಲೆ ದುಷ್ಪರಿಣಾಮ ಬೀರುತ್ತಿತ್ತು.

ಈ ಹಿನ್ನೆಲೆಯಲ್ಲಿ ವೇತನ ಪಾವತಿ ಕಾಯಿದೆಯು ಜಾರಿಯಾಗಿ ಇದು ಇಡೀ ಭಾರತಕ್ಕೆ ಅನ್ವಯವಾಗುತ್ತದೆ. ೧೬೦೦ ರೂ. ಮಾಸಿಕ ವೇತನದ ಒಳಗಿರುವ ಕಾರ್ಮಿಕರು ಈ ಕಾಯಿದೆಯ ವ್ಯಾಪ್ತಿಗೆ ಬರುತ್ತಾರೆ. ಪ್ರತಿ ತಿಂಗಳ ೭ನೇ ದಿನದ ಒಳಗೆ ಕೂಲಿ ಪಾವತಿ ಮಾಡಬೇಕು. ಕೆಲಸದಿಂದ ತೆಗೆಯಲ್ಪಟ್ಟರೆ, ಕೆಲಸಬಿಟ್ಟರೆ, ಆ ದಿನದ ಮರುದಿನವೇ ಕೂಲಿ ವಿತರಿಸಬೇಕು.

ಕೂಲಿಯನ್ನು ಸ್ಥಳೀಯ ನಾಣ್ಯ ಅಥವಾ ನೋಟುಗಳಲ್ಲಿ ಪಾವತಿಸಬೇಕೆಂದು ಕಾರ್ಮಿಕರನ್ನು ರಕ್ಷಿಸಿದೆ. ಕಾಯಿದೆಯು ಕಾರ್ಮಿಕರ ಕೂಲಿಯಲ್ಲಿ ಯಾವ ಯಾವ ಸಂಬಂಧ ಕಡಿತ ಮಾಡಬಹುದು ಎಂದು ಸ್ಪಷ್ಟಪಡಿಸುತ್ತದೆ. ಅದರಂತೆ ಗೈರು ಹಾಜರಾದಾಗ, ದಂಡವಸೂಲಿ, ಲೆಕ್ಕಪತ್ರ ನೀಡುವಾಗ ಹಣದಲ್ಲಿ ಆಗುವ ವ್ಯತ್ಯಾಸ, ಜೀವವಿಮೆ, ಮನೆಸಾಲ, ನ್ಯಾಯಲಯದ ವೇತನ ಕಡಿತ ಆದೇಶವಿದ್ದರೆ ಕೂಲಿಯಲ್ಲಿ ಕಡಿತಮಾಡಬಹುದು. ಆದರೆ ಈ ಎಲ್ಲಾ ಕಡಿತಗಳಿಗೂ ಒಟ್ಟು ವೇತನದ ೧/೩ರಷ್ಟು ಮಾತ್ರವಿರಬೇಕು. ದಾವಣಗೆರೆ ಹತ್ತಿ ಗಿರಣಿಗಳು ಆರ್ಥಿಕ ತೊಂದರೆಗೊಳಗಾದಾಗ ಕಾಯಿದೆಯಲ್ಲಿರುವಂತೆ ನಿರ್ಧಿಷ್ಟ ದಿನಗಳಲ್ಲಿ ಕೂಲಿ ಪಾವತಿಸಲಿಲ್ಲ. ಮೊದಲು ಅಲ್ಪ ಮಂಗಡ ಹಣ ನೀಡಿ ನಂತರದ ದಿನಗಳಲ್ಲಿ ಉಳಿದ ಕೂಲಿ ಪಾವತಿಸಿರುವುದು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಕಂಡುಬಂದಿದೆ.

ಕೈಗಾರಿಕಾ ವಿವಾದಗಳ ಕಾಯಿದೆ ೧೯೪೭

ಕಾರ್ಮಿಕ ಮತ್ತು ಮಾಲೀಕರ ನಡುವೆ ವಿವಾದಗಳು ಉದ್ಭವಿಸಿದಾಗ ಕಾರ್ಮಿಕರು ಮುಷ್ಕರ ಹೂಡಬಹುದು, ಮಾಲೀಕರು ಲಾಕ್‌ಔಟ್ ಮಾಡಬಹುದು. ಇಂಥ ಘಟನೆಗಳು ಸಂಭವಿಸದಂತೆ ಸೌಹಾರ್ದಯುತ ಮಾತುಕತೆ ಮೂಲಕ ವಿವಾದಗಳನ್ನು ಇತ್ಯರ್ಥ ಮಾಡುವ ಗುರಿಯೊಂದಿಗೆ 'ಕೈಗಾರಿಕಾ ವಿವಾದಗಳ ಕಾಯಿದೆಯು' ಜಾರಿಯಾಯಿತು. ಅರ್ಥವ್ಯವಸ್ಥೆಯು ದೇಶದ ರಕ್ತನಾಳದಂತಿದ್ದು, ಅದು ಸಮರ್ಪಕವಾಗಿ ಕೆಲಸ ನಿರ್ವಹಿಸಲು ಕಾರ್ಮಿಕರು ಮತ್ತು ಮಾಲೀಕರ ನಡುವೆ ಪರಸ್ಪರ ಸಹಕಾರ ಅಗತ್ಯವಾಗಿರುತ್ತದೆ. ಇಲ್ಲಿ ಎಲ್ಲರೂ ಸೌಹಾರ್ದಯುತವಾಗಿ ವರ್ತಿಸಿದರೆ ಮಾತ್ರ ಆರ್ಥಿಕವಾಗಿ ಪ್ರಗತಿ ಹೊಂದಲು ಸಾಧ್ಯವಿದೆ. ಕೈಗಾರಿಕಾ ರಂಗದಲ್ಲಿ ವಿವಾದಗಳು ಉದ್ಭವಿಸಿದಾಗ ಅವು ವಿಕೋಪಕ್ಕೆ ತಲುಪಲು ಬಿಡದೆ ಮೊಳಕೆಯಲ್ಲಿ ಚಿವುಟುವ ಪ್ರಯತ್ನ ಸೂಕ್ತ. ಈ ಅವಕಾಶ ಕೈಗಾರಿಕಾ ವಿವಾದಗಳ ಕಾಯಿದೆಯ ವ್ಯಾಪ್ತಿಯಲ್ಲಿರುತ್ತದೆ.

ಕಾಯಿದೆಯು ರಾಷ್ಟ್ರವ್ಯಾಪಿಯಾಗಿದ್ದು, ಕಾರ್ಮಿಕರ ಕನಿಷ್ಟ ಸಂಖ್ಯೆಯನ್ನು ಅವಲಂಬಿಸಿರುವುದಿಲ್ಲ. ಒಬ್ಬನೇ ಕಾರ್ಮಿಕನಿದ್ದರೂ ಈ ಕಾಯಿದೆ ಅನ್ವಯವಾಗುತ್ತದೆ.[೫] ಕಾಯಿದೆಯು ಸೃಷ್ಟಿಮಾಡಿರುವ ಅಧಿಕಾರಿಗಳ ಬಗ್ಗೆ, ಅಂದರೆ ಆಡಳಿತ ಯಂತ್ರದ ಬಗ್ಗೆ ತಿಳಿಸುತ್ತದೆ. ಸಂಧಾನಾಧಿಕಾರಿ, ಕಾರ್ಮಿಕ ನ್ಯಾಯಾಲಯ, ರಾಜ್ಯಮಟ್ಟದ ಇಂಡಸ್ಟ್ರಿಯಲ್ ಟ್ರಿಬ್ಯುನಲ್, ರಾಷ್ಟ್ರಮಟ್ಟದ ನ್ಯಾಷನಲ್ ಟ್ರಿಬ್ಯೂನಲ್‌ಗಳ ಕಾರ್ಯನಿರ್ವಹಣೆ ಬಗ್ಗೆ ತಿಳಿಸುತ್ತದೆ. ಇದು ಯಾವುದೇ ಮಾಲೀಕ, ಕಾರ್ಮಿಕರ ಬಗ್ಗೆ ಕ್ರಮ ಕೈಗೊಳ್ಳುವಾಗ ೨೧ ದಿನಗಳ ಪೂರ್ವಾನ್ವಯ ನೋಟಿಸ್ ಕೊಡಬೇಕೆಂದು ನಿಬಂಧನೆ ಹಾಕಿದೆ. ೧೦೦ ಕಾರ್ಮಿಕರಿಗಿಂತ ಹೆಚ್ಚಾಗಿರುವ ಕೈಗಾರಿಕೆಗಳಲ್ಲಿ ಮಾಲೀಕರು ಲೇ-ಆಫ್ (ತಾತ್ಕಾಲಿಕ ನಿಲುಗಡೆ) ಮಾಡುವ ಮುನ್ನ, ಬಂದ್ ಮಾಡುವ ಮುನ್ನ ಸರ್ಕಾರದ ಅಪ್ಪಣೆ ಪಡೆಯಬೇಕೆಂಬ ನಿಬಂಧನೆ ಇದೆ. ಇದಲ್ಲದೆ ಕಾರ್ಮಿಕರಿಗೆ ಬರಬೇಕಾದ ಹಣವನ್ನು ವಸೂಲಿ ಮಾಡಿಕೊಡುವ ಅಧಿಕಾರವನ್ನು ಕಾರ್ಮಿಕ ನ್ಯಾಯಾಲಯಗಳಿಗೆ ನೀಡಲಾಗಿದೆ.

ಉದ್ಯೋಗಿ ತನ್ನ ವ್ಯವಹಾರ ನಿಲ್ಲಿಸಲು ಬಯಸಿದಲ್ಲಿ ಅದನ್ನು ತಡೆಗಟ್ಟಲು ಯಾವುದೇ ಕಾಯಿದೆ ಇಲ್ಲ.[೬] ಈ ಕಾಯಿದೆಯ ನಿಯಮಗಳನ್ನು ಉಲ್ಲಂಘನೆ ಮಾಡಿದರೆ ಶಿಕ್ಷೆಯೂ ಸಹಾ ಇದೆ. ಅಲ್ಲದೆ ಮಾಲೀಕರು ಮತ್ತು ಕಾರ್ಮಿಕ ಸಂಘಗಳು ಕೈಗಾರಿಕಾ ಶಾಂತಿಯನ್ನು ಪರಿಪಾಲಿಸಿಕೊಂಡು ಬರಲು ನಿಬಂಧನೆಗಳನ್ನೂ ಸಹಾ ಸೂಚಿಸುತ್ತದೆ. ಕಾರ್ಮಿಕ ಎಂದರೆ ಯಾರು? ಎಂಬ ವ್ಯಾಖ್ಯಾನವನ್ನು ನೀಡುತ್ತದೆ. ಕಾಯಿದೆಯು ಸಾಮೂಹಿಕ ಸಮಸ್ಯೆಗಳಿಗೆ ಆದ್ಯತೆ ನೀಡುತ್ತದೆ.

ಹೀಗೆ ಕಾರ್ಮಿಕ ಮತ್ತು ಮಾಲೀಕರ ನಡುವೆ ಉದ್ಭವಿಸುವ ವಿವಾದಗಳನ್ನು ಬಗೆಹರಿಸಲು ಸರ್ಕಾರ ಕಾಯಿದೆಯ ಮೂಲಕ ತನ್ನ ಪ್ರಯತ್ನವನ್ನು ಮಾಡಿದೆ. ಆದರೂ ಕೈಗಾರಿಕಾ ವಿವಾದಗಳು ೧೯೭೦-೮೦ರ ದಶಕಗಳಲ್ಲಿ ಹೆಚ್ಚಾಗಿ ಉಲ್ಬಣಗೊಳ್ಳತೊಡಗಿದವು. ಈ ಉಲ್ಬಣಕ್ಕೆ ಪರಸ್ಪರ ಅನ್ಯೋನ್ಯತೆ, ಸಹ ಭಾವನೆಗಳ ಕೊರತೆ ಕಾರಣವಾಗಿದೆ.

ಕಾಯಿದೆಯಲ್ಲಿ "ಮುಷ್ಕರದ" ಬಗ್ಗೆ ಪ್ರಸ್ತಾಪವಿದೆ. ಇದಕ್ಕೆ ಸಂಬಂಧಿಸಿದಂತೆ ಭಾರತದ ಸರ್ವೋಚ್ಚ ನ್ಯಾಯಾಲಯ ಮುಷ್ಕರ ನೌಕರರ ಹಕ್ಕಲ್ಲವೆಂದು ತೀರ್ಪು ನೀಡಿದೆ. ಇಂಥ ಸಂದರ್ಭದಲ್ಲಿ ಮುಷ್ಕರದ ಅನಿವಾರ್ಯತೆ ಕುರಿತು ಚರ್ಚಿಸುವುದು ಸೂಕ್ತವೆನಿಸುತ್ತದೆ. ಕಾಯಿದೆಯಲ್ಲಿ ಕಾನೂನು ಬದ್ಧ, ಕಾನೂನು ಬಾಹಿರ ಮುಷ್ಕರ ಎಂದರೇನು ಎಂದು ಹೇಳುತ್ತದೆ. ಅಮೆರಿಕಾದಲ್ಲಿ ಮುಷ್ಕರ ಹೂಡುವುದು ಕಾರ್ಮಿಕರ ಹಕ್ಕು ಎಂದು ಸ್ಪಷ್ಟಪಡಿಸಲಾಗಿದೆ. ಆದರೆ ಅಲ್ಲಿಯ ಹಾಗೆ ನಮ್ಮಲ್ಲಿ ಮುಷ್ಕರದ ಹಕ್ಕಿನ ಬಗ್ಗೆ ಎಲ್ಲೂ ಸ್ಪಷ್ಟಪಡಿಸಿಲ್ಲ. ಆದರೂ ಕಾಯಿದೆಗಳಲ್ಲಿ ಕಾರ್ಮಿಕರಿಗೆ ಮುಷ್ಕರದ ಹಕ್ಕಿದೆ ಎಂಬುದನ್ನು ಐಚ್ಛಿಕವಾಗಿ ಹೇಳಲಾಗಿದೆ. ೧೯೨೬ರ ಕಾರ್ಮಿಕ ಸಂಘಗಳ ಕಾಯಿದೆಯಲ್ಲೂ, ಸಂಘಗಳು ಸಂಘಟಿತರಾಗಿ ಹೋರಾಡಲು ಅವಕಾಶ ಕಲ್ಪಿಸುತ್ತದೆ. ಆದರೆ ಅದು ನೇರವಾಗಿರದೆ ಐಚ್ಛಿಕವಾಗಿದೆ. ಭಾರತ ಸಂವಿಧಾನದ ಅನುಚ್ಛೇದ ೧೯-(೧) (a) ಯಲ್ಲಿ ಸಂಘ ಕಟ್ಟಿಕೊಳ್ಳುವುದು ಒಂದು ಮೂಲಭೂತ ಹಕ್ಕೆಂದು ಹೇಳಿದೆಯೇ ಹೊರೆತು ಮುಷ್ಕರ ಒಂದು ಮೂಲಭೂತ ಹಕ್ಕೆಂದು ಸ್ಪಷ್ಟಪಡಿಸಿಲ್ಲ.[೭]

೧೯೭೭ರಲ್ಲಿ ಕೇರಳ ರಾಜ್ಯದ ಉಚ್ಚನ್ಯಾಯಲಯವು ತನ್ನ ತೀರ್ಪಿನಲ್ಲಿ ಯಾವುದೇ ಸಂಘಸಂಸ್ಥೆ ಅಥವಾ ರಾಜಕೀಯ ಪಕ್ಷಗಳು, ಯಾವುದೇ ಕಾರಣಕ್ಕೂ ಬಂದ್ ಮೂಲಕ ಮುಷ್ಕರ ನಡೆಸುವುದು

ಸಂವಿಧಾನಬಾಹಿರವೆಂದು ತಿಳಿಸಿದೆ. ಈ ತೀರ್ಪನ್ನು ಭಾರತೀಯ ಕಮ್ಯೂನಿಸ್ಟ್ ಪಕ್ಷ, ಸರ್ವೋಚ್ಛ ನ್ಯಾಯಾಲಯದಲ್ಲಿ ಮೇಲ್ಮನವಿ ಮಾಡಿಕೊಂಡಾಗ, ಅದು ಕೇರಳ ಉಚ್ಚನ್ಯಾಯಾಲಯದ ತೀರ್ಮಾನವನ್ನು ಎತ್ತಿ ಹಿಡಿದಿದೆ.

ತಮಿಳುನಾಡಿನ ಸರ್ಕಾರಿ ನೌಕರರ ಮುಷ್ಕರವನ್ನು ಸರ್ವೋಚ್ಚ ನ್ಯಾಯಾಲಯ ಮೂಲಭೂತಹಕ್ಕಲ್ಲ ಎಂದು ತೀರ್ಪು ನೀಡಿದೆ. ಇದೇ ನ್ಯಾಯಾಲಯ ೧೯೬೨ರಲ್ಲಿ ಕಾಮೇಶ್ವರ ಪ್ರಸಾದ್ v/s ಬಿಹಾರ ಸರ್ಕಾರದ ಕೇಸಿನಲ್ಲಿ, ಮುಷ್ಕರ ಕಾನೂನು ಬದ್ಧ ಎಂದು ಹೇಳಿದೆ. ಭಾರತವು ಅಂತರ್‌ರಾಷ್ಟ್ರೀಯ ಕಾರ್ಮಿಕ ಸಂಸ್ಥೆ (ಐ.ಎಲ್.ಓ.) ಸದಸ್ಯರಾಷ್ಟ್ರವಾಗಿದೆ. ಅದು ತನ್ನ ೧೧ನೇ ವಿಧಿಯಲ್ಲಿ ಸಂಘಟನೆಯ ಹಕ್ಕನ್ನು ನೀಡಿದೆ.[೮] ತಮಿಳುನಾಡಿನ ಮೊಕದ್ದಮೆಯ ತೀರ್ಪು ಈ ಎಲ್ಲಾ ನಿಯಮ, ತೀರ್ಪುಗಳಿಗೆ ವಿರುದ್ಧವಾಗಿದೆ. ಆದ್ದರಿಂದ ಮುಷ್ಕರದ ಹಕ್ಕು ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಚರ್ಚೆಗೊಳಗಾಗಿದೆ. ಈ ದೃಷ್ಟಿಯಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಮರುಪರಿಶೀಲಿಸುವುದು ಅಗತ್ಯವಾಗಿದೆ.

ಸಂಘಟನೆ ಮೂಲಭೂತ ಹಕ್ಕಾದ ಮೇಲೆ ಮುಷ್ಕರ ಅನಿವಾರ್ಯ. ಆದ್ದರಿಂದ ಮುಷ್ಕರ ಹೂಡುವ ಹಕ್ಕಿಲ್ಲವೆಂದರೆ ಸಂಘಟನೆಯ ಅಗತ್ಯವೂ ಅರ್ಥ ಕಳೆದುಕೊಳ್ಳುತ್ತದೆ. ಆಗ ಕಾರ್ಮಿಕ ಸಂಘಗಳ ಕಾಯಿದೆ ಹಾಗೂ ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆ (ಐ.ಎಲ್.ಓ.) ಸದಸ್ಯತ್ವವೂ ಅಗತ್ಯವಿರುವುದಿಲ್ಲ. ಸರ್ವೋಚ್ಛ ನ್ಯಾಯಲಯ ಈ ಎಲ್ಲಾ ಗೊಂದಲಗಳಿಗೆ ಅವಕಾಶ ಕಲ್ಪಿಸಿದೆ. ಈ ತೀರ್ಪನ್ನು ೫ ಸದಸ್ಯರ ಪೀಠದಲ್ಲಿ ಮರುಪರಿಶೀಲಿಸಬೇಕು, ಆ ಮುಖಾಂತರ ಚಳವಳಿಯ ಒಂದು ಅಸ್ತ್ರವಾಗಿರುವ ಮುಷ್ಕರದ ಹಕ್ಕನ್ನು ಅಮೇರಿಕಾದಂತೆ ಸ್ಪಷ್ಟಪಡಿಸಬೇಕು. ಆ ಮೂಲಕ ಕಾರ್ಮಿಕ ಸಂಘಗಳ ಕಾಯಿದೆ ಹಾಗೂ ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆ (ಐ.ಎಲ್.ಓ.) ಸದಸ್ಯತ್ವ ಕಾಪಾಡಿಕೊಂಡು ಚಳವಳಿಗಳ ಅಸ್ತಿತ್ವವನ್ನು ಅರ್ಥಪೂರ್ಣಗೊಳಿಸಬೇಕಾಗಿದೆ.

ಕನಿಷ್ಟಕೂಲಿ ಕಾಯಿದೆ ೧೯೪೮

ಕಾರ್ಮಿಕರು ದುಡಿದು ಕೂಲಿ ಸಂಪಾದಿಸಲು ಕೈಗಾರಿಕೆಗೆ ಬಂದರೆ, ಮಾಲೀಕರು ಲಾಭದಾಸೆಯಲ್ಲಿ ಆ ಕೈಗಾರಿಕೆಯನ್ನು ಮುನ್ನಡೆಸುತ್ತಾರೆ. ಇಂಥ ವಾತಾವರಣದಲ್ಲಿ ಕೂಲಿಯು ಮಾಲೀಕ ಕೊಟ್ಟಷ್ಟು, ಕಾರ್ಮಿಕರಿಗೆ ಲಭಿಸಿದಷ್ಟಾಗಿರುತ್ತದೆ. ಕಾಯಿದೆ ಜಾರಿ ಕಾಲದಲ್ಲಿ ಕಾರ್ಮಿಕ ಸಂಘಟನೆ ಬಲವಾಗಿರಲಿಲ್ಲ. ಆದ್ದರಿಂದ ಕಾರ್ಮಿಕರು ತೀವ್ರ ಕಡಿಮೆ ವೇತನ ಪಡೆದು ಶೋಷಣೆಗೆ ಒಳಗಾಗಿದ್ದರು. ಇವರ ರಕ್ಷಣೆಗಾಗಿ ಕನಿಷ್ಟಕೂಲಿ ಕಾಯಿದೆಯನ್ನು ಜಾರಿಗೊಳಿಸಲಾಯಿತು.

ಒಂದು ಅಥವಾ ಒಂದಕ್ಕಿಂತ ಹೆಚ್ಚು ಕಾರ್ಮಿಕರಿರುವ ಎಲ್ಲಾ ಕೈಗಾರಿಕೆಗಳಿಗೆ ಈ ಕಾಯಿದೆಯು ಅನ್ವಯವಾಗುತ್ತಿದ್ದು, ರಾಷ್ಟ್ರವ್ಯಾಪಿಯಾಗಿದ್ದು ಅಸಂಘಟಿತರನ್ನು, ಸಂಘಟಿತ ಕಾರ್ಮಿಕರ ಜೀವನ ಮಟ್ಟಕ್ಕೇರಿಸುವುದು ಇದರ ಗುರಿಯಾಗಿದೆ. ಕೃಷಿ ಕ್ಷೇತ್ರದ ಕಾರ್ಮಿಕರೂ ಸಹ ಈ ವ್ಯಾಪ್ತಿಗೆ ಬರುತ್ತಾರೆ. ಅವರ ವೇತನ ನಿಗದಿ ಮಾಡಿ ಜೀವನಮಟ್ಟ ವೃದ್ಧಿಸುವುದು ಅನಿವಾರ್ಯವಾಗಿದೆ. ಈ ಕಾಯಿದೆಯು ಕೈಗಾರಿಕೆಯಲ್ಲಿ ಉತ್ಸಾಹದಿಂದ ದುಡಿಯಲು, ಮನೆಯಲ್ಲಿ ತೃಪ್ತಿಕರ ಜೀವನ ನಡೆಸಲು ಸಹಕಾರಿಯಾಗಿದೆ.

ಕಾಯಿದೆಯಂತೆ ೫ ವರ್ಷಕ್ಕೊಮ್ಮೆ ವೇತನ ಮರುಪರಿಶೀಲಿಸಲಾಗುವುದು. ಒಂದು ಕುಟುಂಬ ಎಂದರೆ ಗಂಡ, ಹೆಂಡತಿ, ಒಂದು ಮಗು ಎಂದು ಇವರನ್ನು ३ ಯೂನಿಟ್ ಎಂದು, ಅವರು ಬದುಕಲು ಎಷ್ಟು ಆದಾಯ ಬೇಕು ಎಂದು ಸಮಿತಿಯಿಂದ ಕನಿಷ್ಟ ಕೂಲಿಯನ್ನು ನಿಗದಿ ಪಡಿಸಲಾಗುತ್ತದೆ.

ಸರ್ಕಾರದಿಂದ ನೇಮಕವಾಗುವ ಸಮಿತಿಯು ಕ್ಷೇತ್ರ ಕಾರ್ಯಮಾಡಿ ವೇತನ ನಿಗದಿಪಡಿಸಲು ಕ್ರಮಕೈಗೊಳ್ಳುತ್ತದೆ. ಕನಿಷ್ಟ ವೇತನವು ಸಾಮಾನ್ಯವಾಗಿ ಮೂಲವೇತನದೊಂದಿಗೆ ಜೀವನ ನಿರ್ವಹಣೆ ವೆಚ್ಚವನ್ನು ಒಳಗೊಂಡಿರುತ್ತದೆ. ಇಲ್ಲಿ ಜೀವನ ವೆಚ್ಚ ಹೆಚ್ಚಾದಂತೆ ಕನಿಷ್ಠ ಕೂಲಿಯೂ ಹೆಚ್ಚಬೇಕೆಂಬ ಅರ್ಥವನ್ನು ಗಮನಿಸಬಹುದು. ಈ ಕಾಯಿದೆಯನ್ನು ಜಾರಿಗೊಳಿಸುವುದು ಕೇಂದ್ರ ರಾಜ್ಯ ಸರ್ಕಾರಗಳ ಹೊಣೆಯಾಗಿದೆ. ತ್ರಿಪಕ್ಷೀಯ ಸಮಿತಿಯು ಸರ್ಕಾರಕ್ಕೆ ಕನಿಷ್ಟ ವೇತನದ ಸಲಹೆಯನ್ನು ಮಾಡುತ್ತದೆ.

ಕನಿಷ್ಟ ಕೂಲಿಯನ್ನು ನೀಡದವರ ವಿರುದ್ಧ ಆಯಾ ಪ್ರಾಂತ್ಯದ ನ್ಯಾಯಾಧಿಕಾರಿಗಳ ಕೋರ್ಟಿನಲ್ಲಿ ಅರ್ಜಿ ಹಾಕಿಕೊಳ್ಳಬಹುದು. ೧೯೪೮ರಲ್ಲೇ ಕಾಯಿದೆ ಜಾರಿಯಾಗಿದ್ದರೂ ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿಲ್ಲ ಎಂಬುದಕ್ಕೆ ಅನೇಕ ನಿದರ್ಶನಗಳಿವೆ. ಕಾರ್ಮಿಕ ಮುಖಂಡರೂ, ವಿಧಾನಸಭಾ ಸದಸ್ಯರೂ ಆಗಿದ್ದ ಪಂಪಾಪತಿಯವರು ೧೯೮೦ ಜುಲೈ ವಿಧಾನಸಭಾ ಅಧಿವೇಶನದಲ್ಲಿ ರಾಣೆಬೆನ್ನೂರಿನಲ್ಲಿ ಕನಿಷ್ಟ ಕೂಲಿ ನೀಡುತ್ತಿಲ್ಲ ಎಂದು ಚರ್ಚೆ ನಡೆಸಿರುವುದು ಒಂದು ನಿದರ್ಶನವಾಗಿದೆ. ಹಾಗೆಯೆ ಬಿ.ವಿ.ಕಕ್ಕಿಲಾಯ ಅವರೂ ಸಹ ವಿಧಾನಸಭಾ ಅಧಿವೇಶನದಲ್ಲಿ (೧೯೭೯) ರಾಜ್ಯದ ಹಲವು ಭಾಗಗಳಲ್ಲಿ ಕನಿಷ್ಟ ಕೂಲಿ ನೀಡುತ್ತಿಲ್ಲ ಎಂದು ಚರ್ಚಿಸಿರುತ್ತಾರೆ. ಇತ್ತೀಚಿನವರೆಗೂ ಕಾಯಿದೆಯು ಸಮರ್ಪಕವಾಗಿ ಕಾರ್ಯ ನಿರ್ವಹಿಸಿಲ್ಲ ಎಂಬುದು ಈ ಚರ್ಚೆಗಳಿಂದ ದೃಢಪಡುತ್ತದೆ.

ಕನಿಷ್ಟ ಕೂಲಿಯು ಪ್ರತಿರಾಜ್ಯದಲ್ಲೂ ಭಿನ್ನವಾಗಿದೆ. ಆದ್ದರಿಂದ ಎಲ್ಲಿ ಹೆಚ್ಚು ಕೂಲಿ ಇದೆ ಅಲ್ಲಿಗೆ ಕೌಶಲ್ಯವುಳ್ಳ ಕಾರ್ಮಿಕರು ವಲಸೆಹೋಗುವ ಸಾಧ್ಯತೆಗಳಿವೆ. ಎಲ್ಲಿ ಕನಿಷ್ಟ ವೇತನ ಕಡಿಮೆ ಇದೆಯೋ ಅಲ್ಲಿ ಬಂಡವಾಳಶಾಹಿಗಳು ಕೈಗಾರಿಕೆ ಆರಂಭಿಸುವ ಸಾಧ್ಯತೆ ಇದೆ. ಅಸಂಘಟಿತರನ್ನು ಸಂಘಟಿತರ ಜೀವನ ಮಟ್ಟಕ್ಕೇರಿಸಲು ಕಾಯಿದೆಯು ಸ್ವಲ್ಪಮಟ್ಟಿಗಾದರೂ ಪ್ರಯತ್ನಿಸಿದೆ. ಒಟ್ಟಾರೆ ಅಸಂಘಟಿತರ ರಕ್ಷಣೆಗೆ ಹೆಜ್ಜೆಹಾಕುತ್ತಿದೆ ಎನ್ನುವುದು ಸೂಕ್ತವೆನಿಸುತ್ತದೆ.

ಕಾರ್ಮಿಕರ ರಾಜ್ಯವಿಮಾ ಕಾಯಿದೆ (ಇ.ಎಸ್.ಐ) ೧೯೪೮

ಕಾರ್ಮಿಕರ ರಾಜ್ಯ ವಿಮಾ ಯೋಜನೆಯು ಸಾಮಾಜಿಕ ಭದ್ರತೆಯ ತುಣುಕು ಎನ್ನಲಾಗಿದೆ.[೯] ಇದು ಆರೋಗ್ಯ ವಿಮಾ ಯೋಜನೆಯಾಗಿದ್ದು ಕಡ್ಡಾಯ ಹಾಗೂ ವಂತಿಕೆ ಆಧಾರದಲ್ಲಿದೆ.

೧೯೯೦ರಲ್ಲಿ ೧೫೦೦ ರೂ. ಮಾಸಿಕ ವೇತನ ಪಡೆಯುವ ಕಾರ್ಮಿಕರು ಈ ಸೌಲಭ್ಯ ಪಡೆಯಲು ಅರ್ಹರಾಗಿರುತ್ತಾರೆ. ಕಾರ್ಮಿಕರ ಜೊತೆಗೆ ಅವನ ಅವಲಂಬಿತರೂ ಉಚಿತ ಚಿಕಿತ್ಸೆ ಪಡೆಯಬಹುದಾಗಿದೆ. ಮೈಸೂರು ರಾಜ್ಯದಲ್ಲಿ ಈ ಯೋಜನೆಯನ್ನು ೨೪-೭-೧೯೫೮ರಲ್ಲಿ ೫೦,೦೦೦ ರೂ. ವಿಮೆ ಪಡೆದ ವ್ಯಕ್ತಿಗಳಿಗೆ ಜಾರಿಗೊಳಿಸಲಾಯಿತು.[೧೦] ೧೯೬೫-೬೬ರಲ್ಲಿ ಹುಬ್ಬಳ್ಳಿ ದಾವಣಗೆರೆ ನಗರಗಳಿಗೆ ವಿಸ್ತರಿಸಲಾಯಿತು.

ಈ ಕಾಯಿದೆಯಿಂದ ವಿಮಾದಾರರು ಹೆರಿಗೆ, ಅಪಘಾತ ಮುಂತಾದ ವೈದ್ಯಕೀಯ ಸೌಲಭ್ಯಗಳನ್ನು ಪಡೆದುಕೊಳ್ಳಬಹುದು, ಹಾಗೂ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಹಯೋಗದಲ್ಲಿ ಈ ಯೋಜನೆಯು ನಡೆಯುತ್ತಿದೆ.

ಕಾರ್ಮಿಕರು ರೋಗಕ್ಕೆ ತುತ್ತಾದರೆ ೧/೨ ರಷ್ಟು ವೇತನವನ್ನು ಸರ್ಕಾರದ ನಿಧಿಯಿಂದ ಕಾರ್ಖಾನೆಗೆ ವರ್ಗಾಯಿಸಿ ಆ ಮೂಲಕ ಪಾವತಿಸಲಾಗುತ್ತದೆ. ೧ ವರ್ಷದಲ್ಲಿ ಕನಿಷ್ಠ ೫೬ ದಿವಸಗಳು ಇಂಥ ವೇತನ ಪಡೆದುಕೊಳ್ಳಲು ಅವಕಾಶವಿದೆ. ಮಹಿಳೆ ಗರ್ಭವತಿಯಾದರೆ ಹೆರಿಗೆಗೆ ಮೊದಲು ೪ ವಾರ, ನಂತರ ೧೨ ವಾರ ಸಂಬಳ ಸಹಿತ ರಜೆ ಪಡೆಯಬಹುದು.

ಇಷ್ಟೆಲ್ಲಾ ಸೌಲಭ್ಯಗಳಿರುವ ಈ ಕಾಯಿದೆಯ ಸದುಪಯೋಗಕ್ಕಿಂತ, ದುರುಪಯೋಗವೇ ಹೆಚ್ಚಾಗುತ್ತಿದೆ. ಈ ಯೋಜನೆಗೆ ನೇರ ಸಂಬಂಧಿಗಳಾಗಿರುವ ಮಾಲೀಕರು, ಕಾರ್ಮಿಕರು, ವೈದ್ಯರು ಎಲ್ಲರೂ ದುರುಪಯೋಗದ ಹಾದಿ ತುಳಿದಿದ್ದಾರೆ ಎಂದು ಕಾರ್ಮಿಕ ಮುಖಂಡರಿಂದ ಆರೋಪಗಳಿವೆ.

ಮಾಲೀಕರು ತಮ್ಮ ಮತ್ತು ಕಾರ್ಮಿಕರ ಪಾಲಿನ ವಂತಿಕೆಯನ್ನು ಸಂಸ್ಥೆಗೆ ತುಂಬಲು ೨೦ ದಿನಗಳ ಅವಕಾಶವಿರುತ್ತದೆ. ಈ ಕಾಲಾವಕಾಶವನ್ನು ದುರುಪಯೋಗಮಾಡಿಕೊಂಡು ಗಡುವಿನ ಅವಧಿಯಲ್ಲಿ ಹಣವನ್ನು ಸ್ವಂತಕ್ಕೆ ಬಳಸಿ, ಬ್ಯಾಂಕ್ ಬಡ್ಡಿಯನ್ನು ಉಳಿಸಿಕೊಳ್ಳುವ ಪ್ರಯತ್ನಗಳು ನಡೆಯುತ್ತಿವೆ. ಇನ್ನೊಂದೆಡೆ ಹಣ ಪಾವತಿಯಲ್ಲಿ ತೀವ್ರ ವಿಳಂಬವೂ ಆಗುತ್ತಿದೆ.

ಕಾರ್ಮಿಕನು ತಾನು ವಂತಿಕೆ ಸಲ್ಲಿಸುವ ಅರಿವಿದ್ದು, ತನಗೆ ಹಕ್ಕಿರುವ ಕಾಯಿಲೆ ರಜೆ ಮತ್ತು ಭತ್ಯೆಯನ್ನು, ಕಾಯಿಲೆ ಇಲ್ಲದಿದ್ದರೂ ವಿನಾಕಾರಣ ವೈದ್ಯರಿಂದ ಪ್ರಮಾಣಪತ್ರ ಪಡೆದು ದುರುಪಯೋಗ ಮಾಡಿಕೊಳ್ಳುತ್ತಿದ್ದಾನೆ. ಇದರಿಂದ ಕಾರ್ಖಾನೆಗೆ ಬರುವ ಖಾಯಂ ಕೆಲಸಗಾರರ ಗೈರುಹಾಜರಿ ಸಂಖ್ಯೆ ಅಧಿಕವಾಗಿ, ಆ ಸ್ಥಾನಕ್ಕೆ ಬದಲಿ ಕಾರ್ಮಿಕರನ್ನು ನೇಮಿಸಿಕೊಂಡು ಕೆಲಸ ಮುಂದುವರೆಸುವಾಗ ಮಾಲೀಕರಿಗೆ ಹೆಚ್ಚುವರಿ ಹಣ ವೆಚ್ಚವಾಗುತ್ತದೆ. ಇದರಿಂದ ಉತ್ಪಾದನೆಯ ಮೇಲೆ ದುಷ್ಪಪರಿಣಾಮ ಬೀರುತ್ತದೆಂದು ಮಾಲೀಕರು ದೂರಿದ್ದಾರೆ.

ವೈದ್ಯರ ಮೇಲೆ ಒತ್ತಡ ತಂದು ತೊಂದರೆ ಇಲ್ಲದಿದ್ದರೂ, ಅನಗತ್ಯವಿದ್ದರೂ ಪ್ರಮಾಣಪತ್ರ ಪಡೆದು ಕಾರ್ಮಿಕ ಕೆಲಸಕ್ಕೆ ಗೈರುಹಾಜರಾಗಲು ಪ್ರಯತ್ನಿಸುವ ಸಾಧ್ಯತೆಗಳಿವೆ. ಆಸ್ಪತ್ರೆಗೆ ಬರುವ ಔಷಧಿಗಳ ದುರುಪಯೋಗ ನಡೆಯುತ್ತಿದೆ ಎಂದು ಕಾರ್ಮಿಕರನ್ನು ಸಂದರ್ಶಿಸಿದಾಗ ದೃಢಪಡುತ್ತದೆ. ಕಾರ್ಪೋರೇಷನ್ ಕೂಡ ಗುಣಮಟ್ಟದ ಔಷಧಿ ಸರಬರಾಜು ಮಾಡುವಲ್ಲಿ ಗಮನಹರಿಸುತ್ತಿಲ್ಲ ಎಂದು ಕಾರ್ಮಿಕರು ದೂರಿದ್ದಾರೆ. ಆದರೆ ಈ ಎಲ್ಲಾ ಆರೋಪಗಳಿಗೂ ಸ್ಪಷ್ಟ ದಾಖಲಾತಿಗಳಿಲ್ಲದಿದ್ದರೂ ನಡೆಯುತ್ತಿರುವ ಘಟನೆಗಳು ಸತ್ಯವಾಗಿದೆ.

ಈ ಎಲ್ಲಾ ಆರೋಪ, ಅವ್ಯವಹಾರಗಳಿಂದ ಮಾಲೀಕರು, ಕಾರ್ಮಿಕರು ಈ ಕಾಯಿದೆಯ ಬಗ್ಗೆ ನಂಬಿಕೆಯನ್ನು ಕಳೆದುಕೊಂಡಿದ್ದಾರೆ. ಮೇಲ್ನೋಟಕ್ಕೆ ಇದೊಂದು ಉತ್ಕೃಷ್ಟ ಕಾಯಿದೆ ಆದರೂ ಅತ್ಯಂತ ದುರುಪಯೋಗಕ್ಕೆ ಅವಕಾಶವಾಗಿರುವ ಕಾಯಿದೆಯಾಗಿದೆ. ಅಂತರಾಷ್ಟ್ರೀಯ ಕಾರ್ಮಿಕ ಸಂಸ್ಥೆಯಲ್ಲದೆ,

ಎಲ್ಲರೂ ಉತ್ತಮ ಯೋಜನೆ ಎಂದು ಪ್ರಶಂಸಿಸಿದರೆ, ಅಂತರಾಳದಲ್ಲಿ ಈ ಅನೇಕ ಸಮಸ್ಯೆಗಳಿವೆ. ಆದರೆ ಈ ಯೋಜನೆಯು ಸಂಪೂರ್ಣ ನಿರರ್ಥಕ ಎಂದು ಸಾರಾಸಗಟಾಗಿ ತಿರಸ್ಕರಿಸಲು ಸಾಧ್ಯವಿಲ್ಲ. ಬಡ ಕಾರ್ಮಿಕರ ಆರೋಗ್ಯ ಸೌಲಭ್ಯಗಳಿಗೆ ಅಲ್ಪವಾದರೂ ಕಾಣಿಕೆ ಸಲ್ಲಿಸುತ್ತಿದೆ.

ಮೇಲ್ಕಂಡ ಯೋಜನೆಯಲ್ಲಿರುವ ಲೋಪದೋಷಗಳನ್ನು ಸರಿಪಡಿಸಲು ದಾವಣಗೆರೆ ಕಾರ್ಮಿಕ ಮುಖಂಡರು ಮೇಲಾಧಿಕಾರಿಗಳನ್ನು ಕಂಡು, ಮನವಿ ಸಲ್ಲಿಸಿರುವ ಹಲವಾರು ಸಂದರ್ಭಗಳು ಸ್ಥಳೀಯ ಪತ್ರಿಕೆಗಳಲ್ಲಿ ವರದಿಯಾಗಿವೆ. ಈ ವರದಿಗಳು ಅಲ್ಲಿನ ಅವ್ಯವಸ್ಥೆಯನ್ನು ದೃಢಪಡಿಸುತ್ತವೆ.

ಕಾರ್ಖಾನೆಗಳ ಅಧಿನಿಯಮ ೧೯೪೮

ಇಡೀ ಭಾರತಕ್ಕೆ ಅನ್ವಯವಾಗುವ ಈ ಕಾಯಿದೆಯನ್ನು ೧೯೪೯ ಏಪ್ರಿಲ್ ೧ ರಂದು ಜಾರಿಗೆ ತರಲಾಯಿತು. ಇದನ್ನು ೧೯೫೪, ೧೯೮೭ರಲ್ಲಿ ತಿದ್ದುಪಡಿಮಾಡಲಾಯಿತು. ಕನಿಷ್ಟ ೧೦ ಮಂದಿ ಕಾರ್ಮಿಕರಿದ್ದು, ವಿದ್ಯುತ್ ಬಳಸುವ, ಇಲ್ಲವೇ ೨೦ ಕಾರ್ಮಿಕರು ಇರುವ ಕಾರ್ಖಾನೆಗಳಿಗೆ ಈ ಕಾಯಿದೆ ಅನ್ವಯವಾಗುತ್ತದೆ.

ಕಾರ್ಖಾನೆಗಳಲ್ಲಿ ಮಾಲೀಕ ಹಾಗೂ ಅವನ ಕುಟುಂಬದ ಸದಸ್ಯರನ್ನು ಬಿಟ್ಟು ಬೇರೆ ಕಾರ್ಮಿಕರಿರುವಲ್ಲಿ ರಾಜ್ಯ ಸರ್ಕಾರ ಜಾರಿಗೆ ತರಲು ಅಧಿಕಾರವಿರುತ್ತದೆ. ಕಾರ್ಮಿಕರ ಆರೋಗ್ಯ, ಶುಚಿತ್ವ, ಗಾಳಿಬೆಳಕು ಮುಂತಾದ ಅಂಶಗಳ ಬಗ್ಗೆ ಮಹತ್ವ ನೀಡಲಾಗಿದೆ. ೨೫೦ಕ್ಕೂ ಹೆಚ್ಚು ಕಾರ್ಮಿಕರಿರುವ ಕೈಗಾರಿಕೆಗಳಲ್ಲಿ ಉಪಾಹಾರ ಗೃಹ ಇರಬೇಕು.[೧೧] ಆ ಉಪಾಹಾರ ಗೃಹಗಳನ್ನು ಲಾಭದ ಗುರಿ ಇಲ್ಲದೆ ನಡೆಸಬೇಕು. ಅಪಾಯಕಾರಿ ಯಂತ್ರಗಳ ಸುತ್ತಲೂ ಸುರಕ್ಷತೆ ಕಾಪಾಡಲು ಬೇಲಿ ವ್ಯವಸ್ಥೆ ಮಾಡಬೇಕು. ಇಂಥ ಯಂತ್ರಗಳಲ್ಲಿ ಕಾರ್ಯನಿರ್ವಹಿಸಲು ಅಪ್ರಾಪ್ತ ವಯಸ್ಕರನ್ನು ನೇಮಕ ಮಾಡಬಾರದು. ೫೦೦ಕ್ಕೂ ಹೆಚ್ಚಿನ ಕಾರ್ಮಿಕರಿರುವಲ್ಲಿ ಕಾರ್ಮಿಕ ಕಲ್ಯಾಣಧಿಕಾರಿಯನ್ನು ನೇಮಕ ಮಾಡಬೇಕು. ೧೪ ವರ್ಷ ವಯೋಮಿತಿಯೊಳಗಿನವರನ್ನು ಕೆಲಸಕ್ಕೆ ತೆಗೆದುಕೊಳ್ಳಬಾರದು. ಪ್ರತಿಯೊಬ್ಬ ಕಾರ್ಮಿಕನೂ ವಾರಕ್ಕೆ ಒಟ್ಟು ೪೮ ಗಂಟೆ, ದಿನಕ್ಕೆ ೯ ಗಂಟೆ ಕೆಲಸ ಮಾಡಬೇಕು. ೫ ಗಂಟೆ ಕೆಲಸಕ್ಕೊಮ್ಮೆ ೩೦ ನಿಮಿಷಗಳ (೧/೩೧) ವಿಶ್ರಾಂತಿ ಪಡೆದುಕೊಳ್ಳಲು ಅವಕಾಶವಿದೆ. ಮಹಿಳೆಯರು ರಾತ್ರಿ ೭ ಗಂಟೆಯಿಂದ ಬೆಳಗ್ಗೆ ೯ ಗಂಟೆ ಅವಧಿಯಲ್ಲಿ ಕೆಲಸಮಾಡಬಾರದು.

ಗಣಿ, ರೈಲ್ವೆ ಕೈಗಾರಿಕೆಗಳಿಗೆ ಈ ನಿಯಮಗಳು ಒಳಪಡುವುದಿಲ್ಲ. ಕಾರ್ಮಿಕರ ಹಿತರಕ್ಷಣೆಯ ಹಾದಿಯಲ್ಲಿ ಇದೊಂದು ಮೈಲುಗಲ್ಲು. ಕೆಲಸದ ವೇಳೆಯಲ್ಲಿ ಬಿಟ್ಟು ಉಳಿದ ಸಮಯದಲ್ಲಿ ಕೆಲಸ ಮಾಡಿದರೆ ಅವರು ಮಾಮೂಲು ವೇತನದ ಎರಡರಷ್ಟು ವೇತನ ಪಡೆಯಲು ಅರ್ಹರಾಗಿರುತ್ತಾರೆ.

ಪ್ರಾವಿಡೆಂಟ್ ಫಂಡ್ ಕಾಯಿದೆ ೧೯೫೧

ಸಾಮಾಜಿಕ ಭದ್ರತಾ ಚರಿತ್ರೆಯಲ್ಲಿ ಮೈಲುಗಲ್ಲಾಗಿರುವ ಪ್ರಾವಿಡೆಂಟ್ ಫಂಡ್ (ಪಿ.ಎಫ್.) ಕಾಯಿದೆಯು ಮೊದಲು ೧೯೨೫ರಲ್ಲಿ ಸರ್ಕಾರಿ ನೌಕರರಿಗೆ, ರೈಲ್ವೆಯವರಿಗೆ ಮಾತ್ರ ಜಾರಿಗೆ ಬಂದಿತು. ನಂತರ ೧೯೪೮ರಲ್ಲಿ ಗಣಿ ಕಾರ್ಮಿಕರಿಗೂ, ೧೯೫೧ರಲ್ಲಿ ಇತರೆ ಕೈಗಾರಿಕೆಗಳಿಗೂ ವಿಸ್ತರಿಸಲ್ಪಟ್ಟಿತು.

ಕಾರ್ಮಿಕರು ಕಾರ್ಯನಿರ್ವಹಿಸುವಾಗ ಹಣ ಉಳಿಸಿ ಭವಿಷ್ಯತ್ತನ್ನು ಹಾಗೂ ಅವಲಂಬಿತರನ್ನು ನಿಭಾಯಿಸುವುದು ದುರ್ಲಭ. ಬೆಲೆ ಏರಿಕೆ, ರೋಗರುಜಿನಗಳ ವರ್ತುಲದಲ್ಲಿ ಕಾರ್ಯಪ್ರವೃತ್ತರಾಗಿರುವ ಕಾರ್ಮಿಕರು ವೃದ್ಧಾಪ್ಯ ಅಥವಾ ನಿವೃತ್ತಿಯ ಕಾಲದಲ್ಲಿ ನೆಮ್ಮದಿಯ ಜೀವನ ನಡೆಸಲು ಇದೊಂದು ಗುಣಾತ್ಮಕ ಯೋಜನೆಯಾಗಿದೆ.

ಕಾಯಿದೆಯಂತೆ ಕಾರ್ಖಾನೆಯ ಆಡಳಿತ ಮಂಡಳಿ ೬.೨೫%ರಷ್ಟು ಹಣವನ್ನು ಭವಿಷ್ಯನಿಧಿಗೆ ವಂತಿಕೆ ನೀಡಿದರೆ, ಅಷ್ಟೇ ಹಣವನ್ನು ಕಾರ್ಮಿಕ ವಂತಿಕೆಯಾಗಿ ನೀಡಬೇಕು. ಇದು ಕಾರ್ಮಿಕರ ಕೂಲಿಯಿಂದ ಬೇರ್ಪಟ್ಟಿದ್ದು ಅದರೊಂದಿಗೆ ಸಂಬಂಧ ಹೊಂದಿರುವುದಿಲ್ಲ. ಕಾರ್ಮಿಕ ನಿವೃತ್ತಿಯಾದರೆ, ವಜಾ ಮಾಡಿದರೆ, ಅಂಗವಿಕಲತೆ ಹೊಂದಿ ಕೆಲಸ ಮಾಡದಂತಾದರೆ, ಬೇರೆ ದೇಶದಲ್ಲಿ ಖಾಯಂ ಆಗಿ ನೆಲೆಸಲು ತೀರ್ಮಾನಿಸಿದರೆ ಒಂದೇ ಸಾರಿ (ಇಡೀ ಗಂಟಿನಲ್ಲಿ) ಪರಿಹಾರ ಪಡೆಯಲು ಅರ್ಹನಾಗಿರುತ್ತಾನೆ. ಇಡೀ ದೇಶಕ್ಕೆ ಅನ್ವಯವಾಗುವ ಈ ಕಾಯಿದೆಯು ವಂತಿಕೆ ಹಣಕ್ಕೆ ಬಡ್ಡಿಯೊಂದಿಗೆ ಕೊಡಲು ಅವಕಾಶ ಕಲ್ಪಿಸಿದೆ.

ಈ ನಿಧಿಯಿಂದ ನಿವೇಶನಕೊಳ್ಳಲು, ಮನೆ ಕಟ್ಟಲು ಬಡ್ಡಿ ರಹಿತ ಸಾಲ ಪಡೆದುಕೊಳ್ಳಬಹುದು. ಪಡೆದ ಸಾಲವನ್ನು ನಿವೃತ್ತಿಯಾಗುವವರೆಗೂ ಹಿಂತಿರುಗಿಸದಿದ್ದರೆ, ಸಾಲದ ಮೊತ್ತವನ್ನು ಮುರಿದು ಉಳಿದ ಪ್ರಾವಿಡೆಂಟ್ ಫಂಡ್ ಹಣವನ್ನು ಹಿಂತಿರುಗಿಸಲಾಗುವುದು. ಈ ಸಾಲ ಸೌಲಭ್ಯವಿರುವುದರಿಂದ ಉದ್ಯೋಗದಲ್ಲಿರುವಾಗಲೇ ಹೆಚ್ಚು ಹಣ ಬಳಕೆಯಾಗಿ ನಿವೃತ್ತಿಯ ಸಂದರ್ಭಕ್ಕೆ ಬಹಳ ಕಡಿಮೆ ಹಣ ದೊರೆಯುವ ಸಾಧ್ಯತೆಗಳೇ ಹೆಚ್ಚಾಗಿರುತ್ತವೆ. ಬಾಹುಬಲವಿರುವವರೆಗೂ ದುಡಿದು ನಿವೃತ್ತಿಯಾದಾಗ ಹೊಟ್ಟೆಪಾಡಿಗಾಗಿ ತೊಂದರೆ ಅನುಭವಿಸುವ ಕಾರ್ಮಿಕರಿಗೆ ಇದೊಂದು ಒಳ್ಳೆಯ ಯೋಜನೆಯಾಗಿದೆ.

ಆದರೆ ದಾವಣಗೆರೆ ನಗರದ ಹತ್ತಿ ಗಿರಣಿಗಳು ಅವನತಿಯಾಗುವಾಗ ಪ್ರಾವಿಡೆಂಟ್ ಫಂಡ್ (ಪಿ.ಎಫ್.) ಹಣ ಕಟ್ಟದೆ ಕಾರ್ಮಿಕರು ತೊಂದರೆ ಅನುಭವಿಸಿದ್ದು ನಿಜ. ಉದ್ದಿಮೆದಾರರ ಮೇಲೆ ಈಗಲೂ ಈ ಹಣ ಕಟ್ಟಿಸಿಕೊಳ್ಳುವ ಪ್ರಕ್ರಿಯೆಗಳು ಮುಂದುವರಿದೇ ಇವೆ. ದಾವಣಗೆರೆಯ ಸಿದ್ಧೇಶ್ವರ ಹತ್ತಿಗಿರಣಿ ಡೈರೆಕ್ಟರುಗಳು ಕಾರ್ಮಿಕರ ಪ್ರಾವಿಡೆಂಟ್ ಫಂಡ್ (ಪಿ.ಎಫ್) ಬಾಬ್ತು ೬೮೦೨೬ ರೂ.ಗಳನ್ನು ಕಟ್ಟದೆ ದ್ರೋಹ ಬಗೆದಿದ್ದಾರೆ ಎಂದು ಜನವರಿ ೨೦೦೨ರಲ್ಲಿ ಕೆ.ಟಿ.ಜೆ.ನಗರದ ಪೊಲೀಸ್ ಠಾಣೆಯಲ್ಲಿ ೪೦೬ ಕೇಸನ್ನು ದಾಖಲಿಸಲಾಗಿತ್ತು.[೨] ಈ ಕೇಸು ದಾಖಲಾದ ನಂತರ ಸಂಬಂಧಪಟ್ಟವರು ಹಣಪಾವತಿಸಿದ್ದು ತಿಳಿದುಬರುತ್ತದೆ. ಇಂಥ ಘಟನೆಗಳಿಂದ ಪ್ರಾವಿಡೆಂಟ್ ಫಂಡ್ (ಪಿ.ಎಫ್) ನೀಡುವಲ್ಲೂ ಕಾಯಿದೆ ಉಲ್ಲಂಘನೆಯ ಘಟನೆಗಳಿಲ್ಲದಿಲ್ಲ.

ಹೆರಿಗೆ ಭತ್ಯೆ ಕಾಯಿದೆ ೧೯೬೧

ಮಹಿಳೆಯರನ್ನು ಸಂರಕ್ಷಿಸುವ ಈ ಕಾಯಿದೆ ಚಾರಿತ್ರಿಕ ಮಹತ್ವ ಪಡೆದುಕೊಂಡಿದೆ. ಸಮಾನ ಕೆಲಸಕ್ಕೆ ಸಮಾನ ವೇತನ ಕಾಯಿದೆ ಇದ್ದೂ ಮಹಿಳೆ ಅದನ್ನು ಸಂಪೂರ್ಣವಾಗಿ ಪಡೆದುಕೊಳ್ಳದ ಸಂದರ್ಭದಲ್ಲಿ ಇದು ಪೂರಕವಾಗಿದೆ. ಮಹಿಳೆ ಸ್ವಾವಲಂಬಿಯಾಗಬೇಕಾದರೆ, ನೈಸರ್ಗಿಕ ಸ್ಥಿತಿ-ಗತಿಗಳಿಂದ

ರಕ್ಷಣೆ ಪಡೆದುಕೊಳ್ಳಬೇಕಾದರೆ ಕಾಯಿದೆ ಹಾಗೂ ಅವುಗಳ ಕಡ್ಡಾಯಜಾರಿಗೊಳಿಸುವಿಕೆ ಅಗತ್ಯವಾಗಿದೆ. ಮುಂದುವರೆಯುತ್ತಿರುವ ಭಾರತದಲ್ಲಿ ಮಹಿಳೆ ತನ್ನೆಲ್ಲಾ ಶೋಷಣೆಗಳಿಂದ ರಕ್ಷಿತವಾಗಲು, ಹೆಚ್ಚು ಪ್ರಗತಿ ಕಾಣಲು ಕಾಯಿದೆಗಳ ಮೂಲಕ ರಕ್ಷಣೆ ಒದಗಿಸುವುದು ಅರ್ಥಪೂರ್ಣವಾಗಿದೆ.

ಈ ಕಾಯಿದೆಯು ಕೈಗಾರಿಕೆ, ಗಣಿ, ತೋಟಗಾರಿಕೆಯಲ್ಲಿ ದುಡಿಯುವ ಮಹಿಳೆಯರಿಗೆ ಸಂಬಂಧಿಸಿದ್ದು, ಯಾವುದೇ ಕೈಗಾರಿಕೆಯಲ್ಲಿ ನೇರವಾಗಿ ಅಥವಾ ಗುತ್ತಿಗೆದಾರರ ಮೂಲಕ ನೇಮಕಗೊಂಡವರನ್ನು ಮಹಿಳಾ ಕಾರ್ಮಿಕರು ಎಂದು ಕರೆಯಲಾಗಿದೆ. ೧೯೬೧ರ ಹೆರಿಗೆ ಭತ್ಯೆ ಕಾಯಿದೆ ಜಾರಿಗೆ ಬರುವ ಮೊನಲೇ ದೇಶದ ಬಹುತೇಕ ರಾಜ್ಯಗಳಲ್ಲಿ ಪ್ರತ್ಯೇಕ ಹೆರಿಗೆ ಭತ್ಯೆ ಕಾಯಿದೆಗಳಿದ್ದವು.[೧೩] ಪ್ರಪ್ರಥಮವಾಗಿ ೧೯೪೧ರಲ್ಲಿ ಅಸ್ಸಾಂ ರಾಜ್ಯದಲ್ಲಿ ಜಾರಿಯಲ್ಲಿತ್ತು. ಮೈಸೂರು ಸಂಸ್ಥಾನದಲ್ಲಿ ೧೯೩೭ರಲ್ಲೇ ಇಂಥ ಕಾಯಿದೆಯು ಜಾರಿಯಲ್ಲಿತ್ತು. ಆದರೆ ಪ್ರತಿ ರಾಜ್ಯವೂ ಪ್ರತ್ಯೇಕ ಕಾಯಿದೆ ಹೊಂದಿ ಮಹಿಳೆಯರಿಗೆ ನೀಡುತ್ತಿದ್ದ ಸೌಲಭ್ಯಗಳಲ್ಲುಂಟಾಗಿದ್ದ ವ್ಯತ್ಯಾಸಗಳನ್ನು ಸರಿದೂಗಿಸಲು, ಭಾರತ ಸರ್ಕಾರ ೧೯೬೧ರಲ್ಲಿ ರಾಷ್ಟ್ರ ವ್ಯಾಪ್ತಿಯ ಈ ಕಾಯಿದೆಯನ್ನು ಜಾರಿಗೊಳಿಸಿತು.

ಕಾಯಿದೆಯು ಮಹಿಳೆಯರು ಹೆರಿಗೆ ಪೂರ್ವ ೬ವಾರ, ಹಾಗೂ ನಂತರ ೬ವಾರಗಳ ಸಂಬಳ ಸಹಿತ ರಜೆ ಪಡೆಯುವುದು ಹಕ್ಕೆಂದು ತಿಳಿಸುತ್ತದೆ. ಅಸಂಘಟಿತ ವಲಯದ ಮಹಿಳೆಯರೂ ಈ ಕಾಯಿದೆಯ ವ್ಯಾಪ್ತಿಗೆ ಬರುತ್ತಾರೆ.[೧೪] ಮಹಿಳೆ ಹೆರಿಗೆ ವೇಳೆಯಲ್ಲಿ ಮರಣ ಹೊಂದಿದರೆ ಅವರು ಸೂಚಿಸಿದ್ದ ಸಂಬಂಧಿಕರಿಗೆ ಭತ್ಯೆ ನೀಡಬೇಕಾಗುತ್ತದೆ. ಗರ್ಭಪಾತವಾದಾಗ, ಗರ್ಭಪಾತವಾದ ದಿನದಿಂದ ೬ವಾರಗಳ ಸಂಬಳ ಸಹಿತ ರಜೆಪಡೆದುಕೊಳ್ಳಬಹುದು. ಕಾಯಿದೆ ಮಿತಿಯಲ್ಲಿ ಹೆರಿಗೆಯ ಅವಧಿಯಲ್ಲಿ ಆಕೆಯನ್ನು ಕೆಲಸದಿಂದ ವಜಾಮಾಡುವುದು ಕಾನೂನು ಬಾಹಿರವಾಗಿರುತ್ತದೆ.

ದಾವಣಗೆರೆಯ ಹತ್ತಿಗಿರಣಿಗಳಲ್ಲಿ ದುಡಿಯುತ್ತಿದ್ದ ಮಹಿಳಾ ಕಾರ್ಮಿಕರು ಈ ಕಾಯಿದೆ ವ್ಯಾಪ್ತಿಯ ಕೆಲ ಸೌಲಭ್ಯಗಳನ್ನು ಪಡೆಯುವಲ್ಲಿ ಗಮನಾರ್ಹ ಪಾತ್ರ ವಹಿಸಿದ್ದಾರೆ. ಇಲ್ಲಿನ ದಾವಣಗೆರೆ ಹತ್ತಿಗಿರಣಿಯಲ್ಲಿ (ಡಿ.ಸಿ.ಎಂ.) ಇತರೆ ಎಲ್ಲಾ ಗಿರಣಿಗಳಿಗೂ ಮೊದಲೇ ಹೆರಿಗೆ ಭತ್ಯೆ, ಮಕ್ಕಳ ಪಾಲನೆ ಪೋಷಣೆಯಂತಹ ಸೌಲಭ್ಯಗಳನ್ನು ನೀಡಿದ್ದುದು ಕಂಡುಬರುತ್ತದೆ. ತದನಂತರ ಆ ಸೌಲಭ್ಯ ಇತರೆ ಗಿರಣಿಗಳಿಗೂ ವ್ಯಾಪಿಸಿತು.

ಆದರೆ ಮಹಿಳೆಯರನ್ನು ಕೆಲಸಕ್ಕೆ ತೆಗೆದುಕೊಂಡರೆ ಇಷ್ಟೆಲ್ಲಾ ಸೌಲಭ್ಯಗಳನ್ನು ನೀಡಬೇಕಾದ ಕಾಯಿದೆಯ ಉಲ್ಲಂಘನೆಗಿಂತ ಮಾಲೀಕರು ಪರ್ಯಾಯ ಮಾರ್ಗವನ್ನು ಹುಡುಕಿಕೊಳ್ಳಲಾರಂಭಿಸಿದರು. ನಗರದ ಹತ್ತಿಗಿರಣಿ ಕಾರ್ಮಿಕ ಕಲ್ಯಾಣಾಧಿಕಾರಿಯೊಬ್ಬರು ಹಾಗೂ ಕೆಲ ಕಾರ್ಮಿಕರ ಅಭಿಪ್ರಾಯದಂತೆ ೪೦ ವರ್ಷ ದಾಟಿದ ಮಹಿಳೆಯರನ್ನು ಕೆಲಸಕ್ಕೆ ನೇಮಿಸಿಕೊಳ್ಳಲು ಆಲೋಚಿಸುತ್ತಿದ್ದುದು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಕಂಡುಬರುತ್ತದೆ. ಈ ವಯಸ್ಸಿನ ಮೇಲಿದ್ದರೆ ಗರ್ಭವತಿಯರಾಗುವ ಅವಕಾಶಗಳು ಕಡಿಮೆ ಇದ್ದು ಉಳಿದ ಎಲ್ಲ ವೆಚ್ಚಗಳಿಂದ ರಕ್ಷಣೆ ಪಡೆದುಕೊಳ್ಳಬಹುದಾಗಿತ್ತು. ಹೀಗೆ ಕಾಯಿದೆ ಮಹಿಳೆಯನ್ನು ದುಡಿಯುವ ದಕ್ಷ ವಯಸ್ಸಿನಲ್ಲಿ ಕೆಲಸದಿಂದ ವಂಚಿತಳನ್ನಾಗಿ ಮಾಡುವ ದಿಕ್ಕಿನತ್ತ ಸಾಗಿತು ಎನ್ನಬಹುದು.

ಬೋನಸ್ ಕಾಯಿದೆ ೧೯೬೫

ಕಾರ್ಮಿಕರಿಗೆ ಭದ್ರತೆ ಇದ್ದರೆ ದಕ್ಷರಾಗಿ ಕರ್ತವ್ಯ ನಿರ್ವಹಿಸಲು ಸಾಧ್ಯವಾಗುತ್ತಿತ್ತು. ಅಂಥ ಭದ್ರತೆಗಳಲ್ಲಿ ಆರ್ಥಿಕ ಭದ್ರತೆಯು ಪ್ರಧಾನವಾಗಿದೆ. ಕಾರ್ಮಿಕರು ಆರ್ಥಿಕವಾಗಿ ಉಂಟಾಗುವ ಏರುಪೇರುಗಳನ್ನು ಸರಿದೂಗಿಸಲು ಬೋನಸ್ ಕಾಯಿದೆ ಸಹಕಾರಿಯಾಗಿದೆ.

೨೦ ಮಂದಿ ಕೆಲಸಗಾರರಿರುವ ಸಾರ್ವಜನಿಕ ಮತ್ತು ಖಾಸಗಿ ಕಾರ್ಖಾನೆಗಳು ಬೋನಸ್ ಕಾಯಿದೆಯನ್ನು ಅನುಸರಿಸಬೇಕು. ಕನಿಷ್ಟ ೩೦ ಕೆಲಸದ ದಿನಗಳಲ್ಲಿ ಕೆಲಸಮಾಡಿದ ಎಲ್ಲಾ ಕಾರ್ಮಿಕರೂ ಬೋನಸ್ ಪಡೆಯಲು ಅರ್ಹರಾಗಿರುತ್ತಾರೆ. ಹೊಸದಾಗಿ ಸ್ಥಾಪನೆಯಾದ ಕೈಗಾರಿಕೆಗಳಿಗೆ ಬೋನಸ್ ಪಾವತಿಸುವಲ್ಲಿ ರಿಯಾಯಿತಿ ಇರುತ್ತದೆ. ಕಾಯಿದೆಯಲ್ಲಿ ಕನಿಷ್ಠ ೮.೩೩% ರಿಂದ ಗರಿಷ್ಠ ೨೦% ಬೋನಸ್ ನೀಡಬೇಕೆಂಬ ನಿಯಮವಿದೆ. ಗರಿಷ್ಠ ೨೦% ಬೋನಸ್ ನೀಡುವುದು ೧೯೭೨ರ ತಿದ್ದುಪಡಿಯಿಂದ ಜಾರಿಗೆ ಬಂದಿದೆ. ಬೋನಸ್, ಜೀವನ ವೆಚ್ಚ ಹಾಗೂ ನಿಜವಾದ ವೇತನಗಳ ಅಂತರ ತುಂಬಲು ಕೊಡುವ ಹಣವಲ್ಲ. ಕೈಗಾರಿಕಾ ಸಂಸ್ಥೆಯಲ್ಲಿ ಲಾಭ ಬರಲಿ, ಬರದಿರಲಿ ಮೇಲ್ಕಂಡಷ್ಟು ಬೋನಸ್ ಪಡೆಯಲು ಕಾರ್ಮಿಕ ಅರ್ಹನಾಗಿರುತ್ತಾನೆ. ಕೈಗಾರಿಕೆ ಹೆಚ್ಚು ಲಾಭಗಳಿಸಿರಲಿ, ಬಿಡಲಿ ಕಾರ್ಮಿಕರು ಹೆಚ್ಚು ಬೋನಸ್ ಕೇಳುವ ಸಾಧ್ಯತೆಗಳಿವೆ. ದಾವಣಗೆರೆ ನಗರದಲ್ಲಿ ಸಂಘಟನೆ ಬಲಗೊಂಡ ನಂತರ ನಡೆದ ಹೋರಾಟಗಳಲ್ಲಿ ಬೋನಸ್ ವಿಷಯ ಪ್ರಧಾನವಾದ ಪಾತ್ರ ವಹಿಸಿತ್ತು. ಕಾರ್ಮಿಕರ ಪ್ರಮುಖ ಚಳವಳಿಗಳ ಅಧ್ಯಾಯದಲ್ಲಿ ಈ ಸಂದರ್ಭಗಳನ್ನು ಚರ್ಚಿಸಲಾಗಿದೆ.

ಮಾಲೀಕರು ಆರ್ಥಿಕ ವರ್ಷವೊಂದರಲ್ಲಿ ಹೆಚ್ಚು ಬೋನಸ್ ಕೊಡಬಹುದಾದ ಪರಿಸ್ಥಿತಿಯಲ್ಲಿದ್ದರೂ, ಹಿಂದಿನ ಬೋನಸ್ ಮಟ್ಟಕ್ಕೆ ನಗದು ವ್ಯವಹಾರ ಸೂಚಿಸುವ ಸಾಧ್ಯತೆಗಳಿದ್ದವೆಂದು ಕಾರ್ಮಿಕರು ದೂರಿದ್ದು ಅಂತಹ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ.

ಬೋನಸ್ ಕಾಯಿದೆಯನ್ನು ಕಡ್ಡಾಯವಾಗಿ ಹೇರಿರುವುದರಿಂದ ನಷ್ಟದಲ್ಲಿರುವ ಕೈಗಾರಿಕೆಗಳು ತೀವ್ರಪರಿಣಾಮ ಎದುರಿಸಬೇಕಾಗುತ್ತದೆ. ಇದರಿಂದ ಯಂತ್ರಗಳನ್ನು ಆಧುನೀಕರಿಸಲು ಸಾಧ್ಯವಾಗುವುದಿಲ್ಲ. ಹಾಗೆಂದು ಆರ್ಥಿಕವಾಗಿ ಕೆಳಮಟ್ಟದಲ್ಲಿರುವ ಕಾರ್ಮಿಕರನ್ನು ನಗಣ್ಯನಾಗಿ ಮಾಡಲು ಬರುವುದಿಲ್ಲ. ಕೈಗಾರಿಕೆಗಳು ಅವನತಿಯಾಗುತ್ತಿರುವ ಇಂದಿನ ಪರಿಸ್ಥಿತಿಯಲ್ಲಿ ಈ ಕಾಯಿದೆಯಲ್ಲಿ ಕಾರ್ಖಾನೆ ಆರ್ಥಿಕ ಸ್ಥಿತಿ ಹಾಗೂ ಕಾರ್ಮಿಕರ ಜೀವನಮಟ್ಟಗಳೆರಡನ್ನೂ ಗಮನಕ್ಕೆ ತೆಗೆದುಕೊಂಡು ಮಾಧ್ಯಮಿಕ ಸೂತ್ರ ಅನುಸರಿಸುವಂತಹ ತಿದ್ದುಪಡಿಯಾಗಬೇಕಿದೆ.

ಸಮಾನ ವೇತನ ಕಾಯಿದೆ ೧೯೭೬

ಮಹಿಳೆ ಮತ್ತು ಪುರುಷ ದೈಹಿಕ ವ್ಯತ್ಯಾಸ ಹೊಂದಿರುವ ಹಿನ್ನೆಲೆಯಲ್ಲಿ ವೇತನ ನೀಡುವಲ್ಲೂ ತಾರತಮ್ಯ ಮಾಡಲಾಗುತ್ತಿತ್ತು. ಆ ಸಂದರ್ಭದಲ್ಲಿ ಲಿಂಗಭೇಧವೆಣಿಸದೆ ಸಮಾನ ಕೆಲಸಕ್ಕೆ ಸಮಾನ ವೇತನ ನೀಡುವ ಗುರಿಯೊಂದಿಗೆ ಈ ಕಾಯಿದೆಯು ಶೋಷಣೆಗೊಳಗಾಗಿದ್ದ ಮಹಿಳೆಯರಿಗೆ ಬೆನ್ನೆಲುಬಾಗಿ ನಿಂತಿತು. ಇದು ರಾಷ್ಟ್ರವ್ಯಾಪ್ತಿ ಕಾಯಿದೆಯಾಗಿದ್ದೂ, ಎಲ್ಲ ರೀತಿಯ ಕೈಗಾರಿಕೆಗಳಿಗೂ ಅನ್ವಯವಾಗುತ್ತದೆ.

ಈ ಕಾಯಿದೆಯು ಕೇಂದ್ರ ಸರ್ಕಾರದ್ದಾಗಿದ್ದು, ರಾಜ್ಯ ಸರ್ಕಾರಗಳ ಮುಖಾಂತರ ಜಾರಿಗೊಳಿಸಲಾಗುತ್ತದೆ. ಆದರೆ ಮಹಿಳೆಯರಿಗೆ ಹೆರಿಗೆ, ನಿವೃತ್ತಿ, ವಿವಾಹ ಮುಂತಾದ ಸಂದರ್ಭಗಳಲ್ಲಿ ಕಾಯಿದೆಯು ಅನ್ವಯಿಸುವುದಿಲ್ಲ. ಮಾಲೀಕರು ಸರಿಯಾಗಿ ದಾಖಲೆ ಪತ್ರ ಇಡದಿದ್ದರೆ, ವೇತನ ತಾರತಮ್ಯ ಮಾಡಿದರೆ ದಂಡವಿಧಿಸುವ ಹಕ್ಕು ಸರ್ಕಾರಕ್ಕಿದೆ.

ದೈಹಿಕ ವ್ಯತ್ಯಾಸಗಳಿದ್ದರೂ ಪುರುಷರಷ್ಟು ಅಭ್ಯಾಸಗಳು ಮಹಿಳೆಯರಲ್ಲಿ ಇರುವುದಿಲ್ಲ. ಅಂಥ ಅಭ್ಯಾಸಗಳಿಗೆ ಸಮಯ ವ್ಯಯಮಾಡದೆ ದುಡಿಯುವ ಮಹಿಳೆಯರಿಗೆ ಈ ಕಾಯಿದೆ ರಕ್ಷಣೆ ನೀಡಿತು. ಆದರೆ ಮಾಲೀಕರಲ್ಲಿ ಕೆಲವರು ಹೆಣ್ಣು ಗಂಡಿನೊಂದಿಗೆ ಸರಿಸಮನಾಗಿ ಕಾರ್ಯ ನಿರ್ವಹಿಸಲು ಅಸಾಧ್ಯವೆಂದೇ ವಾದಿಸುತ್ತಾರೆ. ದಾವಣಗೆರೆ ವಿಧಾನಸಭಾ ಸದಸ್ಯರಾಗಿದ್ದ ಕಾರ್ಮಿಕ ಮುಖಂಡ ಪಂಪಾಪತಿಯವರು ರಾಜ್ಯದ ಹಲವೆಡೆ ಸಮಾನ ವೇತನ ನೀಡುತ್ತಿಲ್ಲವೆಂದು ವಿಧಾನಸಭಾ ಅಧಿವೇಶನದಲ್ಲಿ ತೀವ್ರವಾಗಿ ಖಂಡಿಸಿದರು. ಈ ವಿಷಯವು ೧೯೮೦ರ ಜುಲೈ ಅಧಿವೇಶನದ ವಿಧಾನಸಭಾ ನಡಾವಳಿಗಳಲ್ಲಿ ತಿಳಿದುಬರುತ್ತದೆ. ಈ ಚರ್ಚೆಯ ಹಿನ್ನೆಲೆಯಲ್ಲಿ ಕಾಯಿದೆಯೊಂದಿದ್ದರೂ ಮಹಿಳಾ ಕಾರ್ಮಿಕರು ಶೋಷಣೆಗೊಳಗಾಗಿರುವ ವಿಷಯ ಸ್ಪಷ್ಟಪಡುತ್ತದೆ.

ಗ್ರಾಚುಟಿ ಪಾವತಿ ಕಾಯಿದೆ ೧೯೭೨

ಕೈಗಾರಿಕೆಗಳ ಶ್ರೇಯೋಭಿವೃದ್ಧಿಗೆ ದೀರ್ಘಕಾಲ ಸೇವೆಸಲ್ಲಿಸುವ ಕಾರ್ಮಿಕರಿಗೆ ನೀಡುವ ನಿವೃತ್ತಿ ಕೊಡುಗೆಯೆ ಗ್ರಾಚುಟಿ ಕಾಯಿದೆಯಾಗಿದೆ. ಗ್ರಾಚುಟಿಯು ಪಿಂಚಣಿಯಾಗಲಿ ಅಥವಾ ಪ್ರಾವಿಡೆಂಟ್ ಫಂಡ್‌ನ ಭಾಗವಾಗಿರದೆ ಪ್ರತ್ಯೇಕವಾಗಿದೆ, ಹಾಗೂ ಕಡ್ಡಾಯ ಯೋಜನೆಯಾಗಿದೆ. ಈ ಕಾಯಿದೆಯು ಇಡೀ ಭಾರತಕ್ಕೆ ಅನ್ವಯವಾಗುತ್ತದೆ. ೧೦ ಅಥವಾ ಅದಕ್ಕಿಂತ ಹೆಚ್ಚು ಕಾರ್ಮಿಕರಿರುವ ಕಾರ್ಖಾನೆ ಈ ಕಾಯಿದೆಯ ವ್ಯಾಪ್ತಿಗೆ ಬರುತ್ತದೆ. ಈ ಸೌಲಭ್ಯ ಪಡೆದುಕೊಳ್ಳುವ ಕಾರ್ಮಿಕರು ೨೫೦೦ರ ವರೆಗೆ ಮಾಸಿಕ ವೇತನ ಪಡೆದು ೫ ವರ್ಷ ಅಥವಾ ಅದಕ್ಕೂ ಹೆಚ್ಚುಕಾಲ ಸತತ ಸೇವೆ ಸಲ್ಲಿಸಬೇಕು. ಕಾರ್ಮಿಕ ಆಕಸ್ಮಿಕ ಮರಣ ಹೊಂದಿದರೆ ಹತ್ತಿರದ ಸಂಬಂಧಿಕರಿಗೆ (ನಾಮಿನಿ) ಈ ಮೊತ್ತವನ್ನು ಪಾವತಿಸಬೇಕಾಗುತ್ತದೆ. ಕಾರ್ಮಿಕನು ಸೇವೆ ಸಲ್ಲಿಸಿದ ವರ್ಷಗಳನ್ನು ಆಧರಿಸಿ ೧೫ ದಿನಗಳ ವೇತನವನ್ನು ಪಾವತಿಸಬೇಕಾಗುತ್ತದೆ. ಈ ಕಾಯಿದೆಯು ಕಾರ್ಮಿಕರಿಗೆ ಇಳಿವಯಸ್ಸಿನಲ್ಲಿ ರಕ್ಷಣೆ ನೀಡಿದ್ದು, ನೆಮ್ಮದಿಯ ಜೀವನ ಸಾಗಿಸಲು ಆಧಾರಸ್ತಂಭದಂತಿದೆ.

ದಾವಣಗೆರೆ ನಗರದ ಹತ್ತಿಗಿರಣಿಗಳು ಅವನತಿ ಹೊಂದಲು ಆರಂಭವಾದ ನಂತರ ಕೆಲ ಕಾರ್ಮಿಕರು ಈ ಸೌಲಭ್ಯಪಡೆದುಕೊಂಡರು. ಆದರೆ ಈ ಕಾಯಿದೆಯಡಿ ದೊರೆತ ಮೊತ್ತ ಈ ಕಾರ್ಮಿಕನನ್ನು ತೃಪ್ತಿಪಡಿಸಲಿಲ್ಲ. ಅನಕ್ಷರಸ್ಥರೇ ಹೆಚ್ಚಾಗಿರುವ ಕಾರ್ಮಿಕರು ತಮ್ಮ ತಪ್ಪುಗಳಿಂದ ಮಾಲೀಕರು ಕೊಟ್ಟಷ್ಟು, ನಾವು ಪಡೆದಷ್ಟೇ ಗ್ರಾಚುಟಿಯಾಗಿದೆ ಎಂದು ಆರೋಪಿಸುತ್ತಾರೆ. ಆದರೆ ಆಡಳಿತ ಮಂಡಳಿಯವರು ಅವರ ಸೇವೆಯ ಅವಧಿಯಂತೆ, ನಿಯಮಾನುಸಾರ ಗ್ರಾಚುಟಿ ನೀಡಿರುವುದಾಗಿ ತಿಳಿಸುತ್ತಾರೆ. ಈ ಗೊಂದಲಕ್ಕೆ ಕಾರ್ಮಿಕರು ಕೆಲಸಕ್ಕೆ ಸೇರುವಾಗ ತಮ್ಮ ವಯಸ್ಸನ್ನು ಸರಿಯಾಗಿ ನಮೂದಿಸಿಲ್ಲ. ಜೊತೆಗೆ ಕೆಲಸಕ್ಕೆ ಗೈರುಹಾಜರಾಗಿ ೨೪೦ ದಿನ ಕೆಲಸ ಮಾಡದೇ ಹೋದವರು ಈ ಸೌಲಭ್ಯ ಪಡೆದುಕೊಳ್ಳಲು ಅನರ್ಹರಾಗುತ್ತಾರೆ.

ಬಾಲ ಕಾರ್ಮಿಕ ಕಾಯಿದೆ ೧೯೮೬

"ಇಂದಿನ ಮಕ್ಕಳೇ ನಾಳಿನ ಪ್ರಜೆಗಳು" ಎನ್ನುವ ನಾವು ಅವರನ್ನೇ ಕಾರ್ಮಿಕರನ್ನಾಗಿ ದುಡಿಸಿ ಕೊಳ್ಳುತ್ತಿರುವುದು ನಮ್ಮ ಸಮಾಜಕ್ಕೆ ಒಂದು ಕಪ್ಪು ಚುಕ್ಕೆ ಹಾಗೂ ರಾಷ್ಟ್ರ ಕಳಂಕವಾಗಿದೆ. ಅವಕಾಶಗಳಿಂದ ವಂಚಿತರಾದವರು, ಅದೃಷ್ಟಹೀನ ಮುಗ್ಧಮಕ್ಕಳು ಈ ಕಾರ್ಯನಿರ್ವಹಿಸುತ್ತಿದ್ದಾರೆ. ಬಾಲಕಾರ್ಮಿಕ ಪದ್ಧತಿ ನಗರಗಳಲ್ಲಿದ್ದರೂ, ಇದರ ಉಗಮಸ್ಥಾನ ಹಳ್ಳಿಗಳು ಎನ್ನಬೇಕು. ಬಾಲ ಕಾರ್ಮಿಕ ಪ್ರವೃತ್ತಿ ಬೆಳೆಯಲು ಅನಕ್ಷರತೆ, ಬಡತನ ಮೂಲಕಾರಣ ಎಂಬ ವಿಚಾರವನ್ನು ಮರೆಯುವಂತಿಲ್ಲ. ಇಂಥ ಪಿಡುಗಾದ ಈ ಪದ್ಧತಿ ನಿರ್ಮೂಲನೆಗೆ ಭಾರತದ ಸಂವಿಧಾನದಲ್ಲಿ ರಕ್ಷಣೆ ನೀಡಲಾಗಿದ್ದೂ, ಪ್ರತ್ಯೇಕ ಕಾಯಿದೆ ಜಾರಿಯಲ್ಲಿದ್ದರೂ ಸಾಧ್ಯವಾಗಿಲ್ಲ.

೧೯೩೩ರಲ್ಲೇ ಬಾಲಕಾರ್ಮಿಕರನ್ನು ಮನೆಗೆಲಸಗಳಿಗಾಗಿ ಒತ್ತೆ ಇಡಲು ಕರಾರು ಮಾಡಿಕೊಂಡರೆ, ಪೋಷಕರಿಗೆ ೫೦ ರೂ, ಮನೆ ಮಾಲೀಕರಿಗೆ ೨೦೦ ರೂ ಜುಲ್ಮಾನೆ ವಿಧಿಸಲು ತೀರ್ಮಾನಿಸಲಾಯಿತು. ಆದರೆ ಈ ತೀರ್ಮಾನವೂ ಸಮರ್ಪಕವಾಗಿ ಕಾರ್ಯನಿರ್ವಹಿಸಲಾಗಲಿಲ್ಲ.

ಸಂವಿಧಾನದ ರಾಜ್ಯನೀತಿ ನಿರ್ದೇಶಕ ತತ್ವಗಳಲ್ಲಿ ೧೪ ವರ್ಷವರೆಗಿನ ಮಕ್ಕಳಿಗೆ ಕಡ್ಡಾಯವಾಗಿ ಮತ್ತು ಉಚಿತವಾಗಿ ಶಿಕ್ಷಣ ನೀಡಬೇಕೆಂದು ನಿರ್ದೇಶಿಸುತ್ತದೆ. ಅಂತೆಯೇ ಅದು ಮಕ್ಕಳನ್ನು ದುರುಪಯೋಗ ಮಾಡಿಕೊಳ್ಳಬಾರದು ಎಂದು ತಿಳಿಸುತ್ತದೆ. ಈ ನಿರ್ದೇಶನಗಳನ್ನೂ ಸಹ ಪರಿಪೂರ್ಣವಾಗಿ ಅನುಸರಿಸುತ್ತಿಲ್ಲ. ನಂತರ ೧೯೮೬ರಲ್ಲಿ ಪ್ರತ್ಯೇಕ ಕಾಯಿದೆ ಮಾಡಿ, ಕಲಂ ೩ರಲ್ಲಿ ೧೪ ವರ್ಷವಯಸ್ಸಿನ ಮಕ್ಕಳು ರೈಲು, ಹೋಟೆಲ್, ಬಸ್ಸು, ಗಣಿ, ಕೈಗಾರಿಕೆ ಮುಂತಾದವುಗಳಲ್ಲಿ ಕೆಲಸಮಾಡುವುದು ನಿಷಿದ್ಧವೆನ್ನುತ್ತದೆ.

ಆದರೆ ಇಂದೂ ಸಹ ಈ ಕಾಯಿದೆ ಹೇಳುವ ಸ್ಥಳಗಳಲ್ಲಿ ಮುಗ್ಧಮಕ್ಕಳು ದುಡಿಯುತ್ತಿರುವುದು ಸಾಮಾನ್ಯದೃಶ್ಯವಾಗಿದ್ದು, ಈ ನಿಟ್ಟಿನಲ್ಲಿ ಅಧಿಕಾರಿಗಳು ದಿಟ್ಟಕ್ರಮ ಜರುಗಿಸಬೇಕಾದ ಜರೂರಿದೆ. ಬಾಲಕಾರ್ಮಿಕತನಕ್ಕೆ ಬಡತನದ ಹಿನ್ನೆಲೆಯೇ ಹೆಚ್ಚಾಗಿದ್ದು ಗರ್ಭದಲ್ಲೇ ಹುಣ್ಣಿದೆ. ಆದ್ದರಿಂದ ಬಡತನ ನಿರ್ಮೂಲನೆಗೆ ಮೊದಲು ಮುಂದಾಗಬೇಕು. ದಾವಣಗೆರೆ ಹತ್ತಿಗಿರಣಿಗಳಲ್ಲೂ ಆರಂಭದಲ್ಲಿ ಬಾಲಕರು ದುಡಿಯುತ್ತಿದ್ದುದು ಕಂಡುಬರುತ್ತದೆ. ಕಾರ್ಮಿಕ ಮುಖಂಡರಾದ ಶ್ರೀ. ಪಂಪಾಪತಿ, ಶ್ರೀ. ತಿಪ್ಪೇಸ್ವಾಮಿಯವರೂ ಸಹ ಬಾಲಕಾರ್ಮಿಕರಾಗಿಯೇ ಗಿರಣಿ ಸೇರಿದ್ದು. ಆದರೆ ಸಂಘಟನೆ ಬಲಗೊಂಡನಂತರ ಮುಖ್ಯವಾಗಿ ಗಿರಣಿಗಳಲ್ಲಿ ಬಾಲಕಾರ್ಮಿಕರ ದುಡಿಮೆ ಕಡಿಮೆಯಾಯಿತು. ಆದರೆ ಇತರ ಉದ್ಯಮಗಳಲ್ಲಿ ಇಂದೂ ಈ ಪದ್ಧತಿ ಕಂಡುಬರುತ್ತದೆ.

ಕೊನೆಟಿಪ್ಪಣಿಗಳು

೧. ವಿ.ಜಿ. ಗೋಸ್ವಾಮಿ, ಲೇಬರ್ ಅಂಡ್ ಇಂಡಸ್ಟ್ರಿಯಲ್ ಲಾಸ್, ೧೯೯೦, ಪುಟ. ೩೫೭

೨. ಅಜಯ್‌ಗಾರ್ಗ್, ಲೇಬರ್ ಲಾಸ್, ೧೯೯೦, ಪುಟ ೧೬೫

೩. ವಿ.ಆರ್. ಮನೋಹರ್, ದಿ ಎ.ಐ.ಆರ್. ಮ್ಯಾನುಅಲ್, ೧೯೮೯, ಪುಟ ೮೩೭

೪. ಮೈಸೂರು ಇನ್‌ಫರ್ಮೇಷನ್ ಬುಲಟಿನ್, ವಾಲ್ಯೂಮ್ XV ನಂ.೨, ೧೯೫೧, ಪು. ೭೬

೫. ಅಜಯ್‌ಗಾರ್ಗ್, ಲೇಬರ್‌ಲಾಸ್, ೧೯೯೦, ಪುಟ ೮೭

೬. ಎಸ್.ಕೆ. ಮಾಲಿಕ್, ಕಾಮೆಂಟರಿ ಆನ್ ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ಸ್ ಆಕ್ಟ್, ೧೯೪೭, ೨೦೦೦, ಪು ೯೪೨

೭. http://India. eu. org | 437. htm | ಪುಟ ೩

೮. ಅದೇ, ಪುಟ ೫

೯. ವಿ.ಆರ್. ಮನೋಹರ್, ದ ಎ.ಐ.ಆರ್. ಮ್ಯಾನುಅಲ್, ೧೯೮೯, ಪುಟ ೮೧೩

೧೦. ಡಾ. ಡಿ.ಎ. ಲಕ್ಷ್ಮಣ್‌ರಾವ್, ಕಾರ್ಮಿಕ ರಾಜ್ಯವಿಮಾ ಯೋಜನೆ, ಕಾರ್ಮಿಕ ಪತ್ರಿಕೆ, ಡಿಸೆಂಬರ್ ೧೯೬೬, ಪು ೩೧

೧೧. ಅಜಯ್‌ಗಾರ್ಗ್, ಲೇಬರ್‌ಲಾಸ್, ೧೯೯೦, ಪುಟ ೭೩

೧೨. ಕ್ರೈಂ ಕೀ ಪುಸ್ತಕ, ಕೆ.ಟಿ.ಜೆ. ನಗರ ಪೋಲೀಸ್ ಠಾಣೆ, ದಾವಣಗೆರೆ, ೨೦೦೦, ಪುಟ ೬೪

೧೩. ವಿ.ಜಿ. ಗೋಸ್ವಾಮಿ, ಲೆಬರ್ ಅಂಡ್ ಇಂಡಸ್ಟ್ರಿಯಲ್ ಲಾಸ್, ೧೯೯೦, ಪುಟ.೧೫೭

೧೪. http://www. amrc. org. hk | 4605. htm | ಪುಟ ೪

ಅಧ್ಯಾಯ ೮

ಕಾರ್ಮಿಕ ಚಳವಳಿಯ ಮುಖಂಡರು

ಕಾರ್ಮಿಕ ಚಳವಳಿಯ ಮುಖಂಡರು

ಮಾನವ ಸಮಾಜದಲ್ಲಿ ವಿವಿಧ ಕ್ಷೇತ್ರಗಳ ಸುಧಾರಣೆಯ ಕಾರ್ಯಗಳು ನಾಯಕ ಅಥವಾ ಮುಖಂಡರ ನಿರ್ದೇಶನದಲ್ಲಿ ನಿರಂತರವಾಗಿ ಸಾಗಿಬಂದಿವೆ. ಪುರಾತನ ಕಾಲದಿಂದಲೂ ಮುಖಂಡ/ ನಾಯಕರಿಗೆ ಸಾಂಸ್ಕೃತಿಕ ಮಹತ್ವವಿದೆ. ನಾಯಕತ್ವದ ಲಕ್ಷಣಗಳು ಪ್ರಾಚೀನ ಭಾರತದ ಕುಟುಂಬ ಅಥವಾ ಬುಡಕಟ್ಟುಗಳ ಅಸ್ತಿತ್ವದಿಂದಲೇ ಪ್ರಾರಂಭವಾಗಿದ್ದು, ಸಮಾಜದಲ್ಲಿ ಇಂದು ಬಹುತೇಕ ಕಾರ್ಯಗಳು ನಿರಾತಂಕವಾಗಿ ಸಾಗಲು ನಾಯಕರ ಅನಿವಾರ್ಯತೆಯೂ ಇದೆ. ಪುರಾಣ, ರಾಮಾಯಣ, ಮಹಾಭಾರತದ ಘಟನೆಗಳಲ್ಲೂ ನಾಯಕರು/ಮುಖಂಡರ ಪಾತ್ರ ಗಮನಾರ್ಹ. ಆಧುನಿಕ ಕಾಲದಲ್ಲಿ ಸಾಮಾಜಿಕ, ಆರ್ಥಿಕ, ವೈಜ್ಞಾನಿಕ, ರಾಜಕೀಯ, ಧಾರ್ಮಿಕ ಮುಂತಾದ ಕ್ಷೇತ್ರಗಳ ಸಾಧನೆಗಳಿಗೆ ನಾಯಕತ್ವವು ಅಡಿಪಾಯವಾಗಿದೆ. ಕಾರ್ಮಿಕ ಮುಖಂಡರು ಜಾತ್ಯಾತೀತ ಹಿನ್ನೆಲೆಯಲ್ಲಿ ಚಾರಿತ್ರಿಕ ಪ್ರಭಾವವಿಲ್ಲದೆ ತಮ್ಮ ಮೇಲಾಗುವ ಅಮಾನವೀಯ ಶೋಷಣೆಯ ವಿರುದ್ಧ ಧೈರ್ಯದಿಂದ ಮುನ್ನುಗ್ಗಿ ಮೇಲೆ ಬಂದು ನಾಯಕರಾಗಿದ್ದಾರೆ.

ವಿಶ್ವದಾದ್ಯಂತ ಹಲವು ತಜ್ಞರು ಹಲವು ರೀತಿಯಲ್ಲಿ ನಾಯಕ ಎನ್ನುವ ಪದಕ್ಕೆ ಅರ್ಥ ವಿವರಣೆ ನೀಡಿದ್ದಾರೆ. ಬಹುತೇಕ ತಜ್ಞರ ಅರ್ಥದಲ್ಲಿ "ತನ್ನಲ್ಲಿರುವ ಗುಣಗಳಿಂದ ತನ್ನನ್ನು ಅವಲಂಬಿಸಿದವರನ್ನು ನಿರ್ದಿಷ್ಟ ಗುರಿ-ಸಾಧನೆಗಾಗಿ ತನ್ನೊಂದಿಗೆ ಕೊಂಡೊಯ್ಯುವವನೇ ಮುಖಂಡ/ನಾಯಕನಾಗಿರುತ್ತಾನೆ". ಪ್ರಪಂಚದ ನಾನಾ ಕ್ಷೇತ್ರಗಳಲ್ಲಿ ಉದ್ಭವಿಸಿದ ಸಮಸ್ಯೆಗಳು, ಅಂತಹ ಸಮಸ್ಯೆಗಳ ಬದಲಾವಣೆ/ಸುಧಾರಣೆಗೆ ಮುಂದಾದವರು ನಾಯಕರಾಗಿ ಬೆಳೆದಿದ್ದಾರೆ. ಮುಖಂಡ ಎನ್ನುವ ಪದ ಹೊರನೋಟಕ್ಕೆ ಸರಳವಾಗಿ ಕಂಡರೂ ಅದರ ಜವಾಬ್ದಾರಿಗಳು ಬಹಳ ಆಳವಾಗಿವೆ.

ಮುಖಂಡನೆನಿಸಿಕೊಳ್ಳುವವನು ಒಂದು ವರ್ಗದ ಬದುಕನ್ನು ಹಸನುಮಾಡುವ ಕಾಳಜಿ ಹೊತ್ತಿರಬೇಕು. ಮುಖಂಡನ ಬದುಕು ನಿರ್ಭಯ, ಸ್ವಚ್ಛ ಚಾರಿತ್ರ್ಯ ಮೈಗೂಡಿಸಿಕೊಂಡು ಆದರ್ಶಪ್ರಾಯವಾಗಿರಬೇಕು. ಒಂದು ಸಮುದಾಯದ ಮುಖಂಡರಾದವರು, ಅವರ ಮೇಲೆ ತಮ್ಮನ್ನು ಹೇರಿಕೊಳ್ಳದೆ, ಅವಲಂಬಿತರು ಇಷ್ಟಪಡುವಂತಿರಬೇಕು. ಸಂಘಟಿಸಿ ಹೋರಾಟಕ್ಕೆ ಕರೆತರುವ ನೀತಿ, ಪ್ರತಿಭೆ, ತಾಳ್ಮೆ, ವ್ಯವಹಾರ ಚತುರತೆ ಮುಂತಾದ ಮೌಲ್ಯಗಳನ್ನು ಹೊಂದಿ ಚರಿತ್ರೆಯಲ್ಲಿ ಸ್ಥಾನಪಡೆದುಕೊಳ್ಳುವಂತಿರಬೇಕು. ಇಂಥ ಹಿನ್ನೆಲೆ ಹೊತ್ತು ಬಂದ ಗಾಂಧಿ, ಲಿಂಕನ್, ಲೆನಿನ್ ರಂತಹ ಪ್ರಜ್ಞಾವಂತ ನಾಯಕರನ್ನು ಚರಿತ್ರೆಯಲ್ಲಿ ಕಂಡಿದ್ದೇವೆ. ಹಿಟ್ಲರ್, ಮುಸಲೋನಿ, ಟೋಜೋ ರಂತಹ ಸರ್ವಾಧಿಕಾರಿ ಮನೋಭಾವನೆಯ ನಾಯಕರೂ

ಆಗಿ ಹೋಗಿದ್ದಾರೆ. ನಮ್ಮ ದೇಶದ ಪ್ರಾಚೀನ, ಮಧ್ಯಕಾಲೀನ, ಆಧುನಿಕ ಕಾಲದ ಮೊದಲರ್ಧದಲ್ಲಿ ಬಹುತೇಕ ನಾಯಕರು ಯಾವುದೇ ತರಬೇತಿ ಶಾಲೆಯಲ್ಲಿ ತರಬೇತಿ ಪಡೆಯದೆ, ಅನುಭವದ ಕುಲುಮೆಯಲ್ಲೇ ರೂಪು ಪಡೆದವರಾಗಿದ್ದಾರೆ.

ಅಂತೆಯೇ ಔದ್ಯೋಗಿಕ ಕ್ರಾಂತಿಯಿಂದ, ಭಾರಿ ಕೈಗಾರಿಕೆಗಳು ಜನ್ಮವೆತ್ತಿ ಅಲ್ಲಿ ದುಡಿಯುವ ಕಾರ್ಮಿಕರು ತೊಂದರೆಗಳನ್ನು ಎದುರಿಸಬೇಕಾದ ಸಂದರ್ಭದಲ್ಲಿ ಕಾರ್ಮಿಕ ಮುಖಂಡರು ಹುಟ್ಟಿಕೊಂಡರು. ಕಾರ್ಮಿಕ ಮುಖಂಡರಲ್ಲಿ ಎರಡು ವರ್ಗಗಳಿವೆ. ಅವುಗಳೆಂದರೆ : ಕಾರ್ಖಾನೆಯ ಒಳಗಿನ ಮುಖಂಡರು ಹಾಗೂ ಕಾರ್ಖಾನೆಯ ಹೊರಗಿನ ಮುಖಂಡರು. ಇಂಗ್ಲೆಂಡಿನಲ್ಲಿ ಅಲೆನ್, ಅಪೊಗಾರ್ತ್, ಗ್ಯೂಲೆ, ಕಾಲ್‌ಸನ್ ಮುಂತಾದ ನಾಯಕರು ಔದ್ಯೋಗಿಕ ಕ್ರಾಂತಿ ನಂತರ ಕಾರ್ಮಿಕರ ಸ್ಥಿತಿಗತಿ ಸುಧಾರಿಸಲು ಮುಂದಾದ ನಾಯಕರಾಗಿದ್ದಾರೆ. ಭಾರತದಲ್ಲಿ ಗಾಂಧಿ, ಅಂಬೇಡ್ಕರ್, ವಿ.ವಿ.ಗಿರಿ, ಕರ್ನಾಟಕದಲ್ಲಿ ಎನ್.ಡಿ.ಶಂಕರ್, ಕೆ.ಟಿ.ಭಾಷ್ಯಂ, ಎಸ್.ಕೆ. ಕಾಂತಾ ಮುಂತಾದ ಹೊರಗಿನ ಕಾರ್ಮಿಕ ಮುಖಂಡರು ಕಾರ್ಮಿಕರನ್ನು ಶೋಷಣೆಯಿಂದ ಮುಕ್ತಗೊಳಿಸಲು ಯತ್ನಿಸಿದ್ದಾರೆ.

ಒಳಗಿನ ಮುಖಂಡರಾದ ಬಿ.ಪಿ.ವಾಡಿಯಾ, ಎಂ.ಎನ್. ಜೋಷಿ ಮುಂತಾದವರು ದಿಟ್ಟತನದಿಂದ ಹೋರಾಟ ಮನೋಭಾವನೆ ಬೆಳಸಿಕೊಂಡು ಕಾರ್ಮಿಕರ ನೇತಾರರಾಗಿದ್ದಾರೆ. ಕರ್ನಾಟಕದ ದಾವಣಗೆರೆ ನಗರದಲ್ಲೂ ಒಳ, ಹೊರ ಮುಖಂಡರು ಇದ್ದು ಇಲ್ಲಿನ ಹತ್ತಿಗಿರಣಿಗಳು ಬಹಳಷ್ಟು ಚಳವಳಿ ನಡೆಸಿ ತಮ್ಮ ಸ್ಥಿತಿ-ಗತಿ ಸುಧಾರಿಸಿಕೊಳ್ಳುವ ಯತ್ನ ಮಾಡಿವೆ. ದಾವಣಗೆರೆ ನಗರದ ಹತ್ತಿ ಗಿರಣಿಗಳಲ್ಲಿ ಪ್ರಾರಂಭದ ಹಂತದಲ್ಲಿ ಶ್ರೀ. ಸುರೇಶ್, ಶ್ರೀ. ಶೇಖರಪ್ಪ, ಶ್ರೀ. ಪಂಪಾಪತಿ ಎಂಬ ಕಾರ್ಮಿಕ ಮುಖಂಡರನ್ನೂ, ಎರಡನೇ ಹಂತದಲ್ಲಿ ಶ್ರೀ. ಹೆಚ್.ಕೆ.ರಾಮಚಂದ್ರಪ್ಪ, ಶ್ರೀ. ಎಂ.ಜಿ.ತಿಪ್ಪೇಸ್ವಾಮಿ, ಶ್ರೀಮತಿ ಜಾಹಿರಾಬಿ, ಶ್ರೀ. ಆನಗೋಡು ರಾಮಚಂದ್ರಪ್ಪ, ಶ್ರೀ. ಲಾವಣಿ ಬುಡೇನ್ ಸಾಬ್ ಮುಂತಾದ ಒಳ ಕಾರ್ಮಿಕ ಮುಖಂಡರನ್ನೂ, ಶ್ರೀ. ಎಂ.ಸಿ.ನರಸಿಂಹನ್, ಶ್ರೀ. ಆನಂದತೀರ್ಥ, ಶ್ರೀ. ಜೆ.ಎಂ.ಹನುಮಂತಪ್ಪ ಮುಂತಾದ ಹೊರಗಿನ ಮುಖಂಡರು ಸಂದರ್ಭದ ಶಿಶುಗಳಾಗಿ ಕಾರ್ಮಿಕವರ್ಗದ ನೇತಾರರಾಗಿ ತಮ್ಮನ್ನು ನಂಬಿದ್ದ ವರ್ಗವನ್ನು ಮೇಲೆತ್ತಲು ಯತ್ನಿಸಿದ್ದಾರೆ. ಆದರೆ ಎಲ್ಲಾ ನಾಯಕರೂ ಮೊದಲ ಹಂತದಲ್ಲಿ ಒಂದೇ ಸಿದ್ಧಾಂತದ ಅಡಿಯಲ್ಲಿ ಚಳವಳಿ ರೂಪಿಸಿದ್ದು, ಮುಂದುವರಿಸಿದ್ದು, ಇಲ್ಲಿನ ಮುಖ್ಯಾಂಶಗಳಲ್ಲೊಂದಾಗಿದೆ.

ಈ ಮುಖಂಡರಲ್ಲಿ ಕೆಲವರ ಮನೆತನದ ಹಿನ್ನೆಲೆ, ಚಳವಳಿಯತ್ತ ಸಾಗಲು ಉಂಟಾದ ಪ್ರೇರಣೆ, ಪ್ರಭಾವ ಹಾಗೂ ಹೋರಾಟದ ಹಂತಗಳನ್ನು ಈ ಅಧ್ಯಾಯದಲ್ಲಿ ಚರ್ಚಿಸುವ ಉದ್ದೇಶವನ್ನು ಹೊಂದಲಾಗಿದೆ.

ಶ್ರೀ. ಶೇಖರಪ್ಪ (೧೯೩೫-೧೯೭೦)

ಶ್ರೀ ಶೇಖರಪ್ಪನವರು ೧-೭-೧೯೩೫ರಲ್ಲಿ ದಾವಣಗೆರೆ ನಗರಕ್ಕೆ ಹೊಂದಿಕೊಂಡಿರುವ ಆವರಗೆರೆ ಗ್ರಾಮದಲ್ಲಿ ಜನಿಸಿದರು.[೧] ಆವರಗೆರೆ ಗ್ರಾಮದ ಬಸಪ್ಪನವರ ೩ನೇ ಪುತ್ರರಾದ ಇವರು ಧೈರ್ಯವಂತ ವ್ಯಕ್ತಿಯಾಗಿದ್ದರು.[೨] ಮನೆಯ ಆರ್ಥಿಕ ಪರಿಸ್ಥಿತಿಯ ಹಿನ್ನೆಲೆಯಲ್ಲಿ ದಾವಣಗೆರೆ ಹತ್ತಿಗಿರಣಿಯಲ್ಲಿ

ಕೆಲಸಕ್ಕೆ ಸೇರಿದರು.[೩] ಗಿರಣಿಯಲ್ಲಿ ಕಾರ್ಯನಿರ್ವಹಿಸುತ್ತಾ ಕಾರ್ಮಿಕರ ಶೋಷಣೆಯನ್ನು ಗಮನಿಸಿದರು. ಈ ವೇಳೆಗಾಗಲೇ ಮಾರ್ಕ್ಸ್‌ನ ವಿಚಾರಧಾರೆಗಳು ನಗರಕ್ಕೆ ಆಗಮಿಸಲಾರಂಭಿಸಿದವು. ಎನ್.ಡಿ. ಶಂಕರ್‌ರಂಥ ನಾಯಕರು ಇವರಿಗೆ ಮಾರ್ಗದರ್ಶನ ನೀಡುತ್ತಿದ್ದರೆ, ಪುಢಾರಿ ಮುರಿಗೆಯ್ಯ ಎಂಬ ಸ್ಥಳೀಯ ಪುಡಾರಿ ಪತ್ರಿಕೆ ಸಂಪಾದಕರು ಪ್ರೇರಣೆ ನೀಡುತ್ತಿದ್ದರು. ಶ್ರೀ ಶೇಖರಪ್ಪನವರು ತಮ್ಮ ಜೊತೆಗೆ ದುಡಿಯುತ್ತಿದ್ದ ಕಾರ್ಮಿಕರನ್ನು (ಅಸಹನೀಯವಾಗಿ) ಶೋಷಿಸುತ್ತಿದ್ದ ಬಂಡವಾಳಶಾಹಿಗಳ ವಿರುದ್ಧ ಸಂಘಟಿಸಲು ಮುಂದಾಗಿ ಚಳವಳಿಯ ಮುಂದಾ೯ತ್ವ ವಹಿಸಿದರು. ಹೀಗೆ ಸಂಘಟನೆಗೆ ಮುಂದಾದ ಇವರಿಗೆ ದೊರೆತ ಫಲವೇನೆಂದರೆ ಬಂಡವಾಳಿಗರ ಪ್ರಬಲ ವಿರೋಧ. ಈ ವಿರೋಧದ ಅಲೆ ಅವರನ್ನು ಜೈಲಿಗೆ ಕಳುಹಿಸುವ ಹಂತ ತಲುಪಿತು. ೧೯೬೪ರಲ್ಲಿ ಕಾಟನ್ ಮಿಲ್ಲಿನಲ್ಲಿ ಹೆಗ್ಗಪ್ಪನ ಕೊಲೆ ನಡೆಯಿತು.[೪] ಈ ಕೊಲೆ ಕೇಸಿನ ಹಿನ್ನೆಲೆಯಲ್ಲಿ ಸಂಘಟನೆಗೆ ಮುಂದಾದ ಶ್ರೀ ಶೇಖರಪ್ಪ, ಶ್ರೀ ತಿಪ್ಪೇಸ್ವಾಮಿ, ಶ್ರೀಪಂಪಾಪತಿ, ಶ್ರೀ ಎಂ.ಮೂರ್ತಿ ಮುಂತಾದವರು ಸೆರೆ೯ಾಸ ಅನುಭವಿಸಬೇಕಾಯಿತು. ಆರಂಭದ ಹಂತದಲ್ಲೇ ಕಾರ್ಮಿಕ ಚಳವಳಿಯಲ್ಲಿ ನಿರತರಾದ ಪ್ರಮುಖ ಮುಖಂಡರು ಸೆರೆವಾಸಕ್ಕೆ ತೆರಳಿದ್ದು ಸಂಘಟನೆಗೆ ತಾತ್ಕಾಲಿಕ ಹಿನ್ನಡೆ ಕಾಣುವಂತಾಯಿತು. ಇಂತಹ ಸಂದರ್ಭದಲ್ಲಿ ನಾಯಕತ್ವದ ಶೂನ್ಯತೆ ಉಂಟಾದಾಗ ಕಾರ್ಮಿಕ ಮುಖಂಡರಾದ ಶ್ರೀ ಸುರೇಶ್, ಶ್ರೀ. ನೀಲಪ್ಪ ಮತ್ತು ಶ್ರೀ ಆನಗೋಡು ರಾಮಚಂದ್ರಪ್ಪ ನಾಯಕತ್ವ ನೀಡಲು ಮುಂದಾಗಿದ್ದು ಸ್ವಾಗತಾರ್ಹ ಘಟ್ಟವಾಗಿತ್ತು.[೫]

ದಿಟ್ಟತನದ ಶ್ರೀ ಶೇಖರಪ್ಪನವರು ಕಾರ್ಮಿಕರ ಸಂಘಟನೆಗೆ ಮುಂದಾಗಿದ್ದೇ ಅವರು ಈ ಸ್ಥಿತಿಯನ್ನು ಎದುರಿಸಲು ಸಂದರ್ಭವಾಯಿತು. ಮಾಲೀಕರ ವಿರುದ್ಧ ಕಾರ್ಮಿಕರು ತಮ್ಮ ಹಕ್ಕನ್ನು ಕೇಳಲು ಭರವಸೆ ನೀಡುವ ಶಕ್ತಿಯಾಗಿ ಉದಯಿಸಿದ ಇವರು ಆರಂಭದಲ್ಲಿ ಸೋಲಬೇಕಾಯಿತಾದರೂ ಇವರ ಯತ್ನದ ಫಲ ನಗರದಲ್ಲಿ ಕಾರ್ಮಿಕರು ಮುಂದೆ ಶಕ್ತಿಯಾಗಿ ಬೆಳೆದರು. ಆದರೆ ಕಾರ್ಮಿಕರ ಹಕ್ಕು ಮತ್ತು ಬೇಡಿಕೆಗಳ ಧ್ವನಿ ಗಿರಣಿ ಮಾಲೀಕರ ಮನೆಬಾಗಿಲನ್ನು ಬಡಿಯಲಾರಂಭಿಸಿದವು. ಇದೇ ಸಂದರ್ಭದಲ್ಲಿ ೧೯೭೦ರಲ್ಲಿ ಶ್ರೀ ಸುರೇಶ್ ಹಾಗೂ ಶ್ರೀ ಶೇಖರಪ್ಪನವರ ಕೊಲೆ (ದಾವಣಗೆರೆ) ನಡೆಯಿತು.[೬] ಆರಂಭಿಕ ಹಂತದಲ್ಲಿ ತ್ರಿಮೂರ್ತಿ ನಾಯಕರಲ್ಲಿ ಇಬ್ಬರ ಕೊಲೆಯಾದರೆ ಶ್ರೀಪಂಪಾಪತಿಯವರ ಮೇಲೆ ಹಲ್ಲೆ ನಡೆದು ಅವರು ಬದುಕುಳಿದರು. ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಕಾರ್ಮಿಕರನ್ನು ಸಂಘಟಿಸುವುದು ಸಾಮಾನ್ಯ ಕೆಲಸವಲ್ಲ ಎಂಬುದನ್ನು ಈ ಕೊಲೆ ಸ್ಪಷ್ಟಪಡಿಸಿದರೆ, ಮತ್ತೊಂದೆಡೆ ಹುತಾತ್ಮರಾದ ಕಾರ್ಮಿಕ ಮುಖಂಡರ ಹಿಂದಿದ್ದ ಕಾರ್ಮಿಕರು ಪ್ರಬುದ್ಧವಾಗಿ ಬೆಳೆದರು. ಈ ಘಟನೆ ಕಾರ್ಮಿಕ ಮುಖಂಡರ ಜೀವ ತೆಗೆದುಕೊಂಡಿತಾದರೂ ಆ ಘಟನೆಯೇ ಕಾರ್ಮಿಕ ವರ್ಗಕ್ಕೆ ಹಾಗೂ ಅವರ ಹೋರಾಟಕ್ಕೆ ಚೈತನ್ಯ ನೀಡಿತು. ಕಾರ್ಮಿಕರನ್ನು ದಾಸ್ಯ ಮತ್ತು ಶೋಷಣೆಗಳಿಂದ ಮುಕ್ತಗೊಳಿಸುವುದೇ ಶ್ರೀ ಶೇಖರಪ್ಪನವರ ಗುರಿಯಾಗಿತ್ತು.

ಶ್ರೀ. ಸುರೇಶ್ (೧೯೩೯-೧೯೭೦)

ದಾವಣಗೆರೆ ನಗರದ ಕಾರ್ಮಿಕ ಮುಖಂಡರಲ್ಲಿ ಶ್ರೀ. ಸುರೇಶ್‌ರವರಿಗೂ ಪ್ರಮುಖ ಸ್ಥಾನವಿದೆ. ಶ್ರೀ. ಶೇಖರಪ್ಪನವರಿಗೆ ಸಂಘಟನೆ ಹಿನ್ನೆಲೆಯಲ್ಲಿ ಎಲ್ಲಾ ರೀತಿಯ ಸಹಕಾರ ನೀಡಿದವರಾಗಿ ಅವರಂತೆಯೇ

ಕೊಲೆಗೀಡಾದ ಮುಖಂಡರಾಗಿದ್ದಾರೆ. ಇವರ ಕೊಲೆಯೂ ಸಹ ಕಾರ್ಮಿಕ ಸಂಘಟನೆಗೆ ಉಕ್ಕಿನಂತಹ ದೃಢತೆಯನ್ನು ತಂದುಕೊಟ್ಟಿತು.

ಕಾರ್ಮಿಕರ ಧೀಮಂತ ನಾಯಕರಾಗಿ ಸಂಘಟನೆಗಾಗಿ ತನ್ನ ಪ್ರಾಣವನ್ನೇ ನೀಡಿದ ಶ್ರೀ ಸುರೇಶ್‌ರವರು ದಿ.೧೮-೬-೧೯೪೯ರಲ್ಲಿ ಜನಿಸಿದರು.[೭] ಮೂಲತಃ ಅಜ್ಜಂಪುರದವರಾದ ಇವರು, ಜೀವನ ನಿರ್ವಹಣೆ ಕಷ್ಟವಾಗಿ ತಾಯಿಯೊಂದಿಗೆ ದಾವಣಗೆರೆಗೆ ಬಂದರು.[೮] ಎಸ್.ಎಸ್.ಎಲ್.ಸಿ. ಮುಗಿಸಿ ಕಾರ್ಮಿಕರಾಗಿ ದಾವಣಗೆರೆ ಕಾಟನ್ ಮಿಲ್ಸ್‌ನಲ್ಲಿ ಕೆಲಸಕ್ಕೆ ಸೇರಿದರು.[೯] ಓದು ಬರಹ ಬರುತ್ತಿದ್ದರಿಂದ ಕಾರ್ಮಿಕ ಸಂಘದ ಲೆಕ್ಕಪತ್ರವನ್ನೂ ನೋಡುತ್ತಿದ್ದರು. ಬಡವರ ಹೊಟ್ಟೆಯಲ್ಲಿ ಹುಟ್ಟಿದ ಇವರು ವಿದ್ಯೆಯಲ್ಲಿ ಬುದ್ಧಿವಂತರಾಗಿ ಬಡವರ ಸಲುವಾಗಿ ದುಡಿದು ಮಡಿದ ವೀರರಾಗಿದ್ದಾರೆ.[೧೦] ತಮ್ಮಲ್ಲಿ ಅಡಗಿದ್ದ ದಿಟ್ಟತನವನ್ನು ಬಳಸಿ ಕಾರ್ಮಿಕರನ್ನು ಸಂಘಟನೆ ಮಾಡುತ್ತಾ ಮುನ್ನಡೆದರು. ೧೯೬೬ರಲ್ಲಿ ಶ್ರೀ ಸುರೇಶ್ ನಾಯಕತ್ವದಲ್ಲಿ ಮಾಲೀಕರ ವಿರುದ್ಧ ಪ್ರಥಮ ಪಂಜಿನ ಮೆರವಣಿಗೆಯನ್ನು ನಡೆಸಿದರು.[೧೧] ಮಾಲೀಕರ ವಿರುದ್ಧ ಅಂದಿನ ಪರಿಸ್ಥಿತಿಯಲ್ಲಿ ಎದುರುನಿಂತು ಮಾತನಾಡುವುದೂ ಅಪರಾಧವಾಗುತ್ತಿತ್ತು. ಇಂಥ ವಾತಾವರಣದಲ್ಲಿ ಸಭೆಗಳನ್ನು ನಡೆಸಿ ಮಾಲೀಕರು ಮತ್ತು ಸರ್ಕಾರದ ವಿರೋಧಿ ನೀತಿಗಳನ್ನು ತೀವ್ರವಾಗಿ ಖಂಡಿಸಿದರು. ಹೀಗೆ ಕಾರ್ಮಿಕರನ್ನು ಪ್ರಜ್ಞಾವಂತರನ್ನಾಗಿ ಮಾಡುತ್ತಿದ್ದ ಇವರಿಗೆ ದೊರೆತ ಪಟ್ಟವೇನು? ೧೯೬೬ರಲ್ಲಿ ಆಡಳಿತ ಮಂಡಳಿಯ ಕೈಗೊಂಬೆ ಸಂಘದ ನಾಯಕತ್ವ ವಹಿಸಿ ರಂಗ ಪ್ರವೇಶಿಸಿದ ಶ್ರೀ ರೇವಣಸಿದ್ದಪ್ಪನವರ ಕೊಲೆ ನಡೆಯಿತು. ಶ್ರೀ ಸುರೇಶ್, ಶ್ರೀ ಆನಗೋಡು ರಾಮಚಂದ್ರಪ್ಪ, ಶ್ರೀ ಗೋಪಾಲ್ ಸೇರಿದಂತೆ ೯ ಜನ ಜೈಲಿಗೆ ಹೋದರು.[೧೨] ಶ್ರೀ ಶೇಖರಪ್ಪನವರನ್ನು ಸೆರೆವಾಸಕ್ಕೆ ಕಳುಹಿಸಿದಂತೆಯೇ ಅವರ ಸಹಪಾಠಿಯಾಗಿದ್ದ ಶ್ರೀ ಸುರೇಶ್‌ರವರನ್ನೂ ಸೆರೆವಾಸಕ್ಕೆ ಕಳುಹಿಸಲಾಯಿತು.

ಈ ಘಟನೆಯಿಂದ ಕಾರ್ಮಿಕರನ್ನು ಸಂಘಟಿಸುವ ನಾಯಕರಿಗೆ ಉಳಿಗಾಲವಿಲ್ಲ. ಅವರು ಮುಂದೆ ಎಂಥ ದುರಂತವನ್ನಾದರೂ ಎದುರಿಸಲು ಸಿದ್ಧರಾಗಬೇಕು ಎಂಬ ಸಂಗತಿಯನ್ನು ಸಾರುವಂತಿತ್ತು. ಆದರೆ ಬಹುತೇಕ ಕಾರ್ಮಿಕ ಮುಖಂಡರು ಕೊಲೆ ಪ್ರಕರಣಗಳಲ್ಲಿ ನಮ್ಮ ಪಾತ್ರವಿರಲಿಲ್ಲ ಎಂದೇ ಹೇಳುತ್ತಾರೆ. ಮಾಲೀಕರು ವಿನಾಕಾರಣ ನಮ್ಮನ್ನು ಕೇಸಿಗೆ ಸೇರಿಸುತ್ತಿದ್ದರು ಎನ್ನುತ್ತಾರೆ. ಆದರೆ ಈ ಘಟನೆಗಳೆಲ್ಲಾ ನ್ಯಾಯಾಲಯದಲ್ಲಿ ತೀರ್ಮಾನವಾಗಿ ಮುಖಂಡರು ಶಿಕ್ಷೆಯನ್ನು ಅನುಭವಿಸಿದ್ದಾಗಿದೆ.

ಕಾರ್ಮಿಕರ ಸವಲತ್ತುಗಳಿಗಾಗಿ ಯತ್ನಿಸುತ್ತಿದ್ದ ಶ್ರೀ ಸುರೇಶ್‌ರವರೂ ೧೯೭೦ರಲ್ಲಿ ಕೊಲೆಯಾದರು. ಹೀಗೆ ಸಂಘಟನೆಗೆ ಹೆಗಲುಕೊಟ್ಟು ದುಡಿಯುತ್ತಿದ್ದ ಮುಖಂಡರಿಬ್ಬರೂ ಕೊಲೆಯಾದ್ದರಿಂದ ನಗರದ ಕಾರ್ಮಿಕ ಸಂಘಗಳ ಮೇಲಾದ ಪರಿಣಾಮವೇನು? ಎಂದು ಚರ್ಚಿಸುವುದು ಸಂದರ್ಭೋಚಿತವಾಗಿರುತ್ತದೆ. ಈ ಜೋಡಿಕೊಲೆ ನಡೆದದ್ದು ಕಾರ್ಮಿಕ ಸಂಘಗಳ ವೈಮನಸ್ಸಿನಿಂದ ಎಂದು ದಾಖಲಾತಿಗಳು ದೃಢಪಡಿಸುತ್ತವೆ. ಸಿ.ಪಿ.ಎಂ.ನಾಯಕ ಸೂರ್ಯನಾರಾಯಣ್ ಭಾಷಣ ಮಾಡುತ್ತಿದ್ದ ಘಟನೆ ಬಹುದೊಡ್ಡ ಗಲಭೆಗೆ ನಾಂದಿಯಾಯಿತು.[೧೩] ಭಾರತೀಯ ಕಮ್ಯುನಿಸ್ಟ್ ಪಕ್ಷದ ಧೀರ ಮುಂದಾಳುಗಳು ಪಕ್ಷ ಮತ್ಸರದಿಂದ ಕೊಲೆಯಾದರು. ಈ ಘಟನೆಯಿಂದ ಭಾರತೀಯ ಕಮ್ಯುನಿಸ್ಟ್ (ಮಾರ್ಕ್ಸ್‌ವಾದಿ) (ಸಿ.ಪಿ.ಎಂ) ಪಕ್ಷವು ತನ್ನ ಸಮಾಧಿಯನ್ನು ತಾನೇ ತೋಡಿಕೊಂಡಿತು. ಮುಂದೆ ಎರಡು ದಶಕಗಳ ಕಾಲ ಸಿ.ಪಿ.ಐ.

ಪಕ್ಷವು ದಾವಣಗೆರೆ ನಗರದ ಕಾರ್ಮಿಕ ವರ್ಗಕ್ಕೆ ಸಮರಶೀಲ ಚೈತನ್ಯವನ್ನು, ಉಕ್ಕಿನಂತಹ ದೃಢತೆಯನ್ನು ತಂದುಕೊಟ್ಟಿತು. ಈ ಕೊಲೆ ಯತ್ನದಲ್ಲಿ ಬದುಕುಳಿದ ಶ್ರೀ ಪಂಪಾಪತಿಯವರು ಕಾರ್ಮಿಕರ ಅನುಕಂಪಕ್ಕೊಳಗಾದರು. ಅವರಲ್ಲಿ ವಿಶ್ವಾಸವಿಟ್ಟ ಕಾರ್ಮಿಕರು ದಿಟ್ಟತನದಿಂದ ಅವರ ಕೈ ಬಲಪಡಿಸಿದರು. ಹುತಾತ್ಮರಾದ ಶ್ರೀ ಸುರೇಶ್, ಶ್ರೀ ಶೇಖರಪ್ಪನವರ ಸ್ಮರಣಾರ್ಥ ರಾಜ್ಯಕ್ಕೇ ಹೆಸರಾದಂತಹ ಮೇ-ದಿನಾಚರಣೆಯನ್ನು ದಾವಣಗೆರೆ ನಗರದಲ್ಲಿ ಆಚರಿಸಿ ಗೌರವ ನಮನ ಸಲ್ಲಿಸುತ್ತಾ ನಡೆದಿದ್ದಾರೆ. ಇವರ ಬಲಿದಾನ ಅವರ ಕುಟುಂಬ ಪರಿವಾರಕ್ಕೆ ತುಂಬಲಾರದ ನಷ್ಟವಾದರೆ, ಕಾರ್ಮಿಕರಿಗೆ ಗಳಿಸಲಾರದ ಶಕ್ತಿಯನ್ನು ತುಂಬಿತು. ಬೆಳೆಯುತ್ತಿದ್ದ ಕಮ್ಯುನಿಸ್ಟ್ ಪಕ್ಷ ಎಲ್ಲಾ ಅಗ್ನಿಪರೀಕ್ಷೆಗಳನ್ನು ಮೆಟ್ಟಿ ಮುನ್ನಡೆದು ಚಿತ್ರದುರ್ಗ ಜಿಲ್ಲೆ ಹಾಗೂ ರಾಜ್ಯದಲ್ಲೂ ಗುರುತಿಸಬಹುದಾದ ಸ್ಥಾನಪಡೆಯಲು ಸಾಧ್ಯವಾಯಿತು.

ಶ್ರೀ. ಪಂಪಾಪತಿ (೧೯೨೯-೨೦೦೦)

ಕಾರ್ಮಿಕ ಚಳವಳಿಯ ರೂವಾರಿಗಳಲ್ಲಿ ಪಂಪಾಪತಿಯವರು ಗಣನೀಯ ಸ್ಥಾನ ಪಡೆದುಕೊಂಡಿದ್ದಾರೆ. ಇವರು ಸ್ವಾತಂತ್ರ್ಯಪೂರ್ವ ಮತ್ತು ನಂತರದ ದಿನಗಳಲ್ಲಿ ದಾವಣಗೆರೆ ಮತ್ತು ಸುತ್ತಮುತ್ತಲಿನ ಹತ್ತಿಗಿರಣಿಗಳಲ್ಲಿ ದುಡಿಯುತ್ತಿದ್ದ ಕಾರ್ಮಿಕರನ್ನು ಸಂಘಟಿಸಿ ಹೋರಾಟಕ್ಕೆ ಕರೆತರಲು ಕಾರ್ಯಶೀಲರಾಗಿ ದಿಟ್ಟ ಹೆಜ್ಜೆಯನ್ನಿಟ್ಟಿದ್ದವರು. ಶೋಷಣೆಗೆ ಒಳಗಾಗಿದ್ದ ಕಾರ್ಮಿಕರ ಬದುಕಿನಲ್ಲಿ ಆಶಾಕಿರಣ ಮೂಡಿಸುವ ಎದೆಗಾರಿಕೆಯಿಂದ ನಿಂತವರಲ್ಲಿ ಗಣ್ಯರಾಗಿದ್ದಾರೆ. ಬಂಡವಾಳಶಾಹಿಗಳ ನಗರವೊಂದರಲ್ಲಿ, ಜಾತಿ ಪ್ರಭಾವವಿದ್ದ ಪ್ರದೇಶದಲ್ಲಿ ದುಡಿಯುವ ವರ್ಗಕ್ಕೆ ಧ್ವನಿ ನೀಡಿ ಸುಮಾರು ೪ ದಶಕಗಳ ಕಾಲ ಕಾರ್ಮಿಕರ ಶಕ್ತಿಯಾಗಿ ದುಡಿದಿದ್ದಾರೆ. ಇವರು ಕಾರ್ಮಿಕರ ನಾಯಕರಾಗಿ ನಂತರ ರಾಜಕೀಯಕ್ಕೆ ಬಂದವರು. ದಾವಣಗೆರೆ ನಗರಸಭೆಯ ಅಧಿಕಾರ ಪಡೆದು, ೩ ಭಾರಿ ವಿಧಾನಸಭಾ ಸದಸ್ಯರಾಗಿ ಕಾರ್ಮಿಕರ ಒಡನಾಡಿಯಾಗಿದ್ದರು.

ಕಾರ್ಮಿಕ ವರ್ಗದ ಮೇಲೆ ತಮ್ಮನ್ನು ತಾವು ಹೇರಿಕೊಂಡು ನಾಯಕನೆನಿಸಿಕೊಳ್ಳದೆ, ಕಾರ್ಮಿಕರಿಂದಲೇ ನಾಯಕರು ಎನಿಸಿಕೊಂಡವರು. ಅಮೇರಿಕಾ ದೇಶದಲ್ಲಿ ನೀಡುವಂತಹ ನಾಯಕತ್ವದ ಶಿಕ್ಷಣ ಪಡೆದ ನಾಯಕರಾಗಿರದೆ ಅನುಭವದ ಕುಲುಮೆಯಲ್ಲಿ ರೂಪುಗೊಂಡು ಚಳವಳಿಯ ರೂವಾರಿಯಾದರು. ಕಾರ್ಮಿಕರ ಆರ್ಥಿಕ ಬೇಡಿಕೆಗಳ ಜೊತೆಗೆ, ಅವರ ಹಲವು ಸಮಸ್ಯೆಗಳಿಗೆ ಸ್ಪಂದಿಸಿ ಧ್ವನಿಯೇ ಇಲ್ಲದ ವರ್ಗವೊಂದಕ್ಕೆ ದಿಟ್ಟದೃಷ್ಟಿ ಮತ್ತು ಪ್ರಬಲ ಧ್ವನಿ ದೊರೆಯುವಂತೆ ಶ್ರಮಿಸಿದ್ದಾರೆ. ಸಾಮಾನ್ಯ ಕಾರ್ಮಿಕರೊಬ್ಬರು ಅಸಾಮಾನ್ಯ ನಾಯಕರಾಗಿ ಶ್ರೇಷ್ಠರಾಗುವುದು ಅವರ ನೀತಿಯಿಂದ. ಅಂತೆಯೇ ಪಂಪಾಪತಿಯವರು ದಾಸ್ಯ ಮತ್ತು ಶೋಷಣೆಯಿಂದ ಕಾರ್ಮಿಕರನ್ನು ಮುಕ್ತಿಗೊಳಿಸುವ ನೀತಿಯಿಂದ ಮನ್ನಣೆ ಪಡೆದುಕೊಂಡರು. ಬಹಳಷ್ಟು ಕಾಲ ನಿರಹಂಕಾರ, ನಿರ್ಮೋಹ, ಸ್ವಚ್ಛ ಅಧಿಕಾರ ನಡೆಸಿ ಆದರ್ಶ ವ್ಯಕ್ತಿಯಾದರು. ಗಿರಣಿ ಕಾರ್ಮಿಕರನ್ನಷ್ಟೇ ಅಲ್ಲದೆ ಬಹಳಷ್ಟು ಸಂಘಟನೆಯ ಮುಖ್ಯಸ್ಥರಾಗಿ, ತಮ್ಮನ್ನು ನಂಬಿದ್ದ ವರ್ಗಕ್ಕೆ ಸೌಲಭ್ಯಗಳನ್ನು ಕೊಡಿಸಲು ಶ್ರಮಿಸಿದ ಇವರ ಕೊನೆಗಾಲದಲ್ಲೇ ಹತ್ತಿಗಿರಣಿಗಳ ಅವನತಿಯನ್ನೂ ಕಾಣಬೇಕಾದದ್ದು ದುರ್ದೈವವೇ ಸರಿ. ಕಾರ್ಮಿಕರಿಗೆ ಆಸರೆಯಾಗಿ ನಿಂತ ಇವರು ಅಧಿಕಾರವಿದ್ದಾಗ ಕಾರ್ಮಿಕರ ನಿರೀಕ್ಷೆಯ ಮಟ್ಟಕ್ಕೆ ಎಲ್ಲಾ ಸಂದರ್ಭಗಳಲ್ಲೂ ನಡೆದುಕೊಳ್ಳಲಿಲ್ಲ ಎಂದು ಕೆಲವರ ಆರೋಪವಿದೆ. ಆದರೆ ಇಡೀ ಸಮಾಜವನ್ನು ತೃಪ್ತಿಪಡಿಸುವುದು ಅಷ್ಟು ಸುಲಭದ ಕೆಲಸವಲ್ಲ. ಸಾಮಾನ್ಯ

ಕಾರ್ಮಿಕರೊಬ್ಬರು ವಿಧಾನಸಭಾ ಸದಸ್ಯತ್ವದವರೆಗೆ ಬೆಳೆದು, ರಾಜ್ಯಪ್ರಶಸ್ತಿಗಳಿಸಿ, ವಿದೇಶ ಪ್ರವಾಸ ಮಾಡಿ ತಮ್ಮನ್ನು ನಂಬಿದ್ದ ವರ್ಗವನ್ನು ಜಾಗೃತಿಗೊಳಿಸಿ ಸೇವೆಸಲ್ಲಿಸಲು ತಮ್ಮ ಜೀವನವನ್ನೇ ಮುಡುಪಾಗಿಟ್ಟ ವ್ಯಕ್ತಿಯಾಗಿದ್ದಾರೆ.

ಅವರ ಹೋರಾಟಗಳಿಗೆ ಪ್ರೇರಣೆಗಳೇನು? ಗುರಿಗಳೇನು? ನಾಯಕತ್ವದಲ್ಲಿ ನಡೆದ ಚಳವಳಿಗಳೇನು? ಯಾವ ಹೋರಾಟಕ್ಕೆ ಪ್ರಥಮ ಆದ್ಯತೆ ಕೊಟ್ಟರು ಎಂದು ಚರ್ಚಿಸುವ ಅಗತ್ಯವಿದೆ.

ಪಂಪಾಪತಿಯವರು ಬಳ್ಳಾರಿ ಜಿಲ್ಲೆಯ ಹೊಸಪೇಟೆಯಲ್ಲಿ ೧೯೨೯ರಲ್ಲಿ[೧೪] ಮಾಣಿಕ್ಯಮೊದಲಿಯಾರ್ ಹಾಗೂ ಮೀನಾಕ್ಷಮ್ಮ ದಂಪತಿಗಳ ಹಿರಿಯ ಮಗನಾಗಿ ಜನಿಸಿದರು. ಪಂಪಾಪತಿಯವರು ಉದರ ಪೋಷಣೆಗಾಗಿ ಡಿ.ಸಿ.ಎಂ.ನಲ್ಲಿ ೧೯೪೪ರಲ್ಲಿ ಕಸಗುಡಿಸುವ ಕೆಲಸಕ್ಕೆ ಸೇರಿದರು.[೧೫] ಇವರು ಮೂಲತಃ ತಮಿಳುನಾಡಿನವರಾಗಿದ್ದು, ಕಡುಬಡತನದಲ್ಲಿ ಹುಟ್ಟಿ ಅನಕ್ಷರಸ್ಥರಾಗಿದ್ದು ಸ್ವಯಂ ಪ್ರತಿಭೆ, ಶ್ರಮಗಳಿಂದ ಬದುಕಿನಲ್ಲಿ ಪ್ರಗತಿಯ ಹಂತ ತಲುಪಿದರು. ಹತ್ತಿಗಿರಣಿಯಲ್ಲಿ ಕೆಲಸಕ್ಕೆ ಸೇರಿದಾಗ ಇವರಿಗೆ ೧೫ ರೂ ಮಾಸಿಕ ವೇತನ ಹಾಗೂ ದಿನಕ್ಕೆ ೧೨ ರಿಂದ ೧೩ಗಂಟೆಗಳ ದುಡಿಮೆಯ ಅವಧಿ ಇತ್ತು. ಹೀಗೆ ಉದರ ಪೋಷಣೆಗಾಗಿ ಹತ್ತಿಗಿರಣಿಯಲ್ಲಿ ಕಾರ್ಯಪ್ರವೃತ್ತರಾದ ಇವರನ್ನು ಸಂಘಟನೆಯತ್ತ ಸಾಗುವಂತೆ ಮಾಡಿದ ಸಂದರ್ಭಗಳೇನು? ಅವರ ಪ್ರಥಮ ಆದ್ಯತೆ ಏನು? ಎಂದು ನೋಡಿದಾಗ, ಅವರ ಮುಂದಿದ್ದ ಶೋಷಣಾ ಪದ್ಧತಿ ಸಂದರ್ಭವಾಗಿತ್ತು ಹಾಗೂ ಅಂಥ ಪದ್ಧತಿಯ ರದ್ಧತಿಯೇ ಗುರಿ ಮತ್ತು ಪ್ರಥಮ ಆದ್ಯತೆಯ ವಿಷಯವಾಯಿತು. ಇದೇ ಕಾಲಕ್ಕೆ ಔದ್ಯೋಗಿಕ ಕೇಂದ್ರದಲ್ಲಿ ಕಾರ್ಮಿಕ ಚಳವಳಿ ಆರಂಭವಾಗಿದ್ದಂತೆ ದಾವಣಗೆರೆಯಲ್ಲೂ ಬೀಜಾಂಕುರವಾಯಿತು. ಶೋಷಣೆಗೆ ಒಳಗಾಗಿದ್ದ ಕಾರ್ಮಿಕರು ಅವುಗಳಿಂದ ಮುಕ್ತರಾಗಲು ಸಂಘಟನೆಯ ಮಹತ್ವ ಅರಿತರು. ಎಲ್ಲ ಕಾರ್ಮಿಕರೂ ಸೇರಿದಾಗ ಮಾತ್ರ ಸಮಗ್ರ ಹೋರಾಟವಾಗುತ್ತದೆ. ಅಂದಾಗ ಹೋರಾಟಕ್ಕೆ ಜಯವೂ ಸಿಗಬಹುದು ಎಂದು ಸಂಘಟನೆಯತ್ತ ಸಾಗಿದರು. ಶ್ರೀ. ಪಂಪಾಪತಿಯವರು, ಕರ್ನಾಟಕದ ಮ್ಯಾಂಚೆಸ್ಟರ್ ಎಂಬ ಖ್ಯಾತಿಯ ದಾವಣಗೆರೆಯಲ್ಲಿ ಶ್ರೀ. ಎಂ.ಮೂರ್ತಿ, ಶ್ರೀ. ಪುಡಾರಿ ಮುರಿಗೆಯ್ಯ, ಶ್ರೀ. ಸುರೇಶ್, ಶ್ರೀ. ಶೇಖರಪ್ಪ ಮುಂತಾದ ಸ್ನೇಹಿತರೊಂದಿಗೆ ಕಮ್ಯುನಿಸ್ಟ್ ಚಳವಳಿಯನ್ನು ಆರಂಭಿಸಿದರು.[೧೬]

ಮಾಲೀಕರ ಮುಂದೆ ಎದೆಗಾರಿಕೆಯಿಂದ ನಿಲ್ಲಬೇಕಾದ ಅವರಿಗೆ ಪ್ರಭಾವ ಬೀರಿದವರು ಯಾರು? ಎಂಬ ಹಿನ್ನೆಲೆ ನೋಡುವಾಗ, ಶ್ರೀ. ಬಿ.ವಿ. ಕಕ್ಕಿಲಾಯ, ಶ್ರೀ. ಎನ್.ಡಿ. ಶಂಕರ್ ಮುಂತಾದ ಮುಖಂಡರು ದಾವಣಗೆರೆಗೆ ಬಂದು ಸಂಘಟನೆ ಬಗ್ಗೆ ಕಾಳಜಿವಹಿಸುತ್ತಿದ್ದದ್ದೂ ಉಂಟು.[೧೭] ಯಾವುದೇ ಚಳವಳಿಗೆ ನಾಯಕರು ಹಾಗೂ ಸಿದ್ಧಾಂತದ ಬೆನ್ನೆಲುಬು ಅತ್ಯಗತ್ಯ. ದಾವಣಗೆರೆ ಕಾರ್ಮಿಕರಿಗೆ ಸಮಾಜವಾದ ಸಿದ್ಧಾಂತದ ಧ್ಯೇಯನಿಷ್ಠೆಯುಳ್ಳ ನೇತಾರರ ಮಾರ್ಗದರ್ಶನ ದೊರೆಯಿತು. ಇವರೆಲ್ಲರ ಜೊತೆಗೆ, ರಾಜ್ಯ ಮಟ್ಟದಲ್ಲಿ ಕಮ್ಯುನಿಸ್ಟ್‌ರಾದ ಶ್ರೀ. ಎಂ.ಎಸ್.ಕೃಷ್ಣನ್ ಮಾರ್ಗದರ್ಶನ ನೀಡುತ್ತಿದ್ದರು. ಶ್ರೀ. ಎಂ.ಸಿ. ನರಸಿಂಹನ್‌ರವರು ಬಿ.ಇ. ಪದವೀಧರರಾಗಿದ್ದು, ಕಾರ್ಮಿಕರಿಗೆ ನಾಯಕರಾಗಿ ನಿಂತು, ಸರ್ಕಾರಿ ಉದ್ಯೋಗದ ಆಸೆ ಬಿಟ್ಟಿದ್ದರು. ಆದರೆ ಪಂಪಾಪತಿಯವರು ಅವರಂತೆ ಶಿಕ್ಷಿತರಾಗಿರದೆ ನಿರಕ್ಷರಿಯಾಗಿದ್ದರೂ ಕಾರ್ಮಿಕ ಸಂಘಟನೆಗೆ ಮುಂದಾದರು. ಪಂಪಾಪತಿಯವರಿಗೆ ಸೈದ್ಧಾಂತಿಕ ನೆರವನ್ನು ಶ್ರೀ. ಎಂ.ಎಸ್. ಕೃಷ್ಣನ್. ಮತ್ತು ಶ್ರೀ. ಎಂ.ಸಿ. ನರಸಿಂಹನ್ ನೀಡಿ ಪ್ರೇರೇಪಿಸಿದರು.

‘ವಿಶ್ವಕಾರ್ಮಿಕರೇ ಒಂದಾಗಿ’ ಎಂಬ ಮಾರ್ಕ್ಸ್‌ವಾಣಿಯನ್ನು ದಾವಣಗೆರೆ ಕಾರ್ಮಿಕರಲ್ಲಿ ಅನುಷ್ಠಾನಕ್ಕೆ ತರಲು ಯತ್ನಿಸುತ್ತಿದ್ದ ಶ್ರೀ. ಪಂಪಾಪತಿ ಮತ್ತು ಸ್ನೇಹಿತರು ಕೊಲೆಯ ಆಪಾದನೆಗೊಳಗಾದರು. ಪೂನಾ, ಬೆಂಗಳೂರು ಹೆದ್ದಾರಿಯಲ್ಲಿ, ದುರ್ಗದ ರಸ್ತೆಯಲ್ಲಿ ಮಧ್ಯರಾತ್ರಿ ಮಾಲೀಕರ ಕಡೆಯ ಹೆಗ್ಗಪ್ಪನ (೧೯೬೪) ಕೊಲೆಯಾಯಿತು.[೧೮] ಈ ಘಟನೆಯಿಂದಾಗಿ ಪಂಪಾಪತಿ ಸೇರಿದಂತೆ ನಗರದ ೧೮ ಕಾರ್ಮಿಕರಿಗೆ ೨ ವರ್ಷ ಜೈಲುಶಿಕ್ಷೆಯಾಯಿತು. ಕಾರ್ಮಿಕ ಸಂಘಟನೆಯಲ್ಲಿ ತೊಡಗಿಸಿಕೊಂಡು ಚಳವಳಿಗೆ ಚಾಲನೆ ನೀಡಿದ್ದ ಕಾಲವಿದು. ಆದ್ದರಿಂದ ಇಂಥ ಸಂಘಟನೆಯನ್ನು ಚಿವುಟಿ ಹಾಕಿರುವ ಪ್ರಯತ್ನವಿದಾಗಿತ್ತು.

ಪಂಪಾಪತಿಯವರು ಕಡುಬಡತನದ ಹಿನ್ನೆಲೆ ಉಳ್ಳವರು. ಉದರಪೋಷಣೆಗಾಗಿಯೇ ಹತ್ತಿಗಿರಣಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಇವರು ಕಂಬಿಗಳ ಹಿಂದೆ ಬಂಧಿಯಾದಾಗ ಅವರ ಕುಟುಂಬದ ನಿರ್ವಹಣೆಯ ಮೇಲಾದ ಪರಿಣಾಮವೇನು? ಸಹಜವಾಗಿ ತೊಂದರೆಗೆ ಸಿಲುಕಿತು ಎಂಬ ಉತ್ತರವನ್ನು ನಿರೀಕ್ಷಿಸಬಹುದು. ಆ ಸಂದರ್ಭದಲ್ಲಿ ಅವರ ಪತ್ನಿ ತಮ್ಮ ಮನೆಯಲ್ಲಿ ಇಡ್ಲಿ ತಯಾರಿಸಿ ಮಾರಿ ಜೀವನ ಸಾಗಿಸಿದರು.[೧೯] ತನ್ನೊಂದಿಗೆ ತನ್ನ ಸಹಪಾಠಿಗಳನ್ನು ಶೋಷಣೆಯಿಂದ ಹೊರತರಲು ಕಾರ್ಯಶೀಲರಾದ ಇವರಿಗೆ ಇಂಥ ಸ್ಥಿತಿ ಬಂದದ್ದು ದುರಾದೃಷ್ಟ. ಆದರೆ ಈ ಘಟನೆ ಅವರಲ್ಲಿ ಸಂಘಟನೆಯ ಛಲವನ್ನು ಹೆಚ್ಚಿಸಿತೇ ಹೊರೆತು ನಂದಿಸಲಿಲ್ಲ. ೨ ವರ್ಷಗಳ ಜೈಲುಶಿಕ್ಷೆ ಅನುಭವಿಸಿ ಬಿಡುಗಡೆ ಹೊಂದಿದ ಪಂಪಾಪತಿಯವರ ಮೇಲೆ ಹಲವು ಅಪರಾಧಗಳ ಪಟ್ಟಿಯನ್ನು ಹೊರಿಸಲಾಯಿತು. ಪೊಲೀಸರಿಗೆ ಅಪರಾಧಿಯಾಗಿ ಕಂಡ ಪಂಪಾಪತಿಯವರನ್ನು ಚಿತ್ರದುರ್ಗ ಜಿಲ್ಲೆಯಿಂದ ಗಡಿಪಾರು ಮಾಡುವ ಆಜ್ಞೆಯಾಯಿತು. ಆದರೆ ಗಡಿಪಾರು ಆಜ್ಞೆ ರದ್ದಾಗಿ ಅವರು ಸಕ್ರಿಯವಾಗಿ ತಮ್ಮನ್ನು ಕಾರ್ಮಿಕ ಚಳವಳಿಯಲ್ಲಿ ತೊಡಗಿಸಿಕೊಳ್ಳಲು ಸಾಧ್ಯವಾಯಿತು.

ಅಂಬೇಡ್ಕರ್ ವಿವರಿಸುವಂತೆ ಮಾರ್ಕ್ಸ್‌ವಾದ ಜಡವಸ್ತುವಲ್ಲ. ಅದು ಗುರಿ ಮುಟ್ಟಬೇಕಾದ ದಾರಿ ತೋರಿಸುತ್ತದೆಯೆ ಹೊರತು, ಅದೇ ದಾರಿ ಎಂದರ್ಥವಲ್ಲ. ದಾರಿಯಲ್ಲಿರುವ ಕಲ್ಲು ಮಣ್ಣುಗಳನ್ನು ನಿವಾರಿಸಿಕೊಂಡು ಗುರಿ ಮುಟ್ಟುವ ಹೊಣೆ ದಾರಿಹೋಕನದು.[೨೦] ಅಂತೆಯೇ ಗುರಿ ಮುಟ್ಟಲು ಸಂಘಟನಾ ಹಾದಿಯಲ್ಲಿ ಹೊರಟ ಕಾರ್ಮಿಕ ನಾಯಕರ ದಾರಿ ಹಲವು ಅಡ್ಡಿ, ಆತಂಕಗಳಿಂದ ಕೂಡಿತ್ತು. ೧೯೭೦ರಲ್ಲಿ ಈ ದಾರಿ ಹೋಕರಾದ ಮೂವರು ನಾಯಕರ ಮೇಲೆ ಹಲ್ಲೆ ನಡೆದು, ಅವರಲ್ಲಿ ಬದುಕುಳಿದವರು ಶ್ರೀ. ಪಂಪಾಪತಿಯೊಬ್ಬರೇ ನಾಯಕನೆನಿಸಿಕೊಳ್ಳುವವರಲ್ಲಿ ಕಷ್ಟಸಹಿಷ್ಣತೆ, ತಾಳ್ಮೆ, ಅಚಲತೆ, ಸಮಯ ಸ್ಪೂರ್ತಿ ಮುಂತಾದ ಗುಣಗಳು ಅಂತರ್ಗತವಾಗಿರಬೇಕು.

ಪಂಪಾಪತಿಯವರು ಇಂಥ ಕಷ್ಟವನ್ನು ಸಹಿಸಿಕೊಂಡಿದ್ದು ಹೇಗೆ? ಎಂದು ಆಲೋಚಿಸಿದರೆ ತನ್ನ ಜೊತೆಗೆ ಹೆಗಲುಕೊಟ್ಟು ಸಂಘಟನೆಯಲ್ಲಿ ನಿರತರಾಗಿದ್ದ ಇಬ್ಬರು ನಾಯಕರು ಹತರಾದಾಗ ಇವರು ತಾತ್ಕಾಲಿಕವಾಗಿ ಧೃತಿಗೆಟ್ಟರೂ, ತಾನಿಟ್ಟುಕೊಂಡಿದ್ದ ಗುರಿಯ ಹಿನ್ನೆಲೆಯಲ್ಲಿ ಸಹಿಸಿಕೊಂಡರು. ಆಕಸ್ಮಾತ್ ಇವರೂ ಈ ಹಲ್ಲೆಯಲ್ಲಿ ಅಗಲಿದ್ದರೆ ನಗರದ ಕಾರ್ಮಿಕವರ್ಗ ತಬ್ಬಲಿಯಾಗುತ್ತಿತ್ತು. ಯಾಕೆಂದರೆ ಇವರೆಲ್ಲಾ ಉದಯೋನ್ಮುಖ ನಾಯಕರು. ಪ್ರಾರಂಭಿಕ ಹಂತದಲ್ಲೇ ಧೃತಿಗೆಡುವ ಸಂದರ್ಭವಿದಾಗಿತ್ತು. ಪ್ರಾಣಾಪಾಯದಿಂದ ಪಾರಾದ ಇವರು ರಾಜ್ಯದಲ್ಲೇ ಗುರುತಿಸುವಂತಹ ಕಾರ್ಮಿಕ ಚಳವಳಿಯನ್ನು ಕಟ್ಟಿ

ನಾಯಕರಾದರು. ಈ ಘಟನೆಯ ಬೆನ್ನಲ್ಲೇ ರಾಜ್ಯದ ಕಾರ್ಮಿಕರೆಲ್ಲಾ ಗುರುತಿಸುವಂಥ ದಾವಣಗೆರೆ ನಗರಮಟ್ಟದ ಕಾರ್ಮಿಕ ಸಮ್ಮೇಳನ ನಡೆಸಿ ತಮ್ಮ ಪ್ರಭಾವವನ್ನು ರಾಜ್ಯಮಟ್ಟಕ್ಕೇರಿಸಿದರು. ೧೯೭೦ರ ದಶಕದಲ್ಲಿ ೪ ಕಾರ್ಮಿಕ ಸಮ್ಮೇಳನಗಳನ್ನು ನಡೆಸಿ ರಾಷ್ಟ್ರ, ರಾಜ್ಯಮಟ್ಟದ ಕಾರ್ಮಿಕ ನೇತಾರರನ್ನು ಕರೆಸಿ ಸಮಾಲೋಚಿಸಿ ಉತ್ತಮ ಪ್ರಗತಿ ಕಂಡುಕೊಂಡರು. ಶೋಷಣೆ ರಹಿತ ಸಮಾಜದ ನಿರ್ಮಾಣದ ಬಗ್ಗೆ ಅಂಬೇಡ್ಕರ್ ಸಂಘಟಿತರಾಗಲು ಸೂಚಿಸುತ್ತಾರೆ. ಈ ಸಂಘಟನೆಯಿಂದ ಬಡವರನ್ನು ಪ್ರತಿನಿಧಿಸುವವರು ನಾಯಕರಾಗಿ ಬರಲು ಸಾಧ್ಯ.[೨೧] ಹಾಗಾದಾಗ ಎಲ್ಲರ ಅವಶ್ಯಕತೆಗಳನ್ನು ಪೂರೈಸಬಹುದು ಎನ್ನುವಂತೆ ದಾವಣಗೆರೆ ಕಾರ್ಮಿಕರು ಸಂಘಟನೆಯಿಂದ ಇಡೀ ನಗರಕ್ಕೆ ನಾಯಕರಾಗುವ ಸಂದರ್ಭ ಪಂಪಾಪತಿಯವರಿಗೆ ಬಂದಿತು. ೧೯೭೪ರಲ್ಲಿ ನಡೆದ ನಗರಸಭೆ ಚುನಾವಣೆಯಲ್ಲಿ ಕಮ್ಯೂನಿಸ್ಟ್ ಪಕ್ಷದಿಂದ,[೨೨] ೧೪ ಮಂದಿ ಆರಿಸಿಬಂದು ಪಂಪಾಪತಿ ನಗರಸಭಾಧ್ಯಕ್ಷರಾದರು. ಸಂಭಾವಿತನವೆ ಮೂರ್ತಿವೆತ್ತಿ ಆಡಳಿತದ ಚುಕ್ಕಾಣಿ ಹಿಡಿದು ಪ್ರಗತಿಯತ್ತ ಗಮನಹರಿಸಿದರು. ಮಾರ್ಕ್ಸ್ ಮತ್ತು ಏಂಗೆಲ್ಸ್ ಕೂಡ ಕಾರ್ಮಿಕ ಸಂಘಗಳು ಅಧಿಕಾರ ಆಕ್ರಮಿಸಲು ಆಯುಧಗಳಿದ್ದಂತೆ ಎಂದಿರುವುದನ್ನು ಇಲ್ಲಿ ಸ್ಮರಿಸಬೇಕಾಗುತ್ತದೆ. ಹೀಗೆ ಸಾಮಾನ್ಯ ಕಾರ್ಮಿಕ ಮುಖಂಡರು ಮತ್ತು ಅವರ ತಂಡ ಕೈಗಾರಿಕಾ ಕಾರ್ಮಿಕರ ನಗರದ ಅಧಿಕಾರ ಹಿಡಿದ ನಂತರ ಅಂಬೇಡ್ಕರ್ ಅವರ ಅಭಿಪ್ರಾಯದಂತೆ ನಡೆದುಕೊಂಡರೇ? ಎಂದು ಚರ್ಚಿಸುವುದು ಅಗತ್ಯ. ರಾಜಕೀಯ ಅಧಿಕಾರ ಪಡೆದುಕೊಂಡ ಕಾರ್ಮಿಕ ಮುಖಂಡರು ಕಾರ್ಮಿಕರಿಗೆ ನೀಡಿದ ಕೊಡುಗೆಗಳೇನು?

ಅದಕ್ಕೂ ಮೊದಲು ಜಾತಿ, ಹಣ ಇವುಗಳನ್ನೆಲ್ಲಾ ಭೇದಿಸಿ, ಭದ್ರಕೋಟೆಯನ್ನು ಛಿದ್ರಗೊಳಿಸಿ ಅಧಿಕಾರದ ಚುಕ್ಕಾಣಿ ಹಿಡಿದದ್ದು ಒಂದು ಸಾಧನೆಯೇ ಹೌದು. ಡಾ. ಅಂಬೇಡ್ಕರ್ ಅಭಿಪ್ರಾಯಪಟ್ಟಂತೆ ಕಾರ್ಮಿಕರ ಎಲ್ಲ ಅವಶ್ಯಕತೆಗಳನ್ನು ಪೂರೈಸಿದಂತೆ ಕಂಡುಬಂದಿಲ್ಲ. ಆದರೆ ಕಾರ್ಮಿಕರಿಂದ ಬೆಳೆದು ಕಾರ್ಮಿಕ ಸಹಕಾರದಿಂದ ರಾಜಕೀಯ ಅಧಿಕಾರ ಪಡೆದ ಇವರು ಕಾರ್ಮಿಕರ ಆರ್ಥಿಕ ಬೇಡಿಕೆಗಳನ್ನು ಈಡೇರಿಸಲು ಪ್ರಯತ್ನಪಟ್ಟು ಬಹಳಷ್ಟು ಸಂದರ್ಭಗಳಲ್ಲಿ ಗೆಲುವನ್ನೂ ಕಂಡಿದ್ದಾರೆ. ಅಂಥ ಸಾಧನೆಗಳಿಗೆ ಕಾರ್ಮಿಕ ಸಮ್ಮೇಳನಗಳು ಮೇಲ್ನೋಟದಲ್ಲೇ ಸಾಕ್ಷಿಯಾಗಿವೆ. ಸಮ್ಮೇಳನ ಚಟುವಟಿಕೆಗಳ ಚರ್ಚೆಯನ್ನು ಪ್ರತ್ಯೇಕವಾಗಿ ಈ ಮಹಾಪ್ರಬಂಧದಲ್ಲಿ ಚರ್ಚಿಸಲಾಗಿದೆ. ಆದರೆ ಹಳ್ಳಿಗಳಿಂದ ಪಟ್ಟಣಕ್ಕೆ ಬಂದು ಸೇರ್ಪಡೆಯಾದ ಕಾರ್ಮಿಕರಿಗೆ ಮೂಲಭೂತವಾಗಿ ಬೇಕಾಗಿದ್ದ ಮನೆ, ನಿವೇಶನ, ಅವರ ಸಾವಿರಾರು ಮಕ್ಕಳಿಗೆ ವಿದ್ಯಾಭ್ಯಾಸ, ಕುಡಿಯುವ ನೀರು, ಆಸ್ಪತ್ರೆ ಸೌಲಭ್ಯ ಮುಂತಾದವುಗಳನ್ನು ದೊರಕಿಸಿ ಕೊಟ್ಟರೆ?

ಶ್ರೀ. ಪಂಪಾಪತಿಯವರು ನಗರಸಭಾ ಅಧ್ಯಕ್ಷರಾದಾಗ ಕಾರ್ಮಿಕರಿಗೆ ಕುಡಿಯುವ ನೀರು, ಆಸ್ಪತ್ರೆ ಸೌಲಭ್ಯಗಳನ್ನು ದೊರಕಿಸಿಕೊಡುವಲ್ಲಿ ಸಫಲರಾದರೂ, ನಿವೇಶನ ಹಾಗೂ ಮನೆಗಳ ನಿರ್ಮಾಣದ ಹಂತದಲ್ಲಿ ಸಂಪೂರ್ಣವಾಗಿ ಸಫಲರಾಗಲಿಲ್ಲ. ಲೆನಿನ್‌ನಗರ, ಭಗತ್‌ಸಿಂಗ್ ನಗರ, ಸುರೇಶ್, ಶೇಖರಪ್ಪನಗರಗಳು ಪಂಪಾಪತಿಯವರ ಕಾಲದಲ್ಲಿ ನಿರ್ಮಾಣಗೊಂಡವು. ಅವುಗಳಲ್ಲಿ ಬಹುತೇಕ ನಗರಗಳು ತಗ್ಗಿನ ಪ್ರದೇಶದಲ್ಲಿದ್ದು ಮಳೆ ಬಂದರೆ ನೀರಿನಿಂದ ಆವೃತವಾಗುತ್ತವೆ. ಇಂಥ ಪ್ರದೇಶದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಮಿಕರು ವಾಸಿಸಲು ಆರಂಭಿಸಿದರು. ಆದರೆ ಅವರ ವಾಸಸ್ಥಳಗಳು ಬಹುತೇಕ

ಅವರವರ ಹೆಸರಿಗೆ ಮಂಜೂರಾಗಲಿಲ್ಲ. ಏಕೆಂದರೆ ನಿವೇಶನಗಳನ್ನು ಮಂಜೂರು ಮಾಡುವ ಅಧಿಕಾರ ಪಂಪಾಪತಿಯವರು ಅಧಿಕಾರಕ್ಕೆ ಬರುವವರೆಗೂ ನಗರ ಸಭೆಗಿದ್ದಿತು. ಕಾರ್ಮಿಕ ಮುಖಂಡರಾದ ಶ್ರೀ ತಿಪ್ಪೇಸ್ವಾಮಿಯವರು ಹೇಳುವಂತೆ ದೇವರಾಜ ಅರಸ್ ಕರ್ನಾಟಕದ ಮುಖ್ಯಮಂತ್ರಿಯಾದ ನಂತರ ಈ ಹಕ್ಕು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಹಸ್ತಾಂತರವಾಯಿತು. ಆದ್ದರಿಂದ ಪಂಪಾಪತಿಯವರ ಕಾಲದಲ್ಲಿ ನಿವೇಶನಗಳನ್ನು ಅವರವರ ಹೆಸರಿಗೆ ನೀಡಲಾಗಲಿಲ್ಲ. ಗಣೇಶ ಗಿರಣಿಯ ರಂಗಪ್ಪ ಎಂಬ ಕಾರ್ಮಿಕ ಹೇಳುವಂತೆ ಮೇಲ್ಕಂಡ ನಗರಗಳಲ್ಲಿ ಯಾರದೋ ನಿವೇಶನದಲ್ಲಿ ಗುಡಿಸಲು ಹಾಕಿಕೊಳ್ಳಲು ಮುಖಂಡರು ಸೂಚಿಸಿದ್ದು ಕಾರ್ಮಿಕರು ಒಡಲಲ್ಲಿ ಬೆಂಕಿ ಇಟ್ಟುಕೊಂಡು ಬದುಕುವಂತೆ ಮಾಡಿದ್ದು ಸದಾ ಆತಂಕದಲ್ಲಿರಿಸಿತ್ತು ಎಂಬುದು ಸ್ಪಷ್ಟವಾಗಿದೆ. ಆದರೆ ಇಂಥ ಕ್ರಮ ಮುಖಂಡರಿಗೆ ನಿಯಮಗಳ ಹಿನ್ನೆಲೆಯಲ್ಲಿ ಅನಿವಾರ್ಯವಾಗಿತ್ತು. ಕಾರ್ಮಿಕರ ಮಕ್ಕಳಿಗೆ ಅಗತ್ಯವಾಗಿ ಬೇಕಾಗಿದ್ದ ಪ್ರತ್ಯೇಕ ಶಾಲಾ ಸೌಲಭ್ಯಗಳೂ ದೊರೆಯಲಿಲ್ಲ. ನಗರದ ಸೌಂದರ್ಯಕ್ಕೆ ಆದ್ಯತೆ ನೀಡಿದ ಪಂಪಾಪತಿಯವರು ಸಾಲು ಮರಗಳನ್ನು ನೆಡಿಸಿದರು. ರಸ್ತೆಗಳಲ್ಲಿ ೨೦ ಸಾವಿರ ಸಾಲು ಮರಗಳನ್ನು ಬೆಳೆಸಿದರು.[೨೬] ಹೆಚ್ಚು ಧೂಳು, ವಾಹನಗಳ ದಟ್ಟ ಹೊಗೆ ಇರುವ ಈ ನಗರಕ್ಕೆ ಸಾಲುಮರಗಳು ನಿಜವಾದ ಕೊಡುಗೆಗಳಾಗಿವೆ.

ಶ್ರೀ. ಪಂಪಾಪತಿಯವರು ತಮ್ಮ ಸೇವಾಕ್ಷೇತ್ರ ವಿಸ್ತಾರವಾದಾಗ, ಜವಾಬ್ದಾರಿ ನಿರ್ವಹಣೆ ಸಂಕೀರ್ಣವಾದಾಗ ಜವಾಬ್ದಾರಿಯನ್ನು ತಮ್ಮ ಸಹಪಾಠಿಗಳೊಂದಿಗೆ ಹಂಚಿಕೊಳ್ಳುತ್ತಿದ್ದರು. ಇವರು ಕಾರ್ಮಿಕರನ್ನು ಜಾಗೃತಗೊಳಿಸಲು ಹಲವು ಯೋಜನೆಗಳನ್ನು ರೂಪಿಸಿ, ತನ್ನ ಸಹಪಾಠಿಗಳೊಂದಿಗೆ ಸಮ್ಮತಿ ಪಡೆದು ಅನುಷ್ಠಾನಕ್ಕೆ ತರಲು ಯತ್ನಿಸುತ್ತಿದ್ದರು. ಬಹುತೇಕ ಕಾರ್ಮಿಕರು ಅನಕ್ಷರಸ್ಥರಾಗಿದ್ದು ಅವರ ಜಾಗೃತಿಗಾಗಿ ಜನಸಂಖ್ಯೆ ನಿಯಂತ್ರಣ, ಸಂತಾನ ಹರಣ ಚಿಕಿತ್ಸೆ, ಶಿಕ್ಷಣದ ಅಗತ್ಯಗಳ ಯೋಜನೆ ತಯಾರಿಸಿ ಕಾರ್ಮಿಕರನ್ನು ಜಾಗೃತಿಗೊಳಿಸುವ ಪ್ರಯತ್ನಗಳನ್ನು ಮಾಡಿದ್ದಾರೆ "ಕಾರ್ಮಿಕರ ಮಕ್ಕಳು ವಿದ್ಯಾವಂತರಾಗುವುದೇ ಅವರ ಆಸ್ತಿ" ಎಂದು ಸಮಾರಂಭವೊಂದರಲ್ಲಿ[೨೭] ಪಂಪಾಪತಿಯವರು ಅಭಿಪ್ರಾಯಪಟ್ಟಿರುವ ವಿಷಯ ಗಮನಿಸಬಹುದಾಗಿದೆ. ಅಂದರೆ ಕಾರ್ಮಿಕರ ಮಕ್ಕಳ ಶಿಕ್ಷಣದ ಮಹತ್ವದ ಅರಿವು ಅವರಿಗೂ ಇತ್ತು ಎಂಬುದು ಈ ವಿಷಯದಿಂದ ತಿಳಿದುಬರುತ್ತದೆ.

ಸಹಾಯಕ ಕಾರ್ಮಿಕ ಆಯುಕ್ತರು, ಬಳ್ಳಾರಿ ವಿಭಾಗ, ದಾವಣಗೆರೆ ಇವರ ಪತ್ರವೊಂದರಲ್ಲಿ ದಾವಣಗೆರೆ ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಸಂಯೋಜಿತ ಕಾರ್ಮಿಕ ಸಂಘಗಳ ಪಟ್ಟಿಯೊಂದು ದೊರೆತಿದೆ. ಆ ಪಟ್ಟಿಯಂತೆ ದಾವಣಗೆರೆ ನಗರದಲ್ಲಿ ೨೭ (೧೯೪೨ ರಿಂದ ೧೯೯೯ರವರೆಗೆ) ಸಂಘಗಳು ನೊಂದಾಯಿಸಿದ್ದು, ೨೪ ಸಂಘಗಳ ಮುಖಂಡರು ಪಂಪಾಪತಿಯವರೇ ಆಗಿದ್ದಾರೆ (ಈ ಪಟ್ಟಿಯಲ್ಲಿ ೧೯೪೨ರಲ್ಲಿಯೇ ಇವರ ಮುಖಂಡತ್ವದ ಹೆಸರು ಕಾಣಿಸಿಕೊಂಡಿದೆ). ಈ ಪಟ್ಟಿಯನ್ನು ಗಮನಿಸಿದಾಗ ಪಂಪಾಪತಿಯವರು ಎಷ್ಟು ಬೆಳೆದಿದ್ದರು, ಅವರ ಘನತೆಗಳೇನು ಎಂಬುದು ದೃಢಪಡುತ್ತದೆ.

ಪಂಪಾಪತಿಯವರು ೧೯೭೮, ೧೯೮೩ ಮತ್ತು ೧೯೮೫ರಲ್ಲಿ ಸತತವಾಗಿ ೩ ಬಾರಿ ರಾಜ್ಯವಿಧಾನಸಭೆಗೆ ಆಯ್ಕೆಯಾದರು. ಕಾರ್ಮಿಕರ ಪ್ರತಿನಿಧಿಯಾಗಿ ನಗರಮಟ್ಟಕ್ಕೆ ಸೀಮಿತವಾಗಿದ್ದ ಇವರ ಕಾರ್ಯಕ್ಷೇತ್ರ ರಾಜ್ಯಮಟ್ಟಕ್ಕೆ ವಿಸ್ತಾರವಾಯಿತು. ವಿಧಾನ ಸಭೆಯಲ್ಲಿ ಕಾರ್ಮಿಕರ ಪ್ರತಿನಿಧಿಯಾಗಿ ವಿರೋಧ ಪಕ್ಷದ

ಕೋಷ್ಟಕ ೨
ಪಂಪಾಪತಿಯವರು ಅಧ್ಯಕ್ಷರಾಗಿದ್ದ ಕಾರ್ಮಿಕ ಸಂಘಗಳ ವಿವರ

ಕ್ರ.ಸಂ	ಕಾರ್ಮಿಕ ಚಳವಳಿಯನ್ನು ಆರಂಭಿಸಿದ ಕಾರ್ಮಿಕ ಮುಖಂಡರ ಹೆಸರು	ಕಾರ್ಮಿಕರ ಸಂಘಗಳ ಹೆಸರು	ನೋಂದಣಿ ಸಂಖ್ಯೆ	ಸದಸ್ಯರ ಸಂಖ್ಯೆ	ಕಾರ್ಖಾನೆಗಳ ವಿವರ
೧	೨	೩	೪	೫	೬
೧.	ಶ್ರೀ. ಪಂಪಾಪತಿ ಶ್ರೀ. ವಿ.ಆರ್.ಆನಂದ ತೀರ್ಥ	ದಿ. ದಾವಣಗೆರೆ ಕಾಟನ್ ಮಿಲ್ಸ್ ಎಂಪ್ಲಾಯಿಸ್ ಅಸೋಸಿಯೇಶನ್, ಚಿತ್ರದುರ್ಗ ರೋಡ್, ದಾವಣಗೆರೆ	೪೪ ೧೭.೭.೧೯೪೨	೧೦೦೦	ಟೈಕ್ಸ್‌ಟೈಲ್
೨.	ಶ್ರೀ ಪಂಪಾಪತಿ ಶ್ರೀ. ಬಸವರಾಜಪ್ಪ	ಶ್ರೀ ಚಂದ್ರೋದಯ ಮಿಲ್ಸ್ ಎಂಪ್ಲಾಯೀಸ್ ಯೂನಿಯನ್, ಚಿತ್ರದುರ್ಗ ರೋಡ್, ದಾವಣಗೆರೆ	೩೫೧ ೧೦.೭.೧೯೫೯	೪೫೦	ಟೆಕ್ಸ್‌ಟೈಲ್
೩.	ಶ್ರೀ. ಪಂಪಾಪತಿ ಶ್ರೀ. ಆನಂದರಾಜ	ದಿ.ಸಿದ್ದೇಶ್ವರ ಟೆಕ್ಸ್ ಟೈಲ್ಸ್, ಎಂಪ್ಲಾಯೀಸ್ ಅಸೋಸಿಯೇಶನ್, ನಿಟ್ಟುವಳ್ಳಿ ರೋಡ್, ದಾವಣಗೆರೆ	೭೬೬ ೨೦.೧೦.೧೯೬೫	೫೦೦	ಟೆಕ್ಸ್‌ಟೈಲ್
೪.	ಶ್ರೀ ಪಂಪಾಪತಿ ಶ್ರೀ ಸಯ್ಯದ್ ಜಕ್ರಿಯಾ	ದಾವಣಗೆರೆ ತಾಲೂಕು ಆಯಿಲ್ ಸೋಪ್ ಕಾಟನ್ ಜಿನ್ನಿಂಗ್ ಪ್ರೆಸ್ಸಿಂಗ್ ಎಂಪ್ಲಾಯೀಸ್ ಟ್ರೇಡ್ ಯೂನಿಯನ್, ದುರ್ಗದ ರೋಡ್, ದಾವಣಗೆರೆ	೭೯೭ ೫.೨.೧೯೬೬	೮೦	ಜನರಲ್
೫.	ಶ್ರೀ. ಪಂಪಾಪತಿ ಶ್ರೀ. ವಿ.ಆರ್. ಆನಂದ ತೀರ್ಥ	ಶ್ರೀ ಆಂಜನೇಯ ಕಾಟನ್ ಮಿಲ್ಸ್, ಎಂಪ್ಲಾಯಿಸ್ ಯೂನಿಯನ್, ಅಶೋಕ ರೋಡ್, ದಾವಣಗೆರೆ	೨೩ ಬಿಡಿ ೧೯.೧೧.೧೯೬೮	೨೮೦	ಟೆಕ್ಸ್‌ಟೈಲ್
೬.	ಶ್ರೀ. ಪಂಪಾಪತಿ ಶ್ರೀ ರಾಮಚಂದ್ರ	ಶ್ರೀ ಗಣೇಶ್ ಟೆಕ್ಸ್‌ಟೈಲ್ ಮಿಲ್ಸ್, ವರ್ಕರ್ಸ್ ಯೂನಿಯನ್, ದಾವಣಗೆರೆ	೫೩ ಬಿಡಿ ೨೭.೧೦.೧೯೭೦	೨೩೫	ಟೆಕ್ಸ್‌ಟೈಲ್

೭.	ಶ್ರೀ. ಪಂಪಾಪತಿ ಶ್ರೀ ಪರಮೇಶ್ವರಪ್ಪ	ದಿ. ಚಿತ್ರದುರ್ಗ ಡಿಸ್ಟ್ರಿಕ್ಟ್ ಹೋಟಲ್ ಆ್ಯಂಡ್ ಜನರಲ್ ವರ್ಕರ್ಸ್ ಯೂನಿಯನ್ ಕಮ್ಯುನಿಸ್ಟ್ ಪಾರ್ಟಿ ಆಫೀಸ್, ಅಶೋಕ ರೋಡ್, ದಾವಣಗೆರೆ	೭೮ ಬಿಡಿ ೪.೮.೧೯೭೧	೮೦	ಜನರಲ್
೮.	ಶ್ರೀ ಪಂಪಾಪತಿ ಶ್ರೀ. ವಿ.ಆರ್.ಆನಂದ ತೀರ್ಥ	ದಾವಣಗೆರೆ ಟೆಕ್ಸ್‌ಟೈಲ್ಸ್ ಮಿಲ್ಸ್ ಸ್ಟಾಫ್ ಅಸೋಸಿಯೇಶನ್, ಕಮ್ಯುನಿಸ್ಟ್ ಪಾರ್ಟಿ, ಅಶೋಕ ರೋಡ್, ದಾವಣಗೆರೆ	೭೩ ಬಿಡಿ ೨೯.೨.೧೯೭೨	೨೮	ಟೆಕ್ಸ್‌ಟೈಲ್
೯.	ಶ್ರೀ ಪಂಪಾಪತಿ ಶ್ರೀ ವಿ.ಆರ್.ಆನಂದ ತೀರ್ಥ	ಯಲ್ಲಮ್ಮ ಕಾಟನ್, ಉಲ್ಲನ್ ಆ್ಯಂಡ್ ಸಿಲ್ಕ್ ಮಿಲ್ಸ್ ಎಂಪ್ಲಾಯಿಸ್ ಅಸೋಸಿಯೇಷನ್, ದಾವಣಗೆರೆ	೮೩ ಬಿಡಿ ೨೬.೧೧.೧೯೭೩	೬೦೦	ಟೆಕ್ಸ್‌ಟೈಲ್
೧೦.	ಶ್ರೀ ಪಂಪಾಪತಿ ಶ್ರೀ ವಿ.ಆರ್.ಆನಂದ ತೀರ್ಥ	ದಿ ದಾವಣಗೆರೆ ಶುಗರ್ ಕಂಪನಿ ಎಂಪ್ಲಾಯಿಸ್ ಅಸೋಸಿಯೇಷನ್, ಕುಕ್ಕವಾಡ ಅಂಚೆ ದಾವಣಗೆರೆ ತಾಲೂಕು	೯೧ ಬಿಡಿ ೨.೫.೧೯೭೫	೩೩೦	ಶುಗರ್
೧೧.	ಶ್ರೀ ಪಂಪಾಪತಿ ಶ್ರೀ ವಿ.ಆರ್.ಆನಂದ ತೀರ್ಥ	ವಾಣಿ ವಿಲಾಸ ಕೋ ಆಪರೇಟೀವ್ ಶುಗರ್ ಫ್ಯಾಕ್ಟರಿ, ಎಂಪ್ಲಾಯಿಸ್ ಯೂನಿಯನ್, ನಂ. ೪೦,ಎಸ್.ಐ. ಹೆಚ್.ಎಸ್. ಕ್ವಾರ್ಟಸ್, ಫ್ಯಾಕ್ಟರಿ ರೋಡ್ ಹಿರಿಯೂರು	೧೦೩ ಬಿಡಿ ೧೬.೭.೧೯೭೬	೩೨೬	ಶುಗರ್
೧೨.	ಶ್ರೀ ಪಂಪಾಪತಿ ಶ್ರೀ ಸಿ.ಎಚ್.ರಾವ್	ದಿ ದಾವಣಗೆರೆ ಶುಗರ್ ಸ್ಟಾಫ್ ಅಸೋಸಿಯೇಷನ್, ಕುಕ್ಕವಾಡ ಅಂಚೆ ದಾವಣಗೆರೆ	೧೦೫ ಬಿಡಿ ೧೨.೩.೧೯೭೬	೧೫	ಶುಗರ್
೧೩.	ಶ್ರೀ ಪಂಪಾಪತಿ ಶ್ರೀ ಎಚ್.ಕೆ.ರಾಮ ಚಂದ್ರಪ್ಪ ಶ್ರೀ ಕೆ.ಎಚ್. ಗಂಗಪ್ಪ	ದಿ ಚಿತ್ರದುರ್ಗ ಡಿಸ್ಟ್ರಿಕ್ಟ್ ಟ್ರಾನ್ಸ್ ಪೋರ್ಟ್ ಡ್ರೈವರ್ಸ್, ಕಂಡಕ್ಟರ್ ಆ್ಯಂಡ್ ಲೋಡರ್ಸ್ ಯೂನಿ	೧೪೬ ಬಿಡಿ ೨೬.೧೧.೧೯೭೯	೧೮	ಟ್ರಾನ್ಸ್‌ಪೋರ್ಟ್

	ಯನ್, ೯/೩, ಅಶೋಕ ರೋಡ್, ದಾವಣಗೆರೆ			
೧೪. ಶ್ರೀ ಪಂಪಾಪತಿ ವಿ.ಆರ್. ಆನಂದ ತೀರ್ಥ	ಕರ್ನಾಟಕ ಮಿನರಲ್ಸ್ ಆ್ಯಂಡ್ ಮ್ಯಾನುಫ್ಯಾಕ್ಚರಿಂಗ್ ಕಂ., ಎಂಪ್ಲಾಯೀಸ್ ಅಸೋಸಿಯೇಷನ್, ಮತ್ತೋಡು, ಹೊಸದುರ್ಗ ತಾಲ್ಲೂಕು	೨೨೯ ಬಿಡಿ ೨.೭.೧೯೮೬	೧೩೦	ಮಿನರಲ್ಸ್
೧೫. ಶ್ರೀ ಪಂಪಾಪತಿ ವಿ.ಆರ್. ಆನಂದ ತೀರ್ಥ	ಕರ್ನಾಟಕ ಮಿನರಲ್ಸ್ ಆ್ಯಂಡ್ ಮ್ಯಾನುಫ್ಯಾಕ್ಚರಿಂಗ್ ಕಂ., ಸ್ಟಾಫ್ ಅಸೋಸಿಯೇಷನ್, ಮತ್ತೋಡು, ಹೊಸದುರ್ಗ ತಾಲ್ಲೂಕು	೨೨೯ ಬಿಡಿ ೨೫.೯.೧೯೮೬	೩೦	ಮಿನರಲ್ಸ್
೧೬. ಶ್ರೀ ಪಂಪಾಪತಿ ವಿ.ಆರ್. ಆನಂದ ತೀರ್ಥ	ಶಿವ ಮಿನರಲ್ಸ್ ಆ್ಯಂಡ್ ಸಿಮೆಂಟ್ ಇಂಡಸ್ಟ್ರೀಸ್ ಕಂ. ಸ್ಟಾಫ್ ಅಸೋಸಿಯೇಷನ್, ಕಂಚೀಪುರ, ಹೊಸದುರ್ಗ ತಾಲ್ಲೂಕು, ಆಲೂರು	೨೬೫ ಬಿಡಿ ೫.೩.೧೯೮೮	೨೯	ಮಿನರಲ್ಸ್
೧೭. ಶ್ರೀ ಪಂಪಾಪತಿ ಜಿ.ಕೆ. ಶಿವಣ್ಣ ರೆಡ್ಡಿ	ಮೈಸೂರು ಕಿರ್ಲೋಸ್ಕರ್ ಕಾರ್ಮಿಕರ ಸಂಘ, C/o ಸಿ.ಪಿ.ಐ. ಆಫೀಸ್, ಪಿಬಿ. ರೋಡ್, ಹರಿಹರ	೨೭೦ ಬಿಡಿ ೨೮.೭.೧೯೮೮	೩೦೦	ಫ್ಯಾಕ್ಟರಿ
೧೮. ಶ್ರೀ ಪಂಪಾಪತಿ ಎಸ್. ಮುರುಗೇಶ್	ಜಯಲಕ್ಷ್ಮಿ ಟೆಕ್ಸ್‌ಟೈಲ್ ಲೇಬರ್ಸ್ ಅಸೋಸಿಯೇಷನ್ ಗಾರೇಹಟ್ಟಿ, ಬಿ.ಪಿ.ರೋಡ್ ಚಿತ್ರದುರ್ಗ	೩೦೨ ಬಿಡಿ ೨೨.೯.೧೯೮೯	೩೯೦	ಟೆಕ್ಸ್‌ಟೈಲ್ಸ್
೧೯. ವಿ.ಆರ್. ಆನಂದ ತೀರ್ಥ, ಜೆ. ರಾಜಶೇಖರ್	ಕೆ.ಎಸ್.ಆರ್.ಟಿ.ಸಿ ಸ್ಟಾಫ್ ಆ್ಯಂಡ್ ವರ್ಕರ್ಸ್ ಯೂನಿಯನ್, ದಾವಣಗೆರೆ ಡಿವಿಜನ್, ನಂ. ೧೯೯೧, ಅಶೋಕ ರೋಡ್, ದಾವಣಗೆರೆ	೩೫೨ ಬಿಡಿ ೧೨.೧೨.೧೯೯೧	೧೫೦೦	ಟ್ರಾನ್ಸ್‌ಪೋರ್ಟ್
೨೦. ಶ್ರೀ. ಪಂಪಾಪತಿ ಜೆ.ಎಂ.ಹನುಮಂತಪ್ಪ	ಕರ್ನಾಟಕ ರಾಜ್ಯ ಚಲನಚಿತ್ರ ಮಂದಿರಗಳ ಕೆಲಸಗಾರರ ಫೆಡರೇಶನ್, ನಂ. ೧೯೯/೨, ಅಶೋಕ ರೋಡ್, ದಾವಣಗೆರೆ	೩೬೫ ಬಿಡಿ ೧೪.೮.೧೯೯೨	೧೫೦	ಸಿನಿಮಾ
೨೧. ಶ್ರೀ ಪಂಪಾಪತಿ ವಿ.ಆರ್. ಆನಂದ ತೀರ್ಥ	ವೇದಾ ಸಿಮೆಂಟ್ಸ್ ಸಿಬ್ಬಂದಿ ಮತ್ತು ಕೆಲಸಗಾರರ ಸಂಘ, ಮಾಡದಕೆರೆ ಪೋಸ್ಟ್,	೧೧/೯೪ ಬಿಡಿ ೨೧.೧೨.೧೯೯೪	೧೪೦	ಸಿಮೆಂಟ್

೨೨.	ಶ್ರೀ ಪಂಪಾಪತಿ ವಿ.ಆರ್. ಆನಂದ ತೀರ್ಥ	ಲಕ್ಷ್ಮೀ ಸಿಮೆಂಟ್ ಆ್ಯಂಡ್ ಸಿರಂಮಿರ್ಸ್ ಇಂಡಸ್ಟ್ರೀಸ್ ಲಿಮಿಟೆಡ್, ಕಾರ್ಮಿಕರ ಮತ್ತು ಸಿಬ್ಬಂದಿ ಯೂನಿಯನ್, ಇಟ್ಟಿಗೆಹಳ್ಳಿ, ಮತ್ತೋಡು ಹೋಬಳಿ ನಾಗತ್ತಿಹಳ್ಳಿ ಅಂಚೆ ಹೊಸದುರ್ಗ ತಾಲ್ಲೂಕು	೨೩/೯೫ ಬಿಡಿ ೩.೧೧.೧೯೯೫	೧೧೩	ಸಿಮೆಂಟ್
೨೩.	ಶ್ರೀ ಪಂಪಾಪತಿ	ಆರಾಧ್ಯ ಸ್ಟೀಲ್ ವೈರ್ ಪ್ರೈವೇಟ್ ಲಿಮಿಟೆಡ್ ಆ್ಯಂಡ್ ಅಲೈಡ್ ಇಂಡಸ್ಟ್ರೀಸ್ ಎಂಪ್ಲಾಯಿಸ್ ಯೂನಿಯನ್, ನಂ. ೧೯೯/೨, ಎ.ಐ.ಟಿ.ಯು.ಸಿ., ಅಶೋಕ ರಸ್ತೆ, ದಾವಣಗೆರೆ	೩೨/೯೫ ಬಿಡಿ ೨೦.೧೨.೧೯೯೫	೧೨೦	ಸ್ಟೀಲ್
೨೪.	ಶ್ರೀ ಹೆಚ್.ಕೆ. ರಾಮ ಚಂದ್ರಪ್ಪ ಶ್ರೀಮತಿ ಬಿ.ಪಿ. ಪ್ರತಿಭಾ	ಕರ್ನಾಟಕ ರಾಜ್ಯ ಸರ್ಕಾರ ಸಮಾಜಕಲ್ಯಾಣ ಇಲಾಖೆ ಹೊಲಿಗೆ ಉತ್ಪಾದನಾ ಕೇಂದ್ರಗಳ ಮಹಿಳಾ ದರ್ಜೆ ಕೆಲಸಗಾರರ ಯೂನಿಯನ್, ನರಗಸಭಾ ಸಂಪರ್ಕ, ೧ನೇ ಮಹಡಿ, ರೂ. ನಂ. ೬, ಜಯದೇವ ವೃತ್ತ, ದಾವಣಗೆರೆ-೨	೧೩/೯೬ ಬಿಡಿ ೩೧.೧೨.೧೯೯೬	೧೬೫	ಟೈಲರ್ಸ್
೨೫.	ಶ್ರೀ ಹೆಚ್.ಕೆ. ರಾಮ ಚಂದ್ರಪ್ಪ, ಭೈರಪ್ಪ	ದಾವಣಗೆರೆ ನಗರ ಸಿ. ಗ್ರೂಪ್ ಮತ್ತು ಡಿ ಗ್ರೂಪ್ ನೌಕರರ ಸಂಘ, ೧ನೇ ಮಹಡಿ, ರೂ. ನಂ. ೬, ಜಯದೇವ ವೃತ್ತ, ದಾವಣಗೆರೆ ೨	೧೪/೯೬ ಬಿಡಿ ೩೧.೧೨.೧೯೯೬	೧೧೩	ನಗರ ಸಭೆ
೨೬.	ಶ್ರೀ ಹೆಚ್.ಎ. ಕೃಷ್ಣಮೂರ್ತಿ ಶ್ರೀ ಎಫ್.ಆರ್. ನಥಾಪ್	ಕೆ.ಎಸ್.ಆರ್.ಟಿ.ಸಿ ಸಿಬ್ಬಂದಿ ಮತ್ತು ಕಾರ್ಮಿಕ ಸಂಘ, ಇಂದ್ರಾನಗರ, ಕಂಟೋನ್‌ಮೆಂಟ್ ಬಳ್ಳಾರಿ	ಯು/೯೫ ಬಿಡಿ ೨೨.೩.೧೯೯೫	೩೩೬	ಟ್ರಾನ್ಸ್‌ಫೋರ್ಟ್

ಕೃಪೆ : ಸಹಾಯಕ ಕಾರ್ಮಿಕ ಆಯುಕ್ತರು, ಬಳ್ಳಾರಿ ವಿಭಾಗ, ದಾವಣಗೆರೆ.

ನಾಯಕರಿಗಿಂತ ಹೆಚ್ಚಿನ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆದ ಅತ್ಯಂತ ಜವಾಬ್ದಾರಿಯುತ ಶಾಸಕ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ವಿಧಾನಸಭಾಧಿವೇಶನಾವಧಿಯಲ್ಲಿ ಎಷ್ಟೋ ಪ್ರಶ್ನೆಗಳಿಗೆ ಪರಿಹಾರೋಪಾಯಗಳನ್ನು ಸೂಚಿಸುತ್ತಿದ್ದರು. ಕಾರ್ಮಿಕರಿಗೆ ಸಂಬಂಧಿಸಿದ ಕಾಯ್ದೆಗಳಿದ್ದರೂ ಸಮರ್ಪಕವಾಗಿ ಜಾರಿಗೊಂಡಿರಲಿಲ್ಲ. ಆ ಸಂದರ್ಭದಲ್ಲಿ ಕಾಯಿದೆಗಳ ವಿಚಾರವಾಗಿ ಸಂಬಂಧಪಟ್ಟ ಮಂತ್ರಿಗಳ ಗಮನಸೆಳೆಯುತ್ತಿದ್ದರು. ಮೆಟರ್ನಿಟಿ ಆಕ್ಟ್ ಪ್ರಕಾರ ಮಹಿಳೆಯರಿಗೆ ಸೌಲಭ್ಯಕೊಡದಿದ್ದರೆ ಏನು ಕ್ರಮ ಕೈಗೊಂಡಿದ್ದೀರಿ" ಎಂದು ಕಾರ್ಮಿಕ ಮಂತ್ರಿಗಳನ್ನು ಕೇಳಿದ ಒಂದು ಪ್ರಶ್ನೆಯನ್ನು ಮಾತ್ರ, ಸಾಂದರ್ಭಿಕವಾಗಿ ಇಲ್ಲಿ ಉದಾಹರಿಸಬಹುದಾಗಿದೆ.. ಕನಿಷ್ಠ ಕೂಲಿ ಇರಬಹುದು, ಹೆಣ್ಣು ಮಕ್ಕಳು ರಾತ್ರಿ ವೇಳೆಯಲ್ಲಿ ದುಡಿಯುತ್ತಿರುವ ವಿಚಾರ ಇರಬಹುದು, ಆರೋಗ್ಯ ಸೌಲಭ್ಯಗಳಿರಬಹುದು, ಇವುಗಳ ಸಂಬಂಧ ದಿಟ್ಟತನದಿಂದ ಅಚ್ಚ-ಸರಳ ಕನ್ನಡ ಭಾಷೆಯಲ್ಲಿ ಪ್ರಶ್ನಿಸುತ್ತಿದ್ದರು.

ಕರ್ನಾಟಕ ಸರ್ಕಾರದ ವಿಧಾನಸಭಾ ನಡಾವಳಿಗಳಿಂದ ಮೇಲಿನ ಪ್ರಶ್ನೆಗಳ ಬಗ್ಗೆ ತಿಳಿಯುತ್ತದೆ. ಈ ಪ್ರಶ್ನೆಗಳಿಂದ ಕಾಯ್ದೆಗಳಿದ್ದರೂ, ಕಾಯ್ದೆಗಳ ಕಣ್ಣಲ್ಲಿ ಅಪರಾಧವಾಗಿದ್ದರೂ ೧೯೮೦ರ ದಶಕದಲ್ಲೂ ಕಾರ್ಮಿಕರ ಶೋಷಣೆ ಅವ್ಯಾಹತವಾಗಿ ಮುಂದುವರಿದಿತ್ತು ಎಂಬುದು ನಗ್ನ ಸತ್ಯವಾಗಿದೆ. ಇಂಥ ಸಮಸ್ಯೆಗಳ ಪರಿಹಾರಕ್ಕೆ ಒಬ್ಬ ಕಾರ್ಮಿಕ ಪ್ರತಿನಿಧಿ ವಿಧಾನಸಭಾ ಅಧಿವೇಶನದಲ್ಲಿ ಪ್ರಶ್ನಿಸಿ ಯತ್ನಿಸಿದರೂ ಸ್ಥಿತಿ-ಗತಿ ಪೂರ್ಣಪ್ರಮಾಣದಲ್ಲಿ ಸುಧಾರಣೆಯಾಗಲಿಲ್ಲ ಎನ್ನಬಹುದು. ಉತ್ತಮ ವಾಗ್ಮಿಯಾಗಿದ್ದ ಪಂಪಾಪತಿಯವರನ್ನು ಮುಖ್ಯಮಂತ್ರಿಯಾಗಿದ್ದ ದೇವರಾಜ ಅರಸ್ ಕೂಡ ಪ್ರಶಂಸಿಸುತ್ತಿದ್ದರು. ಇವರ ಜೊತೆಯಲ್ಲೇ ಬಿ.ವಿ. ಕಕ್ಕಿಲಾಯ, ೪ ಬಾರಿ ವಿಧಾನಸಭೆಯಲ್ಲಿ ಕಾರ್ಮಿಕ ಪ್ರತಿನಿಧಿಯಾಗಿದ್ದ ಎಂ.ಎಸ್. ಕೃಷ್ಣನ್ ಕೂಡ ತಮ್ಮ ಪ್ರಶ್ನೆಯ ಅವಧಿಯನ್ನು ಇವರಿಗೇ ಬಿಟ್ಟುಕೊಡುತ್ತಿದ್ದುದು ಅವರ ವಾಕ್ ಚಾತುರ್ಯಕ್ಕೆ ನಿದರ್ಶನವಾಗಿದೆ. 'ಇವರು ಯಾವ ವಿದ್ಯೆ ಕಲಿತವರಿಗೂ ಅನುಭವವೆಂಬ ಶಿಕ್ಷಣದ ಮುಂದೆ ದೊಡ್ಡವರಲ್ಲ ಎಂದು ಸಾಬೀತು ಪಡಿಸುತ್ತಿದ್ದರು 'ಜ್ಞಾನವು ಅನುಭವದ ಕೂಸು' ಎಂಬುದು ಇವರ ವಾಕ್ ಸರಣಿಯಲ್ಲಿ ಸ್ಪಷ್ಟವಾಗುತ್ತದೆ.

ಇವರ ಕಾರ್ಯಕ್ಷೇತ್ರ ದಿನೇ ದಿನೇ ವಿಸ್ತರಿಸುತ್ತಾ ಸಾಗಿದಾಗ ಜವಾಬ್ದಾರಿ ಮತ್ತು ಕೆಲಸದ ಒತ್ತಡ ಹೆಚ್ಚಾಯಿತು. ಅವರು ಗಡಿಯಾರದಂತೆ ದುಡುದುಡು ನಡೆದು ಕಾರ್ಯ ನಿರ್ವಹಿಸಬೇಕಾಯಿತು. ಪರಿಶುದ್ಧವಾದ ಮನಸ್ಸಿನಿಂದ ಸದ್ಗುಣಗಳು ಹೊರಹೊಮ್ಮಲು ಸಾಧ್ಯ. ಈ ನಿಟ್ಟಿನಲ್ಲಿ ಇವರ ಜವಾಬ್ದಾರಿಗಳನ್ನು ಗಮನಿಸಿದಾಗ ಅವರಲ್ಲಿ ಮನಸ್ಸು ಪರಿಶುದ್ಧವಾಗಿರುತ್ತಿತ್ತೇ? ಒತ್ತಡದಲ್ಲಿ ಹೇಗೆ ಕಾರ್ಯನಿರ್ವಹಿಸುತ್ತಿದ್ದರು? ಎಂದು ಗಮನಿಸಿದಾಗ ಚಿಂತನೆಗೊಳಪಡಿಸುತ್ತದೆ. ಇಷ್ಟೆಲ್ಲಾ ಜವಾಬ್ದಾರಿಗಳ ನಡುವೆ ಅಶೋಕ ರಸ್ತೆಯಲ್ಲಿರುವ ಕಮ್ಯುನಿಸ್ಟ್ ಪಕ್ಷ ಕಛೇರಿಯಲ್ಲಿ ಸಾಮಾಜಿಕ ನ್ಯಾಯ ನೀಡುವ ಕಾರ್ಯವನ್ನೂ ನಿರ್ವಹಿಸುತ್ತಿದ್ದರು. ಕಾರ್ಮಿಕರಷ್ಟೇ ಅಲ್ಲ, ನಾಗರೀಕರನೇಕರು ತಮ್ಮ ಸಮಸ್ಯೆಗಳನ್ನು ಹೊತ್ತುತಂದು ಇವರ ಮುಂದೆ ಅವುಗಳನ್ನು ಬಿಚ್ಚಿಡುತ್ತಿದ್ದರು. ಆ ಸಮಸ್ಯೆಗಳನ್ನು ನಿಭಾಯಿಸುತ್ತಿದ್ದ ರೀತಿಯನ್ನು ಗಮನಿಸಿದಾಗ ಅವರಲ್ಲಿ ವಜ್ರದಂಥ ಕಠಿಣತೆ ಕಂಡುಬರುತ್ತಿತ್ತು. ಉದಾಹರಣೆಗೆ 'ರೋಗಿಯೊಬ್ಬರು ಬಂದು ಆಸ್ಪತ್ರೆಯಲ್ಲಿ ಅಡ್ಮಿಟ್ ಮಾಡಿಕೊಳ್ಳುತ್ತಿಲ್ಲ, ಸರಿಯಾಗಿ ಟ್ರೀಟ್‌ಮೆಂಟ್

ಸಿಗುತ್ತಿಲ್ಲ[೨೬] ಎಂದು ಕೇಳಿಕೊಂಡಾಗ ಆಸ್ಪತ್ರೆಗೆ ಫೋನಾಯಿಸಿ ಗುಡುಗಿದರು ಎಂದು ತಿಳಿದುಬರುತ್ತದೆ. ಒಂದು ವ್ಯವಸ್ಥೆಯ ವಿರುದ್ಧ ಹೋರಾಡುವಾಗ ಕಠಿಣತೆಯೂ ಇರಬೇಕು, ಆದರೆ ಸಮಸ್ಯೆ ಹೊತ್ತು ಬಂದವರನ್ನು ನಾಯಕರಾದವರು ನಿರ್ಲಕ್ಷ್ಯ ಭಾವನೆಯಿಂದ ನಡೆಸಿಕೊಳ್ಳಬಾರದು. ಪಂಪಾಪತಿಯವರು ತಮ್ಮ ವಿಧಾನಸಭಾ ಸದಸ್ಯತ್ವದ ಅವಧಿಯ ಕೊನೆಕೊನೆಯಲ್ಲಿ ಈ ರೀತಿ ನಡೆದುಕೊಳ್ಳುತ್ತಿದ್ದರು ಎಂದು ಅವರ ಹತ್ತಿರದ ಸಹಪಾಠಿಗಳೇ ಆರೋಪಿಸುತ್ತಾರೆ.

ಡಿ.ಜಿ.ಹನುಮಂತಪ್ಪ ಎಂಬ ದಾವಣಗೆರೆ ಹತ್ತಿಗಿರಣಿ (ಡಿ.ಸಿ.ಎಂ.) ಕಾರ್ಮಿಕ ಈ ಚರ್ಚೆಗೆ ಪುಷ್ಠಿ ನೀಡುವ ಮಾಹಿತಿ ನೀಡುತ್ತಾರೆ. ಪಂಪಾಪತಿಯವರು ಕಾರ್ಮಿಕರಾಗಿ, ತಮ್ಮ ಕೈಗಳಿಂದ ವಂದಿಸಿ ಅಧಿಕಾರ ಪಡೆದು, ನಂತರ ಅಧಿಕಾರ ನೀಡಿದವರನ್ನು ತಮ್ಮ ಕಾಲಿನಿಂದ ಒದ್ದರು ಎನ್ನುತ್ತಾರೆ. ಕಾರ್ಮಿಕರು ಏಕೆ ಇಂಥ ನಿಲುವು ತಾಳಿದರೆಂದು ಒಳಹೊಕ್ಕು ನೋಡಿದರೆ ಇವರು ಕಾರ್ಮಿಕ ಮೂಲಭೂತ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಹೆಚ್ಚು ಗಮನಕೊಡಲಿಲ್ಲ ಎನ್ನುತ್ತಾರೆ. ನಗರಸಭಾ ಸದಸ್ಯರಾಗಿದ್ದಾಗ ಅವರು ಕಾರ್ಮಿಕರ ಎಲ್ಲ ಸಮಸ್ಯೆಗಳನ್ನು ಸಮಗ್ರವಾಗಿ ಪರಿಹಾರಮಾಡಲು ಅಲ್ಪಸಂಖ್ಯಾತ ಪ್ರತಿನಿಧಿಯಾಗಿದ್ದರು. ಅವರು ಕಾರ್ಮಿಕರ ಪ್ರತಿನಿಧಿಯಾಗಿ ಹೀಗೆ ಮಾಡಿ ಎಂದು ಹೇಳಬಹುದಿತ್ತೇ ಹೊರತು, ಮಾಡಲೇಬೇಕು ಎಂದು ಮಾಡಿಸುವಂತಹ ಅಧಿಕಾರವನ್ನಾಗಲಿ, ಸದಸ್ಯಬಲವನ್ನಾಗಲಿ ಹೊಂದಿರಲಿಲ್ಲ. ಪಶ್ಚಿಮ ಬಂಗಾಳ, ಕೇರಳ ರಾಜ್ಯಗಳಂತೆ ಕಾರ್ಮಿಕರದೇ ಸರ್ಕಾರವಿದ್ದರೆ ಒಂದು ಸೌಲಭ್ಯ ವಂಚಿತ ವರ್ಗವನ್ನು ಮೇಲೆತ್ತಲು ಸಾಧ್ಯ ಎಂಬುದು ಸತ್ಯ.

ಚಳವಳಿ ಬೆಳೆಯಲು, ಪ್ರಯತ್ನದ ಹಾದಿಯಲ್ಲಿ ಸಾಗಲು ಮಾಧ್ಯಮಗಳೂ ಪ್ರಧಾನ ಪಾತ್ರವಹಿಸುತ್ತವೆ. ಈ ನಿಟ್ಟಿನಲ್ಲಿ ಪಂಪಾಪತಿಯವರು ಪ್ರಯತ್ನಪಟ್ಟು ತಮ್ಮ ಸಂಪಾದಕೀಯದಲ್ಲಿ 'ಕ್ರಾಂತಿದೂತ' ಎಂಬ ಸ್ಥಳೀಯ ಪತ್ರಿಕೆಯನ್ನು ಪ್ರಾರಂಭಿಸಿದರು. ಈ ಪತ್ರಿಕೆಯನ್ನು ಪ್ರೊ|| ಚಂದ್ರಶೇಖರ ಪಾಟೀಲ್‌ರವರು ದಿ ೧-೫-೧೯೮೦ರಲ್ಲಿ ಬಿಡುಗಡೆ ಮಾಡಿದರು.[೨೭] ಮಾರ್ಕ್ಸ್ ಅಭಿಪ್ರಾಯದಂತೆ ಪಕ್ಷದ ನಿಲುವುಗಳನ್ನು ತಮ್ಮ ಕಾರ್ಯಕರ್ತರಿಗೆ ತಲುಪಿಸಲು ಈ ಪತ್ರಿಕೆ ಅನುಕೂಲವಾಯಿತು. ಕಾರ್ಮಿಕ ಚಳವಳಿಯ ರೂಪರೇಷಗಳನ್ನು ತಮ್ಮ ಸದಸ್ಯರಿಗೆ ತಲುಪಿಸಲು ಇದು ಅಗತ್ಯವೂ ಆಗಿತ್ತು. ಚಳವಳಿಗಳು ಮಹತ್ವ ಕಳೆದುಕೊಳ್ಳಲಾರಂಭಿಸಿದಂತೆ ಕೈಗಾರಿಕೆಗಳು ಅವನತಿ ಹಾದಿಯ ಬೆನ್ನೇರಿದಂತೆ ಕಾರ್ಮಿಕರ ಸಂಖ್ಯೆಯೂ ಕಡಿಮೆಯಾಯಿತು ಹಾಗೆಯೇ ಈ ಪತ್ರಿಕೆಯೂ ಸಹ ಅಸ್ತಿತ್ವ ಕಳೆದುಕೊಂಡಿತು.

ತಮ್ಮನ್ನು ನಂಬಿದವರ ಬಗ್ಗೆ, ಗುರುಹಿರಿಯರ ಬಗ್ಗೆ, ಗೌರವ ಮನೋಭಾವ ಇಟ್ಟುಕೊಂಡಾಗ ಯಶಸ್ವಿ ಜೀವನದ ಬದುಕು ನಮ್ಮದಾಗುತ್ತದೆ. ಅಂತೆಯೇ ಪಂಪಾಪತಿಯವರು ತಮ್ಮನ್ನು ನಂಬಿದ್ದ ಕಾರ್ಮಿಕರನ್ನು ಸೈದ್ಧಾಂತಿಕ ನೆಲೆಯಲ್ಲಿ ಜಾಗೃತಿಗೊಳಿಸಲು ಪ್ರಾಯೋಗಿಕ ಅನುಭವ ಪಡೆಯಲು ಸಮಾಜವಾದಿ ರಾಷ್ಟ್ರಗಳಿಗೆ ಭೇಟಿ ನೀಡಿ, ಸೋವಿಯತ್ ರಷ್ಯಾ, ಬಲ್ಗೇರಿಯಾ, ಮಂಗೋಲಿಯಾ ಮುಂತಾದ ರಾಷ್ಟ್ರಗಳಲ್ಲಿ ಪ್ರವಾಸ ಮಾಡಿದರು.[೨೮] ಮಂಗೋಲಿಯಾದಿಂದ ಹಿಂತಿರುಗಿದ ಇವರು ಅಲ್ಲಿ ಪ್ರತಿಯೊಂದು ಕೈಗಾರಿಕೆಯೂ ರಾಷ್ಟ್ರದ ಸಂಪತ್ತು ಆದ್ದರಿಂದ ಬಂದ ಆದಾಯ ಶ್ರಮಜೀವಿಗಳ ಕೈ ಸೇರುತ್ತದೆ.[೨೯] ಅದೇ ಪದ್ಧತಿ ನಮ್ಮ ದೇಶದಲ್ಲೂ ಬರಬೇಕೆಂದು ತಮ್ಮನ್ನು ನಂಬಿದ್ದ ಕಾರ್ಮಿಕರಿಗೆ

ಮಾಹಿತಿ ನೀಡಿದರು. ಇದು ಫಲಪ್ರದವಾಗಲಿಲ್ಲವೆಂಬುದು ಮೇಲೆಯೇ ಕಂಡರೂ ಒಂದು ಪಕ್ಷ, ಸಿದ್ಧಾಂತದ ನೇತೃತ್ವವಹಿಸಿದ್ದ ಇವರ ಪ್ರಯತ್ನ ಅಗತ್ಯ, ಅರ್ಥಪೂರ್ಣವಾಗಿದೆ.

ಕಾರ್ಮಿಕರಾಗಿ, ತಮ್ಮವರ ವಿರುದ್ಧದ ಪದ್ಧತಿಯ ರದ್ದಿಗಾಗಿ ಧ್ವನಿ ಎತ್ತಿ, ಹಂತಹಂತವಾಗಿ ಸಾಧನೆಗಳ ಮೆಟ್ಟಿಲುಗಳನ್ನು ಏರಿದ ಪಂಪಾಪತಿಯವರಿಗೆ ೨ ಬಿರುದುಗಳು ದೊರೆತವು. ಚಿತ್ರದುರ್ಗದ ಸರ್ವಭಾರತೀಯ ಧರ್ಮ ಸಮ್ಮೇಳನಲ್ಲಿ ದಿನಾಂಕ ೮.೪.೧೯೮೧ರಂದು 'ಕಾರ್ಮಿಕ ರತ್ನ' ಎಂಬ ಬಿರುದು ನೀಡಿ ಸನ್ಮಾನಿಸಲಾಯಿತು.[೨೦] ಕಮ್ಯೂನಿಸ್ಟ್ ಸಿದ್ಧಾಂತದಲ್ಲಿ ಧರ್ಮ, ಜಾತಿಗಳಿಗೆ ಅವಕಾಶವಿಲ್ಲ. ಆದರೆ ಕಮ್ಯೂನಿಸ್ಟ್ ಪಕ್ಷವನ್ನು ನಡೆಸುತ್ತಿದ್ದ ಇವರು ಧರ್ಮ ಸಮ್ಮೇಳನದಲ್ಲಿ ಪಾಲ್ಗೊಂಡಿದ್ದು ಸಿದ್ಧಾಂತಕ್ಕೆ ಅಪಚಾರವೆಸಗಿದಂತಾಯಿತೆಂದು ಗಮನಿಸಲಾಯಿತು. ೧೯೯೩ರಲ್ಲಿ 'ರಾಜ್ಯೋತ್ಸವ ಪ್ರಶಸ್ತಿ' ನೀಡಲಾಯಿತು.[೨೧] ಇವರ ಪ್ರಯತ್ನ, ಸಾಧನೆಗಳ ಹಿನ್ನೆಲೆಯಲ್ಲಿ ಈ ಪ್ರಶಸ್ತಿ ಪಡೆದದ್ದು ಮೌಲ್ಯ ಪಡೆದುಕೊಂಡಿದೆ. ಯಾವುದೇ ಉನ್ನತ ಪದವಿ ಪಡೆಯದೆ ಕೇವಲ ಆತ್ಮವಿಶ್ವಾಸ ಹಾಗೂ ಸಾಧಿಸುವ ಛಲದಿಂದ ಅನೇಕರು ಇತಿಹಾಸ ಸೃಷ್ಟಿಸಿದ್ದಾರೆ. ಆದರೆ ಪಂಪಾಪತಿಯವರು ಯಾವುದೇ ಅಧಿಕಾರವಿಲ್ಲದೆ ಛಲದಿಂದ, ಕೆಚ್ಚೆದೆಯ ಹೋರಾಟಗಳಿಂದ ಅಧಿಕಾರ ಪಡೆದು ಉತ್ತಮ ಚಾರಿತ್ರ್ಯವನ್ನು ಮೈಗೂಡಿಸಿಕೊಂಡು ಚರಿತ್ರೆಯಲ್ಲೂ ಸ್ಥಾನಪಡೆದುಕೊಂಡಿದ್ದಾರೆ.

ದಾವಣಗೆರೆ ನಗರದಲ್ಲಿ ಪ್ರಬಲ ಲಿಂಗಾಯಿತ ಕೋಮಿನವರು, ಸಬಲ ಬಂಡವಾಳಗಾರರು ಹಿಂದಿನಿಂದಲೂ ಅಧಿಕಾರಗಳನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡಿದ್ದರು. ಇಂಥ ಕೋಟೆಯಲ್ಲಿ ಪಂಪಾಪತಿಯವರು ಅಧಿಕಾರ ಪಡೆದದ್ದು ಹೇಗೆ? ಪಂಪಾಪತಿ ಹಾಗೂ ಅವರ ಪಕ್ಷದವರು ಕಾರ್ಮಿಕ ಸಮುದಾಯದಿಂದ ಬಂದವರು. ಇವರಲ್ಲಿ ಬಂಡವಾಳವಿರದೆ ಸಿದ್ಧಾಂತವನ್ನು ಮುಂದಿಟ್ಟುಕೊಂಡು ಚುನಾವಣಾ ಕಣ ಪ್ರವೇಶಿಸಿದರು. ಆ ಸಂದರ್ಭದಲ್ಲಿ ಕಾರ್ಮಿಕರು ಮಾಡಿದ ಪ್ರಯತ್ನ ಕೊಡುಗೆಗಳನ್ನು ಸ್ಮರಿಸಲೇಬೇಕಾಗುತ್ತದೆ. ಹಣವಿಲ್ಲದೆ ಚುನಾವಣೆಗೆ ಸ್ಪರ್ಧಿಸಿದ ತಮ್ಮ ನಾಯಕರಿಗೆ ಕಾರ್ಮಿಕರು ಚಂದಾಹಾಕಿ, ಭೇದಗಳನ್ನೆಲ್ಲಾ ಬದಿಗಿಟ್ಟು ತಮ್ಮ ನಾಯಕರನ್ನು ಆಯ್ಕೆಮಾಡಲು ಮುಂದಾದರು. ದಾವಣಗೆರೆ ನಗರದಲ್ಲಿ ದಾನಿಗಳೂ ಇದ್ದಾರೆ, ಹಾಗೆಯೇ ವಾಣಿಜ್ಯೋದ್ಯಮಿಗಳೂ ಇದ್ದಾರೆ. ಹೆಚ್ಚಿನ ವಾಣಿಜ್ಯೋದ್ಯಮಿಗಳು ಬೇರೆಯವರನ್ನು ನೋಡುವಾಗ ವ್ಯವಹಾರ ದೃಷ್ಟಿಯಿಂದಲೇ ನೋಡುವ ವಾತಾವರಣವಿದೆ. ಇಂತೆಲ್ಲಾ ಶಕ್ತಿಗಳನ್ನು ಮೆಟ್ಟಿ ಪಂಪಾಪತಿಯವರು ರಾಜಕೀಯವಾಗಿ ಬೆಳೆದದ್ದೇ ಎಲ್ಲರ ಗಮನ ಸೆಳೆಯುವ ವಿಷಯವಾಗಿದೆ. ಅಂದರೆ ಕಾರ್ಮಿಕರು ಎಲ್ಲಾ ಸಹಕಾರ, ಪ್ರೋತ್ಸಾಹ ನೀಡಿದರಾದರೂ, ನಗರದ ನಾಗರೀಕರ ಪಾತ್ರವನ್ನು ನಗಣ್ಯವೆನ್ನುವಂತಿಲ್ಲ. ಕಾರ್ಮಿಕರ ಜೊತೆಗೆ ನಾಗರೀಕರ ಹಾರೈಕೆಯಿಂದಲೂ ಇವರು ಚುನಾವಣೆಯಲ್ಲಿ ಜಯಿಸಿದ್ದಾರೆ.

ಇಂದು ನಾಯಕರ ರಂಗ ಕಲುಷಿತಗೊಂಡಿದೆ. ಸ್ವಜನಪಕ್ಷಪಾತ, ಹಣ, ಪ್ರಧಾನ ಪಾತ್ರ ವಹಿಸುತ್ತಿದ್ದು, ತತ್ತ್ವ, ನಿಷ್ಠೆಗಳು ಮಾಯವಾಗುತ್ತಿವೆ. ಈ ಸಂದರ್ಭಗಳಿಗೆ ಪಂಪಾಪತಿ ಅವರಂಥ ನಿಷ್ಠಾವಂತ ನಾಯಕರ ಅಗತ್ಯವಿದೆ. ಇವರು ಈ ಪ್ರಪಂಚಕ್ಕೆ ಬರಿಗೈಲಿ ಬಂದಂತೆ ಬರಿಗೈಯಲ್ಲಿ ತೆರಳಿದ್ದಾರೆ. ಇವರ ಬದುಕೇ ಒಂದು ದೊಡ್ಡ ಶಾಲೆ, ಈ ಶಾಲೆಯಲ್ಲಿ ಕಲಿತವರು ಅವರಷ್ಟು ಎತ್ತರಕ್ಕೆ

ಏರಲಿಲ್ಲ. ಗಿರಣಿಗಳು ಅವನತಿ ಆಗಿ ಕಾರ್ಮಿಕ ಚಳವಳಿ ಹಿನ್ನಡೆ ಕಂಡಿರುವುದರಿಂದ ಕಾಲವು ಪಕ್ವವಾಗಿಲ್ಲ. ದಾವಣಗೆರೆ ನಗರದ ಜನತಾವಾಣಿ ಪತ್ರಿಕೆಯ ಸಂಪಾದಕರಾದ ಶ್ರೀ ಎಚ್.ಎನ್. ಷಡಕ್ಷರಪ್ಪನವರು (ಕೆಂಬಾವುಟ ನೆನಪಿನ ಪುರವಣಿ ೨೬-೮-೨೦೦೨) ಕೆಂಬಾವುಟ ಪತ್ರಿಕೆಯಲ್ಲಿ "ಪುಡಾರಿಗಳ ಮಧ್ಯೆ ಪಂಪಣ್ಣನಂಥವರು ಅಪ್ಪಟ ಬಂಗಾರದಂತೆ" ಎದ್ದು ಕಾಣುತ್ತಾರೆ ಎಂದಿದ್ದಾರೆ. ಇಲ್ಲಿ ಪಂಪಣ್ಣನವರು ಕಾರ್ಯನಿರ್ವಹಿಸುತ್ತಿದ್ದುದು ಪುಡಾರಿಗಳ ಮಧ್ಯೆ, ಹಾಗೂ ಅವರು ಪುಡಾರಿಗಳಲ್ಲಿ ಉತ್ತಮ ಗುಣಮಟ್ಟದವರು ಎಂಬ ಅರ್ಥಕಾಣಬಹುದು. ಅಂದಾಗ ಅವರನ್ನು ತಿದ್ದಿ ಸಂಭಾವಿತರನ್ನಾಗಿ ಮಾಡುವ ಜವಾಬ್ದಾರಿಯೂ ಇವರಿಗಿತ್ತು. ಇವರು ತಮ್ಮ ಸಹಪಾಠಿಗಳನ್ನು ತಿದ್ದಿ, ಎಚ್ಚರಿಸುವ ಪ್ರಯತ್ನವನ್ನು ಮಾಡುತ್ತಿದ್ದರು ಎಂಬುದಕ್ಕೆ ದಾಖಲೆಗಳಿವೆ.

ಪಂಪಾಪತಿಯವರ ಆರ್ಥಿಕ ಸ್ಥಿತಿ-ಗತಿಗಳನ್ನು ಗಮನಿಸಿದಾಗ ಅವರು ದಾವಣಗೆರೆ ನಗರದ ಕೆ.ಟಿ.ಜೆ ನಗರದಲ್ಲಿ ಹೊಂದಿರುವ ಒಂದು ಮನೆಯನ್ನು ಬಿಟ್ಟರೆ ಬೇರೇನೂ ಅವರ ಆಸ್ತಿ-ಪಾಸ್ತಿ ಇಲ್ಲ. ಆ ಮನೆಯೂ ಸಹ ಕಾರ್ಮಿಕರೆಲ್ಲರೂ ವಂತಿಗೆಹಾಕಿ ಕಟ್ಟಿಸಿಕೊಟ್ಟ ಕಾರ್ಮಿಕರ ಮನೆಯಾಗಿದೆ. ನಗರದ ಪ್ರಥಮ ಪ್ರಜೆಯಾಗಿ, ೩ ಬಾರಿ ವಿಧಾನಸಭಾ ಸದಸ್ಯರಾಗಿ ಕಾರ್ಯನಿರ್ವಹಿಸಿದ ಇವರು ಆರ್ಥಿಕವಾಗಿ ಉನ್ನತಿ ಕಾಣಬಹುದಿತ್ತು. ಅಸಮಾನತೆ, ಶೋಷಣೆ ವಿರುದ್ಧ ಚಳವಳಿ ಸಂಘಟಿಸಿದ ಇವರು ಮಾರ್ಕ್ಸ್‌ವಾದಿ. ಆಸ್ತಿಯ ಹಕ್ಕು ಮೇಲು-ಕೀಳು ಎಂಬ ಸಮಾಜವನ್ನು ಸೃಷ್ಟಿಸುತ್ತದೆ ಎಂಬುದು ಮಾರ್ಕ್ಸ್ ಅಭಿಪ್ರಾಯ. ಈ ಹಿನ್ನೆಲೆಯಲ್ಲಿ ಖಾಸಗಿ ಆಸ್ತಿ ಶೋಷಣೆಯ ಮೂಲ ಎಂದು ಸಿದ್ಧಾಂತ ಹೇಳುತ್ತದೆ. ಇದಕ್ಕೆ ತಕ್ಕಂತೆ ಅವರು ನಡೆದುಕೊಂಡರು. ಇದೇ ಸಿದ್ಧಾಂತ ಮುಂದಿಟ್ಟು ನಡೆಯುತ್ತಿರುವ ಅನೇಕರು ಆರ್ಥಿಕ ವಿಚಾರಗಳಲ್ಲಿ ಸಿದ್ಧಾಂತವನ್ನು ಅವಗಣನೆ ಮಾಡಿರುವ ನಿದರ್ಶನಗಳು ನಮ್ಮ ದೇಶದಲ್ಲಿವೆ.

ಕಮ್ಯೂನಿಸ್ಟರಲ್ಲದ, ರಾಷ್ಟ್ರನಾಯಕರಾದ ಕರ್ನಾಟಕದ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ನಿಜಲಿಂಗಪ್ಪನವರು ನಾಡು, ನುಡಿ, ಜನತೆಗಾಗಿ ತಮ್ಮನ್ನು ತೊಡಗಿಸಿಕೊಂಡವರು. ಅವರೂ ಸಹ ಚಿತ್ರದುರ್ಗದ ಮನೆಯೊಂದನ್ನು ಬಿಟ್ಟರೆ ಬೇರೇನೂ ಗಳಿಸಲಿಲ್ಲ. ಇವರಂತೆಯೇ ಪಂಪಾಪತಿಯವರು ತಮ್ಮ ವಂತಿಗೆ ಮನೆಯೊಂದನ್ನು ಬಿಟ್ಟರೆ ಬೇರೇನೂ ಗಳಿಸಲಿಲ್ಲ.

ವ್ಯಕ್ತಿಯ ವ್ಯಕ್ತಿತ್ವವನ್ನು ಪರೀಕ್ಷಿಸುವಾಗ ಅಧಿಕಾರಕೊಟ್ಟು ನೋಡಬೇಕು. ಸಾಮಾನ್ಯ ವ್ಯಕ್ತಿ, ಅಧಿಕಾರವಿಲ್ಲದಾಗ ಹೇಗಿರುತ್ತಾನೆ, ಅಧಿಕಾರವಿದ್ದಾಗ ಹೇಗೆ ವರ್ತಿಸುತ್ತಾನೆ ಎಂದು ಪರೀಕ್ಷೆಗೊಳಪಡಿಸಬೇಕು. ಹೀಗೆ ಅಧಿಕಾರ ಪಡೆದುಕೊಂಡ ಪಂಪಾಪತಿಯವರನ್ನು ಈಗಾಗಲೇ ಅವರ ಮೂಲದವರೇ ಪರೀಕ್ಷೆ ಮಾಡಿ ದೋಷಗಳನ್ನು ಗುರುತಿಸಿದ್ದಾರೆ. ಸಾಮಾನ್ಯವಾಗಿ ಮನುಷ್ಯ ತನ್ನ ಬಯಕೆಗಳು ಈಡೇರದೆ ಹೋದಾಗ ಸಂಯಮ ಕಳೆದುಕೊಳ್ಳುತ್ತಾನೆ. ಆಗ ಕ್ರೋಧ ಆವರಿಸಿ ಅವನ ಬುದ್ಧಿಯು ಸಿಟ್ಟಿನ ವ್ಯಾಪ್ತಿಗೆ ಸಿಲುಕುತ್ತದೆ. ಈ ಸಂದರ್ಭವು ಮನುಷ್ಯನ ಬುದ್ಧಿಯನ್ನು ಮಂಕಾಗುವಂತೆ ಮಾಡುತ್ತದೆ. ಆಗ ಆರೋಪ, ಪ್ರತ್ಯಾರೋಪಗಳಿಗೆ ಅವಕಾಶವಾಗುತ್ತದೆ. ಪಂಪಾಪತಿಯವರೂ ಕಾರ್ಯಭಾರದ ಒತ್ತಡದಿಂದ ಹಲವು ಸಂದರ್ಭಗಳಲ್ಲಿ ಸಿಟ್ಟು ಮಾಡಿರಬಹುದು, ಹಾಗೆಯೇ ತಮ್ಮವರೇ ಎಂದು ಅತಿಯಾದ ಅಭಿಮಾನ ಹೊಂದಿದ್ದ ಕಾರ್ಮಿಕರೂ ಸಹ ಈ ಸಂದರ್ಭದಲ್ಲಿ ಆರೋಪದ ರೂಪದಲ್ಲಿ ಹೊರಹಾಕಿದ್ದಾರೆ.

ಅಧಿಕಾರ, ಸಿರಿ, ಸೌಕರ್ಯಗಳೆಲ್ಲವೂ ಬೆಳಗಿನ ಮಂಜಿನಂತೆ, ಮಳೆಗಾಲದ ಮಿಂಚಿನಂತೆ ಕ್ಷಣಿಕವಾದದ್ದು ಎಂಬುದನ್ನು ಯಾವುದೇ ನಾಯಕರಾದರೂ ಮರೆಯಬಾರದು. ಇವುಗಳ ಕ್ಷಣಿಕ ಸಂದರ್ಭಗಳಿಗಾಗಿ ಜೀವನದ ಮೌಲ್ಯದಿಂದ ವಿಮುಖವಾಗಿ ತಮ್ಮ ಬೆಲೆಯನ್ನು ಕಳೆದುಕೊಳ್ಳಬಾರದು. ಸಾಮಾಜಿಕ ಜೀವನದಲ್ಲಿ ನಮ್ಮ ಸ್ಥಾನಮಾನ ವೃದ್ಧಿಯಾಗಬೇಕಾದರೆ ಆಡುವ ಮಾತುಗಳು ಮಧುರತೆಯ ಮಂದಿರವಾಗಬೇಕು. ಅಂದರೆ ಪಂಪಾಪತಿಯವರು ಈ ಎಲ್ಲಾ ವಿಚಾರಗಳನ್ನು ತಮ್ಮಲ್ಲಿ ಅಂತರ್ಗತ ಮಾಡಿಕೊಂಡಿದ್ದರು ಎಂದರ್ಥವಲ್ಲ. ಅವರು ಮಾತಿನಲ್ಲಿ ಕೆಲವು ಸಂದರ್ಭಗಳಲ್ಲಿ ಅವರ ಮಾತುಗಳು ಗಡಸಾಗಿರುತ್ತಿದ್ದವು ಎಂದು ಸಹಪಾಠಿಗಳು ಗುರುತಿಸುತ್ತಾರೆ.

ಪಂಪಾಪತಿಯವರ ವ್ಯಕ್ತಿತ್ವದಲ್ಲಿ ದೌರ್ಬಲ್ಯಗಳಿಲ್ಲದಿಲ್ಲ. ವ್ಯಕ್ತಿಯ ವ್ಯಕ್ತಿತ್ವದಲ್ಲಿ ದೌರ್ಬಲ್ಯಗಳು, ಸಾಧನೆಯಲ್ಲಿ ವೈಫಲ್ಯಗಳಿರುವುದು ಸಹಜ. ಇವರಿಗೆ ಸ್ವಲ್ಪ ಮುಂಗೋಪವಿತ್ತು ಎಂಬುದು ಬಹಳಷ್ಟು ಕಾರ್ಮಿಕರ ಅಭಿಪ್ರಾಯ. ಜನನಾಯಕರಾದವರಿಗೆ ಈ ಸ್ವಭಾವ ಇರಬಾರದು. ತಾಳ್ಮೆ ಇಲ್ಲದ ಮನಸ್ಸು ಎಣ್ಣೆ ಇಲ್ಲದ ದೀಪದಂತೆ ಬೆಳಕು ನಂದುತ್ತದೆ. ಒತ್ತಡಗಳನ್ನು ಕಡಿಮೆ ಮಾಡಿಕೊಂಡು ತಮ್ಮನ್ನು ನಂಬಿದವರ ಮನಸ್ಸಿನ ಮೇಲೆ ಇಂಥ ಛಾಯೆಗಳು ಮೂಡದಂತೆ ನೋಡಿಕೊಳ್ಳಬೇಕು. ರಾಜಕೀಯ ಅಧಿಕಾರವನ್ನು ಪಡೆಗಿದ್ದಾಗ, ಇವರು ಅಂತರ್‌ಜಾತಿ ವಿವಾಹಗಳಿಗೆ ಪ್ರಾಮುಖ್ಯತೆ ನೀಡಬೇಕಾಗಿತ್ತು. ಕಮ್ಯೂನಿಸ್ಟ್ ಸಿದ್ಧಾಂತಗಳಿಗೆ ಹಲವು ಸಂದರ್ಭಗಳಲ್ಲಿ ರಾಜಿಮಾಡಿಕೊಳ್ಳುತ್ತಿದ್ದರೆಂದು ಗುರುತಿಸಲಾಗಿದೆ. ಮುಷ್ಕರದ ಸಂದರ್ಭಗಳಲ್ಲಿ ಕಮ್ಯೂನಿಸ್ಟ್ ಸಿದ್ಧಾಂತದ ವಿರುದ್ಧವಾದ, ಗಾಂಧಿ ನೀತಿಗಳಲ್ಲಿ ಒಂದಾದ ಉಪವಾಸ ಕೈಗೊಳ್ಳುತ್ತಿದ್ದುದು ಕಂಡುಬರುತ್ತದೆ. ಕ್ಷೇತ್ರಕಾರ್ಯ ಸಂದರ್ಭದಲ್ಲಿ ತಿಳಿದುಕೊಂಡಂತೆ ಕಾರ್ಮಿಕರು ಸಮಸ್ಯೆ ಹೊತ್ತು ಪಂಪಣ್ಣನವರ ಮನೆಗೆ ತೆರಳಿದರೆ, ಕಛೇರಿಗೆ ಬಾ, ಕಛೇರಿಗೆ ಹೋದರೆ ಮನೆಗೆ ಬಾ ಎಂದು ಅನಗತ್ಯವಾಗಿ ಓಡಾಡಿಸುತ್ತಿದ್ದರು ಎಂದು ಅಭಿಪ್ರಾಯಪಟ್ಟಿದ್ದಾರೆ. ನಾಯಕರೆಂದರೆ ನಮ್ಮ ಸಮಸ್ಯೆಗಳಿಗೆ ಉತ್ತರ ಎಂದುಕೊಂಡವರಿಗೆ ನ್ಯಾಯಮೂರ್ತಿಯಂತೆ, ತಜ್ಞರಂತೆ ಮಾಗದರ್ಶನ ನೀಡುವುದು ಅವರ ಕರ್ತವ್ಯ. ಯಾರೇ ನಾಯಕರಾದರೂ ಈ ಮೌಲ್ಯವನ್ನು ಮನದಾಳದಲ್ಲಿಟ್ಟು ಸಂದರ್ಭಗಳಲ್ಲಿ ಅರ್ಥಪೂರ್ಣವಾಗಿ ಉಪಯೋಗಿಸಬೇಕು.

ಪಂಪಾಪತಿಯವರ ವ್ಯಕ್ತಿತ್ವವನ್ನು ಜಾತಿಯಿಂದ ಅಳೆಯದೆ ನೀತಿಯಿಂದ ಅಳೆಯಬೇಕು. ನೀತಿ, ನಡೆ, ನುಡಿ, ಪ್ರತಿಭೆ, ಒಂದು ಜಾತಿಯ ಸ್ವತ್ತಲ್ಲ. ಇದು ಆಸಕ್ತಿ ಉಳ್ಳ, ಶಕ್ತಿ ಇರುವ ಯಾರಲ್ಲಾದರೂ ಅಡಗಿರಬಹುದು. ಆದ್ದರಿಂದ ಪಂಪಾಪತಿ ತಮ್ಮ ಬಂಧನದ ಶೃಂಖಲೆಗಳನ್ನು ಬಿಡಿಸುವ ನೀತಿಯಿಂದ ಹೋರಾಡಿ ವ್ಯಕ್ತಿತ್ವರೂಪಿಸಿಕೊಂಡಿದ್ದಾರೆ.

ಪಂಪಾಪತಿಯವರು ತಮ್ಮ ಕಾರ್ಯಕ್ಷೇತ್ರ ವಿಸ್ತಾರವಾದಂತೆಲ್ಲಾ ಜವಾಬ್ದಾರಿಗಳನ್ನು ಇತರೆ ಸದಸ್ಯರಿಗೆ ಹಂಚಿದ್ದರೆ ಆಕ್ಷೇಪಗಳಿಂದ ಮುಕ್ತರಾಗಬಹುದಿತ್ತು.

ಶ್ರೀ. ಹೆಚ್.ಕೆ. ರಾಮಚಂದ್ರಪ್ಪ

ಕಾರ್ಮಿಕ ಚಳವಳಿಯ ಎರಡನೇ ಹಂತದ ರೂವಾರಿಗಳಲ್ಲಿ ಶ್ರೀ ಹೆಚ್.ಕೆ. ರಾಮಚಂದ್ರಪ್ಪ ಅವರಿಗೆ ಮೊದಲ ಸ್ಥಾನವಿದೆ. ಕಾರ್ಮಿಕ ಮುಖಂಡರಲ್ಲಿ ಶಿಕ್ಷಿತರಾಗಿ, ಸಂಘಟನಾ ಸಾಧಕರಾಗಿ,

ನಗರಸಭಾ ಸದಸ್ಯ, ಉಪಾಧ್ಯಕ್ಷ, ಅಧ್ಯಕ್ಷರಾಗಿ, ಕಾರ್ಮಿಕ ವರ್ಗವನ್ನು ಮೇಲೆತ್ತಲು ಶ್ರಮಿಸಿದ್ದಾರೆ. ದಾವಣಗೆರೆ ಹತ್ತಿಗಿರಣಿ(ಡಿಸಿಎಂ)ಯ ವ್ಯವಸ್ಥಾಪಕ ಬಿ.ಪಿ.ಶೆಟ್ಟಿ ಕೊಲೆ ಅಪಾದನೆಯಲ್ಲಿ ಜೈಲುವಾಸ ಅನುಭವಿಸಿ, ಮುಚ್ಚಿದ ಗಿರಣಿಗಳ ತೆರವಿಗಾಗಿ ಹೋರಾಡಿ, ಕಾರ್ಮಿಕರ ವಿರುದ್ಧದ ಪದ್ಧತಿಗಳ ರದ್ಧತಿಗಾಗಿ ಧ್ವನಿ ಎತ್ತಿ, ಸವಾಲಿನಿಂದ ಎದುರು ನಿಂತ ಶ್ರೀ ಹೆಚ್.ಕೆ. ರಾಮಚಂದ್ರಪ್ಪ ಅವರು ಸಾಧನಾ ಪುಟವನ್ನು ಕ್ರಮಿಸಿದ್ದಾರೆ.

ಶ್ರೀ ಹೆಚ್.ಕೆ. ರಾಮಚಂದ್ರಪ್ಪ ಅವರು ದಾವಣಗೆರೆಯಲ್ಲಿ ೧೯೪೫ರಲ್ಲಿ ಜನಿಸಿದರು.[೩೨] ಎಸ್.ಎಸ್.ಎಲ್.ಸಿ ವರೆಗೆ ವಿದ್ಯಾಭ್ಯಾಸ ಮಾಡಿ ಶ್ರೀ. ಚಂದ್ರೋದಯ ಮಿಲ್ಸ್ ಲಿ, ದಾವಣಗೆರೆ ಇಲ್ಲಿ ಕೆಲಸಕ್ಕೆ ಸೇರ್ಪಡೆಯಾದರು.[೩೩] ಕಾರ್ಮಿಕರಾಗಿದ್ದುಕೊಂಡೇ ಮುಖಂಡರಾಗಿ ಬೆಳೆದವರಲ್ಲೇ, ಹೆಚ್ಚಿನ ಶಿಕ್ಷಣ ಪಡೆದವರಲ್ಲಿ ಇವರು ಎರಡನೆಯವರು. ಶಿಕ್ಷಿತರು ಬಹಳ ಕಡಿಮೆ ಇದ್ದ ಗಿರಣಿಗಳಲ್ಲಿ ಅಲ್ಪಶಿಕ್ಷಣವಿದ್ದ ಇವರಿಗೆ ಮಾಲೀಕರ ಶೋಷಣೆಯ ಮುಖಗಳು ಬಹುಬೇಗ ದರ್ಶನವಾದವು. ಕಾರ್ಖಾನೆಗಳ ಕಾಯಿದೆಯಂತೆ ಮಹಿಳೆಯರು ಸಂಜೆ ೬ ಗಂಟೆ ನಂತರ ಕಾರ್ಖಾನೆಗಳಲ್ಲಿ ದುಡಿಯುವುದು ತಪ್ಪು. ಆದರೆ ದಾವಣಗೆರೆ ನಗರದಲ್ಲಿ ಈ ಕಾಯಿದೆಯ ಉಲ್ಲಂಘನೆಯಾಗಿತ್ತು, ಹಾಗೂ ಅವರಿಗೆ ಹೆರಿಗೆ ಮುಂತಾದ ಯಾವುದೇ ರಜಾ ಸೌಲಭ್ಯಗಳೂ ದೊರೆಯುತ್ತಿರಲಿಲ್ಲ. ಈ ಸಂದರ್ಭ ಅವರನ್ನು ಸಂಘಟಿಸಿ ಹೋರಾಟಕ್ಕೆ ಕರೆತರಲು ಕಾರ್ಯ ಪ್ರವೃತ್ತರಾಗುವಂತೆ ಮಾಡಿತು.

ಈ ವೇಳೆಗಾಗಲೇ ನಗರಕ್ಕೆ ಕಮ್ಯುನಿಸ್ಟ್ ನಾಯಕರ ಸಂಪರ್ಕವಾಗಿ ಮಾರ್ಗದರ್ಶನ ನಡೆಯುತ್ತಿತ್ತು. ಆ ಕಾಲಕ್ಕಾಗಲೇ ಶ್ರೀ ಪಂಪಾಪತಿಯವರಂಥ ಸ್ಥಳೀಯ ಮುಖಂಡರು ಕಾರ್ಮಿಕ ಚಳವಳಿ ಕಟ್ಟಿ ಬೆಳೆಸುತ್ತಿದ್ದರು. ಇವರ ಮಾರ್ಗದರ್ಶನದಲ್ಲಿ ಶ್ರೀ ಹೆಚ್.ಕೆ. ರಾಮಚಂದ್ರಪ್ಪ ಅವರ ಪಳಿಗೆಯಾಯಿತು. ತಾವು ಕೆಲಸದಲ್ಲಿದ್ದ ಚಂದ್ರೋದಯ ಗಿರಣಿಯಲ್ಲಿ ಇಂಟಕ್ ಎಂಬ ಒಳಸಂಘ ಅಸ್ತಿತ್ವದಲ್ಲಿದ್ದು, ಅದು ಕಾರ್ಮಿಕರ ವಿರೋಧಿಯಾಗಿತ್ತು. ಈ ಇಂಟಕ್ ಸಂಘದಿಂದ ಕಾರ್ಮಿಕರನ್ನು ಹೊರತಂದು ಅಖಿಲ ಭಾರತ ಟ್ರೇಡ್ ಯೂನಿಯನ್ (ಎ.ಐ.ಟಿ.ಯು.ಸಿ) ಕಾಂಗ್ರೆಸ್ ಸಂಘಟನೆ ಕಟ್ಟಲು ಹೆಜ್ಜೆ ಹಾಕತೊಡಗಿದರು. ದಿನಾಂಕ ೨೬.೧.೧೯೬೭ರಲ್ಲಿ ಶ್ರೀ ಚಂದ್ರೋದಯ ಮಿಲ್ ಕಾರ್ಮಿಕರ ಸಂಘವನ್ನು ಇಂಟಕ್ ಸಂಘಟನೆಯಿಂದ ಹೊರತಂದು ಅಖಿಲ ಭಾರತ ಟ್ರೇಡ್ ಯೂನಿಯನ್ (ಎ.ಐ.ಟಿ.ಯು.ಸಿ) ಕಾಂಗ್ರೆಸ್ ಸಂಘಟನೆಯ ಕಾರ್ಯದರ್ಶಿಯಾಗಿ ಆಯ್ಕೆಯಾದರು.[೩೪] ದೀರ್ಘಕಾಲದ ಮಾಲೀಕರ ಪರವಾಗಿದ್ದ ಇಂಟಕ್ ಸಂಘಟನೆಯಿಂದ ಕಾರ್ಮಿಕರನ್ನು ಹೊರತಂದು ಅದರ ನಾಯಕತ್ವ ವಹಿಸಿಕೊಂಡಿದ್ದು ಸಾಮಾನ್ಯ ಯತ್ನವಾಗಿರಲಿಲ್ಲ. ಅಂತೂ ಮಾಲೀಕರ ಹಿಡಿತದ ಸಂಘಟನೆಯಿಂದ ಕಾರ್ಮಿಕರನ್ನು ಮುಕ್ತಿ ಮಾಡುವಲ್ಲಿ ಇವರು ಯಶಸ್ವಿಯಾದರು. ಇಲ್ಲಿ ಶ್ರೀ ಹೆಚ್.ಕೆ. ರಾಮಚಂದ್ರಪ್ಪ ಅವರು ಮುಖಂಡರಾಗಿ ಹುಟ್ಟಿಕೊಂಡ ಉದ್ದೇಶವು ಆಡಳಿತ ವರ್ಗದ ಕಿರುಕುಳ ಹಾಗೂ ಅದರಿಂದ ತಮ್ಮ ಸ್ನೇಹಿತರನ್ನು ಮುಕ್ತಗೊಳಿಸುವುದೇ ಆಗಿತ್ತು. ಇಂಥ ಪ್ರಯತ್ನದಲ್ಲಿ ದಾವಣಗೆರೆ ನಗರದ ಕಾರ್ಮಿಕರು ೧೯೭೦ರ ದಶಕದಲ್ಲಿ ಗೆಲುವು ಕಂಡರು.

ಇದೇ ಸಂದರ್ಭದಲ್ಲಿ ನಗರದ ಉದಯೋನ್ಮುಖ ಕಾರ್ಮಿಕ ನಾಯಕರಾದ ಶ್ರೀ ಸುರೇಶ್, ಶ್ರೀ ಶೇಖರಪ್ಪನವರು ಹತ್ಯೆಯಾದಾಗ (೧೯೭೦) ಅವರ ಸ್ಮರಣಾರ್ಥ ದಾವಣಗೆರೆಯಲ್ಲಿ ವ್ಯಾಯಾಮಶಾಲೆ

ನಿರ್ಮಿಸಲು ತೀರ್ಮಾನಿಸಲಾಯಿತು. ಈ ಶಾಲೆ ನಿರ್ಮಿಸಲು ಬಡವರಾದ ಕಾರ್ಮಿಕರಿಗೆ ಹಣದ ಕೊರತೆಯುಂಟಾಯಿತು. ಆಗ ಶ್ರೀ ಹೆಚ್.ಕೆ. ರಾಮಚಂದ್ರಪ್ಪನವರು ಈ ಹಣಕಾಸಿನ ಕೊರತೆ ತುಂಬಲು 'ಜೀವನ ಯಾತ್ರೆ' ಎಂಬ ನಾಟಕವಾಡಿ ಸಹಾಯ ನಿಧಿ ಸಂಗ್ರಹಿಸಿದರು.[೩೫] ಈ ನಾಟಕದ ಹಲವು ಪ್ರದರ್ಶನ ನೀಡಿ ನಿಧಿ ಸಂಗ್ರಹಿಸಿ ಕಾರ್ಮಿಕರ ಚೇತನಗಳಾದ ಶ್ರೀ ಸುರೇಶ್, ಶ್ರೀ ಶೇಖರಪ್ಪನವರ ವ್ಯಾಯಾಮ ಶಾಲೆಯನ್ನು ದಾವಣಗೆರೆ ನಗರದ ಕೆ.ಟಿ. ಜಂಬಣ್ಣ ಬಡಾವಣೆಯಲ್ಲಿ ನಿರ್ಮಿಸಿದರು. ಈ ವ್ಯಾಯಾಮ ಶಾಲೆಯು ಇಂದಿಗೂ ಕಾರ್ಯನಿರತವಾಗಿದ್ದು ಅವರ ಹೆಸರನ್ನು ಚಿರಸ್ಥಾಯಿಗೊಳಿಸಿದೆ.

ಕತ್ತಲೆಯಲ್ಲಿದ್ದ ಮಹಿಳಾ ಮತ್ತು ಪುರುಷ ಕಾರ್ಮಿಕರ ಮೇಲೆ ಬೆಳಕು ಚೆಲ್ಲಲು ಯತ್ನಿಸುತ್ತಿದ್ದ ಸಂದರ್ಭದಲ್ಲಿ ದಾವಣಗೆರೆ ಹತ್ತಿ ಗಿರಣಿ (ಡಿ.ಸಿ.ಎಂ) ವ್ಯವಸ್ಥಾಪಕರಾಗಿದ್ದ ಬಿ.ಪಿ.ಶೆಟ್ಟಿಯವರು ದಿನಾಂಕ ೦೩.೮.೧೯೭೨ರಲ್ಲಿ ಕೊಲೆಯಾದರು.[೩೬] ಈ ಘಟನೆ ಶ್ರೀ ಹೆಚ್.ಕೆ ರಾಮಚಂದ್ರಪ್ಪ ಅವರನ್ನು ಕೊಲೆ ಆಪಾದನೆಗೊಳಪಡಿಸಿತು. ಕಾರ್ಮಿಕ ಮುಖಂಡ ಎಂಬ ಕಾರಣಕ್ಕೆ ನನ್ನನ್ನು ಆರೋಪದ ಪಟ್ಟಿಗೆ ಸೇರಿಸಲಾಯಿತು ಎಂದು ಶ್ರೀ ಹೆಚ್.ಕೆ. ರಾಮಚಂದ್ರಪ್ಪ ಅವರು ಅಭಿಪ್ರಾಯಪಟ್ಟರೆ, ಕಾನೂನಿನ ದೃಷ್ಟಿಯಲ್ಲಿ ಆಪಾದಿತರಾಗಿ ೫ ವರ್ಷಗಳ ಕಾಲ ಜೈಲು ಶಿಕ್ಷೆ ಅನುಭವಿಸಿದರು. ದಾವಣಗೆರೆ ನಗರದ ಹತ್ತಿಗಿರಣಿ ಕಾರ್ಮಿಕ ಮುಖಂಡರಲ್ಲಿ ಬಹುತೇಕರು ಒಂದಲ್ಲಾ ಒಂದು ಕೊಲೆ ಆಪಾದನೆಗೆ ಒಳಗಾಗುತ್ತಿರುವುದನ್ನು ಗಮನಿಸಿದರೆ, ನಾಯಕರು ಎಂಬ ಕಾರಣಕ್ಕಾಗಿ ಹೀಗಾಯಿತೋ? ಅಥವಾ ಇವರುಗಳು ಇಂತ ಕೃತ್ಯಗಳನ್ನೆಸಗಿದ್ದಾರೋ? ಎಂಬ ಪ್ರಶ್ನೆ ಉದಯಿಸುವುದು ಸಹಜ. ಈ ಪ್ರಶ್ನೆಗೆ ಉತ್ತರವಾಗಿ ನ್ಯಾಯಾಲಯ ಈಗಾಗಲೇ ತೀರ್ಪು ನೀಡಿದ್ದು ಕಾರ್ಮಿಕ ಮುಖಂಡರು ಆಪಾದಿತರಾಗಿ ಶಿಕ್ಷೆಯನ್ನು ಅನುಭವಿಸಿದ್ದಾರೆ.

ನಗರದ ಶಂಕರ್ ಹತ್ತಿಗಿರಣಿಯು ಮುಚ್ಚಲ್ಪಟ್ಟಾಗ ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್ ಸಂಘಟನೆಯು ಚಳವಳಿಯನ್ನು ತೀವ್ರಗೊಳಿಸತು. ಈ ಸಂದರ್ಭದಲ್ಲಿ ಶ್ರೀ ಹೆಚ್.ಕೆ. ರಾಮಚಂದ್ರಪ್ಪ ಅವರು ತಮ್ಮ ಹೆಗಲು ಕೊಟ್ಟು ಹೋರಾಡಿದರು. ಕಾರ್ಮಿಕರೇ ಹೆಚ್ಚಾಗಿ ವಾಸಿಸುತ್ತಿದ್ದ ನಿಟ್ಟುವಳ್ಳಿ ಬಡಾವಣೆಯಲ್ಲಿ ಶ್ರೀ. ಲೆನಿನ್ ವಿದ್ಯಾಸಂಸ್ಥೆಯಿಂದ ದಿನಾಂಕ ೨೫-೬-೧೯೮೨ರಲ್ಲಿ ಪ್ರಾರಂಭಿಸಿದರು.[೩೭] ಕ್ಷೇತ್ರಕಾರ್ಯ ಸಂದರ್ಭದಲ್ಲಿ ಕಾರ್ಮಿಕರು ತಮ್ಮ ಮಕ್ಕಳಿಗೆ ಶಿಕ್ಷಣ ಸೌಲಭ್ಯದ ಕೊರತೆಯನ್ನು ಸ್ಪಷ್ಟಪಡಿಸುತ್ತಾರೆ. ಇಂಥ ಕೊರತೆಯನ್ನು ನೀಗಿಸಲು ಇದು ಒಂದು ಸಣ್ಣ ಪ್ರಯತ್ನವಾಗಿತ್ತು ಎನ್ನಬಹುದು.

ದಾವಣಗೆರೆ ನಗರ ಕೈಗಾರಿಕಾ ಪ್ರದೇಶವಾದ ನಂತರ ಕೊಳಚೆ ಪ್ರದೇಶಗಳೂ ಬೆಳವಣಿಗೆ ಹೊಂದಿದವು. ಇಲ್ಲಿನ ನಿವಾಸಿಗಳಿಗೆ ಸಾಮಾನ್ಯ ಸೌಲಭ್ಯಗಳು ಅಲಭ್ಯವಾದಾಗ ಶ್ರೀ ಹೆಚ್.ಕೆ. ರಾಮಚಂದ್ರಪ್ಪ ಅವರು ಅತ್ತ ಗಮನ ಹರಿಸಿ ಪ್ರಾಥಮಿಕ ಸೌಲಭ್ಯಗಳಿಗಾಗಿ ಹಾಗೂ ನಿವೇಶನಗಳನ್ನು ಖಾಯಂಗೊಳಿಸುವ ಸಲುವಾಗಿ ಚಳವಳಿ ನಡೆಸಿದ್ದಾರೆ. ಶಂಕರ್ ಗಿರಣಿಯು ಮುಚ್ಚಲ್ಪಟ್ಟಾಗ ಅಲ್ಲಿನ ಕೆಲ ಕಾರ್ಮಿಕರಿಗೆ ನೀಡಿದ್ದ ಮನೆಗಳನ್ನು ತೆರವುಗೊಳಿಸಬೇಕಾಯಿತು. ಆ ಸಂದರ್ಭದಲ್ಲಿ ಚಿತ್ರದುರ್ಗದ ಜಿಲ್ಲಾಧಿಕಾರಿ ಶ್ರೀ ಕೆ.ಎಂ. ಕೋಟೆಯವರನ್ನು ಭೇಟಿ ಮಾಡಿ ಅಲ್ಲಿ ವಾಸಿಸುತ್ತಿದ್ದ ೪೫ ಕಾರ್ಮಿಕರಿಗೆ

ದಾವಣಗೆರೆ ನಗರದ ದೇವರಾಜ ಅರಸ್ ಬಡಾವಣೆಯಲ್ಲಿ ನಿವೇಶನ ಮಂಜೂರು ಮಾಡಿಸಿಕೊಟ್ಟರು.[೩೮] ಈಗಾಗಲೇ ಕೆಲಸ ಕಳೆದುಕೊಂಡು ನೊಂದಿದ್ದ ಶಂಕರ್ ಗಿರಣಿ ಕಾರ್ಮಿಕರಿಗೆ ಇದೊಂದು ಪ್ರಮುಖ ಕೊಡುಗೆಯಾಗಿದೆ.

ಕಾರ್ಮಿಕರ ಶಿಕ್ಷಣ ಶಿಬಿರಗಳಲ್ಲಿ ಪಾಲ್ಗೊಂಡು ಸಂಘಟನೆಯ ಮಹತ್ವ, ಅಗತ್ಯ, ಸಾಧನೆಗಳ ಬಗ್ಗೆ ದಾವಣಗೆರೆ ನಗರದಲ್ಲಿ ಮಾಹಿತಿ ನೀಡಿರುವುದಕ್ಕೆ ಅವರ (೧೯೮೦) ದಿನಚರಿಯಲ್ಲಿ ದಾಖಲಾತಿಗಳಿವೆ. ಅಂದಿನ ಕಾಲಮಾನದಲ್ಲಿ ಕಾರ್ಮಿಕರಿಗೆ ನುರಿತ ಇಂತಹವರಿಂದ ತರಬೇತಿ ಅಗತ್ಯವಾಗಿದ್ದು, ಇದನ್ನು ಶ್ರೀ ಹೆಚ್.ಕೆ. ರಾಮಚಂದ್ರಪ್ಪ ಅವರು ತುಂಬಿಕೊಟ್ಟಿದ್ದಾರೆ. ದಾವಣಗೆರೆ ನಗರದಲ್ಲಿ ರಾಜ್ಯದ ಹತ್ತಿಗಿರಣಿಗಳ ಕಾರ್ಮಿಕರ ಸಮ್ಮೇಳನ ನಡೆದು ತ್ರಿಪಕ್ಷೀಯ ಸಮಿತಿ (೧೯೭೪ರಲ್ಲಿ) ನೇಮಕಗೊಂಡು ವರದಿ ನೀಡಿದರೂ ಪರಿಷ್ಕೃತ ವೇತನ ಜಾರಿಯಾಗದಿದ್ದಾಗ ತಮ್ಮ ಕಾರ್ಯಕ್ಷೇತ್ರವನ್ನು ರಾಜ್ಯಮಟ್ಟಕ್ಕೆ ವಿಸ್ತರಿಸಿಕೊಂಡು ಗದಗ, ಬಳ್ಳಾರಿ, ಹುಲಿಕೋಟೆ ಮುಂತಾದ ಸ್ಥಳಗಳಲ್ಲಿ ಚಳವಳಿ ನಡೆಸಿದರು. ಇದರ ಫಲವಾಗಿ ಇಡೀ ರಾಜ್ಯದ ಹತ್ತಿಗಿರಣಿ ಕಾರ್ಮಿಕ ವೇತನದಲ್ಲಿ ಹೆಚ್ಚಳವಾದದ್ದನ್ನು ಸಮ್ಮೇಳನಗಳ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. 'ಕಾರ್ಮಿಕರ ಸಂಘಟನೆಯು ನನ್ನ ಆಜನ್ಮಸಿದ್ಧ ಹಕ್ಕು, ಅವರ ಹಿತವೇ ನನ್ನ ಧ್ಯೇಯ'[೩೯] ಎಂದು ಕಾರ್ಯಶೀಲರಾಗಿದ್ದರು. ಈ ಅಭಿಪ್ರಾಯದಿಂದ ಶೋಷಿತವರ್ಗವನ್ನು ಹೇಗೆ ರಕ್ಷಿಸಬೇಕೆಂಬ ಅವರ ಮುನ್ಸೂಚನೆ, ಆಲೋಚನೆಯನ್ನು ಸ್ಪಷ್ಟಪಡಿಸುತ್ತದೆ. ಇವರ ಈ ನಿಲುವು ಅವರ ಕಾರ್ಮಿಕ ಪರ ಕಾಳಜಿ, ಆಸಕ್ತಿಗೆ ಉದಾಹರಣೆಯಾಗಿದೆ. ಕಾರ್ಮಿಕರಲ್ಲಿ ಹಕ್ಕನ್ನು ಪಡೆಯುವ ಪ್ರಜ್ಞೆಯನ್ನು ಹುಟ್ಟುಹಾಕಿ ಅವರಿಗೆ ಚೈತನ್ಯ ನೀಡಿದ್ದಾರೆ.

ದುಡಿಯುವ ವರ್ಗದವರ ಸರ್ವಾಧಿಕಾರವನ್ನು ಪ್ರತಿಪಾದಿಸುವ ಕಮ್ಯುನಿಸ್ಟ್‌ರು, ಜಾತಿ, ಧರ್ಮದಲ್ಲಿ ನಂಬಿಕೆ ಇಟ್ಟಿಲ್ಲ. ಮೊದಲ ಹಂತದ ಕಾರ್ಮಿಕ ಚಳವಳಿ ರೂವಾರಿ ಪಂಪಾಪತಿಯವರ ವ್ಯಕ್ತಿತ್ವ ವಿಶ್ಲೇಷಿಸುವಾಗ, ಅವರು ಅಂತರ್‌ಜಾತಿ ವಿವಾಹಗಳಿಗೆ ಕ್ರಮತೆಗೆದುಕೊಂಡಿಲ್ಲ ಎಂಬ ವಿಚಾರವನ್ನು ಗಮನಿಸಲಾಗಿದೆ. ಆ ಕೊರತೆಯನ್ನೇನಾದರೂ ಶ್ರೀ ಹೆಚ್.ಕೆ ರಾಮಚಂದ್ರಪ್ಪ ಅವರು ತುಂಬಿದ್ದಾರೆಯೇ? ಎಂದು ಗಮನಿಸಿದಾಗ ಶ್ರೀ ಹೆಚ್.ಕೆ ರಾಮಚಂದ್ರಪ್ಪ ಅವರ ವ್ಯಕ್ತಿಗತ ವಿವರದಲ್ಲಿ ಸಾಮೂಹಿಕ ವಿವಾಹಗಳ ಮಾಹಿತಿ ದೊರೆಯುತ್ತದೆ. ಅದರಂತೆ ನಾಯಕ ಜನಾಂಗದ ವಿದ್ಯಾರ್ಥಿ ನಿಲಯದ ಆಶ್ರಯದಲ್ಲಿ ೧೯೮೮ರಲ್ಲಿ ೩೬ ಜೊತೆ ವಿವಿಧ ಜಾತಿಗಳ ಸಾಮೂಹಿಕ ವಿವಾಹಗಳು, ೧೯೯೦ರಲ್ಲಿ ೪೯ ಜೋಡಿ ಸಾಮೂಹಿಕ ವಿವಾಹಗಳು, ೧೯೯೨ರಲ್ಲಿ ೧೧೪ ಜೋಡಿ ಮತ್ತು ೩ ಮುಸ್ಲಿಂ ಜನಾಂಗದ ಜೋಡಿ ವಿವಾಹಗಳು ನಡೆದಿರುತ್ತವೆ. ಆದರೆ ಜಾತಿಯಲ್ಲಿ ನಂಬಿಕೆ ಇಲ್ಲದ ಸಿದ್ಧಾಂತದ ಪಾಲಕರಾದ ಇವರು ಅಂತರ್‌ಜಾತಿವಿವಾಹ ನಡೆಸಿರುವುದಕ್ಕೆ ನಿದರ್ಶನಗಳಿಲ್ಲ. ಹೀಗೆ ಸೈದ್ಧಾಂತಿಕ ಹಿನ್ನೆಲೆಯಲ್ಲಿ ಮುನ್ನಡೆದಿದ್ದರೆ ಇವರ ವ್ಯಕ್ತಿತ್ವಕ್ಕೆ ಇನ್ನೂ ಹೆಚ್ಚಿನ ಗಟ್ಟಿತನ ದೊರಕುತ್ತಿತ್ತು. ಮೇಲಿನ ವಿವಾಹಗಳಲ್ಲೆಲ್ಲಾ ಸಮಾಧಾನದ ವಿಷಯವೊಂದಿದೆ. ಅದೇಂದರೆ ಕಾರ್ಮಿಕ ಸಂಘಟನೆಯಲ್ಲಿದ್ದು ಲಾವಣಿ ಹಾಡುಗಳಿಂದ ಚಳುವಳಿಯಲ್ಲಿ ಗಮನಸೆಳೆದಿದ್ದ ಕಾರ್ಮಿಕ ಲಾವಣಿ ಬುಡೇನ್‌ಸಾಬ್ ಅವರ ಮಕ್ಕಳ ವಿವಾಹ. ಚಳವಳಿ ಕಟ್ಟಲು ಕಾರ್ಮಿಕರನ್ನು ಲಾವಣಿ ಹಾಡುಗಳ ಮೂಲಕ ಜಾಗೃತಿಗೊಳಿಸುತ್ತಿದ್ದ ಲಾವಣಿ ಬುಡೇನ್‌ಸಾಬ್ ೦೬

ಮಕ್ಕಳ ಸಂಸಾರದವರು. ಇವರು ಆರ್ಥಿಕವಾಗಿ ತೀವ್ರತೊಂದರೆಯಲ್ಲಿರುವುದು ಕ್ಷೇತ್ರಕಾರ್ಯ ಸಂದರ್ಭದಲ್ಲಿ ದೃಢಪಡುತ್ತವೆ. ಹೀಗೆ ನಿಜವಾಗಿಯೂ ತೊಂದರೆಯಲ್ಲಿದ್ದ ಕಾರ್ಮಿಕ ಚಳವಳಿ ಮುಖಂಡರೊಬ್ಬರ ಮಕ್ಕಳು ಎಚ್.ಕೆ. ರಾಮಚಂದ್ರಪ್ಪನವರು ಸಂಘಟಿಸಿದ್ದ ಸಾಮೂಹಿಕ ವಿವಾಹದ ಪ್ರಯೋಜನ ಪಡೆದದ್ದು ಅರ್ಥಪೂರ್ಣವಾಗಿದೆ.

ಇವರು ೧೯೭೯ ರಿಂದ ದಾವಣಗೆರೆ ತಾಲೂಕು ನಾಯಕ ವಿದ್ಯಾರ್ಥಿ ನಿಲಯದ ಅಧ್ಯಕ್ಷರಾಗಿ ಮುಂದುವರೆದುಕೊಂಡು ಬಂದಿದ್ದಾರೆ.[೪೦] ಭಾರತೀಯ ಕಮ್ಯೂನಿಸ್ಟ್ ಪಕ್ಷದ ಸಕ್ರಿಯ ಕಾರ್ಯಕರ್ತರಾದ ಇವರು ಈ ವಿಚಾರದಲ್ಲಿ ಸೈದ್ಧಾಂತಿಕವಾಗಿ ಎಡವಿದ್ದಾರೆ ಎನ್ನಿಸುತ್ತದೆ. ಮೊದಲ ಹಂತದ ನಾಯಕರಾದ ಪಂಪಾಪತಿಯವರೂ ಅನೇಕ ಸಂದರ್ಭಗಳಲ್ಲಿ ಸೈದ್ಧಾಂತಿಕವಾಗಿ ಹೊಂದಾಣಿಕೆ ಮಾಡಿಕೊಂಡಿರುವಂತೆ ಇವರೂ ಸಹಾ ಮಾಡಿಕೊಂಡಿದ್ದಾರೆ. ಎಸ್.ಎಸ್.ಎಲ್.ಸಿ ವರೆಗಿನ ಶಿಕ್ಷಣ ಪಡೆದಿದ್ದ ಇವರು ದಿನಚರಿ ಬರೆಯುವ ಹವ್ಯಾಸ ರೂಢಿಸಿಕೊಂಡಿದ್ದು ಕಾರ್ಮಿಕ ಚಳವಳಿಯ ವಿವಿಧ ಮಜಲುಗಳನ್ನು ಗಮನಿಸಲು ಒಂದು ಮುಖ್ಯ ಪ್ರಾಥಮಿಕ ಆಕರವಾಗಿದೆ.

'ಪ್ರತಿಫಲಾಪೇಕ್ಷೆ ಇಲ್ಲದ ಸೇವೆ' ನಿಜವಾದ ಸೇವೆಯಾಗಿರುತ್ತದೆ. ನಾಯಕ/ಮುಖಂಡ ಎನಿಸಿಕೊಂಡವನು ತನ್ನನ್ನು ನಂಬಿದ ಸಮುದಾಯಕ್ಕೆ ದ್ರೋಹ ಬಗೆದರೆ ತಪ್ಪಾಗುತ್ತದೆ. ಕ್ಷೇತ್ರಕಾರ್ಯ ಸಂದರ್ಭದಲ್ಲಿ ಕಾರ್ಮಿಕರು, ಶ್ರೀ ಹೆಚ್.ಕೆ. ರಾಮಚಂದ್ರಪ್ಪ ಅವರ ವ್ಯಕ್ತಿತ್ವನ್ನು ಆರ್ಥಿಕ ಹಿನ್ನಲೆಯಲ್ಲಿ ವಿಮರ್ಶಿಸಲು ಯತ್ನಿಸುತ್ತಾರೆ. ಅವರು ಒಳ್ಳೆ ಮನೆಕಟ್ಟಿಕೊಂಡಿದ್ದಾರೆ. ನಮಗಿಂತ ಆರ್ಥಿಕವಾಗಿ ಉತ್ತಮವಾಗಿದ್ದಾರೆ. ನಮ್ಮಂತೆಯೇ ಕಾರ್ಮಿಕರಾಗಿದ್ದವರಿಗೆ ಅದು ಹೇಗೆ ಸಾಧ್ಯ? ಎಷ್ಟು ಸಮಂಜಸ ಎಂಬುದು ಅವರ ಪ್ರಶ್ನೆಯಾಗಿದೆ. ಶ್ರೀ ಹೆಚ್.ಕೆ. ರಾಮಚಂದ್ರಪ್ಪ ಅವರನ್ನು ಈ ಸಂಬಂಧ ಪ್ರಶ್ನಿಸಿದಾಗ ಅಭಿಪ್ರಾಯಪಟ್ಟಂತೆ ಸಂಘಟನೆಯಲ್ಲಿ ತೊಡಗಿಸಿಕೊಂಡಿದ್ದರಿಂದ ಉದ್ಯೋಗ ಕಳೆದುಕೊಂಡೆನು. ಜೀವನ ನಿರ್ವಹಣೆಗೆ ಸಣ್ಣಪುಟ್ಟ ವ್ಯಾಪಾರ ಮಾಡಿ ಮನೆಯೊಂದನ್ನು ಕಟ್ಟಿಕೊಂಡಿದ್ದೇನೆಯೇ ಹೊರತು ಆಸ್ತಿ ಮಾಡಿಕೊಂಡಿಲ್ಲ ಎನ್ನುತ್ತಾರೆ. ಮಾರ್ಕ್ಸ್‌ನೂ ಸಹ ಖಾಸಗಿ ಆಸ್ತಿ ಶೋಷಣೆಯ ಮೂಲವೆನ್ನುತ್ತಾನೆ. ಆದರೆ ಇವರು ಜೀವನಾವಶ್ಯಕವಾದ ಮನೆ ಮಾಡಿಕೊಂಡಿರುವುದನ್ನು ಆಸ್ತಿ ಎನ್ನುವುದು ಸಮಂಜಸವಲ್ಲ. ಕಾರ್ಮಿಕ ಮುಖಂಡರೊಬ್ಬರ ಹೆಸರಿನಲ್ಲಿ ದಾವಣಗೆರೆ ನಗರದ ನಿಟ್ಟುವಳ್ಳಿ ಬಡಾವಣೆಯಲ್ಲಿ ಶ್ರೀ ಹೆಚ್.ಕೆ. ರಾಮಚಂದ್ರಪ್ಪ ಕಾರ್ನರ್ ಎಂಬ ವೃತ್ತವಿರುವುದು ಗಮನಾರ್ಹ ವಿಷಯವಾಗಿದೆ. ಅವರ ವ್ಯಕ್ತಿತ್ವದಲ್ಲಿ ಧೈರ್ಯ, ದಿಟ್ಟತನವಿರುವುದು ಅವರ ಚಳವಳಿಗಳ ಯಶಸ್ಸಿಗೆ ಶಕ್ತಿಯಾಗಿತ್ತು. ಶ್ರೀ ಹೆಚ್.ಕೆ. ರಾಮಚಂದ್ರಪ್ಪರವರು ಕಾರ್ಮಿಕ ವರ್ಗದಲ್ಲಿ ಅಲ್ಪಸ್ವಲ್ಪ ಶಿಕ್ಷಣ ಪಡೆದು, ಹಾಗೆಯೇ ಗಿರಣಿಯ ಪ್ರಾಯೋಗಿಕ ಅನುಭವ ಪಡೆದು, ಪ್ರಜ್ಞಾವಂತರಾಗಿ ಚಳವಳಿಯನ್ನು ಬೆಳೆಸಿದವರು. ಇವರ ಕಾಲಾವಧಿಯಲ್ಲೇ ಇಷ್ಟೆಲ್ಲಾ ಹೋರಾಟ, ತ್ಯಾಗ ಮಾಡಿ ಕಟ್ಟಿದ ಚಳವಳಿ ಇಳಿಮುಖವಾಗಿ ಗಿರಣಿಗಳು ಅವನತಿಯಾದ ನಂತರವೂ ಕೈಕಟ್ಟಿ ಕುಳಿತಿಲ್ಲ. ಅಂಗನವಾಡಿ ಕಾರ್ಯಕರ್ತೆಯರ, ಆಶ್ರಯ ಮನೆ ನಿವಾಸಿಗಳ ಸಮಸ್ಯೆಗಳಿಗೆ ಸ್ಪಂದಿಸಿ ಚಳವಳಿಯನ್ನು ದಾವಣಗೆರೆ ಹಾಗೂ ಸುತ್ತಮುತ್ತಲಿನ ಪರಿಸರದಲ್ಲಿ ಜೀವಂತವಾಗಿ ಉಳಿಸಿಕೊಂಡಿದ್ದಾರೆ.

ಶ್ರೀ. ಎಂ.ಜಿ. ತಿಪ್ಪೇಸ್ವಾಮಿ

ಇವರು ಬಾಲಕಾರ್ಮಿಕನಾಗಿ ಗಣೇಶ ಹತ್ತಿಗಿರಣಿಯಲ್ಲಿ ಕೆಲಸಕ್ಕೆ ಸೇರಿ, ಶೋಷಣೆಗೊಳಗಾಗಿದ್ದ ಕಾರ್ಮಿಕರನ್ನು ಜಾಗೃತರಾಗುವಂತೆ ಸಂಘಟನೆ ಕಟ್ಟಿ, ಚಳವಳಿಗೆ ಪುಷ್ಟಿ ನೀಡಿದ ಮತ್ತೊಬ್ಬ ಮುಖಂಡರಾಗಿದ್ದಾರೆ. ಸಂಘಟನೆಯಲ್ಲಿ ತೊಡಗಿಸಿಕೊಂಡು ೨ ಕೊಲೆ ಆಪಾದನೆಗೊಳಗಾಗಿ, ಕಾರ್ಮಿಕ ಚಳವಳಿಯಲ್ಲಿ ಅತಿ ಹೆಚ್ಚು ಕಾಲ ಕಂಬಿಗಳ ಹಿಂದೆ ಬಂಧಿಯಾಗಿದ್ದ ಇವರು ವ್ಯಕ್ತಿತ್ವ ರೂಪಿಸುವ ಅನುಭವಿ ಶಿಲ್ಪಿಗಳ ಅಡಿಯಲ್ಲಿ ಬೆಳೆದವರು. ಅಂಬೇಡ್ಕರ್ ಶೋಷಣೆಗೊಳಗಾಗಿದ್ದ ಸಮಾಜದಲ್ಲಿ ಜನ್ಮವೆತ್ತಿ, ಶೋಷಣೆ ವಿರುದ್ಧ ಹೋರಾಡಿದರೆ, ತಿಪ್ಪೇಸ್ವಾಮಿಯವರಂತಹ ಹಲವು ಕಾರ್ಮಿಕ ಮುಖಂಡರು, ಕಾರ್ಮಿಕರ ಮೇಲಿನ ಕ್ರೌರ್ಯಗಳ ವಿರುದ್ಧ ಹೋರಾಟಕ್ಕೆ ಧುಮುಕಿದರು. ಕಾರ್ಮಿಕನಾಗಿ, ಕಮ್ಯೂನಿಸ್ಟ್ ಪಕ್ಷದ ವತಿಯಿಂದ ನಗರಸಭೆಯ ಸದಸ್ಯರಾಗಿ, ನಂತರದ ದಿನಗಳಲ್ಲಿ ಜನತಾದಳ ಪಕ್ಷ ಸೇರಿಕೊಂಡರು.

ತಿಪ್ಪೇಸ್ವಾಮಿಯುವರು ದಾವಣಗೆರೆ ಗಣೇಶ ಹತ್ತಿಗಿರಣಿಯಲ್ಲಿ ಬಾಲಕಾರ್ಮಿಕನಾಗಿ ಕೆಲಸಕ್ಕೆ ಸೇರಿಕೊಂಡರು. ಇವರ ತಂದೆ ಗುರುಸಿದ್ದಪ್ಪನವರು ಬಿಜಾಪುರ ಜಿಲ್ಲೆಯಿಂದ ದಾವಣಗೆರೆ ನಗರಕ್ಕೆ ಬಂದು ನೆಲಸಿ, ಸಣ್ಣ ಪ್ರಮಾಣದಲ್ಲಿ ಶೇಂಗಾ ವ್ಯಾಪಾರ ಮಾಡುತ್ತಿದ್ದರು. ಚಿಕ್ಕವಯಸ್ಸಿನಲ್ಲಿ ತಂದೆಯನ್ನು ಕಳೆದುಕೊಂಡು ತಾಯಿಯ ಪೋಷಣೆಯಲ್ಲಿ ಬೆಳೆದ ಇವರಿಗೆ ಸಂಸಾರ ನಿರ್ವಹಣೆ ಕಠಿಣವಾಯಿತು. ಈ ಸಂದಿಗ್ಧತೆ ಅವರ ಆನೇ ತರಗತಿಯ ಶಿಕ್ಷಣವನ್ನು ನಿಲ್ಲಿಸುವಂತೆ ಮಾಡಿತು.[೪೧] ಬಾಲಕರ ಬಗ್ಗೆ ಕವಿಯ ಕಲ್ಪನೆಯೊಂದನ್ನು ಈ ಸಂದರ್ಭದಲ್ಲಿ ಉದಾಹರಿಸುವುದು ಸೂಕ್ತವೆನಿಸುತ್ತದೆ. “ಅಳುವ ಕಂದನ ತುಟಿ ಹವಳದ ಕುಡಿಯಂಗ, ಕುಡಿ ಹುಬ್ಬು ಬೇವಿನೆಸಳಂಗ, ಕಣ್ಣೋಟ ಶಿವನ ಕೈ ಅಲುಗು ಹೊಳೆದಂಗ”[೪೨], ಅಳುವ ಕಂದನ ಕಲ್ಪನೆಯಲ್ಲಿ ಕವಿಯು ಸುಂದರವಾಗಿ ವರ್ಣಿಸಿರುವಂತೆ ಆಟ, ಪಾಠಗಳಲ್ಲಿ ನಲಿಯಬೇಕಾದ ಅದೆಷ್ಟೋ ಮಕ್ಕಳು ಬಡತನದಿಂದ ಅವುಗಳ ಅನುಭವಗಳಿಂದ ವಂಚಿತರಾಗುತ್ತಾರೆ. ಅಂಥವರಲ್ಲಿ ಶ್ರೀ ತಿಪ್ಪೇಸ್ವಾಮಿಯವರೂ ಒಬ್ಬರು.

ಬಾಲಕಾರ್ಮಿಕನಾಗಿ ಗಿರಣಿ ಸೇರ್ಪಡೆಯಾದ ಇವರು ಕ್ರಮೇಣ ಅಲ್ಲಿನ ಶೋಷಣೆಗಳತ್ತ ಗಮನಹರಿಸಿದರು. ಗಿರಣಿ ಮಾಲೀಕರು ಪ್ರಾವಿಡೆಂಟ್ ಫಂಡ್ (ಪಿ.ಎಫ್.) ಇ.ಎಸ್.ಐ ಆಸ್ಪತ್ರೆ ರಜಾ ಸೌಲಭ್ಯಗಳನ್ನು ಕಾರ್ಮಿಕರಿಗೆ ನೀಡದ ವಿರುದ್ಧ ಧ್ವನಿ ಎತ್ತಲಾರಂಭಿಸಿದರು. ಚಂದ್ರೋದಯ ಗಿರಣಿಯಲ್ಲಿ ಶ್ರೀ ಹೆಚ್.ಕೆ. ರಾಮಚಂದ್ರಪ್ಪ ಅವರಂತೆಯೇ, ಗಣೇಶ ಗಿರಣಿಯಲ್ಲೂ ಇಂಟಕ್ ಸಂಘದಿಂದ ಕಾರ್ಮಿಕರನ್ನು ಹೊರ ತಂದು ಅಖಿಲ ಭಾರತೀಯ ಟ್ರೇಡ್ ಯೂನಿಯನ್ ಕಾಂಗ್ರೆಸ್ (ಎ.ಐ.ಟಿ.ಯು.ಸಿ) ಸಂಘಟನೆ ಕಟ್ಟಿ ಆ ಸಂಘಟನೆಗೆ ಇವರೇ ಕಾರ್ಯದರ್ಶಿಯಾದರು. ಇವರಿಗೆ ಶ್ರೀ ಪಂಪಾಪತಿ, ಶ್ರೀ ಎಂ.ಸಿ. ನರಸಿಂಹನ್ ಅವರಂತಹ ಗುಣಾತ್ಮಕ ನಾಯಕರ ಮಾರ್ಗದರ್ಶನವಾಗುತ್ತಿತ್ತು. ಇದೇ ಸಂದರ್ಭದಲ್ಲಿ ೧೯೬೪ ಮಾರ್ಚ್ ೧೦ರಂದು ರಾತ್ರಿ ಪಾಳೆ ಮುಗಿಸಿಕೊಂಡು ಮನೆಗೆ ತೆರಳುತ್ತಿದ್ದ ಕಾರ್ಮಿಕರ ಮೇಲೆ ದಾಳಿ ನಡೆಯಿತು. ಆಗ ಪರಸ್ಪರ ರಕ್ಷಣೆಗಾಗಿ ಹೋರಾಟ ನಡೆದು ಗೂಂಡಾ ಮುಖಂಡ ‘ಹೆಗ್ಗಪ್ಪ’ ಎಂಬುವವನು ಸತ್ತು ಬಿದ್ದನು.[೪೩] ಈ ಘಟನೆಯಲ್ಲಿ ಶ್ರೀ ಎಂ.ಜಿ. ತಿಪ್ಪೇಸ್ವಾಮಿಯವರು ಕೊಲೆ ಆಪಾದನೆಗೊಳಗಾಗಿ ೧೦ ವರ್ಷ ಜೈಲು ಶಿಕ್ಷೆಗೊಳಗಾದರು.

ಸಂಘಟನೆಯಲ್ಲಿ ತೊಡಗಿಸಿಕೊಂಡ ಬಹುತೇಕ ಮುಖಂಡರು ಈ ರೀತಿ ಶಿಕ್ಷೆ ಅನುಭವಿಸಿದ್ದು ದಾವಣಗೆರೆ ಹತ್ತಿ ಗಿರಣಿ ಕಾರ್ಮಿಕ ಚಳವಳಿಯ ಮುಖ್ಯ ವಿಷಯ. ಇದರಿಂದ ಸಂಘಟನೆಯ ಮೇಲೆ ದುಷ್ಪರಿಣಾಮ ಉಂಟಾಯಿತು. ಕಾರ್ಮಿಕರು ಭಯಭೀತರಾಗಲು ಇಂಥ ಸಂದರ್ಭಗಳು ಅವಕಾಶ ಕಲ್ಪಿಸಿದವು. ಆದರೂ ಇಲ್ಲಿನ ಮುಖಂಡರು ಚಳವಳಿಗೆ ವಿದಾಯ ಹೇಳದೆ ಮುಂದುವರಿಸಿದ್ದೇ ಮುಖ್ಯಾಂಶ. ಜೈಲಿನಲ್ಲಿದ್ದಾಗ ಇವರ ಸನ್ನಡತೆಯನ್ನು ಗಮನಿಸಿ ೧೦ ವರ್ಷದ ಶಿಕ್ಷೆಯನ್ನು ೭ ವರ್ಷಕ್ಕಿಳಿಸಿ, ಜುಲೈ ೧೪, ೧೯೭೨ರಲ್ಲಿ ಬಿಡುಗಡೆಯಾದರು." ಗಡಸು ಧ್ವನಿ, ದೃಢಕಾಯರಾದ ಇವರು ಬಿಡುಗಡೆಗೊಂಡಿದ್ದು ಚಳುವಳಿಕಾರರಿಗೆ ಅನುಕೂಲಕರವೇ ಆಗಿತ್ತು. ಸಂಘಟನೆ ಬಲಗೊಳಿಸಲು ಪ್ರೇರಕ ಶಕ್ತಿಯಾಗಿತ್ತು.

ಆದರೆ ಇವರ ಬಿಡುಗಡೆಯಾದ ವರ್ಷವೇ ದಾವಣಗೆರೆ ಹತ್ತಿ ಗಿರಣಿ (ಡಿ.ಸಿ.ಎಂ.) ವ್ಯವಸ್ಥಾಪಕರಾದ ಶ್ರೀ ಬಿ.ಪಿ. ಶೆಟ್ಟಿ ಅವರ (೦೩-೮-೧೯೭೨) ಕೊಲೆಯಾಯಿತು. ಈ ಕೊಲೆ ಮೊಕದ್ದಮೆಯಲ್ಲಿ ಶ್ರೀ. ಹೆಚ್.ಕೆ. ರಾಮಚಂದ್ರಪ್ಪ ಅವರೊಂದಿಗೆ ಪುನಃ ಶ್ರೀ. ಎಂ.ಜಿ. ತಿಪ್ಪೇಸ್ವಾಮಿಯವರ ಹೆಸರು ಸೇರ್ಪಡೆಯಾಯಿತು. ಹೆಗ್ಗಪ್ಪನ ಕೊಲೆ ಕೇಸಿನಿಂದ ಶ್ರೀ ತಿಪ್ಪೇಸ್ವಾಮಿಯವರು ಬಿಡುಗಡೆಗೊಳ್ಳುವಾಗ ಮುಂದೆ ಯಾವುದೇ ಆಪಾದನೆಯಲ್ಲೂ ಸೇರ್ಪಡೆಯಾಗಬಾರದೆಂದು ನಿರ್ಬಂಧ ಹಾಕಲಾಗಿತ್ತು. ಆಪಾದಿತರ ಪ್ರಕಾರ ಈ ನಿರ್ಬಂಧ ತಿಳಿದ ಮಾಲೀಕರು ನನಗೆ ಪರಿಚಯವಿಲ್ಲದ, ನನ್ನ ಪಾತ್ರವಿಲ್ಲದ ಈ ಕೇಸಿನಲ್ಲಿ ಸೇರಿಸಿದರು ಎಂಬ ಆರೋಪವಿದೆ. ಆದರೆ ಇಲ್ಲೂ ಸಹ ನ್ಯಾಯಾಲಯ ಇವರನ್ನು ಆರೋಪಿ ಎಂದು ತೀರ್ಮಾನಿಸಿ ಪುನಃ ಜೈಲುಶಿಕ್ಷೆ ವಿಧಿಸಿತು. ಕಾರ್ಮಿಕರ ಧ್ವನಿಯೊಂದು ಜೈಲಿನ ಆವರಣ ತಲುಪಿತು. ಆದರೂ ನಗರದಲ್ಲಿ ಕಾರ್ಮಿಕ ಚಳವಳಿ ಹಿನ್ನಡೆ ಕಾಣದೆ ಮುಂದೆ ಸಾಗಿದ್ದು ಗಮನಾರ್ಹವಾದ ಘಟನೆ.

ನಿಯಮಬದ್ಧವಾಗಿ ಸಿಗಬೇಕಾದ ಸವಲತ್ತುಗಳನ್ನು ಕಾರ್ಮಿಕರಿಗೆ ಕೊಡಿಸಲು ತ್ಯಾಗಮಾಡಿದ ಇವರನ್ನು ಕಾರ್ಮಿಕ ವರ್ಗ ಸ್ಮರಿಸುತ್ತಿದೆ. ಕಾರ್ಮಿಕ ವರ್ಗದ ಏಳಿಗೆಗೆ ಧ್ವನಿಯಾಗಿ ಹೋರಾಡಿದ ಇವರು ಬಹುಕಾಲ ಜೈಲುವಾಸಿಯಾಗಿಯೇ ಇದ್ದರೂ, ನಗರಸಭೆಯ ಸದಸ್ಯರಾಗಿ ಆಯ್ಕೆಗೊಂಡು ಕಾರ್ಮಿಕರು ಹೆಚ್ಚು ವಾಸಿಸುವ ದಾವಣಗೆರೆ ನಗರದ ಕೆ.ಟಿ. ಜಂಬಣ್ಣ ನಗರ, ಶ್ರೀ. ಸುರೇಶ್, ಶ್ರೀ. ಶೇಖರಪ್ಪ ನಗರಗಳಲ್ಲಿ ಕುಡಿಯುವ ನೀರು, ಬೀದಿ ದೀಪದ ಸೌಲಭ್ಯಗಳನ್ನು ಒದಗಿಸಲು ಶ್ರಮಿಸಿದ್ದಾರೆ. ಆದರೆ ಚಳವಳಿ ಮಹತ್ವ ತಿಳಿದುಕೊಳ್ಳುವ ಕಾಲಕ್ಕೆ ತನ್ನೆಲ್ಲಾ ಏಳಿಗೆ, ದುರಂತ, ಶಿಕ್ಷೆಗಳಿಗೆ ಕಾರಣವಾದ ಭಾರತೀಯ ಕಮ್ಯುನಿಸ್ಟ್ (ಸಿ.ಪಿ.ಐ.) ಪಕ್ಷ ತೊರೆದು ಜನತಾದಳ ಸೇರಿಕೊಂಡು ಮುನ್ನಡೆದಿದ್ದಾರೆ.

ಶ್ರೀಮತಿ ಜಾಹಿರಾಬಿ

ದಾವಣಗೆರೆ ನಗರದ ಹತ್ತಿಗಿರಣಿಗಳಲ್ಲಿ ಮಹಿಳಾ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದರು. ಆರಂಭದಲ್ಲಿ ಬಹುತೇಕ ಗಿರಣಿಗಳಲ್ಲಿ ಅವರಿಗೆ ಕಾನೂನುಬದ್ಧ ಸೌಲಭ್ಯಗಳು ದೊರೆಯಲಿಲ್ಲ. ಅಂಥ ಸಂದರ್ಭದಲ್ಲಿ ಮಹಿಳಾ ಕಾರ್ಮಿಕರ ಪ್ರತಿನಿಧಿಯಾಗಿ ಸಂಘಟನೆಗೆ ರೂಪ ನೀಡಿದ ಮಹಿಳಾ ಕಾರ್ಮಿಕರಾದ ಶ್ರೀಮತಿ ಜಾಹಿರಾಬಿಯವರು ಧೈರ್ಯವಂತ ಅಕ್ಷರಸ್ಥ ಮಹಿಳೆ. ಮಹಿಳೆಯರನ್ನು ಸಂಘಟಿಸಿ ತಮಗಾಗುವ ಅನ್ಯಾಯಗಳನ್ನು ಪ್ರತಿಭಟಿಸುವಂತೆ ಪ್ರೇರೇಪಿಸಲು ಮುಂದಾದ ಜಾಹಿರಾಬಿಯವರಿಗೆ ಧ್ಯೇಯನಿಷ್ಠೆ ನೇತಾರರಾದ ಶ್ರೀ. ಪಂಪಾಪತಿಯವರ ಮಾರ್ಗದರ್ಶನವಿತ್ತು.

ಆರ್ಥಿಕವಾಗಿ ತೊಂದರೆಯಲ್ಲಿರುವ ಇವರು ದಾವಣಗೆರೆ ಹತ್ತಿಗಿರಣಿಯಲ್ಲಿ (ಡಿ.ಸಿ.ಎಂ) ಕಾರ್ಮಿಕರಾಗಿದ್ದುಕೊಂಡು ಕಾರ್ಮಿಕರನ್ನು ಸಂಘಟಿಸಲು ಮುನ್ನುಗ್ಗಿ ಸಹಾಯಮಾಡಿ, ಸಭೆ ಸಮಾರಂಭಗಳಲ್ಲಿ ಧೈರ್ಯದಿಂದ ಮಾತನಾಡುತ್ತಿದ್ದರು. ಕಾರ್ಮಿಕ ಮುಖಂಡರು ಜೈಲುಶಿಕ್ಷೆಗೊಳಗಾದಾಗ ಅವರ ಕುಟುಂಬ ನಿರ್ವಹಣೆಗೆ ಸಹಾಯ ನೀಡಿ ಕಾರ್ಮಿಕ ಚಳುವಳಿಗೆ ರೂಪ ನೀಡಿದ್ದಾರೆ. ನಗರಸಭೆಯ ಸದಸ್ಯರಾಗಿ, ಮುಚ್ಚಿದ ಗಿರಣಿಗಳ ತೆರವಿಗಾಗಿ ಹೋರಾಡಿ ಜೈಲುಶಿಕ್ಷೆ ಅನುಭವಿಸಿ, ಕಾರ್ಮಿಕ ವರ್ಗದಲ್ಲಿ ತಮ್ಮ ಹೆಸರನ್ನು ಉಳಿಸಿಕೊಂಡಿದ್ದಾರೆ.

ದಾವಣಗೆರೆ ಹತ್ತಿಗಿರಣಿಯಲ್ಲಿ (ಡಿ.ಸಿ.ಎಂ) ೧೯೫೨ರಲ್ಲಿ ಮೊದಲು ಸ್ವಚ್ಛತಾ ಕೆಲಸಕ್ಕೂ, ನಂತರ ರೀಲಿಂಗ್ ವಿಭಾಗಕ್ಕೂ ಸೇರಿಕೊಂಡರು. ಸಂಘಟಿಸಲು ಬಹಳ ಮಂದಿ ಆಸಕ್ತಿವಹಿಸುತ್ತಿದ್ದ ಕಾಲವಲ್ಲದ ಸಂದರ್ಭದಲ್ಲಿ ಮಹಿಳಾ ಕಾರ್ಮಿಕರನ್ನು ಸಂಘಟಿಸಲು ಮುಂದಾದರು. ಇವರು ಸಂಘಟನೆಯತ್ತ ತೆರಳಲು ಪ್ರೇರಣೆ ನೀಡಿದ್ದು ಅವರ ಕಾರ್ಯಪರಿಸ್ಥಿತಿಗಳು, ಹಾಗೆಯೇ ಕಾರ್ಮಿಕರನ್ನು ಕೆಲಸದಿಂದ ತೆಗೆಯುತ್ತಿದ್ದ ಸಂದರ್ಭಗಳು. ದಾವಣಗೆರೆ ಹತ್ತಿ ಗಿರಣಿ(ಡಿ.ಸಿ.ಎಂ)ಯಲ್ಲಿನ ರೀಲಿಂಗ್ ವಿಭಾಗದಲ್ಲಿ ೭೫ ಮಹಿಳಾ ಕಾರ್ಮಿಕರಿಗೆ ವೆಚ್ಚ ಕಡಿಮೆ ಮಾಡುವ ಹಿನ್ನೆಲೆಯಲ್ಲಿ ೧೯೬೬ರಲ್ಲಿ ಕೆಲಸದಿಂದ ವಜಾಮಾಡಲಾಯಿತು.

ಈ ತಂಡದಲ್ಲಿ ಜಾಹಿರಾಬಿಯವರೂ ಇದ್ದು ಬಡತನದಲ್ಲಿದ್ದ ಮಹಿಳಾ ಕಾರ್ಮಿಕರ ಪರ ಹೋರಾಟಕ್ಕೆ ಮುಂದಾಗುವಂತೆ ಪ್ರೇರೇಪಿಸಿತು. ವಜಾಗೊಂಡ ಕಾರ್ಮಿಕರು ಮಿಲ್ಲಿನ ಒಳನುಗ್ಗಿ ೪೨ ದಿನಗಳ ಕಾಲ ಒಳಗಿದ್ದುಕೊಂಡೇ ಮುಷ್ಕರ ನಡೆಸಿದರು.[೪೫] ಗಿರಣಿಗಳ ಅವನತಿಗೆ ಕಾರಣಗಳ ಚರ್ಚೆಯಲ್ಲಿ ಆಧುನಿಕ ಯಂತ್ರಬಳಸಲಿಲ್ಲ, ವೆಚ್ಚ ಕಡಿಮೆ ಮಾಡಲಿಲ್ಲ ಎಂಬ ಚರ್ಚೆ ಇದೆ. ಈ ಹಿನ್ನೆಲೆಯಲ್ಲಿ ಶ್ರೀಮತಿ ಜಾಹಿರಾಬಿಯವರ ಮುಖಂಡತ್ವದ ಮೇಲಿನ ಹೋರಾಟ ಎಷ್ಟು ಸೂಕ್ತ ಎಂಬುದು ಗಣನೆಗೆ ತೆಗೆದುಕೊಳ್ಳಬೇಕಾದ ವಿಷಯ. ಕಾರ್ಮಿಕರಾದರೋ ಬಡವರು. ತಮ್ಮ ಜೀವನ ನಿರ್ವಹಣೆಗೆ ಗಿರಣಿಗಳನ್ನೇ ನಂಬಿದ್ದವರು. ಅದಕ್ಕಾಗಿ ಮುಷ್ಕರ ಹೂಡಿದ್ದರಾದರೂ ಅಲ್ಲಿ ಸಂಪೂರ್ಣವಾಗಿ ವಿಫಲರಾದರು.

ಕಾರ್ಮಿಕರನ್ನು ಸಂಘಟಿಸುತ್ತಿದ್ದ ರಾಷ್ಟ್ರಮಟ್ಟದ ಮಹಿಳಾ ನಾಯಕಿಯವರನ್ನು ಗಮನಿಸಿದಾಗ ಅವರಲ್ಲಿ ಬಹುತೇಕರು ವಿದ್ಯಾವಂತರಾಗಿದ್ದಾರೆ. ಕಲ್ಕತ್ತೆಯ ಉಚ್ಛನ್ಯಾಯಲಯದ ಮೊದಲ ಮಹಿಳಾ ನ್ಯಾಯವಾದಿ ಸಕೀನಬೇಗಂ ಸುಶಿಕ್ಷಿತಳಾಗಿದ್ದು ಕಾರ್ಮಿಕರನ್ನು ಸಂಘಟಿಸುತ್ತಿದ್ದರು.[೪೬] ಆದರೆ ಜಾಹಿರಾಬಿಯವರು ಅನಕ್ಷರಸ್ಥೆಯಾಗಿದ್ದು, ಅನಕ್ಷರಸ್ಥ ಮಹಿಳಾ ಕಾರ್ಮಿಕರನ್ನು ಸಂಘಟಿಸಲು ಮುಂದಾದದ್ದು ಮುಖ್ಯಘಟ್ಟ. ಪೊಲೀಸರು ಚಳವಳಿ ನಿರತ ಕಾರ್ಮಿಕರ ಮೇಲೆ ಕ್ರಮಕೈಗೊಳ್ಳುವಾಗ ಪುರುಷರ ಮೇಲಿನಷ್ಟು ಸುಲಭವಾಗಿ ಮಹಿಳೆಯರ ಮೇಲೆ ಕ್ರಮ ಜರುಗಿಸಲಾಗುತ್ತಿರಲಿಲ್ಲ. ಆದ್ದರಿಂದ ಚಳವಳಿನಿರತ ಕಾರ್ಮಿಕರಿಗೆ ಮಹಿಳೆಯರ ಹಾಜರಾತಿ, ನಾಯಕತ್ವ ಅಗತ್ಯವೂ ಆಗಿತ್ತು. ಜೊತೆಗೆ ಜಾಹಿರಾಬಿಯವರು ತಾವು ಕಾರ್ಯ ನಿರ್ವಹಿಸುತ್ತಿದ್ದ ರೀಲಿಂಗ್ ವಿಭಾಗದಲ್ಲಿ ಮಾಲೀಕವರ್ಗದ ಕಣ್ಣು ತಪ್ಪಿಸಿ ಮಹಿಳೆಯರಿಂದ ಚಂದಾವಸೂಲಿ ಮಾಡಿ ಸಂಘಟನೆಗೆ ಶಕ್ತಿತಂದುಕೊಟ್ಟಿದ್ದು ಅವತ್ತಿನ ಸ್ಥಿತಿಯಲ್ಲಿ ದಿಟ್ಟಕ್ರಮವಾಗಿತ್ತು.

ದಾವಣಗೆರೆ ನಗರದ ಕಾರ್ಮಿಕ ಚಳವಳಿಯಲ್ಲಿನ ಮೊದಲ ಹಂತದ ಕಾರ್ಮಿಕ ಮುಖಂಡರು ಕೊಲೆ ಆಪಾದನೆ ಮೇಲೆ ಜೈಲಿಗೆ ತೆರಳಿದರು. ಆ ಸಂದರ್ಭದಲ್ಲಿ ಅವರನ್ನವಲಂಬಿಸಿದ್ದ ಕುಟುಂಬಗಳು ಅತಂತ್ರಸ್ಥಿತಿ ತಲುಪಿದವು. ಆಗ ಜಾಹಿರಾಬಿಯವರು ಮಾಡಿರುವ ಸಹಾಯ, ಶ್ರಮವನ್ನು ಮರೆಯುವಂತಿಲ್ಲ. ಅವರು ಹಳ್ಳಿಹಳ್ಳಿಗೆ ತೆರಳಿ ದಾನಿಗಳಿಂದ ದವಸ ಧಾನ್ಯ ಸಂಗ್ರಹಿಸಿ ಜೈಲುವಾಸಿಗಳ ಕುಟುಂಬ ಸಲಹಿದ್ದು ಚರಿತ್ರಾರ್ಹವಾದ ಘಟನೆ.[೪೭] ಇವರು ತಾವು ನಾಯಕರಾಗಿ ಬೆಳೆಯುತ್ತಿದ್ದ ಸಂದರ್ಭದಲ್ಲಿ ಕಿರ್ಲಮ್ಮ, ಗಂಗಮ್ಮ, ರತ್ನಮ್ಮ, ಪಕೀರಮ್ಮ ಮುಂತಾದ ಮಹಿಳಾ ಕಾರ್ಮಿಕರ ಸಹಕಾರ ಪಡೆದು ಚಳವಳಿಗಳಲ್ಲಿ ನಿರತರಾದರು. ಆದರೆ ಅವರಾರೂ ಇವರಂತೆ ಗುರಿತಿಸಬಹುದಾದ ನಾಯಕತ್ವ ಪಡೆಯಲಿಲ್ಲ. ಸಂಘಟನೆಯಲ್ಲಿ ನಿರತರಾಗಿದ್ದ ಜಾಹಿರಾಬಿಯವರ ದಾವಣಗೆರೆ ನಗರದ ಕೆ.ಟಿ. ಜಂಬಣ್ಣ ನಗರದ ೧೦ನೇ ಕ್ರಾಸ್‌ನಲ್ಲಿದ್ದ ಮನೆ ಬೆಂಕಿಗೆ ಆಹುತಿಯಾಯಿತು.[೪೮] ಆ ಸಂದರ್ಭದಲ್ಲಿ ಮಾಲೀಕರು ನಿಮಗೆ ಮನೆ ಕಟ್ಟಿಸಿಕೊಡುತ್ತೇವೆ ಎಂದರು. ಆದರೆ ಇದು ಆಮಿಷವಿರಬಹುದೆಂದು ಜಾಹಿರಾಬಿಯವರು ತಿರಸ್ಕರಿಸಿದರು.

ರೈತಪರ ಕಾಳಜಿ ಹೊಂದಿದ್ದ ಇವರು ನರಗುಂದ ರೈತ ಜಾಥಾ ಸಂದರ್ಭದಲ್ಲಿ ಕಾಲಲ್ಲಿ ರಕ್ತ ಸೂಸುತ್ತಿದ್ದರೂ ಲೆಕ್ಕಿಸದೆ ಬೆಂಗಳೂರಿಗೆ ಜಾಥಾ ನಡೆದರು. ನಗರದಲ್ಲಿ ಏರ್ಪಡಿಸುತ್ತಿದ್ದ ಕಾರ್ಮಿಕ ಸಮ್ಮೇಳನಗಳಲ್ಲಿ ಪಾಲ್ಗೊಂಡು[೪೯] ಆಕರ್ಷಕ ಮಾತುಗಳಿಂದ ಚಳವಳಿ ಕಟ್ಟಿದರು. ಸಂಘಟನೆಯಲ್ಲಿ ತೊಡಗಿಸಿಕೊಂಡವರಲ್ಲಿ ಬಹುತೇಕರು ಜೈಲುಶಿಕ್ಷೆ ಅನುಭವಿಸಿದರೆ ಇವರು ಮಾತ್ರ ಅದರಿಂದ ಹೊರಗುಳಿದರು. ಆದರೆ ದಾವಣಗೆರೆ ನಗರದ ಶಂಕರ್, ಚಿಗಟೇರಿ ಮುಂತಾದ ಗಿರಣಿಗಳು ಮುಚ್ಚಿದಾಗ ಸಂಘಟನೆ ೨೮-೧-೮೮ರಲ್ಲಿ ಗಿರಣಿ ತೆರವಿಗಾಗಿ ಜೈಲ್ ಭರೋ ಕಾರ್ಯಕ್ರಮ ಹಮ್ಮಿಕೊಂಡಿತು. ಈ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಒಂದು ತಿಂಗಳು ಬಳ್ಳಾರಿ ಜೈಲಿನಲ್ಲಿದ್ದರು.[೫೦]

ನಾಯಕರಾದವರು ಸ್ವಚ್ಛ ಹಸ್ತವನ್ನಿಟ್ಟುಕೊಂಡಿರಬೇಕು. ತನ್ನನ್ನು ನಂಬಿದವರನ್ನು ಅಲಕ್ಷಿಸಬಾರದು. ಜಾಹಿರಾಬಿಯವರು ಈ ಎರಡೂ ವಿಚಾರದಲ್ಲಿ ಜಾಣ್ಮೆಯಿಂದ ನಡೆದುಕೊಂಡಂತೆ ಕಂಡುಬರುತ್ತದೆ. ಈಗಲೂ ಅತೀವ ಕಡುಬಡತನದಲ್ಲಿರುವ ಇವರ ಜೀವನವೇ ಇದಕ್ಕೆ ಸಾಕ್ಷಿಯಾಗಿದೆ. ನಗರ ಸಭೆಯ ಸದಸ್ಯೆಯಾಗಿದ್ದಾಗ ಬಹಳಷ್ಟು ಹಣಮಾಡಿಕೊಳ್ಳಬಹುದಿತ್ತು. ಆಮಿಷಕ್ಕೆ ಒಳಗಾಗದೆ ಸ್ವಚ್ಛ, ಸರಳ ನಾಯಕತ್ವ ನೀಡಿದ ಇಂತಹ ಮುಖಂಡರ ಅಗತ್ಯವಿದೆ. ಆದರೆ ಇವರೂ ಸಹ ತನ್ನ ಬೆಳವಣಿಗೆಗೆ ಕಾರಣವಾದ ಕಮ್ಯುನಿಸ್ಟ್ ಪಕ್ಷ ತೊರೆದು ಬೇರೆ ಪಕ್ಷ ಸೇರಿದ್ದು ಅವರ ವ್ಯಕ್ತಿತ್ವದ ಮುಖ್ಯಾಂಶ. ಇದು ಸೈದ್ಧಾಂತಿಕ ಹಿನ್ನೆಲೆಯಾದರೂ ದ್ರೋಹ ಬಗೆಯುವ ಕ್ರಮವಲ್ಲವೆನ್ನಬಹುದು.

ದಾವಣಗೆರೆ ನಗರದ ಹೊರಗಿನ ಕಾರ್ಮಿಕ ಮುಖಂಡರು

ದಾವಣಗೆರೆ ನಗರದಲ್ಲಿನ ಕಾರ್ಮಿಕ ಮುಖಂಡರಲ್ಲಿ 'ಸ್ಥಳೀಯ' ಮತ್ತು 'ಹೊರಗಿನ'ವರು ಎಂಬ ಎರಡು ವರ್ಗವನ್ನು ಕಾಣಬಹುದು. ಆಡಳಿತ ವರ್ಗದ ಕಿರುಕುಳದಿಂದ ಮುಕ್ತರಾಗಲು ಹೊರಗಿನ ನಾಯಕರು ಆಗಮಿಸಿದರು. ಅವರಲ್ಲಿ ಬೆಂಗಳೂರಿನ ಶ್ರೀ. ಎಂ.ಸಿ. ನರಸಿಂಹನ್, ಶ್ರೀ. ವಿ.ಆರ್. ಆನಂದತೀರ್ಥ, ಹರಿಹರದ ಶ್ರೀ. ಜೆ.ಎಂ. ಹನುಮಂತಪ್ಪ ಮುಖ್ಯರು. ಇವರು ಕಾನೂನು ಸಿದ್ಧಾಂತವನ್ನು ಬಲ್ಲವರಾಗಿದ್ದು ಕಾರ್ಮಿಕರ ಸಂಘಟನೆಯಲ್ಲಿ ತೊಡಗಿಸಿಕೊಂಡು ಇಲ್ಲಿನ ಕಾರ್ಮಿಕರಿಗೆ ಮಾರ್ಗದರ್ಶಕ ರಾಗಿದ್ದರು.

೧೯೨೬ರ ಟ್ರೇಡ್ ಯೂನಿಯನ್ ಆಕ್ಟ್‌ನಲ್ಲಿ, ಒಂದು ಸಂಘಟನೆಯಲ್ಲಿ ಕೈಗಾರಿಕೆಯ ನೌಕರರಲ್ಲದ ಹೊರಗಿನವರು ಮುಖಂಡರಾಗಲು ಅವಕಾಶ ಕಲ್ಪಿಸಲಾಗಿದೆ. ಅಲ್ಲಿ ಕೊನೆ ಪಕ್ಷ ೫೦%ರಷ್ಟು ಪದಾಧಿಕಾರಿಗಳು ಕೆಲಸದಲ್ಲಿರುವವರು, ಉಳಿದ ೫೦%ರಷ್ಟು ಪದಾಧಿಕಾರಿಗಳು ಹೊರಗಿನ ವಕೀಲರು, ರಾಜಕಾರಣಿಗಳು, ಸಾಮಾಜಿಕ ಕಾರ್ಯಕರ್ತರು ಮುಂತಾದವರಿರಬಹುದು ಎಂದು ತಿಳಿಸುತ್ತದೆ. ಈ ಹಿನ್ನಲೆಯಲ್ಲಿ ಹೊರಗಿನ ನಾಯಕರು ಹುಟ್ಟಿಕೊಂಡು ಹಲವರು ಉತ್ತಮ ಸೇವೆಯನ್ನೂ ಸಲ್ಲಿಸಿದ್ದಾರೆ. ಈ ನಾಯಕತ್ವದಲ್ಲಿ/ಮುಖಂಡತ್ವದಲ್ಲಿ ಹೊರಗಿನವರು ಒಳ್ಳೆಯವರೆ? ಒಳಗಿನವರು ಒಳ್ಳೆಯವರೆ? ಎಂಬ ಪ್ರಶ್ನೆ ಉದಯವಾಗುತ್ತದೆ. ಮಹಾತ್ಮಗಾಂಧಿಯವರ ಅಭಿಪ್ರಾಯದಲ್ಲಿ "ಎಲ್ಲ ಹೊರಗಿನವರೂ ಕೆಟ್ಟವರಲ್ಲ, ಎಲ್ಲ ಒಳಗಿನವರೂ ಒಳ್ಳೆಯವರಲ್ಲ"[೫೧] ಈ ಅಭಿಪ್ರಾಯದಿಂದ ಯಾವ ಮುಖಂಡನೂ ಸಮಗ್ರವಾಗಿ ಉತ್ತಮ ಎಂದು ಹೇಳಲು ಸಾಧ್ಯತೆಗಳಿಲ್ಲ. ನಾನು ಏನೋ ಕೆಲಸ ಮಾಡಿಕೊಡುತ್ತೇನೆಂದು ಅಧಿಕಾರಗಳಿಸಿದ ನಾಯಕರು/ಮುಖಂಡರಲ್ಲಿ ಅನೇಕರು ತಮ್ಮನ್ನು ನಂಬಿದವರತ್ತ ನಿರ್ಲಕ್ಷ ಭಾವನೆಯನ್ನು ಬೆಳಸಿಕೊಂಡಿದ್ದಕ್ಕೆ ನಿದರ್ಶನಗಳಿವೆ. ಆದರೆ ದಾವಣಗೆರೆ ನಗರದ ಹೊರಗಿನ ಮುಖಂಡರಲ್ಲಿ ತಮ್ಮನ್ನು ನಂಬಿದ್ದ ಕಾರ್ಮಿಕರನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದುದಕ್ಕೆ ನಿದರ್ಶನಗಳಿಲ್ಲ.

ಮೊಟ್ಟಮೊದಲಿಗೆ ರಾಜ್ಯಮಟ್ಟದ ಹಿರಿಯ ಮುಖಂಡರಾದ ಶ್ರೀ ಎಂ.ಸಿ. ನರಸಿಂಹನ್ ದಾವಣಗೆರೆ ಕಾರ್ಮಿಕರಿಗೆ ಬೆಂಗಳೂರಿನಿಂದ ಬಂದು ಹೊರಗಿನ ಮುಖಂಡರಾದರು. ಇವರು ದಾವಣಗೆರೆ ಕಾರ್ಮಿಕರ ಸಂಘಟನೆಯ ನಾಯಕರಾಗುವ ಮೊದಲೇ ನೆರೆಯ ಹರಿಹರದ ಕಿರ್ಲೋಸ್ಕರ್ ಕಾರ್ಖಾನೆಯಲ್ಲಿ ಸಂಘಟನೆ ಮಾಡಿ ತಮ್ಮ ಚಮತ್ಕಾರ ತೋರಿಸಿದರು.[೫೨] ಇವರನ್ನು ದಾವಣಗೆರೆ ಕಾರ್ಮಿಕರು ಆಹ್ವಾನಿಸಲಾಗಿ ಕಮ್ಯೂನಿಸ್ಟ್ ತತ್ವಗಳು ನಗರ ಕಾರ್ಮಿಕರನ್ನು ತಲುಪಲು ಸಾಧ್ಯವಾಯಿತು. ೧೯೪೦ರ ದಶಕದಿಂದ ೧೯೯೦ರ ದಶಕದವರೆಗೂ ಸೈದ್ಧಾಂತಿಕ ಸಲಹೆಗಾರರಾಗಿ, ಇಲ್ಲಿನ ಕಾರ್ಮಿಕರ ಒಡನಾಡಿಗಳಾಗಿ ಹೊರಗಿನ ಮುಖಂಡರಲ್ಲೇ ಉತ್ತಮ ಸ್ಥಾನ ಗಳಿಸಿದ್ದಾರೆ. ಚಳವಳಿಗಳು ತೀವ್ರ ಸ್ವರೂಪ ಪಡೆದುಕೊಂಡಿದ್ದಾಗ ಗುಣಮಟ್ಟದ ಸಲಹೆಗಳನ್ನು ನೀಡಿ, ಸಂಧಾನ ನಡೆಸಲು ಸಹಕರಿಸಿ ಕಾರ್ಮಿಕರ ಚಳವಳಿಗಳಲ್ಲಿ ಗಣ್ಯಸ್ಥಾನ ಪಡೆದಿದ್ದಾರೆ. ಸ್ಥಳೀಯ ನಾಯಕರಿಗೆ ಇದ್ದ ಕಾಯಿದೆ ಹಾಗೂ ಸೈದ್ಧಾಂತಿಕ ಕೊರತೆಗಳನ್ನು ನೀಗಿಸಲು ಸಹಕರಿಸಿದ್ದಾರೆ. ಶಂಕರ್‌ಗಿರಣಿ ಮುಚ್ಚಿ ೮೦೦ ಕಾರ್ಮಿಕರು ಕೆಲಸ ಕಳೆದುಕೊಂಡಾಗ, ಆಡಳಿತವರ್ಗ ಹೀಗೆ ನಡೆದುಕೊಂಡರೆ ನ್ಯಾಷನಲ್ ಟೆಕ್ಸ್‌ಟೈಲ್ ಕಾರ್ಪೂರೇಶನ್ (ಎನ್.ಟಿ.ಸಿ) ಆ ಗಿರಣಿಯನ್ನು ವಹಿಸಿಕೊಳ್ಳಲಿ ಎಂದರು.[೫೩] ಅಂದಿನ ಸಂದರ್ಭಕ್ಕೆ ಇದೊಂದು ಉತ್ತಮ ಸಲಹೆಯಾಗಿತ್ತು. ಇಂಥ ಅದೆಷ್ಟೋ ಸಲಹೆಗಳನ್ನು ನೀಡಿರುವ ಇವರ ಕಾರ್ಯಗಳಲ್ಲಿ ಇದೊಂದು ಉದಾಹರಣೆಯಾಗಿ ತಿಳಿಸಲು ಇಚ್ಛಿಸುತ್ತೇನೆ. ಹೊರಗಿನ ಮುಖಂಡರಿಗೆ ಮಾಲೀಕರದಾಗಲಿ, ಸರ್ಕಾರದ್ದಾಗಲಿ ಭಯ ಇರುವುದಿಲ್ಲ. ಅವರು ನಿರ್ಭಯವಾಗಿ, ಕಿರುಕುಳಗಳಿಂದ ಮುಕ್ತರಾಗಿ ಕಾರ್ಯನಿರ್ವಹಿಸಲು ಅವಕಾಶಗಳಿರುವುದರಿಂದ ಇದೊಂದು ಒಳ್ಳೆಯ ಅವಕಾಶವೆನ್ನಬಹುದು.

ದಾವಣಗೆರೆ ನಗರದ ಹತ್ತಿಗಿರಣಿ ಕಾರ್ಮಿಕರ ಚಳವಳಿಯಲ್ಲಿ ಶ್ರೀ. ಎಂ.ಸಿ. ನರಸಿಂಹನ್ ನಂತರದ ಸ್ಥಾನವನ್ನು ಶ್ರೀ. ವಿ.ಆರ್. ಆನಂದತೀರ್ಥ ಪಡೆದುಕೊಳ್ಳುತ್ತಾರೆ. ೧೯೭೦ರ ದಶಕದಲ್ಲಿ

ನಗರದಲ್ಲಿ ಸ್ಥಳೀಯ ಮುಖಂಡರು ಕೊಲೆ ಆಪಾದನೆ ಸಂಬಂಧ ಜೈಲುಶಿಕ್ಷೆ ಅನುಭವಿಸುವಾಗ ಸಂಘಟನೆಗೆ ಪರಿಚಯಿಸಲ್ಪಟ್ಟವರೇ ಶ್ರೀ. ವಿ.ಆರ್.ಆನಂದತೀರ್ಥ. ಬೆಂಗಳೂರಿನ ರಾಜಾಜಿನಗರದ 'ಗೆಸ್ಟ್‌ಕೀನ್ ವಿಲಿಯಮ್ಸ್ ಲಿಮಿಟೆಡ್' ಕಂಪನಿಯಲ್ಲಿ ೧೯೫೫ ರಿಂದ ೧೯೭೩ರವರೆಗೆ ತಿಂಗಳಿಗೆ ೭೦೦ ರೂ. ಗಿಂತಲೂ ಹೆಚ್ಚು ವೇತನದ ಸೂಪರ್‌ವೈಸರ್ ಆಗಿ ಶ್ರೀ. ವಿ.ಆರ್. ಆನಂದತೀರ್ಥ ಕಾರ್ಯ ನಿರ್ವಹಿಸುತ್ತಿದ್ದರು.[೬] ನಗರದ ಕಾರ್ಮಿಕರು ನಿರಂತರವಾಗಿ ಘರ್ಷಣೆ, ಜೈಲುಶಿಕ್ಷೆಗಳನ್ನು ಅನುಭವಿಸುತ್ತಿದ್ದಾಗ ಹೊರಗಿನವರ, ಅನುಭವಿಗಳ ಅಗತ್ಯ ಇತ್ತು. ಈ ಅಗತ್ಯವನ್ನು ಶ್ರೀ. ವಿ.ಆರ್. ಆನಂದತೀರ್ಥರು ತುಂಬಿದರು. ಕಾರ್ಮಿಕ ಮುಖಂಡರಲ್ಲಿ ಚೆನ್ನಾಗಿ ಓದಿಕೊಂಡಿರುವ, ಸದಾ ಹಸನ್ಮುಖಿಗಳೂ, ನಿಷ್ಠಾವಂತ ಕಾರ್ಯಕರ್ತರೂ ಆಗಿರುವ ಇವರ ಸೇವೆಯನ್ನು ಇಲ್ಲಿನ ಕಾರ್ಮಿಕರಷ್ಟೇ ಅಲ್ಲ, ಪ್ರಜ್ಞಾವಂತರು, ಪತ್ರಕರ್ತರೂ ಸಹ ಸ್ಮರಿಸುತ್ತಿದ್ದಾರೆ. ಸರಳ ವ್ಯಕ್ತಿತ್ವದ ಇವರು ಘರ್ಷಣೆಗಳ, ಭಯದ ವಾತಾವರಣದಲ್ಲಿ ಕಾರ್ಮಿಕರುಗಳು ಮುಳುಗಿದ್ದ ಸಂದರ್ಭದಲ್ಲಿ ಧೈರ್ಯದಿಂದ ಚಳವಳಿ ಮುನ್ನಡೆಸಿದರು. ಶಕ್ತಿಯಿಂದ ಗೆಲ್ಲುವ ಮನೋಭಾವಕ್ಕಿಂತ ಯುಕ್ತಿಯಿಂದ ಗೆಲ್ಲುವ ಮನೋಭಾವವನ್ನೇ ಹೆಚ್ಚಾಗಿ ರೂಢಿಸಿಕೊಂಡಿರುವ ಆನಂದತೀರ್ಥರು ಇಂದೂ ಸಹ ಅಳಿದುಳಿದಿರುವ ಕಾರ್ಮಿಕರಿಗೆ ಮಾರ್ಗದರ್ಶಕರಾಗಿ ಸ್ವಚ್ಛ ಸಹಕಾರ ನೀಡುತ್ತಿದ್ದಾರೆ.

ಹೊರಗಿನ ಮುಖಂಡರಲ್ಲಿ ಇತ್ತೀಚಿನ ಸಂದರ್ಭದಲ್ಲಿ ಕೊನೆಯವರೆನಿಸಿಕೊಂಡಿರುವವರು ಶ್ರೀ ಜೆ.ಎಂ. ಹನುಮಂತಪ್ಪನವರು. ಹಾಗೆಯೇ ಎಲ್ಲಾ ಕಾರ್ಮಿಕ ಮುಖಂಡರಿಗಿಂತಲೂ ಹೆಚ್ಚು ವಿದ್ಯಾರ್ಜನೆ ಮಾಡಿಕೊಂಡವರು. ಇವರು ಬಿ.ಎಡ್.ಪದವಿಯನ್ನು ನಂತರ ತತ್ವಶಾಸ್ತ್ರದಲ್ಲಿ ಎಂ.ಎ. ಪದವಿಯನ್ನೂ, ಪಡೆದು ಮಾರ್ಕ್ಸ್‌ನ ತತ್ವಗಳಿಗೆ ಮಾರುಹೋಗಿ ಕಾರ್ಮಿಕರ ಸಂಘಟನೆಗೆ ಮುಂದಾದರು. ಅವರು ಸರ್ಕಾರಿ ನೌಕರಿ ಬಯಸಿದ್ದರೆ ಅಂದಿನ ದಿನಗಳಲ್ಲಿ (೧೯೭೦ರ ದಶಕ) ಬಹಳಷ್ಟು ಅವಕಾಶಗಳಿದ್ದವು. ಆದರೂ ಅವರನ್ನು ಶೋಷಣೆಯ ವಿರುದ್ಧದ ಹೋರಾಟಗಳೇ ಆಕರ್ಷಿಸಿದವು. ಇವರಿಗೆ ಶ್ರೀ ಪಂಪಾಪತಿಯವರೇ ಕಾರ್ಮಿಕ ಶಿಕ್ಷಣದ ಗುರು. ಅವರ ಅನುಭವಗಳಡಿಯಲ್ಲಿ ಬೆಳೆದ ಇವರು ಕಾರ್ಮಿಕ ವರ್ಗಕ್ಕೆ ತಮ್ಮ ಕೈಲಾದ ಸೇವೆ ಸಲ್ಲಿಸುತ್ತಾ, ಅವನತಿಯಂತಹ ದುರಂತಗಳ ಸಂದರ್ಭದಲ್ಲೂ ಕಾರ್ಮಿಕರಿಗೆ ಮಾರ್ಗದರ್ಶನ ನೀಡುತ್ತಿದ್ದಾರೆ. ಗಿರಣಿಗಳ ಅವನತಿ ನಂತರ ಮುಖಂಡರೂ ನಿರುದ್ಯೋಗಿಗಳಾದಾಗ ದಿಟ್ಟತನದಿಂದ ಈ ಪರಿಸ್ಥಿತಿಯನ್ನು ಎದುರಿಸುತ್ತಾ ಸಾಗಿದ್ದಾರೆ.

ಕೊನೆಟಿಪ್ಪಣಿಗಳು

೧. ಆವರಗೆರೆ ಗ್ರಾಮದ ಸುರೇಶ್ ಶೇಖರಪ್ಪ ಸ್ಮಾರಕದಲ್ಲಿನ ಮಾಹಿತಿಯಿಂದ.

೨. ಬುಡೇನ್‌ಸಾಬ್ ಅವರ ಲಾವಣಿ ಹಾಡಿನಿಂದ ಪಡೆದ ಮಾಹಿತಿ.

೩. ಜನತಾವಾಣಿ ದಿನಪತ್ರಿಕೆ, ೧-೫-೧೯೭೬, ಪುಟ ೨

೪. ಡಾ. ಎಂ.ಜಿ. ಈಶ್ವರಪ್ಪ (ಸಂ.), ಶತಮಾನದ ದಾವಣಗೆರೆ. ೨೦೦೧, ಪುಟ ೭೦

೫. ಕೆ. ಹೆಚ್. ಗಂಗಪ್ಪ, ಕಾರ್ಮಿಕ ರತ್ನರ ಕೆಂಪುಕಥೆ, ೧೯೮೧, ಪುಟ ೧೧

೬. ಡಾ. ಎಂ.ಜಿ. ಈಶ್ವರಪ್ಪ (ಸಂ.), ಶತಮಾನದ ದಾವಣಗೆರೆ, ೨೦೦೧, ಪುಟ ೭೦

೭. ಆವರೆಗೆರೆ ಗ್ರಾಮದ ಸುರೇಶ್ ಶೇಖರಪ್ಪ ಸ್ಮಾರಕದಲ್ಲಿನ ಮಾಹಿತಿಯಿಂದ

೮. ಜನತಾವಾಣಿ ದಿನಪತ್ರಿಕೆ, ೧-೫-೧೯೭೬, ಪುಟ ೨

೯. ನಮ್ಮನ್ನಗಲಿದ ಸಂಗಾತಿಗಳಿಗೆ ನಮನ, ಯುಗಾಂತರ-ಸ್ಮರಣ ಸಂಚಿಕೆ, ಪ್ರಕಾಶಕರು ದ ರಿಸೆಪ್‌ಷನ್ ಕಮಿಟಿ, ೧೪ನೇ ರಾಜ್ಯ ಸಮ್ಮೇಳನ, ಕರ್ನಾಟಕ ಸ್ಟೇಟ್ ಕೌನ್ಸಿಲ್ ಆಫ್ ದಿ ಕಮ್ಯೂನಿಸ್ಟ್ ಪಾರ್ಟಿ ಆಫ್ ಇಂಡಿಯಾ-೧೯೮೯ ಪುಟ ೧೮

೧೦. ಬುಡೇನ್‌ಸಾಬ್ ಅವರ ಲಾವಣಿ ಹಾಡಿನಿಂದ ಪಡೆದ ಮಾಹಿತಿ

೧೧. ಕೆ.ಹೆಚ್. ಗಂಗಪ್ಪ, ಕಾರ್ಮಿಕ ರತ್ನರ ಕೆಂಪುಕಥೆ, ೧೯೮೧, ಪುಟ ೧೨

೧೨. ಡಾ. ಎಂ.ಜಿ. ಈಶ್ವರಪ್ಪ (ಸಂ.), ಶತಮಾನದ ದಾವಣಗೆರೆ, ೨೦೦೧, ಪುಟ ೭೦

೧೩. ಅದೇ

೧೪. ಕಾರ್ಮಿಕ ಇಲಾಖೆಯ ಪತ್ರ ಸಂಖ್ಯೆ ಸ.ಕಾ.ಆ.ದಾ: ಮೈ.ಸುಂ.ಕಾ: ವಿಶೇಷ ಸಂಚಿಕೆ ಕರ್ನಾಟಕ ಸರ್ಕಾರ, ಬಳ್ಳಾರಿ ವಿಭಾಗ ದಾವಣಗೆರೆ ೧೯೯೮-೯೯, ದಿ ೪-೬-೧೯೯೮

೧೫. ನಗರವಾಣಿ ದಿನಪತ್ರಿಕೆ, ದಾವಣಗೆರೆ, ಪುಟ.೪. ದಿ ೧.೮.೨೦೦೨

೧೬. ಅದೇ

೧೭. ಡಾ. ಎಂ.ಜಿ. ಈಶ್ವರಪ್ಪ (ಸಂ.), ಶತಮಾನದ ದಾವಣಗೆರೆ, ಪುಟ ೬೯. ೨೦೦೨

೧೮. ಬಿ. ಗಿರಿಜ, ದಾವಣಗೆರೆ ಇದು ನಮ್ಮ ಜಿಲ್ಲೆ, ಪುಟ ೧೦೪, ವರ್ಷ

೧೯. ಕೆಂಬಾವುಟ ಪತ್ರಿಕೆ, ಬೆಂಗಳೂರು, ಪುಟ ೨, ದಿ ೨೬-೮-೨೦೦೨

೨೦. ಎಸ್. ಚಂದ್ರಶೇಖರ್, ಅಂಬೇಡ್ಕರ್ ಮತ್ತು ಗಾಂಧಿ, ಪುಟ ೭೦, ೧೯೯೨

೨೧. ಅದೇ, ಪುಟ ೭೧

೨೨. ಕೆಂಬಾವುಟ ಪತ್ರಿಕೆ, ಬೆಂಗಳೂರು, ಪುಟ ೬, ೨೬-೮-೨೦೦೨

೨೩. ವೀರಭದ್ರ ಚನ್ನಮಲ್ಲ ಸ್ವಾಮೀಜಿ (ಸಂ), ಹೋರಾಟ ಹೆಜ್ಜೆಗಳು ಪುಟ ೨೦, ೨೦೦೧

೨೪. ಜನತಾವಾಣಿ ದಿನಪತ್ರಿಕೆ, ದಾವಣಗೆರೆ ಪುಟ ೧, ದಿ ೧೮-೮-೧೯೭೭

೨೫. ಕರ್ನಾಟಕ ವಿಧಾನಸಭಾ ನಡಾವಳಿ, ೬ನೇ ಅಸೆಂಬ್ಲಿ, ೩ನೇ ಸೆಷನ್, ಪುಟ ೫೦೧, ದಿ-೧ ಜುಲೈ ೧೯೮೦-೭ ಜುಲೈ ೧೯೮೦

೨೬. ಕೆಂಬಾವುಟ ಪತ್ರಿಕೆ, ಬೆಂಗಳೂರು, ಪುಟ ೧, ದಿ ೨೬-೮-೨೦೦೨.

೨೭. ಕ್ರಾಂತಿದೂತ-ಮೇ ವಿಶೇಷಾಂಕ ೧೯೮೧, ಪಂಪಾಪತಿ (ಸಂ) ಇಲ್ಲಿನ ಫೋಟೋ ಮಾಹಿತಿಯಿಂದ

೨೮. ವೀರಭದ್ರ ಚನ್ನಮಲ್ಲ ಸ್ವಾಮೀಜಿ (ಸಂ), ಹೋರಾಟದ ಹೆಜ್ಜೆಗಳು, ಪು ೨೧, ೨೦೦೧

೨೯. ಜನತಾವಾಣಿ ದಿನಪತ್ರಿಕೆ, ದಾವಣಗೆರೆ ದಿ ೨೭-೭-೧೦೭೬

೩೦. ಕೆ.ಹೆಚ್. ಗಂಗಪ್ಪ, ಕಾರ್ಮಿಕ ರತ್ನರ ಕೆಂಪು ಕಥೆ, ಪುಟ ೬೦ ದಿ ೨೦-೭-೧೯೮೧.

೩೧. ಕೆಂಬಾವುಟ, ನೆನಪಿನ ಪುರವಣಿ, ರವೀಂದ್ರ ಭಟ್ಟ ಐನಕೈ, ಕೃಪೆ ಪ್ರಜಾವಾಣಿ, ಪುಟ ೪, ದಿ ೨೬-೮-೨೦೦೨.

೩೨. ಪತ್ರ, ಕರ್ನಾಟಕ ಸರ್ಕಾರ, ಕಾರ್ಮಿಕ ಇಲಾಖೆ, ಬಳ್ಳಾರಿ ವಿಭಾಗ, ದಾವಣಗೆರೆ. ವಿಶೇಷ ಸಂಚಿಕೆ ೧೯೯೮-೯೯, ದಿನಾಂಕ ೪.೬.೧೯೯೮

೩೩. ಅದೇ,

೩೪. ಹೆಚ್.ಕೆ. ರಾಮಚಂದ್ರಪ್ಪನವರ ವ್ಯಕ್ತಿಗತ ವಿವರ ಪತ್ರದಿಂದ

೩೫. ಸಂದರ್ಶನ ಮಾಹಿತಿ, ಹೆಚ್.ಕೆ. ರಾಮಚಂದ್ರಪ್ಪ, ದಿನಾಂಕ ೭.೯.೨೦೦೪, ದಾವಣಗೆರೆ

೩೬. ಸಂದರ್ಶನ ಮಾಹಿತಿ, ಲಾವಣಿ ಬುಡೇನ್‌ಸಾಬ್, ಕಾರ್ಮಿಕ ಮುಖಂಡರು, ದಿನಾಂಕ ೧೯.೯.೨೦೦೪, ದಾವಣಗೆರೆ

೩೭. ಹೆಚ್.ಕೆ. ರಾಮಚಂದ್ರಪ್ಪನವರ ದಿನಚರಿಯಿಂದ, ೧೯೮೨

೩೮. ಅದೇ, ದಿನಾಂಕ ೨೭.೪.೧೯೮೩

೩೯. ಜನತಾವಾಣಿ ದಿನಪತ್ರಿಕೆ, ಪು. ೨, ದಿನಾಂಕ ೧೮.೭.೧೯೮೪, ದಾವಣಗೆರೆ

೪೦. ಹೆಚ್.ಕೆ. ರಾಮಚಂದ್ರಪ್ಪನವರ ವ್ಯಕ್ತಿಗತ ವಿವರ ಪತ್ರದಿಂದ

೪೧. ಸಂದರ್ಶನ ಮಾಹಿತಿ ಎಂ.ಜಿ. ತಿಪ್ಪೇಸ್ವಾಮಿ, ದಿನಾಂಕ ೧೧.೯.೨೦೦೪, ದಾವಣಗೆರೆ

೪೨. ವಿಜಯ ಕರ್ನಾಟಕ ದಿನಪತ್ರಿಕೆ, ನೌಕರರ ವಿಜಯ, ಪು. ೨, ದಿ. ೩೦.೪.೨೦೦೪

೪೩. ಕಾಂತ್ರಿ ದೂತ, ಮೇ ದಿನಾಚರಣೆ ಶತಮಾನೋತ್ಸವ ವಿಶೇಷಾಂಕ, ಪಂಪಾಪತಿ (ಸಂ.), ಪು. ೧೨, ೧೯೮೯

೪೪. ಸಂದರ್ಶನ ಮಾಹಿತಿ, ಎಂ.ಜಿ. ತಿಪ್ಪೇಸ್ವಾಮಿ, ದಿನಾಂಕ. ೧೧.೯.೨೦೦೪, ದಾವಣಗೆರೆ

೪೫. ಸರ್ಂದರ್ಶನ ಮಾಹಿತಿ, ಜಾಹಿರಾಬಿ, ಕಾರ್ಮಿಕ ಮುಖಂಡರು, ದಾವಣಗೆರೆ, ದಿನಾಂಕ. ೧೭.೯.೨೦೦೪

೪೬. ಪ್ರಧಾನ ಸಂಪಾದಕರು ಡಾ. ಜಿ. ರಾಮಕೃಷ್ಣ, ಮಹಿಳಾ ಚಳವಳಿಯ ಮಜಲುಗಳು, ಸ್ವಾತಂತ್ರ್ಯೋತ್ತರ ಭಾರತದ ಅವಲೋಕನ, ಪು. ೨೨, ೧೯೯೮

೪೭. ಸಂದರ್ಶನ ಮಾಹಿತಿ, ಜಾಹಿರಾಬಿ, ಕಾರ್ಮಿಕ ಮುಖಂಡರು, ದಿನಾಂಕ ೧೭.೯.೨೦೦೪

೪೮. ಅದೇ

೪೯. ಸಮ್ಮೇಳನ ಫೋಟೋ ಮಾಹಿತಿಯಿಂದ

೫೦ ಕಾರ್ಮಿಕ ಮುಖಂಡ ಶ್ರೀ ಹೆಚ್.ಕೆ. ರಾಮಚಂದ್ರಪ್ಪನವರ ಡೈರಿಯಿಂದ, ದಿನಾಂಕ. ೨೮.೧.೧೯೮೮, ದಾವಣಗೆರೆ

೫೧. ಜಿ. ರಾಮಾನುಜಂ, ಕರ್ನಾಟಕ ಕಾರ್ಮಿಕ ಪತ್ರಿಕೆ, ಗಾಂಧಿಯನ್ ಅಪ್ರೋಚ್ ಟು ಟ್ರೇಡ್ ಯೂನಿಯನ್ ಮೂಮೆಂಟ್, ಪು. ೧೧, ಜೂನ್-ಜುಲೈ, ೧೯೮೩

೫೨. ಸಂದರ್ಶನ ಮಾಹಿತಿ, ಎಂ.ಜಿ. ತಿಪ್ಪೇಸ್ವಾಮಿ, ಕಾರ್ಮಿಕ ಮುಖಂಡರು, ದಿನಾಂಕ. ೧೧.೯.೨೦೦೪ ದಾವಣಗೆರೆ

೫೩. ಜನತಾವಾಣಿ ದಿನಪತ್ರಿಕೆ, ಪು. ೧, ದಿನಾಂಕ. ೬.೪.೧೯೭೬, ದಾವಣಗೆರೆ

೫೪. ಶ್ರೀ ಕೆ.ಎಚ್. ಗಂಗಪ್ಪ, ಕಾರ್ಮಿಕ ರತ್ನರ ಕೆಂಪು ಕಥೆ, ಪು. ೩೯, ೧೯೮೨, ದಾವಣಗೆರೆ

ಅಧ್ಯಾಯ ೯

ಮೇ ದಿನಾಚರಣೆ ಮತ್ತು ಕಾರ್ಮಿಕ ಸಮ್ಮೇಳನಗಳು

ಮೇ ದಿನಾಚರಣೆ ಮತ್ತು ಕಾರ್ಮಿಕ ಸಮ್ಮೇಳನಗಳು

೯.೧. ಮೇ ದಿನಾಚರಣೆ

ಭಾರತ ಹಾಗೂ ಕರ್ನಾಟಕದ ಸರ್ಕಾರಗಳು ಪ್ರತಿ ವರ್ಷ ಹಲವಾರು ದಿನಗಳನ್ನು ವಿಶೇಷವಾದ ದಿನಗಳೆಂದು ಗುರುತಿಸಿರುವುದು ತಿಳಿದ ವಿಷಯ. ಈ ರೀತಿ ಗುರುತಿಸುವ ರಾಷ್ಟ್ರೀಯ/ಹಬ್ಬ/ಆಚರಣೆ/ ಕಾರ್ಮಿಕ ದಿನಾಚರಣೆ, ಸಾರ್ವತ್ರಿಕ ಹಬ್ಬ, ಆಚರಣೆ ದಿನಗಳಲ್ಲಿ ವಿಜ್ಞಾನ, ಮಹಿಳಾ, ಮಕ್ಕಳ ದಿನಾಚರಣೆಗಳು, ಸ್ವಾತಂತ್ರ್ಯ ದಿನಾಚರಣೆ, ಗಣರಾಜ್ಯೋತ್ಸವ, ಕನ್ನಡ ರಾಜ್ಯೋತ್ಸವಗಳನ್ನು ಆಚರಿಸಲಾಗುತ್ತದೆ. ಹೀಗೆ ಪ್ರತಿವರ್ಷವೂ ಆಚರಿಸುವ ಕಾರ್ಮಿಕ ದಿನಾಚರಣೆ ಕಾರ್ಮಿಕರ ಹಬ್ಬವಾಗಿದೆ. ಈ ದಿನದ ಮಹತ್ವವೇನು? ಇದರ ಹಿನ್ನೆಲೆ ಏನು, ಇತಿಹಾಸವೇನು? ಈ ಆಚರಣೆ ಫಲಪ್ರದವಾಗಿದೆಯೆ? ಇಲ್ಲವೇ? ಅಥವ ಕೇವಲ ಪೊಳ್ಳು ಆಶಯಗಳೊಂದಿಗೆ ನಡೆಯುತ್ತಿದೆಯೆ? ಎನ್ನುವ ಹಿನ್ನೆಲೆಯಲ್ಲಿ ಈ ಅಧ್ಯಾಯವನ್ನು ಚರ್ಚಿಸುವ ಉದ್ದೇಶ ಇಟ್ಟುಕೊಂಡಿದ್ದೇನೆ.

ಮೇ ದಿನವನ್ನು ಆಚರಿಸುವ ಪರಿಪಾಟ ಮೊದಲು ಅಮೇರಿಕ, ಇಂಗ್ಲೆಂಡ್‌ಗಳಲ್ಲಿ ಆರಂಭಗೊಂಡಿತು. ನಂತರ ಯುರೋಪಿನಲ್ಲಿ ಔದ್ಯೋಗಿಕ ಕ್ರಾಂತಿಯಿಂದ ಕಾರ್ಮಿಕರ ಶೋಷಣೆ ಇಮ್ಮಡಿಗೊಂಡು, ಕಾರ್ಮಿಕ ಮತ್ತು ಯಂತ್ರ ಎರಡೂ ಒಂದೇ ಎಂಬ ಭಾವನೆ ಬಂಡವಾಳಶಾಹಿಗಳಲ್ಲಿ ಮೊಳಕೆಯೊಡೆದು ಬೆಳೆಯುತ್ತಾ ಬಲವಾದ ಹೆಜ್ಜೆ ಹಾಕಿತು. ಇದರಿಂದ ಕೈಗಾರಿಕೆಗಳಲ್ಲಿ ಕಾರ್ಮಿಕರು ಸೂರ್ಯೋದಯದಿಂದ ಸೂರ್ಯಾಸ್ತದವರೆಗೂ ದುಡಿದು ನಂತರ ನರಕ ಸದೃಶವಾದ ಸೇವಾಪರಿಸ್ಥಿತಿಯನ್ನು ಅನುಭವಿಸಿದರು. ಈ ಸ್ಥಿತಿಯಿಂದ ಹೊರಬರಲು ಇಂಗ್ಲೆಂಡಿನಲ್ಲಿ ಅರ್ಥಶಾಸ್ತ್ರಜ್ಞರ ಬೆಂಬಲ ಪಡೆದು ಕಾರ್ಮಿಕರು ಬೇಡಿಕೆ ಇಟ್ಟು ಸ್ವಲ್ಪಮಟ್ಟಿನ ಸುಧಾರಣೆ ಕಂಡುಕೊಂಡರು. ಹೀಗೆ ಕಾರ್ಮಿಕರ ಬದುಕನ್ನು, ಆಶೋತ್ತರಗಳನ್ನು, ಹಕ್ಕು-ಜವಾಬ್ದಾರಿಗಳನ್ನು ಸಾರ್ಥಕತೆಯಿಂದ ಕೊಂಡೊಯ್ಯುವ ಆಶಯದಿಂದ ಆರಂಭವಾದ ಪರಿಪಾಠವೇ ಮೇ ದಿನಾಚರಣೆಯಾಗಿದೆ.

ಒಂದು ಶತಮಾನಕ್ಕೂ ಹೆಚ್ಚಿನ ಇತಿಹಾಸ ಹೊಂದಿರುವ ಮೇ ದಿನಾಚರಣೆ ಕಾರ್ಮಿಕರ ಅಸ್ತಿತ್ವವನ್ನು, ಸ್ಥಿತಿಗತಿಗಳನ್ನು ಜಗತ್ತಿಗೆ ಪರಿಚಯಗೊಳಿಸುವ ಕಾರ್ಮಿಕರ ಹಬ್ಬವಾಗಿದೆ. ಈ ಚಳವಳಿಯಲ್ಲಿ ನೈಜಕಳಕಳಿ, ಐಕ್ಯತೆಯ ಅಭಾವಗಳು ತೋರಿ ಬರುತ್ತಿವೆ. ಕಾರ್ಮಿಕರ ಹೋರಾಟಗಳು ನಗಣ್ಯವೆನ್ನುವ ಇಂದಿನ ದಿನಗಳಲ್ಲಿ ಮೇ ದಿನಾಚರಣೆ ತಾನು ನಡೆದುಬಂದ ಹಾದಿಯನ್ನು ಹಿಂತಿರುಗಿ ನೋಡಿ ಆತ್ಮವಿಮರ್ಶೆಮಾಡಿಕೊಳ್ಳಬೇಕಾಗಿದೆ. ಆದರೆ ಮೇ ದಿನಾಚರಣೆ ಸಂಪೂರ್ಣ ನಿರರ್ಥಕ ಎಂದು ಸಾರಾಸಗಟಾಗಿ ನಿರಾಕರಿಸಲು ಸಾಧ್ಯವಿಲ್ಲ.

ಔದ್ಯೋಗಿಕ ಕ್ರಾಂತಿಯಿಂದ ಮಾಲೀಕರು ಪ್ರಬಲರಾಗಿ, ಕಾರ್ಮಿಕರಿಗೆ ತಮ್ಮ ಲಾಭದಲ್ಲಿ ಅಲ್ಪಪ್ರಮಾಣದಲ್ಲೂ ಪಾಲನ್ನು ನೀಡುತ್ತಿರಲಿಲ್ಲ. ದುಡಿಮೆಯ ಅವಧಿಯಲ್ಲಿ ಯಾವುದೇ ರಿಯಾಯಿತಿ ಇರಲಿಲ್ಲ, ಕಾರ್ಮಿಕರ ಆರೋಗ್ಯ, ನೈರ್ಮಲ್ಯ ಕೇಳುವವರಿರಲಿಲ್ಲ. ಕಾಲ ಕ್ರಮೇಣ ವಿಚಾರವಂತರು ಕಾರ್ಮಿಕರನ್ನು ಮಾನವೀಯತೆಯಿಂದ ಕಾಣಬೇಕು, ಸೌಲಭ್ಯಗಳನ್ನು ನೀಡಬೇಕೆಂದು ಸರ್ಕಾರ ಮತ್ತು ಮಾಲೀಕರ ಮುಂದಿಟ್ಟರು. ಇಂಗ್ಲೆಂಡ್ ಪಾರ್ಲಿಮೆಂಟ್‌ನಲ್ಲಿ ಚರ್ಚೆ ನಡೆದು ಕಾರ್ಮಿಕರಿಗೆ ಕೆಲವು ಶಾಸನಗಳು ಹುಟ್ಟಿಕೊಂಡು ಜಾರಿಗೊಂಡವು. ಈ ಹಿನ್ನೆಲೆಯಲ್ಲಿ ಇಂಗ್ಲೆಂಡ್‌ನಲ್ಲಿ ಕಾರ್ಮಿಕ ಸಂಘಟನೆಗಳು ಹುಟ್ಟಿಕೊಂಡು ಆಂದೋಲನಗಳು ನಡೆದವು.

ಅಮೇರಿಕಾದ ಕಾರ್ಮಿಕರು ರಾಷ್ಟ್ರಮಟ್ಟದ ಕಾರ್ಮಿಕ ಸಂಘಗಳನ್ನು ಕಟ್ಟಿಕೊಂಡು ಅತ್ಯಂತ ಕಡಿಮೆ ಕೂಲಿ, ತೀವ್ರ ದುಡಿಮೆ ಮುಂತಾದ ಅಸಹನೀಯ ಸ್ಥಿತಿಯ ವಿರುದ್ಧ ಅಲ್ಲಲ್ಲಿ ಚಳವಳಿ ನಡೆಸಿದರೂ ಅದಕ್ಕೊಂದು ಖಚಿತತೆ ಇರಲಿಲ್ಲ. ಈ ಎಲ್ಲಾ ಪರಿಸ್ಥಿತಿಗಳ ವಿರುದ್ಧ ಕಾರ್ಮಿಕರು ಕ್ರೋಧದಿಂದ ಸ್ಫೋಟಗೊಂಡು ಚಳವಳಿ ಹೂಡಿದ್ದು ೧೮೮೬ ಮೇ ಒಂದನೇ ದಿನಾಂಕದಂದು ಅಮೇರಿಕಾದ ಚಿಕಾಗೋ ನಗರದಲ್ಲಿ.[೧] ಇಲ್ಲಿ ಕಾರ್ಮಿಕರಿಗೆ ೮ ಗಂಟೆ ಮಾತ್ರ ದುಡಿಮೆಯ ಕಾಲದ ಮಿತಿಯನ್ನು ಜಾರಿಗೊಳಿಸಬೇಕು, ಕಾನೂನುಗಳು ಜಾರಿಯಾಗಬೇಕು ಮುಂತಾದ ಬೇಡಿಕೆಗಳ ಬೆನ್ನಲ್ಲಿ ಲಕ್ಷಾಂತರ ಕಾರ್ಮಿಕರು ಮೆರವಣಿಗೆ ಮತ್ತು ಪ್ರದರ್ಶನದಲ್ಲಿ ನಿರತರಾಗಿದ್ದಾಗ ಸಶಸ್ತ್ರ ಪೊಲೀಸರು ನಿಷೇಧಾಜ್ಞೆ ಉಲ್ಲಂಘನೆಯ ನೆಪಹೂಡಿ ಅಮಾನುಷ ದಾಳಿ ನಡೆಸಿದ ಪರಿಣಾಮವಾಗಿ ಕೆಲವು ಕಾರ್ಮಿಕರು ಅಸುನೀಗಿದರು. ಈ ಹತ್ಯಾಕಾಂಡದ ಸಂಕೇತವೇ ಮೇ ದಿನಾಚರಣೆ ಅಥವಾ ಕಾರ್ಮಿಕ ದಿನಾಚರಣೆ.[೨] ಈ ಹತ್ಯಾಕಾಂಡದ ಅಂಗವಾಗಿ ಜನಿಸಿದ ಕಾರ್ಮಿಕ ಸಂಘಶಕ್ತಿಯು "ಕೆಂಪು ಬಾವುಟ"ವನ್ನು ತನ್ನ ಸಂಕೇತವಾಗಿ ಆರಿಸಿಕೊಂಡಿತು. ಪೀಟರ್.ಜೆ.ಮ್ಯಾಕ್‌ಗೈರ್ ಎಂಬ ಅಮೇರಿಕಾದ ಬಡಗಿ ಹಾಗೂ ಕಾರ್ಮಿಕ ನಾಯಕರು ಪ್ರಥಮ ಬಾರಿಗೆ ಕಾರ್ಮಿಕ ದಿನಾಚರಣೆಯ ಸಲಹೆ ನೀಡಿದನು.[೩] ಆ ವರ್ಷ (೧೮೮೯) ಪ್ಯಾರಿಸ್‌ನಲ್ಲಿ ಸಮಾವೇಶಗೊಂಡಿದ್ದ ಸಮಾಜವಾದಿ ಅಂತರಾಷ್ಟ್ರೀಯ ಪ್ರಥಮ ಅಧಿವೇಶನದಲ್ಲಿ ಮೇ ೧ನೇ ದಿನಾಂಕವನ್ನು ಅಂತರರಾಷ್ಟ್ರೀಯ ಉತ್ಸವದ ದಿನವೆಂದು ಆಚರಿಸಲು ನಿರ್ಧರಿಸಲಾಯಿತು.[೪] ಈ ಹಿನ್ನೆಲೆಯಲ್ಲಿ ವಿಶ್ವದ ಹಲವು ರಾಷ್ಟ್ರಗಳು ಮೇ ದಿನಾಚರಣೆ/ಕಾರ್ಮಿಕ ದಿನಾಚರಣೆಯನ್ನು ಪ್ರತ್ಯೇಕ ದಿನಗಳಲ್ಲಿ ಆಚರಿಸುತ್ತಿವೆ.

ಅಮೇರಿಕಾದಲ್ಲಿ ಸೆಪ್ಟಂಬರ್ ಮಾಹೆಯ ಮೊದಲ ಸೋಮವಾರ, ಇಂಗ್ಲೆಂಡಿನಲ್ಲಿ ಮೇ ಮಾಹೆಯ ಮೊದಲ ಭಾನುವಾರ, ಸೋವಿಯತ್ ರಷ್ಯಾ ಹಾಗೂ ಇತರೆ ಕಮ್ಯೂನಿಸ್ಟ್ ರಾಷ್ಟ್ರಗಳಲ್ಲಿ ಹಾಗೂ ಭಾರತದಲ್ಲಿ ಮೇ ಮಾಹೆಯ ಮೊದಲ ದಿನ ಹೀಗೆ ವಿವಿಧ ದಿನಗಳಲ್ಲಿ ವರ್ಷಕ್ಕೊಮ್ಮೆ ಆಚರಿಸಲಾಗುತ್ತಿದೆ. ಅಮೇರಿಕಾದ ಕಾರ್ಮಿಕ ಒಕ್ಕೂಟದ ಅಧ್ಯಕ್ಷರಾದ ಸ್ಯಾಮ್ಯುಯಲ್ ಗಾಂಪರ್ಸ್ ಪ್ರಕಾರ ಎಲ್ಲಾ ರಜಾದಿನಗಳು ಹೆಚ್ಚು ಕಡಿಮೆ ಹಲವಾರು ಹೋರಾಟಗಳಿಗೆ, ಮಾನವನಿಂದ ಹೋರಾಟದ ಜಯ, ಸಾಮ್ರಾಜ್ಯಶಾಹಿ ಶಕ್ತಿಗಳಿಂದ ವಸಾಹತುಗಳ ವಿಮುಕ್ತಿ ಹಾಗೂ ಮಾನವನ ಸ್ವಾರ್ಥಕ್ಕೆ ಶಿಕ್ಷೆಯಾಗಿ ಬಂದಿವೆ.[೫] ಆದರೆ ಕಾರ್ಮಿಕ ದಿನ ಇಂಥ ಯಾವುದೇ ಐತಿಹಾಸಿಕ ಘಟನೆಗೆ ಅಥವಾ ಯಾವುದೇ ವ್ಯಕ್ತಿ, ಪಂಗಡ, ದೇಶಕ್ಕೆ ಸಂಬಂಧಪಟ್ಟ ದಿನವಾಗಿರದೆ ಸಾಮಾಜಿಕವಾಗಿ, ಆರ್ಥಿಕವಾಗಿ ಬಲಿಷ್ಠ ರಾಷ್ಟ್ರವನ್ನು ಕಟ್ಟಿರುವ ಕಾರ್ಮಿಕರಿಗೆ ಗೌರವ ಸಲ್ಲಿಸುವ ದಿನಾಚರಣೆಯಾಗಿದೆ.

ದಿ ನ್ಯೂ ಎನ್‌ಸೈಕ್ಲೋಪೀಡಿಯಾ ಬ್ರಿಟಾನಿಕಾದಲ್ಲಿ ಮೇ ದಿನಾಚರಣೆಯನ್ನು ಆಧುನಿಕತೆಯ ಜಾತ್ಯಾತೀತ ಹಬ್ಬಗಳು/ಆಚರಣೆಗಳು ಎನ್ನಲಾಗಿದೆ. ಹಿಂದೂಗಳು, ಮುಸಲ್ಮಾನರು, ಕ್ರೈಸ್ತರು ತಮ್ಮ ತಮ್ಮ ಸಂಪ್ರದಾಯಗಳಡಿಯಲ್ಲಿ ಹಬ್ಬಗಳ ಆಚರಣೆ ಹಮ್ಮಿಕೊಳ್ಳುತ್ತಾರೆ. ಆದರೆ ಕಾರ್ಮಿಕರು ಧರ್ಮವನ್ನು ಹೊರಗಿಟ್ಟು ದುಡಿಯುವವರು ಎಂಬ ಹಿನ್ನೆಲೆಯಲ್ಲಿ ಜಾತ್ಯಾತೀತವಾಗಿ ಮೇ ದಿನಾಚರಣೆಯಲ್ಲಿ ತೊಡಗುತ್ತಾರೆ. ಬಂಡವಾಳಶಾಹಿಗಳ ವಿರುದ್ಧದ ಆಕ್ರೋಶ ಹಾಗೂ ವ್ಯವಸ್ಥೆಯ ಬಗೆಗಿನ ನಿರಾಸೆಯನ್ನು ವ್ಯಕ್ತಪಡಿಸಲು ಇಂತಹ ಆಚರಣೆಗಳು ಸಂದರ್ಭಗಳಾಗಿವೆ.

ಭಾರತದ ಮಾಜಿ ಪ್ರಧಾನಮಂತ್ರಿ ರಾಜೀವ್‌ಗಾಂಧಿಯವರು ೧೯೮೯ರ ಮೇ ೧ರಂದು ಭಿಲೈನಲ್ಲಿ ಕಾರ್ಮಿಕರನ್ನು ಉದ್ದೇಶಿಸಿ ಮಾತನ್ನಾಡುತ್ತಾ "ಮೇ ದಿನವು ಕೆಲಸಗಾರರ ದಿನವಾಗಿದೆ, ಅಲ್ಲದೆ ಇಂದಿನ ದಿನವು ಅವರ ಏಕತೆಯನ್ನು ಪ್ರದರ್ಶಿಸುವ ಸಂದರ್ಭವಾಗಿದ್ದು, ಅವರ ಚಳವಳಿಯನ್ನು ಬಲಪಡಿಸುವ ಸನ್ನಿವೇಶವೂ ಆಗಿರುತ್ತದೆ" ಎಂದು ಕಾರ್ಮಿಕರ ಮಹತ್ವ, ಸಂಘಟನೆಯ ಮೌಲ್ಯ, ಏಕತೆಯ ಅಂಶವನ್ನು ವ್ಯಕ್ತಪಡಿಸಿದ್ದಾರೆ. ಇದರಿಂದ ಕಾರ್ಮಿಕರ ಮತ್ತು ಮೇ ದಿನಾಚರಣೆಯ ಮಹತ್ವ ತಿಳಿಯುತ್ತದೆ.

ಭಾರತ ದೇಶದಲ್ಲಿ ಕಾರ್ಮಿಕ ಚಳವಳಿಗೆ ಒಂದು ಅಸ್ತಿತ್ವ ಬಂದಾಗ ಮೇ ದಿನಾಚರಣೆ ಆರಂಭಗೊಂಡಿತು. ಭಾರತದಲ್ಲಿ ೧೯೨೭ ರಿಂದೀಚೆಗೆ ಪ್ರತಿವರ್ಷವೂ ಕಾರ್ಮಿಕರು ಈ ದಿನವನ್ನಾಚರಿಸುತ್ತಿದ್ದಾರೆ.[೬] ಕಲ್ಕತ್ತ, ಮುಂಬೈಗಳಲ್ಲಿ ಮೇ ದಿನಾಚರಣೆ ಕಾಣಿಸಿಕೊಂಡು, ಸಮಾಜವಾದದ ಪ್ರಭಾವವಿರುವ ರಾಜ್ಯಗಳಲ್ಲಿ ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ. ಭಾರತದಲ್ಲಿ ಮೇ ದಿನಾಚರಣೆಗೆ, ಅಮೇರಿಕಾದ ಚಿಕಾಗೋ ಕಾರ್ಮಿಕರ ಪ್ರಭಾವ ತತ್‌ಕ್ಷಣದಲ್ಲಾಗಲಿಲ್ಲ. ಏಕೆಂದರೆ ಭಾರತವು ಬ್ರಿಟಿಷರ ವಸಾಹತುವಾಗಿದ್ದು ಕಲ್ಲಿದ್ದಲು, ಟೀ ತೋಟಗಳು, ಹತ್ತಿ ಮತ್ತು ಸೆಣಬಿನ ಕೈಗಾರಿಕೆಗಳು ಬೆಳವಣಿಗೆ ಹಂತದಲ್ಲಿದ್ದವು. ಬೃಹತ್ ಕೈಗಾರಿಕೆಗಳು ಬಂಡವಾಳಶಾಹಿ ಪದ್ಧತಿಯ ಪ್ರವೇಶಕ್ಕೆ ದ್ವಾರತೆರೆದಿದ್ದರಿಂದ, ಅಲ್ಲಿ ದುಡಿಯುವ ಕಾರ್ಮಿಕರ ಶೋಷಣೆ ಆರಂಭವಾಯಿತು. ಸಂಘಟನೆ ಹುಟ್ಟಿದ ನಂತರವೇ ಕಾರ್ಮಿಕರು ಈ ಶಕ್ತಿ ಪಡೆದು ಮೇ ದಿನಾಚರಣೆ ಮಾಡಲು ಸಾಧ್ಯವಾಯಿತು. ಈ ಕೆಲ ಐತಿಹಾಸಿಕ ಕಾರಣಗಳಿಂದಾಗಿ ಭಾರತದಲ್ಲಿ ಮೇ ದಿನಾಚರಣೆ ವಿಳಂಬವಾಯಿತು.

ಕರ್ನಾಟಕ ರಾಜ್ಯದಲ್ಲೂ ಮೇ ದಿನಾಚರಣೆಯನ್ನು ಆಚರಿಸುತ್ತಿದ್ದು, ಜನತಾ ಸರ್ಕಾರವು ಅಧಿಕಾರದ ಚುಕ್ಕಾಣಿ ಹಿಡಿದ ನಂತರ ಮಹತ್ವಪಡೆದುಕೊಂಡಿತು. ೧೯೮೪ರ ಮೇ ೧ನೇ ದಿನ ಸಾರ್ವಜನಿಕ ರಜೆಯನ್ನಾಗಿ ಮತ್ತು ರಾಷ್ಟ್ರೀಯ ಹಬ್ಬದ ದಿನವನ್ನಾಗಿ ಆಚರಿಸಬೇಕೆಂದು ಕರ್ನಾಟಕ ಸರ್ಕಾರವು ಸುಗ್ರೀವಾಜ್ಞೆಯನ್ನು ಹೊರಡಿಸಿ ಕಾರ್ಮಿಕರ ಪ್ರೀತಿ ವಾತ್ಸಲ್ಯಗಳಿಸಿತು.[೭] ಈ ತೀರ್ಮಾನವು ವಿಳಂಬವಾದರೂ ಸ್ವಾಗತಾರ್ಹವಾಗಿದೆ.

ಆರಂಭದಲ್ಲಿ ಕಾರ್ಮಿಕರ ಶಕ್ತಿಯನ್ನು ಪ್ರದರ್ಶಿಸುವಂತಹ ಬೃಹತ್ ಮೆರವಣಿಗೆ, ಕ್ರೀಡೆ, ಸಾಂಸ್ಕೃತಿಕ ಮತ್ತು ಮನರಂಜನೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿತ್ತು. ಕ್ರಮೇಣ ಅಂದು ಪ್ರಖ್ಯಾತ ವ್ಯಕ್ತಿಗಳಿಂದ ಭಾಷಣಗಳನ್ನು ಪರಿಚಯಿಸುತ್ತಾ ಆರ್ಥಿಕ ಮತ್ತು ನಾಗರೀಕ ಬೆಳವಣಿಗೆಯನ್ನು ಖಚಿತಪಡಿಸಲು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು.[೮]

ಕರ್ನಾಟಕ ರಾಜ್ಯದ ಕೈಗಾರಿಕಾ ನಕ್ಷೆಯಲ್ಲಿ ಸ್ಥಾನಪಡೆದುಕೊಂಡ ದಾವಣಗೆರೆ, ಕಾರ್ಮಿಕರ ನಗರವೂ ಆಯಿತು. ೧೯೩೪ರಲ್ಲಿ ಉತ್ಪಾದನೆ ಆರಂಭಿಸಿದ ದಾವಣಗೆರೆ ಹತ್ತಿಗಿರಣಿಯು (ಡಿ.ಸಿ.ಎಂ) ಬೃಹತ್ ಉದ್ಯಮವಾಗಿದ್ದು ಮೊದಲ ಹತ್ತಿಗಿರಣಿಯಾಗಿದೆ. ಇಲ್ಲಿಂದ ಮುಂದೆ ಗಿರಣಿಗಳು ಸ್ಥಾಪನೆಯಾಗಿ ಕೆಲವು ವರ್ಷಗಳ ನಂತರ ಕಾರ್ಮಿಕರ ಹೋರಾಟಗಳೂ ಬಲಗೊಂಡವು. ೧೯೭೦ರಲ್ಲಿ ಕಾರ್ಮಿಕ ಮುಖಂಡರಾದ ಶ್ರೀ ಸುರೇಶ್, ಶ್ರೀ ಶೇಖರಪ್ಪ ಇವರ ಹತ್ಯೆಯಾಗುವವರೆಗೂ ಮೇ ದಿನಾಚರಣೆಯಾಗಲಿ/ ಕಾರ್ಮಿಕ ದಿನಾಚರಣೆಯಾಗಲಿ ನಡೆದಿದ್ದಕ್ಕೆ ಮಾಹಿತಿ ಇಲ್ಲ. ೧೯೭೦ರಲ್ಲಿ ನಡೆದ ದಾವಣಗೆರೆ ಕಾರ್ಮಿಕರ ಹತ್ಯೆಯು ೧೮೮೬ರ ಚಿಕಾಗೋ ಕಾರ್ಮಿಕರ ಹತ್ಯೆಯಷ್ಟೇ ಮಹತ್ವ ಪಡೆದಿದೆ. ಈ ಹತ್ಯೆಯಿಂದ ಕಾರ್ಮಿಕ ಸಂಘಟನೆಗೆ ಬಲ ಬಂದಿತೇ ಹೊರತು ಸಂಘಟನಾ ಸ್ಫೂರ್ತಿ ಆಗಿರಲಿಲ್ಲ. ಹತ್ಯೆಗೊಳಗಾದ ಕಾರ್ಮಿಕ ಮುಖಂಡರ ಹೆಸರಿನಲ್ಲಿ ೧೯೭೦ರಿಂದ ವಾರ್ಷಿಕ ಸ್ಮರಣೆ ಕಾರ್ಯಕ್ರಮವನ್ನು ಆರಂಭಿಸಿದರು. ಭಾರತೀಯ ಕಮ್ಯುನಿಸ್ಟ್ ಪಕ್ಷದ (ಸಿ.ಪಿ.ಐ) ಪ್ರಭಾವವಿದ್ದು ಇಲ್ಲಿ ವಿಜೃಂಭಣೆಯಿಂದ ವಾರ್ಷಿಕ ಸ್ಮರಣೆ ಕಾರ್ಯಕ್ರಮ ನಡೆಯುತ್ತಿದ್ದು, ಅದು ಮೇ ದಿನಾಚರಣೆಯ ಹಲವು ಲಕ್ಷಣಗಳನ್ನು ಒಳಗೊಂಡಿರುತ್ತಿತ್ತು. ಅಂದು ನಗರವು ಕೆಂಪುಮಯವಾಗಿರುತ್ತಿತ್ತು. ವೃತ್ತಗಳು, ರಸ್ತೆಗಳು ಅಲಂಕರಿಸಲ್ಪಟ್ಟು ಆಕರ್ಷಕವಾಗುತ್ತಿದ್ದವು. ಕಾರ್ಮಿಕರಿಗಾಗಿ ವಿವಿಧ ಸ್ಪರ್ಧೆಗಳು ನಡೆಯುತ್ತಿದ್ದವು. ಕಾರ್ಮಿಕ ಮುಖಂಡರು ದಾವಣಗೆರೆ ನಗರಸಭೆಯ ಅಧಿಕಾರ, ವಿಧಾನಸಭೆ ಸದಸ್ಯತ್ವಗಳಿಂದ ಉನ್ನತ ಸ್ಥಾನಮಾನ ಪಡೆದರು. ಈ ಹಿನ್ನೆಲೆಯಿಂದ ಮೇ ದಿನದ ಆಚರಣೆಗಳು ಬಲಗೊಂಡವು.

ಆ ದಿನಗಳಲ್ಲಿ ಮೇ ದಿನಾಚರಣೆ ಸುರೇಶ್, ಶೇಖರಪ್ಪನವರ ವಾರ್ಷಿಕ ಸ್ಮರಣೆ ಕಾರ್ಯಕ್ರಮಗಳು ರಾಜ್ಯಕ್ಕೇ ಹೆಸರುವಾಸಿ ಆಗಿದ್ದವು.[೯] ಕಾರ್ಮಿಕ-ಹೋರಾಟದ ಈ ಸಂದರ್ಭದಲ್ಲಿ ಲಾವಣಿ ಬುಡೇನ್‌ಸಾಬ್ ಡಿ.ಸಿ.ಎಂ. ಗಿರಣಿಯ ಕಾರ್ಮಿಕರ ಸಂಘಟನೆ ಬಗ್ಗೆ ಲಾವಣಿ ಹಾಡುಗಳನ್ನು (ಈ ಸಂದರ್ಭದಲ್ಲಿ) ಹಾಡುತ್ತಿದ್ದುದು ಆಕರ್ಷಣೀಯವಾಗಿರುತ್ತಿತ್ತು. ಮೇ ದಿನಾಚರಣೆ ಫೋಟೋಗಳನ್ನು ಗಮನಿಸಿದಾಗ, ಟ್ರಾಕ್ಟರ್‌ಗಳಲ್ಲಿ ಅಗಲಿದ ಕಾರ್ಮಿಕ ಚೇತನಗಳಾದ ಶ್ರೀ ಸುರೇಶ್, ಶ್ರೀ ಶೇಖರಪ್ಪನವರ ಭಾವಚಿತ್ರಗಳನ್ನು ಮೆರವಣಿಗೆಯಲ್ಲಿ ಕೊಂಡೊಯ್ಯುವುದು, ಮಹಿಳಾ ಕಾರ್ಮಿಕರಾದಿಯಾಗಿ ಕೆಂಪು ಸಮವಸ್ತ್ರ ಧರಿಸಿ ಶಿಸ್ತಿನ ಸಿಪಾಯಿಗಳಂತೆ ಬೃಹತ್ ಮೆರವಣಿಗೆ ನಡೆಸುತ್ತಿದ್ದರು. ಈ ಮೆರವಣಿಗೆಯು ಯಾವುದೇ ಸೈನಿಕ ಪಥ ಸಂಚಲನಕ್ಕೇನು ಕಡಿಮೆ ಇರಲಿಲ್ಲ. ಮೆರವಣಿಗೆಯು ನಗರದ ಪ್ರಮುಖ ಬೀದಿಗಳಲ್ಲಿ ಹಾದು ನಗರಕ್ಕೆ ಹೊಂದಿಕೊಂಡಿರುವ ಅವರಗೆರೆ ಗ್ರಾಮದಲ್ಲಿರುವ ದಿವಂಗತ ಶ್ರೀ ಸುರೇಶ್, ಶ್ರೀ ಶೇಖರಪ್ಪ ಅವರ ಸಮಾಧಿಯ ಬಳಿ ಸೇರುತ್ತಿತ್ತು. ಸುಮಾರು ೧೦ ಸಾವಿರ ಜನರಿಗೆ ಮದ್ಯಾಹ್ನ ೧೨ ಗಂಟೆಯಿಂದ ಸಂಜೆಯವರೆಗೆ ಅನ್ನಸಂತರ್ಪಣೆ ನಡೆಯುತ್ತಿತ್ತು.[೧೦] ಕಾರ್ಮಿಕ ಮುಖಂಡರಿಂದ ಭಾಷಣ ಏರ್ಪಡಿಸಲಾಗುತ್ತಿತ್ತು. ಇವರು ಸೋವಿಯತ್ ರಾಷ್ಟ್ರದ ಮೇಲೆ ಸಾಮ್ರಾಜ್ಯಶಾಹಿ ರಾಷ್ಟ್ರಗಳು ನಡೆಸುತ್ತಿರುವ ಪಿತೂರಿಯನ್ನು ಖಂಡಿಸುವುದು,[೧೧] ಕೇಂದ್ರ, ರಾಜ್ಯ ಸರ್ಕಾರಗಳ ಕಾರ್ಮಿಕ ವಿರೋಧಿ ನಿಲುವನ್ನು ಖಂಡಿಸುವುದು, ಮುಂತಾದ ವಿಷಯಗಳನ್ನು ವಿವರಿಸುತ್ತಿದ್ದರು. ಕಾರ್ಮಿಕ ಮುಖಂಡರೂ, ಶಾಸಕರೂ ಆಗಿದ್ದ ಶ್ರೀಪಂಪಾಪತಿಯವರನ್ನು ೧೯೭೬ರಲ್ಲಿ ಶೋಷಣಾರಹಿತ ದೇಶ ಮಂಗೋಲಿಯಾಕ್ಕೆ

ಕಳುಹಿಸಿಕೊಟ್ಟರು.[೧೨] ಇವರು ತಮ್ಮ ಭೇಟಿಯ ಅವಧಿಯಲ್ಲಿ ಅಲ್ಲಿನ ಮೇ ದಿನಾಚರಣೆಯಲ್ಲಿ ಪಾಲ್ಗೊಂಡಿದ್ದರು. ಮಂಗೋಲಿಯಾದಿಂದ ಹಿಂತಿರುಗಿದ ಶ್ರೀ ಪಂಪಾಪತಿಯವರು "ಅಲ್ಲಿ ಪ್ರತಿಯೊಂದು ಕಾರ್ಖಾನೆಯೂ ರಾಷ್ಟ್ರದ ಸಂಪತ್ತು, ಅದರಿಂದ ಬಂದ ಆದಾಯ ಶ್ರಮಜೀವಿಗಳ ಕೈ ಸೇರುತ್ತದೆ. ಅದೇ ಪದ್ಧತಿ ನಮ್ಮ ದೇಶದಲ್ಲೂ ಬರಬೇಕು ಎಂದರು".[೧೩] ಕಮ್ಯುನಿಸ್ಟ್ ಪಕ್ಷದವರಾದ ಇವರು ತಮ್ಮ ಕರ್ತವ್ಯವನ್ನು ಆ ಸಂದರ್ಭದಲ್ಲಿ ಸರಿಯಾಗಿಯೇ ನಿರ್ವಹಿಸಿದ್ದಾರೆ ಎನ್ನಬಹುದು.

ದಾವಣಗೆರೆ ನಗರದ ಕಾರ್ಮಿಕರು ೧೯೭೦ ರಿಂದ ೧೯೭೫ರ ವರೆಗೂ ಸಂಘಟನೆ ಕಟ್ಟಲು ಶ್ರಮಿಸಿ ಹುತಾತ್ಮರಾದ ನಾಯಕರ ಸಂಬಂಧ ಹುತಾತ್ಮರ ದಿನಾಚರಣೆ ನಡೆಸುತ್ತಿದ್ದರು. ೧೯೭೬ ರಿಂದ ಹುತಾತ್ಮರ ಸ್ಮರಣೆ ದಿನಾಚರಣೆಯನ್ನು ಮೇ ೧ ರಂದು ಆಚರಿಸಲು ತೀರ್ಮಾನಿಸಿದರು.[೧೪] ಇಲ್ಲಿಂದ ಮುಂದೆ ಮೇ ದಿನದಂದೇ ಸ್ಮರಣೆ ದಿನಾಚರಣೆಯನ್ನು ಆಚರಿಸುವ ಕ್ರಮ ತೆಗೆದುಕೊಂಡರು. ಕ್ಷೇತ್ರಕಾರ್ಯ ಸಂದರ್ಭದಲ್ಲಿ ಮೇ ದಿನಾಚರಣೆಯನ್ನು ಇಲ್ಲಿ ಕಾರ್ಮಿಕರು ವಿಜೃಂಭಣೆಯಿಂದ ಆಚರಿಸುತ್ತಿದ್ದ ಬಗ್ಗೆ ಕಾರ್ಮಿಕರಿಂದ (೧೦೦%) ಖಚಿತಪಟ್ಟಿದೆ. ನಗರದಲ್ಲಿ ಕಮ್ಯುನಿಸ್ಟ್ ಪಕ್ಷ ರಾಜಕೀಯ ಅಧಿಕಾರವನ್ನು ಪಡೆದಿದ್ದು ಆಚರಣೆಯ ಯಶಸ್ಸಿನ ಮೂಲವಾಗಿತ್ತು. ಕಾರ್ಮಿಕರು ತಮ್ಮ ಕೂಲಿಯಲ್ಲಿ ೧ ದಿನದ ವೇತನವನ್ನು ಮೇ ದಿನಾಚರಣೆಗೆ ನೀಡುತ್ತಿದ್ದರು. ತಮಗೆ ಬರುತ್ತಿದ್ದ ಅಲ್ಪ ಹಣದಲ್ಲಿ ಈ ಮೊತ್ತ ನೀಡುವಾಗ ಅದೆಷ್ಟೋ ಮಂದಿ ಒಲ್ಲದ ಮನಸ್ಸಿನಿಂದಲೇ ಕೊಡುತ್ತಿದ್ದರು. ಆದರೂ ಸಂಘಟನೆ, ಶೋಷಣೆಯಿಂದ ಮುಕ್ತಿಪಡೆಯಲು ಒಂದು ಅಸ್ತ್ರವಿದ್ದಂತೆ ಎಂಬುದನ್ನು ಅಲ್ಲಗಳೆಯವಂತಿಲ್ಲ.

ಗಿರಣಿಗಳು ೧೯೮೦ರ ದಶಕದಲ್ಲಿ ಅವನತಿ ಹೊಂದಿದ ಕಾರಣ ಕಾರ್ಮಿಕ ಸಂಘದ ಸದಸ್ಯತ್ವವು ಗಣನೀಯವಾಗಿ ಕಡಿಮೆಯಾಯಿತು. ೧೯೯೦ರ ಕಾಲಕ್ಕೆ ನಗರದಲ್ಲಿದ್ದ ಏಕೈಕ ಕಮ್ಯೂನಿಸ್ಟ್ ಸಂಘಟನೆಗೆ ಸ್ಪರ್ಧೆ ಒಡ್ಡಿದ (ಭಾರತೀಯ ಮಜ್ದೂರ್) ಸಂಘಟನೆಯ ಪಾತ್ರದಿಂದಲೂ ನಗರದ ಮೇ ದಿನಾಚರಣೆ ತನ್ನ ಗತವೈಭವವನ್ನು ಕಳೆದುಕೊಂಡಿದ್ದರೂ ಸಂಪೂರ್ಣವಾಗಿ ಕೈಬಿಡದೆ ಮುಂದುವರೆಸಿಕೊಂಡು ನಡೆದಿದ್ದಾರೆ.

ಸಾಮಾನ್ಯವಾಗಿ ಮೇ ದಿನದಲ್ಲಿ ಕಾರ್ಮಿಕರು ಹಿಂದಿನ ವರ್ಷ ಮಾಡಿದ ಹೋರಾಟಗಳ ವಿಮರ್ಶೆಮಾಡಿ, ಮುಂದಿನ ದಿನಗಳ ಹೋರಾಟಕ್ಕೆ ರೂಪರೇಷೆಗಳನ್ನು ತಯಾರಿಸುತ್ತಾರೆ. ಸಮಾಜವಾದಿ ರಾಷ್ಟ್ರಗಳಲ್ಲಿ ಹೆಚ್ಚಿನ ಪ್ರಗತಿ ಹೊಂದಲು ಆಲೋಚಿಸಿದರೆ, ಬಂಡವಾಳಶಾಹಿ ವ್ಯವಸ್ಥೆಯಲ್ಲಿ ನವಸಮಾಜದ ನಿರ್ಮಾಣದತ್ತ ಗಮನ ಹರಿಸುತ್ತಾರೆ. ಈ ಆಲೋಚನೆಗಳು ಎಷ್ಟರ ಮಟ್ಟಿಗೆ ಕಾರ್ಯರೂಪಕ್ಕೆ ಬರುತ್ತಿದ್ದವು? ಅವು ಸಮಾಜವಾದಿ ರಾಷ್ಟ್ರಗಳಲ್ಲಿ ಸ್ವಲ್ಪ ಪ್ರಗತಿ ಕಂಡುಬಂದರೂ, ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಯಶಸ್ಸು ಸಾಮಾನ್ಯ ಸಂಗತಿಯಾಗಿರಲಿಲ್ಲ. ಕಾರ್ಲ್‌ಮಾರ್ಕ್ಸ್‌ನು "ಜಗತ್ತಿನ ಕಾರ್ಮಿಕರೇ ಒಗ್ಗಟ್ಟಾಗಿ, ನೀವು ಒಗ್ಗಟ್ಟಾಗುವುದರಿಂದ ನಿಮ್ಮ ಶೃಂಖಲೆಗಳ ವಿನಃ ಬೇರೇನೂ ಕಳೆದುಕೊಳ್ಳುವುದಿಲ್ಲ" ಎಂದು ಕರೆ ನೀಡುತ್ತಾನೆ. ಕಾಲಾಂತರದಲ್ಲಿ ಕಮ್ಯೂನಿಸ್ಟ್ ಪಕ್ಷ ಒಡೆದು ಚೂರಾಯಿತು. ಅದರಂತೆಯೇ ನಾಯಕರಲ್ಲೂ ಬಣಗಳಾದವು, ಅಂದು ಕಾರ್ಮಿಕ ಸಂಘಟನೆ ತನ್ನ ಸತ್ವವನ್ನು ಹಿಂದಿನಂತೆಯೇ ಉಳಿಸಿಕೊಳ್ಳಲು ಹೇಗೆ ಸಾಧ್ಯ? ಹೀಗೆ ಆಚರಣೆಗಳು ಸತ್ವಕಳೆದುಕೊಂಡಾಗ ಚಿಂತನೆಗಳು ಅಪಮೌಲ್ಯಗೊಂಡವು. ಅಂಥ ಸಂದರ್ಭಗಳಲ್ಲಿ ಆಚರಣೆಗಳೂ ಅಪಮೌಲ್ಯಗೊಳ್ಳುವುದಿಲ್ಲವೆ?

ಕಾರ್ಲ್‌ಮಾರ್ಕ್ಸ್ ಕರೆಗೆ ಸ್ಪಂದಿಸುವಂತಹ ಸಂಘಟನೆಗಳು ಬಹುಪಾಲು ಉಳಿದುಕೊಳ್ಳಲಿಲ್ಲ. ಏಕೆಂದರೆ ನಾನಾ ಕಾರ್ಮಿಕ ಸಂಘಗಳು ದೇಶದಲ್ಲಿವೆ. ಅವುಗಳ ಗುರಿ, ನೀತಿಗಳಲ್ಲಿ ವ್ಯತ್ಯಾಸಗಳಿವೆ. ಮೂಲದಲ್ಲೇ ವ್ಯತ್ಯಾಸಗಳಿದ್ದರೆ ಐಕ್ಯತೆ ಹೇಗೆ ಸಾಧ್ಯ? ಎಂಬುದು ಸ್ಪಷ್ಟವಾಗುತ್ತದೆ.ಏನೇ ಬರಲಿ ಒಗ್ಗಟ್ಟಿರಲಿ ಎಂದು ನಡೆಯುವ ಮೇ ದಿನಾಚರಣೆಯು ಮೂಲ ಸ್ವರೂಪದಲ್ಲೇ ಕೊರತೆಯನ್ನು ಕಾಣುತ್ತಿದೆ. ಬೇರೆ ಬೇರೆ ಕಾರ್ಮಿಕ ಸಂಘಗಳು ತಮ್ಮ ವ್ಯಾಪ್ತಿಯ ಕಾರ್ಮಿಕರನ್ನಷ್ಟೇ ಕೇಂದ್ರಬಿಂದುವಾಗಿಟ್ಟುಕೊಂಡರೆ ಜಗತ್ತಿನ ಕಾರ್ಮಿಕರೇ ಒಗ್ಗಟ್ಟಾಗಿ ಎಂಬ ವಾಣಿಗೆ ಮೌಲ್ಯವಾದರೂ ಬರಲು ಹೇಗೆ ಸಾಧ್ಯ. ಆದ್ದರಿಂದ ಈ ಚಳವಳಿಯಲ್ಲಿ ನೈಜಕಳಕಳಿಯ ಕೊರತೆ, ಐಕ್ಯತೆಯ ಅಭಾವಗಳು ತೋರಿಬರುವ ಸಾಧ್ಯತೆಗಳೇ ಹೆಚ್ಚಾಗಿವೆ.

ಮೇ ದಿನಾಚರಣೆಯಂದು ಕೆಂಪುಮಯವಾಗುತ್ತಿದ್ದ ದಾವಣಗೆರೆ ನಗರ, ಕಾರ್ಮಿಕರ ಏಕತೆಯನ್ನು ಪ್ರದರ್ಶಿಸುವ ಸಂದರ್ಭವಾಗಿತ್ತು. ಭಾರಿ ಸಂಖ್ಯೆಯಲ್ಲಿ ಕಾರ್ಮಿಕರು ಮೆರವಣಿಗೆಯಲ್ಲಿ ತೊಡಗಿ ತಮ್ಮ ಸಂಖ್ಯಾಬಲವನ್ನು ತೋರ್ಪಡಿಸುತ್ತಿದ್ದರು. ಈ ಸಂದರ್ಭದಲ್ಲಿ ಕಾರ್ಮಿಕರು ನಾಗರಿಕರ ಸಹಾನುಭೂತಿಗಳಿಸಿದ್ದರೆ? ಶಿಸ್ತು, ನಿಯಮ ಪಾಲನೆಯಲ್ಲಿ ನಗರದ ಜನರನ್ನು ಆಕರ್ಷಿಸಿದ್ದರು. "ಆದರೆ ಮುಷ್ಕರದ ಅವಧಿಯಲ್ಲಿ ಘೋಷಣೆಗಳನ್ನು ಹಾಕುವಾಗ ಮಾಲೀಕವರ್ಗಕ್ಕೆ ಮುಜುಗರವಾಗುವಂತೆ ನಡೆದುಕೊಂಡು ನಾಗರೀಕರ ಸಹಾನುಭೂತಿಗಳಿಸಲಿಲ್ಲ" ಕಾರ್ಮಿಕರ ಹೋರಾಟದ ವಿವಿಧ ಮಜಲುಗಳನ್ನು ಗಮನಿಸಿದಾಗ ಆರ್ಥಿಕ ಬೇಡಿಕೆಗಳಿಗೆ ಹೆಚ್ಚಿನ ಒತ್ತು ನೀಡಿದಂತೆ ಕಂಡುಬರುತ್ತದೆ. ಈ ಸಂದರ್ಭದಲ್ಲಿ ಅವರ ದೃಷ್ಟಿಕೋನವನ್ನು ಬದಲಾಯಿಸಿಕೊಂಡು ತಮ್ಮ ಹಿತಾಸಕ್ತಿಗಳ ಜೊತೆಗೆ ಅಸಂಘಟಿತ ಕಾರ್ಮಿಕರ ಅಭಿವೃದ್ಧಿಯತ್ತ ಆಲೋಚಿಸಿ ಅವರನ್ನು ತಮ್ಮ ಸಂಘಟನೆಗಳತ್ತ ಸೆಳೆಯಬೇಕಾಗಿತ್ತು. ಅಸಂಘಟಿತ ಕಾರ್ಮಿಕರು ಸೌಲಭ್ಯವಂಚಿತರಾಗಿ, ಸಂಘಟನೆಗೆ ಅವಕಾಶಗಳ ಕೊರತೆಯಲ್ಲಿರುತ್ತಾರೆ. ಅಂತಹವರನ್ನು ರಕ್ಷಿಸಿ, ಪ್ರೋತ್ಸಾಹಿಸಬೇಕಿತ್ತು. ಖ್ಯಾತ ವಿಚಾರವಾದಿ ಡಾ.ಜಿ.ರಾಮಕೃಷ್ಣ ಅವರು, ಕಾರ್ಮಿಕರ ಪರವಾಗಿ ಸಾಮಾಜಿಕ ಬದಲಾವಣೆ ಮಾಡುವುದು ಮೇ ದಿನಾಚರಣೆಯ ಗುರಿ[***] ಎಂದು ಎಚ್ಚರಿಸಿದರೂ ಆ ಪ್ರಯತ್ನ ಆಗಲಿಲ್ಲ. ಬಲದಿಂದ ಅಸ್ತಿತ್ವದಲ್ಲಿರುವ ಸಾಮಾಜಿಕ ಸ್ಥಿತಿಯನ್ನು ಬಲಪ್ರಯೋಗದ ಮೂಲಕ ನಿರ್ಮೂಲನೆ ಮಾಡಲು, ಬಲವನ್ನು ಕಮ್ಯುನಿಸ್ಟರು ಒಪ್ಪಿಕೊಳ್ಳುತ್ತಾರೆ. ಹೀಗೆ ಬಲ ಬಳಕೆಗೆ ಮುಂದಾದಾಗ ನಗರದ ಕಾರ್ಮಿಕರು ನಾಗರೀಕರ ಸಹಾನುಭೂತಿಗಳಿಸಲಿಲ್ಲ ಎಂಬುದು ಕ್ಷೇತ್ರಕಾರ್ಯ ಹಾಗೂ ಸಂದರ್ಶನದಿಂದ ಸ್ಪಷ್ಟವಾಗುತ್ತದೆ. ಕಮ್ಯುನಿಸ್ಟ್ ಸಂಘಟನೆ ೧೯೭೦ರ ನಂತರ ಬಲಗೊಂಡು ರಾಜಕೀಯ ಅಧಿಕಾರವನ್ನು ಪಡೆದುಕೊಂಡಾಗ ಆಚರಣೆಗಳು ಬಲಗೊಂಡವು, ಹಾಗೆಯೇ ಆರ್ಥಿಕ ಬೇಡಿಕೆಗಳಲ್ಲಿ ಹಲವು ಸಫಲವೂ ಆದವು.

೧೯೮೦ರ ದಶಕದಲ್ಲಿ ಖಾಸಗೀಕರಣ, ಜಾಗತೀಕರಣ, ಉದಾರೀಕರಣದ ಪ್ರವಾಹಕ್ಕೆ ಒಳಗಾಗಿ ಉದ್ಯೋಗ ಸೃಷ್ಟಿಯಲ್ಲಿ ಮೇಲ್ಪಂಕ್ತಿಯಲ್ಲಿದ್ದ ನಗರದ ಬಹುತೇಕ ಹತ್ತಿ ಗಿರಣಿಗಳು ಅವನತಿಯ ಸುಳಿಗೆ ಸಿಲುಕಿದವು. ಸಾವಿರಾರು ಕಾರ್ಮಿಕರು ಉದ್ಯೋಗ ಕಳೆದುಕೊಂಡು ತುತ್ತಿನಚೀಲ ತುಂಬಿಕೊಳ್ಳಲು ಅನ್ಯ ಉದ್ಯೋಗದತ್ತ ಪಯಣಿಸಬೇಕಾಯಿತು.

ಇಂತಹ ಕ್ಲಿಷ್ಟ ಪರಿಸ್ಥಿತಿ ಎದುರಿಸಲು ಮೇ ದಿನಾಚರಣೆಯಂತಹ ಸಂದರ್ಭಗಳು ಫಲಕಾರಿಯಾಗಲಿಲ್ಲ. ಕಾರ್ಮಿಕರು ತಮ್ಮ ಆರ್ಥಿಕ ಬೇಡಿಕೆಗಳನ್ನು ಮುಂದಿಟ್ಟು ಹೋರಾಡುವುದು ಅನಿವಾರ್ಯ,

ಆದರೆ ಅವರಿಗೆ ತಮ್ಮ ಕರ್ತವ್ಯ ಪ್ರಜ್ಞೆ ಮೂಡಿಸುವಂತ ಕಾರ್ಯಾಗಾರವಾಗಲಿ, ತರಬೇತಿಯಾಗಲಿ ಲಭ್ಯವಾಗಲಿಲ್ಲ. ಕಾರ್ಮಿಕರು ರಾಷ್ಟ್ರದ ಆರ್ಥಿಕ ಪ್ರಗತಿಯ ಹಿನ್ನೆಲೆಯಲ್ಲಿ ೮ ಗಂಟೆ ಕೆಲಸದ ಅವಧಿಯನ್ನು ಪರಿಪೂರ್ಣವಾಗಿ ಉತ್ಪಾದನೆಗೆ ಬಳಸಿಕೊಳ್ಳುತ್ತಿದ್ದರೇ? ಎಂದು ಆಡಳಿತ ವರ್ಗವನ್ನು ಪ್ರಶ್ನಿಸಿದಾಗ ದೊರೆಯುವ ಉತ್ತರದಲ್ಲಿ ಪರಿಪೂರ್ಣತೆ ಕಂಡುಬರುವುದಿಲ್ಲ. ಆದ್ದರಿಂದ ಕರ್ತವ್ಯ ಪ್ರಜ್ಞೆ ಮೂಡಿಸುವ ಕಾರ್ಯವೂ ಸಹಾ ಮುಂದಿನ ಹೋರಾಟಗಳಿಗೆ ರೂಪರೇಖೆಗಳನ್ನು ನಿರ್ಧರಿಸುವ ಸಂದರ್ಭದಲ್ಲಿ ಸೇರ್ಪಡೆಯಾಗಬೇಕಿದೆ. ಯಾವುದೇ ಚಳವಳಿಗೆ ಚಿಂತನೆಯ ಮೌಲ್ಯಗಳು ಬೆನ್ನೆಲುಬಿದ್ದಂತೆ. ಅಲ್ಲಿ ಚಿಂತನೆಗಳು ಅಪಮೌಲ್ಯವಾಗದಂತೆ ಚಳವಳಿಯನ್ನು ರೂಪಿಸಬೇಕು. ಗುಣಮಟ್ಟದ ಮೌಲ್ಯಗಳ ಚಳವಳಿಯನ್ನು ನಡೆಸಿದರೆ ಇಂತಹ ಕೊರತೆಗಳುಂಟಾಗದಂತೆ ಮುನ್ನಡೆಯಬಹುದು. ಏಕೆಂದರೆ ಮಂಕಾದ ಉದ್ಯೋಗಾವಕಾಶಗಳ ಸ್ಥಿತಿಯಲ್ಲಿ, ಹಾಲಿ ಇರುವ ಉದ್ಯೋಗವನ್ನೇ ಕಳೆದುಕೊಳ್ಳುವಂತಹ ಸಂದರ್ಭಗಳು ಬಂದಿರುವಾಗ ಮುಂದಿನ ದಿನಗಳನ್ನು ಜವಾಬ್ದಾರಿಯಿಂದ ಎದುರಿಸಬೇಕಾಗಿದೆ. ಖಾಸಗೀಕರಣದಿಂದ ವಿದೇಶಿ ಬಂಡವಾಳಕ್ಕೆ ಆಸ್ಪದವಾಗುತ್ತಿದ್ದು ಶೋಷಣೆ ಹೆಚ್ಚಾಗುವ ಸಾಧ್ಯತೆಗಳಿವೆ. ಕಂಪ್ಯೂಟರ್‌ಗಳ ಬಳಕೆಯಿಂದ ಉದ್ಯೋಗ ಸೃಷ್ಟಿಯಲ್ಲಿ ಇಳಿಮುಖವಾಗಿ ದುಡಿಯಲು ಶಕ್ತಿ ಇರುವ ಬಾಹುಗಳು ನಿರುದ್ಯೋಗ ಸ್ಥಿತಿ ಎದುರಿಸುವ ಸಾಧ್ಯತೆಗಳು ಇರುವಾಗ ಆಚರಣೆಗಳ ಮುಂದೆ ದೊಡ್ಡ ಸವಾಲುಗಳೇ ಇವೆ. ಈ ಸವಾಲುಗಳ ಸಂದರ್ಭದಲ್ಲಿ ದುಡಿಯುವ ವರ್ಗ ಹೋರಾಟಗಳಿಂದಲೇ ತನ್ನ ಹಕ್ಕುಗಳನ್ನು ಪಡೆದುಕೊಂಡಿದ್ದು ಸತ್ಯ. ಆದರೆ ಇಂದಿನ ಪರಿಸ್ಥಿತಿಯಲ್ಲಿ ಹೋರಾಟದಿಂದ ಏನನ್ನಾದರೂ ಪಡೆದುಕೊಳ್ಳುತ್ತೇವೆ ಎಂಬ ನಂಬಿಕೆ ಹೋಗುತ್ತಿದೆ. ಇಂಥ ಸವಾಲುಗಳನ್ನು ಎದುರಿಸಲು ಮೌಲ್ಯಗಳ ಮೂಲದಲ್ಲಿ ಹೋರಾಟದ ನೆಲೆಗಳನ್ನು ಕಂಡುಕೊಳ್ಳಬೇಕಾಗಿದೆ. ಇಂದಿನ ಸ್ಪರ್ಧಾತ್ಮಕ ಪ್ರಪಂಚದಲ್ಲಿ ಕಾರ್ಮಿಕರು ಮುಷ್ಕರಗಳಿಗೆ ವಿದಾಯ ಹೇಳುವಂತಹ ಸಂದರ್ಭ ನಿರ್ಮಾಣವಾಗಿದೆ. ಸಂಧಾನಗಳ ಮೂಲಕ ಸಮಸ್ಯೆ ಪರಿಹಾರಕ್ಕೆ ಯತ್ನಿಸಬೇಕಾಗಿದೆ. ಮಾಲೀಕರೂ ಸಹ ತಮ್ಮ ಲಾಭದಲ್ಲಿ ಉತ್ತಮ ಕೂಲಿನೀಡಿ ಅವರ ಪ್ರೀತಿ, ವಾತ್ಸಲ್ಯಗಳಿಸಿ ಬಾಂಧವ್ಯ ವೃದ್ಧಿಸುವ ಮೂಲಕ ಕೈಗಾರಿಕಾರಂಗವನ್ನು ಅಭಿವೃದ್ಧಿಗೊಳಿಸಬೇಕಾಗಿದೆ.

೯.೨. ಕಾರ್ಮಿಕ ಸಮ್ಮೇಳನಗಳು

ರಾಜಕೀಯ, ಸಮಾಜ, ಆರ್ಥಿಕ, ಶೈಕ್ಷಣಿಕ ಕ್ಷೇತ್ರಗಳಲ್ಲಿ ಸಮ್ಮೇಳನಗಳು ನಡೆಯುತ್ತವೆ. ವಿವಿಧ ಕ್ಷೇತ್ರಗಳಲ್ಲಿನ ಪ್ರಗತಿಯ ಹಿನ್ನೆಲೆಯಲ್ಲಿ, ಪ್ರಪಂಚದ ಬಹುತೇಕ ರಾಷ್ಟ್ರಗಳಲ್ಲಿ ಸಮ್ಮೇಳನಗಳನ್ನು ನಡೆಸುವುದು ರೂಢಿಯಲ್ಲಿದೆ. ವೇದಗಳ ಕಾಲದಿಂದ ಆರಂಭಗೊಂಡು, ಜೈನ, ಬೌದ್ಧಧರ್ಮಗಳ ಕಾಲದಲ್ಲಿ ಮುನ್ನಡೆದು, ಇಂದಿನವರೆಗೂ ಕಲೆತು ಸಂಭಾಷಿಸಿ, ಚರ್ಚಿಸಿರುವ ಅದೆಷ್ಟೋ ಸಮ್ಮೇಳನಗಳ ಚರಿತ್ರೆಯೆ ಇದೆ. ಆಧುನಿಕ ಕರ್ನಾಟಕದಲ್ಲಿ ಸರ್.ಎಂ. ವಿಶ್ವೇಶ್ವರಯ್ಯನವರು ಪ್ರಗತಿಗೆ ಸಂಬಂಧಿಸಿದ ಆರ್ಥಿಕಾಭಿವೃದ್ಧಿ ಸಮ್ಮೇಳನಗಳನ್ನು ನಡೆಸಿ, ಚಿಂತಿಸಿ ಕ್ರಮಕೈಗೊಂಡಿದ್ದಾರೆ. ಈ ಎಲ್ಲ ಸಮ್ಮೇಳನಗಳು ಆಧುನಿಕ ಕಾಲದಲ್ಲಿ ಮಕ್ಕಳ, ರೈತರ, ಆರೋಗ್ಯ, ರಾಜಕೀಯ ಪಕ್ಷಗಳ, ಜನಸಂಖ್ಯೆ, ಆರ್ಥಿಕಾಭಿವೃದ್ಧಿ ಮುಂತಾದವುಗಳ ದಾರಿಯಲ್ಲಿ ಸಾಗಲು ಯತ್ನಿಸುತ್ತಿವೆ. ಆದರೆ ಅವು ಗುಣಮಟ್ಟ ಕಾಯ್ದುಕೊಳ್ಳುವಲ್ಲಿ ಯಶಸ್ವಿಯಾಗುತ್ತಿಲ್ಲ.

ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆ (ಐ.ಎಲ್.ಓ.) ೧೯೧೯ರಲ್ಲಿ ಜನ್ಮವೆತ್ತಿದ ನಂತರ ಅಂತರರಾಷ್ಟ್ರೀಯ ಕಾರ್ಮಿಕ ಸಮ್ಮೇಳನಗಳು ಉದಯವಾಗಿ, ಅವು ರಾಷ್ಟ್ರಮಟ್ಟಕ್ಕೂ ಪ್ರವೇಶ ಮಾಡಿದವು. ಭಾರತೀಯ ಕಾರ್ಮಿಕರ ಸಮ್ಮೇಳನದ ಮೊದಲ ಸಮ್ಮೇಳನ ೧೯೪೨ರ ಆಗಸ್ಟ್ ೨ರಂದು ನವದೆಹಲಿಯಲ್ಲಿ ಸಮಾವೇಶಗೊಂಡಿತು. ಅಂದಿನಿಂದ ಕಾರ್ಮಿಕ ಸಮಸ್ಯೆಗಳ ಬಗೆಗೆ, ರಚನಾತ್ಮಕ ಚರ್ಚೆಗೆ ಅವು ವೇದಿಕೆಯಾದವು. ಈ ಸಂಬಂಧ ದಾವಣಗೆರೆ ನಗರದ ಕಾರ್ಮಿಕರೂ ಸಹಾ ಹಿಂದೆ ಬೀಳದೆ ಸಮ್ಮೇಳನ ನಡೆಸಿರುವುದು ಕಂಡುಬಂದಿದೆ.

ಆಯಾ ಕ್ಷೇತ್ರಗಳಲ್ಲಿ ಕೆಲಸ ಮಾಡಿ ನೈಪುಣ್ಯತೆ ಪಡೆದವರು ಸಮಾಲೋಚನೆ ನಡೆಸಿ, ಹಾಲಿ ಇರುವ ಸ್ಥಿತಿಗತಿಗಳನ್ನು ಸುಧಾರಿಸುವ, ಪ್ರಗತಿಯನ್ನು ಬಿಂಬಿಸುವ ಗುರಿಗಳನ್ನು ಸಮ್ಮೇಳನಗಳು ಹೊಂದಿರುತ್ತವೆ. ಈ ಸಂದರ್ಭದಲ್ಲಿ ಚಿಂತನಾಗೋಷ್ಠಿ, ವಿಶೇಷ ಉಪನ್ಯಾಸ, ಸ್ಮರಣ ಸಂಚಿಕೆ ಬಿಡುಗಡೆ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ. ಈ ಎಲ್ಲಾ ಕಾರ್ಯಕ್ರಮಗಳ ಹಿನ್ನೆಲೆಯಲ್ಲಿ ಸಂಬಂಧಪಟ್ಟ ಸಮುದಾಯವನ್ನು ಜಾಗೃತಿಗೊಳಿಸಲು ಸಮಾಲೋಚನೆಗಳು ನಡೆಯುತ್ತವೆ.

ಕಾರ್ಮಿಕರು ತಮ್ಮ ಚಳವಳಿ ಸಂದರ್ಭಗಳಲ್ಲಿ ಅನೇಕ ಸಮ್ಮೇಳನಗಳನ್ನು ನಡೆಸಿರುತ್ತಾರೆ. ದಾವಣಗೆರೆ ನಗರದ ಕಾರ್ಮಿಕರೂ ಸಹ ಅಂದಿನ ಬಂಡವಾಳಶಾಹಿ ವ್ಯವಸ್ಥೆಗೆ ಅಚ್ಚರಿ ಮೂಡಿಸುವಂತಹ ಸಮ್ಮೇಳನಗಳನ್ನು ನಡೆಸಿದ್ದಾರೆ. ೧೯೭೦ರ ದಶಕವು ನಗರದ ಕಾರ್ಮಿಕರ ಚಳವಳಿ ಚರಿತ್ರೆಯಲ್ಲಿ ಸಮ್ಮೇಳನಗಳ ದಶಕವೇ ಆಗಿದೆ. ಈ ಕಾಲವು ಕಾರ್ಮಿಕ ಸಂಘಟನೆಯ ಚೈತನ್ಯ ಕಾಲವಾಗಿದ್ದು, ೪ ಸಮ್ಮೇಳನಗಳನ್ನು ನಡೆಸಿ, ಸಕ್ರೀಯವಾಗಿ ಪಾಲ್ಗೊಂಡು ಆ ಮೂಲಕ ತಮಗೆ ನ್ಯಾಯಬದ್ಧವಾಗಿ ಸಿಗಬೇಕಾದ ಹಕ್ಕುಗಳನ್ನು ಪಡೆದುಕೊಳ್ಳಲು ಮಾಡಿದ ಪ್ರಯತ್ನವನ್ನು ಕಾರ್ಮಿಕ ಸಮ್ಮೇಳನಗಳೊಂದಿಗೆ ವಿವೇಚಿಸಲಾಗಿದೆ. ಇವರು ಹಮ್ಮಿಕೊಂಡ ೪ ಸಮ್ಮೇಳನಗಳಲ್ಲಿ ದಾವಣಗೆರೆ ಹತ್ತಿಗಿರಣಿ ಕಾರ್ಮಿಕರ ಪ್ರಥಮ ಸಮ್ಮೇಳನ (೧೯೭೦) ಹಾಗೂ ಇಲ್ಲೇ ನಡೆದ ರಾಜ್ಯಮಟ್ಟದ ಹತ್ತಿಗಿರಣಿ ಕಾರ್ಮಿಕರ ಸಮ್ಮೇಳನಗಳು (೧೯೭೪) ತಮ್ಮ ಗುರಿ ಸಾಧಿಸುವಲ್ಲಿ ಗಮನಾರ್ಹ ಯತ್ನ ಮಾಡಿವೆ.

ಚಿಂತಕರ ಚಾವಡಿಗಳಾದ ಕಾರ್ಮಿಕ ಸಮ್ಮೇಳನಗಳು ದಾವಣಗೆರೆ ನಗರದಲ್ಲೇ ಹೆಚ್ಚಿನ ಸಂಖ್ಯೆಯಲ್ಲಿ ನಡೆಯಲು ಕಾರಣಗಳೇನು? ಇವುಗಳ ಧ್ಯೇಯಗಳೇನು? ಸಮ್ಮೇಳನದ ತೀರ್ಮಾನಗಳು ಕಾರ್ಮಿಕರನ್ನು ರಕ್ಷಿಸಿದವೇ? ಅಥವಾ ಇವು ಕಣ್ಣೊರೆಸುವ ಸಂದರ್ಭಗಳೇ? ಇವುಗಳ ಸಾಧಕ-ಭಾದಕಗಳೇನು? ಎಂದು ಚರ್ಚಿಸುವ ಆಶಯದೊಂದಿಗೆ ಈ ಸಮ್ಮೇಳನಗಳನ್ನು ಚರ್ಚಿಸುವ ಯತ್ನ ಮಾಡಲಾಗಿದೆ. ದಾವಣಗೆರೆ ಹತ್ತಿಗಿರಣಿ ಕಾರ್ಮಿಕರು ೧೯೭೦ರ ದಶಕದಲ್ಲಿ ನಡೆಸಿದ ಹತ್ತಿಗಿರಣಿ ಕಾರ್ಮಿಕರ ಸಮ್ಮೇಳನಗಳೆಂದರೆ,

೧. ನಗರದ ಪ್ರಥಮ ಹತ್ತಿಗಿರಣಿ ಕಾರ್ಮಿಕರ ಸಮ್ಮೇಳನ-೧೯೭೦

೨. ರಾಜ್ಯ ಹತ್ತಿಗಿರಣಿ ಕಾರ್ಮಿಕರ ಪ್ರಥಮ ಸಮ್ಮೇಳನ-೧೯೭೪

೩. ದಾವಣಗೆರೆ ಹತ್ತಿಗಿರಣಿ ಕಾರ್ಮಿಕರ ಸಮ್ಮೇಳನ-೧೯೭೬

೪. ಎ.ಐ.ಟಿ.ಯು.ಸಿ. ೪ನೇ ಸಮ್ಮೇಳನ-ದಾವಣಗೆರೆ-೧೯೭೯

ಹತ್ತಿಗಿರಣಿ ಕಾರ್ಮಿಕರ ಪ್ರಥಮ ಸಮ್ಮೇಳನ (೩-೫-೧೯೭೦)

ದಾವಣಗೆರೆ ಹತ್ತಿಗಿರಣಿಗಳು ಅಭಿವೃದ್ಧಿ ಹೊಂದುತ್ತಿದ್ದಂತೆ ಅಲ್ಲಿ ದುಡಿಯುವ ಕಾರ್ಮಿಕರ ಸಂಖ್ಯೆಯೂ ಹೆಚ್ಚಾಯಿತು. ಈ ಸಂದರ್ಭದಲ್ಲಿ ಮಾಲೀಕರಿಂದ ಕಾರ್ಮಿಕರ ಶೋಷಣೆ ಹಾಗೂ ಅಮಾನವೀಯತೆ ಹೆಚ್ಚಾಗಿ ಎರಡೂ ವರ್ಗಗಳ ನಡುವಿನ ಕಂದಕ ಹಿರಿದಾಗಿ ಅಸಮಧಾನದ ಹೊಗೆಯಾಡಿತು. ಇದೇ ಕಾಲಕ್ಕೆ ಮಾರ್ಕ್ಸ್‌ನ ತತ್ವಗಳು ಈ ಭಾಗದ ಕಾರ್ಮಿಕರನ್ನು ಆಕರ್ಷಿಸಿದವು. ಈ ವಾತಾವರಣದಲ್ಲಿ ಕಾರ್ಮಿಕರು ದಿ. ೧-೫-೧೯೭೦ರಲ್ಲಿ ದಾವಣಗೆರೆ ನಗರದ ಎಲ್ಲಾ ಗಿರಣಿ ಕಾರ್ಮಿಕರು ಸಮ್ಮೇಳನಕ್ಕೆ ಏರ್ಪಾಡು ಮಾಡುವ ಪ್ರಯತ್ನದ ಮೊದಲ ಹೆಜ್ಜೆಯನ್ನಿಟ್ಟರು.

ದಾವಣಗೆರೆ ನಗರದ ವಿವಿಧ ಹತ್ತಿಗಿರಣಿಗಳಲ್ಲಿ ಸಮಾನ ಕೆಲಸ ಮಾಡುವ ಕಾರ್ಮಿಕರಲ್ಲಿ 'ವೇತನ ತಾರತಮ್ಯವಿತ್ತು'. ಈ ವೇತನ ತಾರತಮ್ಯ ನಿವಾರಿಸಿ ಎಲ್ಲಾ ಗಿರಣಿಗಳಲ್ಲೂ ಸಮಾನ ಕೆಲಸಕ್ಕೆ ಸಮಾನ ವೇತನ ಪಡೆಯುವ ಧ್ಯೇಯವನ್ನಿಟ್ಟುಕೊಂಡು ಸಮ್ಮೇಳನ ಆಯೋಜಿಸಲಾಗಿತ್ತು. ಆದರೆ ಸಮ್ಮೇಳನ ನಡೆಯಬೇಕಾಗಿದ್ದ ದಿನವೇ ಕಾರ್ಮಿಕ ಸಂಘಟನೆಯ ಮುಖಂಡರಾಗಿದ್ದ ಸುರೇಶ್, ಶೇಖರಪ್ಪ, ಪಂಪಾಪತಿಯವರ ಮೇಲೆ ಮಾರಣಾಂತಿಕ ಹಲ್ಲೆ ನಡೆದು ಸುರೇಶ್, ಶೇಖರಪ್ಪನವರ ಹತ್ಯೆಯಾಗಿ, ಪಂಪಾಪತಿಯವರು ಆ ಘಟನೆಯಲ್ಲಿ ಬದುಕುಳಿದರು. ಈ ಸಮ್ಮೇಳನಗಳ ಆರಂಭದಲ್ಲೇ ನಡೆದ ಇಂಥ ಗೊಂದಲಗಳು, ಅನಾಹುತ, ಸಾವು-ನೋವುಗಳು ಕಾರ್ಮಿಕರ ಸಂಘಟನೆಯನ್ನು ಧೃತಿಗೆಡಿಸಲಿಲ್ಲ. ಈ ಎಲ್ಲಾ ದುರ್ಘಟನೆಗಳ ನಡುವೆಯೂ ಹುಮ್ಮಸ್ಸಿನಿಂದ ಪಂಪಾಪತಿಯವರು ದಿ. ೩-೫-೧೯೭೦ರಂದು ನಗರದ ಹತ್ತಿಗಿರಣಿ ಕಾರ್ಮಿಕರ ಪ್ರಥಮ ಸಮ್ಮೇಳನ ನಡೆಸಿದರು.

ಮೊದಲ ಸಮ್ಮೇಳನವನ್ನು ಸಿ.ಪಿ.ಐ. ನ್ಯಾಷನಲ್ ಕೌನ್ಸಿಲ್‌ನ ಪ್ರಧಾನಕಾರ್ಯದರ್ಶಿ ಶ್ರೀ ಎಸ್.ವಿ. ಘಾಟೆಯವರು ಬೀರಲಿಂಗೇಶ್ವರ ಹಾಸ್ಟೆಲ್‌ನಲ್ಲಿ ಉದ್ಘಾಟನೆ ಮಾಡಿದರು.[೧೬] ಸಮ್ಮೇಳನದ ದಿನ ಕೇಂದ್ರದ ಕಾರ್ಮಿಕರ ನಾಯಕರಾದ ಎಸ್.ಎಸ್.ಮೀರಜ್‌ಕರ್ ಮತ್ತು ಕಾಂ.ಪಾರ್ವತಿ ಕೃಷ್ಣನ್ ಅವರನ್ನು ಕರೆಸಿ, ನಗರದ ಕಾರ್ಮಿಕ ವರ್ಗಕ್ಕೆ ಸೂಕ್ತ ಮಾರ್ಗದರ್ಶನದ ಸದವಕಾಶ ಕಲ್ಪಿಸಿಕೊಟ್ಟರು.[೧೭]

ಸಮ್ಮೇಳನದಲ್ಲಿ 'ವೇತನ ತಾರತಮ್ಯ ನಿವಾರಣೆಯ' ಕುರಿತು ಬೇಡಿಕೆ ಇಡುವ ತೀರ್ಮಾನ ತೆಗೆದುಕೊಳ್ಳಲಾಯಿತು. ಅಂತೆಯೇ ಮಾಲೀಕರಲ್ಲಿ ಇಟ್ಟ ಈ ಬೇಡಿಕೆಯು ತಿರಸ್ಕೃತವಾಯಿತು. ಬೇಡಿಕೆ ಈಡೇರದಿದ್ದಾಗ ಗಿರಣಿಗಳ ಮುಷ್ಕರಕ್ಕೆ ಕಾರ್ಮಿಕರು ದೃಢವಾದ ಹೆಜ್ಜೆಗಳನ್ನಿಟ್ಟಾಗ ಚಳವಳಿ ಯಶಸ್ವಿಯಾಯಿತು. ೧೯೬೯ರಲ್ಲಿ ಗಣೇಶ ಮಿಲ್ಲಿನಲ್ಲಿ ಮೂರು ವರ್ಷ ಒಪ್ಪಂದವಾಗಿದ್ದನ್ನು ಮಾರ್ಚ್೬, ೧೯೭೦ರಲ್ಲಿ ಹಾಗೂ ಸಿದ್ದೇಶ್ವರ ಮಿಲ್ಲಿನಲ್ಲಿ ಮೂರು ವರ್ಷ ಒಪ್ಪಂದವಾಗಿದ್ದನ್ನು ಮುರಿದು, ಇಡೀ ನಗರದ ಹತ್ತಿಗರಣಿ ಕಾರ್ಮಿಕರಿಗೆ ೩೦ ರಿಂದ ೪೦ ರೂಪಾಯಿವರೆಗೆ ಸಂಬಳ ಹೆಚ್ಚಿಸಿದರು.[೧೮]

ಪ್ರಪ್ರಥಮವಾಗಿ ಸಂಘಟಿಸಿದ ಕಾರ್ಮಿಕ ಸಮ್ಮೇಳನವು ಕಾರ್ಮಿಕರ ಜಾಗೃತಿಯ ದೃಷ್ಟಿಯಿಂದ, ಆರ್ಥಿಕ ಸೌಲಭ್ಯ ಪಡೆಯುವ ದೃಷ್ಟಿಯಿಂದ ಒಂದು ಮೈಲುಗಲ್ಲಾಯಿತು. ಸಮ್ಮೇಳನವು ತಾತ್ಕಾಲಿಕ ಸಂಘಟನೆಯಾಗದೆ ಶಾಶ್ವತ ಪರಿಣಾಮಗಳನ್ನು ಬೀರಿತು. ಇಂಥ ಆತ್ಮವಿಶ್ವಾಸದ ದೃಢ ಹೆಜ್ಜೆ ಇಡಲು

ಕಾರ್ಮಿಕ ಸಂಘ ಮತ್ತು ಅದರ ನಾಯಕ ಪಂಪಾಪತಿಯವರ ಪ್ರಯತ್ನವೆ ಕಾರಣ ಎಂಬುದು ಸತ್ಯಸಂಗತಿ. ಸಮ್ಮೇಳನವು ಪ್ರತ್ಯಕ್ಷ ಪರಿಣಾಮದ ಜೊತೆಗೆ ಪರೋಕ್ಷ ಪರಿಣಾಮ ಬೀರಿದ್ದು ಹೆಚ್ಚು. ಅದು ಶ್ರೀ. ಪಂಪಾಪತಿಯವರ ವ್ಯಕ್ತಿತ್ವ ವಿಕಸನ ಮತ್ತು ಕಮ್ಯೂನಿಸ್ಟ್ ಪಕ್ಷದ ಅಭಿವೃದ್ಧಿಯ ಏಣಿ ಏರಲು ಮೆಟ್ಟಿಲಾಯಿತು. ರಾಜ್ಯದ ಬೇರಾವುದೇ ಹತ್ತಿಗಿರಣಿ ಕಾರ್ಮಿಕರ ಸಮ್ಮೇಳನಕ್ಕಿಂತ ಸಾಧನೆಯ ದೃಷ್ಟಿಯಿಂದ ಈ ಸಮ್ಮೇಳನವು ಕಾರ್ಮಿಕರ ಚರಿತ್ರೆಯಲ್ಲಿಯೇ ಒಂದು ಮುಖ್ಯ ಘಟ್ಟವಾಗಿದೆ.

ರಾಜ್ಯದ ಹತ್ತಿಗಿರಣಿ ಕಾರ್ಮಿಕರ ಪ್ರಥಮ ಸಮ್ಮೇಳನ (೧೩, ೧೪, ಮತ್ತು ೧೫, ಏಪ್ರಿಲ್ ೧೯೭೪)

ನಗರ ಮಟ್ಟದ ಪ್ರಥಮ ಗಿರಣಿ ಕಾರ್ಮಿಕರ ಸಮ್ಮೇಳನ ನಡೆಸಿ ಯಶಸ್ಸಿನ ಹೆಜ್ಜೆಯನ್ನಿಟ್ಟ ದಾವಣಗೆರೆ ಹತ್ತಿಗಿರಣಿ ಕಾರ್ಮಿಕ ಸಂಘಟನೆ, ಧೈರ್ಯದಿಂದ ಮತ್ತೊಂದು ಹೆಜ್ಜೆಯನ್ನಿಡಲು ತೀರ್ಮಾನಿಸಿತು. ನಗರದ ಗಿರಣಿಗಳಲ್ಲಿನ ವೇತನತಾರತಮ್ಯದಂತೆಯೇ ಕರ್ನಾಟಕ ರಾಜ್ಯದ ಹತ್ತಿಗಿರಣಿಗಳಲ್ಲಿ ಒಂದೇ ಕೆಲಸಕ್ಕೆ ಬೇರೆ ಬೇರೆ ರೀತಿಯ ವೇತನವಿತ್ತು. ಈ ಹಿನ್ನೆಲೆಯಲ್ಲಿ ಕಾರ್ಮಿಕ ಸಂಘಟನೆ ಈ ವೇತನ ವ್ಯತ್ಯಾಸ ಸರಿಪಡಿಸಲು ರಾಜ್ಯಮಟ್ಟದ ಗಿರಣಿ ಕಾರ್ಮಿಕರ ಸಮ್ಮೇಳನವನ್ನು ದಾವಣಗೆರೆಯಲ್ಲಿ ನಡೆಸಿತು.

ಹೀಗೆ ಒಂದೇ ಕೆಲಸಕ್ಕಿರುವ ವೇತನ ತಾರತಮ್ಯವನ್ನು ಬದಲಾಯಿಸಬೇಕು, ತಮಿಳುನಾಡಿನ ಕಾರ್ಮಿಕರ ವೇತನಕ್ಕೆ ಸಮಾನ ವೇತನ ನೀಡಬೇಕೆಂಬ ಧ್ಯೇಯದೊಂದಿಗೆ ಮೂರು ದಿನಗಳ ಕಾಲ (೧೩,೧೪,೧೫ ಏಪ್ರಿಲ್ ೧೯೭೪) ಸಮ್ಮೇಳನಕ್ಕೆ ಏರ್ಪಾಡಾಯಿತು. ಸಮ್ಮೇಳನಕ್ಕಾಗುವ ವೆಚ್ಚವನ್ನು ನಗರದ ಕಾರ್ಮಿಕರು ಭರಿಸಿದ್ದು ಸ್ಮರಣಾರ್ಹ ಸಂಗತಿಯಾಗಿದೆ.

ಕರ್ನಾಟಕ ರಾಜ್ಯದ ೩೧ ಹತ್ತಿಗಿರಣಿಗಳ ಪ್ರತಿನಿಧಿಗಳು ಈ ಸಮ್ಮೇಳನದಲ್ಲಿ ಪಾಲ್ಗೊಳ್ಳುವಂತೆ ಯೋಜನೆ ಸಿದ್ಧಪಡಿಸಲಾಯಿತು. ಈ ಸಂದರ್ಭದಲ್ಲಿ ಸಂಘಟನೆಗಾಗಿ ಪಂಪಾಪತಿಯವರು ಶ್ರೀ. ಎಂ.ಸಿ. ನರಸಿಂಹನ್ (ರಾಜ್ಯ ಕಾರ್ಮಿಕ ಮುಖಂಡರು) ಅವರ ಸಲಹೆಯಂತೆ ರಾಜ್ಯದ ೩೧ ಮಿಲ್ಲುಗಳಿಗೂ ಭೇಟಿಯಿತ್ತರು.[೧೯] ಇಲ್ಲಿ ದಾವಣಗೆರೆ ಕಾರ್ಮಿಕ ಸಂಘಟನೆ ತನ್ನ ಬಾಹುಳ್ಯವನ್ನು ರಾಜ್ಯಮಟ್ಟಕ್ಕೆ ವಿಸ್ತರಿಸುತ್ತಿರುವುದು ಗೋಚರಿಸುತ್ತದೆ. ಮಾನವರು ತಮ್ಮ ಇತಿಹಾಸವನ್ನು ತಾವೇ ನಿರ್ಮಿಸುತ್ತಾರೆ ಎಂಬ ಕಾರ್ಲ್‌ಮಾರ್ಕ್ಸ್‌ನ ನಂಬಿಕೆ ಇಲ್ಲಿ ಸ್ಪಷ್ಟಗೊಳ್ಳುತ್ತದೆ. ಸಮ್ಮೇಳನಕ್ಕೆ ಎ.ಐ.ಟಿ.ಯು.ಸಿ. ಅಧ್ಯಕ್ಷರಾಗಿದ್ದ ಎಸ್.ಎ. ಡಾಂಗೆಯವರು ಆಗಮಿಸಿ ದೇಶದ ಹತ್ತಿಗಿರಣಿ ಕಾರ್ಮಿಕರ ಪರಿಸ್ಥಿತಿಯನ್ನು ಸವಿವರವಾಗಿ ತಿಳಿಸಿದರು.[೨೦]

ಸಮ್ಮೇಳನದ ತೀರ್ಮಾನಗಳು

೧. ರಾಜ್ಯದ ಎಲ್ಲಾ ಗಿರಣಿ ಕಾರ್ಮಿಕರಿಗೂ ೨೦೦ರೂ ತಾತ್ಕಾಲಿಕ ಪರಿಹಾರ ನೀಡಬೇಕು.

೨. ತಮಿಳುನಾಡಿನ ಕಾರ್ಮಿಕರ ವೇತನಕ್ಕೆ ಸಮಾನ ವೇತನ ನೀಡಬೇಕು.

ಮೇಲ್ಕಂಡ ತೀರ್ಮಾನಗಳನ್ನು ಜಾರಿಗೊಳಿಸುವಲ್ಲಿ ಹತ್ತಿಗಿರಣಿಗಳ ಆಡಳಿತವರ್ಗ ವಿಫಲವಾದಾಗ ಮೇ ೬, ೧೯೭೪ರಂದು ರಾಜ್ಯದ ಎಲ್ಲಾ ಹತ್ತಿ ಗಿರಣಿಗಳಲ್ಲಿ ಮುಷ್ಕರ ನಡೆಸಲು ನಿರ್ಧರಿಸಿದರು. ಇಂಥ

ಕಠಿಣ ಸಂದರ್ಭದಲ್ಲಿ ಸರ್ಕಾರ ಮಧ್ಯೆ ಪ್ರವೇಶಿಸಿ ತ್ರಿಪಕ್ಷೀಯ ವೇತನ ಸಮಿತಿಯನ್ನು ನೇಮಕ ಮಾಡಿತು. ಅದು ವೇತನ ಹೆಚ್ಚಳಕ್ಕೆ ಶಿಫಾರಸ್ಸು ಮಾಡಿದರೂ ಆಡಳಿತವರ್ಗ ಜಾರಿಗೆ ತರಲಿಲ್ಲ. ಸಂಘಟನೆಗಳು ಹೋರಾಟ ಮುಂದುವರಿಸಿದಾಗ ೧೯೭೮ರಲ್ಲಿ ತ್ರಿಪಕ್ಷೀಯ ವೇತನ ಸಮಿತಿ ಶಿಫಾರಸ್ಸುಗಳು ದಾವಣಗೆರೆ ನಗರದಲ್ಲಿ ಜಾರಿಗೆ ಬಂದದ್ದು ಕಂಡುಬರುತ್ತದೆ. ಪಂಪಾಪತಿಯವರು ೧೯೭೮ರಲ್ಲಿ ದಾವಣಗೆರೆ ಹತ್ತಿಗಿರಣಿ ಆಡಳಿತ ವರ್ಗಗಳು ವೇತನ ಹೆಚ್ಚಿಸಲು ಒಪ್ಪಿಕೊಂಡಿವೆ ಎಂದು ಗಿರಣಿ ಕಾರ್ಮಿಕರ ಸಭೆಯಲ್ಲಿ ತಿಳಿಸಿದರು. ಇವರ ಹೇಳಿಕೆಯಿಂದ ಅಲ್ಲಿಯವರೆಗೂ ಶಿಫಾರಸ್ಸಾದ ವೇತನ ಜಾರಿಗೆ ಬರಲಿಲ್ಲವೆಂಬ ಅಂಶ ದೃಢಪಡುತ್ತದೆ.

ಸಮ್ಮೇಳನದ ಫಲವಾಗಿ ದಾವಣಗೆರೆ ಕಾರ್ಮಿಕರಿಗೆ ೩೫ ರಿಂದ ೪೦ ರೂಪಾಯಿವರೆಗೆ ಹೆಚ್ಚುವೇತನ ಸಿಕ್ಕರೆ, ಇತರೆ ಮಿಲ್‌ಗಳಲ್ಲಿ ೮೦ ರಿಂದ ೧೦೦ ರೂಪಾಯಿವರೆಗೆ ಒಂದೇ ಸಾರಿ ಹೆಚ್ಚಳವಾಯಿತು.[೨೧] ಈ ಹೆಚ್ಚಳ ಗಮನಿಸಿದಾಗ ಪ್ರಥಮ ನಗರಮಟ್ಟದ ಸಮ್ಮೇಳನದ ಫಲವಾಗಿ ದಾವಣಗೆರೆ ಕಾರ್ಮಿಕರು ಈ ಮೊದಲೇ ಅಲ್ಪಪ್ರಮಾಣದ ಹೆಚ್ಚಳ ಕಂಡಿದ್ದರು. ಆದರೆ ಆ ಫಲವು ನಿಧಾನವಾಗಿ ರಾಜ್ಯದ ಇತರೆ ಗಿರಣಿ ಕಾರ್ಮಿಕರಿಗೂ ಲಭ್ಯವಾಯಿತು. ಈ ಯಶಸ್ಸು ದಾವಣಗೆರೆ ಕಾರ್ಮಿಕ ಸಂಘಟನೆಯ ಶ್ರಮದ ಫಲ ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ. ರಾಜ್ಯಮಟ್ಟದಲ್ಲೇ ಗುರುತಿಸುವ ಸ್ಥಾನ ಪಡೆದುಕೊಂಡ ದಾವಣಗೆರೆ ಕಾರ್ಮಿಕ ಸಂಘಟನೆ ಪಕ್ಷಾತೀತವಾಗಿ ರಾಜ್ಯದ ಗಿರಣಿ ಕಾರ್ಮಿಕರನ್ನು ಒಂದೇ ವೇದಿಕೆಯಡಿ ಸಂಘಟಿಸಿದ್ದು ಗಮನಾರ್ಹ ಘಟನೆಯಾಗಿದೆ. ಇಲ್ಲಿಯವರೆಗಿನ ಸಮ್ಮೇಳನಗಳು ಕೇವಲ ಆರ್ಥಿಕ ಸೌಲಭ್ಯಗಳಿಗಾಗಿ ಪ್ರಯತ್ನಪಟ್ಟಿರುವುದು ಎದ್ದು ಕಾಣುತ್ತಿರುವ ಅಂಶವಾಗಿದೆ.

ದಾವಣಗೆರೆ ಹತ್ತಿಗಿರಣಿ ಕಾರ್ಮಿಕರ ಸಮ್ಮೇಳನ ೧೯೭೨

ದಿ.೧೧-೪-೧೯೭೬ರಲ್ಲಿ ಮತ್ತೊಂದು ದಾವಣಗೆರೆ ನಗರಮಟ್ಟದ ಹತ್ತಿಗಿರಣಿ ಕಾರ್ಮಿಕರ ಸಮ್ಮೇಳನ ನಡೆಯಿತು. ಕಾರ್ಮಿಕರನ್ನು ಪ್ರಜ್ಞಾವಂತರನ್ನಾಗಿ ಮಾಡಲು ಇಲ್ಲಿ ಹೆಚ್ಚಿನ ಪ್ರಾಮುಖ್ಯತೆ ನೀಡಿ, ಆರ್ಥಿಕ ಬೇಡಿಕೆಗಳ ಜೊತೆಗೆ ಇತರ ಬೇಡಿಕೆಗಳನ್ನು ಸೇರಿಸಿಕೊಳ್ಳಲಾಯಿತು.

ಮೈಸೂರಿನಲ್ಲಿ ಕಾನೂನು ಶಿಕ್ಷಕರೂ, ಬೆಂಗಳೂರಿನಲ್ಲಿ ಕಾರ್ಮಿಕ ಸಂಘಟನೆಯ ನಾಯಕರೂ ಆಗಿದ್ದ ಬಾಬು ಮಾಥ್ಯೂಸ್ ಸಮ್ಮೇಳನದ ಮುಖ್ಯ ಅತಿಥಿಗಳಾಗಿದ್ದರು.[೨೨] ಈ ವೇಳೆಗೆ ರಾಜಕೀಯ ಅಧಿಕಾರ ಪಡೆದುಕೊಂಡಿದ್ದ ಪಂಪಾಪತಿಯವರು ದಾವಣಗೆರೆ ಹತ್ತಿಗಿರಣಿಯಲ್ಲಿ (ಡಿ.ಸಿ.ಎಂ.) ಕಾರ್ಮಿಕರ ಪ್ರಥಮ ಸಂಘಟನೆಯಿಂದ ಮೊದಲುಗೊಂಡು ೧೯೭೬ರ ವರೆಗಿನ ಕಾರ್ಮಿಕ ಸಂಘಟನೆಯ ಹೋರಾಟದ ವಿವಿಧ ಮಜಲುಗಳನ್ನು ವಿವರಿಸಿದರು. ಇದೇ ಸಂದರ್ಭದಲ್ಲಿ ಸಂಘಟಿಸಲು ಯತ್ನಿಸಿ ಹತ್ಯೆಗೀಡಾದ ಕಾರ್ಮಿಕ ಮುಖಂಡರಾದ ಶ್ರೀ. ಸುರೇಶ್, ಶ್ರೀ. ಶೇಖರಪ್ಪನವರನ್ನು ಸ್ಮರಿಸಲಾಯಿತು. ಸಂಘಟನೆಯು ದುರ್ಗಮವಾದ ದಾರಿಯನ್ನು ಕ್ರಮಿಸಿ ಬಂದಿದ್ದರಿಂದಲೇ ಇಂದು ನಾವು ರಾಜ್ಯದ ಬೇರೆಬೇರೆ ಭಾಗದ ಕಾರ್ಮಿಕರ ಆಕರ್ಷಣೆಯ ಕೇಂದ್ರವಾಗಿದ್ದೇವೆ ಎಂದು ಸಂಘಟನೆಯ ಬಲವರ್ಧನೆಯನ್ನು ತಿಳಿಸಿದರು.

ಸಮಾರಂಭದಲ್ಲಿ ಮತ್ತೊಬ್ಬ ಮುಖ್ಯ ಅತಿಥಿಯಾಗಿದ್ದ ರಾಜ್ಯ ಮಟ್ಟದ ಕಾರ್ಮಿಕ ಮುಖಂಡ ಶ್ರೀ ಎಂ.ಸಿ.ನರಸಿಂಹನ್ ಮಾರ್ಕ್ಸ್‌ನ ಸಮಾಜವಾದಿ ಸಮಾಜದ ಕಲ್ಪನೆಯಾದ 'ಎಲ್ಲರೂ ಒಬ್ಬನಿಗಾಗಿ

ಮತ್ತು ಪ್ರತಿಯೊಬ್ಬರೂ ಎಲ್ಲರಿಗಾಗಿ' ಎಂಬ ವಿಚಾರವನ್ನು "ಸಾಮೂಹಿಕ ದುಡಿಮೆ-ಸಾಮೂಹಿಕ ಹಂಚಿಕೆ" ಎಂಬ ಶೀರ್ಷಿಕೆಯಲ್ಲಿ ವಿವರಿಸಿದರು. ಅವರು ದಾವಣಗೆರೆ ಕಾರ್ಮಿಕರು ಆರ್ಥಿಕ ಬೇಡಿಕೆಗಳಿಗೆ ಹೋರಾಡುವುದರ ಜೊತೆಗೆ ಸದುದ್ದೇಶ ಸಾಧನೆಗೆ ಸದಾ ಸಿದ್ಧರಿರಬೇಕೆಂದು ಕಾರ್ಮಿಕರನ್ನು ಎಚ್ಚರಿಸಿದರು. ಹೋರಾಟಗಳೆಂದರೆ ಕೇವಲ ಆರ್ಥಿಕ ಬೇಡಿಕೆಗಳ ಈಡೇರಿಕೆಗೆ ಮಾತ್ರವಲ್ಲ ಎಂಬ ತಿಳುವಳಿಕೆ ನೀಡಿದ್ದು ಸಂದರ್ಭೋಚಿತವಾಗಿತ್ತು.

ಸಮ್ಮೇಳನದಲ್ಲಿ ಕೈಗೊಂಡ ತೀರ್ಮಾನಗಳು

೧. ವೇತನ, ತುಟ್ಟಿಭತ್ಯೆ ಮುಂತಾದವುಗಳ ಪುನರ್ ನಿಷ್ಕರ್ಷೆಗಾಗಿ ಕರ್ನಾಟಕ ರಾಜ್ಯ ಹತ್ತಿಗಿರಣಿ ಕಾರ್ಮಿಕರ ಸಮ್ಮೇಳನವನ್ನು ಜೂನ್ ತಿಂಗಳಲ್ಲಿ ನಡೆಸಬೇಕು.

೨. ದಾವಣಗೆರೆಯ ಶಂಕರ್ ಮಿಲ್ ಕಾರ್ಮಿಕರಿಗೆ ಒಂದು ತಿಂಗಳೊಳಗಾಗಿ ಕೆಲಸದ ಭದ್ರತೆ ದೊರೆಯದಿದ್ದರೆ, ಹೋರಾಟಕ್ಕಿಳಿಯುವುದು.

೩. ಶಂಕರ್ ಮಿಲ್ ಕಾರ್ಮಿಕರ ಸಂಬಂಧ ಹೋರಾಟಕ್ಕಾಗಿ ಪಂಪಾಪತಿಯವರ ಅಧ್ಯಕ್ಷತೆಯಲ್ಲಿ ಹೋರಾಟ ಸಮಿತಿಯೊಂದನ್ನು ನೇಮಕಮಾಡುವುದು.

೪. ಪ್ರತಿ ಗಿರಣಿಯಲ್ಲೂ ನ್ಯಾಯಬೆಲೆ ಅಂಗಡಿ ತೆರೆಯುವಂತೆ ಬೇಡಿಕೆ ಮಂಡಿಸುವುದು.[೨೬]

ಒಟ್ಟಾರೆಯಾಗಿ ಈ ಸಮ್ಮೇಳನಗಳು ಕಾರ್ಮಿಕ ಸಂಘಟನೆಯ ಹೋರಾಟದ ದಾರಿಯನ್ನು ಮುಕ್ತಗೊಳಿಸಿದಂತೆ ಕಂಡುಬರುತ್ತದೆ. ಮೊದಲೆರಡು ಸಮ್ಮೇಳನಗಳ ಬೇಡಿಕೆ, ತೀರ್ಮಾನಗಳಿಗಿಂತ ಭಿನ್ನವಾದ ತೀರ್ಮಾನಗಳು ಇಲ್ಲಿ ಕಾಣಿಸಿಕೊಂಡವು. ಈ ವೇಳೆಗಾಗಲೇ ನಗರದ ಶಂಕರ್ ಹತ್ತಿಗಿರಣಿ ಮುಚ್ಚುವ ಸ್ಥಿತಿ ತಲುಪಿದಾಗ ಸಂಘಟನೆ ಹೋರಾಟದ ಪಥವನ್ನು ಬೇರೆ ಬೇರೆ ದಿಕ್ಕುಗಳಿಗೆ ವಿಸ್ತರಿಸಬೇಕಾಯಿತು ಹಾಗೂ ಅದರ ಜವಾಬ್ದಾರಿ ಹೆಚ್ಚಾಯಿತು. ಆರ್ಥಿಕ ಬೇಡಿಕೆಗಳ ಜೊತೆಗೆ ಕಾರ್ಮಿಕರ ಜವಾಬ್ದಾರಿಯೂ ಹೆಚ್ಚಾಗಿ ಮುಂದಿನ ಹೋರಾಟಕ್ಕೆ ಸಿದ್ಧವಾಗಬೇಕಾಯಿತು.

ಅಖಿಲಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್ ೪ನೇ ಸಮ್ಮೇಳನ ಜನವರಿ ೧೧ ರಿಂದ ೧೪, ೧೯೭೯-ದಾವಣಗೆರೆ

ಕಾರ್ಮಿಕ ಮುಂದಾಳುಗಳಿಗೆ ಪೌರಾಡಳಿತ ಅಧಿಕಾರ ನೀಡಿ, ಪಂಪಾಪತಿಯವರನ್ನು ವಿಧಾನಸಭೆಗೆ ಆಯ್ಕೆಮಾಡಿದ ದಾವಣಗೆರೆ ನಗರದಲ್ಲಿ, ರಾಷ್ಟ್ರೀಯ ಸಂಘಟನೆಯಾದ ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೇಸ್ (ಎ.ಐ.ಯು.ಟಿ.ಸಿ.) ೪ನೇ ರಾಜ್ಯಮಟ್ಟದ ಸಮ್ಮೇಳನವನ್ನು ನಡೆಸಿತು. ಇಲ್ಲಿಯವರೆಗೂ ದಾವಣಗೆರೆ ಕಾರ್ಮಿಕರು ತಮ್ಮ ಆಲೋಚನೆಯ ವ್ಯಾಪ್ತಿಯಲ್ಲಿ ಸಮ್ಮೇಳನ ನಡೆಸುತ್ತಿದ್ದರೆ, ಈಗ ರಾಜ್ಯದ ಕಾರ್ಮಿಕರ ಸಮ್ಮೇಳನ ಇವರನ್ನೇ ಅರಸಿ ಬಂದಿತು. ಸಮ್ಮೇಳನದಲ್ಲಿ ಅಂತರಾಷ್ಟ್ರೀಯ, ರಾಷ್ಟ್ರೀಯ, ರಾಜ್ಯಮಟ್ಟದ ಕಾರ್ಮಿಕರ ಸಮಸ್ಯೆಗಳನ್ನು, ಸಮಾಜವಾದ ಎದುರಿಸುತ್ತಿರುವ ಸವಾಲುಗಳನ್ನು ಚರ್ಚಿಸಲಾಯಿತು. ಸಮ್ಮೇಳನದಲ್ಲಿ ಕೈಗೊಂಡ ನಿರ್ಣಯಗಳು ಅನುಭವದ ಹಿನ್ನೆಲೆಯಲ್ಲಿ ರೂಪುಗೊಂಡಿದ್ದರೂ, ವಿಶಾಲ ರಾಜ್ಯದಲ್ಲಿ ಕಾರ್ಯರೂಪಕ್ಕೆ ಬರುವಲ್ಲಿ ಪೂರ್ಣವಾಗಿ ಜಯವನ್ನು ಕಾಣಲಿಲ್ಲವೆಂದೇ ಹೇಳಬಹುದು.

ನಗರದ ಆರ್.ಹೆಚ್.ಧರ್ಮಶಾಲೆಯಲ್ಲಿ ಸುನಂದ ರಂಗಮಂಟಪದಲ್ಲಿ ಸಮ್ಮೇಳನ ನಡೆಯಿತು. ಈ ಸಮ್ಮೇಳನಕ್ಕೆ ಎ.ಐ.ಟಿ.ಯು.ಸಿ. ಪ್ರಧಾನಕಾರ್ಯದರ್ಶಿ ಕೆ.ಜಿ. ಶ್ರೀವಾತ್ಸವ ಆಗಮಿಸಿದ್ದರು.[೨೪] ವಿಧಾನಸಭಾ ಸದಸ್ಯರೂ ಕಾರ್ಮಿಕ ನಾಯಕರೂ ಆದ ಪಂಪಾಪತಿಯವರು ಗಣನೀಯ ಪಾತ್ರ ನಿರ್ವಹಿಸಿದರು. ಸಮ್ಮೇಳನದ ಆರಂಭದಲ್ಲಿ ಮೆರವಣಿಗೆ ಏರ್ಪಡಿಸಿದ್ದು ಅಲ್ಲಿ ಗಜರಾಜ ಮುಂದಾಳುವಾದರೆ, ಬೃಹತ್ ಸಂಖ್ಯೆಯಲ್ಲಿ ಮಹಿಳೆಯರು, ಸಮವಸ್ತ್ರಧಾರಿ ಸ್ವಯಂ ಸೇವಕರು ಶಿಸ್ತಿನಿಂದ ಪಾಲ್ಗೊಂಡಿದ್ದರು,[೨೫] ಎ.ಐ.ಟಿ.ಯು.ಸಿ. ಕಾರ್ಯಾಧ್ಯಕ್ಷ ಎಂ.ಸಿ. ನರಸಿಂಹನ್ ಅಧ್ಯಕ್ಷತೆ ವಹಿಸಿದ್ದರು.[೨೬] ಪ್ರಧಾನ ಕಾರ್ಯದರ್ಶಿ ಎಂ.ಎಸ್.ಕೃಷ್ಣನ್ ವರದಿ ವಾಚನ ಮಾಡಿದರು.[೨೭]

ವರದಿಯಲ್ಲಿ ಅಡಕವಾಗಿದ್ದ ಅಂಶಗಳೆಂದರೆ :

೧. ರಷ್ಯಾದ ಸಮಾಜವಾದವನ್ನು ಅಮೇರಿಕಾ ನಿರಾಕರಿಸುತ್ತಿದೆ.

೨. ಚೀನಾದೇಶ ಕಮ್ಯುನಿಸ್ಟ್ ತತ್ವಗಳಿಗೆ ತಿಲಾಂಜಲಿ ಇಟ್ಟಿದೆ.

೩. ಈಗ ನಮ್ಮಲ್ಲಿ ತುರ್ತುಪರಿಸ್ಥಿತಿ ಅಂತ್ಯಗೊಂಡಿದೆ, ಆದರೆ ಸಮಸ್ಯೆಗಳು ಬೃಹದಾಕಾರವಾಗಿ ಬೆಳೆದು ಬಂಡವಾಳಶಾಹಿ ನೀತಿಗೆ ಮಹತ್ವ ನೀಡಲಾಗುತ್ತಿದೆ.

೪. ಕೇಂದ್ರದ ಜನತಾ ಸರ್ಕಾರ ಬಹುರಾಷ್ಟ್ರೀಯ ಕಂಪನಿಗಳಿಗೆ ಆಹ್ವಾನನೀಡಿ ಸಾರ್ವಜನಿಕ ಕ್ಷೇತ್ರವನ್ನು ಬುಡಮೇಲು ಮಾಡುತ್ತಿದೆ.

೫. ರಾಜ್ಯದ ದೇವರಾಜ ಅರಸ್‌ರವರ ಸರ್ಕಾರ ಕಾರ್ಮಿಕರ ಸಮಸ್ಯೆಗಳನ್ನು ಬಗೆಹರಿಸಲು ದಿಟ್ಟ ಹೆಜ್ಜೆ ಹಾಕುತ್ತಿಲ್ಲ.

೬. ಹೊಸ ಕೈಗಾರಿಕೆಗಳನ್ನು ತೆರೆದು ದುಡಿಯುವ ಕೈಗಳಿಗೆ ಕೆಲಸಕೊಡಬೇಕು.

೭. ಮುಚ್ಚಿರುವ ಹುಬ್ಬಳ್ಳಿಯ ಮಹಾದೇವಗಿರಣಿಯನ್ನು ಪುನರ್ ಪ್ರಾರಂಭಮಾಡಬೇಕು.

೮. ಕಾರ್ಮಿಕ ಕಾಯಿದೆಗಳು ಸಮರ್ಪಕವಾಗಿ ಜಾರಿಗೆ ಬಂದಿಲ್ಲ ಎಂಬ ಹಲವು ವಿಚಾರಗಳಿದ್ದವು.

ವರದಿಯ ಕೆಲ ವಿಚಾರಗಳನ್ನು ಚರ್ಚಿಸುತ್ತಾ, ಕಾರ್ಮಿಕ ಕಾಯಿದೆಗಳನ್ನು ಜಾರಿಗೊಳಿಸಲು ಕಾರ್ಮಿಕ ಇಲಾಖೆಗಳ ಅಧಿಕಾರಿಗಳೊಂದಿಗೆ ಕೆಲವು ಕಾರ್ಮಿಕರನ್ನು ನೇಮಿಸಬೇಕೆಂದು ಸಲಹೆ ನೀಡಲಾಯಿತು. ಕಾರ್ಖಾನೆಗಳನ್ನು ಮುಚ್ಚಲು ಬಂಡವಾಳದಾರರಿಗೆ ಸಂಪೂರ್ಣ ಸ್ವತಂತ್ರ ನೀಡಲಾಗಿದೆ, ಇದರಿಂದ ಕಾರ್ಮಿಕರನ್ನು ನಗಣ್ಯವಾಗಿ ನೋಡುವ ಸಾಧ್ಯತೆಗಳು ಹೆಚ್ಚಿವೆ ಎಂದು ಚರ್ಚಿಲಾಯಿತು.

ಅಶಿಕ್ಷಿತರೇ ಹೆಚ್ಚಿರುವ ಕಾರ್ಮಿಕ ಸಮುದಾಯವನ್ನು ಪ್ರಪಂಚಮಟ್ಟದಿಂದ, ರಾಜ್ಯಮಟ್ಟದವರೆಗಿನ ಸಮಸ್ಯೆಗಳತ್ತ ಸೆಳೆದು, ಆಲೋಚಿಸಿ, ಅರಿತುಕೊಳ್ಳಲು ಅವಕಾಶ ನೀಡಿದ್ದು ಅರ್ಥಪೂರ್ಣವಾಗಿದೆ. ಆದರೆ ಇಲ್ಲಿ ಚರ್ಚೆಗೊಳಗಾದ ಕಾರ್ಮಿಕ ಕಾಯಿದೆಗಳ ಜಾರಿಯಲ್ಲಿ ಕಾರ್ಮಿಕ ಇಲಾಖೆಯ ಅಧಿಕಾರಿಗಳೊಂದಿಗೆ, ಕಾರ್ಮಿಕರನ್ನು ನೇಮಿಸಲು ಸಲಹೆ ನೀಡಿದಾಗ, ಆ ನೇಮಕಕ್ಕೆ ಅರ್ಹತೆಗಳೇನು? ಅವರು ಎಷ್ಟರ ಮಟ್ಟಿಗೆ ಕಾರ್ಮಿಕರ ಹಿತಾಸಕ್ತಿಗಳನ್ನು ಕಾಪಾಡುತ್ತಾರೆ ಎಂಬ ವಿಚಾರಗಳು ಪ್ರಶ್ನೆಯಾಗಿಯೇ ಉಳಿದವು. ಸಮ್ಮೇಳನದಲ್ಲಿ ಈ ಕೆಳಕಂಡ ನಿರ್ಣಯಗಳನ್ನು ಕೈಗೊಳ್ಳಲಾಯಿತು.

೧. ಕಾರ್ಖಾನೆ ಕಾಯಿದೆಯಂತೆ ಎಲ್ಲಾ ತೋಟಗಳನ್ನು ನೋಂದಣಿಮಾಡಿ, ಕೆಲಸಗಾರರಿಗೆ ಕನಿಷ್ಟ ಕೂಲಿ ನೀಡಬೇಕು.

೨. ಅಣೆಕಟ್ಟೆ, ಕಾರ್ಖಾನೆ ಮುಂತಾದ ನಿರ್ಮಾಣ ಕಾರ್ಮಿಕರಿಗೆ ಬೆಲೆಗೆ ತಕ್ಕಂತೆ ಕನಿಷ್ಟ ಕೂಲಿ ನೀಡಬೇಕು.

೩. ೧೯೭೫ ಅಗಸ್ಟ್‌ನ ತ್ರಿಪಕ್ಷೀಯ ಒಪ್ಪಂದದಂತೆ ಹೊರಗಿನ ಕಾರ್ಮಿಕರನ್ನು ಕೆಲಸಗಾರರೆಂದು ಪರಿಗಣಿಸಿ ೮.೩೩ ಬೋನಸ್ ಹಾಗೂ ಹಕ್ಕಿನ ರಜೆ ನೀಡಬೇಕೆಂದು ಒತ್ತಾಯಿಸಲಾಯಿತು.

೪. ಗೋಡಂಬಿ ಕಾರ್ಖಾನೆಗಳು ಕಚ್ಚಾಪದಾರ್ಥವಿದ್ದಾಗ ಮಾತ್ರ ಉದ್ಯೋಗ ನೀಡುತ್ತಿದ್ದು, ಉಳಿದ ಕಾಲದಲ್ಲಿ ನಿರುದ್ಯೋಗ ಸೃಷ್ಟಿಯಾಗುತ್ತಿದೆ. ಅಲ್ಲಿನ ಕೆಲಸಗಾರರು ಇಂತಹ ನಿರುದ್ಯೋಗದ ವಿರುದ್ಧ ಚಳವಳಿ ಹೂಡಲು ಕರೆ ನೀಡಲಾಯಿತು.[೨೪]

ಸಮ್ಮೇಳನದ ಚರ್ಚೆ, ನಿರ್ಣಯಗಳಲ್ಲಿ ಎಷ್ಟು ಕಾರ್ಯರೂಪಕ್ಕೆ ಬಂದವು? ಕಾರ್ಮಿಕ ಸಂಘಟನೆಯು ಈ ಮೂಲಕ ತಮ್ಮ ಸಬಲೀಕರಣ ಮತ್ತು ವಿಮೋಚನೆಯತ್ತ ಆತ್ಮ ವಿಶ್ವಾಸದ ದೃಢ ಹೆಜ್ಜೆಗಳನ್ನಿಡುತ್ತಿದೆ. ಈ ಹಿಂದಿನ ಸಮ್ಮೇಳನಗಳ ನಿರ್ಣಯಗಳು, ಬೇಡಿಕೆಗಳು ಕೆಲವಷ್ಟೇ ಇದ್ದು, ಸೀಮಿತ ಪ್ರದೇಶಗಳ ವ್ಯಾಪ್ತಿಗೊಳಪಡುತ್ತಿತ್ತು. ಆದರೆ ಈ ಸಮ್ಮೇಳನದ ನಿರ್ಣಯಗಳು ರಾಜ್ಯವ್ಯಾಪಿಯಾಗಿದ್ದು ಸರ್ಕಾರದ ಪಾತ್ರವೇ ಹೆಚ್ಚಾಗಿರುತ್ತದೆ. ಕಾರ್ಮಿಕವರ್ಗ ಸಲ್ಲಿಸಿದ ಬೇಡಿಕೆಗಳಿಗೆ ಸಾಮಾನ್ಯವಾಗಿ ತಕ್ಷಣ ಫಲ ಸಿಗುವುದಿಲ್ಲ. ಕಾರ್ಮಿಕ, ಮಾಲೀಕರಲ್ಲಿ ಪರಸ್ಪರ ಹಿತಾಸಕ್ತಿಗಳು ಭಿನ್ನ ದಿಕ್ಕಿನತ್ತ ಸಾಗುತ್ತಿರುತ್ತವೆ. ಇಂತಹ ಅದಷ್ಟೋ ಪ್ರಯತ್ನಗಳಿಂದ ಮುಂದೊಮ್ಮೆ ಫಲ ಸಿಗುವ ಸಾಧ್ಯತೆ ಇರುತ್ತದೆ. ಆದ್ದರಿಂದ ಸರ್ಕಾರ ದೇಶದ ಆರ್ಥಿಕ ಪ್ರಗತಿಯಲ್ಲಿ ತೊಡಗಿಸಿಕೊಂಡಿರುವ ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸಲು ತುರ್ತುಕ್ರಮ ತೆಗೆದುಕೊಳ್ಳುವ ಅಗತ್ಯವಿದೆ.

ದಾವಣಗೆರೆ ನಗರದಲ್ಲೇ ಹೆಚ್ಚು ಸಮ್ಮೇಳನಗಳು ನಡೆಯಲು ಕಾರಣಗಳೇನು? ಇಲ್ಲಿ ಹತ್ತಿ, ಎಣ್ಣೆ, ಅಕ್ಕಿ ಗಿರಣಿಗಳು ಜನಿಸಿ ಕಾರ್ಮಿಕ ನಗರವಾಗಿ ಸಂಘಟನೆಯ ಧ್ವನಿ ಬಲಗೊಂಡು, ಕಾರ್ಮಿಕ ಸಮ್ಮೇಳನಗಳಷ್ಟೇ ಅಲ್ಲ, ಈ ನಗರದಲ್ಲಿ ಅನೇಕ ರಾಜಕೀಯ ಪಕ್ಷಗಳು ಹುಟ್ಟಿವೆ. ಹಾಗೆಯೇ ಹಲವು ಜಾತಿ ಸಮ್ಮೇಳನಗಳೂ ಇಲ್ಲಿ ನಡೆದಿವೆ. ೧೯೪೨ ರಿಂದಲೂ ಸಂಘಟನೆಯು ಸುಧೀರ್ಘವಾದ ಹೋರಾಟ ನಡೆಸಿ ಒಂದು ಅಸ್ತಿತ್ವವನ್ನು ಪಡೆದುಕೊಂಡಿತ್ತು. ಈ ಅನುಭವಗಳು ಕಾರ್ಮಿಕ ಚಟುವಟಿಕೆಗಳನ್ನು ವಿಸ್ತರಿಸಲು ಪ್ರೇರಣೆ ನೀಡಿತು. ಇಲ್ಲೇ ಹೆಚ್ಚಿನ ಸಂಖ್ಯೆಯಲ್ಲಿ ಸಮ್ಮೇಳನಗಳು ನಡೆಯಲು ಈ ಕೆಳಕಂಡ ಕಾರಣಗಳನ್ನು ನೀಡಬಹುದು.

೧. ರಾಜ್ಯದ ಉತ್ತರ ಕರ್ನಾಟಕದ ಕೈಗಾರಿಕಾ ಕೇಂದ್ರಗಳು ಹಾಗೂ ದಕ್ಷಿಣ ಕರ್ನಾಟಕದ ಕೈಗಾರಿಕಾ ಕೇಂದ್ರಗಳನ್ನು ಸಂಪರ್ಕಿಸಲು ದಾವಣಗೆರೆಯು ಕೇಂದ್ರ ಸ್ಥಳದಲ್ಲಿದ್ದುದ್ದು ಮುಖ್ಯ ಕಾರಣವಾಗಿದೆ.

೨. ಕಮ್ಯೂನಿಸ್ಟ್ ತತ್ವಗಳನ್ನು ಕಾರ್ಮಿಕ ಮುಖಂಡರು ಪ್ರಚಾರಗೊಳಿಸಿದ್ದು.

೩. ದೀರ್ಘಕಾಲ ಅಸ್ತಿತ್ವದಲ್ಲಿದ್ದ ಏಕೈಕ ಕಮ್ಯುನಿಸ್ಟ್ ಪಕ್ಷ (ಸಿ.ಪಿ.ಐ. ಸಂಘಟನೆ).

೪. ಪಂಪಾಪತಿ, ಹೆಚ್.ಕೆ. ರಾಮಚಂದ್ರಪ್ಪನವರಂಥ ದಿಟ್ಟ, ದಕ್ಷ ನಾಯಕತ್ವ.

೫. ನಗರದ ಕಾರ್ಮಿಕರು ಉದಾರವಾಗಿ ಸಮ್ಮೇಳನಗಳಿಗೆ ಹಣಕಾಸಿನ ನೆರವು ನೀಡಿದ್ದು.

೬. ಕಾರ್ಮಿಕರಲ್ಲದೆ ಮಾಲೀಕರು, ಉಳ್ಳವರೂ ಸಹಾಯ ನೀಡುತ್ತಿದ್ದರೆಂದು ಕಾರ್ಮಿಕ ಮುಖಂಡರಾದ ಹೆಚ್.ಕೆ. ರಾಮಚಂದ್ರಪ್ಪನವರು ಅಭಿಪ್ರಾಯಪಡುತ್ತಾರೆ. ಮೇಲಿನ ಎಲ್ಲಾ ಅಂಶಗಳಿಗೂ ಕಳಶವಿಟ್ಟಂತೆ ಕಾರ್ಮಿಕ ವರ್ಗಕ್ಕೆ ರಾಜಕೀಯ ಅಧಿಕಾರವೂ ದೊರೆಯಿತು. ೧೯೭೪ರಲ್ಲಿ ಪಂಪಾಪತಿ ಹಾಗೂ ಅವರ ಸಹಪಾಠಿಗಳಲ್ಲಿ ಅನೇಕರು ನಗರಸಭೆಯ ಅಧಿಕಾರ ಪಡೆದರು. ೧೯೭೮ರಿಂದ ೧೯೮೫ರ ವರೆಗೆ ಸತತವಾಗಿ ವಿಧಾನಸಭಾ ಸದಸ್ಯತ್ವ ಪಡೆದರು. ಈ ಎಲ್ಲಾ ಅಧಿಕಾರಗಳು ಸಮ್ಮೇಳನ ನಡೆಸಲು ವೇದಿಕೆ, ಹಣಕಾಸಿನ ಶಕ್ತಿ, ಸಹಪಾಠಿಗಳ ಪ್ರೋತ್ಸಾಹ, ಪ್ರೇರಣೆಪಡೆದು ಮುನ್ನಡೆಸಲು ಸಹಕಾರಿಯಾದವು.

ಕೊನೆಟಿಪ್ಪಣಿಗಳು

೧. ಬಸವಯ್ಯ ಬಿ., ಮೇ ದಿನಾಚರಣೆ ಮಹತ್ವ, ಕರ್ನಾಟಕ ಕಾರ್ಮಿಕ ಪತ್ರಿಕೆ-ಮೇ-ಜೂನ್ ೧೯೮೪, ಪು ೪೩

೨. ಅದೇ, ಪುಟ ೪೩-೪೪

೩. ಮೈಕ್ರೋಪೀಡಿಯಾ, ದಿ ನ್ಯೂ ಎನ್‌ಸೈಕ್ಲೋಪೀಡಿಯಾ ಬ್ರಿಟಾನಿಕ, ಸಂಪುಟ ೭, ೧೭೬೮, ಪು ೭೯

೪. ಡಾ. ಹಾ.ಮಾ. ನಾಯಕ, (ಪ್ರ.ಸಂ.), ಕನ್ನಡ ವಿಶ್ವಕೋಶ, ೧೯೭೨, ಪುಟ ೫೮೬

೫. http://www.dol.gov/opa/aboutdo/labor day. htm. p.1

೬. ಡಾ. ಹಾ.ಮಾ. ನಾಯಕ, (ಪ್ರ.ಸಂ.), ಕನ್ನಡ ವಿಶ್ವಕೋಶ, ೧೯೭೨ ಪುಟ ೫೮೬

೭. ಬಸವಯ್ಯ., ಬಿ.ಮೇ ದಿನಾಚರಣೆ ಮಹತ್ವ, ಕರ್ನಾಟಕ ಕಾರ್ಮಿಕ ಪತ್ರಿಕೆ, ಮೇ-ಜೂನ್ ೧೯೮೪, ಪು ೪೪

೮. http://www.dol.gov/opa/aboutdo/labor day. htm.-p-೨

೯. ಡಾ. ಎಂ.ಜಿ. ಈಶ್ವರಪ್ಪ (ಸಂ.), ಶತಮಾನದ ದಾವಣಗೆರೆ, ೨೦೦೧, ಪು. ೭೧

೧೦. ಜನತಾವಾಣಿ ದಿನಪತ್ರಿಕೆ ದಿ-೨-೫-೧೯೭೯, ಪು ೧

೧೧. ಜನತಾವಾಣಿ ದಿನಪತ್ರಿಕೆ, ದಿ-೩-೫-೧೯೮೧, ಪು ೧

೧೨. ಕೆ.ಹೆಚ್. ಗಂಗಪ್ಪ, ಕಾರ್ಮಿಕ ರತ್ನರ ಕೆಂಪು ಕಥೆ, ೧೯೮೧, ಪುಟ ೫೩

೧೩. ಜನತಾವಾಣಿ ದಿನಪತ್ರಿಕೆ, ದಿ-೨೭-೫-೧೯೭೬, ಪು ೧

೧೪. ಸಂದರ್ಶನ ಮಾಹಿತಿ, ಶ್ರೀ ಹೆಚ್.ಕೆ. ರಾಮಚಂದ್ರಪ್ಪ, ಕಾರ್ಮಿಕ ಮುಖಂಡರು, ದಾವಣಗೆರೆ, ದಿ. ೭.೯.೨೦೦೪

೧೫. ಜನವಾಹಿನಿ ದಿನಪತ್ರಿಕೆ, ದಿ. ೨.೫.೧೯೯೮, ಪು. ೨

೧೬. ಸಂದರ್ಶನ ಮಾಹಿತಿ, ಆನಗೋಡು ರಾಮಚಂದ್ರಪ್ಪ, ಕಾರ್ಮಿಕ ಮುಖಂಡರು, ದಿ. ೫.೯.೨೦೦೪, ದಾವಣಗೆರೆ

೧೭. ಕೆ.ಎಚ್. ಗಂಗಪ್ಪ, ಕಾರ್ಮಿಕ ರತ್ನರ ಕೆಂಪುಕಥೆ, ೧೯೮೧, ಪು. ೩೬

೧೮. ಅದೇ

೧೯. ಅದೇ, ಪು. ೪೮

೨೦. ಸಂದರ್ಶನ ಮಾಹಿತಿ, ಆನಂದ ತೀರ್ಥ, ಕಾರ್ಮಿಕ ಮುಖಂಡರು, ದಿ. ೧೦.೫.೨೦೦೪, ಬೆಂಗಳೂರು

೨೧. ಕೆ.ಹೆಚ್. ಗಂಗಪ್ಪ, ಕಾರ್ಮಿಕ ರತ್ನರ ಕೆಂಪು ಕಥೆ, ೧೯೮೧, ಪು. ೪೯

೨೨. ಜನತಾವಾಣಿ ದಿನಪತ್ರಿಕೆ, ದಿ. ೧೧.೪.೧೯೭೬, ಪು. ೧

೨೩. ಸಂದರ್ಶನ ಮಾಹಿತಿ, ಆನಂದತೀರ್ಥ, ಕಾರ್ಮಿಕ ಮುಖಂಡರು, ದಿ. ೧೦.೫.೨೦೦೪, ಬೆಂಗಳೂರು

೨೪. ಸಮ್ಮೇಳನದ ಫೋಟೋ ಮಾಹಿತಿ

೨೫. ಅದೇ

೨೬. ಜನತಾವಾಣಿ ದಿನಪತ್ರಿಕೆ, ದಾವಣಗೆರೆ, ದಿ. ೧೩.೧.೭೯, ಪು. ೧

೨೭. ಹೆಚ್.ಕೆ. ರಾಮಚಂದ್ರಪ್ಪನವರ ದಿನಚರಿಯಿಂದ, ಕಾರ್ಮಿಕ ಮುಖಂಡರು, ದಿ. ೧೧.೧.೧೯೭೯

೨೮. ಕಾಂ.ಪಂಪಾಪತಿ (ಸಂ.), ಸ್ಮರಣ ಸಂಚಿಕೆ, ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್, ಕರ್ನಾಟಕ ರಾಜ್ಯ ಸಮಿತಿ, ನಾಲ್ಕನೇ ಸಮ್ಮೇಳನ, ದಾವಣಗೆರೆ, ೧೯೭೯, ಪು. ೨೩-೨೬

ಅಧ್ಯಾಯ ೧೦

ಸಮಾರೋಪ

ಸಮಾರೋಪ

ದಾವಣಗೆರೆ ನಗರದಲ್ಲಿ ಹತ್ತಿಗಿರಣಿಗಳು ಹುಟ್ಟುವುದರೊಂದಿಗೆ ಅವುಗಳ ಸುತ್ತ ಹಲವು ಘಟನೆಗಳು ಸಂಭವಿಸಲ್ಪಟ್ಟಿವೆ. ಗಿರಣಿಗಳ ಪ್ರಗತಿಗೆ ಬಂಡವಾಳ, ಕಾರ್ಮಿಕರು, ಸರ್ಕಾರದ ಪ್ರೋತ್ಸಾಹ ಅಡಿಪಾಯವಾಗಿರುವುದು ಸತ್ಯ. ಅಂತೆಯೇ ಇಲ್ಲಿನ ಹತ್ತಿಗಿರಣಿಗಳು ಇಂಗ್ಲೆಂಡಿನ ಮ್ಯಾಂಚೆಸ್ಟರ್ ಬಟ್ಟೆಗಿರಣಿಗಳಂತೆ ವಿಶ್ವಮಟ್ಟದಲ್ಲಿ ಮಾನ್ಯತೆ ಪಡೆದುಕೊಂಡಿದ್ದವು. ಇದಕ್ಕೆ ಹಲವು ಕಾರಣಗಳಿವೆ. ಅಲ್ಲದೆ ಇಲ್ಲಿನ ಕಾರ್ಮಿಕರು ರಾಜ್ಯದಲ್ಲೇ ಗುರುತಿಸಬಹುದಾದಂತಹ ಚಳುವಳಿಗಳನ್ನು ನಡೆಸುವ ಮೂಲಕ ಗಮನ ಸೆಳೆದಿದ್ದಾರೆ. ಈ ಅಧ್ಯಯನವು ಸ್ವತಂತ್ರ ಪೂರ್ವ ಮತ್ತು ನಂತರದ ದಿನಗಳಲ್ಲಿ ಇಲ್ಲಿನ ಗಿರಣಿಗಳ ಬೆಳವಣಿಗೆ, ಅವನತಿ, ಅದಕ್ಕೆ ಕಾರಣಗಳು, ಕಾರ್ಮಿಕರ ಸಂಘಗಳ ಬೆಳವಣಿಗೆ, ಅವರ ಕಲ್ಯಾಣ ಕಾರ್ಯಗಳು, ಕಾಯಿದೆಗಳು, ಮುಖಂಡರು, ಸಮ್ಮೇಳನಗಳು, ಕಾರ್ಮಿಕರ ಮೇ ದಿನಾಚರಣೆಯಂತಹ ಚಳುವಳಿಗಳನ್ನು ಕುರಿತು ಬೆಳಕು ಚೆಲ್ಲುವ ಮತ್ತು ವಿಶ್ಲೇಷಿಸಿರುವ ಒಂದು ಪ್ರಯತ್ನವನ್ನು ಈ ಅಧ್ಯಾಯದಲ್ಲಿ ಮಾಡಲಾಗಿದೆ.

ಇತ್ತೀಚಿನವರೆಗೂ ಚರಿತ್ರೆಯ ಅಧ್ಯಯನದಲ್ಲಿ ರಾಜಪ್ರಭುತ್ವಕ್ಕೆ ಸೀಮಿತಗೊಂಡು ರಾಜರು, ಅವರ ಅಧಿಕಾರವ್ಯಾಪ್ತಿ, ಸಾಧನೆ ಮುಂತಾದವುಗಳ ಮೇಲೆ ಬೆಳಕು ಚೆಲ್ಲುವುದು ಸಾಮಾನ್ಯವಾಗಿತ್ತು. ಆದರೆ ದೇಶದ ಆರ್ಥಿಕ ಪ್ರಗತಿಗೆ ಕೈಜೋಡಿಸುವ ಕಾರ್ಮಿಕರ ಬಗ್ಗೆ ಚಾರಿತ್ರಿಕ ಅಧ್ಯಯನ ನಡೆದಿರುವುದು ವಿರಳ. ಈ ಹಿನ್ನೆಲೆಯಲ್ಲಿ ಅಲಕ್ಷಿತ ವರ್ಗವಾದ ಕಾರ್ಮಿಕರ ಸಾಧನೆ, ವೈಫಲ್ಯ, ನೋವು-ನಲಿವುಗಳನ್ನು ಗಿರಣಿಗಳ ಚರಿತ್ರೆಯೊಂದಿಗೆ, ಚರಿತ್ರೆ ಮೂಲಕ ಹೊಸ ಅಧ್ಯಾಯವೊಂದರ ಮಡಿಲಿಗೆ ತರುವುದು ಈ ಅಧ್ಯಯನದ ಅಗತ್ಯವಾಗಿದೆ.

ದಾವಣಗೆರೆ ನಗರದ ಕ್ರಾಂತಿಕಾರಿ ಮನೋಭಾವನೆಯ ಹತ್ತಿಗಿರಣಿ ಕಾರ್ಮಿಕರು ತಮ್ಮ ಮೇಲಿನ ದೌರ್ಜನ್ಯಗಳ ವಿರುದ್ಧ ಸಂಘಟಿತ ಹೋರಾಟ ಮಾಡಿ, ನಗರಸಭೆಯ ಅಧಿಕಾರ ಪಡೆದುಕೊಂಡು ರಾಜಕೀಯ ಶಕ್ತಿಯೂ ಆದರು. ಮುಂದೆ ಇಲ್ಲಿನ ಕಾರ್ಮಿಕ ಮುಖಂಡರೊಬ್ಬರು ೩ ಭಾರಿ ವಿಧಾನಸಭಾ ಸದಸ್ಯರಾಗಿ ಕಾರ್ಮಿಕರ ಧ್ವನಿಯಾಗಿದ್ದು ಸ್ಮರಣಾರ್ಹ ಘಟನೆ. ಹೀಗೆ ರಾಜಕೀಯ ಅಧಿಕಾರ ಪಡೆದ ಮುಖಂಡರು ತಮ್ಮನ್ನವಲಂಬಿಸಿದ್ದ ಕಾರ್ಮಿಕರಿಗೆ ಪ್ರಾಮಾಣಿಕ ಸೇವೆ ಮತ್ತು ಅಭಿವೃದ್ಧಿ ಕಾರ್ಯಗಳನ್ನು ಮಾಡದಿದ್ದರೂ ಸಾಮಾನ್ಯ ಜನರಿಗೆ ಸ್ವಚ್ಛ ಆಡಳಿತ ನೀಡಲು ಮುಂದಾದದ್ದು ಮುಖ್ಯ ಸಂಗತಿ.

ಇಂಥ ವೈವಿಧ್ಯಮಯವಾದ ಚರಿತ್ರೆ ಹೊಂದಿರುವ ದಾವಣಗೆರೆ ಹತ್ತಿಗಿರಣಿ ಕಾರ್ಮಿಕರ ಚಳವಳಿಗಳು ರೋಚಕ ಘಟನೆಗಳನ್ನು ಹೊಂದಿವೆ. ಈ ಕುರಿತು ಸಂಶೋಧನೆ ಕೈಗೊಂಡಾಗ ಹೊಸ ವಿಷಯಗಳನ್ನು ಕಂಡುಕೊಳ್ಳಲಾಗಿದೆ. ಪ್ರಮುಖವಾಗಿ ಅಂಥ ವಿಷಯಗಳನ್ನು ಈ ರೀತಿಯಾಗಿ ಗುರುತಿಸಲಾಗಿದೆ.

೧. ಹತ್ತಿಗಿರಣಿಗಳ ಸ್ಥಾಪನೆಗೆ ಈ ಪ್ರದೇಶದಲ್ಲಿ ದೊರೆಯುತ್ತಿದ್ದ ಹತ್ತಿ ಹಾಗೂ ವರ್ತಕರ ಅನುಭವ ಪ್ರೇರಣೆಯಾಗಿತ್ತೇ ಹೊರೆತು ಗಾಂಧಿಯ ವಿಚಾರಧಾರೆಗಳು ಪ್ರಭಾವ ಬೀರಿದಂತೆ ಕಂಡುಬಂದಿಲ್ಲ.

೨. ಹತ್ತಿಗಿರಣಿಗಳ ಸ್ಥಾಪನೆ, ಪ್ರಗತಿಗೆ ಮೈಸೂರಿನ ಒಡೆಯರ ಕೆಲ ರಿಯಾಯಿತಿಗಳು, ಆ ಮೂಲಕದ ಪ್ರೋತ್ಸಾಹ ಕಾರಣಗಳಲ್ಲೊಂದಾಗಿದೆ.

೩. ಅವಸಾನ ಹೊಂದಿದ ಬಹಳಷ್ಟು ಹತ್ತಿ ಗಿರಣಿಗಳು (ಶಂಕರ್, ಸಿದ್ದೇಶ್ವರ, ಚಿಗಟೇರಿ) ಸರ್ಕಾರದ ಪೂರ್ವಾನುಮತಿ ಪಡೆದು ಮುಚ್ಚಲ್ಪಟ್ಟಿಲ್ಲ.

೪. ಹತ್ತಿಗಿರಣಿಗಳು ಅವಸಾನ ಹೊಂದಲು, ಕಾರ್ಮಿಕ ಚಳವಳಿಗಳೂ ಕಾರಣ ಎಂದು (೨೪.೦೫%) ಸ್ವತಃ ಕಾರ್ಮಿಕರೇ ಅಭಿಪ್ರಾಯಪಟ್ಟರೂ, ಕಾರ್ಮಿಕ ಚಳುವಳಿಯೊಂದೇ ಕಾರಣವಲ್ಲ ಎಂಬುದು ಕಟುಸತ್ಯ. ಬದಲಾಗಿ ಜಾಗತೀಕರಣದ ಪ್ರಭಾವ, ವಿದ್ಯುತ್‌ದರ ಮತ್ತು ಸರಬರಾಜಿನ ವೈಪರೀತ್ಯಗಳು, ಹತ್ತಿ ಉತ್ಪಾದನೆಯಲ್ಲಿ ಇಳಿಮುಖ, ಕಾರ್ಮಿಕ ಸಂಘಟನೆ ಸೌಲಭ್ಯಗಳಿಗಾಗಿ ಸಂಘರ್ಷದ ಹಾದಿ ತುಳಿದಾಗ ಎರಡನೇ ತಲೆಮಾರಿನ ಮಾಲೀಕರು ಸವಾಲುಗಳನ್ನು ಎದುರಿಸಲು ಹಿಂದೆ ಸರಿದದ್ದು, ಯಂತ್ರಗಳನ್ನು ಆಧುನೀಕರಿಸುವಲ್ಲಿ ಸಂಘಟನೆಯ ವಿರೋಧ, ಸಕಾಲಕ್ಕೆ ಆಧುನಿಕ ಯಂತ್ರಗಳ ಅಳವಡಿಕೆಯಲ್ಲಿನ ಕೊರತೆ ಮುಂತಾದ ಕಾರಣಗಳು ಗಿರಣಿಗಳ ಅವಸಾನದ ಸುತ್ತ ಹೆಣೆಯಲ್ಪಟ್ಟಿದೆ.

೫. ಕಾರ್ಮಿಕರ ಮೇಲೆ ನಡೆಯುತ್ತಿದ್ದ ದೌರ್ಜನ್ಯವು ಕಾರ್ಮಿಕರನ್ನು ಸಂಘಟನೆಯ ಸೆಳೆತಕ್ಕೆ ಪ್ರೇರಣೆ ನೀಡಿತು. ಸಮಾಜವಾದದ ಸೈದ್ಧಾಂತಿಕ ನೆಲೆಗಟ್ಟು, ಕ್ರಾಂತಿಕಾರಿ ಮನೋಭಾವನೆಯ ಕಾರ್ಮಿಕ ಮುಖಂಡರ ಉದಯಕ್ಕೆ ನಾಂದಿಯಾಯಿತು.

೬. ಸಂಘಟನೆ ಬಲಗೊಂಡ ಬಳಿಕವೇ ಕಾರ್ಮಿಕರ ಸ್ಥಿತಿಗತಿಯಲ್ಲಿ ಸುಧಾರಣೆ ಆಗಿದೆ ಎಂದು ಬಹಳಷ್ಟು ಕಾರ್ಮಿಕರು (೬೯.೭೯%) ಅಭಿಪ್ರಾಯ ಪಟ್ಟಿರುವುದರಿಂದ ಸಂಘಟನೆ ಇದ್ದರೆ ಕಾರ್ಮಿಕರ ಪ್ರಗತಿ ಸಾಧ್ಯ ಎಂಬುದು ಸ್ಪಷ್ಟ. ದಾವಣಗೆರೆ ನಗರದ ಗಿರಣಿ ಕಾರ್ಮಿಕರ ಸಂಘಟನೆ ಅಸ್ತಿತ್ವಕ್ಕೆ ಬಂದನಂತರವೇ ಕನಿಷ್ಟಕೂಲಿ ಜಾರಿಯಾದದ್ದು, ಬಾಲಕಾರ್ಮಿಕ ಪದ್ಧತಿ ರದ್ದತಿಯಾದದ್ದು, ಕಾಯಿದೆಗಳನ್ನು ಜಾರಿಗೊಳಿಸುವಿಕೆ, ೦೮ ಗಂಟೆ ಕೆಲಸದ ಅವಧಿ ಜಾರಿಯಾದದ್ದು ತೆರೆದ ಸತ್ಯ.

೭. ಸಂಘಟನೆಯು ಅಧಿಕಾರದ ನೆಲೆಯಲ್ಲಿದ್ದಾಗ ಕಾರ್ಮಿಕ ಸಮುದಾಯಕ್ಕೆ ವಸತಿ, ಶಿಕ್ಷಣ ಮುಂತಾದ ಮೂಲಭೂತ ಸೌಲಭ್ಯಗಳನ್ನು ಸಮರ್ಪಕವಾಗಿ ನೀಡಲಿಲ್ಲ ಎಂಬ ಕಾರ್ಮಿಕರ ಆರೋಪವಿದೆ.

೮. ಅಂತೆಯೇ ಸಂಘಟನೆಯು ಕುಡಿಯುವ ನೀರು, ಬೀದಿದೀಪ, ಮುಂತಾದ ಕೆಲ ಮೂಲಭೂತ ಸೌಲಭ್ಯಗಳನ್ನಾದರೂ ಒದಗಿಸಿಕೊಟ್ಟಿತೆಂಬುದು ಮತ್ತೊಂದು ಸತ್ಯ ಸಂಗತಿ.

೯. ಕಾರ್ಮಿಕ ಸಂಘಟನೆಯನ್ನು ಜಾತಿಯನೆಲೆಯಲ್ಲಿ ಬೆಳೆಸುವ ಅಥವಾ ಒಡೆಯುವ ಸಂದರ್ಭಗಳು ಕಂಡುಬಂದಿಲ್ಲ. ಸಮತಾವಾದದ ಸೈದ್ಧಾಂತಿಕ ನೆಲೆಗಟ್ಟಿನ ಮೇಲೆ ಸಂಘಟನೆ ಹೋರಾಟಕ್ಕಿಳಿದಾಗ ವರ್ಗಹೋರಾಟವೇ ಪ್ರಧಾನವಾಗಿ ಕಂಡುಬರುತ್ತದೆ.

೧೦. ಹಣದ ನೆಲೆಯಲ್ಲಿ ಸಂಘಟನೆಯನ್ನು ಒಡೆದದ್ದಕ್ಕೆ ನಿದರ್ಶನಗಳಿಲ್ಲ. ಸಂಘಟನೆ ಬಲವಾಗಿದ್ದಾಗ ಮತ್ತು ಗಿರಣಿಗಳ ಅವಸಾನದ ಸಂದರ್ಭದಲ್ಲಿ ಹೆಚ್ಚಿನ ಕಾರ್ಮಿಕರು (೫೫.೬೮%) ತಮ್ಮ ಮೇಲೆ ದೌರ್ಜನ್ಯ ನಡೆದಿಲ್ಲ ಎಂದು ಸ್ಪಷ್ಟಪಡಿಸಿರುವುದರಿಂದ ಸಂಘಟನೆ ಬಲವಾಗಿದ್ದರೆ ದೌರ್ಜನ್ಯ ಕಡಿಮೆ ಇರುತ್ತದೆಂದು ತಿಳಿಯಬಹುದಾಗಿದೆ.

೧೧. ರಾಜಕೀಯ ಅಧಿಕಾರ ಪಡೆದುಕೊಂಡ ಅಲಕ್ಷಿತ ಕಾರ್ಮಿಕ ಸಮೂಹದ ಮುಖಂಡರು ಕಾರ್ಮಿಕರಿಗೆ ತೃಪ್ತಿತರುವಂತಹ ಸೇವೆ ಸಲ್ಲಿಸಲಿಲ್ಲ ಎಂಬ ಆರೋಪಕ್ಕೆ ಒಳಗಾಗಿದ್ದಾರೆ. ಈ ಸಂಘಟನೆಯು ಗಿರಣಿಗಳ ತಾಂತ್ರಿಕ ಉನ್ನತಿಗೆ ಪ್ರಾಮುಖ್ಯತೆ ನೀಡದಿದ್ದುದರಿಂದ ಅವು ಜಾಗತಿಕ ಸ್ಪರ್ಧೆ ಎದುರಿಸಲು, ಗುಣಮಟ್ಟ ಕಾಪಾಡಿಕೊಳ್ಳಲು ಸಹಾಯಕವಾಗಲಿಲ್ಲ.

೧೨. ದಾವಣಗೆರೆ ನಗರದ ಹತ್ತಿಗಿರಣಿ ಕಾರ್ಮಿಕರು ರಾಜಕೀಯ ಅಧಿಕಾರ ಪಡೆದುಕೊಂಡು ದೀರ್ಘಕಾಲ ನಗರಸಭೆಯ ಅಧಿಕಾರ ನಡೆಸಿದ್ದು ಅಮೋಘ ಸಾಧನೆಯೇ ಸರಿ. ಕಾರ್ಮಿಕ ಮುಖಂಡರಾದ ಶ್ರೀ. ಪಂಪಾಪತಿಯವರು ೩ ಭಾರಿ ರಾಜ್ಯವಿಧಾನಸಭಾ ಸದಸ್ಯರಾಗಿ ಸರ್ಕಾರದ ಮಟ್ಟದಲ್ಲಿ ಕಾರ್ಮಿಕರ ಸಮಸ್ಯೆಗಳನ್ನು ಚರ್ಚಿಸಿದ್ದು, ಕೆಲ ಪರಿಹಾರ ಪಡೆದಿದ್ದು ಕಾರ್ಮಿಕ ಚಳುವಳಿ ಚರಿತ್ರೆಯಲ್ಲಿ ಮರೆಯಲಾಗದ ಘಟನೆಯಾಗಿದೆ.

೧೩. ತಮ್ಮ ಸ್ಥಿತಿ-ಗತಿ ಸುಧಾರಣೆಗೆ ಕೆಲಸ ಕಳೆದುಕೊಂಡವರ ಪುನರ್ ನೇಮಕಕ್ಕಾಗಿ ನಡೆಸಿದ ಕಾರ್ಮಿಕರ ಚಳುವಳಿಗಳು ಬಹುಪಾಲು ಅವರ ಪರವಾಗಿಲ್ಲ. ಪ್ರಶ್ನಾವಳಿಗಳ ಮುಖಾಂತರ ಕಾರ್ಮಿಕರನ್ನು ಸಂದರ್ಶಿಸಿದಾಗ ಚಳವಳಿ ನಡೆಸಿದ್ದರಿಂದ ಗಿರಣಿಗಳು ಬಂದಾಗಿವೆ ಎಂದು ಹೆಚ್ಚು ಕಾರ್ಮಿಕರು (೨೪.೦೫%) ಅಭಿಪ್ರಾಯ ಪಟ್ಟರೆ, ಚಳುವಳಿಗಳಿಂದ ಸಮಸ್ಯೆಯು ಪರಿಹಾರವಾಗಿದೆ ಎಂದು (೧೪.೦೯%) ಕೆಲ ಕಾರ್ಮಿಕರು ಒಪ್ಪಿಕೊಳ್ಳುವುದರೊಂದಿಗೆ ಗಿರಣಿಗಳ ಅವಸಾನಕ್ಕೆ ಚಳವಳಿಯ ಪಾತ್ರವೂ ಇದೆ ಎಂದು ಸ್ಪಷ್ಟಪಡಿಸುತ್ತಾರೆ.

೧೪. ಬೋನಸ್ ಪ್ರಮಾಣದಲ್ಲಿನ ಹೆಚ್ಚಳಕ್ಕಾಗಿ ನಡೆದ ಚಳವಳಿಗಳಲ್ಲಿ ಕಾರ್ಮಿಕರು ಸಂಪೂರ್ಣ ಜಯಶಾಲಿಗಳಾಗದೇ ಇದ್ದರೂ ಮಾಲೀಕರು ನಿರ್ಧರಿಸಿದ ಪ್ರಮಾಣಕ್ಕಿಂತಲೂ ಸ್ವಲ್ಪ ಪ್ರಮಾಣದ ಹೆಚ್ಚಳ ಕಂಡುಕೊಂಡಿದ್ದಾರೆ.

೧೫. ಕಾರ್ಮಿಕರು ಚಳವಳಿಗಳನ್ನು ನಡೆಸುವಾಗ ಸಾರ್ವಜನಿಕರ ಅಹವಾಲು ಮತ್ತು ಅನುಕಂಪ ಪಡೆದುಕೊಳ್ಳುವಲ್ಲಿ ವಿಫಲರಾದರು. ಹತ್ತಿಗಿರಣಿಗಳು ಅವಸಾನದ ಹಾದಿ ಕ್ರಮಿಸಲಾರಂಭಿಸಿದಾಗ ಅವುಗಳ ಪುನರಾರಂಭಕ್ಕಾಗಿ ನಡೆಸಿದ ಚಳವಳಿಗಳು ಫಲಕಾರಿಯಾಗಲಿಲ್ಲ. ಆರಂಭದಲ್ಲಿ ಹಕ್ಕುಗಳನ್ನು ಪಡೆದುಕೊಳ್ಳಲು ನಡೆಯುತ್ತಿದ್ದ ಕಾರ್ಮಿಕ ಚಳವಳಿಗಳು ಕ್ರಮೇಣ ಮುಚ್ಚಿಗುವ ಗಿರಣಿಗಳ ಪುನರಾರಂಭಕ್ಕಾಗಿ, ನಂತರ ಕೆಲಸ ಕಳೆದುಕೊಂಡವರಿಗೆ ಪರಿಹಾರ ಪಡೆಯುವತ್ತ ರೂಪಾಂತರ ಗೊಂಡವು.

೧೬. ಕಾರ್ಮಿಕರಿಗೆ ಕಲ್ಯಾಣ ಕಾರ್ಯಕ್ರಮಗಳು ಸಮರ್ಪಕವಾಗಿ ಲಭ್ಯವಾಗಿರಲಿಲ್ಲ. ಸಮೀಕ್ಷೆಯ ಅವಧಿಯಲ್ಲಿ ದೊರೆತಿರುವ ಮಾಹಿತಿಯಂತೆ ಹೆಚ್ಚಿನ ಕಾರ್ಮಿಕರು ಸ್ವಂತ (೫೪.೯೮%)

ಮನೆಹೊಂದಿರದೆ ಸಣ್ಣ ಸಣ್ಣ ಬಾಡಿಗೆ ಮನೆಗಳಲ್ಲಿ ವಾಸಿಸುತ್ತಿದ್ದರು. ಅವರು ವಾಸಿಸುತ್ತಿರುವ ಪ್ರದೇಶಗಳು ಹೆಚ್ಚು ಕೊಳಚೆ ಪ್ರದೇಶಗಳಾಗಿವೆ. ಅಲ್ಲದೆ ಇವರ ಶೈಕ್ಷಣಿಕ ಮಟ್ಟ ತೀರ ಕೆಳಹಂತದ್ದಾಗಿದ್ದು, ತಾಂತ್ರಿಕ ಶಿಕ್ಷಣವಂತೂ (೧೨.೦೬%) ಇನ್ನೂ ಕೆಳಹಂತದಲ್ಲಿತ್ತು. ಹೆಚ್ಚಿನ ಸಂಖ್ಯೆಯ ಕಾರ್ಮಿಕರು (೬೦.೪೮%) ಮಧ್ಯಪಾನ ಮತ್ತು ಧೂಮಪಾನ ವ್ಯಸನಿಗಳಾಗಿದ್ದರು. ಇದು ಕುಟುಂಬ ಮತ್ತು ಅವರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿತ್ತು. ಗಿರಣಿಗಳ ಅವನತಿ ನಂತರ ಜೀವನ ನಿರ್ವಹಣೆಗಾಗಿ ಕೂಲಿಕೆಲಸ (೧೯.೯೩%) ಮಾಡುವವರಿದ್ದರೂ, ಏನೂ ಕೆಲಸ ಮಾಡದ ಕಾರ್ಮಿಕರೂ (೧೪.೪೩%) ಇದ್ದು ಆರ್ಥಿಕ ತೊಂದರೆ ಎದುರಿಸುತ್ತಿದ್ದಾರೆ. ಕಾರ್ಮಿಕರೇ ನಗರಸಭೆಯ ಅಧಿಕಾರದ ಚುಕ್ಕಾಣಿ ಹಿಡಿದಿದ್ದಾಗಲೂ ಮೇಲಿನ ಸೌಲಭ್ಯಗಳನ್ನು ಸಮರ್ಪಕವಾಗಿ ಒದಗಿಸಲಿಲ್ಲ ಎಂಬ ಆರೋಪವೂ ಇದೆ.

೧೭. ಕಾರ್ಮಿಕ ಕಾಯಿದೆಗಳು ಕಾರ್ಮಿಕ ಕಲ್ಯಾಣದ ಬಗ್ಗೆ ಹೆಚ್ಚಿನ ಒತ್ತು ನೀಡುತ್ತವೆಯಾದರೂ ಅಂಥ ಕಾಯಿದೆಗಳು ಲೋಪದೋಷಗಳಿಂದ ಮುಕ್ತವಾಗಿಲ್ಲ. ಉದಾಹರಣೆಗೆ ಕಾರ್ಮಿಕ ನಷ್ಟಪರಿಹಾರ ಕಾಯಿದೆಯಲ್ಲಿ (೧೯೨೩) ಕಾರ್ಮಿಕನಿಗಾಗುವ ನಷ್ಟ ನಿರ್ಧರಿಸುವಾಗ ಅಪಘಾತದ ಸ್ವರೂಪ ಮತ್ತು ಕಾರ್ಮಿಕರ ವೇತನವನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತದೆ. ಈ ಸಂದರ್ಭದಲ್ಲಿ ಅಪಘಾತದ ಸ್ವರೂಪ ನಿರ್ಧರಿಸುವಾಗ ಸುಳ್ಳು ಮಾಹಿತಿ ನೀಡುವ ಸಾಧ್ಯತೆಗಳಿವೆ.

೧೮. ಕಾರ್ಮಿಕ ಸಂಘಗಳ ಕಾಯಿದೆಯು ೧೯೨೬ರಲ್ಲಿ ರಾಷ್ಟ್ರಮಟ್ಟದಲ್ಲಿ ಜಾರಿಗೆ ಬಂದರೂ, ಮೈಸೂರು ಸಂಸ್ಥಾನ ಹಾಗೂ ಅದರ ಅಂಗವಾದ ದಾವಣಗೆರೆ ಪರಿಸರದಲ್ಲಿ ೧೯೪೨ರ ವರೆಗೂ ಒಡೆಯರ ಆಳ್ವಿಕೆ ಜಾರಿಗೊಳಿಸಲಿಲ್ಲ. ಇದರಿಂದ ಸಂಸ್ಥಾನದಲ್ಲಿ ಸಂಘಟನಾ ಕಾರ್ಯ ವಿಳಂಬವಾದದ್ದು ಸತ್ಯ.

೧೯. ವೇತನ ಪಾವತಿ ಕಾಯಿದೆ(೧೯೩೬)ಯಂತೆ ಪ್ರತಿ ತಿಂಗಳ ೦೭ನೇ ದಿನದ ಒಳಗೆ ವೇತನ ಪಾವತಿ ಮಾಡಬೇಕೆಂದಿದ್ದರೂ, ಗಿರಣಿಗಳು (ಚಿಗಟೇರಿ, ಶಂಕರ್, ಚಂದ್ರೋದಯ) ಆರ್ಥಿಕ ತೊಂದರೆಗೊಳಗಾದಾಗ ಈ ನಿಯಮವನ್ನು ಪಾಲಿಸದೆ ಕಾರ್ಮಿಕರು ತೊಂದರೆಗೊಳಗಾದರು.

೨೦. ಕಾರ್ಮಿಕರು ಮುಷ್ಕರ ಹೂಡುವುದು ಒಂದು ಹಕ್ಕೆಂದು ಕೈಗಾರಿಕಾ ವಿವಾದಗಳ ೧೯೪೭ರ ಕಾಯಿದೆ ಹೇಳಿದರೂ ಅದೊಂದು ಮೂಲಭೂತ ಹಕ್ಕೆಂದು ಸ್ಪಷ್ಟಪಡಿಸಿಲ್ಲ. ಸಂಘಕಟ್ಟಿಕೊಳ್ಳುವುದು ಮೂಲಭೂತ ಹಕ್ಕಾದರೆ, ಮುಷ್ಕರ ಅದರ ಅವಿಭಾಜ್ಯ ಅಂಗ. ಅಂದಾಗ ಮುಷ್ಕರದ ಹಕ್ಕಿಲ್ಲವೆಂದರೆ ಸಂಘಟನೆಯೂ ಅರ್ಥ ಕಳೆದುಕೊಳ್ಳುತ್ತದೆ.

೨೧. ಕನಿಷ್ಟ ಕೂಲಿ (೧೯೪೮) ಪ್ರತಿರಾಜ್ಯದಲ್ಲೂ ಭಿನ್ನವಾಗಿದ್ದು, ರಾಷ್ಟ್ರದ ಯಾವ ಭಾಗದಲ್ಲಿ ಕನಿಷ್ಟ ಕೂಲಿ ಕಡಿಮೆ ಇದೆ ಅಲ್ಲಿಗೆ ಬಂಡವಾಳಿಗರು ಬಂಡವಾಳ ಹೂಡುವ ಸಾಧ್ಯತೆಗಳಿವೆ. ಇದರಿಂದ ನುರಿತ ಕಾರ್ಮಿಕರೂ ವಲಸೆ ಪ್ರವೃತ್ತಿ ಬೆಳಸಿಕೊಳ್ಳುವ ಸಾಧ್ಯತೆಗಳೂ ಇವೆ.

೨೨. ಉತ್ತಮ ಕಾಯಿದೆಯಾದ ಕಾರ್ಮಿಕರ ರಾಜ್ಯ ವಿಮಾ ಕಾಯಿದೆ (ಇ.ಎಸ್.ಐ-೧೯೪೮)ಯ ದುರುಪಯೋಗವಾಗುತ್ತಿದ್ದು ಕಾರ್ಮಿಕರಿಗೆ ಉತ್ತಮ ಸೌಲಭ್ಯ ದೊರೆಯುತ್ತಿಲ್ಲ. ಈ ಕ್ಷೇತ್ರದಲ್ಲಿ ಭ್ರಷ್ಟಾಚಾರ ಮನೆಮಾತಾಗಿರುವುದರಿಂದ ಇದರ ನಿವಾರಣೆಯಾಗಬೇಕಿದೆ.

೨೩. ಹೆರಿಗೆ ಭತ್ಯೆ ಕಾಯಿದೆಯು (೧೯೬೧) ಮಹಿಳೆಯರಿಗೆ ನೆರವು ನೀಡುತ್ತಿದ್ದು ಕಾರ್ಖಾನೆಗಳ ಮಾಲೀಕರಿಗೆ ಹೆಚ್ಚು ವೆಚ್ಚದಾಯಕವಾಗಿರುತ್ತದೆ. ಆದ್ದರಿಂದ ಇಂಥ ವೆಚ್ಚ/ವ್ಯಯ ಕಡಿಮೆ ಮಾಡಿಕೊಳ್ಳಲು ೪೦ ವರ್ಷದ ಮೇಲ್ಪಟ್ಟ ಮಹಿಳೆಯರನ್ನು ಕೆಲಸಕ್ಕೆ ನೇಮಕಮಾಡುವ ಪ್ರವೃತ್ತಿ ಬೆಳೆಯುತ್ತಿದೆ.

೨೪. ಬೋನಸ್ ಕಾಯಿದೆಯು (೧೯೬೫) ಕಡ್ಡಾಯವಾಗಿರುವುದರಿಂದ ನಷ್ಟದಲ್ಲಿರುವ ಕೈಗಾರಿಕೆಗಳು ತೀವ್ರ ದುಷ್ಪರಿಣಾಮ ಎದುರಿಸಬೇಕಾಗುತ್ತದೆ. ಅಂತಹ ಸಂದರ್ಭಗಳಲ್ಲಿಮಾಲೀಕರು ಬೋನಸ್ ಮಟ್ಟಕ್ಕೆ ಪೂರಕವಾದ ನಗದು ವ್ಯವಹಾರ ತೋರಿಸುವ ಸಂದರ್ಭಗಳೂ ಇವೆ.

೨೫. ಬಾಲಕಾರ್ಮಿಕ ಕಾಯಿದೆಯು (೧೯೮೬) ಸಂಘಟನೆ ಬಲಗೊಂಡಾಗ ನಗರದ ಹತ್ತಿಗಿರಣಿಗಳಲ್ಲಿ ಕ್ರಮಬದ್ಧವಾಗಿ ಜಾರಿಗೊಂಡಿತು. ಕಾರ್ಮಿಕ ನೇತಾರರಾದ ಶ್ರೀ. ಪಂಪಾಪತಿ ಮತ್ತು ಶ್ರೀ. ತಿಪ್ಪೇಸ್ವಾಮಿಯರು ಬಾಲಕಾರ್ಮಿಕರಾಗಿ ಕಾರ್ಯನಿರ್ವಹಿಸುತ್ತಿದ್ದುದು ಈ ಪದ್ಧತಿ ಇತ್ತೆಂಬುದಕ್ಕೆ ಸಾಕ್ಷಿಯಾಗಿದೆ. ಗಿರಣಿಗಳಲ್ಲಿ ಈ ಪದ್ಧತಿ ರದ್ದಾಗಿದ್ದರೂ ಇದೇ ನಗರದ ಬೇರೆ ಕೇಂದ್ರಗಳಲ್ಲಿ ಮಾತ್ರ ಇನ್ನೂ ಬಾಲಕಾರ್ಮಿಕರ ನೇಮಕ ಜೀವಂತವಾಗಿರುವುದು ಕಂಡುಬರುತ್ತಿದೆ. ಕಾರಣ ಸಂಘಟನೆಯು ಬಲವಾಗಿಲ್ಲ ಎಂಬುದಕ್ಕೆ ಸಾಕ್ಷಿ.

೨೬. ದಾವಣಗೆರೆ ನಗರದ ಹತ್ತಿಗಿರಣಿ ಕಾರ್ಮಿಕರು ೦೪ ಕಾರ್ಮಿಕ ಸಮ್ಮೇಳನಗಳನ್ನು ನಡೆಸಿದ್ದಾರೆ. ಪ್ರಮುಖವಾಗಿ ದಿ: ೧-೫-೧೯೭೦ರಲ್ಲಿ 'ಪ್ರಥಮ ಕಾರ್ಮಿಕ ಸಮ್ಮೇಳನ' ನಡೆಸಿ ನಗರದ ಎಲ್ಲಾ ಗಿರಣಿಗಳಲ್ಲೂ 'ಸಮಾನ ಕೆಲಸಕ್ಕೆ ಸಮಾನ ವೇತನ' ಪಡೆದುಕೊಳ್ಳಲು ಯಶಸ್ವಿಯಾದರು. ೧೩, ೧೪, ೧೫, ಏಪ್ರಿಲ್ ೧೯೭೪ರ ರಾಜ್ಯಮಟ್ಟದ ಹತ್ತಿಗಿರಣಿ ಕಾರ್ಮಿಕರ ಸಮ್ಮೇಳನ ದಾವಣಗೆರೆ ನಗರದಲ್ಲಿ ನಡೆದು, ೧೯೭೪ರ ವೇಳೆಗೆ ಇಡೀ ರಾಜ್ಯದ ಹತ್ತಿಗಿರಣಿ ಕಾರ್ಮಿಕರ ವೇತನದಲ್ಲಿ ಹೆಚ್ಚಳ ಕಂಡುಕೊಂಡು ಮಾದರಿಯಾಗಿದ್ದಾರೆ.

೨೭. ದೀರ್ಘಕಾಲ ಕಮ್ಯುನಿಷ್ಟರ ಪ್ರಭಾವವಿದ್ದ ದಾವಣಗೆರೆ ಹತ್ತಿಗಿರಣಿ ಕಾರ್ಮಿಕರು ರಾಜ್ಯಕ್ಕೇ ಮಾದರಿಯಾದ 'ಮೇ ದಿನಾಚರಣೆ'ಯನ್ನು ಆಚರಿಸುತ್ತಿದ್ದರು. ಕಾರ್ಮಿಕರನ್ನು ಸಂಘಟಿಸಲು ಮುಂದಾಗಿದ್ದ ಮುಖಂಡರಾದ ಶ್ರೀ. ಸುರೇಶ್, ಶ್ರೀ. ಶೇಖರಪ್ಪನವರು ೧೯೭೦ರ ಏಪ್ರಿಲ್ ತಿಂಗಳಿನಲ್ಲಿ ಹತ್ಯೆಗೀಡಾದರು. ಇವರ ಹತ್ಯೆ ೧೮೮೬ರ ಅಮೇರಿಕಾದ ಚಿಕಾಗೋ ಕಾರ್ಮಿಕರ ಹತ್ಯೆಯಂತೆಯೇ ಪ್ರಾಮುಖ್ಯತೆ ಪಡೆಯಿತು. ಅದು ಕಾರ್ಮಿಕರ ದೊಡ್ಡ ಹಬ್ಬವನ್ನು ಆಚರಣೆ ಮಾಡುವ ಪರಿಪಾಠಕ್ಕೆ ನಾಂದಿಹಾಡಿತು.

"ಜಗತ್ತಿನ ಕಾರ್ಮಿಕರೇ ಒಗ್ಗಟ್ಟಾಗಿ, ನೀವು ಒಗ್ಗಟ್ಟಾಗುವುದರಿಂದ ನಿಮ್ಮ ಶೃಂಖಲೆಗಳ ವಿನಾ ಬೇರೇನೂ ಕಳೆದುಕೊಳ್ಳುವುದಿಲ್ಲ" ಎಂಬ ಮಾರ್ಕ್ಸ್‌ನ ಕರೆಯ ಹಿನ್ನೆಲೆಯಲ್ಲಿ ಈ ಆಚರಣೆಯನ್ನು ಗಮನಿಸಿದರೆ ರಾಷ್ಟ್ರಮಟ್ಟದಲ್ಲಿ ಕಾರ್ಮಿಕ ಸಂಘಟನೆಗಳು ಛಿದ್ರವಾಗಿ ಏಕತಾ ಸತ್ವಕಳೆದುಕೊಂಡಿತು. "ಏನೇ ಬರಲಿ ಒಗ್ಗಟ್ಟಿರಲಿ" ಎಂಬ ಮೂಲ ಮಂತ್ರದಲ್ಲಿ ನಡೆಯುವ ಕಾರ್ಮಿಕರ ಹಬ್ಬದ

ಆಚರಣೆಯಲ್ಲಿ ಮೂಲ ಸ್ವರೂಪದಲ್ಲೇ ಕೊರತೆ ಎದ್ದು ಕಾಣುತ್ತದೆ. ಆದರೆ ದಾವಣಗೆರೆಯ ಕಾರ್ಮಿಕರು ಹಾಗಿರದೆ, ದೀರ್ಘಕಾಲ ಏಕೈಕ ಸಂಘಟನೆ (ಸಿ.ಪಿ.ಐ.) ಹೊಂದಿ ಮೇ ದಿನಾಚರಣೆ ನಡೆಸಿದ್ದಾರೆ. ಇಂತಹ ಏಕೈಕ ಸಂಘಟನೆ ಇವರ ಈ ಆಚರಣೆಯ ಯಶಸ್ಸಿಗೆ ಪೂರಕವಾದದ್ದು. ಆದರೆ ಜಾಗತೀಕರಣದ ಪ್ರಭಾವ ಆರಂಭವಾದಾಗ ಈ ಆಚರಣೆಯ ಸ್ವರೂಪದಲ್ಲಿ ಬದಲಾವಣೆ ಮಾಡಿಕೊಳ್ಳದೇ ಇದ್ದದ್ದು ಹಲವು ಆರೋಪಗಳಿಗೆ ಅವಕಾಶ ಕಲ್ಪಿಸಿತು.

ದಾವಣಗೆರೆ ನಗರದ ಹತ್ತಿಗಿರಣಿ ಚರಿತ್ರೆ ಮತ್ತು ಕಾರ್ಮಿಕರ ಚಳುವಳಿಗಳನ್ನು ಅಧ್ಯಯನ ಮಾಡಿದಾಗ ಅವರು ಅನುಭವಿಸುತ್ತಿರುವ ಕೆಲ ಸಮಸ್ಯೆಗಳನ್ನು ಕಂಡುಕೊಳ್ಳಲಾಗಿದೆ. ಪ್ರಸ್ತುತ ಅಧ್ಯಯನದಲ್ಲಿ ಕಂಡುಕೊಂಡಿರುವ ಸಮಸ್ಯೆಗಳನ್ನು ಶಮನಗೊಳಿಸುವ ಮಾರ್ಗಗಳನ್ನು ಗುರುತಿಸುವ ಒಂದು ಪ್ರಯತ್ನವನ್ನೂ ಮಾಡಲಾಗಿದೆ. ಅಂತ ಕೆಲ ಸಮಸ್ಯೆಗಳಿಗೆ ಈ ಕೆಳಗಿನ ಪರಿಹಾರೋಪಾಯ ಗಳನ್ನು ಗಮನಿಸಬಹುದು.

೧. ಸರ್ಕಾರದಿಂದ ಅನುಮತಿ ಪಡೆಯದೆ ದಾವಣಗೆರೆ ನಗರದಲ್ಲಿ ಕೆಲ ಹತ್ತಿಗಿರಣಿಗಳು ಮುಚ್ಚಿರುವುದು ಪ್ರಸ್ತುತ ಅಧ್ಯಯನದಿಂದ ತಿಳಿದುಬಂದಿದೆ. ಇದರಿಂದ ಕಾರ್ಮಿಕರಿಗೆ ನಿಯಮಾನುಸಾರ ದೊರೆಯಬೇಕಾದ ಪರಿಹಾರಗಳು ದೊರೆತಿಲ್ಲ. ಸರ್ಕಾರ ಅವಸಾನ ಹೊಂದುವ ಗಿರಣಿಗಳ ಮೇಲೆ ಹಿಡಿತ ಹೋದುವುದು ಎಲ್ಲ ದೃಷ್ಟಿಯಿಂದ ಉತ್ತಮ, ಹಾಗೂ ಮುಂದೆ ಇಂತಹ ಅವಕಾಶಗಳನ್ನು ನೀಡುವುದು ಸೂಕ್ತವಲ್ಲ.

೨. ಜವಳಿ ಉದ್ಯಮವು ಚೇತರಿಸಿಕೊಳ್ಳಲು, ಆ ಮೂಲಕ ಜಾಗತಿಕ ಪೈಪೋಟಿಯನ್ನು ಎದುರಿಸಲು ಹೆಚ್ಚು ಬಂಡವಾಳಬೇಕು. ಈ ಅಗತ್ಯ ಬಂಡವಾಳ ತೊಡಗಿಸಲು 'ಜವಳಿ ಉದ್ಯಮದ ಆಧುನೀಕರಣ ನಿಧಿ'ಯನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕು.

೩. ಸರ್ಕಾರ ಜವಳಿ ಉದ್ಯಮಕ್ಕೆ ಬಂಡವಾಳ ತೊಡಗಿಸುವವರಿಗೆ ಸಣ್ಣ ಕೈಗಾರಿಕೆಗಳಿಗೆ ನೀಡುವಂತೆ ಬಡ್ಡಿದರದಲ್ಲಿ ರಿಯಾಯಿತಿ ನೀಡಬೇಕು.

೪. ಅವಸಾನದ ಅಂಚಿನಲ್ಲಿರುವ ಗಿರಣಿಕಾರ್ಮಿಕರನ್ನು, ಅದೇ ಕಾಲಕ್ಕೆ ಪ್ರಗತಿಯಲ್ಲಿರುವ ಮತ್ತು ದಿಟ್ಟತನದಿಂದ ಸ್ಪರ್ಧೆ ಎದುರಿಸುತ್ತಿರುವ ಗಿರಣಿಗಳಿಗೆ ಮಾಹಿತಿಸಂಗ್ರಹದ ಹಿನ್ನೆಲೆಯಲ್ಲಿ ಪ್ರವಾಸಕ್ಕೆ ಕಳುಹಿಸಬೇಕು. ಪ್ರವಾಸದ ಅವಧಿಯಲ್ಲಿ ಸಂಘಟನೆಯ ಚಟುವಟಿಕೆಗಳು, ಗಿರಣಿಗಳಲ್ಲಿ ಅಳವಡಿಸಿ ಕೊಂಡಿರುವ ಆಧುನಿಕ ಉತ್ಪಾದನಾ ವಿಧಾನಗಳನ್ನು ಪರಿಚಯಿಸಬೇಕು.

೫. ನಾಳಿನ ವಿಧಾನಗಳನ್ನು ಇಂದೇ ಬಳಸಿಕೊಳ್ಳುವ ಪ್ರವೃತ್ತಿಯನ್ನು, ಕಾರ್ಮಿಕರು ಮತ್ತು ಬಂಡವಾಳ ಶಾಹಿಗಳಿಗೆ ಮನನ ಮಾಡುವ ಪುನಶ್ಚೇತನ ಶಿಬಿರಗಳನ್ನು ನಡೆಸುವ ಕ್ರಮಕೈಗೊಳ್ಳಬೇಕು.

೬. ವಿದ್ಯುತ್ತಿನ ಅಭಾವ ಸಾಮಾನ್ಯವಾಗುತ್ತಿರುವ ಇಂದಿನ ದಿನಗಳಲ್ಲಿ ಪರ್ಯಾಯ ವ್ಯವಸ್ಥೆಯತ್ತ ಗಮನಹರಿಸುವುದು ಪ್ರಗತಿಯ ದೃಷ್ಟಿಯಿಂದ ಅನಿವಾರ್ಯ. ಈ ಹಿನ್ನೆಲೆಯಲ್ಲಿ ಸೌರಶಕ್ತಿ (ಸೋಲಾರ್ ವಿದ್ಯುತ್) ಬಳಕೆಗೆ ಆದ್ಯತೆ ನೀಡಿ ವಿದ್ಯುತ್ ಮೇಲಿನ ಅವಲಂಬನೆಯನ್ನು ಶಮನ ಮಾಡಬೇಕಾಗಿದೆ.

೭. ಇಡೀ ರಾಷ್ಟ್ರವೇ ಗಿರಣಿ/ಕೈಗಾರಿಕೆಗಳ ಅವನತಿಯ ಸುಳಿಯಲ್ಲಿ ಸಿಲುಕಿದಾಗ ಪ್ರಸ್ತುತ ಅಧ್ಯಯನ ಕ್ಷೇತ್ರದಲ್ಲಿ ೦೨ ಹತ್ತಿಗಿರಣಿಗಳು ಜಾಗತೀಕರಣದ ಸ್ಪರ್ಧೆಯನ್ನು ದಿಟ್ಟತನದಿಂದ ಎದುರಿಸಿ ಮುನ್ನಡೆದಿವೆ. ಈ ಮುನ್ನಡೆಗೆ ಅವರು ಅಳವಡಿಸಿಕೊಂಡಿರುವ ಆಧುನಿಕ ಯಂತ್ರೋಪಕರಣಗಳು ಪ್ರಮುಖ ಕಾರಣ. ಆದ್ದರಿಂದ ಗಿರಣಿಗಳನ್ನು ರಕ್ಷಿಸಬೇಕಾದರೆ ಆಧುನಿಕ ಯಂತ್ರಗಳನ್ನು ಅಳವಡಿಸುವುದು ಸೂಕ್ತ.

೮. ಗಿರಣಿಗಳು ಅವನತಿಯಾದಾಗ ಕಾಯಿದೆಯ ವ್ಯಾಪ್ತಿಯಲ್ಲಿ ಕಾರ್ಮಿಕರಿಗೆ ದೊರೆಯಬೇಕಾದ ಪರಿಹಾರ ದೊರಕಿಸುವಲ್ಲಿ ಸರ್ಕಾರ ಮತ್ತು ಸಂಘಟನೆ ಪ್ರಾಮಾಣಿಕ ಪ್ರಯತ್ನಮಾಡಬೇಕಾಗಿದೆ. ಅಲ್ಲದೆ ಸರ್ಕಾರ, ಉದ್ಯೋಗ ಕಳೆದುಕೊಂಡ ಕಾರ್ಮಿಕರು ಸಮಾಜಘಾತಕ ಶಕ್ತಿಗಳಾಗಿಯೋ ಅಥವಾ ಸಮಾಜಕ್ಕೆ ಹೊರೆಯಾಗಿಯೋ ಬಾಳುವುದನ್ನು ತಪ್ಪಿಸಲು ಕ್ರಮಕೈಗೊಳ್ಳಬೇಕು. ಅಂತ ಕಾರ್ಮಿಕರಿಗೆ ಅವರು ನಿರ್ವಹಿಸಬಹುದಾದ ಪ್ಲಂಬರ್ ಕೆಲಸ (ಪೈಪುಗಳ ಜೋಡಣೆ), ಬಟ್ಟೆಹೊಲಿಗೆ, ಸಣ್ಣಯಂತ್ರಗಳ ರಿಪೇರಿ, ಹೊಸ ಕಟ್ಟಡಗಳಿಗೆ ವಿದ್ಯುತ್‌ವೈರ್‌ಗಳನ್ನು ಅಳವಡಿಸುವುದು ಮುಂತಾದ ಕೆಲಸಗಳ ತರಬೇತಿ ಶಿಬಿರಗಳನ್ನು ನಡೆಸಬೇಕು. ಈ ರೀತಿಯ ತರಬೇತಿಗಳು ಅವರ ಮುಂದಿನ ಜೀವನ ನಿರ್ವಹಣೆಗೆ ಸಹಕಾರಿಯಾಗುವುದರಲ್ಲಿ ಸಂದೇಹವಿಲ್ಲ.

೯. ಸಂಘಟನೆ ಅನೇಕ ಸಂದರ್ಭಗಳಲ್ಲಿ ಕಾರ್ಮಿಕರೊಂದಿಗೆ ಸರಿಯಾಗಿ ಸ್ಪಂದಿಸಲಿಲ್ಲ ಎಂಬ ಕೆಲ ಆರೋಪಗಳಿವೆ. ಈ ಆರೋಪಗಳ ಹಿನ್ನೆಲೆಯನ್ನು ಗಮನಿಸಿದಾಗ ಅಲಕ್ಷಿತ ವರ್ಗವೊಂದರ ಪ್ರತಿನಿಧಿಗಳಾಗಿ ರಾಜಕೀಯ ಅಧಿಕಾರ ಪಡೆದುಕೊಂಡವರು, ತಮ್ಮ ಮೂಲವನ್ನು ಮರೆಯದೆ ಅತ್ತ ಹೆಚ್ಚಿನ ಗಮನಹರಿಸಬೇಕು. ತಮಗಿರುವ ಅಧಿಕಾರದ ಇತಿಮಿತಿಗಳೊಂದಿಗೆ ಈ ವರ್ಗಕ್ಕೆ ಸಹಾಯಮಾಡಿ ಮೇಲೆತ್ತುವ ಪ್ರಯತ್ನಮಾಡುವುದು ಮೂಲಮಂತ್ರವಾಗಬೇಕು. ಗಿರಣಿಗಳ ಅವನತಿ ಆರಂಭವಾದಾಗ ಕಾರ್ಮಿಕರಿಗೆ ದಿಕ್ಕುತೋಚದಂತಾಗುವುದು ಸಾಮಾನ್ಯ. ಈ ಸಂಕಷ್ಟದ ಸಮಯದಲ್ಲಿ ಸೈದ್ಧಾಂತಿಕ ನೆಲೆಯಲ್ಲಿ ಯಾವ ಪ್ರಯತ್ನವೂ ಫಲನೀಡದಿದ್ದಾಗ ಮನೋಸ್ಥೈರ್ಯ ತುಂಬುವ, ಕಾಯಿದೆಯ ವ್ಯಾಪ್ತಿಯಲ್ಲಿ ಪರಿಹಾರ ಪಡೆದುಕೊಳ್ಳಲು ಸೂಕ್ತ ಮಾರ್ಗದರ್ಶನ ನೀಡಲೇಬೇಕು. ಇದು ಇವರ ಆದ್ಯ ಕರ್ತವ್ಯವಾಗಬೇಕು.

೧೦. ಕಾರ್ಮಿಕ ಸಂಘಗಳು, ಮಾಲೀಕರು ಮತ್ತು ಕಾರ್ಮಿಕರ ನಡುವಿನ ಸಂಪರ್ಕಕೊಂಡಿಯಾಗಿ ಸಮಸ್ಯೆಗಳನ್ನು ಶಮನಮಾಡಲು ಮುಂದಾಗಬೇಕು. ಮಾಲೀಕರು ಸಂಘಟನೆಯನ್ನು ತಮ್ಮ ವಿರೋಧಿ ಎಂದು ಪರಿಗಣಿಸುವ ವಿಚಾರವನ್ನು ಕೈಬಿಡಬೇಕು.

೧೧. ಸಂಘಟನೆ ಕಾರ್ಮಿಕವರ್ಗಕ್ಕೆ ಜನಸಂಖ್ಯಾ ಸಮಸ್ಯೆ, ಸಂತಾನಹರಣ ಶಸ್ತ್ರಚಿಕಿತ್ಸೆ ಬಗ್ಗೆ ಅರಿವು ಮೂಡಿಸುವ ಕಾರ್ಯಗಳನ್ನು ಚುರುಕುಗೊಳಿಸಬೇಕು. ರಾಜಕೀಯ ಬಲವಿದ್ದಾಗ ದಾವಣಗೆರೆ ನಗರದ ಕಾರ್ಮಿಕ ಸಂಘಟನೆ ಇಂಥ ಕೆಲ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತ್ತಾದರೂ ಇಲ್ಲಿನ ಕಾರ್ಮಿಕರ ಸಂಖ್ಯೆಯನ್ನು ಆಧರಿಸಿ ಗಮನಿಸಿದಾಗ ಅದು ಸಾಲದೆನಿಸುತ್ತದೆ. ಅಲ್ಲದೆ ಬಹುತೇಕ ಕಾರ್ಮಿಕರು ೦೨ಕ್ಕಿಂತ ಹೆಚ್ಚುಮಕ್ಕಳನ್ನು ಹೊಂದಿರುವುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ

ಕಂಡುಬಂದಿದೆ. ಬರುವ ನಿಗದಿತ ಆದಾಯದಲ್ಲಿ ಮಕ್ಕಳ ಸಂಖ್ಯೆ ಹೆಚ್ಚಾದರೆ ಮೂಲಭೂತ ಸೌಲಭ್ಯ ಒದಗಿಸಲು ಸಾಧ್ಯವಾಗುವುದಿಲ್ಲ. ಅರೆ ಶಿಕ್ಷಿತರು ಮತ್ತು ಅಶಿಕ್ಷಿತರೇ ಹೆಚ್ಚಾಗಿರುವ ಇಲ್ಲಿ ಇವುಗಳಿಂದಾಗುವ ಸಮಸ್ಯೆಗಳನ್ನು ತಿಳಿಸುವ ಉಪನ್ಯಾಸ, ಚರ್ಚೆಗಳು ನಡೆಯಬೇಕಾಗಿದೆ. ಜನಸಂಖ್ಯಾ ಸಮಸ್ಯೆ ಹಾಗೂ ಸಂತಾನಹರಣ ಶಸ್ತ್ರಚಿಕಿತ್ಸೆ ಕುರಿತು ಆಕರ್ಷಕ ಶೈಲಿಯ ಬೀದಿನಾಟಕಗಳೂ ಈ ನಿಟ್ಟಿನಲ್ಲಿ ಪರಿಣಾಮಕಾರಿಯಾಗುತ್ತವೆ.

೧೨. ಕಾರ್ಮಿಕ ಸಂಘಗಳು ಹೊಸ ಸವಾಲುಗಳನ್ನು ಅಧ್ಯಯನ ಮಾಡಿ ಸಾಧಕ ಬಾಧಕಗಳನ್ನು ಗಮನಿಸಿ, ತಮ್ಮ ಚಟುವಟಿಕೆಗಳಲ್ಲಿ ಬದಲಾವಣೆ ಮಾಡಿಕೊಳ್ಳಬೇಕು. ಚಳುವಳಿ ರೂಪಿಸುವಾಗ ಇತ್ತ ಗಿರಣಿ ರಕ್ಷಣೆ, ಅತ್ತ ಕಾರ್ಮಿಕರ ಹಿತಾಸಕ್ತಿ ಕಾಪಾಡುವುದು, ಆ ಮೂಲಕ ಸ್ಪರ್ಧೆ ಎದುರಿಸುವ ನಿಟ್ಟಿನಲ್ಲಿ ಸಾಗಬೇಕು. ಮುಷ್ಕರಗಳೇ ಅಪ್ರಸ್ತುತ ಎನ್ನುವಂತಹ ಜಾಗತೀಕರಣದ ಸಂದರ್ಭದಲ್ಲಿ ಸಂಘಟನೆಗಳು ತಮ್ಮ ಹಳೇ ಕಾರ್ಯತಂತ್ರಗಳನ್ನು ಬದಲಾಯಿಸಿಕೊಂಡು ಅಗತ್ಯ, ಅರ್ಥಪೂರ್ಣ ಚಳುವಳಿಗಳನ್ನು ಮಾತ್ರ ಕೈಗೊಳ್ಳುವುದು ಸೂಕ್ತ.

೧೩. ಪ್ರಸ್ತುತ ಅಧ್ಯಯನದಲ್ಲಿ ಹೆಚ್ಚಿನ ಕಾರ್ಮಿಕರು (೬೦.೪೮%) ಮದ್ಯಪಾನ, ಧೂಮಪಾನ ಹವ್ಯಾಸಕ್ಕೆ ಒಳಗಾಗಿರುವುದು ಕಂಡುಬರುತ್ತದೆ. ಇಂತ ಅಭ್ಯಾಸಗಳಿಂದ ಆರೋಗ್ಯದ ಮೇಲಾಗುವ ದುಷ್ಪರಿಣಾಮಗಳನ್ನು ಬಿಂಬಿಸುವ ಭಿತ್ತಿಪತ್ರಗಳನ್ನು ಅವರು ಕಾರ್ಯನಿರ್ವಹಿಸುವ ಸ್ಥಳಗಳಲ್ಲಿ ಬಿತ್ತರಿಸಬೇಕು. ಕಾರ್ಮಿಕರಿಗೆ ಹೆಚ್ಚು ಒಡನಾಟ, ಅಭಿಮಾನ (ಮಕ್ಕಳು, ಸಂಘಟನೆ) ಇರುವವರ ಮೂಲಕ ಅರಿವುಮೂಡಿಸಿ ಇಂತ ಅಭ್ಯಾಸಗಳಿಂದ ದೂರ ಇರಿಸಲು ಯತ್ನಿಸಬೇಕು. ಏಕೆಂದರೆ ಈ ಅಭ್ಯಾಸಗಳನ್ನು ಒತ್ತಾಯದ ಮೂಲಕ ತ್ಯಜಿಸುವಂತೆ ಮಾಡುವುದಕ್ಕಿಂತ, ಮನಪರಿವರ್ತನೆಯ ಮೂಲಕ ತ್ಯಜಿಸಲು ಯತ್ನಿಸುವುದು ಪರಿಣಾಮಕಾರಿಯಾಗಿರುತ್ತದೆ. ಈ ಕಾರ್ಯವನ್ನು ಕಾರ್ಮಿಕ ಸಂಘಟನೆ ಹೆಚ್ಚು ಪರಿಣಾಮಕಾರಿಯಾಗಿ ಮಾಡಬಹುದು.

೧೪. ಇಲ್ಲಿ ಹೆಚ್ಚಿನ ಕಾರ್ಮಿಕರು (೫೪.೯೮%) ಸ್ವಂತ ಮನೆಗಳನ್ನು ಹೊಂದಿಲ್ಲದಿರುವುದು ಕಂಡುಬಂದಿದೆ. ಆದ್ದರಿಂದ ಇವರಿಗೆ ಸರ್ಕಾರದ ಆಶ್ರಯ ಯೋಜನೆಯಡಿ ವಸತಿಸೌಲಭ್ಯವನ್ನು ನೀಡಬೇಕಾಗಿದೆ.

೧೫. ದಾವಣಗೆರೆ ನಗರದಲ್ಲಿ ಹೆಚ್ಚಿನ ಕಾರ್ಮಿಕರು ಕೊಳಚೆ ಹಾಗೂ ತಗ್ಗಿನ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ. ಮಳೆ ಬಂದರೆ ಊರಿನ ನೀರೆಲ್ಲಾ ಈ ಪ್ರದೇಶಗಳಿಗೆ ನುಗ್ಗಿ ಅಲ್ಲಿನ ನಿವಾಸಿಗಳಾದ ಕಾರ್ಮಿಕರು ತೀವ್ರತೊಂದರೆಗೊಳಗಾಗುತ್ತಿದ್ದಾರೆ. ಈ ಸ್ಥಿತಿಯಿಂದ ಅನಾಹುತಗಳೂ ಸಂಭವಿಸುವ ಅವಕಾಶಗಳಿವೆ. ಆದ್ದರಿಂದ ನಗರಾಭಿವೃದ್ಧಿ ಪ್ರಾಧಿಕಾರದವರು ಈ ಪ್ರದೇಶಗಳಿಗೆ ನುಗ್ಗುವ ನೀರನ್ನು ತಡೆಗಟ್ಟಲು ಅಗತ್ಯ ಚರಂಡಿ, ಕೊಳವೆ ಮಾರ್ಗಗಳನ್ನು ನಿರ್ಮಿಸಿ ಶಾಶ್ವತ ಪರಿಹಾರಯೋಜನೆ ಕೈಗೊಳ್ಳಬೇಕು.

೧೬. ಕೆಲಸ ಕಳೆದುಕೊಂಡ ಕಾರ್ಮಿಕರ ಮಕ್ಕಳ ಶಿಕ್ಷಣ ಅತಂತ್ರ ಸ್ಥಿತಿಯಲ್ಲಿದೆ. ಅವರ ಶಿಕ್ಷಣದ ಮುಂದುವರಿಕೆಗೆ ಸಮಾಜದ ಉದಾರದಾನಿಗಳು ಸಹಾಯಹಸ್ತ ನೀಡಲು ಮುಂದಾಗಬೇಕು.

ವ್ಯಾಪಕ ಪ್ರಚಾರದ ಮೂಲಕ ಚರ್ಚಾಗೋಷ್ಠಿಗಳನ್ನು ನಡೆಸಿ ಉಳ್ಳವರು ಸಹಾಯ ನೀಡಲು ಮುಂದಾಗುವಂತೆ ಪ್ರೇರಣೆ ನೀಡುವುದು ಸಂಘಟನೆಯ ಕರ್ತವ್ಯವಾಗಬೇಕು. ಅಂತೆಯೇ ಸೇವಾ ಮನೋಭಾವನೆಯ ಸರ್ಕಾರೇತರ (NGO) ಸಂಸ್ಥೆಗಳು ಈ ರೀತಿ ಸಮಸ್ಯೆಯಲ್ಲಿರುವವರಿಗೆ ಸಹಾಯನೀಡಲು ಮುಂದಾಗಬೇಕು.

೧೭. ಕಾರ್ಮಿಕರಲ್ಲಿ ಅಶಿಕ್ಷಿತರು, ಅರೆ ಶಿಕ್ಷಿತರೇ ಹೆಚ್ಚಾಗಿದ್ದು ನಿಜವಾದ ಸಮಸ್ಯೆಯನ್ನೂ, ಅಂತರಾಷ್ಟ್ರೀಯ ಮಾರುಕಟ್ಟೆ ಸ್ಥಿತಿ-ಗತಿಗಳನ್ನು, ಕಾಯಿದೆಗಳ ಪ್ರಾಮುಖ್ಯತೆಯನ್ನೂ ತಿಳಿದುಕೊಳ್ಳುವಲ್ಲಿ ವಂಚಿತರಾಗಿದ್ದಾರೆ. ಆಧುನಿಕವಾಗಿ ಸರ್ಕಾರ ಕಪ್ಪುಹಲಗೆ ಯೋಜನೆ, ವಯಸ್ಕರ ಶಿಕ್ಷಣ ಮುಂತಾದವುಗಳನ್ನು ಜಾರಿಗೊಳಿಸಿ ಶಿಕ್ಷಣ ನೀಡುತ್ತಿದೆ. ಈ ಕಾರ್ಯಕ್ರಮಗಳು ಸಂಪೂರ್ಣ ಯಶಸ್ಸು ಕಾಣದಿದ್ದರೂ, ಅಲ್ಪಪ್ರಮಾಣದಲ್ಲಾದರೂ ಪ್ರಗತಿ ಕಂಡಿವೆ. ಅಂತೆಯೇ ಕಾರ್ಮಿಕರಿಗೂ ಇಂತಹ ಯೋಜನೆಗಳನ್ನು ವಿಸ್ತರಿಸಿ ಬಿಡುವಿನ ಅವಧಿಯಲ್ಲಿ ಕನಿಷ್ಟ ಶಿಕ್ಷಣ ನೀಡಲು ಸರ್ಕಾರ ಮತ್ತು ಸಂಘಟನೆ ಮುಂದಾಗಬೇಕು.

೧೮. ಹೆರಿಗೆ ಭತ್ಯೆ ಕಾಯಿದೆಯಡಿ ಗಿರಣಿಮಾಲೀಕರು ಹೆಚ್ಚುಹಣ ತೊಡಗಿಸಬೇಕಾಗಿದೆ. ಆದ್ದರಿಂದ ಮಾಲೀಕರು ೪೦ ವರ್ಷದೊಳಗಿನ ಮಹಿಳೆಯರನ್ನು ಕೆಲಸಕ್ಕೆ ತೆಗೆದುಕೊಳ್ಳುವುದನ್ನು ತಡೆಯುವ ಕ್ರಮಗಳು ಜರುಗುತ್ತಿವೆ. ಈ ಹಿನ್ನೆಲೆಯಲ್ಲಿ ಮಕ್ಕಳನ್ನು ಹೆರುವ ವಯಸ್ಸಿನ ಮಹಿಳೆಯರು ಉದ್ಯೋಗದಿಂದ ವಂಚಿತರಾಗುವ ಸಾಧ್ಯತೆಗಳಿದ್ದು, ದುಡಿಯುವ ಶಕ್ತಿ ಇರುವ ಬಾಹುಗಳಿಗೆ ಅವಕಾಶ ಇಲ್ಲದಂತಾಗುತ್ತದೆ. ಈ ಕ್ರಮದಿಂದ ನಿರುದ್ಯೋಗ ಸಮಸ್ಯೆ ತೀವ್ರಗೊಳ್ಳುತ್ತದೆ. ಈ ದೃಷ್ಟಿಯಿಂದ ಕಾರ್ಮಿಕ ಕಾಯಿದೆಗಳನ್ನು ಸಮರ್ಪಕವಾಗಿ ಜಾರಿಗೆ ತರುವ ಕ್ರಮಕೈಗೊಳ್ಳಬೇಕು. ಅದಕ್ಕಾಗಿ ಕಾರ್ಮಿಕ ಅಧಿಕಾರಿ, ಮಾಲೀಕರು, ಕಾರ್ಮಿಕರ ಪ್ರತಿನಿದಿಗಳ ಸಮಿತಿಯೊಂದನ್ನು ಪ್ರತಿ ಕೈಗಾರಿಕೆಯಲ್ಲೂ ಅಸ್ಥಿತ್ವಕ್ಕೆ ತರಬೇಕು. ಆ ಮೂಲಕ ಕಾಯಿದೆಗಳನ್ನು ಸಮರ್ಪಕವಾಗಿ ಜಾರಿಗೆ ತರುವುದನ್ನು ಒಟ್ಟಾಗಿ ಪ್ರೋತ್ಸಾಹಿಸುವಂತಾಗಬೇಕು.

೧೯. ಇ.ಎಸ್.ಐ. ಕಾಯಿದೆಯಡಿ ಕಾರ್ಮಿಕರಿಗೆ ಆಸ್ಪತ್ರೆ ಸೌಲಭ್ಯದೊರೆಯುತ್ತದೆ. ಅದರಂತೆ ಕಾರ್ಮಿಕರು ಉದ್ಯೋಗ ಕಳೆದುಕೊಂಡಾಗ ಈ ಸೌಲಭ್ಯದಿಂದ ಹೊರಗುಳಿಯುತ್ತಾರೆ. ಈ ವೇಳೆಗಾಗಲೇ ಧೂಳಿನ ವಾತಾವರಣದಲ್ಲಿ ಕಾರ್ಯನಿರ್ವಹಿಸುತ್ತಾ ಅಸ್ತಮಾ ಮುಂತಾದ ಖಾಯಿಲೆಗಳಿಗೆ ಅವರು ತುತ್ತಾಗುತ್ತಾರೆ. ಈ ಸ್ಥಿತಿಯಲ್ಲಿ ಇತ್ತ ಉದ್ಯೋಗವೂ ಇಲ್ಲ ಅತ್ತ ಆರೋಗ್ಯ ತೋರಿಸಿಕೊಳ್ಳುವ ಇ.ಎಸ್.ಐ. ಆಸ್ಪತ್ರೆ ಸೌಲಭ್ಯವೂ ಇಲ್ಲ ಎಂದಾಗ ಅತಂತ್ರ ಸ್ಥಿತಿ ಉಂಟಾಗುತ್ತದೆ. ಆದ್ದರಿಂದ ಕಾರ್ಮಿಕರು ಮುಂದಿನ ಹೊಸ ವ್ಯವಸ್ಥೆಗೆ ಹೊಂದಿಕೊಳ್ಳುವವರೆಗೆ ಕನಿಷ್ಟ ೦೨ ವರ್ಷಗಳವರೆಗೆ ಈ ಸೌಲಭ್ಯವನ್ನು ಮುಂದುವರೆಸುವ ಕ್ರಮವನ್ನು ಜಾರಿಗೆ ತರಬೇಕಾಗಿದೆ.

೨೦. ದಾವಣಗೆರೆ ನಗರದ ಹತ್ತಿಗಿರಣಿಗಳಲ್ಲಿ ಉದಯವಾದ ಕಾರ್ಮಿಕ ಮುಂಖಂಡರಿಗೂ, ಮಾಲೀಕರಿಗೂ ದೀರ್ಘಸಂಘರ್ಷ ನಡೆದು, ಮುಖಂಡರಿಗೆ ಜೈಲುಶಿಕ್ಷೆ ಸಾಮಾನ್ಯವಾಗಿತ್ತು. ಈ ಹಿನ್ನೆಲೆಯಲ್ಲಿ ಗಮನಿಸಿದರೆ ಕಾರ್ಮಿಕ ಮುಖಂಡರನ್ನು ಮಾಲೀಕರು ವೈರಿಗಳಂತೆ ನೋಡಿಕೊಂಡರೆ? ಎಂಬ

ಪ್ರಶ್ನೆ ಉದಯಿಸುತ್ತದೆ. ಪ್ರಸ್ತುತ ಅಧ್ಯಯನದಿಂದ ಇವರ ನಡುವಿನ ಸಂಬಂಧ ವೈರಿ ಸ್ವರೂಪ ದಲ್ಲಿದ್ದಂತೆ ಕಂಡುಬರುತ್ತದೆ. ಈ ಮನೋಭಾವನೆ ಮರೆಯಾಗಿ ಪರಸ್ಪರಬಾಂಧವ್ಯ ವೃದ್ಧಿಯಾಗ ಬೇಕು. ಕಾರ್ಮಿಕ ಮುಖಂಡರು ಸಮಸ್ಯೆಯನ್ನು ಅರ್ಥಮಾಡಿಕೊಂಡು, ಗಾಂಧಿ ಅಭಿಪ್ರಾಯ ಪಡುವಂತೆ 'ಮಾತುಕತೆ ವಿಫಲವಾದಾಗ ಮುಷ್ಕರದ ಹಾದಿ ತುಳಿಯಬೇಕು'. ಅಂದರೆ ಸಮಸ್ಯೆಗಳನ್ನು ವೈಭವೀಕರಿಸದೆ ಪರಸ್ಪರ ಸಹಕಾರ ಮನೋಭಾವನೆಯಿಂದ ವರ್ತಿಸಿದರೆ ಮುಖಂಡರನ್ನು ವೈರಿ ಎಂದು ನೋಡುವ ಸಂದರ್ಭ ಕಡಿಮೆಯಾಗಬಹುದು.

೨೧. ಭಿನ್ನ ಸಂದರ್ಭಗಳಲ್ಲಿ, ಭಿನ್ನ ಕಾಲಘಟ್ಟದಲ್ಲಿ ಕಾರ್ಮಿಕರ ಮುಖಂಡರಾದವರಿಗೆ ತಮ್ಮ ಸಮೂಹವನ್ನು ಹೇಗೆ ಮುನ್ನೆಡೆಸಬೇಕು, ಸಮಸ್ಯೆಗಳನ್ನು ಹೇಗೆ ಅರ್ಥೈಸಬೇಕು ಮುಂತಾದ ವಿಚಾರಗಳನ್ನು ಮನದಟ್ಟು ಮಾಡುವ ತರಬೇತಿ ಶಿಬಿರಗಳನ್ನು ಏರ್ಪಡಿಸಬೇಕಾಗಿದೆ. ಆ ಮೂಲಕ ದಕ್ಷ ನಾಯಕ ಹಾಗೂ ಮುಖಂಡರನ್ನು ರೂಪಿಸುವ ಕ್ರಮಗಳು ನಡೆಯಬೇಕು. ಈ ಜವಾಬ್ದಾರಿಯನ್ನು ಸರ್ಕಾರ ಅಥವಾ ಕಾರ್ಮಿಕ ಸಂಘಗಳು ಹಮ್ಮಿಕೊಳ್ಳುವುದು ಸೂಕ್ತ. ಈ ಸಂದರ್ಭದಲ್ಲಿ ಮುಖಂಡರಿಗೆ ಅಧಿಕಾರ ಕ್ಷಣಿಕವಾದದ್ದು, ಅಧಿಕಾರಾವಧಿಯಲ್ಲಿ ಸಮಸ್ಯೆಗಳ ಪರಿಹಾರಕ್ಕೆ ಪ್ರಾಮಾಣಿಕ ಪ್ರಯತ್ನಮಾಡಬೇಕು, ಜೀವನ ಮೌಲ್ಯಗಳಿಂದ ವಿಮುಖರಾಗಿ ಕಾರ್ಯ ನಿರ್ವಹಿಸಬಾರದು ಎಂಬ ಮೌಲ್ಯಗಳನ್ನು ಪರಿಣಾಮಕಾರಿಯಾಗಿ ತಿಳಿಹೇಳಬೇಕು.

೨೨. ಕಾರ್ಮಿಕ ಮುಖಂಡರು ತಾವು ಸಾಗಿ ಬರುತ್ತಿರುವ ಹಾದಿಯನ್ನು ಸ್ವಲ್ಪ ಕ್ರಮಿಸಿದ ನಂತರ ಹಿಂತಿರುಗಿ ನೋಡಿಕೊಳ್ಳುವ ಮನೋಭಾವವನ್ನು ರೂಢಿಸಿಕೊಳ್ಳಬೇಕು. ಆಗ ತಾವು ಮಾಡುತ್ತಿರುವ ತಪ್ಪು, ಒಪ್ಪುಗಳನ್ನು ಮನನ ಮಾಡಿಕೊಳ್ಳಲು ಸಾಧ್ಯವಾಗುತ್ತದೆ.

೨೩. ಕಾರ್ಮಿಕ ಚಳವಳಿಗಳು ಗಿರಣಿಗಳ ಅವನತಿಗೆ ಕಾರಣ ಎಂಬ ಆರೋಪದ ಹಿನ್ನೆಲೆಯಲ್ಲಿ ಕಾರ್ಮಿಕರೂ ಸಹ ಗಿರಣಿಗಳ ಆಡಳಿತದಲ್ಲಿ ಪಾಲ್ಗೊಳ್ಳುವಂತೆ ಮಾಡುವುದು ಅಗತ್ಯವಾಗಿದೆ. ಕನಿಷ್ಟ ೧೦೦ ಕಾರ್ಮಿಕರಿಗೆ ಒಬ್ಬರಂತೆ ಚೀಟಿ ಎತ್ತುವ ಮೂಲಕ ಕಾರ್ಮಿಕ ಪ್ರತಿನಿಧಿಗಳನ್ನು ಆಯ್ಕೆಮಾಡಬೇಕು. ಅವರು ಗಿರಣಿಗಳ ಆಡಳಿತದಲ್ಲಿ ಪಾಲ್ಗೊಳ್ಳುವ ಮೂಲಕ ಆಡಳಿತಾತ್ಮಕ ಸಮಸ್ಯೆಗಳಲ್ಲಿ ಪಾಲುದಾರರಾಗುವಂತೆ ಮಾಡಬೇಕು. ಇದು ಅವರಿಗೆ ಸಮಸ್ಯೆಗಳ ಅರಿವು ಮೂಡಿಸಲು, ಸಕಾರಾತ್ಮಕವಾಗಿ ಸ್ಪಂದಿಸಲು ಸಾಧ್ಯವಾಗುತ್ತದೆ.

೨೪. ಮೇ ದಿನಾಚಾರಣೆ ಕೇವಲ ಮೆರವಣಿಗೆ, ಬಲಪ್ರದರ್ಶನ, ಭಾಷಣಗಳಿಗೆ ಸೀಮಿತವಾಗದೆ ಪ್ರಸ್ತುತ ಸವಾಲುಗಳಿಗೆ ಪ್ರಾಮುಖ್ಯತೆ ನೀಡಬೇಕಾಗಿದೆ. ಸಮಸ್ಯೆಗಳನ್ನು ಅಧ್ಯಯನಮಾಡಿ ಅಂತರರಾಷ್ಟ್ರೀಯ, ರಾಷ್ಟ್ರೀಯ ಮಾರುಕಟ್ಟೆ, ಸರ್ಕಾರದ ಆರ್ಥಿಕನೀತಿ, ಸಾಕ್ಷರತೆಯ ಮಟ್ಟ ಮುಂತಾದ ವಿಷಯಗಳ ಹಿನ್ನೆಲೆಯಲ್ಲಿ ಅವರ ಜವಾಬ್ದಾರಿಗಳ ಬಗ್ಗೆ ಅರಿವು ಮೂಡಿಸುವ ಹಬ್ಬವಾಗಬೇಕಾಗಿದೆ. ಇದು ಕೇವಲ ಆರ್ಥಿಕ ಬೇಡಿಕೆಗಳ ಹಬ್ಬ ಮಾತ್ರವಾಗಬಾರದು. 'ಏನೇ ಬರಲಿ ಒಗ್ಗಟ್ಟಿರಲಿ' ಎಂದು ಸಂಘಟನೆ ಹೇಳುವಂತೆ ಸಮಸ್ಯೆಗಳನ್ನು ಮತ್ತು ಸವಾಲುಗಳನ್ನು ಅರಿಯುವಲ್ಲೂ ಒಗ್ಗಟ್ಟಿರಬೇಕು. ಅಂದಾಗ ಚಳುವಳಿಯ ಹಾದಿ ಸುಗಮವಾಗುತ್ತದೆ.

೨೫. ಕಾರ್ಮಿಕರಿಗೆ ಮಾಲೀಕರು ಆಹಾರ, ವಸತಿ, ಉಡುಪು, ಶಿಕ್ಷಣ ಎಂಬ ಮೂಲಭೂತ ಅವಶ್ಯಕತೆಗಳನ್ನು ಗಳಿಸಲು ಅಗತ್ಯವಾದ ಕೂಲಿಯನ್ನಾದರೂ ನೀಡಬೇಕು. ಕಾರ್ಮಿಕ ಚಳವಳಿಗಳ ಆರಂಭದ ಮೂಲವನ್ನು ಕಡಿಮೆ ಕೂಲಿಯಲ್ಲಿ ಕಂಡುಕೊಳ್ಳಬಹುದು. ಆದ್ದರಿಂದ ಈ ಕ್ರಮವನ್ನು ಕನಿಷ್ಟ ಕೂಲಿ ಕಾಯಿದೆಯಡಿ ಕಟ್ಟುನಿಟ್ಟಾಗಿ ಜಾರಿಗೆ ತರಲೇಬೇಕಾಗಿದೆ.

೨೬. ಸರ್ಕಾರ ಮಹಿಳೆ, ಜಾತಿ ಹೀಗೆ ಹಲವಾರು ರಾಜಕೀಯ ಮೀಸಲಾತಿ ನೀಡುವ ಮೂಲಕ ಅವರ ಸಮಸ್ಯೆಗಳಿಗೆ ಧ್ವನಿನೀಡಿದೆ. ಅಂತೆಯೇ ಕಾರ್ಮಿಕರಿಗೂ ರಾಜಕೀಯ ಮೀಸಲಾತಿ ನೀಡಿ ಅವರ ಸಮಸ್ಯೆಗಳಿಗೆ ಧ್ವನಿ ಮತ್ತು ಶಕ್ತಿ ನೀಡಬೇಕಾಗಿದೆ.

೨೭. ಪ್ರಬಲ ರಾಷ್ಟ್ರಗಳಿಗೆ ನಮ್ಮರಾಷ್ಟ್ರವನ್ನು ಮಾರುಕಟ್ಟೆ ಮಾಡುವ ಧೋರಣೆಯ ಸಾಧಕ-ಬಾಧಕಗಳನ್ನು ಪುನರ್ ಅವಲೋಕನಮಾಡಿ, ಸ್ವಾತಂತ್ರ್ಯ, ಮೂಲಭೂತಹಕ್ಕುಗಳನ್ನು ಕಾಪಾಡಲು ಮುಂದಾಗಬೇಕು.

ದಾವಣಗೆರೆ ನಗರದಲ್ಲಿ ೦೮ ಹತ್ತಿ ಗಿರಣಿಗಳು ಉಗಮವಾಗಿ ಕಾರ್ಮಿಕರಿಗೆ ಕೆಲಸವನ್ನು ದೊರಕಿಸಿದವು. ಇಲ್ಲಿ ದುಡಿಯುತ್ತಿದ್ದ ಕಾರ್ಮಿಕರು ಮೂಲಭೂತ ಸೌಲಭ್ಯಗಳಿಂದ ವಂಚಿತರಾಗಿ, ಸಮಾಜವಾದದ ಪ್ರೇರಣೆಯಿಂದ ಚಳವಳಿಗಳತ್ತ ಮುನ್ನೆಡೆದರು. ಸಂಘಟನೆ ಕಟ್ಟಿಕೊಳ್ಳಲು, ತಮ್ಮ ಸ್ಥಾನಮಾನ ವೃದ್ಧಿಸಿಕೊಳ್ಳಲು ನಡೆಸಿದ ಚಳವಳಿಗಳಲ್ಲಿ ಕಾರ್ಮಿಕರ ದಿಟ್ಟ ಮುಖಂಡರಾದ ಶ್ರೀ ಸುರೇಶ್, ಶ್ರೀ ಶೇಖರಪ್ಪ ಕೊಲೆಯಾದರು. ಅಂತೆಯೇ ದಾವಣಗೆರೆ ಹತ್ತಿ ಗಿರಣಿಯ (ಡಿ.ಸಿ.ಎಂ.) ವ್ಯವಸ್ಥಾಪಕರಾಗಿದ್ದ ಶ್ರೀ ಬಿ.ಪಿ. ಶೆಟ್ಟಿಯವರ ಹತ್ಯೆಯೂ ನಡೆಯಿತು.

ಈ ಎಲ್ಲಾ ಕೊಲೆ ಘಟನೆಗಳಿಂದ ನಗರದ ಕಾರ್ಮಿಕ ಮುಖಂಡರಲ್ಲನೇಕರು ಜೈಲುಶಿಕ್ಷೆ ಅನುಭವಿಸಿದರು. ಜೊತೆ ಜೊತೆಯಲ್ಲಿ ತಮ್ಮ ಉದ್ಯೋಗವನ್ನೂ ಕಳೆದುಕೊಂಡರು. ಈ ಕಾರ್ಮಿಕ ಮುಖಂಡರು ಕ್ರಮೇಣ ರಾಜಕೀಯ ಶಕ್ತಿಯಾಗಿ ಬೆಳೆದರು. ಆದರೂ ತಮ್ಮನ್ನವಲಂಬಿಸಿದ್ದ ಕಾರ್ಮಿಕರನ್ನು ತೃಪ್ತಿಪಡಿಸಲಿಲ್ಲ ಎಂದು ಜನರು ಹಾಗೂ ಕಾರ್ಮಿಕರಿಂದ ಆರೋಪಿಸಿಕೊಂಡರು.

ಕಾರ್ಮಿಕರಿಗೆ ಆಸರೆಯಾಗಿದ್ದ ಗಿರಣಿಗಳು ಅವನತಿಯತ್ತ ಸಾಗಿದವು. ಅದಕ್ಕೆ ಸರ್ಕಾರದ ಕಾಕತಾಳೀಯ ಧೋರಣೆಗಳು, ಮಾಲೀಕರು ಮತ್ತು ಕಾರ್ಮಿಕರ ನಡುವಿನ ಹೊಂದಾಣಿಕೆಯ ಅಭಾವ ಮುಂತಾದ ಕಾರಣಗಳು ಪುಷ್ಟಿ ನೀಡಿದವು. ಇಲ್ಲಿನ ಕಾರ್ಮಿಕರು ಇಂಥ ಸಂದರ್ಭಗಳಲ್ಲಿ ಬಹಳಷ್ಟು ಚಳವಳಿ ನಡೆಸಿದರು. ಅವುಗಳಲ್ಲಿ ೧೩ ಚಳವಳಿಗಳನ್ನು ಪ್ರಸ್ತಾಪಿಸುವ ಪ್ರಯತ್ನ ಮಾಡಲಾಗಿದೆ. ಆ ಚಳವಳಿಗಳು ಸ್ವರೂಪದಲ್ಲಿ ಸಾಮಾನ್ಯವಾಗಿ ಮಾಲೀಕರ ವಿರುದ್ಧ, ಸರ್ಕಾರದ ವಿರುದ್ಧವಿದ್ದುದು ಕಂಡುಬರುತ್ತದೆ. ಹೀಗೆ ಈ ನಗರದ ಕಾರ್ಮಿಕರ ಬದುಕು ಆರಂಭದಿಂದಲೂ ಸ್ಥಿತ್ಯಂತರಗೊಂಡಿದ್ದು ನಿಜ. ಅಂತಿಮವಾಗಿ ಗಿರಣಿಗಳು ಅವಸಾನಗೊಂಡು ಕಾರ್ಮಿಕರು ಬೀದಿ ಪಾಲಾಗಿದ್ದಾರೆ. ಅವರ ಬದುಕು ಆತಂತ್ರದಲ್ಲಿರುವುದು ಸಾಮಾನ್ಯ ವಿಷಯವಾಗಿದೆ.

ಅನುಬಂಧಗಳು

೧. ಕ್ಷೇತ್ರಕಾರ್ಯದ ಅಂಕಿ-ಅಂಶಗಳು
೨. ಕರ್ನಾಟಕ ರಾಜ್ಯದ ಕಾರ್ಯನಿರತ ಹಾಗೂ ಸ್ಥಗಿತಗೊಂಡಿರುವ ಹತ್ತಿಗಿರಣಿಗಳ ಪಟ್ಟಿ
೩. ಸಂದರ್ಶನ ಮಾಡಿದ ವ್ಯಕ್ತಿಗಳು
೪. ಪ್ರಶ್ನಾವಳಿಯ ಮಾದರಿ
೫. ಲಾವಣಿ ಮತ್ತು ಕ್ರಾಂತಿಗೀತೆ
೬. ಗ್ರಂಥ ಋಣ
೭. ಛಾಯಾಚಿತ್ರಗಳು

೧. ಕ್ಷೇತ್ರಕಾರ್ಯದ ಅಂಕಿ-ಅಂಶಗಳು

ದಾವಣಗೆರೆ ನಗರದ ಹತ್ತಿಗಿರಣಿಗಳಲ್ಲಿ ದುಡಿದ ಹಾಗೂ ದುಡಿಯುತ್ತಿರುವ ಒಟ್ಟು ೨೯೧ ಕಾರ್ಮಿಕರನ್ನು (೩೬ ಮಹಿಳಾ ಕಾರ್ಮಿಕರು, ೧೫೫ ಪುರುಷ ಕಾರ್ಮಿಕರು) ೧೩ ಮುಖ್ಯ ಪ್ರಶ್ನೆಗಳು, ಅವುಗಳಲ್ಲಿ ಹಲವು ಉಪಪ್ರಶ್ನೆಗಳನ್ನು ಹಾಕಿಕೊಂಡು ಪ್ರಶ್ನಾವಳಿಗಳ ಮೂಲಕ ಸಂದರ್ಶಿಸಿ ಮಾಹಿತಿ ಪಡೆಯಲಾಗಿದೆ. ಈ ಪ್ರಶ್ನಾವಳಿಯಲ್ಲಿ ಕಾರ್ಮಿಕರ ಮೂಲಭೂತ ಸೌಕರ್ಯಗಳು, ಶಿಕ್ಷಣ, ಸಂಘಟನೆ, ನಾಯಕರು, ದೌರ್ಜನ್ಯಗಳು, ಕಾಯಿದೆಗಳು ಮುಂತಾದ ವಿಷಯಗಳ ಬಗ್ಗೆ ಈ ಕೆಳಗಿನ ಕೋಷ್ಟಕಗಳಿಂದ ಮಾಹಿತಿ ಕಂಡುಕೊಳ್ಳಲಾಗಿದೆ.

ಶಿಕ್ಷಣ

ಕ್ರ.ಸಂಖ್ಯೆ	ಶೈಕ್ಷಣಿಕ ವಿವರ	ಕಾರ್ಮಿಕ ಸಂಖ್ಯೆ	ಶೇಕಡವಾರು
೧.	ಪ್ರಾಥಮಿಕ ಶಾಲೆ	೧೧೪	೩೯.೧೭%
೨.	ಪ್ರೌಢಶಾಲೆ	೮೯	೩೦.೫೯%
೩.	ಪದವಿಪೂರ್ವ	೧೩	೦೪.೪೬%
೪.	ಪದವಿ ಶಿಕ್ಷಣ	೦೫	೦೧.೭೨%
೫.	ಇತರೆ ತಾಂತ್ರಿಕ	೦೬	೦೨.೦೬%
೬.	ಶಿಕ್ಷಣ ಪಡೆಯದವರು (ಇಲ್ಲದವರು)	೬೪	೨೨.೦೦%
	ಒಟ್ಟು	೨೯೧	೧೦೦%

ನಾಯಕತ್ವ

ಕ್ರ.ಸಂಖ್ಯೆ	ನಾಯಕತ್ವದ ವಿವರ		ಕಾರ್ಮಿಕ ಸಂಖ್ಯೆ	ಶೇಕಡವಾರು
೧.	ಹೊರಗಿನ ನಾಯಕರು	ಇದ್ದಾರೆ	೨೧೨	೭೨.೮೫%
		ಇಲ್ಲ	೭೯	೨೭.೧೫%
		ಒಟ್ಟು	೨೯೧	೧೦೦%
೨.	ಸ್ಥಳೀಯ ಕಾರ್ಮಿಕ ನಾಯಕರು ರಾಜಕೀಯದಲ್ಲಿ ಪಾಲ್ಗೊಳ್ಳಲು ಆಸಕ್ತಿ	ಇದೆಯೇ?	೧೩೦	೪೪.೬೮%
		ಇಲ್ಲ	೧೬೧	೫೫.೩೨%
		ಒಟ್ಟು	೨೯೧	೧೦೦%
೩.	ಮಹಿಳಾ ನಾಯಕರು	ಇದ್ದಾರೆ	೧೦೧	೩೪.೭೧%
		ಇಲ್ಲ	೧೯೦	೬೫.೨೯%
		ಒಟ್ಟು	೨೯೧	೧೦೦%

೪.	ರಾಷ್ಟ್ರ/ರಾಜ್ಯ ನಾಯಕರ ಪ್ರಭಾವ/ ಸಂಪರ್ಕ		
	ಇತ್ತು	೧೧೨	೩೮.೪೯%
	ಇಲ್ಲ	೧೭೯	೬೧.೫೧%
	ಒಟ್ಟು	೨೯೧	೧೦೦%
೫.	ನಗರಸಭೆ/ವಿಧಾನಸಭೆ ಸದಸ್ಯರು		
	ಇದ್ದಾರೆ	೬೭	೨೩.೦೨%
	ಇಲ್ಲ	೨೨೪	೭೬.೯೮%
	ಒಟ್ಟು	೨೯೧	೧೦೦%

ಸಂಘದ ಸದಸ್ಯತ್ವ

ಕ್ರ.ಸಂಖ್ಯೆ	ಸಂಘದ ಸದಸ್ಯತ್ವದ ವಿವರ		ಕಾರ್ಮಿಕ ಸಂಖ್ಯೆ	ಶೇಕಡವಾರು
೧.	ಕಾರ್ಮಿಕ ಸಂಘದ ಹೆಸರು			
		ಕಮ್ಯುನಿಸ್ಟ್ ಪಕ್ಷ	೨೨೯	೭೮.೬೯%
		ಇನ್‌ಟಕ್	೫೧	೧೭.೫೨%
		ಬಿ.ಎಂ.ಎಸ್	೧೧	೦೩.೭೯%
		ಒಟ್ಟು	೨೯೧	೧೦೦%
೨.	ಸಂಘದ ಶುಲ್ಕ	೨ ರೂ	೧೮೩	೬೨.೮೯%
		೫ ರೂ	೧೦೮	೩೭.೧೧%
		ಒಟ್ಟು	೨೯೧	೧೦೦%
೩.	ಸಂಘ ಸೇರಿದ ಉದ್ದೇಶ			
		ಒಗ್ಗಟ್ಟಿಗಾಗಿ	೧೬೬	೫೭.೦೪%
		ಸಮಸ್ಯೆ ಬಗೆಹರಿಸಿಕೊಳ್ಳಲು	೧೨೫	೪೨.೯೬%
		ಒಟ್ಟು	೨೯೧	೧೦೦%
೪.	ಸಂಘದಿಂದ ಸ್ಥಿತಿ ಸುಧಾರಣೆ			
		ಆಗಿದೆ	೨೦೩	೬೯.೭೬%
		ಇಲ್ಲ	೮೮	೩೦.೨೪%
		ಒಟ್ಟು	೨೯೧	೧೦೦%
೫.	ಸಂಘ ಒಡೆಯಲು ಆಮಿಷ ಒಡ್ಡಿದರು		೫೨	೧೯.೨೪%
		ಇಲ್ಲ	೨೩೫	೮೦.೭೬%
		ಒಟ್ಟು	೨೯೧	೧೦೦%

ಚಳವಳಿಗಳು/ಮುಷ್ಕರಗಳು

ಕ್ರ.ಸಂಖ್ಯೆ	ಚಳವಳಿ/ಮುಷ್ಕರಗಳ ವಿವರಗಳು	ಕಾರ್ಮಿಕ ಸಂಖ್ಯೆ	ಶೇಕಡವಾರು
೧.	ಚಳವಳಿ/ಮುಷ್ಕರಗಳ ನಾಯಕತ್ವ ವಹಿಸಿದ್ದವರು		
	ಪಂಪಾಪತಿ	೯೨	೩೧.೬೧%
	ರಾಮಚಂದ್ರಪ್ಪ	೬೦	೨೦.೬೨%
	ಆನಂದತೀರ್ಥ	೮೫	೨೯.೨೧%
	ರಂಗಪ್ಪ	೧೪	೦೪.೮೧%
	ನಾಗರಾಜ್	೨೪	೦೮.೨೫%
	ತಿಮ್ಮಪ್ಪ	೧೬	೦೫.೫೦%
	ಒಟ್ಟು	೨೯೧	೧೦೦%
೨.	ಚಳವಳಿ/ಮುಷ್ಕರದ ಉದ್ದೇಶ		
	ಪರಿಹಾರ ಪಡೆಯಲು	೧೩೭	೪೭.೦೮%
	ಬೇಡಿಕೆ ಈಡೇರಿಕೆಗೆ	೧೫೪	೫೨.೯೨%
	ಒಟ್ಟು	೨೯೧	೧೦೦%
೩.	ಚಳವಳಿ/ಮುಷ್ಕರಗಳ ಪರಿಣಾಮಗಳು		
	ಸಮಸ್ಯೆ ಪರಿಹಾರ	೪೧	೧೪.೦೯%
	ಬೇಡಿಕೆ ಈಡೇರಿಕೆಗೆ	೬೫	೨೨.೩೪%
	ಬೇಡಿಕೆ ಈಡೇರಿಲ್ಲ	೭೦	೨೪.೦೫%
	ಮಿಲ್ ಬಂದ್ ಆಗಿದೆ	೭೦	೨೪.೦೫%
	ಪರಿಣಾಮ ಇಲ್ಲ	೪೫	೧೫.೪೭%
	ಒಟ್ಟು	೨೯೧	೧೦೦%
೪.	ಮುಖ್ಯ ಚಳವಳಿ/ಮುಷ್ಕರ ಇದೆ	೨೧೧	೭೨.೫೧%
	ಇಲ್ಲ	೮೦	೨೭.೪೯%
	ಒಟ್ಟು	೨೯೧	೧೦೦%

ದೌರ್ಜನ್ಯ ಘಟನೆಗಳು

ಕ್ರ.ಸಂಖ್ಯೆ	ದೌರ್ಜನ್ಯ ಘಟನೆಗಳ ವಿವರಗಳು	ಕಾರ್ಮಿಕ ಸಂಖ್ಯೆ	ಶೇಕಡವಾರು
೧.	ಮಾಲೀಕರಿಂದ	೬೭	೨೩.೦೨%
೨.	ಪೊಲೀಸರಿಂದ	೩೯	೧೩.೪೦%
೩.	ನಾಯಕರಿಂದ	೨೩	೭.೯೦%
೪.	ನಡೆದಿಲ್ಲ	೧೬೨	೫೫.೬೮%
	ಒಟ್ಟು	೨೯೧	೧೦೦%

ಕಾರ್ಮಿಕರ ಕಾಯಿದೆಗಳು

ಕ್ರಸಂಖ್ಯೆ	ಕಾರ್ಮಿಕ ಕಾಯಿದೆಗಳ ವಿವರಗಳು		ಕಾರ್ಮಿಕ ಸಂಖ್ಯೆ	ಶೇಕಡವಾರು
೧.	ಕಾಯಿದೆಗಳ ಅರಿವು ಮೂಡಿಸಿದವರು			
		ಸದಸ್ಯರು	೬೫	೨೨.೩೪%
		ಮುಖ್ಯಸ್ಥರು	೩೭	೧೨.೭೧%
		ಪಂಪಾಪತಿ	೭೫	೨೫.೭೭%
		ಅರಿವು ಮೂಡಿಸಿಲ್ಲ	೧೧೪	೩೯.೧೮%
		ಒಟ್ಟು	೨೯೧	೧೦೦%
೨.	ಕಾಯಿದೆಗಳ ಗುಣ		೯೦	೩೦.೯೩%
	ಅವಗುಣ ಇಲ್ಲ		೨೦೧	೬೯.೦೭%
		ಒಟ್ಟು	೨೯೧	೧೦೦%
೩.	ಕಾಯಿದೆಗಳ ತಿದ್ದುಪಡಿ ಆಗತ್ಯವಿದೆ		೧೦೦	೩೪.೩೬%
		ಇಲ್ಲ	೧೯೧	೬೫.೬೪%
		ಒಟ್ಟು	೨೯೧	೧೦೦%

ಸಾಮಾಜಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು

ಕ್ರ.ಸಂಖ್ಯೆ	ಸಾಮಾಜಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ವಿವರ		ಕಾರ್ಮಿಕ ಸಂಖ್ಯೆ	ಶೇಕಡವಾರು
೧.	ವಿವಿಧ ಹಬ್ಬ ಹರಿದಿನಗಳ ಆಚರಣೆ		೨೯೧	೨೯೧%
		ಒಟ್ಟು	೨೯೧	೧೦೦%
೨.	ಮೇ ದಿನಾಚರಣೆ		೨೮೨	೯೬.೯೧%
	ಮೇ ದಿನಾಚರಣೆ ಇಲ್ಲ		೯	೩.೦೯%
		ಒಟ್ಟು	೨೯೧	೧೦೦%
೩.	ಸಮ್ಮೇಳನ ಚಟುವಟಿಕೆಗಳು	ಜಿಲ್ಲೆ	೧೦೫	೩೬.೦೮%
		ರಾಜ್ಯ	೮೫	೨೯.೨೧%
		ರಾಷ್ಟ್ರ	೫೪	೧೮.೫೬%
		ಇಲ್ಲ	೪೭	೧೬.೧೫%
		ಒಟ್ಟು	೨೯೧	೧೦೦%

ಆರೋಗ್ಯ ತಪಾಸಣೆ

ಕ್ರ.ಸಂಖ್ಯೆ	ಆರೋಗ್ಯ ತಪಾಣೆ ವಿವರ		ಕಾರ್ಮಿಕ ಸಂಖ್ಯೆ	ಶೇಕಡವಾರು
೧.	ಕಾರ್ಖಾನೆಯಲ್ಲಿ ವೈದ್ಯಕೀಯ ಸೌಲಭ್ಯವಿದೆ		೨೨೧	೭೫.೯೫%
		ಸೌಲಭ್ಯವಿಲ್ಲ	೭೦	೨೪.೦೫%
		ಒಟ್ಟು	೨೯೧	೧೦೦%
೨.	ಸರ್ಕಾರಿ ಆಸ್ಪತ್ರೆ ಈ.ಎಸ್.ಐ		೨೪೬	೮೪.೫೪%
	ಸರ್ಕಾರಿ ಆಸ್ಪತ್ರೆ ಸೌಲಭ್ಯ ಇಲ್ಲ		೪೫	೧೫.೪೬%
		ಒಟ್ಟು	೨೯೧	೧೦೦%
೩.	ಇತರೆ			

ಅಭ್ಯಾಸಗಳು

ಕ್ರ.ಸಂಖ್ಯೆ	ಅಭ್ಯಾಸಗಳ ವಿವರಗಳು		ಕಾರ್ಮಿಕ ಸಂಖ್ಯೆ	ಶೇಕಡವಾರು
೧.	ಮದ್ಯಪಾನ ಧೂಮಪಾನ	ಇದೆ	೧೭೬	೬೦.೪೮%
		ಇಲ್ಲ	೧೧೫	೩೯.೫೨%
		ಒಟ್ಟು	೨೯೧	೧೦೦%
೨.	ಸಂಘದ ಚಟುವಟಿಕೆ	ಇದೆ	೧೭೧	೫೮.೭೯%
		ಇಲ್ಲ	೧೨೦	೪೧.೨೧%
		ಒಟ್ಟು	೨೯೧	೧೦೦%
೩.	ಇತರೆ ಚಟುವಟಿಕೆಗಳು		೨೫೫	೮೭.೬೩%
	ಚಟುವಟಿಕೆಗಳು ಇಲ್ಲ		೩೬	೧೨.೩೭%
		ಒಟ್ಟು	೨೯೧	೧೦೦%

ವಸತಿ ಸೌಲಭ್ಯ

ಕ್ರ.ಸಂಖ್ಯೆ	ವಸತಿ ಸೌಲಭ್ಯ		ಕಾರ್ಮಿಕ ಸಂಖ್ಯೆ	ಶೇಕಡವಾರು
೧.	ಸ್ವಂತದ್ದು		೧೩೧	೪೫.೦೨%
೨.	ಬಾಡಿಗೆ		೧೬೦	೫೪.೯೮%
		ಒಟ್ಟು	೨೯೧	೧೦೦%
೩.	ಮಾಲೀಕರಿಂದ	ಇಲ್ಲ	೨೬೭	೯೧.೭೫%
		ಇದೆ	೨೪	೮.೨೫%
		ಒಟ್ಟು	೨೯೧	೧೦೦%
೪.	ಸರ್ಕಾರದಿಂದ	ಇದೆ	೪೬	೧೫.೮೧%
		ಇಲ್ಲ	೨೪೫	೮೪.೧೯%
		ಒಟ್ಟು	೨೯೧	೧೦೦%
೫.	ಶೌಚಾಲಯ ವ್ಯವಸ್ಥೆ	ಇದೆ	೨೧೦	೭೨.೧೬%
		ಇಲ್ಲ	೮೧	೨೭.೮೪%
		ಒಟ್ಟು	೨೯೧	೧೦೦%
೬.	ವಿದ್ಯುತ್ ಸೌಲಭ್ಯ	ಇದೆ	೨೦೫	೭೦.೪೫%
		ಇಲ್ಲ	೮೬	೨೯.೫೫%
		ಒಟ್ಟು	೨೯೧	೧೦೦%
೭.	ಪರಿಸರ ತೃಪ್ತಿಕರವಾಗಿದೆ		೧೮೦	೬೧.೮೬%
		ಇಲ್ಲ	೧೧೧	೩೮.೧೪%
		ಒಟ್ಟು	೨೯೧	೧೦೦%

೨. ಕರ್ನಾಟಕ ರಾಜ್ಯದ ಕಾರ್ಯನಿರತ ಹಾಗೂ ಸ್ಥಗಿತಗೊಂಡಿರುವ ಹತ್ತಿ ಗಿರಣಿಗಳ ಪಟ್ಟಿ

ಎನ್.ಟಿ.ಸಿ ಅಧೀನದಲ್ಲಿರುವ ರಾಜ್ಯದ ಬಟ್ಟೆ ಗಿರಣಿ (ಕರ್ನಾಟಕ)

